ಫುಲ'ಗ್ಯಾಸ ಸಿಲೆಂಡರಗಳು ಇಂಗ್ಲೀಷ ಮತ್ತು ಜರ್ಮನ ಪೇಟೆಂಟ ಕಾಡ್ಸ, ಎಮ. ಟಿ. ಸೋಡಾ ವಾಟರ ಬಾಟಲಗಳು, ೫೫೦ ನಂ. ನಾಖರೀನ ಡಬ್ಬಿ ೧ ಪೌಂಡಿನವು. ಸೋಡಾವಾಟರ್ ಮಶಿನುಗಳು ಮತ್ತು ಎಲ್ಲ ತರದ ಕಲರಿನ ಬಾಟಲಿಗಳು ಎಸೆನ್ಸಗಳು, ಅಮೆರಿಕನ್ ಆಯಿಸ್ಕ್ರೀಮ ಸೋಡಾ, ಬನಾನಾ, ಕೋಲಾಚೆಂಪೇಜನ್, ಲೆಮನ್ ನಂ. ೧ ಲೆಮನ್ ಜುಯಿಸ್ ಸೋಡಾ ನಂ. ೧ ಮೆಂಗೋ, ಒರೇಂಜ, ಫಾಯಿನಾಪಲ್, ಪಿಸ್ತಾಮಿಲಕ್, ಕ್ವಿನಿನ ಟಾನಿಕ್, ರಾಜಬರಿ ನಂ. ೧ ಕೋಲಾ ನಂ. ೧ ಸ್ಟೋನ್ ಜಿಂಜರ್ ಬೀರ ನಂ. ೧, ರಬ್ಬರ್ ರಿಂಗ್ಸ, ಚೆಸ್, ಇತರ ಮಶಿನರಿ ಪಾರ್ಟುಗಳು ನಮ್ಮಲ್ಲಿ ಸಿಗುತ್ತವೆ. ಮತ್ತು ಶುದ್ಧ ನೀಲಗಿರಿ ಎಣ್ಣೆಯು ಎಲ್ಲ ತರದ ಬಾಟಲ್ಸಗಳು ಸಿಗುತ್ತವೆ. ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಕೊಡುತ್ತೇವೆ. ನಮ್ಮಲ್ಲಿ ಕಬ್ಬಿಣದ ಮಿಲಿಟರಿ ಸಿಂಗಲ ಕಾಟ್ಸಗಳು ಸೋವಿ ದರದಿಂದ ಮಾರಲಿಕ್ಕೆ ಸಿಗುತ್ತವೆ.



ಅಡ್ರೆಸ್— R. M. John & Sons.
Mission Compound HUBLI.

೨೫ನೆಯ ವರ್ಷಪ್ರಾರಂಭವಾಗಿದ್ದು, ನಡೆಯುವ ವರ್ಷದ ಬಗ್ಗೆ ನಿಶ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿಗೆ ದ ವ್ಹಿ. ಪಿ ಯನ್ನು ಕಳಿಸಲಿಕ್ಕೆ ಪ್ರಾರಂಭಿಸುವೆವು. ಚಂದಾದಾರರು ವ್ಹಿ. ಪಿ. ಯನ್ನು ಸ್ವೀಕರಿಸಿ, ವಿಜಯವನ್ನು ಈ ಮೊದಲಿನಂತೆ ಪ್ರೋತ್ಸಾಹಿಸುವರೆಂದು ಆಶಿಸುತ್ತೇವೆ.

ವ್ಯವಸ್ಥಾಪಕ ವಿಜಯ
ಧಾರವಾಡ

ವಿಜಯ.

ಧಾರವಾಡ ತಾ– ೧೮–೧–೩೫ ನೇ ಇಸ್ವಿ

ಇಂದೂರಿನ ಅಂತಃಪುರದ ರಹಸ್ಯವೂ ಮುಂಬಯಿಯ ಕೊಲೆಯೂ

—೦—

ಮುಂಬಯಿಯಲ್ಲಿ ಮ್ಯುನಿಸಿಪಲ ಮೆಂಬರರಾದ ಮಿ. ಬಾವಲಾ ಸಾಹೇಬರ ಕೊಲೆಯು ಇಂದೂರಿನ ಅಂತಃಪುರದ ರಹಸ್ಯವಾಗಿದೆ. ರೇನಾಲ್ಡ್ಸ ಸಾಹೇಬನು ಲಂಡನದ ದೊಡ್ಡ ದೊಡ್ಡ ಮನುಷ್ಯರ ಗುಪ್ತ ಕಾರಸ್ಥಾನಗಳೆಂಬ ದೊಡ್ಡ ದೊಡ್ಡ ಹೊತ್ತಿಗೆ ಬರೆದಿದ್ದಾನೆ. ಅದೇ ಮೇರೆಗೆ ಎದೆಯು ಝಲ್ಲೆನಿಸುವಂತೆ ವರ್ಣನೆ ಮಾಡಿ, ಇಂದೂರಿನ ರಹಸ್ಯವೆಂದು ಹೊತ್ತಿಗೆ ಬರೆಯುವಂತಿದೆ.

ಮುಮತಾಜ ಬೇಗಮಳ ನಿಮಿತ್ತವಾಗಿಯೇ ಈ ಕೊಲೆಯಾಯಿತೆಂದು ನಿನ್ನಿನ ಸಂಚಿಕೆಯಲ್ಲಿ ಬರೆದಿರುತ್ತೇವೆ. ಮುಮತಾಜ ಬೇಗಮ ಅಥವಾ ಕಮಲಾಬಾಯಿಯು ತ್ರಿಪುರ ಸುಂದರಿಯಂಥ ಸ್ತ್ರೀಯಳು. ಈಕೆಯನ್ನು ನೋಡಿದ [illegible] ಹುಟ್ಟದಿರದು. ಈಕೆಯು ಹುಟ್ಟಿದೂರು ಅಮೃತಸರ. ನವ ಯೌವನವನ್ನು ಇಂದೂರದಲ್ಲಿ ಕಳೆದಳು. ಹೋಳಕರ ಮಹಾರಾಜರ ಆಶ್ರಯದಲ್ಲಿದ್ದರೂ, ಒಬ್ಬನ ಮೇಲೆ ಪ್ರೀತಿ ಮಾಡಿ, ಒಬ್ಬನನ್ನು ಆದರಿಸುವಳೆಂಬ ಚಂಚಲ ಪ್ರವೃತ್ತಿಯ ಸ್ತ್ರೀಯಳಾದಳು. ಜೀವಕ್ಕೆ ಅಪಾಯವಾಗುತ್ತದೆಂದು ತಿಳಿದ ಕೂಡಲೆ, ಮುಂಬಯಿಗೆ ಓಡಿ ಬಂದಳು. ಇವಳು ಮರಳಿ ಇಂದೂರಿಗೆ ಬರಬೇಕೆಂದು ಮಹಾರಾಜರು ಹಲವು ಬಗೆಯಿಂದ ಕುಯುಕ್ತಿ [illegible] ಕಳವಿನ ಆರೋಪವೂ ಬರತಕ್ಕದ್ದಿತ್ತು. ಇದನ್ನರಿತು ಇವಳು ಮ್ಯಾಜಿಸ್ಟ್ರೇಟ ಕೋರ್ಟಿಗೆ ಬಂದು "ನಾನು ಉಟ್ಟ ಸೀರೆ, ತೊಟ್ಟ ಕುಪ್ಪಸದಿಂದ ಮುಂಬಯಿಗೆ ಬಂದಿದ್ದೇನೆ. ನನ್ನ ಹತ್ತರ ಸ್ವಂತ ಅಥವಾ ಅನ್ಯರ ಒಡವೆಗಳಿರುವದಿಲ್ಲ." ಎಂಬದಾಗಿ ತಾನಾಗಿ ಜವಾಬು ಬರೆದು ಕೊಟ್ಟಳು.

ಕೊಲೆಯನ್ನು ಅಪಾತ ಎತ್ತಿ, ಮೋಟಾರದಲ್ಲಿ ಹಾಕಿ, ಇಂದೂರಿಗೆ ಕರೆದೊಯ್ಯುವ ದೀರ್ಘ ಸಾಹಸ ನಡೆಯಿತು. ಹೊಸ ಯಜಮಾನನನ್ನು ಕೊಂದು ಇವಳನ್ನು ತಂದವರಿಗೆ ಬಹುಮಹತ್ವದ ಇನಾಮು ಕೊಡುವಂತೆ ಮುಂದಾಗಿ ಗೊತ್ತು ಮಾಡಿ, ಸಂಚುಗಾರರೆಂದು ಸಾವಿರಾರು ರೂಪಾಯಿಗಳನ್ನು ಕೊಟ್ಟಿದ್ದರು. ಕೊಲೆಯ ಸಮಯದಲ್ಲಿ ದಸ್ತಗಿರ ಮಾಡಿದಂಥ ಒಬ್ಬ ಆರೋಪಿಯ ಕಿಸೆಯಲ್ಲಿ ಎರಡು ಸಾವಿರ ರೂಪಾಯಿಯ ನೋಟುಗಳಿದ್ದವು. ಈ ಕೊಲೆಯಲ್ಲಿ ಇವಳ ತಂದೆಯೂ ಸೇರಿದ್ದನು. ಪೋಲೀಸರು ಈತನನ್ನು ದಸ್ತಗೀರ ಮಾಡಿದ್ದಾರೆ. ಕೊಲೆಗೆ ಸಂಬಂಧವಾದ ಮಹತ್ವದ ಕಾಗದ ಪತ್ರಗಳು ಅಮೃತಸರದಲ್ಲಿರುವ ನನ್ನ ಹೆಂಡತಿಯ ವಶದಲ್ಲಿರುತ್ತವೆಂದು ಈತನು ತನ್ನ ಜವಾಬಿನಲ್ಲಿ ಹೇಳಿದ್ದಾನೆ. ಹೆಂಡತಿಯು ಇವನ್ನು ತೆಗೆದುಕೊಂಡು ಮುಂಬಯಿಗೆ ಹೊರಟಿದ್ದಾಳೆ. ದೊಡ್ಡ ದೊಡ್ಡ ಪೋಲಿಸ ಅಮಲದಾರರು ಕೊಲೆಗೆ ಸಂಬಂಧ ಪಟ್ಟ ಜನರನ್ನು ಹಿಡಿಯುವದಕ್ಕಾಗಿ ಬೇರೆ ಬೇರೆ ಊರುಗಳಿಗೆ ಹೋಗಿದ್ದಾರೆ.

ಮುಂಬಯಿಯ ಡೇಲಿ ಮೇಲ ಪತ್ರಿಕೆಯು ಈ ಪ್ರಸಂಗದಲ್ಲಿ ಹೋಳಕರ ಮಹಾರಾಜರ ಎರಡು ಭಾವ ಪಟಗಳನ್ನು ಪ್ರಸಿದ್ಧ ಮಾಡಿ ಇವರ ಅಲ್ಪ ಚರಿತ್ರೆ ಬರೆದಿರುತ್ತದೆ. ಕೊಲೆಯ ಮೂಲ ಕಾರಸ್ಥಾನವು ಇಂದೂರಿನಲ್ಲಿಯೇ ಆಗಿದೆ. ಇದರ ಮುಖ್ಯ ಸೂತ್ರಧಾರರಾರಿರಬೇಕೆಂಬದನ್ನು ಪ್ರತಿಯೊಬ್ಬರು ತರ್ಕಿಸಿದ್ದಾರೆ. ಇಂಗ್ರೇಜಿ ಸರಹದ್ದನ್ನು ದಾಟಿ, ಸಂಸ್ಥಾನದಲ್ಲಿದ್ದು ಕೊಲೆಪಾತಕಕ್ಕೆ ನೆರವಾದರೆ ಇಂಗ್ರೇಜಿ ಕಾಯಿದೆಯು ಪೀಡಿಸಲಾರದು ಮತ್ತು ತಾವು ಬಹಳ ದೊಡ್ಡ ಮನುಷ್ಯರಾಗಿರುವದರಿಂದ "ಬಾರಾಖೂನ ಮಾಫ" ಇರುತ್ತದೆಂದು ತಿಳಿದಿರುವ ಭ್ರಮೆಯನ್ನು ಲಾರ್ಡ ರೀಡಿಂಗ ಸಾಹೇಬರು ದೂರ ಮಾಡಬೇಕೆಂದು ಈ ಪತ್ರವು ಸ್ಪಷ್ಟವಾಗಿ ಹೇಳಿದೆ. ಲಾರ್ಡ ರೀಡಿಂಗ ಸಾಹೇಬರು ಮೂಲ ಪಾತಕಿಯನ್ನು ನ್ಯಾಯಕೋರ್ಟಿನ ಮುಂದೆ ನಿಲ್ಲಿಸದಿದ್ದರೆ ಇಂಗ್ಲಂಡವು ಹೆಸರಿಗೆ ಸಾಮ್ರಾಜ್ಯ ಸರಕಾರವಾಗಿ ಉಳಿಯುವದೆಂದೂ ಈ ಪತ್ರಿಕೆಯು ಅಂದಿರುತ್ತದೆ.

ಬಾವಲಾ ಸಾಹೇಬನು ಗರ್ಭಶ್ರೀಮಂತನು. ಕೋಟ್ಯಾಧೀಶನು. ಮರಣ ಸಮಯದಲ್ಲಿ ಆಸ್ತಿಯನ್ನು ತಾಯಿಯ ಹೆಸರಿನಿಂದ [illegible] ಬೇಗಮಳಿಗೆ ಒಂದು ಲಕ್ಷ ರೂಪಾಯಿ ಬೇಕೆಂದು ಹೇಳಿದ್ದಾನೆ. ಬೇಗಮಳು ಆಸ್ಪತ್ರೆಯಲ್ಲಿ ಔಷಧೋಪಚಾರ ಹೊಂದುತ್ತಿದ್ದು, ಒಬ್ಬ ಪೋಲೀಸ ಶಿಪಾಯಿ ಇವಳ ಅಂಗರಕ್ಷಕರಾಗಿದ್ದಾನೆ.

ಸ್ವರಾಜ್ಯ ಪಕ್ಷಕ್ಕೆ ಆಶೆ ಹುಟ್ಟುವ ಕ್ರಮ

—೦—

ನಾಗಪೂರದ ಸ್ವರಾಜ್ಯ ಪಕ್ಷೀಯರು ಕಾನ್ಸಿಲದ ಬಾಗಿಲ ಬಂದು ಮಾಡಿರುವದು, ಅಲ್ಲಿಯ ಗವ್ಹರ್ನರ ಸಾಹೇಬರ ಮೊಸ್ಟೆ ಸ್ವಸಕ್ಕೆ ಕುಂದು ತಂದಿದೆ. ಸಾಹೇಬರು ಕಾನ್ಸಿಲ ಮುರಿದು ಹೊಸ ಚುನಾವಣಿಯ ಜಾಹೀರನಾಮೆಯನ್ನು ಹಚ್ಚಲಿಕ್ಕೆ ಅವಕಾಶವಿರುತ್ತಿರಲಿಲ್ಲ. ಆದರೆ ದುರ್ದೈವದಿಂದ ಅದು ಸಫಲವಾಗುವದೆಂಬ ಪ್ರಮಾಣ ದೊರೆಯಲಿಲ್ಲ. ಚುನಾವಣೆಯು ಮತದಾರರ ಕಯ್ಯಲ್ಲಿರುವದರಿಂದ ಎಷ್ಟು ಮಾತ್ರಕ್ಕೂ ಗವ್ಹರ್ನರ ಸಾಹೇಬರ ಆಟ ನಡೆಯಲಿಲ್ಲ. ಪುನಃ ಸ್ವರಾಜ್ಯ ಪಕ್ಷದವರೇ ಆರಿಸಲ್ಪಟ್ಟರೆ ಮತ್ತಿಷ್ಟು ತನ್ನ ದುರ್ಲೌಕಿಕವಾಗುವದೆಂದು ಕಷ್ಟವಾಗಿ ಬರೆದು ಸಾಹೇಬರು ಅದರ ಗೊಡವಿಗೆ ಹೋಗುವದಿಲ್ಲ. ಈ ಸಂಗತಿಯನ್ನು ಅವರು ಸ್ಪಷ್ಟ ಒಪ್ಪಿದ್ದಾರೆ.

ಸರ ಸ್ಲಾಯ ಸಾಹೇಬರು ವಿಲಾಯತಿಗೆ ಹೋದರೂ, ಅವರ ತರುವಾಯ ಗವ್ಹರ್ನರರಾಗುವ ಸರ ಬಟ್ಲರ ಸಾಹೇಬರು ಹಿರಿಯಣ್ಣನ ಕೀರ್ತಿಯನ್ನೇ ತೋರುವರು. ಇವರ ದೆಸೆಯಿಂದ ಸರ ಸ್ಲಾಯ ಸಾಹೇಬರು ಈಗಾಗಲೆ ಬಜೆಟ್ಟನ್ನು ಸಿದ್ಧ ಮಾಡಿದ್ದಾರೆ. ಮಂತ್ರಿಗಳಿಗೆ ಒಪ್ಪಿಸಿದಂಥ ಖಾತೆಗಳ ಸರ್ವಾಧಿಕಾರವನ್ನು ಮಂತ್ರಿಗಳಿಗೆ ಕೊಟ್ಟು ರಾಜ್ಯಕಾರಭಾರವು ಸಂಪೂರ್ಣ ಪ್ರಜಾ ಪ್ರತಿನಿಧಿಕ್ಕವಾಗಿ ಮಾಡುತ್ತೇವೆಂದು ಇವರು ಸ್ವರಾಜ್ಯವಾದಿಗಳಿಗೆ ಆಶೆ ಹುಟ್ಟುವಂಥ ಒಂದು ಭಾಷಣ ಮಾಡಿದ್ದಾರೆ. ಇದೇ ಭಾಷಣದ ಪ್ರಾರಂಭದಲ್ಲಿ ಸಾಹೇಬರು ಸ್ವರಾಜ್ಯವಾದಿಗಳನ್ನು ಬಹುವಾಗಿ ಬೈದುಕೊಂಡಿದ್ದಾರೆ.

ಸಾಹೇಬರು ಅಸಹಕಾರವನ್ನು ನಿಂದಿಸುವದು ಮತ್ತು ಇವರಿಗೆ ಉತ್ತರ ಕೊಡುವದು ನಿತ್ಯ ನಡೆಯುವವರಾರೆಂಬಂತಾಗಿದೆ. ನಾಗಪುರದ [illegible] ದನ್ನು ಬಿಟ್ಟು, ಸರಕಾರದ ಧೋರಣದಲ್ಲಿ ಬದಲಾಗುವ ಕ್ರಮವನ್ನರಿತು, ಸ್ವರಾಜ್ಯವಾದಿಗಳು ತಮ್ಮ ವರ್ತನವನ್ನು ಹೇಗಿಡಬೇಕೆಂಬ ವಿಷಯವಾಗಿ ಒಂದು ವಿಚಾರ ಮಾಡಲೋಸುಗ ಕಮಿಟಿ ನೇಮಿಸಿದ್ದಾರೆ. ಈ ಕಮಿಟಿಯಲ್ಲಿ ದೇಶಬಂಧು ದಾಸ, ಪಂಡಿತ ನೆಹರು, ವರ್ಹಾಡದ ಶ್ರೀ. ವ ಅಣೆ, ಬ್ಯಾರಿಸ್ಟರ ಅಭ್ಯಂಕರ [illegible] ರಾವ, ಶ್ರೀ. ತಾಂಬೆ, [illegible]

ಮಹಿಳೆ ಗುಪ್ತ ಡಾಕ್ಟರ ಮೂಂಜೆ, ಎಂ. ಬರೆಯುವರ ಮೆಂಬರರಾಗಿದ್ದಾರೆ.

---

೧೫೦ ವರ್ಷ ಬಾಳಿದ ಮುದುಕನು.

—೦—

ಜೋರಾ ಅಗ್ರಹಾ ಎಂಬ ಹೆಸರಿನ ೧೫೦ ವರ್ಷದ ಒಬ್ಬ ವೃದ್ಧಾಯುಷ್ಯನು ಕಾನ್ಸ್ಟಂಟಿನೋಪಲ ಪಟ್ಟಣದಲ್ಲಿ ವಾಸವಾಗಿರುತ್ತಾನೆ. ಆತನ ಐವರು ಹೆಂಡರು ಸತ್ತರು. ಆರನೆಯವಳು ಮುದುಕಿಯಾಗಿದ್ದಾಳೆ. ಇಷ್ಟರಿಂದ ತರುಣಿಯು ಕೂಡ ಮದುವೆ ಮಾಡಿಕೊಳ್ಳಬೇಕೆನ್ನುವವನಾಗಿದ್ದಾನೆ. ಆತನು ಕುರುಡನಿದ್ದು, ಟೊಂಕಕ್ಕೆ ಬಡಿಯಾ ಕಟ್ಟಿಕೊಂಡು ಕೂಸಿನಂತೆ ಊರೊಳಗೆ ತಿರುಗಾಡುವನು.

ಮನೋರೋಗಕ್ಕೆ ಮರಣವೇ ಮದ್ದು.

—೦—

ಪುಣೆಯಲ್ಲಿ ಕುಮಾರಿ ಸಿಂಬಾಳಕರೆಂಬುವಳು ಮ್ಯಾಟ್ರಿಕ್ಯುಲೇಶನ ಪರೀಕ್ಷೆಯಲ್ಲಿ ನಪಾಸಾದಳು. ತಿರುಗಿ ಪರೀಕ್ಷೆಗೆ ಕೂಡ್ರುವ ದಿವಸ ಬಂದರೂ, ನಾ ಪಾಸಾಗುವ ಬಗ್ಗೆ ಪ್ರಯತ್ನಗ ಪಟ್ಟು ಕೊಂಡರು ಏನು ಮಾಡಿದರೂ ಚಿಂತೆ ಹೋಗಲಿಲ್ಲ. ಕೊನೆಯಲ್ಲಿ ನಾನು ಆತ್ಮಹತ್ಯ ಮಾಡಿಕೊಳ್ಳುವೆನೆಂದು ಮನೆಯಲ್ಲಿ ಒಂದು ಕಾಗದ ಬರೆದಿಟ್ಟು, ಮನೆ ಮೇಲಿನ ಸೌಧಿಯ ಮೇಲಿಂದ ಹಾರಿಕೊಂಡು ಪ್ರಾಣ ನೀಗಿದಳು.

ವಿವಿಧ ವರ್ತಮಾನ.

—೦—

ಬಂಗಾಲದ ಕೌನ್ಸಿಲದಲ್ಲಾದ ಜಯವನ್ನು ಕುರಿತು ಮಹಾತ್ಮರು ದೇಶಬಂಧು ದಾಸರಿಗೆ ಕೆಳಗಿನ ಸಂದೇಶವನ್ನು ಭಾವನಗರದಿಂದ ಕಳಿಸಿದ್ದಾರೆ.

"ನಿಮಗೆ ಜಯವಾದದ್ದನ್ನು ವರ್ತಮಾನಪತ್ರಗಳಲ್ಲಿ ಇಂದು ಓದಿದೆನು. ನಿಮ್ಮ ತಾರುಗಳು ಇಲ್ಲಿಗೆ ಕಳಿಸಲ್ಪಟ್ಟವು. ದೊಡ್ಡ ಜಯದ ಬಗ್ಗೆ ಮನಃಪೂರ್ವಕವಾಗಿ ನಿಮ್ಮ ಅಭಿನಂದನ ಮಾಡುತ್ತೇನೆ. ನಿಮಗೆ ನೆಟ್ಟಗಾಗುತ್ತಿರುವದಕ್ಕೆ ಸಂತೋಷ ಪಡುತ್ತೇನೆ."

ದೇಶಬಂಧು ದಾಸರ ಪ್ರಕೃತಿಯು ನೆಟ್ಟಗಾಗಿ ಅವರು ನಿತ್ಯದಂತೆ ಆಹಾರ ತೆಗೆದುಕೊಳ್ಳುತ್ತಿರುವರೆಂದು ಡಾಕ್ಟರರು ಪ್ರಸಿದ್ಧ ಮಾಡಿದ್ದಾರೆ.

...ಕದ ಹಿಂದೂ ಮುಸಲಮಾನರಲ್ಲಿ ...ಬಂಧ ...ದ್ದರಿಂದ, ಕೊಲೆ, ಸುಲಿಗೆ, ಬೆಂಕಿ ಹಚ್ಚುವಿಕೆ, ದಂಗೆಗೆ ಉತ್ತೇಜನ ಕೊಡೋಣ ಮುಂತಾದ ಆರೋಪಗಳಿಂದ ದಸ್ತಗಿರ ಮಾಡಿದಂಥ ಹಿಂದೂ ಮುಸಲಮಾನರನ್ನು ಮುಕ್ತತೆಕೆ ಬಿಡಿಸಿಕೊಂಡು ಬಂದನು ... ಮಾಡಿದರು.

ತಂದೆ– ಮಗನಿಗೆ– ಮಾಸ್ತರರು ನಿನಗೇಕೆ ಹೊಡೆದರು?

ಮಗ– ಸೋಮಾರಿತನದ ಮೇಲೆ ನಿಬಂಧ ಬರೆಯಲಿಕ್ಕೆ ಹೇಳಿದರು. ನಾನು ಬರೇ ಬಿಳೇ ಕಾಗದ ಕೊಟ್ಟೆನು.

FOR SALE **FOR SALE** **FOR SALE**

A Rare opportunity for persons intending to start Motor Service

ಮೋಟರ ಸರ್ವ್ಹಿಸ ಇಡುವವರಿಗೆ ಅಪೂರ್ವ ಸಂಧಿಯು

ಮೋಟರ ಬಿಲ್ಡಿಂಗದಲ್ಲಿ ಸಂಪೂರ್ಣ ಅನುಭವ ಇರುವವರ ದೇಖರೇಖಿಯಲ್ಲಿ ಮುದ್ದಾಮು ಸರ್ವ್ಹೀಸಿನ ಬಗ್ಗೆ ಅತಿ ಮಜಬೂತ, ತಯಾರ ಮಾಡಿದ ೧೯೨೩-೧೯೨೪ ಮಾಡೆಲ್ಲ, ಗೇರ ಫಿಟಿಂಗ, ... [illegible] ... ಸಂಪೂರ್ಣ ... [illegible] ... (೧) ... [illegible] ... ಮಾಡಬೇಕು.

ಫ್ರಾಮರೋಜ ಖರಶೇಟಜಿ,
ವಾಯಿನ್ ಆ್ಯಂಡ ಜನರಲ್ ಮರ್ಚಂಟ,
ಧಾರವಾಡ

Framroj Kharshetji
Wine and General Marchant
Dharwar.

ಜಾಹೀರ ನೋಟೀಸು

—೦—

ಯಾವತ್ತೂ ಜನರಿಗೆ ತಿಳಿಸುವದೇನಂದ್ರೆ ಧಾರವಾಡ ಶಹರ ಪೈಕಿ ... ಗಲ್ಲಿಯಲ್ಲಿ ಇರುವ ... ಗೌಡರ ಪಗಾರ ಪೈಕಿ ಸರಕಾರಿ ದಸ್ತೈವಜ ಪತ್ರ ... ವಗೈರೆಗಳನ್ನು ... ತೆಗೆದುಕೊಳ್ಳುವವರು ... ಕೆಳಗಿನ ವಿಳಾಸಕ್ಕೆ ಒಂದು ತಿಂಗಳೊಳಗೆ ಭೆಟ್ಟಿಯಾಗಬೇಕು.

ವಿಳಾಸ

ಭೀಮನಗೌಡಾ ಫಕೀರಗೌಡಾ ಉಪ್ಪಾರ
... ಗೌಡರ, ಧಾರವಾಡ.

NOTICE

At a representative meeting held under the chairmanship of Prof. R. N. Wellingkar B. A. [oxen] on 16th Jan '25, it was resolved to hold Foot ball Tournaments in this District every year with rotating Shield.

As is generally the case, sufficient funds are not available. Hence we request the public of this District to encourage its youths to build up a "sane mind in sane body" by liberal contributions.

The contributions should be sent to the undersigned & they will be duly acknowledged in the Karnatak College Miscellany and in the leading newspapers.

Teams of various place, wishing to compete in this year's Tournaments, are requested to send in their applications on or before 23rd of this month. Aplications coming after, will not be considered.

For further perticulars, please apply to,

17-1-25

B. R. Kulkarni,
Hon. Secretary
The Dharwar District
Foot-ball Tournaments
Karnatak College, Dharwar.

ಆದರೆ ಘುಜರಾತಿಯ ಕೊನೆಯ ಪರಿಸ್ಥಿತಿಯನ್ನು ನೋಡಬೇಕು. ತಿಳಿಯುವೇವೇ?

ಮುಂಬಯಿಯ ಕೊಲೆಯ ಸುದ್ದಿಗಳು.

—o—

ಕೊಲೆಯು ವೇಳೆಯಲ್ಲಿ ದಸ್ತಗಿರ ಮಾಡಲ್ಪಟ್ಟ ಮುಸಲ್ಮಾನನು ಇಂದೂರಿನ ದಂಡಿನಲ್ಲಿ ಸಿಪಾಯಿದಾರನಾಗಿದ್ದನು.

ಕುಲಾಬೆ (ಮುಂಬಯಿ) ಯ ಬಿ. ಬಿ. ಸಿ ಆಯ. ರೇಲ್ವೆಯಲ್ಲಿ ಹಾಜರನಾಗಿದ್ದ ಮೋರಾ ಎಂಬ ಗುಜರಾಥೀ ಗೃಹಸ್ಥನು ಮುಂಬಯಿಯಲ್ಲಿ ನಡೆದ ಮುಸಲ್ಮಾನ ಮುಖ್ಯ ಸಾಕ್ಷೀದಾರನಾಗಿದ್ದನು. ಕೊಲೆಯಾದ ಕೂಡಲೆ ಈತನು ರಾಜಾಪುರಕ್ಕೆ ಓಡಿ ಹೋದನು. ಅಲ್ಲಿಯ ಸ್ಟೇಶನದಲ್ಲಿ ಈತನನ್ನು ದಸ್ತಗಿರ ಮಾಡಿದ್ದಾರೆ.

ಮುಮತಾಜ ಬೇಗಮಳಿಗೆ ಇಂದೂರದಲ್ಲಿ ಒಂದು ಕೂಸು ಹುಟ್ಟಿತ್ತು. ಯಾವ ಕಾರಣದಿಂದಲೋ ಅದು ಹುಟ್ಟಿದ ಕೂಡಲೆ ಸತ್ತು ಹೋಯಿತು

ವಿವಿಧ ವರ್ತಮಾನಗಳು.

—o—

ಪುಣೆಯಲ್ಲಿ ಶ್ರೀ ಭೋಪಟಕರರ ಅಧ್ಯಕ್ಷತೆಯಲ್ಲಿ ಬಂಗಾಲದ ಜಯದ ಬಗ್ಗೆ ದೇಶಬಂಧುವಿನ ಅಭಿನಂದನ ಮಾಡುವದಕ್ಕಾಗಿ ಸಾರ್ವಜನಿಕ ಸಭೆ ಕೂಡಿತ್ತು. ಶಾಂತತೆಯಿಂದ ಸ್ವರಾಜ್ಯ ಗಳಿಸುವ ಎಲ್ಲ ಮಾರ್ಗಗಳು ಬಂದಾದವೆಂದರೆ- ರಾಜ್ಯಕ್ರಾಂತಿಯೇ ಒಂದೇ ಉಪಾಯವಾಗುತ್ತದೆಂದು ಶ್ರೀ ಭೋಪಟಕರರು ಉಪಸಂಹಾರದ ವೇಳೆಯಲ್ಲಿ ಭಾಷಣ ಮಾಡಿದ್ದಾರೆ.

[illegible] ಕ್ಷಿಪ್ರ ವ್ಯಾಕರಣದಲ್ಲಿ ವಿರಾಯಿತಿಯ [illegible] ಕಂಪನಿಗೆ ಸ್ಪರ್ಧೆ ಮಾಡುವದು ಕಠಿಣವಾದ್ದರಿಂದ, ಹಿಂದುಸ್ಥಾನ ಸರಕಾರದವರು [illegible] ಎಲ್ಲ [illegible]

[illegible] ಹಕ್ಕು ಕೊಡಬೇಕೆಂದು ಮ [illegible]

FOR SALE FOR SALE FOR SALE

A Rare opportunity for persons intending to start Motor Service

ಮೋಟರ ಸರ್ವೀಸ ಇಡುವವರಿಗೆ ಅಪೂರ್ವ ಸಂಧಿಯು

ಮೋಟರ ಚಲ್ಲಿಂಗದಲ್ಲಿ ಸಂಪೂರ್ಣ [illegible] ದೇಖರೇಖಿಯಲ್ಲಿ [illegible] ಬಗ್ಗೆ ಅತಿ [illegible], ತಯಾರ [illegible] [illegible] ಸಂಪೂರ್ಣ [illegible] (೧) [illegible] ಆಗದ ಬಿಟ್ಟಿ ಆ ಬೇಕು.

ಫ್ರಾಮರೋಜ ಖುರಶೇಟಜಿ,
ವಾಯಿನ್ ಅ್ಯಂಡ ಜನರಲ್ ಮರ್ಚಂಟ,
ಧಾರವಾಡ

Framroj Khurshetji
Wine and General Marchant
Dharwar.

ಅಜಿಸ್ಸದಲ್ಲಿ ಮಂಗಳವಾರದ ದಿವಸ ಜುಮಾ ಪಡೆಯಾಗುವದು. ಮತಕೊಡುವ ವಿದ್ಯಾರ್ಥಿಗಳು ಹೆಸ್ತು ಪಾಸ್ತದಿಂದ ಟಿಕೀಟು ಕೊಂಡು ಪ್ರೊಲಿಂಗ ಸ್ಟೇಶನಕ್ಕೆ ಹೋಗಬೇಕು. ಉಳಿದವರು ತಪ್ಪದೆ ತಾಳಿಗೆ ಬರಬೇಕು. ಮತಾಧಿಕಾರಿಯಾದವರು ಅವಶ್ಯಕ್ಕಿಂತ ಹೆಚ್ಚು ವೇಳೆ ಅಲ್ಲಿ ನಿಲ್ಲಬಾರದೆಂದು ವಿದ್ಯಾ ಖಾತೆಯವರು ಪರಿಪತ್ರಕ ತೆಗೆದಿದ್ದಾರೆ.

ಜಾಹೀರ ನೋಟೀಸು

—o—

ಯಾವತ್ತೂ ಜನರಿಗೆ ತಿಳಿಸುವದೇನಂದರೆ ಧಾರವಾಡ ಶಹರ ಸ್ಟೇಶನ ರೋಡಿಗೆ [illegible] ರಾಮನಗೌಡರ ವಠಾರ ಸ್ಪೇಶಿ ಸರಕಾರಿ ರಸ್ತೆಗೆ ಹತ್ತಿ [illegible] ಭಾಗಗಳನ್ನು ಖರೀದಿ ಕೊಡತಕ್ಕವನಿದ್ದೇನೆ. ತೆಗೆದುಕೊಳ್ಳತಕ್ಕವರು ಕೆಳಗಿನ ವಿಳಾಸಕ್ಕೆ ಬಂದು ಸಮಕ್ಷಮ ಭೆಟ್ಟಿಯಾಗಬೇಕು.

ವಿಳಾಸ

ಭೀಮನಗೌಡ ಫಕೀರಗೌಡ ಉಪ್ಪಾರ ರಾಮನಗೌಡರ ವಠಾರ.

NOTICE

At a representative meeting held under the chairmanship of Prof. R. N. Wellinghar B. A. [oxen] on 16th Jan 25 it was resolved to hold Foot-ball Tournaments in this District every year with rotating Shield.

As is generally the case, sufficient funds are not available. Hence we request the public of this District to encourage its youths to build up a "sane mind in sane body" by liberal contributions.

The contributions should be sent to the undersigned & they will be duly acknowledged in the Karnatak College Miscellany and in the leading newspapers.

Teams of various places wishing to compete in this year's Tournaments, are requested to send in their applications on or before 23rd of this month. Applications coming after, will not be considered.

For further particulars please apply to,

17-1-25

B. R. Kulkarni,
Hon Secretary
The Dharwar District
Foot-ball Tournaments.
Karnatak College, Dharwar

[R.N.B 1443

ನಿತ್ಯ ಪತ್ರ ಬೆಲೆ ೬ ಪೈ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೬ | ಧಾರವಾಡ ಸೋಮವಾರ ತಾರೀಖು ೧೯ನೇ ಜಾನೇವಾರಿ ೧೯೨೫ | ಸಂಚಿಕೆ ೧೭

ದಿ· ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯು ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ.

ಜಾಹೀರ ನೋಟೀಸು.

ಕೆಳಗೆ ಸಹಿ ಮಾಡಿದ ವೆಂಕಣಭಟ್ಟ ಲಕ್ಷ್ಮಣಭಟ್ಟ ಸದರ ಜೋಯ್ಸ ಸಾ|| ತಿರಪಟ್ಟಿ ಇದಾ ಮೂಲಕವಾಗಿ ಯಾವತ್ತು ಜನರಿಗೆ ತಿಳಿಯಪಡಿಸುವದೇನಂದರೆ-

ತಿರಕಾಬಾಯಿ ಎಂಬುವಾಕಿಯು ನನ್ನ ಲಗ್ನದ ಹೆಂಡತಿ ಇದ್ದು ಆಕಿಗೆ ಮೂಲರೋಗ ಒದುತ್ತಿದ್ದು ಆಕಿ ಬುದ್ಧಿ ಭ್ರಮಣವಾಗಿ ಆಕಿಗೆ ತನ್ನ ಹಿತವು ತಿಳಿಯುವದಿಲ್ಲ. ಆಕಿಯು ನನ್ನ ಸಂಗಡ ತಂಟೇ ಮಾಡಿ ಅದೇ ಹುಚ್ಚಿನಲ್ಲಿ ನನ್ನ ಮನಿ ಬಿಟ್ಟು ಹೋಗಿರುತ್ತಾಳೆ. ಆಕಿಗೆ ಆಕಿ ತಂದೀ ಮಾರಸದಾರರು ಅಂತಾ ಎನಿಕೆ ಜವಿನುಗಳು ಬಂದಿರುತ್ತವೆ. ಕೆಲವು ಜನರು ಆಕಿಗೆ ಛಲತಾಪ ಕೊಟ್ಟು ಆಕಿಯ ಕಡಿಂದ ಸದರೀ ಜಮೀನುಗಳನ್ನು ವಕ್ತಿ ಅಗರ ಖರೀದಿ ಬರಸಿಕೊಳ್ಳಬೇಕೆಂದು ಮಾಡಿರುತ್ತಾರೆಂದು ನನಗೆ ತಿಳಿದು ಬಂದಿರುತ್ತದೆ. ಆದ್ದರಿಂದ ಯಾರೂ ಆಕಿ ಕಡಿಂದ ವಕ್ತಿ ಖರೀದಿ ವಗೈರೆ ಏನೂ ಬರಸಿಕೊಳ್ಳಬಾರದು ಆಕಿಗೆ ತನ್ನ ಸಮ್ಮತಿ ಶಿವಾಯ ಯಾವ ರೀತಿಯಿಂದಲೂ ವಿಲ್ಹೇವಾಟ ಮಾಡಲಿಕ್ಕೆ ಆಕಿಗೆ ಅಧಿಕಾರವಿರುವದಿಲ್ಲ ತಿಳಿಯುವದು.

ತಾ| ೨೩-೧೨-೧೯೨೪ ನೇ ಇಸ್ವಿ
ವೆಂಕಣಭಟ್ಟ ಲಕ್ಷ್ಮಣಭಟ್ಟ ಸದರ ಜೋಶಿ

ತಾಸಿಗೆ ೪೦೦ ಪೌಂಡು ಕಬ್ಬನ್ನು ಹಿಂಡಿ ಚಲ್ಲುವ

ಕಿರ್ಲೋಸ್ಕರ ಕಿಸಾನಗಾಣವು.

ಇದನ್ನು ಕೂಡಿಸುವದು ಬಲು ಸುಲಭವಿರುತ್ತದೆ. ಸವೆಯುವ ಭಾಗಗಳು ಎರಕದಿಂದ ಮಾಡಲ್ಪಟ್ಟಿದ್ದರಿಂದ, ಬೇಗ ಸವೆಯುವದಿಲ್ಲ. ಕಣೆಯಲ್ಲಿಯ ಗೇರುಗಳು ಆಳವಾಗಿದ್ದದರಿಂದ ಗಟ್ಟಿಯಾಗಿ ಹಿಡಕೊಂಡು ಒಂದು ಹನಿ ಸಹ ರಸ ಉಳಿಯದಂತೆ ಹಿಂಡಿ ಚಲ್ಲುತ್ತದೆ. ಇದಲ್ಲದೆ ನಮ್ಮಲ್ಲಿ

ಸಣ್ಣ ದೊಡ್ಡ ರಂಟೆಗಳು, ಕಪ್ಪಲಿ ಗಡಗಡೆಗಳು, ಮೇವು ಕೊಚ್ಚುವ ಯಂತ್ರಗಳು ಮುಂತಾದ ಸಾಮಾನುಗಳು ದೊರೆಯುತ್ತವೆ. ಹೆಚ್ಚಿನ ಸಂಗತಿಗಳಿಗೆ 'ಸಿ' ಎಂಬ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ } **ಕಿರ್ಲೋಸ್ಕರವಾಡಿ·**
ಜಿಲ್ಲಾ ಸಾತಾರಾ.

ಆರ್. ಎಮ್. ಜ್ಹೋನ್ ಎಂಡ ಸನ್ಸ ಹುಬ್ಬಳ್ಳಿ.

ಎಜಂಟ್ಸ ಫೋರ ಕಾರಬೋನಿಕ್ ಅಸಿಡ್ ಗ್ಯಾಸ, ಮ್ಯಾನುಫ್ಯಾಕ್ಚರರ್ ಆಫ ಏರೇಟೆಡ ವಾಟರ್.

ತಾವು ಆರ್ಡರ ಬೇಗ ಕಳಿಸಿರಿ

ನಮ್ಮಲ್ಲಿ ಸಿಗುವ ಸಾಮಾನುಗಳ ವಿವರ.



ನಂಬರ ಇಂಜಿನ್ ಕ್ಯಾಟಲಾಗ

ಫುಲ್‌ಗ್ಯಾಸ ಸಿಲೆಂಡರಗಳು ಇಂಗ್ಲೀಷ ಮತ್ತು ಜರ್ಮನ ಪೇಟೆಂಟ ಕಾಡ್ಸ, ಎಮ. ಬಿ. ಸೋಡಾ ವಾಟರ ಬಾಟಲಗಳು, ೩೫೦ ನಂ. ಸಾಬರೀನ ಡಬ್ಬಿ ೧ ಪೌಂಡಿನವು. ಸೋಡಾವಾಟರ್ ಮಶಿನುಗಳು ಮತ್ತು ... ಕಲರ ಕಲರಿನ ಬಾಟಲಿಗಳು ಎಸನ್ಸಗಳು, ಅಮೆರಿಕನ್ ಆಯ್ಸ್ ಕ್ರೀಮ ಸೋಡಾ, ಬನಾನಾ, ಕೋಲಾ, ...ಜಿನ್, ಲೆಮನ್ ನಂ. ೧ ಲೆಮನ್ ಜ್ಯುಯಿಸ್ ಸೋಡಾ ನಂ. ೧ ಮೇಂಗೋ, ಆರೇಂಜ, ಫಾಯಿನಾಪಲ್, ಪಿಕ್ಕಮಿಅಪ್, ಕ್ರೀಮಿನ ಟಾನಿಕ್, ರಾಜಬರಿ ನಂ. ೧ ಕೋಲಾ ನಂ. ೧..ಸ್ಟ್ರೀನ್ ಜಿಂಜರ್ ಬೀರ ನಂ. ೧, ರಬ್ಬರ್ ರಿಂಗ್ಸ್, ಬೆಸ್, ಇತರ ಮಶಿನ ಪಾರ್ಟಗಳು ನಮ್ಮಲ್ಲಿ ಸಿಗುತ್ತವೆ. ಮತ್ತು ಶುದ್ಧ ಶೇಂಗಾ ಎಣ್ಣೆಯು ಎಲ್ಲ ತರದ ಬಾಟಲ್ಸಗಳು ಸಿಗುತ್ತವೆ. ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಕೊಡುತ್ತೇವೆ. ನಮ್ಮಲ್ಲಿ ಕಬ್ಬಿಣದ ಮಿಲಿಟರಿ ಸಿಂಗಲ ಕಾಟ್ಸಗಳು ಸೋವಿ ದರದಿಂದ ಮಾರಲಿಕ್ಕೆ ಸಿಗುತ್ತವೆ.

ಅಡ್ರೆಸ್— R· M. John & Sons.
Mission Compound HUBLI.

ಜಾಹೀರ ಲಿಲಾವು.

ಇದೇ ಜನೇವರಿ ೨೫ ನೆಯ ತಾರೀಖಿನಿಂದ ಕಡಿಮೆ ಬೆಲೆಗೆ ವಿಕ್ರಯ

ಅತ್ಯಮೌಲ್ಯ ಸಂಧಿ

ಕಾಂಗ್ರೆಸ ವಿಜಯನಗರದಲ್ಲಿ ಎಲ್ಲ ಸಾಮಾನ ಗಳು ನಾಮಮಾತ್ರ ಬೆಲೆಗೆ ವಿಕ್ರಯ.

ಇದೇ ಜನೆವರಿ ೨೫ ನೆಯ ತಾರೀಖಿನಿಂದ ಕಾಂಗ್ರೆಸ ಕಮಿಟಿಗಾಗಿ ತರಿಸಲ್ಪಟ್ಟದ್ದ, ಮಾರೀ ಕಂಬ, ಜಾಂಬು, ಗಳ, ತಟ್ಟಿಗಳು, ಗೋಣಿಚೀಲ (ಹ್ಯಾಸಿಯನ್ ಕ್ಲಾಥ) ಮನೆಯಲ್ಲಿ ನೆಲಕ್ಕೆ ಹಾಕುವಂಥ ಕಡಪಾ ಪ್ರಾಂತದ ಕಲ್ಲು ಹಲಿಗೆಗಳು ಗಂಗಳು, ವಗೈರೆ ಸಾಮಾನುಗಳೂ ಮನೆಗಳಿಗೆ ಅತ್ಯುಪಯುಕ್ತವಾದ ಇತರ ವಸ್ತುಗಳೂ ಕಾಂಗ್ರೆಸ ವಿಜಯನಗರದಲ್ಲಿ (ಬೆಳಗಾವಿಯಲ್ಲಿ) ಜಾಹೀರಾಗಿ ಬಹು ಕಡಿಮೆ ಬೆಲೆಗೆ ವಿಕ್ರಯಿಸಲ್ಪಡುವವು. ಇಂತಹ ಅಮೂಲ್ಯ ಸಂಧಿಯನ್ನು ಯಾರೂ ಕಳೆದುಕೊಳ್ಳಬಾರದು. ಈ ಸುಸಂಧಿಯು ಮುಂದೆ ದೊರೆಯಲಾರದು. ಬೇಕಾದವರು ವಿಜಯನಗರ (ಬೆಳಗಾವಿ) ಕಾಂಗ್ರೆಸ ಕ್ಯಾಂಪದಲ್ಲಿ ಬಂದು ಸಾಮಾನುಗಳನ್ನು ಪರೀಕ್ಷಿಸಬಹುದು.

ವಾ ರಾ ಕಂಭಾವಿ

ಜನರಲ್ ಸೆಕ್ರೆಟರಿ

ಕಾಂಗ್ರೆಸ ಸ್ವಾಗತ ಮಂಡಳ

ನೋಟೀಸು.

ಶ್ರೀ ಶಿವಯೋಗ ಮಂದಿರ ವ್ಯವಸ್ಥಾಪಕ ರಾ|| ಶಿವಬಸವಪ್ಪ ವಗೈರೆ ತಾಲೂಕ ಬದಾಮಿ ಮುಕ್ಕಾಂ ಶಿವಮಂದಿರ ಇವರಿಗೆ-

ಗುರಪಾದಪ್ಪಾ ಮಹಾಂತಪ್ಪಾ ಕಲ್ಯಾಣಶೆಟ್ಟಿ ಸಾ|| ಬದಾಮಿ ಈ ನೋಟೀಸಿನಿಂದ ತಿಳಿಸುವದೇನಂದರೆ—

ಬದಾಮಿ ಗ್ರಾಮದ ಬಜಾರದಲ್ಲಿ ಇರುವ ನನ್ನ ಅಂಗಡಿ ಪೂರ್ವಕ್ಕೆ ನನ್ನ ಬೈಲ ಜಾಗಾಯಿದ್ದು ಅದರ ಪೈಕಿ ಏನಕ ಭಾಗವನ್ನು ನೀವು ತಪ್ಪು ತಿಳುವಳಿಕೆಯಿಂದಾಗಲಿ ಅಥವಾ ಸಣಬಸಪ್ಪಾ ರೇವಡೀಕಾರ ಮತ್ತು ಎಲ್ಲಿ ಕಡೆಗೆ ನನ್ನ ಗೂಢ ದ್ವೇಷ ಮಾಡುತ್ತಿರುವ ನನ್ನ ಸೋದರಳಿಯಾ ಶಿದ್ರಾಮಪ್ಪಾ ತಾಂಗ. ಊರ ಏನಕ ನನ್ನ ದ್ವೇಷಿತರ ಮಾತು ಕೇಳಿಯಾಗಲಿ ನಾನು ಗದಿಗಿನಲ್ಲಿ ಇದ್ದಾಗ್ಗೆ ನಡಯುವದ ಕಾಲಿಕೆಯಿಂದ ಸದರ ಬಸಪ್ಪಾ ಇವನಿಗೆ ಖರೀದಿ ಅಂತಾ ಬರಕೊಟ್ಟಂತೆ ತಿಳಿಯುತ್ತದ. ಸದರ ಸಣಬಸಪ್ಪಾ ರೇವಡಿಕಾರ ಇವರು ನನ್ನ ಜಾಗಾದ ಪೈಕಿ ಏನಕ ಭಾಗವನ್ನು ನನ್ನ ಕಡಿಂದ ಬಾಡಿಗಿ ಹಿಡಿದು ಬಾಡಿಗಿ ತರೀಕ ಮುದಲು ತನ್ನ ತಾಯಿ ಗಂಗವ್ವನ ಹಿಡಿದು ಪುಸ್ತಕ ವರ್ಷ ವಹಿವಾಟ ಮಾಡಿಕೊಂಡು ಬಂದಿದ್ದನು. ಈ ಪ್ರಕಾರ ನನ್ನ ವಹಿವಾಟ ಜಾಗಾ ಇದ್ದದ್ದು ಗೊತ್ತು ಇದ್ದರೂ ಸಹ ಸದರ ನನ್ನ ಜಾಗಾದ ಪೈಕಿ ಏನಕ ಭಾಗವನ್ನು ಸಮಾವೇಶ ಮಾಡಿಸಿ, ನಿಮ್ಮ ಕಡಿಂದ ತನ್ನ ತಮ್ಮನ ಹೆಸರಿನ ಖರೀದಿ ಪತ್ರ ಮಾಡಿಸಿಕೊಂಡಂತೆ ನನ್ನ ಕೇಳಿಕೆಯಲ್ಲಿ ಬಂದಿರುತ್ತದೆ.

ಆದರೆ ಆ ಪ್ರಕಾರ ನಿಮ್ಮ ಮಾಲಕಿ ಇಲ್ಲದ ಇದ್ದ ಜಾಗಾ ನಿಮಗ ಖರೀದಿ ಕೊಡಲಿಕ್ಕೆ ಬರುವದು. ಮತ್ತು ಖರೀದಿ ಪತ್ರ ಮಾಡಿಸಿಕೊಂಡಿದ್ದರೂ ಸಹ ಸದರ ಬಸಪ್ಪನಿಗೆ ಅಗರ ಅವನ ತಮ್ಮನಿಗೆ ಅದರ ಮೇಲೆ ಹಕ್ಕು ಉಂಟಾಗಲಾರದು. ಕಾರಣ ಈ ನೋಟೀಸು ಮುಟ್ಟಿದ ಎಂಟು ದಿವಸದಲ್ಲಿ ನೀವು ನನ್ನ ಮಾಲ್ಕಿ ಜಾಗಾದ ಬಗ್ಗೆ ಮಾಡಿ ಕೊಟ್ಟ ಖರೀದಿ ಪತ್ರವನ್ನು ರದ್ದ ಮಾಡಿಕೊಂಡು ಆ ಪ್ರಕಾರ ನನಗೆ ತಿಳಿಸಬೇಕು. ಹಾಗೆ ಮಾಡದೆ ಇದ್ದರೆ- ಈಗ್ಗೆ ನಿಮಗೆ ನೋಟೀಸಿನಿಂದ ತಿಳಿಸುವದೇನಂದರೆ- ಸದರ ನನ್ನ ಜಾಗಾದ ಬಗ್ಗೆ ವಿನಾ ಕಾರಣ ನಿಮ್ಮ ಮಾಲಕೀ ಇಲ್ಲದೆ ಖರೀದಿ ಮಾಡಿಕೊಟ್ಟದ್ದರಿಂದ ಸದರ ಜಾಗಾದ ಮಾಲ್ಕಿ ವಗೈರೇದ ಬಗ್ಗೆ ಏನಾದರು ತಂಟೆ ವಗೈರೆ ಬಂದರೆ ಆ ಬಗ್ಗೆ ಹತ್ತುವ ಖರ್ಚು ನೀವು ಕೊಡಬೇಕಾಗುತ್ತದೆ. ತಿಳಿಯಲೀದು- ನೀವು ಸೂಜ್ಞ ಸಂಸ್ಥೆಯವರು ಇದ್ದು ಸಾಧಾರಣ ಪ್ರಪಂಚಕರಂತೆ ವಿಚಾರವಿಲ್ಲದೆ ಎರಡನೇ ಕುಟುಂಬಸ್ಥರ ಜಾಗಾದ ಒಬ್ಬ ಪೋಕಳ ಖರೀದಿ ಬರಕೊಟ್ಟು ಊರೊಳಗೆ ತಂಟೆ ಹಚ್ಚ ಬಾರದಂತಾ ವಿನಂತಿ ಅದೆ. ಈ ನೋಟೀಸಿನ ಖರ್ಚು ಸಹ ನಿಮ್ಮ ತಲೆಯ ಮೇಲೆ ಅದೆ ತಾ|| ೧೬-೧-೧೯೨೫ ನೇ ಇಸ್ವಿ.

ಗುರಪಾದಪ್ಪಾ ಮಹಾಂತಪ್ಪಾ ಕಲ್ಯಾಣಶೆಟ್ಟಿ

ಬದಾಮಿ.

ಜಾಹೀರ ನೋಟೀಸು

ಕೆಳಗೆ ಸಹಿ ಮಾಡಿದವಳು ನೋಟೀಸ ಕೊಡುವದೇನಂದರೆ- ಮಾರುತಿ ಬೆಂಕ ಸಂಕಪ್ಪ ಬಡಿಗೇರ ಸಾ|| ಧಾರವಾಡ ಹಾಲಗೇರಿ ಓಣಿ ಇವಗ್ಗೆ.

ನಂನ ಅಕ್ಕನ ಗಂಡನಿದ್ದು, ಅಜಮಾಸ ೫ ೬ ವರ್ಷಗಳ ಆಗಾಯ್ತು ನೀನು ಮನೆಯನ್ನು ಬಿಟ್ಟು ಭ್ರಮಿಷ್ಟನಂತೆ ತಿರುಗಲಿಕ್ಕೆ ಹತ್ತಿಯಿತ್ತೀ ಮತ್ತು ಕುಡಿದು ಕುಡಿಯುತ್ತ ತಿರುಗುತ್ತೀ ನಿನಗೆ ಎಷ್ಟು ಸಾರೆ ಕರೆಯ ಕಳಿಸಿದರೂ ಮನೆಗೆ ಬರಲಿಲ್ಲಾ ಮತ್ತು ನೀನು ನಿಶಾದ ವ್ಯಸನಿಯಿರುವದರಿಂದ ನಂನ ಹೆಸರಿನ ಖರೀದಿ ಇರುವ ಮನಿ ಮ್ಯುನಸಿಪಾಲಟಿ ನಂಬರ ೧೯೪೮ ಇದನ್ನು ನೀನು ಪತ್ತೆ ವ ಖರೀದಿ ಯಾರಿಗೂ ಕೊಡಲಿಕ್ಕೆ ಬರುವಂತೆ ಇಲ್ಲ. ಸದರಿ ಮನಿಯನ್ನು ಯಾರೂ ಪತ್ತೆ ವ ಖರೀದಿ ಹಿಡಿಯಬಾರದು ವ ತನ್ನ ಸದರ ಮನೆಯ ಮೇಲೆ ನಾನು ಜೀವಂತ ಇರುವವರೆಗೆ ನಿಂನ ಹಕ್ಕು ಯೇನೂ ಇರುವದಿಲ್ಲಾ. ಜರ ಒಂದು ವೇಳ ಸದರಿಯವನ ಕಡೆಯಿಂದ ಯಾರಾದರೂ ತೆಗೆದುಕೊಂಡರೆ ಆ ಕಾಗದ ರದ್ದು ಅದೆ. ಬ್ಯಾಂಕಿನವರು ಆ ಮನೆಯ ಮೇಲೆ ಅವನಿಗೆ ಸಾಲ ಕೊಡಬಾರದು. ಮತ್ತು ಅವನ್ನ ಆ ಮನೆಯ ಮಂಜೂರಾತಿಯಿಂದ ಯಾರಿಗಾದರೂ ಸಾಲದ ಬಾಬತು ಜಾಮೀನು ಹಿಡಿಯಬಾರದು. ಹೀಗೆ ಹಿಡಿದರೆ ಅದು ರದ್ದು ಆಗುತ್ತದೆ

ತಾರೀಖು ೧೭-೧ ೨೫ ನೇ ಇಸ್ವಿ

ಈ ಎಂಗ್ರೈ ಹೆಬ್ಬೆಟ್ಟಿನ ಗುರ್ತ ಚೆನ್ನಾಬಾಯಿ ಕೋಂ ಮಾರುತಿ ಬಡಿಗೇರ ಈಕೆ ಕೈದು ಇರುತ್ತದೆ.

ದಿ. ಅಂಕಲಗಿ ಬ್ಯಾಂಕ ಲಿಮಿಟೆಡ್ ಧಾರವಾಡ.

೧೯೧೩ ಇಸ್ವಿಯ

ಕಂಪನಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ಚಾಲೂ ಖಾತೆ, ಠೇವು, ಸೇವಿಂಗ್ಸ ಡಿಪಾಜಿಟ, ಸಾಲ, ಪತ್ತೆ, ಹುಂಡಿ, ಮುಂತಾದ ಎಲ್ಲ ಪತ್ತು ವ್ಯವಹಾರಗಳು ನಡೆಯುವವು. ವಿಶೇಷ ಸಂಗತಿಗಳನ್ನು ಕಾಗದ ಸಹಿಪತ್ರದ ಮೂಲಕ ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ ರಿಂದ ೧೧ ೩೦, ಸಾಯಂಕಾಲ ೩ ರಿಂದ ೬ ರವರೆಗೆ ನಡೆಯುವದು.

K B . Ank

ಮ್ಯಾನೆಜಿಂಗ ಡಾ

ಈ ಪತ್ರವನ್ನು ಅಣ್ಣಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿ ವಾಗ್ಭೂಷಣ ಪ್ರೆಸ್ಸಿನಲ್ಲಿ ಮುದ್ರಿಸಿಪ್ರಸಿದ್ಧಿಸಿದರು.

ವಿಜಯ.

ಧಾರವಾಡ ತಾ- ೧೯-೧-೨೪ ನೇ ಇಸ್ವಿ

ಸ್ವರಾಜ್ಯ ಪಕ್ಷದ ಮುಂದಿನ ಕರ್ತವ್ಯವು.

—o—

ಬಂಗಾಲದ ದಬ್ಬಾಳಿಕೆಯಲ್ಲಿ ಸ್ವರಾಜ್ಯ ಪಕ್ಷದವರು ಲಾರ್ಡ ಲಿಟನ ಮತ್ತು ಲಾರ್ಡ ರೀಡಿಂಗ ಸಾಹೇಬರ ಮೇಲೆ ಮಾಡಿದ ಮಾತಿನಿಂದ, ಸ್ವದೇಶಿಯರೆಲ್ಲರೂ ಇವರ ಸ್ತುತಿ ಮಾಡುತ್ತಾರೆ. [illegible] ಅಂತ [illegible] ನೆವನಗಳನ್ನು ಮುಂದೆ ಮಾಡಿ, ಲಾರ್ಡ ರೀಡಿಂಗ ಸಾಹೇಬರು [illegible] ಬಿಲ್ಲ ಮತ್ತು ಶ್ರೀ [illegible] ಬಿಲ್ಲುಗಳನ್ನು [illegible] ಇದೇ ಪ್ರಕಾರ [illegible] ಬಿಲ್ಲಿಗೆ ನಾಮಂಜೂರಿ ಕೊಟ್ಟಿದ್ದಾರೆ.

[illegible] ಲಿಟನ ಸಾಹೇಬರು [illegible] ನಾವು ಮಾಡುವೆವು. [illegible] ರೀಡಿಂಗ ಸಾಹೇಬರು [illegible] ಇದೇ [illegible] ಅಸೆಂಬ್ಲಿಯಲ್ಲಿ ತರುವರು. [illegible] ಹೋಲಿಸಿದ ಮತ್ತು [illegible] ಸ್ವರಾಜ್ಯ ಪಕ್ಷದವರು [illegible] ಅನೇಕ ಜನರು [illegible] ಕೇಳಿಯುವರು. [illegible] ಆಪೇಕ್ಷೆಯು ಇವರ ಮೇಲೆ ಬರುವ [illegible] ಇವರು ಈ ಪ್ರಸಂಗದಲ್ಲಿ ಹೇಗೆ ವರ್ತಿಸುವರೆಂಬ [illegible] ಪ್ರಕೃತದಲ್ಲಿ ಹುಟ್ಟಿರುತ್ತದೆ.

ಸರಕಾರದ ಬಿಲ್ಲು ಅಸೆಂಬ್ಲಿಯಲ್ಲಿ ಬಂದ ಬಳಿಕ ಅದರ ಸ್ವರೂಪ ನೋಡಿ, ಸ್ವರಾಜ್ಯ ಮಾತ್ರವಲ್ಲ; ಸ್ವತಂತ್ರ ಮತ್ತು [illegible] ಆ ಬಗ್ಗೆ ವಿಚಾರ ಮಾಡುವರು. ಏಕೆಂದರೆ [illegible] ಯಲ್ಲಿ ಈ [illegible] ಹಾಕಿದ್ದಾರೆ ಮತ್ತು ಲಾರ್ಡ ರೀಡಿಂಗ ಸಾಹೇಬರು ಅಸೆಂಬ್ಲಿಯ [illegible] ಬಿಲ್ಲುಗಳಿಗೂ ಮಂಜೂರಾತಿ ಬೇಗ [illegible]ದ್ದಾರೆ. ಆದ್ದರಿಂದ [illegible] ಪಕ್ಷಗಳು [illegible] ದ್ದರೆ, [illegible] ನಾಗಿ ಸ್ಪರ್ಧೆಗೊಡಿಸಿ, ಆ [illegible] ಅಸೆಂಬ್ಲಿಯಲ್ಲಿ ಬಿಲ್ಲು ಬಂದು ಅದರ ಸ್ವರೂಪ [illegible] ಇದೇ ಪ್ರಕಾರ [illegible] ಒಡೆಯಲಿಕ್ಕಾಗುವದೆಂದು ಯಾರು, ತಾನೆ ಹೇಳುವನೆಂತು? [illegible]

[illegible]ಪ್ರಸಂಗದ, ಜಯದಬಗ್ಗೆ ಶಾಪೆಷ್ಟು ಉಳಿದಿಲ್ಲ; ಈ ಪ್ರಕಾರ [illegible] ತಿಳಿಯತಕ್ಕದ್ದಲ್ಲ. ಕೌನ್ಸಿಲದಲ್ಲಿ ಸರಕಾರದವರು ಮಾಡುತ್ತಿದ್ದಂಥ [illegible] ಮಾತ್ರ ತಡೆ ಹಾಕಿದ್ದೇವೆ. ಮತ್ತು ದೇಶಹಿತಕ್ಕಾಗಿ ಅಲ್ಲಿರಬೇಕೆಂದು ಕೋರಿದ ದಿವಸಗಳ ವರೆಗೆ ಇರುವೆವೆಂದು ಪಂಡಿತ ಮೋತಿಲಾಲರು ಒಂದು ಸಂದೇಶವನ್ನು ಪ್ರಸಿದ್ಧ ಮಾಡಿದ್ದಾರೆ. ಅದಾವ ಕಾಲವೆಂಬದು ಬೇಗನೆ ತಿಳಿಯುವದು [illegible]

ಸ್ವರಾಜ್ಯ ಪಕ್ಷೀಯರು ಕೌನ್ಸಿಲದಲ್ಲಿ ಪ್ರವೇಶ ಮಾಡಿದ ನಂತರ [illegible] ವಿರುದ್ಧ ಮತ ಕೊಟ್ಟು, ಅದನ್ನು ನಾಮಂಜೂರ ಮಾಡಿದರು. ಸ್ಟೇಟ ಸೆಕ್ರೆಟರಿಯವರು ಈ [illegible] ಊಧಿ, ಸಿವ್ಹಿಲ ಸರ್ವಿಸಿನ [illegible] ಪೂರ್ಣ ಮಾಡಿದರು. [illegible] ಮಾಡಬೇಕೆಂದು ಅಸೆಂಬ್ಲಿಯವರು [illegible] ಮಾಡುತ್ತಿದ್ದಾರೆ. ಇದು ಅಸೆಂಬ್ಲಿಯ ಅಧಿಕಾರದ ಹೊರಗಿನ ವಿಷಯವು. ಸರಕಾರದವರು [illegible] ಮಾಡುವದೊಂದೆಯಲ್ಲಿರಲಿ; ಅದರ ಮುಂದಿನ [illegible], ಭತ್ತೆ, [illegible] ಶ್ರೀ [illegible] ಕೊಡಬೇಕೆಂದಿರಾರೆ [illegible] ದಬ್ಬಾಳಿಕೆ [illegible] ಸ್ವರಾಜ್ಯ ಪಕ್ಷೀಯರನ್ನು [illegible] ವರು.

[illegible] ಪ್ರಸಂಗಗಳಲ್ಲಿ ಅಸೆಂಬ್ಲಿಯು ಸರಕಾರದ ಬಿಲ್ಲುಗಳನ್ನು ನಾಮಂಜೂರ ಮಾಡಬೇಕು; ಮತ್ತು ಸರಕಾರವು [illegible] ಸರ್ಟಿಫಿಕೇಟಿನಿಂದ [illegible] ಈ ರೀತಿಯಾಗಿ [illegible] ಕೊಡಬೇಕು [illegible]. ಈ ಕರವಾದ ಸರಕಾರದ ಆಟವು [illegible] ದರೆಂದು [illegible] ಕೋಟಿಜನರು ಸ್ವರಾಜ್ಯ ಪಕ್ಷೀಯರು ಮಾಡಿದ ವಿಷಯ ಬೇರೊಂದು ಗತ್ಯಂತರವಿರುವದಿಲ್ಲ.

——

ಗುಜರಾಥದ ರಾಷ್ಟ್ರೀಯ ವಿದ್ಯಾಪೀಠ.

—o—

ಗುಜರಾಥದ ವಿದ್ಯಾಪೀಠಕ್ಕೆ ಮುದ್ರಿತ ಕೊರತೆಯಿಲ್ಲ. ಅದಕ್ಕೆ ಧನ್ಯವಾದ ಕಟನವಾಯಿತು. ಅದರ ಹೇಳಿಕೆಗಳನ್ನು ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಿಲ್ಲ. ಇದರ ಆಧಿಪತ್ಯದಲ್ಲಿ [illegible] ಕಾಲೇಜುಗಳು, [illegible] ಹೈಸ್ಕೂಲುಗಳು, ೧೧ ಮಿಡ್ಲ ಸ್ಕೂಲುಗಳು [illegible] ಪ್ರಾಥಮಿಕ ಶಾಲೆಗಳಿರುತ್ತವೆ. ಅಹಮದಾಬಾದ ಶಹರದಲ್ಲಿ ಊರೊಳಗೆ ರಾಷ್ಟ್ರೀಯ ಶಾಲೆಗಳಾದವು. ಜೇಲ [illegible]ದಂತೆ ಗು[illegible]ಗಿ ಗುಜರಾಥದಲ್ಲಿಯೇ ಎಂದು [illegible] ವಿವರ [illegible]ಂದ ಕಂಡುಬರುವದು.

ಈ ವಿದ್ಯಾಪೀಠದ ಮೂರನೆಯ ವರ್ಧಂತ್ಯುತ್ಸವವು ಕಳೆದ ಸಂಕ್ರಮಣದ ದಿವಸ ಮಹಾತ್ಮಾಜಿಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಮಹಾತ್ಮರ [illegible]ದಲ್ಲಿ ನಡೆಯುವದನ್ನು ಕಳಿಯುವದಕ್ಕಾಗಿ [illegible] ರ್ಘೋಟೆರ [illegible] ಆಶ್ರಮದಿಂದ ಇಂಗ್ಲಿಷ ಕವಾರಿ [illegible] ಆಂಗಸ ಮತ್ತು [illegible] ಬಂದಿದ್ದಾರೆ. ಇವರೀರ್ವರೂ ಸಮಾರಂಭಕ್ಕೆ [illegible]ಗಿದ್ದರು.

ವಿದ್ಯಾರ್ಥಿಗಳು ಶಾಲೆ ಕಾಲೇಜುಗಳಿಗೆ ಬಹಿಷ್ಕಾರ ಹಾಕಿದರೆ- ಒಂದು ವರ್ಷಕ್ಕಿಂತ ಹೆಚ್ಚಿಗೆ ಕಾಲ ರಾಷ್ಟ್ರೀಯ ಶಾಲೆಗಳ ಅವಶ್ಯಕತೆಯು [illegible] ದೆಂದು ಮಹಾತ್ಮರು ಭಾವಿಸಿದ್ದರು. ಆದರೆ ಆ ಮಾತಿಗೆ ನಾಲ್ಕು ವರ್ಷವಾಯಿತು. ಮುಂದೆ [illegible] ವರ್ಷ ಇದೇ ಪ್ರಕಾರ ನಡಿಸಬೇಕಾಗುವದೆಂಬುದು ತಮಗೇ [illegible] ವಾಗಿರುತ್ತದೆಂದು ಮಹಾತ್ಮರು ಅಂದು, ರಾಷ್ಟ್ರೀಯ ಶಾಲೆಯಲ್ಲಿ ವಿದ್ಯಾಸ ಕಲಿಯುವರು ಅವಶ್ಯವಾಗಿ ಅಲ್ಲಿಂದ ಹೊಗಬೇಕೆಂದು ಹೇಳಿದ್ದಾರೆ.

ಕಾಂಗ್ರೆಸದಲ್ಲಿ [illegible] ಠರಾವು ಪಾಸಾಗಿದ್ದರೂ, ವಿದ್ಯಾಪೀಠದ ವಿದ್ಯಾರ್ಥಿಗಳು [illegible] ನ [illegible] ಹಾಕಿರೆಂದು ಮಹಾತ್ಮರಿಗೆ ಅನೇಕರು ಪತ್ರಗಳನ್ನು ಬರೆಯುತ್ತಾರೆ. ವಿದ್ಯಾರ್ಥಿಗಳ ಈ ವರ್ತನ ಕಂಡು ಮಹಾತ್ಮರು ಬಹುವಾಗಿ [illegible] ದಲ್ಲಿ ನನ್ನ ಪೂರ್ಣ ಸಂಪಿಗೆ [illegible] ಒಂದೇ ಅರ್ಥ ತಾವು ತಪ್ಪಿದೆ [illegible] ರೆಂದು ಅವರಿಗೆ ಉಪದೇಶ ಮಾಡಿದ್ದಾರೆ.

——

ಇಟಲಿಯಲ್ಲಿ ದಬ್ಬಾಳಿಕೆಯ ಕೋಲಾಹಲ.

—o—

ಮುಸೋಲಿನಿ ಸಾಹೇಬರು ಇಟಲಿಯ [illegible] ದಬ್ಬಾಳಿಕೆಯ ಧೋರಣವನ್ನು ಹೇಗೆ ನಡಿಸಿ[illegible] ಎಂಬದನ್ನು ಈ ಮೊದಲು ಬರೆದಿದ್ದೇವೆ. [illegible] ಮುಸೋಲಿನಿಯವರು [illegible] ಪ್ರತಿ [illegible] ಕಂಡು [illegible] ಅಲ್ಲಿಯ ಫ್ರೀ [illegible] ಸಂಘಗಳನ್ನು [illegible] ಕಾರ್ಮಿಕ ಸಂಘಗಳ [illegible] ಸೆರೆಯಲ್ಲಿ [illegible] ಸರಕಾರಕ್ಕೆ [illegible] ಪಾರ್ಲಮೆಂಟ ಸಭೆಯು [illegible] ಬಹುಮತದಿಂದ [illegible]. ಮತ್ತು [illegible] ಕಾಯದೆಯು ಪಾಸಾಗು

FOR SALE FOR SALE FOR SALE

A Rare opportunity for persons intending to start Motor Service

ಮೋಟರ ಸರ್ವ್ಹಿಸ ಇಡುವವರಿಗೆ ಅಪೂರ್ವ ಸಂಧಿಯು

ಮೋಟರ ಬಸ್ಸಿಂಗದಲ್ಲಿ ಸಂಪೂರ್ಣ [illegible] ಸರ್ವ್ಹಿಸ [illegible] ಆದರಿಂದ [illegible] ಮಾರುವದಿದೆ. [illegible] ಮಾರುವವರಿಗೆ ಬರೆದ ಬೇಕು ಅಥವಾ ಭೆಟ್ಟಿ ಆಗಬೇಕು.

ಫ್ರಾಮಜೀ ಖುರಶೇಟಜಿ,
ವಾಯಿನ್ ಆ್ಯಂಡ ಜನರಲ್ ಮರ್ಚಂಟ,
ಧಾರವಾಡ

Framroj Khursetji
Wine and General Merchant
Dharwar.

ಪ್ರಾರ್ಥನೆ ಆಶು [illegible] ಬರುತ್ತವೆ

ಡಾಕ್ಟರ ಪ್ರಸಿದ್ಧವಾದಂತೆ [illegible] ಔಷಧವನ್ನು [illegible] ಮಾಡಿಕೊಟ್ಟಾಗ [illegible] ಡಾಕ್ಟರರೂ [illegible] ಈ ಔಷಧವನ್ನು ಬಹುವಾಗಿ ಉಪಯೋಗಿಸುವ ಕಾರಣದ ಮುಖ್ಯ [illegible]

ಮೊಹಿಂಟ ಜ್ವರ ಅಂದರೆ– ಒಂದೇ ಶ್ರೀಮನ್ನು [illegible]

ಹಳೆ ಕೂಲಿಯ [illegible] ನಮ್ಮ ಔಷಧವನ್ನು ಒಮ್ಮೆ ಪರೀಕ್ಷೆಯಾಗಿ ನೋಡಿರಿ. ಬೆಲೆ [illegible]

ಏಜಂಟ— ವಿ ಕನಕದಾಸ ಮೆಡಿಕಲ ಸ್ಟೋರ್ಸ್, ಧಿಸ್ಪೆನ್ಸಿಂಗ [illegible] ಮತ್ತು ಡ್ರಗಿಸ್ಟ್ಸ ಸ್ಟೇಶನ ರೋಡ ಹುಬ್ಬಳ್ಳಿ

ನೋಟೀಸಿನ ಉತ್ತರ

[illegible] ಬುಡಣಸಾಹೇಬ ಬಿಡಗ [illegible] ([illegible]) ಹುಬ್ಬಳ್ಳಿ ಇವರಿಗೆ—

ಕಳೆದ ಬೆಟ್ಟಿನ ಗುತ್ತಿಗೆ ಮಾಡುವ ಬುಡ ನಸಾಹೇಬ ವ॥ ಅಜೀಮಸಾಬ॥ ಬಿಡಗತ್ತಿ ಸಾ॥ ಹುಬ್ಬಳ್ಳಿ ಈತನು ನಿನಗೆ ಈ ನೋಟೀಸಿನಿಂದ ತಿಳಿಸುವದೇನಂದರೆ—

ನೀನು ಧಾರವಾಡ ವಿಜಯ ಪತ್ರದಲ್ಲಿ ೭ ನೇ ಜನವರಿ ೧೯೩೫ ನೇ ಇಸವಿಯ ದಿವಸ ನೋಟೀಸು ಕೊಟ್ಟದ್ದನ್ನು ನೋಡಿದೆ. ಅದರಲ್ಲಿ ಬರೆದ ಬರಹವು ಸುಳ್ಳು ಅದೆ. ನೀನು ನನ್ನ ನೋಟೀಸಿನ ಪ್ರಕಾರ ಉಧಿ ಮಾಡಿಕೊಂಡರೆ ನನ್ನ ಮೇಲೆ ಮತ್ತು ನಿನ್ನನ್ನು ಉತಾರಿಸಿಕೊಳ್ಳುವದ ವೀರ ಏಕದಂ ಫೌಜದಾರಿಯಲ್ಲಿ ಫಿರ್ಯಾದಿ ಮಾಡುವೆನು. ನಾನು ನಿನಗೆ ಉದ್ರಿ ಮಾಡಿಕೊಳ್ಳುವದಕ್ಕೆ ಎಂದೂ ಸಮ್ಮತಿ ಕೊಡುವದಿಲ್ಲ.

ನೀನು ಮತ್ತು ನಿನ್ನ ಕಡಿ [illegible] ಈ ನೋಟೀಸು ಕೊಟ್ಟರ ತ್ರೀರ ನಿಮ್ಮ ಹಂ ದೆಯು ಎರಡು ಸಲ ನನಗೆ ಮೋಹರವು ಹಚ್ಚ ಲಿಕ್ಕೆಂದು ನಿನ್ನನ್ನು ಕರಕೊಂಡು ಹೋದನು. ಆಗ ನೀನು ಪ್ರಮೋಟಿ ಕಳಗೆ ನನ್ನೂ ದ ಮಾಡಿದ ದ ೧೯ ನೆ ಸ್ಯದಿ.

೧ ಬೆಟ್ಟ ಕಾಜೇಹೋಳು ೬|. ಶೇರು.
೨ ಕೋಳಬಂಡಿ ಜೋಳ ೧॥. ,,
೩ ಅಪಿ ಬೆಟ್ಟದು ೧ ,,
೪ ಬುದೀ ಜೋಳು ಬೆಟ್ಟದು ೧೫ ಕೊಳ
೫ ನಡವಟ್ಟಿ ಬೆಟ್ಟದು ೧ ಶೇರ.
೬ ಮರದ ಏರಿ ಕಿಮ್ಮತ್ತು ೬೦ರೂಪಾಯಿಗಳು

ನಮ್ಮ ಉದ್ರಿಯ ದಾಗೀನಗಳನ್ನು ನಿನ್ನ ತಂದೆಯಾದ ಮೋಹರ ಕಸೇಬನು ತನ್ನ ಸ್ವಾಧೀನದಲ್ಲಿ ಅದೆ ಹಣ ಮು [illegible] ದತ್ತೀ [illegible] ವಸ್ತು ಊರ ಮಾರುತ್ತವೆಂದು [illegible] ಅದೆ. ನಾನು ನಿನ್ನನ್ನು ಆಕ್ಷೇಪ [illegible] ಒಂದರೆ ನಿಮ್ಮ ತಂದೆಯು ದಾಗೀನಗಳನ್ನು ಕೊ ಡತಕ್ಕಾಗುವದಿಲ್ಲವೆಂದು [illegible] ಹೇಳಿದನು. ಆದ್ದ ರಿಂದ [illegible] ನಾನು [illegible] ಇಟ್ಟು [illegible] ನಿನ್ನ [illegible] ನಿನ್ನ ತಂದೆಯಿಂದ ಮಾಡಿದ್ದಾನೆ.

ನೀನು ಮತ್ತು ನಿನ್ನ [illegible] ಕೊಟ್ಟೀರಿ. [illegible] ನಿನ್ನ [illegible] ಪ್ರತಿಬಂಧ ಮಾಡಿದ [illegible] ನಿನ್ನ [illegible] ಕೊಡುವ [illegible] ಫೌಜದಾರಿಯಲ್ಲಿ ಫಿರ್ಯಾದಿ ಹಚ್ಚುವೆನು.

ಈ ನೋಟೀಸಿನ ಖರ್ಚು ನಿನ್ನ ಮೇಗಡೆ ನಿನ್ನ ರಿಂದಲೂ ಕೊಡುವಿಯೆಂದು ತಿಳಿಯಬೇಕು.

ತಾ॥ ೧೯ ಜನೇವಾರಿ ೧೯೩೫ ನೇ ಇಸವಿ

ಈ ಎಡಗೈ ಹೆಬ್ಬೆಟ್ಟಿನ ಗುರ್ತ [illegible] ಸಾಹೇಬ ವ॥ ಅಜೀಮಸಾಬ ಬಿಡಗತ್ತಿ ಇವನದು ಅದೆ.

ದಿ. ಅಂಕಲಗಿ ಬ್ಯಾಂಕ ಲಿಮಿಟೆಡ್ ಧಾರವಾಡ.

—೦—

೧೯೧೭ ಇಸ್ವಿಯು

ಕಂಪನಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ. ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ಚಾಲೂ ಖಾತೆ, ಸೇವ್ಹಿಂಗ್ಸ ಡಿಪಾಜಿಟ, ಸಾಲ, ಪತ್ತಿ, ಹುಂಡಿ, ಮುಂತಾದ ಯಾವತ್ತು ವ್ಯವಹಾರಗಳು ನಡೆಯುವವು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡುವವರಿಂದ ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ ರಿಂದ ೧೦–೩೦. ಸಾಯಂಕಾಲ ೩ ರಿಂದ ೬ ವರೆಗೆ ನಡೆಯುವದು.

K. B. Askal
ಮ್ಯಾನೆಜಿಂಗ ಡಾಯ

ಈ ಪತ್ರವನ್ನು ಅಣ್ಣಾಚಾರ್ಯ [illegible] ಯರ ಹೊಸಕೇರಿ ಇವರು ಧಾರವಾಡದಲ್ಲಿ ವ್ಹಿ. ಪಾತಾರಕರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧಿಸಿದರು.

R.N.B 1448

ನಿತ್ಯ ಪತ್ರ — [illegible] — ಬೆಲೆ [illegible]

ಸಂಪಾದಕರು— [illegible]

[illegible] ಬುಧ [illegible] ಫೆಬ್ರುವಾರಿ [illegible] ಸಂಚಿಕೆ [illegible]

ದಿ ಫೋರ್ಬಸ್ [illegible] ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಪ್ರತಿ [illegible] [illegible] ತಿಂಗಳ [illegible] ಠೇವನ್ನು [illegible] [illegible] ತಿಳಿಸಬೇಕು.

ಈ ಬ್ಯಾಂಕಿನಲ್ಲಿ [illegible] ಇಟ್ಟುಕೊಳ್ಳುವ [illegible] ತಿಂಗಳಿಗೆ [illegible] ಬಡ್ಡಿ ಕೊಡಲಾಗುತ್ತದೆ.

ಎ. ಕೆ. ಶೆಟ್ಟಿ,

ಮ್ಯಾನೇಜಿಂಗ ಡಾಯರೆಕ್ಟರ

ಜಾಹೀರ ನೋಟೀಸ.

ಕೆಳಗೆ ಸಹಿ ಮಾಡಿದ ವೆಂಕಣ್ಣಭಟ್ಟ ಲಕ್ಷ್ಮಣಭಟ್ಟ ಸದರ ಜೋಷ್ಯ ಸಾ|| ಶಿರಹಟ್ಟಿ ಇದರ ಮೂಲಕವಾಗಿ ಯಾವತ್ತು ಜನರಿಗೆ ತಿಳಿಯಪಡಿಸುವ ದೇನೆಂದರೆ-

ತಿರಕಾಬಾಯಿ ಎಂಬುವಾಕೆಯು ನನ್ನ [illegible] ದ ಹೆಂಡತಿ ಇದ್ದು ಆಕೆಗೆ ಮಲರೋಗ ಒದಗಿದ್ದು ಆಕೆ ಬುದ್ಧಿ ಭ್ರಮಣವಾಗಿ ಆಕೆಗೆ ತನ್ನ ಹಿತವು ತಿಳಿಯುವದಿಲ್ಲ. ಆಕೆಯು ನನ್ನ ಸಂಗಡ ತಂಟೇ ಮಾಡಿ ಆನೇ ಹುಚ್ಚುತನದಿಂದ ನನ್ನ ಮನೆ ಬಿಟ್ಟು ಹೋಗಿರುತ್ತಾಳೆ. ಆಕೆಗೆ ಆಕೆ ತಂದೇ ಮಾಡಿಸಿದಾಗಳು [illegible] ವಿಸಿಕೆ ಜವಿನಸುಗಳು ಬಂದಿರುತ್ತವೆ. ಕೆಲವು ಆಕೆಗೆ ಭ್ರಂತಾವೆ ಕೊಟ್ಟು ಆಕೆಯ ಕಡಿಂದ ಜವಿನಸುಗಳನ್ನು ವತ್ತಿ ಆಗಲ ಖರೀದಿ ಒದ್ದಿ ಬೇಕೆಂದು ಮಾಡಿರುತ್ತಾರೆಂದು ನನಗೆ ತಿಳಿಯುತ್ತದೆ. ಆದ್ದರಿಂದ ಯಾರೂ ಆಕೆ ಕಡಿಂದ ವತ್ತಿ ಖರೀದಿ ವಗೈರೆ ಏನೂ ಒಪ್ಪಿಸಿಕೊಳ್ಳಬಾರದು ಆಕೆಗೆ ನನ್ನ ಸಮ್ಮತಿ ವಿನಾಯ ಯಾವ ರೀತಿಯಿಂದಲೂ ವಿಲ್ಲೇವಾಟ ಮಾಡಲಿಕ್ಕೆ ಆಕೆಗೆ ಅಧಿಕಾರವಿರುವದಿಲ್ಲ ತಿಳಿಯುವದು.

ತಾ|| [illegible] ನೇ ಇಸ್ವಿ

ವೆಂಕಣ್ಣಭಟ್ಟ ಲಕ್ಷ್ಮಣಭಟ್ಟ ಸದರ ಜೋ,

ಸುಮಾರು ೬೦೦ ವರುಷ ಕಾಲ ಹಿಂದೆ ಬಲ್ಲರ

ಕಿರ್ಲೋಸ್ಕರ [illegible]

[illegible] ಹೊಸ [illegible] ಭಾಗಗಳು [illegible] ಹಾಯಿಸ್ಲಿಕ್ಕೆ [illegible] [illegible] ನಿಮ್ಮ [illegible] ಇವುಗಳ [illegible]

[illegible] ಗರಗಡಿಗಳು, [illegible] [illegible] ಕ್ಯಾಟಲಾಗನ್ನು ತರಿಸಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ } ಕಿರ್ಲೋಸ್ಕರವಾಡಿ-
ಜಿಲ್ಹಾ ಸಾತಾರಾ.

ಆರ್. ಎಮ್. ಜ್ಹಾನ್ ಎಂಡ ಸನ್ಸ ಹುಬ್ಬಳ್ಳಿ.

ಎಜಂಟ್ಸ ಫೋರ ಕಾರ್ಬೋನಿಕ್ ಆಸಿಡ್ ಗ್ಯಾಸ, ಮ್ಯಾನುಫ್ಯಾಕ್ಚರ್ ಆಫ ಏರೇಟೆಡ ವಾಟರ್ಸ.

ತಾವು ಆರ್ಡರ ಬೇಗ ಕಳಿಸಿರಿ.

ನಮ್ಮಲ್ಲಿ ಸಿಗುವ ಸಾಮಾನುಗಳ ವಿವರ

ಫರ್ಗ್ಯಾಸ ಸಿಲೆಂಡರಗಳು [illegible] ಗ್ಲಾಸ ಮತ್ತು ಜರ್ಮನ ಪೇಟೆಂಟ ಕಾಡ್, ಎಮ. ಟಿ ಸೋಡಾ ವಾಟರ ಬಾಟಲಗಳು, [illegible] ನಂ. [illegible]



ರೀನ ಡಬ್ಬಿ ೧ ಪೌಂಡನವು ಸೋಡಾವಾಟರ್ ಮಶಿನುಗಳು ಮತ್ತು ಎಲ್ಲ ತರದ ಕಲರಿನ ಬಾಟಲಿಗಳು ಎಸೆನ್ಸಗಳು, ಅಮೇರಿಕನ್ ಆಯಿಸ್ಕ್ರೀಮ ಸೋಡಾ [illegible], ಕೋಲಾಚಂಪೇಜಿನಾ, ಲೆಮನ್ ನಂ. ೧ ಲೆಮನ್ ಜ್ಯುಯಿಸ್ ಸೋಡಾ ನಂ. ೧ ಮೇಂಗೋ, ವೆನಿಲ, ಫಾಯಿನಾಪಲ್, ಪಿಸ್ತಾ, [illegible] ಟಾರ್ಟಿಕ್, ರಾಜಬರಿ ನಂ. ೧ ರೋಜ ನಂ. ೧ ಸ್ಟೋನ್ ಜಿಂಜರ್ ಬೀರ ನಂ. ೧; ರಬ್ಬರ್ ರಿಂಗ್ಸ್, ಟೇಪ್, ಇತರ ಮಶಿನ ಪಾರ್ಟುಗಳು ನಮ್ಮಲ್ಲಿ ಸಿಗುತ್ತವೆ. ಮತ್ತು ಶುದ್ಧ ಸೈಜಿನ ಎಲ್ಲಾ ಎಲ್ಲ ತರದ ಬಾಟಲ್ಲುಗಳು ಸಿಗುತ್ತವೆ. ವ್ಯಾಪಾರಸ್ಥರಿಗೆ ಒಳ್ಳೇ ಕಮೀಶನ್ ಕೊಡುತ್ತೇವೆ. ನಮ್ಮಲ್ಲಿ ತಯ್ಯಾರಾದ [illegible] ಗಳು ಸೋಡಾ ದರದಿಂದ ಮಾರಲಿಕ್ಕೆ ಸಿಗುತ್ತವೆ.

ಅಡ್ರೆಸ್— R. M. John & Sons.
Mission Compound HUBLI.

ಬಿ. ಇದು ಈ ವಿಷಯವನ್ನು ಮತ್ತಿಷ್ಟು ಸ್ಪಷ್ಟ ಮಾಡಿ ತೋರಿಸಿರುತ್ತದೆ.

——

ಕಾಂಗ್ರೆಸದಲ್ಲಿ ಕೆಲಸ ಮಾಡಿದ ಸ್ವಯಂ ಸೇವಕರ ಸಂಖ್ಯೆ.

—೦—

ಹಿಂದುಸ್ಥಾನ ಸೇವಾದಲದ ಸೇನಾನಿಯಾದ ಡಾಕ್ಟರ ಹರ್ಡೀಕರರು ವ್ಹಾಲಂಟಿರ ಸಂಖ್ಯೆ, ಸ್ಥಳ ಮತ್ತು ಕುಲಭೇದದ ಪತ್ರಿಕೆಗಳನ್ನು ಮುದ್ರಣಕ್ಕಾಗಿ ನಮಗೆ ಕಳಿಸಿ ಕೊಟ್ಟಿದ್ದಾರೆ. ಅವುಗಳ ಸಾರಾಂಶವು—

ವ್ಹಾಲಂಟಿಯರರ ಸಂಖ್ಯೆ-	ಪುರುಷರು,	ಸ್ತ್ರೀಯರು.
ಬೆಳಗಾವಿ-	೩೩೬	೪೭
ಧಾರವಾಡ-	೧೧೯	೩೨
ವಿಜಾಪುರ-	೯೧	೧೫
ಕಾರವಾರ-	೫೭	೬
ಮಂಗಳೂರ-	೪೮	೧೪
ಮೈಸೂರ ಸಂಸ್ಥಾನ-	೭೧	೪
ಬಳ್ಳಾರಿ-	೨೪	೦
ಕಿರುಕಳ-	೭೨	೨೪

ಜಾಯಿಂಟ್ಪಟರು ಅನುಕ್ರಮವಾಗಿ ೧೦೦, ೬೯, ೧೧, ೧೫, ೭ ಮತ್ತು ೧ ರಂತೆ ಬಂದಿದ್ದರು. ಕಡೆಯ ಎರಡು ಸ್ಥಳಗಳಿಂದ ಪೂರೆ ಇರುತ್ತದೆ.

ಧಾರವಾಡ ಜಿಲ್ಲೆಯ ವರ್ಗೀಕರಣ- ಪುರುಷರು. ಧಾರವಾಡ ೨೯, ಹುಬ್ಬಳ್ಳಿ ೩೯, ಗದಗ ೨೨, ಬಂಕಾಪೂರ ೫, ಹಾನಗಲ ೧೧, ಹಾವೇರಿ ೪, ರೋಣ ೨, ರಾಣೇಬೆನ್ನೂರ ೨, ಶಿರಹಟ್ಟಿ ೫, ಧಾರವಾಡದಿಂದ ೧೭ ಮತ್ತು ಹುಬ್ಬಳ್ಳಿಯಿಂದ ೧೯ ಸ್ತ್ರೀ ವ್ಹಾಲಂಟಿಯರರು ಸೇರಿದ್ದರು. ಉಳಿದ ಸ್ಥಳಗಳಿಂದ ಪೂರೆ ಇರುತ್ತದೆ.

ಜಾತಿಯ ವಿವರ —

ಬ್ರಾಹ್ಮಣರು ೬೫೬, ಕ್ಷತ್ರಿಯರು ೧೭, ವೈಶ್ಯರು ೩೧, ಶೂದ್ರರು ೧೩, ಲಿಂಗಾಯತರು ೨೫, ಜೈನರು ೨೫, ಸಿದ್ಧಿ ೩, ಕ್ರಾಯಿಸ್ತರು ೧, ಅರ್ಯಸಮಾಜ ೪, ಮುಸಲಮಾನ ೪೦, ಕ್ರಿಶ್ಚನ ೧, ಪಾರಸಿ ೧, ಅಸ್ಪೃಶ್ಯರು ೪.

ಎಪ್ರಿಲ ತಿಂಗಳಲ್ಲಿ ಕಾರಿಕತ್ರ ಪಟ್ಟಣದಲ್ಲಿ ಈ ದೇಶದ ವಿಶ್ವಾಧಕ ಜಾನಕ್ಕು ಸೇರುವದು. [illegible] ಇದರ ಅಧ್ಯಕ್ಷರಾಗಿ ...

[illegible] ಭಾಗ [illegible] ಆಗಿಲ್ಲ. ಇ [illegible] ಭರತಿ ಮಾಡುವ ಪ್ರ [illegible]

೭೨ ದಿವಸಗಳ ನಿರಾಹಾರ

—೦—

ಲಾಹೋರದಲ್ಲಿ ಲಂಬಾಪ್ರಸಾದ ಕುಲಶ್ರೇಷ್ಠರೆಂಬ ಡಾಕ್ಟರಿದ್ದಾರೆ. ಇವರು ಉಪವಾಸದಿಂದ ರೋಗಗಳನ್ನು ಕಳೆಯುವ ಪದ್ಧತಿಯನ್ನು ಪ್ರಾರಂಭಿಸಿದ್ದವರಿದ್ದಾರೆ. ಮೊದಲು ಸ್ವತಃ ಉಪವಾಸ ಮಾಡಿ, ಅದರ ಸ್ವಾನುಭವ ತಕ್ಕೊಳ್ಳಲುಬೇಕಾಗಿದ್ದಾರೆ. ಇವರು ನಿರಾಹಾರ ಮಾಡಲಿಕ್ಕೆ ಹತ್ತಿ ೭೨ ದಿವಸಗಳಾದವು ದಿನಾಲು ರಾತ್ರಿಯಲ್ಲಿ ಒಂದು ಥಾಲಿ ನೀರು ಮಾತ್ರ ಕುಡಿಯುತ್ತಿದ್ದಾರೆ. ಹತ್ತು ಸಪ್ತಕವಾದರೂ ನಿಜವಾದ ಹಸಿವೆಯು ಆಗಲೊಲ್ಲದು ಹಸಿವೆಯಾಗಿಯತ್ತದೆಂದು ಕಂಡು ಬಂದ ಮೊದಲ ಅಷ್ಟ ಗ್ರಹಣವಾದಂತೆ ಗಟ್ಟಿಮುಟ್ಟು ಮಾಡಿದ್ದಾರೆ ಅಮೇರಿಕದಲ್ಲಿ ಮ್ಯಾಕ ಸ್ವೀನಿ ಸಾಹೇಬನು ಇಷ್ಟು ದಿವಸ ಉಪವಾಸ ಮಾಡಿದನು. ಆದರೆ ಅವನಿಗೆ ಪ್ರಾಣಾಂತಿಕವಾಗಿತ್ತು. ಡಾಕ್ಟರ ಕುಲಶ್ರೇಷ್ಠರು ಗಟ್ಟಿಮುಟ್ಟಿಯಾಗಿರುವದು ಬೆರಗು ಮಾಡುವಂತಾಗಿರುತ್ತದೆ.

——

ಲಾಲಾ ಲಜಪತರಾಯ ಮತ್ತು ಬಾಬು ಅರವಿಂದ ಘೋಷ.

—೦—

ಲಾಲಾ ಲಜಪತರಾಯರು ಬಾಬು ಅರವಿಂದ ಘೋಷರನ್ನು ಕಾಣುವದಕ್ಕಾಗಿ ಪಾಂಡಿಚೇರಿಗೆ ಹೋಗಿದ್ದರಷ್ಟೇ; ಅಲ್ಲಿ ನಡೆದ ಸಂಭಾಷಣವನ್ನು ಇವರು ಲಾಹೋರಿನ ಟ್ರಿಬ್ಯೂನ ಪತ್ರದ ಪ್ರತಿನಿಧಿಗೆ ಈ ಪ್ರಕಾರ ಹೇಳಿದ್ದಾರೆ.

"ಬಾಬೂ ಅರವಿಂದರು ಪೂರ್ಣ ಆರೋಗ್ಯವಂತರಾಗಿದ್ದಾರೆ. ಯಾವಾಗ ಪುನಃ ಸಾರ್ವಜನಿಕ ಕಾರ್ಯಗಳಲ್ಲಿ ಸೇರುವರೆಂಬದನ್ನು ಅವರು ಹೇಳಬಲ್ಲರುವದಿಲ್ಲ. ಏಕೆಂದರೆ- ಅದು ಅವರಿಗೇ ತಿಳಿಯದಾಗಿದೆ. ನಾನು ಅವರ ಕೂಡ ನಾಲ್ಕು ತಾಸು ಮಾತಾಡಿದೆನು. ಅವರು ಹಿಂದೂ ದೇಶಕ್ಕೆ ಯಾವ ಸಂದೇಶವನ್ನೂ ಕಳಿಸಬೇಕೆನಿಲ್ಲ. ಅದರ ಪ್ರಕಾರ ಕೃತಿ ಮಾಡಿ ತೋರಿಸದ ಹೊರತು, ಅದು ಅರ್ಥಹೀನವಾದುದೆಂಬುದು ಅವರ ಮತವು. ಹಿಂದೂ ಸಭೆಯ ಸ್ಥಾಪನೆಯ ವಿಷಯವಾಗಿ ಅವರು ಒಪ್ಪಿಗೆ ಕೊಟ್ಟರು. ಎಲ್ಲಾ ಜನಾಂಗಗಳು ಹಿಂದುಸ್ಥಾನದಲ್ಲಿ ವಾಸವಾಗಿರಬೇಕಾದುದರಿಂದ ಹಿಂದೂ ಸಂಘಟನೆಯು ಮುಸಲಮಾನರ ಕಡೆಗೆ ದ್ವೇಷವಿಲ್ಲದ ವಿಚಾರದಿಂದ ಮಾತ್ರ ಇರತಕ್ಕದ್ದು. ಮತ್ತು ಸ್ವಸ್ಥತೆ ಅವಶ್ಯಕತೆಯಲ್ಲಿ ಅಧಿಕಾರದ ಎಲ್ಲ ಸ್ಥಳಗಳನ್ನು ಆಕ್ರಮಿಸಿ, ಅವನ್ನು ದೇಶಹಿತಕ್ಕಾಗಿ ಉಪಯೋಗಿಸಬೇಕು" ಎಂಬದು.

ಲಾರ್ಡ ರೀಡಿಂಗ ಸಾಹೇಬರು ಹಿಂದೂ ಧರ್ಮಾದಾಯ, ದೇವಾದಾಯ ಬಿಲ್ಲಿಗೆ ಮಂಜೂರಿ ಕೊಟ್ಟರಷ್ಟೇ; ಈ ಬಿಲ್ಲಿಗೆ ವಿರುದ್ಧವಾಗಿ ಶ್ರೀ ಸತ್ಯಮೂರ್ತಿಗಳವರು ಮದ್ರಾಸದ ಕೌನ್ಸಿಲದಲ್ಲಿ ಒಂದು ಬಿಲ್ಲು ತರುವಂತೆ ಸರಕಾರಕ್ಕೆ ತಿಳಿಸಿದ್ದಾರೆ.

——

ಲಾರ್ಡ ರೀಡಿಂಗ ಸಾಹೇಬರು ಬಿಲ್ಲಿಗೆ ಮಂಜೂರಿ ಕೊಟ್ಟಿದ್ದರೂ, ಕೆಲವು ದುರಸ್ತಿಗಳನ್ನು ಸೂಚಿಸಿದ್ದಾರೆ. ಈ ಪ್ರಕಾರದ ದುರಸ್ತಿಯ ಬಿಲ್ಲನ್ನು ಒಬ್ಬ ಮಂತ್ರಿಯು ಸರಕಾರದ ಪಕ್ಷದಿಂದ ಆದೇ ಕೌನ್ಸಿಲದಲ್ಲಿ ತರತಕ್ಕವನಿದ್ದಾನೆ.

——

ಇಂಗ್ಲಂಡದಲ್ಲಿ ಬರುವ ಎಪ್ರಿಲ ತಿಂಗಳಿಂದ ಪ್ರಾರಂಭವಾಗುವ ಹೊಸವರ್ಷದಿಂದ ಪ್ರಾಪ್ತಿಯ ಕರವನ್ನು ಒಂದು ಶಿಲಿಂಗು ಕಡಿಮೆ ಮಾಡುವರು. ಹಿಂದುಸ್ಥಾನದಲ್ಲಿ?

——

ಜಾಹೀರ ನೋಟೀಸು

ಯಾವತ್ತೂ ಜನರಿಗೆ ತಿಳಿಸುವದೇನೆಂದರೆ ಧಾರವಾಡ ಶಹರ ಸೈಕೆ ದಲೋಣಿಗಲ್ಲಿಯಲ್ಲಿ ಇರುವ ರಾಮನಗೌಡರ ವಾಡಾದ ಸೈಕೆ ಸರಕಾರ ರಸ್ತೆ ಮತ್ತು ಮಿಲ್ಲಾ ಜಾಗಾ ವಗೈರೆಗಳನ್ನು ಖರೀದಿಸುವ ಬಾಪ್ತು ಜೋಶಿ ನಿಮ್ಮ ಕೀರ ಸಾಹುಕಾರರಿಂದ ನನ್ನ ಕರಾರು ಮಾಡಿಕೊಂಡಿರುತ್ತೇನೆ. ತಕರಾರು ಇದ್ದವರು ಕೆಳಗಿನ ವಿಳಾಸಕ್ಕೆ ಒಂದು ವಾರದಲ್ಲಿ ಭೆಟ್ಟಿಯಾಗಬೇಕು.

ವಿಳಾಸ

ಭೀಮನಗೌಡಾ ಫಕೀರಗೌಡಾ ಉರ್ಫ ರಾಮನಗೌಡರ ವಕಾರ.

——

ಮನೆಯ ಮಾರಾಟ

—೦—

ಯಾವತ್ತು ಜನರಿಗೆ ಜಾಹೀರ ನೋಟೀಸಿನಿಂದ ತಿಳಿಸುವದೇನಂದರೆ- ಹಾವೇರಿ ಪೇಟೆಯ ಸಾಲಿಯ ಹತ್ತರ ಇರುವ ನನ್ನ ಸ್ವಂತ ಮಾಳಿಗೆಯ ಹೊಸಮನೆಯನ್ನು ಮುಂದೆ ಕಳೆದ ಮಾರಲಿಕ್ಕೆ ಕೊಡುತ್ತೇನೆ. ಈ ಮನೆಯು ನೋಡಲಿಕ್ಕೆ ಹಾಗು ಸ್ವಸ್ಥರಿಗೆ ಜಿಲ್ಲಾ ಅವಶ್ಯ ಇದ್ದವರು ನನ್ನನ್ನು ನನಗೆ ಭೆಟ್ಟಿಯಾಗಿ ಕಿಮ್ಮತ್ತು ತಿಳಿದುಕೊಳ್ಳಬೇಕು.

ತಾ || ೧೭-೧೧-೨೪

ಗೋವಿಂದರಾವ ಜೋಯಿಸಿ, ಮುಲಾಳ

C/o ವಿಜಯ ಆಫೀಸ ಧಾರವಾಡ.

ವಿಜಯ.

ಧಾರವಾಡ ತಾ- ೩೧-೧-೨೪ ನೇ ಇಸ್ವಿ

ಮುಂಬಯಿ ಇಲಾಖೆಯಲ್ಲಿ ವೈದ್ಯಕೀಯ ಪ್ರಸಾರ.

—೦—

ಇಂಗ್ರೇಜಿನಲ್ಲಿ ಪರೀಕ್ಷೆ ಕೊಟ್ಟ ಡಾಕ್ಟರರು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಮಾತ್ರ ವಾಸವಾಗಿರುವರು. ಇವರು ತಾಲೂಕ ಅಥವಾ ಸಾಧಾರಣವಾಗಿ ದೊಡ್ಡ ಗ್ರಾಮಗಳಲ್ಲಿದ್ದು, ತಮ್ಮ ವ್ಯವಸಾಯ ನಡಿಸಲಿಚ್ಛಿಸುವದಿಲ್ಲ. ಪಟ್ಟಣಗಳಲ್ಲಿ ಇವರಿಗೆ ಹೊಟ್ಟೆತುಂಬ ಪ್ರಾಪ್ತಿ ಇಲ್ಲದಿದ್ದರೂ, ಕಾಯುವದರ ಮೇಲೆ ಬೇಯುವದು ಬೀಳುವಂತೆ ಪಟ್ಟಣಗಳಿಗೇ ಅಂಟಿಕೊಳ್ಳುವರು. ಇವರು ಹಳ್ಳಿಗಳಿಗೆ ಹೋಗಲು ಉತ್ತೇಜನವಾಗಬೇಕೆಂದು ಮತ್ತು ಸಮೀಪದಲ್ಲಿ ಜನರಿಗೆ ಔಷದ ದೊರೆಯಬೇಕೆಂದು ಸರಕಾರದವರು ಒಂದು ಹೊಸ ಯೋಜನೆಯನ್ನು ಮಾಡಿದ್ದಾರೆ. ಒಂದು ಪ್ರಥಮಯೋಜನೆಯ ತಕ್ಕ ಗ್ರಾಮಿಕ ಶಾಲೆಗಳ ಮಾಸ್ತರರಿಗೆ ವೈದ್ಯಕೀಯದಲ್ಲಿ ಶಿಕ್ಷಣ ಕೊಡುವದು. ಇದರ ಪ್ರಯೋಗವೆಂದು ವಿಜಾಪೂರ ಮತ್ತು ಪುಣೆಯ ಸಿವ್ಹಿಲ ಆಸ್ಪತ್ರಿಗಳಲ್ಲಿ ವರ್ಗಗಳನ್ನು ತೆಗೆದು, ಅಲ್ಲಿ ಇವರಿಗೆ ಶಿಕ್ಷಣ ಕೊಡುವರು. ಧಾರವಾಡ ಜಿಲ್ಲೆಯ ಮೂವರು ಶಿಕ್ಷಕರು ವಿಜಾಪೂರಕ್ಕೆ ಹೋಗಿ, ಈಗಾಗಲೇ ಶಿಕ್ಷಣ ಹೊಂದಿ ಬಂದಿದ್ದಾರೆ. ಸರಕಾರದವರು ಇವರಿಗೆ ವೈದ್ಯಕೀಯ ಶಿಕ್ಷಣದ ತಿಂಗಳಿಗೆ ಹತ್ತು ರೂಪಾಯಿ ಹೆಚ್ಚಿಗೆ ಸಂಬಳ ಕೊಡುವರು. ಇವರ ಕಿರಿಯ ಡಾಕ್ಟರ ಪರೀಕ್ಷೆಯಲ್ಲಿ ಪಾಸಾದಂಥವರು ಹಳ್ಳಿಗಳಲ್ಲಿ ವಾಸವಾಗಿರುವದಕ್ಕಾಗಿ ಪ್ರಾರಂಭದ ವೆಚ್ಚವನ್ನು ... ಭತ್ಯೆಯನ್ನು ಕೊಡುವರು. ಸರಕಾರದ ಪ್ರತ್ಯೇಕ ವಿಭಾಗದಿಂದ ಒಂದು ಸಾವಿರ ಹಳ್ಳಿಗಳಲ್ಲಿ ಔಷಧದ ಅನುಕೂಲ ಒದಗುವಂತಾಗುವದು.

ಕಾಲರಾ ಜಾಡ್ಯವು ಹಬ್ಬಿದಾಗ ಅಂದರೆ ಪ್ರಥಮೋಪಚಾರಗಳಿಗೆ ಸರಕಾರದವರು ಔಷಧವನ್ನು ಉಚಿತವಾಗಿ ಪೂರೈಸುವರು. ಡಾಕ್ಟರರೊಂದಿಗೆ ಆ ಸೂರು ರೂಪಾಯಿಗಳ ಮೂಲ ಧನದ ಸಹಾಯ ಮಾಡುವರು. ಮತ್ತು ಇವರಿಗೆ ತಿಂಗಳಿಗೆ ೫೦ ರೂಪಾಯಿಯಮೇಲೆ ಸಂಬಳ ಕೊಡುವರು. ಈ ದನ್ನು ಪ್ರತಿವರ್ಷ ಹತ್ತು ಹಳ್ಳಿಯಂತೆ ಆರಿಸಿ ಮುಂದುವರಿಸಿಕೊಂಡು ಹೋಗುವರು. ಡಾಕ್ಟರರು ಆರಿಸ್ಕೊಂಡ ಹಳ್ಳಿಯಲ್ಲಿ ಮೂರು ವರ್ಷ ಕಾಲ ನೆಲಸಿ ಮುಂದೆ ಕೆಲಸ ಮಾಡಬೇಕಾಗಿದ್ದು. ಈ ಅವಧಿಯಲ್ಲಿ ಅಲ್ಲಿಂದ ಗದಗ ಬಿಟ್ಟು ಹೋದರೆ ಸರಕಾರದಿಂದ ಸಹಾಯಕ ದ್ರವ್ಯವೆಂದು ತಕ್ಕೊಂಡ ಆ ನೂರು ರೂಪಾಯಿಗಳನ್ನು ತಿರುಗಿ ಕೊಡತಕ್ಕದ್ದು. ಸದ್ಯದಲ್ಲಿ ಇಂಥ ದವಾಖಾನೆಗಳನ್ನು ೧೫೦೦ ರಿಂದ ೨೦೦೦ ಜನ ಸಂಖ್ಯೆಯುಳ್ಳ ಗ್ರಾಮಗಳಲ್ಲಿ ಸ್ಥಾಪಿಸುವರು. ಇಂಥ ಗ್ರಾಮಗಳು ಮುಂಬಯಿ ಇಲಾಖೆಯಲ್ಲಿ ನಾಲ್ಕು ಸಾವಿರದಾಗ ಇವೆ. ಇವುಗಳ ಜನಸಂಖ್ಯೆಯು ಅವ ವತ್ತು ಲಕ್ಷವಾಗುತ್ತದೆ.

ಮುಂಬಯಿ ಸರಕಾರದವರು ಈ ರೀತಿಯಾಗಿ ಮಾಡುವ ಯೋಜನೆಯು ಸ್ತುತ್ಯವದೆ. ಆದರೆ ಇದಿಲ್ಲ ಏರ್ಪಾಟಿಯು ಔಷಧಗಳದ್ದೇ ಆಗುವದು ಮಾತ್ರ ಸಮಂಜಸವೆನಿಸುವದಿಲ್ಲ. ಏರ್ಪಾಟಿಯು ಔಷಧಕ್ಕೆ ಪಟ್ಟಣಗಳಲ್ಲಿಯ ಡಾಕ್ಟರರು ಒಂದು ದಿವಸಕ್ಕೆ ಆರಾಣೆ ತಕ್ಕೊಳ್ಳುತ್ತಾರೆ. ಹಳ್ಳಿಗಳಲ್ಲಿ ಈ ಹೊಸ ಡಾಕ್ಟರರು ನಾಲ್ಕಾಣೆ ಬೇಡಬಹುದು. ಇದು ಹಳ್ಳಿಯ ಜನರಿಗೆ ಬಹಳ ಭಾರ ಹೋಗುವದು. ಸರಕಾರದವರು ಈ ಡಾಕ್ಟರರಿಂದ ಜನರಿಗೆ ಆಸ್ಪತ್ರಿಗಳಲ್ಲಿ ದೊರೆಯುವಂತೆ ಔಷಧವು ಉಚಿತವಾಗಿ ದೊರೆಯುವಂತೆ ಮಾಡಬೇಕು. ಇದು ಶಕ್ಯವಾಗ ದಿದ್ದರೆ ದೇಶಿಯ ಔಷಧಗಳನ್ನು ಪೂರೈಸಿ, ಅವು ಉಚಿತವಾಗಿ ದೊರೆಯುವಂತೆ ಮಾಡಬೇಕು. ಸರಕಾರದವರು ಮಾಡಿದ ಏರ್ಪಾಟಿನಿಂದ ಏರ್ಪಾಟಿಯು ಮುದ್ದಿಗೆ ಮಾತ್ರ ಉತ್ತೇಜನ ಕೊಟ್ಟಂತಾಗುತ್ತದೆ. ದೇಶೀ ಔಷಧಗಳಿಗೆ ಪ್ರೋತ್ಸಾಹನ ಕೊಡಬೇಕೆಂದು ಕೌನ್ಸಿಲುಗಳಲ್ಲಿ ಠರಾವುಗಳು ಪಾಸಾಗುತ್ತಿದ್ದರೂ, ಕೃತಿಯು ಮಾತ್ರ ಕಂಡ ಬರುವದಿಲ್ಲ. ಇಂಗ್ರೇಜಿ ಪಾಶ್ಚಾತ್ಯರೀತಿಯ ವೈದ್ಯಕೀಯ ವೆಚ್ಚವು ಕಡಿಮೆ ಇರುತ್ತಿದ್ದು, ಅದರಿಂದ ಅಲ್ಪ ವೆಚ್ಚದಲ್ಲಿ ಹೆಚ್ಚು ಲೋಕೋಪಕಾರವಾಗುವಂತಿರುತ್ತದೆ. ವೈದ್ಯಕೀ ಖಾತೆಯು ಮಂತ್ರಿಗಳ ವಶದಲ್ಲಿದ್ದು, ಅವರು ಸ್ವದೇಶಿಯ ದೃಷ್ಟಿಯಿಂದ ಈ ವಿಷಯದ ವಿಚಾರ ಮಾಡಲಿಲ್ಲವೆಂಬದು ಅಸಮಾಧಾನದ ಸಂಗತಿಯು.

ಫ್ರಾನ್ಸದಲ್ಲಿ ಬೊಲ್ಶೆವಿಕರ ಪ್ರಾಬಲ್ಯವು ದಿನ ದಿನಕ್ಕೆ ಹೆಚ್ಚುತ್ತಲಿದೆ. ಇವರು ದೇಶದಿಂದ ಆ ಸ್ಟೇಟು ಪಾರ್ಲಮೆಂಟ (ಜೆನೆರ) ಸಭೆಯಲ್ಲಿ ಕಮ್ಯೂನಿಸ್ಟ ಮತ್ತು ಕಟುತರವಾದ ವಾದವಾದವಾಗಿ, ದೊಡ್ಡ ಗೊಂದಲವೆದ್ದು, ಪಾರ್ಲಮೆಂಟ ಸಭೆಯನ್ನು ಮುಕ್ತಾಯ ಮಾಡಬೇಕಾಯಿತು.

ಈ ಗೊಂದಲ ಭವಿಷ್ಯ ಮಾಡಿದಂತೆ ಲಾರ್ಡ ಲಿಟನ ಸಾಹೇಬರು ದಬ್ಬಾಳಿಕೆಯ ... ಕೇಳಿ ಕೊಟ್ಟರು.

ಬೆಳಗಾವಿಯ ಬ್ರಾಹ್ಮಣೇತರ ಸಭೆ ವಿಷಯವಾಗಿ ಮಹಾತ್ಮರ ವಾಕ್ಯ.

—೦—

ಮಹಾತ್ಮರು ಯಂಗ ಇಂಡಿಯಾ ಪತ್ರಿಕೆಗೆ ಕೊಟ್ಟಂಥ ಅಭಿಪ್ರಾಯ ಪಡೆಯುತ್ತಾರೆ.

ಎಲ್ಲ ಸಭೆ ಪರಿಷತ್ತುಗಳಿಗೆ ಒಂದೇ ತರ ವಾಗಿಯೇ ಒಂದಕ್ಕೆ ಹೋಗುವಂತೆ ನಾನು ನಿಶ್ಚಯ ಮಾಡಿದ್ದೆನು. ಬ್ರಾಹ್ಮಣೇತರ ಮಹಾಸಭೆಯವರ ವಿನಂತಿಯ ಮೇರೆಗೆ ಬ್ರಾಹ್ಮಣೇತರ ಸಭೆಯ ಕಾರ್ಯ ದಲ್ಲಿಂದು ನನಗೆ ತಿಳಿಯಿತು. ಇದು ಕಾಂಗ್ರೆಸ ದ ಆವಾರದಲ್ಲಿ ಸೇರಲಿಲ್ಲ. ನನಗೆ ತಿಳಿದ ಮಟ್ಟಿಗೆ ಕಾಂಗ್ರೆಸದ ಜನರ ಆಶೀರ್ವಾದವಿಲ್ಲದ ಸಭೆಯಲ್ಲಿ. ನನಗೆ ತಿಳಿದಷ್ಟು ಸಭೆಗೆ ಬರುವ ಆನೇಕ ಆಮಂತ್ರಣ ಪತ್ರಗಳು ಬಂದವು. ಬ್ರಾಹ್ಮಣೇತರ ಸಭೆಯ ಆಮಂತ್ರಣವು ಅವುಗಳೊಳಗಿದ್ದಿತು. ಈ ಸಭೆಯು ಎಲ್ಲಿ ಕೂಡುವದು? ಮತ್ತು ಯಾವಾಗ ಕೂಡುವದೆಂಬದು ನನಗೆ ಗೊತ್ತಿರಲಿಲ್ಲ. ಆದರೂ ಈ ಸಭೆಗೆ ಹೋಗಬೇಕೆಂದು ನಾನು ಪ್ರಯತ್ನಿಸುತ್ತಿದ್ದೆನು. ಹಲವು ಕಾರಣಗಳಲ್ಲಿ ಹೊರಗಬೇಕಾದ್ದರಿಂದ, ಈ ಸಭೆಗೆ ಹೋಗಲಿಕ್ಕಾಗಲಿಲ್ಲ. ನಾನು ತ್ವರೆಯಿಂದ ಕೆಲಸಗಳು ಮುಗಿದ ಒಳಿಕ, ವಿಚಾರ ಮಾಡುತ್ತಿರುವಾಗ, ಬ್ರಾಹ್ಮಣೇತರ ಸಭೆಯು ವಿಸರ್ಜನೆಯಾಯಿತೆಂದು ತಿಳಿಯಿತು. ಬ್ರಾಹ್ಮಣೇತರ ಸಭೆಗೆ ಹೋಗಬಾರದೆಂಬ ಉಪೇಕ್ಷೆಯಾಗಲಿ; ಅದರ ವಿಷಯವಾಗಿ ಅನಾದರವಾಗಲಿ ಇರಲಿಲ್ಲ. ನನ್ನಂತೆ ಬೇರೆ ಪ್ರಮುಖರ ಪರಿಸ್ಥಿತಿಯೂ ಆಗಿತ್ತು. ಬ್ರಾಹ್ಮಣೇತರರು ತಮ್ಮ ಸಭೆಯನ್ನು ಯಾವಾಗ ಕೂಡಿಸತಕ್ಕದ್ದೆಂಬ ವಿಷಯವಾಗಿ ನನ್ನನ್ನು ಕೇಳುವದು ಅವರ ಕರ್ತವ್ಯವಾಗಿತ್ತು. ನನ್ನ ಕೂಡ ಆಲೋಚನೆ ಮಾಡಿದ್ದರೆ- ಕಾಂಗ್ರೆಸದ ಬೇರೆ ಮೆಂಬರರು ಈ ಸಭೆಗೆ ಹೋಗಲು ಅವಕಾಶ ದೊರೆಯುವಂತೆ ವಿಚಾರ ಮಾಡುತ್ತಿದ್ದೆನು. ಎಲ್ಲ ಸಭೆಗಳು ಹೆಸರಿಗೆ ಮಾತ್ರ ಬೆಳಗಾವಿಯಲ್ಲಿ ಕೂಡಬೇಕೆಂದು ಬೇರೆ ಆಸನ ಮಹಾಸಭೆಯವರ ಆಮಂತ್ರಣದ ಉದ್ದೇಶವಾಗಿರಲಿಲ್ಲ. ಅಂತಃಕರಣಪೂರ್ವಕವಾಗಿ ಪಕ್ಷಗಳ ಪರಸ್ಪರ ಸಂಬಂಧ ವೃದ್ಧಿಯಾಗಬೇಕೆಂದಿತ್ತು. ಬ್ರಾಹ್ಮಣೇತರ ಪಕ್ಷದ ನ್ಯಾಯ ಪಕ್ಷದಲ್ಲಿ ನಾನು ಭಿನ್ನಾಭಿಪ್ರಾಯವಿಲ್ಲ. ಕಾಂಗ್ರೆಸದ ಜನರಿಗೆ ಯೋಗ್ಯ ಸಂಧಿಯನ್ನು ಕೊಟ್ಟದ್ದರೆ- ಅವರು ಈ ಸಭೆಗೆ ಆನಂದದಿಂದ ಹೋಗಬಹುದಾಗಿತ್ತೆಂದು ತೋರಿಸುವದೇ ನನ್ನ ಉದ್ದೇಶವಾಗಿದೆ.

ಲೇಖವನ್ನು ಬರೆದ ನಂತರ ದೇ. ಗಂಗಾ ಧರ ದೇಶಪಾಂಡೆಯವರ ಪತ್ರವನ್ನು ನೋಡಿದೆ

ಂದು ಮ್ಯಾಜಿಸ್ಟ್ರೇಟರು ಫಿರ್ಯಾದಿಯನ್ನು ತೆಗೆದು ಹಾಕಿದರು. ಇಂದೂರಿನ ಅಧಿಕಾರಿಗಳು ನನ್ನ ನನ್ನ ಮಗಳಿಗೂ ಭೆಟ್ಟಿ ಮಾಡಗೊಡಲೇ ಇಲ್ಲ.

ಮುಮತಾಜಳು ಇಂಗ್ಲಂಡದಿಂದ ಮರಳಿ ಬಂದು, ಒಂದು ವರ್ಷದ ನಂತರ ಗರ್ಭಿಣಿಯಾದಳು. ಏಳು ತಿಂಗಳು ತುಂಬಿದ ಬಳಿಕ, ನಾವು ಬಹಳವಾಗಿ ಮಹಾರಾಜರಿಗೆ ಬಿನ್ನಹ ಮಾಡಿಕೊಳ್ಳಲು- ಮಹಾರಾಜರು ನನಗೂ ನನ್ನ ಕೆಲವು ಆಪ್ತರಿಗೂ ಅವಳ ಕೂಡ ಇರಲು ಅಪ್ಪಣೆ ಕೊಟ್ಟರು.

ನವಮಾಸ ತುಂಬಿದ ಬಳಿಕ, ಹೆಣ್ಣು ಹುಟ್ಟಿತು. ಆದರೆ ಕೆಲಹೊತ್ತಿನ ನಂತರ ದಾಯಿಗಳು ಕೂಸು ಸತ್ತಿತೆಂದು ಸುದ್ದಿ ಹೇಳಿದರು. ಈ ದುಃಖದಾಯಕ ವರ್ತಮಾನ ಕೇಳಿ, ಮುಮತಾಜಳು ಹೌಹಾರಿ, ಎದೆಹೊಡಕೊಂಡಳು. ಮಹಾರಾಜರ ಸಹವಾಸದಲ್ಲಿರುವದರಲ್ಲಿ ಅರ್ಥವಿಲ್ಲೆಂದು ನಾವು ತಿಳಿದು, ಇಂದೂರು ಬಿಟ್ಟು ಹೋಗುವ ಆಲೋಚನೆ ಮಾಡಿದೆವು. ಆದರೆ- ಸುತ್ತಲು ಕಾವಲಿದ್ದದರಿಂದ, ಉಪಾಯ ತೋರಿದೆವು.

೧೯೨೨ನೆಯ ಇಸವಿಯ ಮಾರ್ಚ ತಿಂಗಳಲ್ಲಿ ಮಹಾರಾಜರು ನಮಗೆ ಮಸೂರಿಗೆ ಹೋಗಬೇಕೆಂದು ತಿಳಿಸಿದರು. ಸಂಸ್ಥಾನದ ಕಾವಲಗಾರರ ಕಾವಲಿನಲ್ಲಿಯೇ ನಾವು ದಿಲ್ಲಿಗೆ ಹೋದೆವು. ಅಲ್ಲಿಂದ ಮಸೂರಿಗೆ ಬರುವದಿಲ್ಲೆಂದು ಹಟ ಹಿಡಿದೆವು. ನಮ್ಮನ್ನು ಬಂಧಮುಕ್ತ ಮಾಡಿಸಬೇಕೆಂದು ಸರ್ವಾಧಿಪತಿ ಮತ್ತು ಪೋಲೀಸ ಕಮಿಶನರಿಗೆ ಅರ್ಜಿ ಮಾಡಿಕೊಂಡೆವು. ಮಹಾರಾಜರ ಕಾವಲುಗಾರರು ಕದನ ಹೂಡಿದರು. ಸ್ಟೇಶನದಲ್ಲಿ ಗದ್ದಲವಾಯಿತು. ರೇಲ್ವೆ ಪೋಲೀಸರ ಮಧ್ಯಸ್ಥಿಯಿಂದ ನಾವು ಅಮೃತಸರಕ್ಕೆ ಹೋದೆವು

ಆ ಬಳಿಕ ಮುಮತಾಜಳನ್ನು ಎತ್ತಿಕೊಂಡು ಇಂದೂರಿಗೆ ಒಯ್ಯುವ ಮಸಲತ್ತು ನಡೆಯಿತು. ಒಂದು ಗುಂಪು ಕಟ್ಟಿತು. ಮಹಾರಾಜರ ಅಂಗರಕ್ಷಕನಾದ ಬೆಹರಿಲಾಲ ಅಹ್ಮದಸಾಹೇಬನೆಂಬವನು ಇದರಲ್ಲಿದ್ದನು. ಈತನು ಗುಪ್ತರೀತಿಯಿಂದ ಇಂದೂರಿಗೆ ಬರೆದಿದ್ದರೆ- ಮೂರು ಕೋಟು ಮೋರೆಯನ್ನು ವಿದ್ರೂಪ ಮಾಡಬೇಕೆಂದು ಗೊತ್ತಾಗಿತ್ತು.

ಈ ಮಸಲತ್ತು ಸಾಧ್ಯವಾಗಲಿಲ್ಲ. ಮುಮ ... ಕೋಟ್ಯಾಧೀಶನಾದ ಬಾವಲಾ ಸಾಹೇಬರ ... ಹಿಸಿ, ಅವರ ದಾಸಿಯಾದಳು. ಮತ್ತು ... ಪರಿಣಾಮವು ಕೊಲೆಯಲ್ಲಿ ಪರಿ

ಕೊಲೆಯ ಸುದ್ದಿಗಳು.

ಪೋಲೀಸರು ಭುವನೇಶ್ವರದಲ್ಲಿ ಒಬ್ಬ ಮಾರವಾಡಿಯ ಅಂಗಡಿಯನ್ನು ಜಪ್ತ ಮಾಡಿ, ಅವನ ಮಗನನ್ನು ದಸ್ತಗಿರ ಮಾಡಿದ್ದಾರೆ. ಈ ಅಂಗಡಿಯಲ್ಲಿಯೇ ಇಂದೂರಿನ ಒಬ್ಬ ದೊಡ್ಡ ಕಾಮದಾರನು ಕೊಲೆಯ ದಿವಸ ಇದ್ದು, ಕೊಲೆಯಾದ ಕೂಡಲೆ, ನಡೆದ ಸಂಗತಿಯನ್ನು ತಾರಿನಿಂದ ಇಂದೂರಿಗೆ ತಿಳಿಸಿದ್ದಾನೆ.

ಮುಮತಾಜಳ ಪರಿಯಿಂದ ಪೋಲೀಸರಿಗೆ ಸಹಾಯ ಮಾಡುತ್ತಿರುವಂಥ ಒಬ್ಬ ಗೃಹಸ್ಥರಿಗೆ ನೀನು ಸುಮ್ಮನೆ ಕೂಡು! ಇಲ್ಲವಾದರೆ ಬಾವಲಾನಂತೆ ನಿನ್ನನ್ನೂ ಕೊಂದು ಹಾಕುವೆವೆಂದು ಟೆಲಿಫೋನಿನಿಂದ ಹೆದರಿಸುತ್ತಿದ್ದಾರೆ.

ಹೋಳಕರ ಮಹಾರಾಜರ

ಕಾಮಪಾತಕವು.

— ೬ —

ಮುಮತಾಜ ಬೇಗಮಳ ಪೆಸೆಯಿಂದ ಸಧ್ಯದಲ್ಲಿ ಹೋಳಕರ ಮಹಾರಾಜರು ಖ್ಯಾತಿಗೆ ಬಂದಿದ್ದಾರೆ. ಇವರ ಕಾಮಪಾತಕವು ಇನ್ನೊಂದ ಕಥೆಯನ್ನು ವರ್ತಮಾನ ಪತ್ರಗಳು ಪ್ರಸಿದ್ಧ ಮಾಡಿವೆ. ಇದು ಮೊದಲು ಗೊತ್ತಿದ್ದ ಸಂಗತಿಯು. ಈಗ ಅದಕ್ಕೆ ಮಹತ್ವದ ಬಂದಿದೆ. ಮುಂಬಯಿಯ ರಾವಬಹಾದ್ದೂರ ಶಾಲಿಕೇಶರರೆಂಬೋರ್ವ ಗೃಹಸ್ಥರಿದ್ದಾರೆ. ಇವರ ಅಂಗವಸ್ತ್ರದಿಂದ ರೂಪಲಾವಣ್ಯವತಿಯಾದ ಇಂದಿರಾ ಎಂಬ ಮಗಳು ಹುಟ್ಟಿದಳು. ಈಕೆಯು ಪ್ರಾಯಕ್ಕೆ ಬಂದನಂತರ ಈಕೆಯಲ್ಲಿ ಮಹಾರಾಜರು ಮೋಹಿಸಿ, ಇವಳ ಕೂಡ ವಿವಾಹ ಮಾಡಿಕೊಂಡು, ಇವಳಿಗೆ ದ್ವಿತೀಯ ಪಟ್ಟ ಮಹಿಷಿಯ ಬಿರುದು ಕೊಟ್ಟರು. ಮಹಾರಾಜರು ರೂಪಾಜೀವಿಯರ ಕನ್ನಿಕೆಯನ್ನು ಕುಲನಂತೆಯಾಗಿ ಮಾಡಿದರೂ, ಉಭಯತರಲ್ಲಿ ಜಗಳ ಬಂತು. ಇಂದಿರಾಬಾಯಿಯು ಮುಂಬಯಿಗೆ ಬಂದು, ತಂದೆಯ ಮನೆಯಲ್ಲಿದ್ದುಕೊಂಡಳು ಹೋದ ವರ್ಷ ಉಭಯತರ ನಡುವೆ ಪುನಃ ಪ್ರೇಮೋದ್ಭವವಾಯಿತು. ಇಂದಿರಾಬಾಯಿಯು ಆಗಿನಿಂದ ಇಂದೂರಲ್ಲಿರುವಳು.

ಕಟಕಾ ಜಿಲ್ಹೆಯಲ್ಲಿ ಒಂದು ಗ್ರಾಮದಲ್ಲಿ ಒಬ್ಬನು ಕ್ಷೇತ್ರಿಕರ ಮನೆಗೆ ಬೆಂಕಿ ಹಚ್ಚಿದನು. ಜೀವಭಾತಿಯಿಂದ ಮನೆಯವರು ಹೊರಗೆ ಬಂದ ಕೂಡಲೆ ಎಂಟು ಜನರನ್ನು ಕೊಂದು, ಕಾಲಿಗೆ ಬುದ್ಧಿ ಹೇಳಿದನು. ಈತನನ್ನು ಪಣಿಯಮಬಾಡಿಯಲ್ಲಿ ಹಿಡಿದಿದ್ದಾರೆ.

ಕಿವಿ ಹಿಂಡುವದೂ ತಿಗದ ಮೇಲೆ

ಗುದಿಕೆ ಕೊಡುವದೂ ಅಪರಾಧವಲ್ಲ.

ತಂಜಾವರ ಸ್ಟೇಶನದಲ್ಲಿ ಪುಸ್ತಕ ಪತ್ರಗಳನ್ನು ಮಾರುತ್ತಿದ್ದ ಸ್ವಾಮಿನಾಥನ ಎಂಬುವ ಕಾರಕೂನನನ್ನು ಅಲ್ಲಿಯ ಡಾಕ್ಟರರಾದ ಮ್ಯಾಕಸೇನರೆಂಬವರು ಕಿವಿಹಿಡಿದು ಎಬ್ಬಿಸಿ, ತಿಗಕ್ಕೆ ಗುದಿಕೆ ಕೊಟ್ಟಿದ್ದು ಅಪರಾಧವಾಗುವದಿಲ್ಲೆಂದು ಪ್ರಾಂತ ಮ್ಯಾಜಿಸ್ಟ್ರೇಟರು ಫಿರ್ಯಾದಿಯನ್ನು ತೆಗೆದು ಹಾಕಿದ ಸಂಗತಿಯನ್ನು ಈ ಮೊದಲು ಬರೆದಿದ್ದೇವೆ. ಇದರ ಮೇಲೆ ಸ್ವಾಮಿನಾಥನು ಜಜ್ಜಕೋರ್ಟಿಗೆ ಅಪೀಲು ಮಾಡಿದನು. ಅಪೀಲಿನಲ್ಲಿಯೂ ಜಡ್ಜಸಾಹೇಬರು ಡಾಕ್ಟರರ ಪಕ್ಷವನ್ನೇ ಎತ್ತಿದರು. ಡಾಕ್ಟರರು ಕಿವಿಹಿಡಿದು ಎಬ್ಬಿಸಿದ್ದೂ ನಿಜ. ಗುದಿಕೆ ಕೊಟ್ಟಿದ್ದೂ ನಿಜ. ಆದರೆ ಇವನಿಗೆ ಯಾವ ಪ್ರಕಾರದ ಕೇಡು ಅಥವಾ ಅಪಮಾನವಾಗಬೇಕೆಂದು ಡಾಕ್ಟರರ ಮನಸ್ಸಿನಲ್ಲಿ ದುಷ್ಟ ಹೇತುವಿದ್ದಿಲ್ಲ. ಹೇತು ಸಿದ್ಧವಾದ ಹೊರ್ತು ಅಪರಾಧವಾಗುವದಿಲ್ಲೆಂದು ಜಡ್ಜರು ಮತಕೊಟ್ಟಿದ್ದಾರೆ. ಸ್ವಾಮಿನಾಥನು ನೇಟಿವ ರಾಕಾಯಸ್ಥನಾಗಿ ಡಾಕ್ಟರರು ಹಿಂದೂ ಆಗಿದ್ದರೆ- ಈ ನ್ಯಾಯದ ತೀರ್ಪು ಹೇಗಾಗುತ್ತಿತ್ತು?

ಮನೆಯ ಮಾರಾಟ

ಯಾವತ್ತು ಜನರಿಗೆ ಜಾಹೀರ ನೋಟೀಸಿನಿಂದ ತಿಳಿಸುವದೇನಂದ್ರೆ- ಹಾವೇರಿಪೇಟೆಯ ಸಾಲಿಯ ಹತ್ತರ ಇರುವ ನನ್ನ ಸ್ವಂತ ಮಾಲ್ಕಿಯ ಹೊಸಮನಿಯನ್ನು ಮ್ಯು. ನಂ. ೪೯೬೮ ಮಾರಾಟಕ್ಕೆ ಕೊಡುತ್ತೇನೆ. ಈ ಮನೆಯ ಮೇಲೆ ಸಾಲ ವಗೈರೆ ಏನೂ ಇಲ್ಲ. ಅವಶ್ಯ ಇದ್ದವರು ಸಮಕ್ಷಮ ನನಗೆ ಭೆಟ್ಟಿಯಾಗಿ ಕಿಮ್ಮತ್ತು ತಿಳಿದುಕೊಳ್ಳಬೇಕು.

ತಾ || ೧೭ - ೧೧ - ೨೮

ಗೋವಿಂದರಾವ ಜೋಯಿಸಿ, ಮದಿಹಾಳ

C/o ವಿಜಯ ಆಫೀಸ ಧಾರವಾಡ.

ಜಾಹೀರ ನೋಟೀಸು

ಯಾವತ್ತೂ ಜನರಿಗೆ ತಿಳಿಸುವದೇನಂದ್ರೆ ಧಾರವಾಡ ಶಹರ ಪೈಕಿ ದರ್ಗಾಗಲ್ಲಿಯಲ್ಲಿ ಇರುವ ರಾಮನಗೌಡರ ವಠಾರ ಪೈಕಿ ಸರಕಾರ ದಸ್ತೈಕ್ಕೆ ಹತ್ತಿ ಹಿಲ್ಲಾ ಜಾಗಾ ಮನೆಗಳನ್ನು ಆತ್ಮಾ ಸಂತವ ಜಾಪುರಾವ ಜೋಶಿ ವಗೈರೇರ ಸಾಲತೀರಿಸುವ ಗೋಸ್ಕರ ಖರೀದಿ ಕೊಡತಕ್ಕವರಿದ್ದೇವೆ. ತೆಗೆದುಕೊಳ್ಳತಕ್ಕವರು ಕೆಳಗಿನ ವಿಳಾಸಕ್ಕೆ ಒಂದು ಸಮಕ್ಷಮ ಭೆಟ್ಟಿಯಾಗಬೇಕು.

ವಿಳಾಸ

ಭೀಮನಗೌಡಾ ಫಕೀರಗೌಡಾ ಉಪ್ಪಾರ

ರಾಮನಗೌಡರ ವಠಾರ.

R.N.B 1443

ನಿತ್ಯ ಪತ್ರ — ಬೆಲೆ ೬ ಪೈ

ಸಂಪಾದಕರು— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ಪುಸ್ತಕ ೬ ಧಾರವಾಡ ಗುರುವಾರ ತಾರೀಖು ೩೦ನೇ ಜಾನೇವಾರಿ ೧೯೨೪ (ಸಂಖ್ಯೆ ೮)

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.
—o—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಇಟ್ಟುಕೊಳ್ಳಲಾಗುವದು ದರವನ್ನು ವಿಚಾರಿಸಿ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಸುಕ್ಷೇಮ ಇಟ್ಟುಕೊಳ್ಳುವ ಬಗ್ಗೆ ಯು ದರವು ನೂರಕ್ಕೆ ತಿಂಗಳಿಗೆ ಎಷ್ಟು ರದು ಇಳಿಯುತ್ತದೆ

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ.

ಜಾಹೀರ ನೋಟೀಸು.

ಕೆನಗಿ ಸಹ ಮಾಡುವ ವೆಂಕಣಭಟ್ಟ ಲಕ್ಷ್ಮಣಭಟ್ಟ ಸವದ ಜೋಯಿಸ ಇವರು [illegible] ಮೂಲಕವಾಗಿ ಯಾವತ್ತು ಜನರಿಗೆ ತಿಳಿಯಪಡಿಸುವದೇನಂದರೆ—

ತಿರಕಂಬಾಯಿ ಎಂಬುವಳಿಯು ನನ್ನ ಲಗ್ನದ ಹೆಂಡತಿ ಇದ್ದು ಆಕೆಗೆ ಜೀವನೋಪಾಯಕ್ಕೆ ಒಪ್ಪಿದ್ದು ಆಕೆ ಬುದ್ಧಿ ಭ್ರಮಣವಾಗಿ ಆಕೆಗ ತನ್ನ ಹಿತವು ತಿಳಿಯುವದಿಲ್ಲ. ಆಕೆಯು ನನ್ನ ಸಂಗಡ ಹಂಪೇ ಮಾಡಿ ಅಲ್ಲೇ ಹುಬ್ಬಳ್ಳಿಯಲ್ಲಿ ನನ್ನ ಮನಿ ಬಿಟ್ಟು ಹೋಗಿರುತ್ತಾಳೆ. ಆಕೆಗೆ ಆಕೆ ತಂದೀ ಮಾವನವರಿಂದ ಆಂತಃ ಬಹಳ ಜುಲುಮುಗಳು ಬಂದಿರುತ್ತವೆ. ಕೆಲವು ಜನರು ಆಕೆಗೆ ಥಳತಾಪ ಕೊಟ್ಟು ಆಕೆಯ ಕಡಿಂದ ಸವಲೀ ಜಮೀನುಗಳನ್ನು ವಕ್ತ್ತ ಆಗರ ಖರೀದಿ ಬರಿಸಿಕೊಳ್ಳಬೇಕೆಂದು ಮಾಡಿರುತ್ತಾರೆಂದು ನನಗೆ ತಿಳಿದು ಬಂದಿರುತ್ತದೆ. ಆದ್ದರಿಂದ ಯಾರೂ ಆಕೆ ಕಡಿಂದ ವಕ್ತ್ತ ಖರೀದಿ ವಗೈರೆ ಏನೂ ಬರಿಸಿಕೊಳ್ಳಬಾರದು ಆಕೆಗೆ ನನ್ನ ಸಮ್ಮತಿ ಶಿವಾಯ ಯಾವ ರೀತಿಯಿಂದ ಲೂ ವಿಲ್ಲೇವಾಟ ಮಾಡಲಿಕ್ಕೆ ಆಕೆಗೆ ಅಧಿಕಾರವಿರುವದಿಲ್ಲ ತಿಳಿಯುವದು.

ತಾ| ೨೩-೧೨-೧೯೨೪ ನೇ ಇಸ್ವಿ

ವೆಂಕಣಭಟ್ಟ ಲಕ್ಷ್ಮಣಭಟ್ಟ [illegible] ಜೋಶಿ

ತಾಸಿಗೆ ೪೦೦ ಪೌಂಡು ಕಬ್ಬನ್ನು ಹಿಂಡಿ ಚಲ್ಲುವ

ಕಿರ್ಲೋಸ್ಕರ ಕಿಸಾನಗಾಣವು.

ಇದನ್ನು [illegible] ಒಬ್ಬ [illegible] ನಡೆಯುವ ಜಾಗಗಳು ಎರಡ ರಿಂದ ಮಾಡಲ್ಪಟ್ಟಿದ್ದರಿಂದ, ಬೇಗ [illegible]. ಕಣೆಯಲ್ಲಿಯು [illegible] [illegible] ದ್ದದರಿಂದ ಗಟ್ಟಿಯಾಗಿ ಹಿಡಕೊಂಡು [illegible] ಹಾಗೆ ಉಳಿಯುವಂತೆ ಹಿಂಡಿ [illegible] ತ್ತದೆ ಇದಲ್ಲದೆ ನಮ್ಮಲ್ಲಿ

ಸಣ್ಣ ದೊಡ್ಡ ರಂಟೆಗಳು, ಕಪ್ಪಲಿ ಗಡಗಡಿಗಳು, ಮೇವು ಕೊರೆಯುವ ಯಂತ್ರಗಳು [illegible] ಸಾಮಾನುಗಳು [illegible]. ಹೆಚ್ಚಿನ ಸಂಗತಿಗಳಿಗೆ [illegible] ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ } ಕಿರ್ಲೋಸ್ಕರವಾಡಿ-
[illegible]

ಆರ್. ಎಮ್. ಜಾನ್ ಎಂಡ ಸನ್ಸ, ಹುಬ್ಬಳ್ಳಿ.

[illegible] ಕಾರ್ಬೋನಿಕ ಅಸಿಡ್ಡ ಗ್ಯಾಸ, ಮ್ಯಾನ್ಯುಫ್ಯಾಕ್ಚರರ್ ಆಫ್ ಏರೇಟೆಡ ವಾಟರ್.

ತಾವು ಆರ್ಡರ ಬೇಗ ಕಳಿಸಿರಿ.

ನಮ್ಮಲ್ಲಿ ಸಿಗುವ ಸಾಮಾನುಗಳ ವಿವರ.



ಸೋಡಾವಾಟರ ಮಶಿನು

ಕಾರ್ಬೋನಿಕ ಗ್ಯಾಸ ಸಿಲಿಂಡರುಗಳು ಇಂಗ್ಲೀಷ ಮತ್ತು ಜರ್ಮನ ಪೇಟಂಟ, ಕಾಡ್ಡ, ಎಮ್. ಟಿ ಸೋಡಾ ವಾಟರ ಬಾಟಲಗಳು, ೫೫೦ ನಂ. ಸಾಬರೀನ ಡಪ್ಪಿ ೧ ಪೌಂಡನವು. ಸೋಡಾವಾಟರ್ ಮಶಿನುಗಳು ಮತ್ತು ಎಲ್ಲಾ ತರದ ತಂಪಿನ ಬಾಟಲಿಗಳು ಎಸನ್ಸಗಳು, ಅಮೆರಿಕನ್ ಆಯಿಸ್ಕ್ರೀಮ ಸೋಡಾ, ಬನಾನಾ, ಕೋಲಾ [illegible], ಲೆಮನ್ ನಂ. ೧ ಲೆಮನ್ ಜ್ಯುಯಿಸ್ ಸೋಡಾ ನಂ. ೧ ಮೆಂಗೋ, ಆರೇಂಜ, ಫಾಯಿನಾಪಲ್, ಪಿಸ್ತಮಿಲಕ, ಕ್ರೀಮಿನ ಟಾನಿಕ, ರಾಜಬರಿ ನಂ. ೧ ಕೋಜ ಸಂ. [illegible] ಜಿಂಜರ್ ಬೀರ ನಂ ೧, ರಬ್ಬರ್ ರಿಂಗ್ಸ, ಬೆಸ್, ಇತರ ಮಶಿನರಿ ಪಾರ್ಟುಗಳು ನಮ್ಮಲ್ಲಿ ಸಿಗ[illegible]. ಮತ್ತು ಶುದ್ಧ ನೀಲಗಿರಿ ಎಣ್ಣೆಯು ಎಲ್ಲಾ ತರದ ಬಾಟಲ್ಲಗಳು ಸಿಗುತ್ತವೆ. ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಕೊಡುತ್ತೇನೆ. ನಮ್ಮಲ್ಲಿ ಕಪ್ಪಾಗಾದ ಮಿಲಿಟರಿ ಲಿಂಗಲ ಕಾಟ್ಸಗಳು ಸೋವಿ ದರದಿಂದ ಮಾರಲಿಕ್ಕೆ ಸಿಗುತ್ತವೆ.

ಅಡ್ರೆಸ್— R. M. John & Sons.
Mission Compound HUBLI.

FOR SALE FOR SALE FOR SALE

A Rare opportunity for persons intending to start Motor Service.

ಮೋಟರ ಸರ್ವ್ಹೀಸ ಇಡುವವರಿಗೆ ಅಪೂರ್ವ ಸಂಧಿಯು

ಮೋಟರ ಬಿಲ್ಡಿಂಗದಲ್ಲಿ ಸಂಪೂರ್ಣ ಅನುಭವ ಇರುವವರ ದೇಖರೇಖಿಯಲ್ಲಿ ಮುಂಬಯಿ ಸರ್ವ್ಹೀಸಿನ ಬಗ್ಗೆ ಅತಿ ಮಜಬೂತ, ತಯಾರ ಮಾಡಿಸಿದ ೧೯೨೪ ರ ಮಾಡೆಲ್ಲ, ಗೇರ ಫಿಟಿಂಗ, ೧೪ ರಿಂದ ೧೮ ಪ್ಯಾಸಿಂಜರ ಕೂಡ್ರುವ ಗಾದಿ ಸಹಿತ ಸೀಟುಗಳು ಫಸ್ಟ್ ಕ್ಲಾಸ, ಸೆಕಂಡ ಕ್ಲಾಸ, ವ ಗೋಡಾವುನ ಹೊಂಗಸರ ದಸೆಯಿಂದಾ ಸಂಪೂರ್ಣ ವ್ಯವಸ್ಥೆಯು ಹೊರಗಡೆ ಹಾಗೂ ಗಾಡಿಯು ಒಳಗೂ ಸಂಪೂರ್ಣ ಇಲೆಕ್ಟ್ರಿಕ್ ಲಾಯಿಟ ಫಿಟಿಂಗ್ಸ ಸಹಿತ ಇದ್ದ (೧) ಒಂದು ಫೋರ್ಡ ಲಾರಿ ಬಹಳ ಅಲ್ಪ ಉಪಯೋಗಿಸಿದ್ದು ಮತ್ತು ಪ್ಯಾಸಿಂಜರ ಇಲ್ಲದ ವೇಳೆಗೆ ಸಾಮಾನು ಸಹ ಹೇರಲಿಕ್ಕೆ ಅನುಕೂಲ ಫೋಲ್ಡಿಂಗ ಸೀಟ ಅರೇಂಜಮೆಂಟ ಇದ್ದ ಸಂಪೂರ್ಣ ಚಾಲೂ ಸ್ಥಿತಿಯಲ್ಲಿ ಇದ್ದ ಮೋಟಾರ ಗಾಡಿಯು ಮಾರಲಿಕ್ಕೆ ತಕ್ಕೊಳ್ಳುವವರು ದಯ ಮಾಡಿ ಕೆಳಗೆ ಸಹಿ ಮಾಡುವವರಿಗೆ ಬರೆಯಬೇಕು ಬೇಗನೆ ಭೆಟ್ಟಿ ಆಗಬೇಕು.

ಫ್ರಾಮರೋಜ ಖರಶೇಟಜಿ,	Framroj Kharshetji
ವಾಯಿನ್ ಅ್ಯಂಡ ಜನರಲ್ ಮರ್ಚಂಟ,	Wine and General Marchant
ಧಾರವಾಡ	Dharwar.

ಪೂರಾ ೧೬ ಆಣೆ ಗುಣ ಯಾವಾಗ ಬರುತ್ತದೆ?

ಡಾಕ್ಟರರ ಪ್ರಿಸ್ಕ್ರಿಪ್‌ಶನದಂತೆ ಪಥಾಪಿ ಅತ್ಯಂತ ಕಾಳಜಿ ಮತ್ತು ದಕ್ಷತೆಯಿಂದ ಔಷಧವನ್ನು ತಯಾರ ಮಾಡಿಕೊಟ್ಟಾಗ ಮಾತ್ರ! ಡಾಕ್ಟರರೂ ಜನರೂ ಈ ಕೆಲಸದಲ್ಲಿ ಮೆಸರ್ಸ ಆನಂದಾಚಾರ್ಯ ಮೆಡಿಕಲ ಸ್ಟೋರ ವನ್ನು ಬಹಳವಾಗಿ ಹೊಗಳುವ ಕಾರಣದ ಮುಖ್ಯ ಇಂಗಿತವು ಇದರೂ ಇದೇ ಇರುತ್ತದೆ.

ಮೊಮೆಂಟ ಕ್ಯುಯರ ಅಂದರೆ– ಒಂದೇ ಕ್ಷಣದಲ್ಲಿ ಗುಣ.

ತಲೆ ಶೂಲಿಯ ಮೇಲೆ ನಮ್ಮ ಔಷಧವನ್ನು ಒಮ್ಮೆ ಪರೀಕ್ಷೆ ಮಾಡಿ ನೋಡಿರಿ. ಚೀಟಿ ಎರಡೇ

ವಿಳಾಸ— ದಿ ಆನಂದಾಚಾರ್ಯ ಮೆಡಿಕಲ ಸ್ಟೋರ್ಸ್, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ ಸ್ಟೇಶನ ರೋಡ ಹುಬ್ಬಳ್ಳಿ.

ನೋಟೀಸು

ರಾ|| ರಾ|| ಬಸಪ್ಪಾ ಬಿಂನ ಶಿವಲಿಂಗಪ್ಪಾ ಯಾದವಾಡ ಸಾ|| ಶಿರೂರ ತಾ|| ನವಲಗುಂದ ಇವರಿಗೆ—

ಕೆಳಗೆ ಸಹಿ ಮಾಡುವವನ ಕಡಿಂದಾ ನಿಮಗೆ ನೋಟೀಸ ಕೊಡುವದೇನಂದ್ರೆ, ನಂದು ದೊಡ್ಡಪ್ಪನಾದ ಬಸಲಿಂಗಪ್ಪಾ ಬಾಳಪ್ಪಾ ಯಾದವಾಡದವರು ಅಂಬುವವನೂ ವ ನಂದು ತಂದೆಯೂ ಏಕತ್ರ ಮನೆಯಲ್ಲಿ ಇದ್ದು ಇವತ್ತಿಗೂ ಅದರಂತೆ ನಾನು ವ ನಂದು ದೊಡ್ಡಪ್ಪನು ಕೂಡೇ ಇರುತ್ತೇವೆ. ಆದರೆ ನಂದು ದೊಡ್ಡಪ್ಪನಿಗೆ ತೀಕ ಆಗಿ ಅಜಮಾಸ್ಮಾ ಮೂರು ತಿಂಗಳಾಯಿತ್ತು ಆದರೆ ಈಗ ಒಂದು ತಿಂಗಳಾಯಿತ ಬೇಬಿಬರಾಗಿ ಮಲಗಿರುತ್ತಾನೆ. ಈಗ ಸುಗ್ಗೀ ದಿವಸವಿದ್ದು ನಾನು ಹೊಲಕ್ಕೆ ಹೋಗುತ್ತಿದ್ದೆನು. ಈಗ ಅಜಮಾಸ ೪ ದಿವಸಗಳ ಹಿಂದೆ ನಾನು ಹೊಲಕ್ಕೆ ಹೋದ ವೇಳ್ಯದಲ್ಲಿ ಮತ್ತು ನಂದು ದೊಡ್ಡವ್ವಾ ಪನ್ನೆಂಗೀರು ಹೊರಗೆ ಹೋದ ವೇಳ್ಯದಲ್ಲಿ ನಂದು ದೊಡ್ಡಪ್ಪನ ಹೆಬ್ಬರಳಿನ ಗುರ್ತವನ್ನು ತೆಗೆದುಕೊಂಡು ಹೋಗಿರುತ್ತೀರಿ ಅಂತಾ ನಮಗೆ ತಿಳಿಯುತ್ತದೆ. ಮತ್ತಾ ನಮ್ಮ ದೊಡ್ಡಪ್ಪಗೆ ಗಂಟೆ ಹಾಕಲಿಕ್ಕೆ ಹತ್ತಿ ಎರಡು ತಿಂಗಳವಾಯ್ತು ಈಗ ಒಂದು ತಿಂಗಳಿಂದಾ ಅಗದಿ ಬೇಖಬರ ಆಗಿ ಬಿದ್ದಿರುತ್ತಾನೆ. ಇಂಥಾ ವೇಳ್ಯದಲ್ಲಿ ನೀನು ಯಾವ ಕಾಗದ ಮಾಡಬೇಕು ಅಂತಾ ನಂದ ದೊಡ್ಡಪ್ಪನ ಹೆಬ್ಬರಳಿನ ಗುರ್ತ ತಗೊಂಡೀರಿ ಅಂಬೋದು ತಿಳಿವಲ್ಲದು ನೀನು ಯಾವದೇ ತರದ ಕಾಗದ ಮಾಡಿದರೂ ಅದು ರದ್ದು ಇರುತ್ತದೆ. ಅಂತಾ ಯಾವತ್ತರೂ ತಿಳಿತಕ್ಕದ್ದು ನಾನು ವ ನಮ್ಮ ದೊಡ್ಡಪ್ಪನು ಅವಿಭಕ್ತ ಘರಾಣೇದವರು ಇರೋದರಿಂದಾ ಮತ್ತು ಅವರಿಗೆ ಬೇಖಬರ ಇದ್ದ ವೇಳ್ಯದಲ್ಲಿ ಅವರ ಹೆಬ್ಬರಳಿನ ಗುರ್ತ ತಗೊಂಡಿದ್ದರ ಮೇಲಿಂದ ಆ ಕಾಗದವು ರದ್ದು ಇರುತ್ತದೆ. ಅಂತಾ ತಿಳಿತಕ್ಕದ್ದು. ತಿಳಿಯೋದು ತಾ|| ೨೦-೧-೨೫ ನೇ ಇಸ್ವಿ

ಸಹಿ ಚನಬಸಪ್ಪಾ ಬಿನ್ನ ಗುರಪ್ಪಾ ಯಾದವಾಡ

ನೋಟೀಸಿನ ಉತ್ತರಾ

ಸಣ್ಣಪ್ಪಾ ತಂದಿ ಮುಂಗೀಬಾ ಗೊ ಸಾ|| ಹುಬ್ಬಳ್ಳಿ ಇವನಿಗೆ—

ಕೆಳಗೆ ಹೆಬ್ಬೆಟ್ಟಿನ ಗುರ್ತಾ ಮಾಡುವ ಜಿ. ಬಾಯಿ ಕೋಂ ಸಣ್ಣಪ್ಪಾ ಗೊಂಧಳಿ ಸಾಕೀನ ಧಾರವಾಡ ನಾನು ಈ ಜಾಹೀರ ನೋಟೀಸಿನಿಂದ ತಿಳಿಸುವದೇನಂದರೆ– ನಾನು ನಿನಗೆ ದಾರವಾಡ ವಿಜಯ ಪತ್ರದಲ್ಲಿ ಕೊಟ್ಟ ನೋಟೀಸನ್ನು ನೀನು ಸ್ವೀಕಾರ ಮಾಡಿದಿ. ಆದರೆ ಜಾಬ ಮಾತ್ರ ಇನ್ನೂ ತೋರಲಿಲ್ಲ. ಕಾರಣ ಈ ಜಾಹೀರ ನೋಟೀಸು ಕೊಡುವ ಭಾಗಬಿತ್ತು. ಈ ನೋಟೀಸು ಜಾಹೀರಾದ ೧೫ ದಿವಸಗಳಲ್ಲಿ ನೀನು ಬಂದು ನಾನು ಮೊದಲು ಕೊಟ್ಟ ನೋಟೀಸಿನಲ್ಲಿ ಬರೆದ ಯಾವತ್ತು ಶರ್ತಗಳನ್ನು ಪೂರೈಸದಿದ್ದರೆ ನಾನು ಎರಡನೆಯವನನ್ನು ಉಚಿತ ಮಾಡಿಕೊಳ್ಳುವೆನು. ಈ ಸಂಬಂಧ ನಿನ್ನ ಹಕ್ಕು ನನ್ನ ಮೇಲೆ ಮತ್ತು ನನ್ನ ಉಚಿತ ಗಂಡನ ಮೇಲೆ ವಿಲಕೂಲ ನಡೆಯಲಾರದು. ಹೀಗೆಂದ ನೀನು ಹಾಗು ನನ್ನ ಉಚಿತಯ ಗಂಡನಿಗೆ ವಿಲಕೂಲ ತ್ರಾಸ ನಾಗಬಾರದೆಂದು ದೈವದವರ ಹೇಳಿಕೆಯಿಂದ ಈ ಜಾಹೀರ ನೋಟೀಸು ಕೊಟ್ಟಿರುತ್ತೇನೆ. ತಿಳಿಯುವದು ತಾ|| ೨೧-೧-೧೯೨೫ ನೇ ಇಸ್ವಿ–

ಈ ಎಡಗೈ ಹೆಬ್ಬೆಟ್ಟಿನ ಗುರ್ತಾ ಜೀವುಬಾಯಿ ಕೋಂ ಸಣ್ಣಪ್ಪಾ ಗೋಂಧಳಿ ಈಕೆ ಕೈದು ಇರುತ್ತದೆ.

ದಿ. ಅಂಕಲಗಿ ಬ್ಯಾಂಕ ಲಿಮಿಟೇಡ್ ಧಾರವಾಡ.

—೦—

೧೯೧೩ ಇಸ್ವಿಯು

ಕಂಪನಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ. ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ಚಾಲೂ ಖಾತೆ, ಠೇವು, ಸೇವಿಂಗ್ಸದ ಡಿಪಾಜಿಟ, ಸಾಲ, ಪತ್ತಿ, ಹುಂಡಿ, ಮುಂತಾದ ಯಾವತ್ತು ವ್ಯವಹಾರಗಳು ನಡಿಯುವವು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡುವವರಿಂದ ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ ರಿಂದ ೧೦-೩೦. ಸಾಯಂಕಾಲ ೩ ರಿಂದ ೬ ರವರೆಗೆ ನಡೆಯುವದು.

K. B. Ank
ಮ್ಯಾನೆಜಿಂಗ ಡಾ

ಈ ಪತ್ರವನ್ನು ಅಣ್ಣಾಚಾರ್ಯ ಹೊಸಕೇರಿ ಇವರು ಧಾರವಾಡ ವೃತ್ತ ವಾರ್ತಾಪತ್ರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧಿಸಿದರು.

ವಿಜಯ.

ಧಾರವಾಡ ತಾ- ೨೨-೧-೨೫ ನೇ ಇಸ್ವಿ

ಗುಡಿ ಮತ್ತು ಮಠಗಳ ಪ್ರಭುತ್ವ- ಸ್ವಾಮಿತ್ವದ ಹರಣ.

—o—

ಹೊಸ ಕೌನ್ಸಿಲವಾದ ಕೂಡಲೆ- ಅಸಹಕಾರದ ಮೂಲಕ ದೇಶ ಹಿತೈಷಿಗಳು ಕೌನ್ಸಿಲಕ್ಕೆ ಬಹಿಷ್ಕಾರ ಹಾಕಿದ್ದು, ಬ್ರಾಹ್ಮಣೇತರರಿಗೆ ಹಾಲೋಗರ ಉಣಿಸಿದಂತಾಯಿತು. ಬ್ರಾಹ್ಮಣರ ಅಧಃಪಾತವಾಗಬೇಕು; ಬ್ರಾಹ್ಮಣೇತರರಿಗೇ ಸರಕಾರದ ಎಲ್ಲ ಕೆಲಸಗಳು ದೊರೆಯಬೇಕು ಎಂಬುದಾಗಿ ಇವರ ಎರಡು ಬೀಜ ಮಂತ್ರಗಳಾಗಿದ್ದವು. ಆದರೆ ಇವರ ಈ ಮಂತ್ರಗಳು ಒಟ್ಟಿನಿಂದ ಜೀವನ ಮಂತ್ರ ಬರೆದಿದ್ದರೂ, ಹಾವಿನ ಗುದ್ದಿನಲ್ಲಿ ಕೈ ಹಾಕಿದಂತಾಗಿರುತ್ತದೆ

ಬ್ರಾಹ್ಮಣೇತರ ಮಂತ್ರಿಗಳ ಕಟಾಕ್ಷವು ಗುಡಿ ಮತ್ತು ಮಠಗಳ ಮೇಲೆ ವಿಶೇಷವಾಯಿತು. ಮಠಾಧಿಕಾರಿಗಳು ಬ್ರಾಹ್ಮಣರು; ದೇವರ ಅರ್ಚಕರು ಎಲ್ಲಿ ನೋಡಿದಲ್ಲಿ ಬ್ರಾಹ್ಮಣರು; ಇವರನ್ನು ಬೊಗ್ಗು ಬಡಿಯಬೇಕೆಂದು ಯುಕ್ತಿ ತೆಗೆದರು. ದೇವಾದಾಯ, ಧರ್ಮಾದಾಯಗಳ ದ್ರವ್ಯದ ವಿನಿಯೋಗವು ಸರಿಯಾಗಿ ಆಗುವದಿಲ್ಲೆಂಬ ಕೆಲವೆಡೆಯಲ್ಲಿ ಬೊಬ್ಬಾಟವಾಯಿತು. ಸರಕಾರದವರು ಪಂಚರನ್ನು ನೇಮಿಸಿ, ಇವುಗಳ ದುರ್ವ್ಯವಸ್ಥೆಗಳನ್ನು ಸರಿ ಪಡಿಸಿದರು. ಇಷ್ಟರಿಂದ ಬ್ರಾಹ್ಮಣೇತರ ಮಂತ್ರಿಗಳ ಸಮಾಧಾನವಾಗಲಿಲ್ಲ. ಇವರು ಅಧಿಕಾರ ಪದಾರೂಢರಾದ ಕೂಡಲೆ, ಇವರನ್ನು ಪತ್ರಿತ್ತುವ ವಿಚಾರದಿಂದ ಒಂದು ಕಾಯದೆ ತಂದರು. ಬಹುಮತದ ಬಲದಿಂದ ಅದು ಪಾಸಾಯಿತು.

ಈ ಕಾಯದೆಯು ವಿರುದ್ಧ ಮದ್ರಾಸ ಇಲಾಖೆಯ ತುಂಬ ದೊಡ್ಡ ... ಎದ್ದಿತು. ಲಾರ್ಡ ರೀಡಿಂಗ ಸಾಹೇಬರು ಇದಕ್ಕೆ ಸಮ್ಮತಿ ಕೊಡಬಾರದೆಂದು ಸಿಮಲಾಕ್ಕೆ ತನಕ ಒಂದು ಡೆಪ್ಯುಟೇಶನ ಹೋಯಿತು. ಆಂಗ್ಲ ಸಾಹೇಬರ ಬಂಗಾಲದಲ್ಲಿ ಇದರ ಧವತಿ ಸಭೆಯಾಗಿ ಕೆಲವು ಕಲಮುಗಳ ದುರಸ್ತಿಯಾಗಬೇಕೆಂದು ಈ ಕಾಯದೆಯು ಮರಳಿ ಮದ್ರಾಸಕ್ಕೆ ಬಂತು. ಆಗ ಮೊದಲಿನ ಕೌನ್ಸಿಲದ ಅವಧಿ ಸಮಾಪ್ತಿಯಾಗಿ, ಎರಡನೇ ಕೌನ್ಸಿಲ ಕೂಡಿತು. ಅದರಲ್ಲಿ ಲೋಕಪಕ್ಷದವರು ಕೂಡಿ ಮತ್ತೆಗೆ ವಿಚಾರಮಾಡಿದರು. ಆದರೆ ಈ ಸಾರೆ ವಿರುದ್ಧ ಬಹುಮತವಾಗಿತ್ತು. ಸರಕಾರ ಮೊದಲನೆ ಮಂತ್ರಿಗಳಿಗೆ ಅನುಕೂಲವಾದ್ದರಿಂದ ಬಿಲ್ಲು ಪಾಸಾಯಿತು ಆದರೂ ಇದರಲ್ಲಿ ಗುಪ್ತದಂಥ ದೋಷಗಳುಳಿದವು. ಇವನ್ನು ತಿದ್ದಿ ಕೌನ್ಸಿಲದಲ್ಲಿ ಹೊಸ ಬಿಲ್ಲನ್ನು ತರಬೇಕೆಂದು ಹೇಳಿ ಲಾರ್ಡರೀಡಿಂಗ ಸಾಹೇಬರು ಇದಕ್ಕೆ ಮಂಜೂರಿ ಕೊಟ್ಟಿದ್ದಾರೆ.

ಈ ಬಿಲ್ಲನ್ನು ಪೂರಾ ರದ್ದು ಮಾಡಬೇಕೆಂದು ಶ್ರೀ. ಸತ್ಯಮೂರ್ತಿಯವರು ಹಿಂದೂ ಜನರ ಪರಿಯಿಂದ ಒಂದು ಹೊಸ ಬಿಲ್ಲನ್ನು ಕಳಿಸಿದ್ದಾರೆ. ಇದು ಮಂತ್ರಿಗಳಿಗೆ ಒಪ್ಪಿಸಲ್ಪಟ್ಟ ಖಾತೆಗೆ ಸೇರಿದ್ದರಿಂದ ಮೊದಲು- ಗವ್ಹರ್ನರ ಅಥವಾ ಗವ್ಹರ್ನರ ಜನರಲ ಇನ ಕೌನ್ಸಿಲ ಇವರ ಮಂಜೂರಿಯ ಅವಶ್ಯಕತೆಯು ಇರುವದಿಲ್ಲ. ೧೫ ದಿವಸಗಳ ನೋಟೀಸನ್ನು ಮುಂದಾಗಿ ಕೊಟ್ಟಾಯಿತು. ಶ್ರೀ. ಸತ್ಯಮೂರ್ತಿಯವರು ಈ ಪ್ರಕಾರ ನೋಟೀಸು ಕೊಟ್ಟು ಅದರ ಪ್ರತಿಯನ್ನು ಸರಕಾರಕ್ಕೆ ಕಳಿಸಿದ್ದಾರೆ. ಸರಕಾರದವರು ಇದನ್ನು ಅಭಿಪ್ರಾಯಕ್ಕಾಗಿ ಬ್ಯಾರೆಬ್ಯಾರೆ ಜನರುಗಳ ಕಡೆಗೆ ಕಳಿಸಿದಂತೆ ತಿಳಿಯುತ್ತದೆ. ಈ ಬಿಲ್ಲಿನ ವಿರುದ್ಧವಾಗಿ ಪಾನಗಲ್ಲಿನ ರಾಜರು ತಮ್ಮ ಬಿಲ್ಲು ತರಕಕ್ಕವರಿದ್ದಾರೆ.

ಸರಕಾರದವರು ಕಾಯದೆ ಮಾಡುವದಕ್ಕಾಗಿ ಬಿಲ್ಲುಗಳನ್ನು ತರುವರು. ಅವು ಧರ್ಮಾದಾಯ ದೇವದಾಯ ಬಿಲ್ಲಿನಂತೆ ಕುವಿಚಾರ ಮತ್ತು ಅರ್ಥಹೀನವಾದಂಥವುಗಳಾಗಿರಲಿಲ್ಲ. ಹಿಮಾಲಯದಿಂದ ರಾಮೇಶ್ವರದ ತನಕ ಹುಡುಕುತ್ತಾ ಬರುವದಿಲ್ಲ. ಇಂದ್ರಜಿತುವಿನ ಜನನದಂತೆ ಇದರ ಜನನವಾದ್ದರಿಂದ ಅಧೋಗತಿಯೇ ಇದರ ಹಣೆಯಲ್ಲಿ ಬರೆದಿಟ್ಟಿರುತ್ತದೆಂದು ದುಶ್ಚಿಹ್ನಗಳಾಗಿರುತ್ತವೆ.

ಮಂತ್ರಿಗಳು ಮಾಡಿದ ಕಾಯದೆಯಲ್ಲಿ ದೇವರ ತ್ರಿಕಾಲ ಪೂಜೆಗೆ ಸಹ ಅಡಕಲವಿರುತ್ತದೆ. ನೈವೇದ್ಯಕ್ಕಾಗಿ ಅಕ್ಕಿಯ ಕಾಳುಗಳನ್ನು ಎಣಿಸಿ ಹಾಕಬೇಕೆಂಬ ಕೃಪಣತನವಿರುವದು. ದಾನ, ಧರ್ಮ, ದೀಪ ಧೂಪ ಮುಂತಾದವುಗಳಿಗೆ ಸಹ ನಿರ್ಬಂಧನೆಯುಂಟು. ದೇವಸ್ಥಾನದ ಪಂಚರಾಗಲಿ, ಮಠಗಳ ಯತಿಗಳಾಗಲಿ ಕಾಯದೆಯಿಂದ ಕಟ್ಟಿ ಹಾಕಲ್ಪಡುವರು. ಇವುಗಳ ಮೇಲ್ವಿಚಾರಣೆ ಮಾಡುವದಕ್ಕೆ ಸರಕಾರದವರು ಒಬ್ಬ ಅಧಿಕಾರಿಯನ್ನು ನೇಮಿಸು ... ಆತನು ಮುಸಲಮಾನ ಕ್ರಿಶ್ಚನ, ಪಾರ್ಶಿ ಮುಂತಾದ ಧರ್ಮದವನೂ ಆಗಬಹುದು. ಮಂತ್ರಿಗಳು ಹಿಂದೂ ಜನರ ಗುಡಿಗುಂಡಾರಗಳ ವ್ಯವಸ್ಥೆಗಾಗಿ ಕರ್ತವ್ಯದಕ್ಷತೆಯನ್ನು ತೋರಿಸಲು ಧೈರ್ಯ ಮಾಡಿದಂತೆ, ಮುಸಲಮಾನರ ಮಸೀದೆಗಳ ವ್ಯವಸ್ಥೆಗಾಗಿ ಎದೆಗಾರಿಕೆಯನ್ನು ತೋರಿಸಿಲ್ಲೆಂಬದು ಧ್ಯಾನದಲ್ಲಿಡತಕ್ಕ ಸಂಗತಿಯು. ಗುಡಿ ಮತ್ತು ಉತ್ಪನ್ನದಿಂದ ಸೂರಕ್ಕೆ ಸೂರೆಯಂತೆ ಮೇನೇಜರ ಹಾಗು ಅವರ ಖಾತೆಯ ಪೆಸ್ತ ವಾರ್ಷಿಕ ಧಂಡು ಕೊಡತಕ್ಕದ್ದು. ಇದಂತೆ ಗ್ಗಕೊಟ್ಟು ಕೈ ಕಟ್ಟಿಸಿಕೊಳ್ಳುವಂಥ ಕೃತಿ. ಇಂಥ ದುಷ್ಟ ಬಿಲ್ಲು ರದ್ದಾಗಬೇಕೆಂದು ಪ್ರಯತ್ನಪಡುವದು ಪ್ರತಿಯೊಬ್ಬ ಹಿಂದುವಿನ ಕರ್ತವ್ಯಕರ್ಮವಾಗಿದೆ. ಈ ಪ್ರಕಾರದ ಚಳವಳಿಯನ್ನು ಹಿಂದೂಸ್ಥಾನದಲ್ಲಿ ಮಾತ್ರವಲ್ಲ, ಇಂಗ್ಲಂಡದಲ್ಲಿಯೂ ಮಾಡುವಂತೆ ಮದ್ರಾಸ ಇಲಾಖೆಯಲ್ಲಿ ಕೊಲಂಗಡದ ಅರಸರ ಅಧ್ಯಕ್ಷತೆಯಲ್ಲಿ ಒಂದು ಸಂಸ್ಥೆಯು ಏರ್ಪಡಿಸಲ್ಪಟ್ಟಿದೆ. ಇದಕ್ಕೆ ಹಿಂದೂ ಧರ್ಮಾದಾಯ ದೇವಾದಾಯಗಳ ಸಂರಕ್ಷಕ ಸಂಘವೆಂಬ ಹೆಸರಿಟ್ಟಿದ್ದಾರೆ.

ಮುಮತಾಜ ಬೇಗಮಳ ವೃತ್ತಾಂತವು.

—o—

ಮುಮತಾಜ ಬೇಗಮಳ ತಾಯಿಯಾದ ವಜೀರ ಬೇಗಮಳು ತನ್ನ ಮಗಳ ಪೂರ್ವ ವೃತ್ತಾಂತವನ್ನು ಸಾದ್ಯಂತವಾಗಿ ಹೇಳಿದ್ದಾಳೆ. ಅದೇನಂದರೆ-

ನಾನೂ ನನ್ನ ಮಗಳೂ ಗಣಿಕಾ ಸ್ತ್ರೀಯರು. ೧೯೧೭ನೆಯ ಇಸವಿಯಲ್ಲಿ ಹೋಳಕರ ತುಕೋಜಿ ರಾಯರು ನಮ್ಮನ್ನು ತಮ್ಮ ದರಬಾರದಲ್ಲಿ ನೃತ್ಯಗಾತಿಗಳಾಗಿಟ್ಟುಕೊಂಡರು. ನನ್ನ ಮಗಳಿಗೆ ೧೩ ವರ್ಷ ತುಂಬಿತು. ಹೋಳಕರ ಮಹಾರಾಜರು ಆಕೆಯನ್ನು ಪ್ರೀತಿ ಪಾತ್ರಳಾಗಿಟ್ಟುಕೊಂಡು, ಕಾವಲಿಗಾಗಿ ಸಿಪಾಯರನ್ನು ನೇಮಿಸಿದರು.

೧೯೨೧ನೆಯ ಇಸವಿಯ ಎಪ್ರಿಲ ತಿಂಗಳಲ್ಲಿ ಮಹಾರಾಜರ ಕೂಡ ಮುಂಬಯಿಗೆ ಬಂದೆವು. ಮಹಾರಾಜರು ತಾಜ ಮಹಾಲದಲ್ಲಿದ್ದರು. ನಮ್ಮನ್ನು ಮಲಬಾರ ಹಿಲ್ಲಿನ ಬಂಗ್ಲೆಯಲ್ಲಿಟ್ಟರು. ಅದೇ ತಿಂಗಳ ೨೭ನೆಯ ತಾರೀಖಿನ ದಿವಸ ಮಹಾರಾಜರು ತಮ್ಮ ಮ್ಯಾನೇಜರರಿಂದ ಶಂಕರರಾವರ ಸಹಾಯದಿಂದ ಮುಮತಾಜಳನ್ನು ಸಿನೇಮಾ ನೋಡಲಿಕ್ಕೆ ಕರಕೊಂಡು ಹೋಗುವ ನಿಮಿತ್ಯ ಮಾಡಿ ಇಂದೂರಿಗೆ ಕರಕೊಂಡು ಹೋದರು.

ನನ್ನ ಮಗಳನ್ನು ಬಿಡಿಸಿಕೊಡಬೇಕೆಂದು ಫಿರ್ಯಾದಿ ಮಾಡಿದೆನು. ಮಗಳ ವಯಸ್ಸನ್ನು ಕಾಗದ ಪತ್ರಗಳ ಆಧಾರದಿಂದ ಸಿದ್ಧ ಮಾಡಿಕೊಡದ್ದರಿಂದ, ನನ್ನ ಫಿರ್ಯಾದಿಯು ಸೋತಿತು. ಮಹಾರಾಜರು ೧೯೨೨ನೆಯ ಇಸವಿಯಲ್ಲಿ ವಿಲಾಯತಿಗೆ ಹೋದರು. ಮಗಳಿಗೆ ಕಮಲಾಬಾಯಿ ಎಂಬ ಹೊಸ ಹೆಸರಿಟ್ಟು ಇವಳನ್ನು ಕರಕೊಂಡು ಹೋದರು. ಆಗ ನಾನು ಫಿರ್ಯಾದಿ ಮಾಡಿದೆನು. ಮ... ಸಂತೋಷದಿಂದ ತಾವಾಗಿ ಹೋಗು

ಸ್ಕೂಲಗಳ ಫಾರ್ಸ ಮತ್ತು ನಿರುಪಯೋಗ.

—೦—

ಮದ್ರಾಸಿನ ಪ್ರಸಿದ್ಧ ದಾಕ್ಟರರಾದ ರಾಗ ಸಾಹೇಬ ಯು. ರಾಮರಾಯರು ಅಸಹಕಾರದ ಪ್ರಾರಂಭದಲ್ಲಿ ಸಹಕಾರ ಮಾಡಿ, ಕೌನ್ಸಿಲದ ಮೆಂಬರರಾದರು. ಇವರಿಗೂ ಕೌನ್ಸಿಲದಲ್ಲಿ ತಕ್ಕವಿಲ್ಲೆಂದು ಹೊಳೆದಿದೆ. ಮದ್ರಾಸದಲ್ಲಿ ಸೆಂಟ ಮೇರಿಜವೆಂಬವೆಂದು ಸ್ತ್ರೀಯರ ಕಾಲೇಜವಿದೆ. ಕಾಲೇಜದ ಫೀಯ ಮೇಲೆ ಲಗ್ನದ ಸಂಬಂಧವಾಗಿ ಒಂದು ನೋಟೀಸು ಹಚ್ಚಲ್ಪಟ್ಟಿತು. ಆದರೆ ಅದು ಆಕ್ಷೇಪಾರ್ಹವಾಗಿತ್ತು. ಈ ವಿಷಯವಾಗಿ ರಾವಸಾಹೇಬರು ಕೌನ್ಸಿಲಕ್ಕೆ ಹಲವು ಪ್ರಶ್ನಗಳನ್ನು ಕಳಿಸಿಕೊಟ್ಟರು. ಈ ಪ್ರಶ್ನಗಳು ಸ್ಥಾನಿಕ ಸರಕಾರಕ್ಕೆ ಸಂಬಂಧಿಸಿರುವಲ್ಲೆಂದು ಹೇಳಿ, ಸರಕಾರದವರು ಇವನ್ನು ನಾಮಂಜೂರ ಮಾಡಿದರು. ಕೌನ್ಸಿಲದ ಫಾರ್ಸ ಮತ್ತು ಸುಧಾರಣೆಯ ನಿರರ್ಥಕತ್ವವನ್ನು ಕುರಿತು ಜನರೇ ವಿಚಾರ ಮಾಡಲೆಂದು ನಿಟ್ಟುಸುರು ಹಾಕಿದ್ದಾರೆ.

ಯುದ್ಧದ ಹಡಗಗಳನ್ನು ಸುರಂಗದಿಂದ ಹಾರಿಸುವ ಸಂಚು.

ಆಯರ್ಲಂಡದಲ್ಲಿಯ ಬೆಂಕೆಯು ಇನ್ನೂ ಆರಿಲ್ಲ. ಬೂದಿ ಮುಚ್ಚಿದ ಕೆಂಡವಾಗಿದೆ. ಅಲ್ಲಿಯ ಅರಾಜಕರು ಇಂಗ್ಲಂಡಕ್ಕೆ ಬಂದು, ಇಂಗ್ಲಿಷರ ಯುದ್ಧದ ಹಡಗಗಳನ್ನು ಸುರಂಗದಿಂದ ಹಾರಿಸುವ ಸಂಚು ಮಾಡಿದ್ದರು. ಈ ಸಂಚು ಬೈಲಿಗೆ ಬಂದು ಸಂಶಯದಿಂದ ಇಬ್ಬರನ್ನು ದಸ್ತಗಿರ ಮಾಡಿದ್ದಾರೆ.

ಹಡಗದಲ್ಲಿ ಬಂದೂಕಿನ ಭಯದಿಂದ ದರೋಡೆ

—೦—

ಸಿಂಗಾಪೂರದಿಂದ ಹಾಂಗಕಾಂಗಕ್ಕೆ ಹಾಂಗವಾ ಎಂಬ ಹಡಗ ಹೊಂಟಿತು. ಇದರಲ್ಲಿ ೩೦ ಜನ ದರೋಡೆಗಾರರು ಪ್ರಯಾಣಿಕರಾಗಿ ಕುಳಿತರು. ನೂರಾರು ಜನ ಪ್ರಯಾಣಿಕರಿದ್ದರು. ಮತ್ತು ಬೆಲೆಯುಳ್ಳ ಪದಾರ್ಥಗಳ ಪಾರ್ಸಲಗಳೂ ಇದ್ದವು.

ಹಡಗವು ನಡು ಕಡಲಿನಲ್ಲಿ ಪಯಣ ಮಾಡುತ್ತಿದ್ದಾಗ, ದರೋಡೆಗಾರರು ಹಡಗದ ಕಪ್ತಾನ ಮತ್ತು ಬೇರೆ ಪ್ರಮುಖ ಅಧಿಕಾರಿಗಳನ್ನೂ, ಅಂಬಿಗರನ್ನೂ ಪಿಸ್ತೂಲಿನ ಭಯದಿಂದ ಒಂದು ಮೂಲೆಯ ಕೂಡಿಸಿ, ಸುಲಿಗೆ ಪ್ರಾರಂಭಿಸಿದರು. ಹುಡುಗರ ಲೂಟಿ ಮಾಡಿದರು.

ಹಾಂಗಕಾಂಗವು ಇನ್ನೂ ದೂರಿರುವಾಗ, ಅಂಗೆ ಹಾಯುವ ಎಂಬಲ್ಲಿ ಹಡಗ ನಿಲ್ಲಿಸಲಿಕ್ಕೆ ಸುಲಿಗೆ ಸಹಿತವಾಗಿ ಇಳಿದು ಗಚ್ಚ ತೇಲಿಸಿ

ಹಬ್ಬ ದಿವಾಸಕ ನೂಲುವ ಪ್ರತಿಜ್ಞೆ.

—೦—

ಭಾವನಗರ ಸಂಸ್ಥಾನದ ಕಾರ್ಯಾಧಿಕಾರಿಯಾದ ಸರ ಪ್ರಭಾಶಂಕರ ಪಟ್ಟಣಿಯವರು ದಿವಾಲು ಭೋಜನದ ಪೂರ್ವದಲ್ಲಿ ತಪ್ಪದೆ, ಅರ್ಧ ತಾಸು ನೂಲುವಂತೆ ಮಹಾತ್ಮರಿಗೆ ವಚನ ಕೊಟ್ಟಿದ್ದಾರೆ. ಇವರು ರೇಲ್ವೆಯಲ್ಲಿ ಯಾವಾಗಲು ಫರ್ಸ್ಟಕ್ಲಾಸದಲ್ಲಿ ಪ್ರವಾಸ ಮಾಡುವದರಿಂದ, ಬಂಡಿಯಲ್ಲಿ ರಾಟಿ ಇಟ್ಟುಕೊಂಡು ಅಲ್ಲಿ ಸಹ ನೂಲುವಂತೆ ವಿಚಾರ ಮಾಡಿದ್ದಾರೆ.

ಮುಂಬಯಿ ಕೊಲೆಯ ಸುದ್ದಿಗಳು.

—೦—

ಇಂದೂರಿನ ಮಹಾರಾಜರು ಗುಪ್ತವಾಗಿ ಮುಂಬಯಿಗೆ ಬಂದಿದ್ದಾರೆಂದು ಒಂದು ಸುದ್ದಿಯುಂಟು.

ಕೊಲೆಗಡಕರು ಬಾಡಿಗೆ ತಂದ ಮೋಟಾರಿನ ಫಾರ್ಸಿ ಡ್ರಾಯವ್ಹರನನ್ನು ಪೋಲೀಸರು ದಸ್ತಗಿರ ಮಾಡಿದ್ದಾರೆ.

ಹಿಂದುಸ್ಥಾನದಲ್ಲಿ ಗೋರ್‍ಯಾರರ ದಂಡು ೫೯ ಸಾವಿರವುಂಟು. ಇದು ಯುದ್ಧ ಪೂರ್ವದಲ್ಲಿ ೭೨ ಸಾವಿರ ಮತ್ತು ೧೯೨೩ ರಲ್ಲಿ ೭೭ ಸಾವಿರವಾಗಿತ್ತು. ಈ ಸೈನ್ಯವನ್ನು ಇನ್ನೂ ಕಡಿಮೆ ಮಾಡುವದು ಗಂಡಾಂತರದ ಕೃತ್ಯವಾಗುವದೆಂದು ಬ್ರಿಟಿಶ ಸೇನಾಧಿಪತಿಗಳು ಹೇಳುತ್ತಾರೆ. ಹಿಂದೀ ಸೈನ್ಯವು ೧,೬೯,೪೧೨ ಇದ್ದು ಇದು ಯುದ್ಧದ ಮೊದಲು ೧,೮೦,೦೭೯ ಆಗಿತ್ತು.

ಕಾಬೂಲದಲ್ಲಿ ಹೊಸ ನಾಣ್ಯ.

—೦—

ಕಾಬೂಲದ ಅಮೀರ ಸಾಹೇಬರು ತಮ್ಮ ಹೆಸರಿನ ಹೊಸ ನಾಣ್ಯಗಳನ್ನು ಹೊಡಿಸುವರು. ಇದಕ್ಕಾಗಿ ಬೇಕಾಗುವ ಯಂತ್ರ ಸಾಮುಗ್ರಿಯನ್ನು ವಿಲಾಯತಿಯಿಂದ ತರಿಸಿದ್ದಾರೆ. ಹಿಂದಿನ ಮಳೇ ನಾಣ್ಯಗಳನ್ನು ಕರಗಿಸುವರು. ರೂಪಾಯಿ ಮಾಡಲಿಕ್ಕೆ ಬೇಕಾಗುವ ಬೆಳ್ಳಿಯನ್ನು ಜರ್ಮನ ವ್ಯಾಪಾರಸ್ಥರಿಂದಲೂ, ನಿಕಲವನ್ನು ಇಟಲಿಯಿಂದಲೂ ತರಿಸಿದ್ದಾನೆ.

ವಿವಿಧ ವರ್ತಮಾನಗಳು.

—೦—

ಬೇಗಮ ಮಹಮದಅಲಿಯವರು ಇನ್ನೂ ಪೋಲೀಸ ಆಸ್ಪತ್ರೆಯಲ್ಲಿದ್ದಾಳೆ. ತಾಯಿ ಮೊದಲಾದವರು ಇವಳ ಹತ್ತರ ಇರುವರು. ಬೇಗಮಳ ವಿಷಯವಾಗಿ ಮುಸಲಮಾನ ಕವಿಗಳು ಅನೇಕ ಪದ್ಯಗಳನ್ನು ಮಾಡಿದ್ದಾರೆ. ಇವಳು ದಿನಾಲು ಕುರಾಣ ಓದುವಳು.

ಅಮೇರಿಕೆಯಿಂದ ಬಂದ ಕೆಲ ಸತ್ಯಾಗ್ರಹಿಗಳು ಜೈತವಾಕ್ಕೆ ಹೋದ ಕೂಡಲೆ, ಸರಕಾರದವರು ಅವರನ್ನು ಬಸ್ತಗಿರ ಮಾಡಿದರು. ಹಾಂಗಕಾಂಗದಿಂದಲೂ ಸತ್ಯಾಗ್ರಹಕ್ಕಾಗಿ ಕೆಲವರು ಹೊರಟಿದ್ದಾರೆ.

ಪಂಜಾಬ ಸರಕಾರದವರು ಗುರುದ್ವಾರದ ಬಿಲ್ಲು ಒಗೆದಿರುತ್ತಾರೆ. ಈ ಬಗ್ಗೆ ಸರ ಹೇಲಿ ಸಾಹೇಬರು ಲಾರ್ಡ ರೀಡಿಂಗರ ಕೂಡ ವಿಚಾರ ಮಾಡಲು, ಸಿಮಲಾಕ್ಕೆ ಬಂದಿದ್ದಾರೆ.

ಮಥುರೆಯಲ್ಲಿ ಕೂಡಿದ ಶ್ರೀ. ದಯಾನಂದ ಸರಸ್ವತಿಯವರ ಶತಾಬ್ದಿ ಜಯಂತ್ಯುತ್ಸವದ ವೇಳೆಯಲ್ಲಿ ವಿದ್ಯಾಪ್ರಸಾರಕ್ಕಾಗಿ ಕೂಡಿಸಿದ ಫಂಡಿನಲ್ಲಿ ಲಕ್ಷ ರೂಪಾಯಿ ನೆರೆದು ಬಂತು. ಯಾತ್ರೆಗೆ ರೇಲ್ವೆಯಿಂದಲೇ ಒಂದೂ ಕಾಲ ಲಕ್ಷ ಜನ ಬಂದಿತ್ತು.

ಅಮೇರಿಕೆಯ ಒಬ್ಬ ಗೃಹಸ್ಥರು ಸ್ವಾಮೀ ವಿವೇಕಾನಂದರ ಶಿಷ್ಯರಾಗಿದ್ದಾರೆ. ಇವರು ಈಗ ಬೆಂಗಳೂರಿಗೆ ಬಂದಿದ್ದು, ವೇದಾಂತದ ಮೇಲೆ ಟಿಪ್ಪೂ ಸುಲ್ತಾನನ ಅರಮನೆಯಲ್ಲಿ ಸಾರ್ವಜನಿಕವಾಗಿ ಉಪನ್ಯಾಸ ಮಾಡುತ್ತಿದ್ದಾರೆ. ಇವರು ಸ್ವಾಮಿ ಅತುಲಾನಂದ ಎಂಬ ಹೆಸರು ಇಟ್ಟುಕೊಂಡಿದ್ದಾರೆ.

ಧಾರವಾಡ---

ಇಲ್ಲಿಯ ಸುಪ್ರಸಿದ್ಧ ವಕೀಲರಾದ ಶ್ರೀ ಕುಲಕರ್ಣಿಯವರು ಈ ಜಿಲ್ಲೆಯಲ್ಲಿ ಸರಕಾರೀ ವಕೀಲರಾಗಿ ನೇಮಿಸಲ್ಪಟ್ಟಿದ್ದಾರೆ

ಇಲ್ಲಿಯ ವಿದ್ಯಾರ್ಥಿಯಾದ ಶ್ರೀ. ಅಡವಿಯವರು ಇಂಡಿಯನ ಸರ್ವೀಸದ ಅಕೌಂಟಂಟ ಪರೀಕ್ಷೆ ಪಾಸಾಗಿದ್ದಾರೆ. ಸ್ವರಾಜ್ಯದಲ್ಲಿ ಇವರು [illegible]ನಾಗಿ ಅಕೌಂಟಂಟ ಜನರಲರೂ, ಆದಕ್ಕೂ ಹೆಚ್ಚಿನ ಹುದ್ದೇದಾರರೂ ಆಗಬಹುದು.

ರಾವಬಹಾದ್ದೂರ ಗೋವಿಂದರಾವ ಬಾಳೇಕುಂದ್ರಿಯವರು ರಾಮದುರ್ಗ ಸಂಸ್ಥಾನದ ಕಾರಭಾರಿಯಾಗಿದ್ದಾರೆ.

ಇಲ್ಲಿಯ ನೆನ್ನೆ ದಿನ ಮದಲಗಿರಿಯ ಹೊಸ ದಾಟ ಮತ್ತು ಕೊಲೆಯ ಪ್ರಕರಣದಲ್ಲಿ ಶಿಕ್ಷೆ ಹೊಂದಿದ ದೊಡ್ಡ ಬಸಪ್ಪ ಮತ್ತು ೧೪ ಜನರು ಹಾಯಕೋರ್ಟಿಗೆ ಮಾಡಿದ ಅಪೀಲು ವಜಾಗಿ, ಶಿಕ್ಷೆಯು ಕಾಯಮಾಯಿತು.

ಫುಕಟ !! ಫುಕಟ !! ಫುಕಟ !!

ಶ್ರೀ ಭಾರತ ವನೌಷಧಿ ಸಂಗ್ರಹಾಲಯ

ಪೋ, ಕಪ್ಪೂರ ಜಿ. ಬೆಳಗಾವ

ನಮ್ಮಲ್ಲಿ ಶಾಸ್ತ್ರೋಕ್ತವಾಗಿ ತಯಾರಿಸಿದ ಭಸ್ಮ, ಮಾತ್ರೆ ಗುಗ್ಗುಳ, ಗುಟಿಕಾ, ವಟಿಕಾ ಮುಲ ತೈಲ ಅತಿ ಸುಲಭ ಬೆಲೆಗೆ ದೊರೆಯುವವು. ಚಳಿ ಜ್ವರದ ಗುಳಿಗೆ ... ಬಾಟ್ಲಿ ೧ ಕ್ಕೆ ೧೨ ಆಣೆ ೧ ಡಝನ, ... ೮ ರೂ. ಜ್ವರದಗುಳಿಗೆ. ತೊ. ೧ ಕ್ಕೆ ೧ ರೂ. ತೊ. ೧೦ ಕ್ಕೆ ೮ ರೂ.

ಸುವಾಸಿಕ ಹುರುಕಿನ ಔಷಧ ಚೀಟು ೧ಕ್ಕೆ ೧ ಆಣೆ ೧೦೦ ಕ್ಕೆ ೫ ರೂ.

ಕಣ್ಣು ಬೇನೆಯ ಔಷಧ ಚೀಟು ೧ ಕ್ಕೆ ... ೧೦೦ ಕ್ಕೆ ...

ವ್ಯಾಪಾರಸ್ಥರಿಗೆ ಭರಪೂರ ಕಮಿಶನ ಕೊಡಲ್ಪಡುವದು ಅಂಚೆ ವೆಚ್ಚಕ್ಕಾಗಿ ಅರೆಯ ಟಿಕೀಟು ಕಳಿಸುವವರಿಗೆ " ಆಯುರ್ವೇದ ಉಪಚಾರ ಪದ್ಧತಿ " ಎಂಬ ಅತ್ಯುಪಯುಕ್ತವಾದ ಪುಸ್ತಕವನ್ನು ಉಚಿತವಾಗಿ ಕಳಿಸುವೆವು. ಗ್ರಾಹಕರು ತ್ವರೆಮಾಡಬೇಕು.

ಆರ್. ಎಮ್. ಜ್ಯೋನ್ ಎಂಡ ಸನ್ಸ, ಹುಬ್ಬಳ್ಳಿ.

ಎಜಂಟ್ಸ್ ಫೋರ ಕಾರಬೋನಿಕ್ ಆಸಿಡ್ ಗ್ಯಾಸ, ಮ್ಯಾನುಫ್ಯಾಕ್ಚುರರ್ ಆಫ್ ಏರೆಟೆಡ ವಾಟರ್ಸ.



ನಾವು ಆರ್ಡರ ಬೇಗ ಕಳಿಸಿರಿ.

ನಮ್ಮಲ್ಲಿ ಸಿಗುವ ಸಾಮಾನುಗಳ ವಿವರ.



ಫುಲ್‌ಗ್ಯಾಸ ಸಿಲಿಂಡರಗಳು ಇಂಗ್ಲೀಷ ಮತ್ತು ... ಪೇಟೆಂಟ ಕಾಡ್ಸ, ಎಮ. ಟಿ. ಸೋಡಾ ವಾಟರ ಬಾಟಲಗಳು, ... ಸಾಬುಕೀನ ಡೆಬ್ಬಿ ೧ ಹೊಂದುವವು. ಸೋಡಾವಾಟರ ... ಮಶೀನುಗಳು ಮತ್ತು ಎಲ್ಲ ತರದ ಕಲರಿನ ಬಾಟಲಿಗಳ ಎಸನ್ಸಗಳು, ಅಮೇರಿಕನ್ ಆಯಿಸ್ಕ್ರೀಮ ಸೋಡಾ, ಬನಾನಾ, ಕೋಕಾಚೆಂಪೇಜನ, ಲೆಮನ್ ನಂ. ೧ ಲೆಮನ್ ಜುಯಿಸ್ ಸೋಡಾ ನಂ. ೧ ಮೇಂಗೋ ಆರೇಂಜ, ಫಾಯಿನಾಪಲ್, ಪಿಕ್ಕ್‌ಮಿಅಪ, ಕ್ವೆನಿನ್ ಟಾನಿಕ್, ರಾಜಬೆರಿ ನಂ. ೧ ರೋಜ ನಂ. ೧ ಸ್ಪೆಶಿಯಲ ಜಿಂಜರ ಬೀರ ನಂ. ೧, ರಬ್ಬರ ರಿಂಗ್ಸ, ಬೆಸ ಇತರ ಮಶಿನರಿ ಪಾರ್ಟಗಳು ನಮ್ಮಲ್ಲಿ ಸಿಗುತ್ತವೆ. ಮತ್ತು ಶುದ್ಧ ನೀಲಗಿರಿ ಎಣ್ಣೆಯು ಎಲ್ಲ ತರದ ಬಾಟ್ಲಗಳು ಸಿಗುತ್ತವೆ. ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಕೊಡುತ್ತೇವೆ. ನಮ್ಮಲ್ಲಿ ಕಬ್ಬಿಣದ ಮಿಟಲ್ಲಾ ಸಿಂಗಲ ಕಾಟ್ಲಗಳು ಸೋವಿ ದರದಿಂದ ಮಾರಲಿಕ್ಕೆ ಸಿಗುತ್ತವೆ.

ಅಡ್ರೆಸ್— R. M. John & Sons.

Mission Compound HUBLI

ದಿ. ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ,

ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ ವರ್ಗಣೀ ದರ

ನಿತ್ಯಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ ,,	೬—೦—೦ ರೂ
೩ ,,	೪—೦—೦ ರೂ
ವಾರಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕಳಿಸುವ ವಿಳಾಸಕ್ಕೆ

ಮ್ಯಾನೇಜರ ವಿಜಯ, ಧಾರವಾಡ

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಐದು ಆಣೆ ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ೮ ಆಣೆ ಡಬಲ್‌ಕಾಲಮಿನ ಒಳಿಗಳಿಗೆ ಇಮ್ಮಡಿಚಾರ್ಜ ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ, ಧಾರವಾಡ

LOKHANDE



ಬಕ್ಷೀಸು ಮತ್ತು ಆರ್ಡರ ಬೆಲೆಗೆ ಕೊಡತಕ್ಕ ಹೊಸ ಗಡಿಯಾರು

ಜೀವನು ಉತ್ತಮ ವಸ್ತು ನಂಬಿಗೆಯುಳ್ಳದ್ದು ನಮ್ಮ ಅಂಗಡಿಯಲ್ಲಿ ಘಾಪತಿ ಲೋಹ, ರೆಸ್ತಾಂಡ, ಜಿರಡಿಯನ, ಓಮೇಗಾ ಮತ್ತು ಸ್ವಿಸ ಜನರಲ ಕಂಪನಿ ಮತ್ತು ಜರ್ಮಿ ಪ್ರಸಿದ್ಧ ಕಂಪನಿಗಳ ಗಡಿಯಾರಗಳು ಬೇಕಾದಷ್ಟು ... ನೋಡುವುದಕ್ಕೆ ಸುಂದರವಾಗಿರುವಲ್ಲದೆ ಗಟ್ಟಿ ಮತ್ತು ಸರಿಯಾಗಿ ವೇಳೆ ತೋರಿಸತಕ್ಕವುಗಳಾಗಿವೆ. ... ಬೇಕಾದ ಬೆಲೆಯ ಗಡಿಯಾರಗಳು ಸಿಗುವವು. ಕೊಳ್ಳುವಾಗ ಪ್ರತಿಯೊಂದಕ್ಕೆ ಗ್ಯಾರಂಟಿ ಕೊಡುವೆವು. ಒಮ್ಮೆ ತರಿಸಿ ನೋಡುವಿರಷ್ಟೇ?

ಪ್ರೊಪ್ರಾಯಿಟರ, ದತ್ತಾತ್ರೇಯ ಲೋಖಂಡೆ
ಜ ಲ್ಯಾಂಡ ಕ್ಲಾಕ ಮರ್ಚಂಟ ಧಾರವಾಡ.

ದಿ. ಅಂಕಲಗಿ ಬ್ಯಾಂಕ ಲಿಮಿಟೇಡ್

ಧಾರವಾಡ.

—೦—

೧೯೧೩ ಇಸ್ವಿಯ

ಕಂಪನಿ ಕಾಯ್ದೆ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ಚಾಲೂ ಖಾತೆ, ಠೇವು, ಸೇವ್ಹಿಂಗ್ಸದ ಡಿಪಾಜಿಟ, ಸಾಲ, ಪತ್ತಿ, ಹುಂಡಿ, ಮುಂತಾದ ಯಾವತ್ತು ವ್ಯವಹಾರಗಳು ನಡಿಯುವವು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿಮಾಡುವವರಿಂದ ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ ರಿಂದ ೧೦-೩೦. ಸಾಯಂಕಾಲ ೩ ರಿಂದ ೬ ರವರೆಗೆ ನಡಿಯುವದು.

K. B. Ankalagi
ಮ್ಯಾನೆಜಿಂಗ ಡಾಯರೆಕ್ಟರ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾಗ್ಭೂಷಣ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ನಿತ್ಯ ಪತ್ರ ಬೆಲೆ ಅರ್ಧ ಆಣೆ

ಸಂಪಾದಕರು— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೬) ಧಾರವಾಡ ರವಿವಾರ ತಾರೀಖು ೧ನೇ ಮಾರ್ಚ ೧೯೩೧ (ಸಂಚಿಕೆ ೫೦

ಕರ್ನಾಟಕ ತರುಣರಿಗೊಂದು !

ಬಿನ್ ಬಂಡವಾಳಿನ ವ್ಯವಸಾಯ!!

ಕಿರ್ಲೋಸ್ಕರ ನೇಗಿಲುಗಳ ಮಾರಾಟ !!!

ಕಿರ್ಲೋಸ್ಕರ ನೇಗಿಲು ಮತ್ತು ಗಾಣಗಳ ಉಪಯೋಗವು, ಮತ್ತು ಸುಪಕ್ಷವು ಹಿಂದುಸ್ಥಾನದ ಪ್ರತಿಯೊಬ್ಬ ಒಕ್ಕಲಿಗನಿಗೆ ಗೊತ್ತಿದ್ದ ಮಾತು. ಅವುಗಳಿಗೆ ಗಿರಾಕಿಗಳು ಬಹಳ ಆದ್ದರಿಂದ ಅವುಗಳನ್ನು ಮಾರಾಟ ಮಾಡುವ ದಲಾಲರಿಗೆ ಶ್ರಮ ಬೀಳದು. ಕಂಪನಿಯಿಂದ ದೊರೆಯುವ ಕ್ಯಾಟಲಾಗು, ಹಾಲಿ ಪತ್ರಿಕೆ, ಗೋಡೆಯ ಚಿತ್ರಪಟ ಇತ್ಯಾದಿ ಜಾಹೀರಾತಿನ ಸಾಮುಗ್ರಿಗಳನ್ನು ಹಂಚಿ ಹಳ್ಳಿಗಳಲ್ಲಿ ಪ್ರಚಾರ ಮಾಡಿದಲ್ಲಿ ಆರ್ಡರು ದೊರೆಯುವವು. ಈ ಆರ್ಡರ ಕೂಡ ೧/೪ ಹಣವನ್ನು ಅಡ್ವಾನ್ಸ ಕಂಪನಿಗೆ ಕಳುಹಿಸಿದಲ್ಲಿ ಕಂಪನಿಯು ಅವರವರ ಹೆಸರಿಗೆ ರಸೀದಿಯನ್ನು ಕಳಿಸಿ ಹಣಕ್ಕೆ ವ್ಹಿ. ಪಿ. ಮಾಡಿ ದಲಾಲರಿಗೆ ಕಮಿಶನ ಕೊಡುವದು.

ಕಮೀಶನ್ ದರಗಳ ಬಗ್ಗೆ ಇಂದೇ ಕಾಗದವನ್ನು ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ } **ಕಿರ್ಲೋಸ್ಕರವಾಡಿ**
ಜಿಲ್ಲಾ ಸಾತಾರಾ.

ಫಕ್ತ ೨ ಆಣೆಯೊಳಗೇ ಅರ್ಧಶೂಲಶಾರದ ನ ರಾಮಬಾಣ ಉಪಾಯ

ಮೊಮೆಂಟ ಕ್ಯೂಅರ

ತಲೆಶೂಲಿ, ಅರ್ಧ ತಲೆಶೂಲಿ, ಶೀತ, ಉಷ್ಣ ವ ನಿಶ್ಯಕ್ತಿ ವಗೈರೆಗಳಿಂದಾದ ಮಸ್ತಕಶೂಲಿಯು ತ್ವರ್ಯದಿಂದ ನಿರ್ಮೂಲ ಮಾಡಲು " ಮೊಮೆಂಟ ಕ್ಯೂಅರ " ನಿಗೆ ಸರಿಸಮಾನವಾದ ಔಷಧವು ಬೇರೆ ಇಲ್ಲ. ಹೆಚ್ಚು ಜನರು ಮಸ್ತಕಶೂಲೆಯನ್ನು ಸಹಿಸಲು ಆಗದೆ ಮಸ್ತಕಕ್ಕೆ ವಸ್ತ್ರಕಟ್ಟಿ ಎಷ್ಟೋ ವ ಅರ್ಕನ್ನು ಕಳೆಯುತ್ತಾರೆ. ಆದರೆ ನಿರಾಶೆಯಾದವರು ಮೊಮೆಂಟ ಕ್ಯೂಅರದ ಪುಡಿಯನ್ನು ಬಿಸಿ ಚಹಾದೊಂದಿಗೆ ಅಥವಾ ಬಿಸಿ ನೀರಿನೊಂದಿಗೆ ಹೊಟ್ಟೆಯಲ್ಲಿ ತಕ್ಕೊಂಡಲ್ಲಿ ಒಂದೇ ಕ್ಷಣದಲ್ಲಿ ಮಸ್ತಕಶೂಲಿಯು ನಿಲ್ಲುವದು. ಇದಕ್ಕೆ ಅನೇಕ ಶಿಫಾರಸ ಪತ್ರಗಳು ಉಂಟು.

೧ ಚೀಟಿಗೆ ೨ ಆಣೆ. ಸ್ಯಾಂಪಲ ಸಲುವಾಗಿ ೩ ಆಣೆ ಪೋಸ್ಟ ತಿಕೀಟುಗಳನ್ನು ಕಳಿಸಿದಲ್ಲಿ ರವಾನಿಸುವೆವು.

ವಿಳಾಸ— ದಿ ಕನಕಾವತ್ತ ಮೆಡಿಕಲ ಸ್ಟೋರ್ಸ, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ
ಸ್ಟೇಶನರೋಡ ಹುಬ್ಬಳ್ಳಿ.

ಜಾಹೀರ ನೋಟೀಸು

ಕಮಲಾಪೂರ ಗೋವಿಂದರಾವ ನವಲೆ ಸಾಕೀನ ಧಾರವಾಡ ಇವರಿಗೆ ಮಾವತ್ತು ಜನರಿಗೆ, ಸಾಹುಕಾರರಿಗೆ ಮತ್ತು ವ್ಯಾಪಾರಸ್ಥರಿಗೆ ಈ ಜಾಹೀರ ನೋಟೀಸಿನಿಂದ ತಿಳಿಸುವದೇನಂದರೆ.

ನಾನು ವ ಯಲ್ಲಪ್ಪಾ ಮತ್ತು ವರದರಾಜ ಈ ಪ್ರಕಾರ ಮೂವರು ವಿಭಕ್ತರಿದ್ದು ನಾವ್ತ್ರ ವಿಭಾಗದಲ್ಲಿ ಸಂಪಾದಿಸಿದ ಸ್ಥಾವರ ಜಂಗಮ ಆಸ್ತಿಯು ನಮ್ಮ ಮೂವರ ಸಮುದಾಯ ಸಂಪಾದನೆಯು ಆಗಿರುತ್ತದೆ. ಇವುಗಳ ಮೇಲೆ ನಮ್ಮ ಮೂವರ ಸಮಾನಹಕ್ಕು ಉಂಟು. ನಾವು ಮೂವರು ಹೋದ ಯುಗಾದಿಯವರೆಗೆ ಏಕತ್ರವಿದ್ದೆವು. ಮನೆಯಲ್ಲಿ ತಂಟೆಬಂದದ್ದರಿಂದ ಮೂವರು ಬೇರೆ ಆಗಿ ಆದರೆ ಊಟ ಮಾತ್ರ ಪ್ರತ್ಯೇಕ ಮಾಡಿಕೊಂಡಿದ್ದೇವೆ. ಈ ಪ್ರಕಾರ ಬೇರೆಯಾದಾಗ ಸಂಚಯ ಸಮುತ್ಪನ್ನ ಆದದ್ದು ಹೇಗೆ ವಿಭಾಗಮಾಡಿಕೊಳ್ಳಬೇಕೆಂದು ಗೊತ್ತಾಯಿತು. ನಾನು ಈಗ ಆದವರು ಮನಸ್ಸಿನವನಾಗಿರುವದರಿಂದ ನನ್ನ ಯಲ್ಲಪ್ಪನು ಆಸ್ತಿಯ ವಹಿವಾಟ ಮಾಡಬೇಕೆಂದು ಗೊತ್ತಾಯಿತು. ಯಲ್ಲಪ್ಪನು ತನ್ನ ವಶದಲ್ಲಿ ಆಸ್ತಿ ದೊರೆತಕೂಡಲೆ, ನಮ್ಮ ಮೇಲೆ ತಿರುಗಿ ಬಿದ್ದು, ಹಿಸ್ಸೆ ಮಾಡಿಕೊಡಲಿಕ್ಕೆ ನಾಕಬೂಲ ಮಾಡಹತ್ತಿದ್ದಾನೆ. ಹಿರಿಯರ ಮತ್ತು ಬುದ್ಧಿವಂತರ ಮಾತು ಸಹ ಕೇಳದ್ದಾಗಿದ್ದಾನೆ. ಕಾರಣ ಈ ಜಾಹೀರ ನೋಟೀಸು ಕೊಡುವ ಅಗತ್ಯ ಉಂಟಾಯಿತು. ನಾನು ಸದರ ಯಲ್ಲಪ್ಪನ ಮೇಲೆ ಕಾಯದೇಶೀರ ಇಲಾಜ ಮಾಡಹತ್ತಿದ್ದೇನೆ. ಈತನು ನಮ್ಮನ್ನು ಮುಣುಗಿಸುವ ದುಷ್ಟ ಇರಾದೆಯಿಂದ ಹೊಲ, ಮನೆ ಮತ್ತು ಅಂಗಡಿಗಳನ್ನು ವತ್ತೀ ಹಾಕಿ ಯಾರಲ್ಲಾದರೂ ಸಾಲಾ ಮಾಡಿದ್ದರೆ— ಮತ್ತು ಮುಂದೆ ಮಾಡಿದರೆ— ಅದಕ್ಕೆ ನಾನು ಜವಾಬದಾರನಿರುವದಿಲ್ಲ. ಆತನೇ ಜವಾಬದಾರನು. ಆತನ ಹಿಸೆಕ್ಕೆ ಬರುವ ಆಸ್ತಿಯು ಮಾತ್ರ ಜವಾಬದಾರವಾಗುವದು. ಅಂತಾ ಜಾಹೀರ ಮಾಡಿದ ನೋಟೀಸು ತಾ|| ೨೩ ಫೆಬ್ರುವರಿ ೧೯೩೧ ನೇ ಇಸವಿ

ಕಮಲಾಪೂರ ಗೋವಿಂದರಾವ ನವಲೆ

ವಿಜಯ.

ಧಾರವಾಡ ತಾ- ೧-೩-೨೫ ನೇ ಇಸ್ವಿ

ಕೌನ್ಸಿಲದಲ್ಲಿ ಶ್ರೀ ಕರ್ಕಿಯವರ ಭಾಷಣವು.

—೦—

ಕಾರವಾರ ಜಿಲ್ಲೆಯ ಸ್ವರಾಜ್ಯ ಪಕ್ಷದ ಮೆಂಬರರಾದ ಶ್ರೀ ಕರ್ಕಿಯವರು ಮಾಡಿದ ಭಾಷಣದ ಸಾರಾಂಶವು—

ರೈತರು ಧನಧಾನ್ಯವನ್ನು ಪೂರೈಸತಕ್ಕವರಾದ್ದರಿಂದ, ಅವರೇ ಮುಖ್ಯ ಜೀವನರಾಗಿದ್ದಾರೆ. ಇವರ ಯೋಗಕ್ಷೇಮವನ್ನು ನೋಡುವಂಥ ಬಜೆಟ್ಟೇ ನಿಜವಾದ ಬಜೆಟ್ಟಾಗುವದು. ಹಳ್ಳಿಗಾಡಿನವರಿಗೆ ಕೈನ ಮಾರ್ಗವಿಲ್ಲ; ಆರೋಗ್ಯದ ವಿಚಾರವಿಲ್ಲ; ಔಷಧದ ಸಹಾಯವಿಲ್ಲ. ಬಜೆಟ್ಟಿನಲ್ಲಿ ಇವುಗಳ ವಿಚಾರವೇ ಇಲ್ಲ. ಸರಕಾರದ ಕೋಶಾಧಿಕಾರಿಯು ಹಿಂದುಸ್ಥಾನ ಸರಕಾರ ಮತ್ತು ದೊಡ್ಡ ದೊಡ್ಡ ಸಂಬಳ ತಿನ್ನುವ ಕಾಮದಾರರ ದೆಸೆಯಿಂದ ಕಾಳಜೀ ತಕ್ಕೊಂಡಂತೆ, ಈ ಬಡ ಜನರ ದೆಸೆಯಿಂದ ತಕ್ಕೊಂಡಿರುವದಿಲ್ಲೆಂದು ನನ್ನ ಮನ ನಂಬಿಗೆಯಾಗಿದೆ. ಹಳ್ಳಿಗಳಲ್ಲಿ ಜನರು ನಾನಾ ರೀತಿಯಿಂದ ದುಃಖ ಭೋಗಿಸುತ್ತಿರುವಾಗ, ಕೋಶಾಧಿಕಾರಿಯು ದೊಡ್ಡ ದೊಡ್ಡ ಪಟ್ಟಣಗಳ ಸೋಯಿಯ ಚಿಂತೆ ಮಾಡುತ್ತಾನೆ. ವನಗಾವಲು ಖಾತೆಯ ಮಂತ್ರಿಯು ಕಾರವಾರ ಜಿಲ್ಲೆಯ ದೆಸೆಯಿಂದ ಯಾವ ಕೆಲಸವನ್ನೂ ಮಾಡಲಿಲ್ಲ. ಆತನು ಬಂದನು ಮತ್ತು ಯಾವ ಕೆಲಸ ಮಾಡದೆ ಹಿಂದಿರಿಗಿ ಹೋದನು. ಸರಕಾರದವರು ಪ್ರಜರ ವಿಚಾರ ಕೇಳದೆ ಒಂದು ಪ್ರೆಸನೋಟು ಪ್ರಸಿದ್ಧ ಮಾಡಿದರು. ಕಾರವಾರದ ಪ್ರಜರು ಕುಸುವಾರರಿಂದ ತಾಪ ವಿಮೋಚನೆಯಾಗುವದೆಂದು ಆಶಿಸಿದ್ದರು. ಆದರೆ ಯಾವ ಕೃತ್ಯವೂ ಆಗಿರುವದಿಲ್ಲ. ಕೌನ್ಸಿಲದ ಠರಾವಿನ ವಿರುದ್ಧ ಕೆಲವು ತಾಲೂಕಗಳ ಮೇಲೆ ನಿರ್ಬಂಧನ ಸೆಟಲಮೆಂಟದ ಬಲವಂತಿಕೆ ನಡೆದಿದೆ. ಕಾಡ ಪಶುಗಳು ರೈತರ ಬೆಳೆಯನ್ನು ಧ್ವಂಸ ಮಾಡುತ್ತಿದ್ದರೂ, ಜನರ ಈ ಪೀಡೆ ತಪ್ಪಿಸುವದಕ್ಕಾಗಿ ಸರಕಾರವೇನೂ ಮಾಡಲಿಲ್ಲ. ಮತ್ತು ಜಿಲ್ಲೆಯ ಅಧಿಕಾರಿಗಳು ರೈತರಿಗೆ ಬಂದೂಕಧ ಪರವಾನಿಗೆ ಕೊಡಲು ಕೈ ಬಿಗೀ ಹಿಡಿಯುತ್ತಾರೆ. ತಮ್ಮ ಆಕ್ಷೇಪಗಳನ್ನು ದೂರಮಾಡಿಸುವದಕ್ಕಾಗಿ ಮುಕದಾರರು ನನ್ನನ್ನು ಕೌನ್ಸಿಲಕ್ಕೆ ಕಳಿಸಿದ್ದಾರೆ. ಮಿ. ಮ್ಯಾಕ್ಸವೆಲ್ಲ ಸಾಹೇಬರು ವನಗಾವಲದ ಸ್ಥಿತಿಗತಿಯನ್ನು ತಿಳಕೊಂಡಿದ್ದರು. ಹಾಗು ಇವರಿಗೆ ಸ್ಥಾನಿಕ ಪರಿಸ್ಥಿತಿಯೂ ಗೊತ್ತಾಗಿತ್ತು. ಇಂಥವರನ್ನು ಸರಕಾರವು ಪ್ರಜರ ಅಪೇಕ್ಷೆಯನ್ನು ಮನ್ನಿಸದೆ ವರ್ಗಮಾಡಿತು.

———

ಮುಗಿನಲ್ಲಿ ಮೆಣಸಿನಕಾಯಿ ಮುರಿಯುವಂಥ ಮಾತು !!

—೦—

ಮುಂಬಯಿಯ ಮೆಂಬರರಾದ ಮಿ. ನರಿಮನ್ನರೆಂಬ ಪಾರ್ಸಿ ಗೃಹಸ್ಥರು ಯುರೋಪಿಯನ್ನ ಅಧಿಕಾರಸ್ಥರ ಮೂಗಿನಲ್ಲಿ ಮೆಣಸಿನಕಾಯಿ ಮುರಿಯುವಂಥ ಭಾಷಣ ಮಾಡಿದ್ದಾನೆ. ಅದೇನೆಂದರೆ—

ಕೋಶಾಧಿಕಾರಿಯು ನಾವು ಮೆಂಬರರನ್ನು ಭಾಗವತರ ಆಟದೊಳಗಿನ ಹಣಮನಾಯಕರೆಂದು ಕರೆದಿದ್ದಾರೆ. ನಮಗೆ ನಿಜವಾಗಿ ಭಾಷಣ ಸ್ವಾತಂತ್ರ್ಯವಿದ್ದರೆ- ಹಣಮನಾಯಕನಾದ ಗೊಡ್ಡಿಯು ಹೇಗೆ ಪಾರ್ಟ ಮಾಡುತ್ತಾನೆಂಬದನ್ನು ತೋರಿಸಬಹುದಾಗಿತ್ತು. ಹಣದ ವಿಚಾರದಿಂದ ನೋಡಲಾಗಿ ಸರಕಾರವು ರಾಜ್ಯವಾಳಲಿಕ್ಕೆ ನಾಲಾಯಖವಿರುತ್ತದೆಂದು ಸಿದ್ಧ ಮಾಡಿಕೊಡುವಷ್ಟು ಕರ್ತವ್ಯ ಶೂನ್ಯವಾಗಿರುತ್ತದೆ. ಪ್ರಜರು ಹೋಮರೂಲ (ಸ್ವರಾಜ್ಯ) ಕೇಳಿದಾಗ- ಅದಕ್ಕೆ ನೀವು ಅಪಾತ್ರರಿದ್ದೀರೀ ಎಂದು ಸರಕಾರ ಹೇಳಿತು. ಮತ್ತು ನೀವು ಪಾತ್ರರಾಗಲಿಕ್ಕೆ ಬಹಳ ದಿವಸ ಬೇಕೆಂದು ನುಡಿಯಿತು. ರಾಜ್ಯದಾಡಳಿತೆಯ ಯಾವದೊಂದು ಭಾಗವನ್ನು ಪ್ರಜರಿಗೆ ಒಪ್ಪಿಸದೆ, ಸರಕಾರವು ಈ ಆರೋಪವನ್ನು ಹೊರಿಸಿರುತ್ತದೆ. ಈ ಸರಕಾರವು ೧೫೦ ವರ್ಷಗಳಿಂದ ಅನೇಕ ಸೇಕ್ರೇಟರಿ, ಕಾಮದಾರ, ಮೊದಲಾದ ಆಡಂಬರದಿಂದ ರಾಜ್ಯವಾಳುತ್ತಿದ್ದರೂ, ರಾಜ್ಯವಾಳಲಿಕ್ಕೆ ನಾಲಾಯಖವಿರುವಂತೆ ಸಿದ್ಧ ಮಾಡಿಕೊಂಡಿರುತ್ತದೆ. ಹಣದ ಬಾಬಿನ ಮಟ್ಟಿಗೆ ವಿಚಾರ ಮಾಡಿದರೆ- ಈ ಸರಕಾರವು ರಾಜ್ಯವಾಳಲಿಕ್ಕೆ ಸಂಪೂರ್ಣವಾಗಿ ನಾಲಾಯಖವಾಗಿರುತ್ತದೆ. ಹಣದ ವಿನಿಯೋಗವು ಹಿಂದೀ ಜನರ ಕಯ್ಯಲ್ಲಿದ್ದರೆ ಅವರು ಅತ್ಯುತ್ಕೃಷ್ಟವಾಗಿ ಇದರ ವಿನಿಯೋಗ ಮಾಡುತ್ತಿದ್ದರು. ಮತ್ತು ಇವರು ಹೊಸ ಹೊಸ ಕರದ ದೆಸೆಯಿಂದ ಕೌನ್ಸಿಲದ ಮುಂದೆ ಬಿಲ್ಲು ತರುತ್ತಿದ್ದಿಲ್ಲ. ನಮಗೆ ಈ ಅಧಿಕಾರ ಕೊಡಿರೆಂದರೂ ಸರಕಾರ ಕೊಡುವದಿಲ್ಲ. ಹಿಂದೀ ಜನರು ರಾಜ್ಯವಾಳಲಿಕ್ಕೆ ಅಸಮರ್ಥರಿದ್ದಾರೆಂಬ ತುಂಬಗುತ್ತಿಗೆಯ ಮಾತು ಹೇಳಬೇಡಿರೆಂದು ನಾನು ಸರಕಾರಕ್ಕೆ ಸೂಚಿಸುತ್ತೇನೆ. ದಾಕ್ಷಿಣ್ಯದಿಂದ ರಾಜ್ಯವಾಳಲಿಕ್ಕೆ ಇವರು ಗಟ್ಟಿಗರಾಗಿದ್ದಾರೆಂಬದನ್ನು ನಾನು ಒಪ್ಪುತ್ತೇನೆ. ಜನರಲ್ಲಿ ಭೇದ ಮಾಡಿ, ಮತಭೇದ ಹುಟ್ಟಿಸಿ, ರಾಜ್ಯವಾಳಲಿಕ್ಕೂ ಸಮರ್ಥರೆಂಬ ಮಾತನ್ನು ನಾನು ಒಪ್ಪುತ್ತೇನೆ. ಕರ-ಜಕಾತಿಗಳು ಬೆಳೆಯುತ್ತಿರುವಾಗ ಕೋಶಾಧ್ಯಕ್ಷರು ಮುಂಬಯಿ ಇಲಾಖೆಗೆ ಬಹಳ ಭರಭರಾಟಿ ಬರುವದೆಂದು ಬಣ್ಣಿಸಿ ಹೇಳುತ್ತಾರೆ. ಇದು ಕುಬೇರನ ಬಜೆಟ್ಟಲ್ಲ. ದರಿದ್ರ ಸುದಾಮನ ಬಜೆಟ್ಟು. ಇದೇ ಪ್ರಕಾರ ಸಾಗುತ್ತಾ ಹೋದರೆ- ಮುಂಬಯಿ ಇಲಾಖೆಗೆ ಅಧಃಪಾತವೇ ಬರುವದು. ಹಿಂದುಸ್ಥಾನದಲ್ಲಿ ಎಲ್ಲ ಇಲಾಖೆಗಳಿಗಿಂತ ಈ ಇಲಾಖೆಯಲ್ಲಿ ಕರವು ಹೆಚ್ಚಿರುತ್ತದೆ. ಅದೇ ಪ್ರಕಾರ ಇದಕ್ಕೆ ಗೋಣು ತದೆಯಲಾರದಷ್ಟು ಸಾಲದ ಹೊರೆಯುಂಟು. ಹತ್ತು ವರ್ಷಗಳ ಕೆಳಗೆ ಹತ್ತು ಕೋಟ ರೂಪಾಯಿ ಸಾಲವಿತ್ತು. ಅದು ಈಗ ೪೨ ಕೋಟ ೫೦ ಲಕ್ಷವಾಗಿದೆ. ಇದು ಈ ವರ್ಷ ಮುಂಬಯಿದರೊಳಗಾಗಿ ೫೪ ಕೋಟಿಯಾಗುವದು. ಅಪರಾಧವೆನಿಸುವಂಥ ಬಗೆಯಿಂದ ದ್ರವ್ಯದ ವ್ಯಯ ನಡೆದಿದೆ. ಕೈ ಬಿಗೀ ಹಿಡಿದು ವೆಚ್ಚ ಮಾಡುವದೆಂದು ಹೇಳುತ್ತಿರುವಾಗಲೇ ದುಂದುಗಾರಿಕೆ ನಡೆದಿದೆ. ೧೯೧೪ನೇ ಇಸವಿಯಲ್ಲಿ ಇಲಾಖೆಯ ವೆಚ್ಚವು ೮೦ ಕೋಟಿ ಇತ್ತು, ಅದು ೧೬ ಕೋಟಿಗೆ ಬಂದಿದೆ. ಹೀಗೆ ವೆಚ್ಚ ಬೆಳೆಯಲು ನ್ಯಾಯವಾದ ಪರಿಸ್ಥಿತಿಯು ಇರುವದೇ ಇಲ್ಲ. ದೇಶ ವಿಸ್ತಾರ ಮತ್ತು ಜನಸಂಖ್ಯೆಯ ವಿಚಾರದಿಂದ ಮುಂಬಯಿ ಇಲಾಖೆಗಿಂತ ಬಂಗಾಲವು ದೊಡ್ಡದಾಗಿದ್ದರೂ, ಅದರ ಆದಾಯವು ೧೨ ಕೋಟಿಯಾಗಿ, ಮುಂಬಯಿಯ ಆದಾಯವು ೧೬ ಕೋಟಿಯಾಗಿದೆ. ವಿನಾಶಕ ಮಾತುಗಳನ್ನು ಹೇಳದೆ, ವಿಧಾಯಕ ವಿಚಾರಗಳನ್ನು ಹೇಳಿರೆಂದು ನಮಗನ್ನುವರು. ವೆಚ್ಚ ಕಡಿಮೆ ಮಾಡುವ ರಿಟ್ರೆಂಚಮೆಂಟ ಕಮಿಟಿಯಲ್ಲಿ ಸರಕಾರಕ್ಕೆ ಅನುಕೂಲರೆಂಬವರೇ ಮೆಂಬರರಿದ್ದರು. ಸ್ವರಾಜ್ಯ ಪಕ್ಷದವರು ಇರಲೇ ಇಲ್ಲ. ನಮ್ಮವರು ಸೂಚಿಸಿದಂಥ ಉಪಾಯಗಳನ್ನೇ ಸರಕಾರವು ಬೀಸಿ ಒಗೆಯಿತು. ಮಿ. ಕಾವಸಜಿ ಜಹಾಂಗೀರ, ಸ್ವರ್ಗವಾಸಿ ಸಾಠೆಯವರಂಥ ಸೌಮ್ಯವೃತ್ತಿಯ ಮನಾಳರು ಮಾಡಿದ ಸೂಚನೆಯನ್ನು ಸಹ ಸರಕಾರವು ಅಂಗೀಕರಿಸದೆ, ಅವನ್ನು ಕಸದ ಬುಟ್ಟಿಯಲ್ಲಿ ಚಲ್ಲಿತು. ಸರಕಾರವು ಮಿತವ್ಯಯ ಮಾಡಿಯೂ ದುಡ್ಡು ಕಡಿಮೆಯಾದ ಪಕ್ಷದಲ್ಲಿ ಕರದ ಮಂಜೂರಿ ಬೇಡತಕ್ಕದ್ದು. ತಿಂಗಳಿಗೆ ಮೂರು ಸಾವಿರ ರೂಪಾಯಿ ಸಂಬಳ ಕೊಟ್ಟು ಒಬ್ಬ ಮೆಕ್ಯಾನಿಕಲ ಇಂಜಿನಿಯರನನ್ನು ನೇಮಿಸಿದ್ದಂತೂ ಒಬ್ಬ ಯುರೋಪಿಯನ್ನನಿಗೆ ಕೆಲಸವಾಗಲೆಂದಿರುತ್ತದೆ. ಗವರ್ನರರ ಅರಮನೆಯ ದುರಸ್ತಿಗೆಂದು ವೆಚ್ಚ ಮಾಡುವ ೩೦ ಲಕ್ಷ ರೂಪಾಯಿಗಳ ವಿಷಯವಂತೂ ಅಲಕ್ಷ್ಯಹೀನವಾದ ಕೃತ್ಯವಾಗುತ್ತದೆ.

ರಶಿಯಾದಲ್ಲಿ ವಿವಾಹದ ಹೊಸ ಕಾಯದೆ.

—೦—

ರಶಿಯಾ ಸರಕಾರದವರು ವಿವಾಹದ ವಿಷಯವಾಗಿ ಸಾಮಾಜಿಕವಾದ ಹೊಸ ನಿಯಮಗಳನ್ನು ಮಾಡತಕ್ಕವರಿದ್ದಾರೆ. ಅದರ ಕೆಲವು ಮಹತ್ವದ ಕಲಮುಗಳು ಕೆಳಗೆ ಕೊಟ್ಟಂತಿರುತ್ತವೆ.

೧ ವಧುವಿನ ಮತ್ತು ವರನ ವಯಸ್ಸು ಅನುಕ್ರಮವಾಗಿ ೧೬ ಮತ್ತು ೧೮ ಕ್ಕಿಂತ ಕಡಿಮೆ ಇರಕೂಡದು.

೨ ಬಲಹೀನರ ಹಾಗು ಸಮೀಪ ಸಂಬಂಧವುಳ್ಳಂಥವರ ಕೂಡ ವಿವಾಹ ಮಾಡಿಕೊಳ್ಳತಕ್ಕದ್ದಲ್ಲ.

೩ ಗಂಡ ಹೆಂಡರಿಬ್ಬರೂ ಗಳಿಸತಕ್ಕವರಿದ್ದರೆ ಇಬ್ಬರೂ ತಂತಮ್ಮ ಯೋಗ್ಯತೆಯ ಮೇರೆಗೆ ಪ್ರಸಂಗದ ವೆಚ್ಚ ಕೊಡತಕ್ಕದ್ದು.

೪ ಗಂಡ ಹೆಂಡರಿಬ್ಬರೂ ಒಂದು ಸಾಮಾನ್ಯವಾದ ಅಡ್ಡ ಹೆಸರು ಇಟ್ಟುಕೊಳ್ಳಬಹುದು. ಬೇಡಾದರೆ ಉಭಯತರು ತಂತಮ್ಮ ಉಪನಾಮವನ್ನು ಪ್ರತ್ಯೇಕವಾಗಿ ಇಟ್ಟುಕೊಳ್ಳಬಹುದು.

೫ ಮಕ್ಕಳ ಸಂರಕ್ಷಣೆ ಮಾಡುವ ಜವಾಬದಾರಿಯು ಗಂಡ ಹೆಂಡರ ಮೇಲೆ ಸಮನಾಗಿರತಕ್ಕದ್ದು.

ಮೇಲಿನ ಶರ್ತುಗಳನ್ನು ನೋಡಲಾಗಿ ರಶಿಯದಲ್ಲಿ ಸಮಾಜ ಬಂಧನೆಯುಂಟೆಂದೂ, ಹೆಂಗಸರೆಂದ ಕೂಡಲೆ, ಬೇಕಾದವನು ಅವಳ ಕೈ ಹಿಡಿದು ಜಗ್ಗಿಕೊಂಡು ಹೋಗಿ, ಅವಳ ಮೇಲೆ ಬಲಾತ್ಕಾರ ಮಾಡಬಹುದೆಂದೂ ಹುಟ್ಟಿಸುವ ಸುದ್ದಿಯು ಕೇವಲ ವಿಚಾರ ಶೂನ್ಯರ ತಲೆಯಿಂದಲೇ ಹೊರಡುವಂತಾಗುತ್ತದೆಂಬು ವಿದಿತವಾಗುತ್ತದೆ.

ಮದಿವೆಯ ವರದಕ್ಷಿಣೆ ಮತ್ತು ದುಂದುಗಾರಿಕೆ.

—೦—

ಈ ಮದಿವೆಯ ಹಂಗಾಮಿನಲ್ಲಿ ವರದಕ್ಷಿಣೆಯು ಒಂದು ಬಹಳವಾಗಿ ಬೆಳೆದಿದೆ. ವರದಕ್ಷಿಣೆಯ ತಕ್ಕಂತೆ ಲಗ್ನದ ಆಡಂಬರವೂ ತಾಳಗೆಟ್ಟಿದೆ. ಇದಕ್ಕೆ ನಿರ್ಬಂಧ ಹಾಕುವದಕ್ಕಾಗಿ ಬೆಳಗಾವಿಯಲ್ಲಿ ಬೇಗ ಬೇಗಿಗುಂಟ ಸಾರ್ವಜನಿಕ ಸಭೆ ವ್ಯಾಖ್ಯಾನ ಕೊಡುವ ಉದ್ಯೋಗ ನಡೆದಿದೆ. ಶಾಹಸಾಪುರದಲ್ಲಿ ಒಬ್ಬ ವೈಶ್ಯ ಗೃಹಸ್ಥರು ೧೫೦೦೦ ರೂಪಾಯಿ ವರದಕ್ಷಿಣೆ ಕೊಟ್ಟು, ಮೇಲೆ ಲಗ್ನಕ್ಕಾಗಿ ೨೫ ಸಾವಿರದ ವೆಚ್ಚ ಮಾಡತಕ್ಕವರಿದ್ದಾರೆ. ಅಲ್ಲಿಗೂ ಧೈರ್ಯಗಾಪಿಯು ಚಳವಳಿಯು ಹೋದರೆ ಲೇಸಾಗುವದು.

ಬುರ್ದರ ಬಂಡಾಯ ಹಬ್ಬಿತು.

—೦—

ಫ್ರೆಂಚ್ ಜಿಲೀಫರನ್ನು ಪಟ್ಟಕ್ಕೆ ಕೂಡ್ರಿಸಿ, ಸುಲ್ತಾನ ಶಾಹಿಯನ್ನು ನೆಲೆಗೊಳಿಸಬೇಕೆಂದು ಬುರ್ದರು ಎಬ್ಬಿಸಿದ ಬಂಡಾಯವು ಭಯಂಕರ ಸ್ವರೂಪವನ್ನು ತಳೆದಿದೆ. ಇವರು ಡಾಯರ ಬೇಕರವೆಂಬ ಮಹತ್ವದ ಆಯಕಟ್ಟಿನ ಪಟ್ಟಣವನ್ನು ಆಕ್ರಮಿಸಿ, ಅಲ್ಲಿಯ ಮುಖ್ಯಾಧಿಕಾರಿಯನ್ನು ಸೆರೆ ಹಿಡಿದಿದ್ದಾರೆ. ಅಂಗೋರಾ ಸರಕಾರದವರು ಬುರ್ದರನ್ನು ಎದುರಾಗಲು ದಂಡು ಕೂಡಿಸುತ್ತಿದ್ದಾರೆ. ಮತ್ತು ತುರುಕ ವೈಮಾನಿಕರು ಬುರ್ದರ ಪಾಳಯದ ಮೇಲೆ ಬಾಂಬು ಚೆಲ್ಲಲಾರಂಭಿಸಿದ್ದಾರೆ.

ಸ್ವರಾಜ್ಯ ಪಕ್ಷೀಯರ ಹೊಸ ವಿಚಾರ

ನಾಗಪೂರದ ಸ್ವರಾಜ್ಯ ಪಕ್ಷೀಯರು ತಮ್ಮ ಪಕ್ಷದವರನ್ನು ಕೌನ್ಸಿಲ ಅಧ್ಯಕ್ಷರಾಗಿ ಆರಿಸುವರು. ಚುನಾವಣೆಯು ಇಂದೇ ಉಂಟು. ದಿವಾನಗಿರಿಯನ್ನು ಹಿಡಿಯುವ ಹೇತುವಾಗಿ ಸ್ವರಾಜ್ಯ ಪಕ್ಷೀಯರಲ್ಲಿ ಬಲವಾದ ವಿಚಾರ ನಡೆದಿದೆ.

ವಿವಿಧ ವರ್ತಮಾನಗಳು

—೦—

ವಿ. ಕೋಳೂರವರು ಬೆಳಗಾವಿಯ ಸರಕಾರೀ ವಕೀಲರಾಗಿ ಪುನಃ ನೇಮಿಸಲ್ಪಟ್ಟರು. ಮೆಸರ್ಸ ದಳವಿ ಮತ್ತು ಭೋಜರು ಇವರಿಗೆ ೧ನೇ ಮತ್ತು ೨ನೇ ಅಸಿಸ್ಟಂಟರಾಗಿ ನೇಮಿಸಲ್ಪಟ್ಟರು.

ಲೋಂಡಾ ಸ್ಟೇಶನದಲ್ಲಿ ಡಿಕ್ಸನನೆಂಬ ಟಿಕಿಟ ಕಲೆಕ್ಟರನು ರಾತ್ರಿಯಲ್ಲಿ ಒಬ್ಬ ಹೆಣ್ಣುಮಗಳ ಮೇಲೆ ಟಿಕಿಟಿನ ನಿಮಿತ್ಯದಿಂದ ಬಲಾತ್ಕಾರ ಮಾಡುವಂಥ ಅಪರಾಧ ಮಾಡಿದನು. ಈ ಆರೋಪದಿಂದ ಈತನ ದಸ್ತಗಿರ ಮಾಡಿದ್ದಾರೆ.

ಶ್ರೀ. ಶ್ರವಣ ಬೆಳಗೊಳದಲ್ಲಾಗುವ ಶ್ರೀ ಮಹಾ ಮಸ್ತಕಾಭಿಷೇಕಕ್ಕಾಗಿ ಹೋಗುವ ಜೈನ ಬಂಧುಗಳ ದೆಸೆಯಿಂದ ಈ ತಿಂಗಳ ೮ ನೇ ತಾರೀಖಿನ ದಿವಸ ಬೆಳಗಾವಿಯಿಂದ ಸ್ಪೇಶಲ ಟ್ರೇನ ಹೊರಡಿಸುವ ಏರ್ಪಾಟು ನಡೆದದೆ.

ಇಂಗ್ಲಂಡದಲ್ಲಿ ಅದ್ಭುತವಾಗಿ ಬಿರುಗಾಳಿ ಬೀಸಿ, ಸಮುದ್ರವು ಅಲ್ಲೋಲ ಕಲ್ಲೋಲವಾಗಿ, ಹಡಗಗಳ ಪ್ರವಾಸಕ್ಕೆ ಆತಂಕ ತಟ್ಟಿದೆ. ಗಾಳಿಯು ಗುಂಟ ಬರ್ಫದ ಮಳೆಯೂ ಬೀಳುತ್ತಿರುವದು.

ನಿಜಾಮ ಇಲಾಖೆಗೆ ಸೇರಿದ ವನಪೂರ್ತಿ ಸಂಸ್ಥಾನದ ದೊಡ್ಡ ಆಸ್ತಿಯು ಮದ್ರಾಸ ಇಲಾಖೆಯಲ್ಲಿಯೂ ಉಂಟು. ಈ ಆಸ್ತಿಯ ಸಂಬಂಧವಾಗಿ ಅಲ್ಪವಯ ಅರಸರ ಪಾಲಕಳಾದ ತಾಯಿ ಶ್ರೀ. ಸರಳಾದೇವಿಗೂ ಕಕ್ಕ ರಾಜಾ ರಾಮದೇವರಾಯನಿಗೂ ಮದ್ರಾಸದ ಹಾಯಕೋರ್ಟಿನಲ್ಲಿ ವ್ಯಾಜ್ಯ ನಡೆದದೆ .

ಹಿಂದುಸ್ಥಾನ ಸರಕಾರದವರು ಡಾಕ್ಟರ ಅನಸಾರಿ ಮತ್ತು ಹಕೀಮ ಅಜಮಲಖಾನರಿಗೆ ವಿಲಾಯತಿಗೆ ಹೋಗಲು ಪಾಸಪೋರ್ಟ ಕೊಟ್ಟಿದ್ದಾರೆ. ಇವರು ವಿಶೇಷವಾಗಿ ಆಶಿಯ ಮುಸಲಮಾನ ರಾಜ್ಯಗಳಲ್ಲಿ ಸಂಚಾರ ಮಾಡುವರು.

ಬಂಗಾಲದ ಗವ್ಹರ್ನರರಾದ ಲಾರ್ಡ ಲಿಟನ ಸಾಹೇಬರು ತಮ್ಮ ಪತ್ನಿಯನ್ನು ವಿಲಾಯತಿಗೆ ಕಳಿಸುವದಕ್ಕಾಗಿ ಮುಂಬಯಿಗೆ ಬರುವರು.

ನಾಗಪೂರ ಇಲಾಖೆಯ ಬ್ರಾಹ್ಮಣೇತರರ ಪರಿಷತ್ತು ಕೂಡಿತ್ತು. ಇದರಲ್ಲಿ ಬ್ರಾಹ್ಮಣರ ಕೂಡ ಸ್ನೇಹಭಾವದಿಂದ ನಡಿಯಬೇಕೆಂಬ ಠರಾವು ಪಾಸಾಯಿತು.

ದೇಶಬಂಧು ದಾಸರು ಬೇಗನೆ ಕಲಕತ್ತೆಗೆ ಬಂದು ಹಿಂದೂ ಮುಸಲಮಾನ ಮೆಂಬರರ ಕಮೀಟಿ ಕೂಡಿಸಿ, ಕೆಟ್ಟದ್ದನ್ನು ಪುನಃ ಅಡುವ ಪ್ರಯತ್ನ ಮಾಡತಕ್ಕವರಿದ್ದಾರೆ. ಕೆಟ್ಟದ್ದನ್ನು ಅಟ್ಟವರೇ ಜಾಣ

ಮುಂಬಯಿ ಮತ್ತು ದಿಲ್ಲಿಯ ನಡುವೆ ಟೆಲಿಫೋನದಿಂದ ಮಾತಾಡುವಂತೆ ತಂತಿಗಳನ್ನು ಹಾಕಿದ್ದಾರೆ.

ಬುಧವಾರದ ದಿವಸ ಪುಣೆ ಮ್ಯುನಿಸಿಪಾಲಿಟಿಯ ಚುನಾವಣೆಯಾಗುವದು. ಇದರ ದೆಸೆಯಿಂದ ಮುಸಲಮಾನರಲ್ಲಿ ಹೊಡೆದಾಟವಾಗಿ, ಪ್ರಕರಣವು ಕಚೇರಿಯ ತನಕ ಹೋಗಿದೆ.

ಧಾರವಾಡ—

ಈ ತಿಂಗಳಲ್ಲಾಗುವ ಮುಲಕೀ ಮತ್ತು ಮ್ಯಾಟ್ರಿಕ ಪರೀಕ್ಷೆಗಾಗಿ ಧಾರವಾಡಕ್ಕೆ ಬರುವಂಥ ಲಿಂಗಾಯತ ವಿದ್ಯಾರ್ಥಿಗಳ ದೆಸೆಯಿಂದ ಇಲ್ಲಿಯ ಶ್ರೀ ಮುರುಘಾ ರಾಜೇಂದ್ರಬೋರ್ಡಿಂಗದಲ್ಲಿ ಹೋದ ವರ್ಷದಂತೆ ಉಚಿತವಾಗಿ ಊಟದ ವ್ಯವಸ್ಥೆ ಮಾಡಲ್ಪಡುವದು ಇದರ ಲಾಭ ಪಡೆಕೊಳ್ಳತಕ್ಕವರು ಆಯಾ ಪರೀಕ್ಷೆಗೆ ಎಂಟು ದಿವಸ ಮುಂದಾಗಿ ತಿಳಿಸತಕ್ಕದ್ದೆಂದು ಚೇರಮನರಾದ ವಿ. ಬಸಪ್ಪಾ ಛಕಮನಹಳ್ಳಿಯವರು ಪ್ರಸಿದ್ಧ ಮಾಡುವದಕ್ಕೆ ನಮಗೆ ತಿಳಿಸಿದ್ದಾರೆ.

ದಿ ಧಾರವಾಡ ಅರ್ಬನ ಕೋ. ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ, ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೋಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ

ಜಿಂದಗಿಯು ಆರುಲಕ್ಷದ ಮೇಲುಂಟು. ಚೆಕ್ಕ, ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ಮಾಡಲ್ಪಡುವದು. ಕಾಯಂ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೆಜಿಂಗ ಡಾಯರೆಕ್ಟರ

ಆರ್. ಎಮ್. ಜ್ಹೋನ್ ಎಂಡ ಸನ್ಸ. ಹುಬ್ಬಳ್ಳಿ.

ಎಜಂಟ್ಸ ಫೋರ ಕಾರ್ಬೋನಿಕ್ ಆಸಿಡ್ಡ ಗ್ಯಾಸ, ಮ್ಯಾನುಫ್ಯಾಕ್ಚರರ್ ಆಫ್ ಏರೆಟೆಡ ವಾಟರ್.

ನಮ್ಮಲ್ಲಿ ಸಿಗುವ ಸಾಮಾನುಗಳ ವಿವರ.

ಫುಲ್‌ಗ್ಯಾಸ ಸಿಲೆಂಡರಗಳು ಇಂಗ್ಲೀಷ ಮತ್ತು ಜರ್ಮನ ಪೇಟೆಂಟ ಕಾಡ್ಸ, ಎಮ. ಬಿ. ಸೋಡಾ ವಾಟರ ಬಾಟಲಗಳು, ೫೧೦ ನಂ. ಸಾಮ



ಇವು ಆರ್ಡರ ಬೇಗ ಕಳಿಸಿರಿ.

[illegible] ಪೆಟ್ಟಿ ೧ ಸಂಖ್ಯವು. ಸೋಡಾವಾಟರ್ ಮಶಿನುಗಳು ಮತ್ತು ಎಲ್ಲ ತರದ ಕಲರಿನ ಬಾಟಲಿಗಳ ಎಸನ್ಸಗಳು, ಅಮೆರಿಕನ್ ಐಯಿಸ್ಕ್ರೀಮ ಸೋಡಾ, ಬನಾನಾ, ಕೋಲಾಚಂಪೇಜನ್, ಲೆಮನ್ ನಂ. ೧ ಲೆಮನ್ ಜುಯಿಸ್ ಸೋಡಾ ನಂ. ೧ ಮೆಂಗೋ, ಆರೇಂಜ, ಫಾಯಿನಾಪಲ್, ಪಿಕ್ಕಮಿಆಪ್, ಕ್ವಿನಿನ್ ಟಾನಿಕ್, ರಾಜಬಿರಿ ನಂ. ೧ ರೋಜ ನಂ. ೧ ಸ್ಟೋನ್ ಜಿಂಜರ್ ಬೀರ ನಂ. ೧, ರಬ್ಬರ್ ರಿಂಗ್ಸ್, ಬೆಸ್ಟ ಇತರ ಮಶಿನರಿ ಪಾರ್ಟುಗಳು ನಮ್ಮಲ್ಲಿ ಸಿಗುತ್ತವೆ. ಮತ್ತು ಶುದ್ಧ ನೀಲಗಿರಿ ಎಣ್ಣೆಯು ಎಲ್ಲ ತರದ ಬಾಟಲ್ಸಗಳು ಸಿಗುತ್ತವೆ. ವ್ಯಾಪಾರಸ್ಥರಿಗೆ ಒಳ್ಳೇ ಕಮೀಶನ್ ಕೊಡುತ್ತೇವೆ. ನಮ್ಮಲ್ಲಿ ಕಬ್ಬಿಣದ ಮಿಲಿಟ್ರಿ ಸಿಂಗಲ ಕಾಟ್ಸಗಳು ಸೋವಿ ದರದಿಂದ ಮಾರಲಿಕ್ಕೆ ಸಿಗುತ್ತವೆ.

ಅಡ್ರೆಸ್— R. M. John & Sons.
Mission Compound HUBLI

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

—o—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೇ ಇಟ್ಟುಕೊಳ್ಳುವ ಬಡ್ಡಿಯು ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಾಗಿರುತ್ತದೆ.

ಎ. ಕೆ. ಕಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ ವರ್ಗಣೀ ದರ

ನಿತ್ಯಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ ,,	೭—೦—೦ ರೂ
೩ ,,	೪—೦—೦ ರೂ
ವಾರಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ
ಮ್ಯಾನೇಜರ ವಿಜಯ, ಧಾರವಾಡ

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಸಾಲುಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಸಾಲಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಸಾಲಿಗೆ ಐದು ಆಣೆ ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಸಾಲುಗಳಿಗೆ ಇಮ್ಮಡಿ. ಬೇರ್ ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

LOKHANDE



ಬಕ್ಷೀಸು ಮತ್ತು ಆರ್ಡರ ವಹಿಗೆ ನೋಡಿರಿ ಹೊಸ ದೊರೆಯುವದು.

ಜೀವನ ಉತ್ತಮ ವಸ್ತು ಸಂಗ್ರಹಗೊಳ್ಳುವ್ವು ನಮ್ಮ ಅಂಗಡಿಯಲ್ಲಿ ಕೃಷಿ ಬಳಸ, ಮೆಸ್ಸಿಂಗ, ಮಧಿಯನ, ಸಿಮೆಂಗಾ ಮತ್ತು ಸ್ವಿಸ ಜನರಲ ಕಂಪನಿ ಮತ್ತು ಬೇರೆ ಪ್ರಸಿದ್ಧ ಕಂಪನಿಗಳ ಗಡಿಯಾರಗಳು ಈಗ ಬಂದಿವೆ, ಇವು ನೋಡಲಿಕ್ಕೆ ಸುಂದರವಾಗಿರುವವಲ್ಲದೆ ಗಟ್ಟಿ ಮತ್ತು ಸರಿಯಾಗಿ ವೇಳೆ ತೋರಿಸುವಂಥವುಗಳಾಗಿವೆ. ಐದು ರೂಪಾಯಿಯಿಂದ ಬೇಕಾದ ಬೆಲೆಯ ಗಡಿಯಾರಗಳು ಸಿಗುವವು. ಕೊಳ್ಳುವಾಗ ಪ್ರತಿಯೊಂದಕ್ಕೆ ಗ್ಯಾರಂಟಿ ಕೊಡುವೆವು. ಒಮ್ಮೆ ಕರಿಸಿ ನೋಡುವಿರಷ್ಟೇ!

ಪ್ರೊಪ್ರಾಯಿಟರ, ದತ್ತಾತ್ರೇಯ ಲೋಖಂಡೆ
ವಾಚ ಎಂಡ ಕ್ಲಾಕ ಮರ್ಚಂಟ ಧಾರವಾಡ.

ದಿ. ಅಂಕಲಗಿ ಬ್ಯಾಂಕ ಲಿಮಿಟೇಡ್
ಧಾರವಾಡ.

—o—

೧೯೧೩ ಇಸ್ವಿಯ ಕಂಪನಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ಚಾಲೂ ಖಾತೆ, ಠೇವು, ಸೇವಿಂಗ್ಸದ ಡಿಪಾಜಿಟ, ಸಾಲ, ವತ್ತಿ, ಹುಂಡಿ, ಮುಂತಾದ ಯಾವತ್ತು ವ್ಯವಹಾರಗಳು ನಡಿಯುವವು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿಮಾಡುವವರಿಂದ ಸಮಕ್ಷಮ ತಿಳಕೊಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ ರಿಂದ ೧೦-೩೦. ಸಾಯಂಕಾಲ ೩ ರಿಂದ ೬ ರವರೆಗೆ ನಡಿಯುವದು.

K.B. Ankalagi
ಮ್ಯಾನೆಜಿಂಗ ಡಾಯರೆಕ್ಟರ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ನಿತ್ಯ ಪತ್ರ | ವಿಜಯ | ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೬ | ಧಾರವಾಡ ಸೋಮವಾರ ತಾರೀಖು ೨ನೇ ಮಾರ್ಚ ೧೯೨೫ (ಸಂಚಿಕೆ ೫

ಕರ್ನಾಟಕ ರೈತರಿಗೊಂದು !

ಬಿನ್ ಬಂಡವಾಳಿನ ವ್ಯವಸಾಯ!!

ಕಿರ್ಲೋಸ್ಕರ ನೇಗಿಲುಗಳ ವ್ಯಾಪಾರ !!!

ಕಿರ್ಲೋಸ್ಕರ ನೇಗಿಲು ಮತ್ತು ಗಾಣಗಳ ಉಪಯೋಗವು, ಮತ್ತು ಮಹತ್ವವು ಹಿಂದುಸ್ತಾನದ ಪ್ರತಿಯೊಬ್ಬ ಒಕ್ಕಲಿಗನಿಗೆ ಗೊತ್ತಿದ್ದ ಮಾತು. ಇವುಗಳಿಗೆ ಗಿರಾಕಿಗಳು ಬಹಳ ಇದ್ದುದರಿಂದ ಇವುಗಳನ್ನು ಖಪಾ ಮಾಡಿಸುವ ದಲಾಲರಿಗೆ ಶ್ರಮ ಬೇಕಿಲ್ಲ. ಕಂಪನಿಯಿಂದ ದೊರೆಯುವ ಕ್ಯಾಟಲಾಗು, ಚೀರೆ ಪತ್ರಿಕೆ, ಗೋಡೆಯ ಚಿತ್ರಪಟ ಇತ್ಯಾದಿ ಜಾಹೀರಾತಿನ ಸಾಮಗ್ರಿಗಳನ್ನು ಕಳಿಸಿ ಹಳ್ಳಿಗಳಲ್ಲಿ ಪ್ರಸಾರ ಮಾಡಿದಲ್ಲಿ ಆರ್ಡರು ದೊರೆಯುವವು. ಈ ಆರ್ಡರ ಕೂಡ ೧/೪ ಹಣವನ್ನು ತೆಗೆದುಕೊಂಡು ಕಂಪನಿಗೆ ಕಳುಹಿಸಿದಲ್ಲಿ ಕಂಪನಿಯು ಅವರವರ ಹೆಸರಿಗೆ ರೈಲ್ವೆಯಿಂದ ಮಾಲು ಕಳಿಸಿ ಉಳಿದ ಹಣಕ್ಕೆ ವ್ಹಿ. ಪಿ. ಮಾಡಿ ದಲಾಲರಿಗೆ ಕಮೀಶನ ಕೊಡುವದು.

ಕಮೀಶನ ದರಗಳ ಬಗ್ಗೆ ಇಂದೇ ಕಾಗದವನ್ನು ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ } ಕಿರ್ಲೋಸ್ಕರವಾಡಿ- ಜಿಲ್ಲಾ ಸಾತಾರಾ.

ಸ್ವಲ್ಪ ೨ ಆಣೆಯೊಳಗೇ ಆಶ್ಚರ್ಯಕಾರಕ ವ ರಾಮಬಾಣ ಉಪಾಯ

ಮೊಮೆಂಟ ಕ್ಯೂರ

ತಲೆಶೂಲಿ, ಅರ್ಧ ತಲೆಶೂಲಿ, ಶೀತ, ಉಷ್ಣ ವ ನಿತ್ರಾಣ ವಗೈರೆಗಳಿಂದಾದ ಮಸ್ತಕಶೂಲಿಯು ಆಶ್ಚರ್ಯದಿಂದ ನಿರ್ಮೂಲ ಮಾಡಲು "ಮೊಮೆಂಟ ಕ್ಯೂರ" ನಿಗೆ ಸರಿಸಮಾನನಾದ ಔಷಧವು ಬೇರೆ ಇಲ್ಲ. ಹೆಚ್ಚು ಜನರು ಮಸ್ತಕಶೂಲೆಯನ್ನು ಸಹಿಸಲು ಆಗದೆ ಮಸ್ತಕಕ್ಕೆ ವಸ್ತ್ರಕಟ್ಟಿ ಎಷ್ಟೋ ವೇಳೆ ಕಾಲವನ್ನು ಕಳೆಯುತ್ತಾರೆ. ಆದರೆ ನಿರಾಶೆಯಾದವರು ಮೋಮೆಂಟ ಕ್ಯೂರದ ಪುಡಿಯನ್ನು ಬಿಸಿ ಚಹಾದೊಂದಿಗೆ ಅಥವಾ ಬಿಸಿ ನೀರಿನೊಂದಿಗೆ ಹೊಟ್ಟೆಯಲ್ಲಿ ತಕ್ಕೊಂಡಲ್ಲಿ ಒಂದೇ ಕ್ಷಣದಲ್ಲಿ ಮಸ್ತಕಶೂಲಿಯು ನಿಲ್ಲುವದು. ಇದಕ್ಕೆ ಅನೇಕ ಶಿಫಾರಸ ಪತ್ರಗಳು ಉಂಟು.

೧ ಚೀಟಿಗೆ ೨ ಆಣೆ. ಸ್ಯಾಂಪಲ ಸಲುವಾಗಿ ೩ ಆಣೆ ಪೋಸ್ಟ ತಿಕೀಟುಗಳನ್ನು ಕಳಿಸಿದಲ್ಲಿ ಕಳಿಸುವೆವು.

ವಿಳಾಸ— ದಿ ಕನಕಾದಿತ್ಯ ಮೆಡಿಕಲ ಸ್ಟೋರ್ಸ್, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ ಸ್ಟೇಶನರೋಡ ಮುಂಬಯಿ.

ಲೋಕಬಂಧು

—೦—

ವಾರಪತ್ರಿಕೆ

ಸಂಪಾದಕರು- ಲಕ್ಷ್ಮಣ ರಾಮಚಂದ್ರ ಪಾಂಗೆ

ಈ ಪತ್ರವು ಧಾರವಾಡದಲ್ಲಿ ಪ್ರತಿ ಶನಿವಾರ ಹೊರಡುತ್ತಿದ್ದು ಇದರಲ್ಲಿ ರಾಜಕೀಯ ಸಾಮಾಜಿಕ ಔದ್ಯೋಗಿಕ, ಶೈಕ್ಷಣಿಕ ಮುಂತಾದ ವಿಷಯಗಳು ಚನ್ನಾಗಿ ಪ್ರತಿಪಾದಿಸಲ್ಪಡುವವಲ್ಲದೆ, ಎಲ್ಲ ಪ್ರಸಕ್ತದ ಸಂಗತಿಗಳು ಸುಲಭ ಭಾಷೆಯಲ್ಲಿ ಬರೆಯಲ್ಪಡುವವು.

ವಾರ್ಷಿಕ ವರ್ಗಣಿ ಮುಂಗಡ ೩—೮—೦

ಮ್ಯಾನೇಜರ,
ಲೋಕಬಂಧು ಆಫೀಸ, ಧಾರವಾಡ.

ಪ್ರಾಥಮಿಕ ಶಿಕ್ಷಕ

—೦—

ಮಾಸಪತ್ರಿಕೆ.

ಸಂಪಾದಕರು- ಲಕ್ಷ್ಮಣ ರಾಮಚಂದ್ರ ಪಾಂಗೆ.

ಉತ್ತರ ಕರ್ನಾಟಕದ ಪ್ರಾಥಮಿಕ ಶಿಕ್ಷಕರ ಹಿತ ಸಂಬಂಧವನ್ನು ಕುರಿತು ಅತ್ಯಂತ ಕಳಕಳಿಯಿಂದ ಪ್ರಯತ್ನ ನಡಿಸುತ್ತಿರುವ ಮಾಸಪತ್ರಿಕೆಯು. ಶಿಕ್ಷಕರು ಇದನ್ನು ತಕ್ಕೊಳ್ಳಲು ಅಡ್ಡಿಯಿಲ್ಲೆಂದು ಕೌನ್ಸಿಲ್ಲದವರೂ, ಶಾಲಾಧಿಕಾರಿಗಳೂ ಒಪ್ಪಿರುವರು.

ವಾರ್ಷಿಕ ವರ್ಗಣಿ ಮುಂಗಡ ೨—೦—೦.

ಮ್ಯಾನೇಜರ
ಪ್ರಾಥಮಿಕ ಶಿಕ್ಷಕ ಆಫೀಸ, ಧಾರವಾಡ

ಧಾರವಾಡ—

ನಿನ್ನಿನ ದಿವಸ ಈ ಊರಲ್ಲಿ ಬ್ರಾಹ್ಮಣರ ಪ್ರಾಸ್ತಾವಿಕ ಕಮಿಟಿ ಕೂಡಿತ್ತು. ದೊಡ್ಡ ಪ್ರಮಾಣದಿಂದ ಜಿಲ್ಹೆಯ ಬ್ರಾಹ್ಮಣರ ಪ್ರಮುಖರಾದ ಹಾಗು ಪ್ರತಿನಿಧಿಗಳ ಪರಿಷತ್ತು ಕೂಡಿಸಿ, ಬ್ರಾಹ್ಮಣರ ಉದ್ಯೋಗಾಭಿವೃದ್ಧಿಯ ಯೋಜನೆ ಮಾಡಬೇಕೆಂದು ಗೊತ್ತಾಯಿತು.

ವಿಜಯ.

ಧಾರವಾಡ ತಾ– ೨–೩–೨೫ ನೇ ಇಸ್ವಿ

ಸರಕಾರ, ಸ್ವರಾಜ್ಯ ಮತ್ತು ಸ್ವತಂತ್ರ ಪಕ್ಷಗಳ ಸ್ವಾಗ್ಯುದ್ಧ.

—೧—

ರೇಲ್ವೆಯ ಆಜ್ಞಾಪತ್ರ [illegible] ಸ್ವರಾಜ್ಯ ಮತ್ತು ಸ್ವತಂತ್ರ ಪಕ್ಷಗಳ ನಡುವೆ [illegible] ಸಾಧ ಸೋಲವೇ ಈ ವಿಷಯವು [illegible] ಚೆಗೆ ಬಂದಿತು. [illegible] ಸರ್ಕಾರವು [illegible] ಯಾವ ರೀತಿಯಿಂದಲೂ [illegible] ಲಂಕವನ್ನು ಕಡಿಮೆ ಮಾಡದ್ದರಿಂದ [illegible] ಮಂಜೂರು ಮಾಡುವದೇ ಸ್ಪಷ್ಟವೆಂದು [illegible] ತು. ಇದಕ್ಕೆ ಸ್ವತಂತ್ರ ಪಕ್ಷೀಯರು [illegible] ಸರಕಾರದ ಅವಳತೆಯನ್ನು [illegible] ದಿ, ತಮ್ಮ ಅನಸ್ಥಿತಿಯನ್ನು ತೋರಿಸಬೇಕೆಂದು [illegible] ಹಿಡಿದು, [illegible] ತಳ್ಳಿಕೊಳ್ಳುವಾಗ, [illegible] ದಂತೆ ಮತ ಕೊಟ್ಟು, ಸ್ವರಾಜ್ಯ ಪಕ್ಷೀಯರ [illegible] ಲಿಗೆ ಸೋಲು ತಂದರು.

ಸರಕಾರವು ರೇಲ್ವೆ ಬಾಬತಿಯನ್ನು [illegible] ಮಾಡಿದರೂ, ಅದರಲ್ಲಿ ಹಿಂದೀ ಜನರ [illegible] ಬಾಗುವಂಥ ಒಂದಾದರೂ ಕೃತ್ಯ ಮಾಡ[illegible] ಲ್ಲ. ಜೇಪೀಚಿನಲ್ಲಿ ಕೆಲಸ ಮಾಡತಕ್ಕಂಥ [illegible] ದ್ಧತೀಯು ತಜ್ಞರು ಇಲ್ಲವೇ ಇಲ್ಲೆಂದು [illegible] ತು. ಸರ ವಿಶ್ವೇಶ್ವರಯ್ಯನವರು ಸಾಮಾನ್ಯರೇ ಎಂದು ಪ್ರಶ್ನೆ ಮಾಡಲು ಸ್ಥಳ ತೆರವಾಗಲಿ: [illegible] ರಿಯ ಸಾಹೇಬರು ಹೋಗತಕ್ಕವರಿದ್ದಾರೆ. ಆಗ [illegible] ಸೂಚನಾ ಎಂಬದಾಗಿ ಉತ್ತರ ಕೊಟ್ಟರ [illegible] ನಿಶ್ಚಯದ ಮಾತು ಹೇಳಲೇ ಇಲ್ಲ. ಮೂರನೇ ವರ್ಗದ ಪ್ರವಾಸಿಕರಿಂದಲೇ ಉತ್ಪನ್ನವಿದ್ದು, [illegible] ಭಾಷೆ ಎನ್ನುವದರ ಬದಲು ಅನ್ನದ ಸೌಕರ್ಯ ನೋಡುತ್ತೀರೆಂದರೂ ಪ್ರತಿ ವರ್ಷ [illegible] ವರ್ಷದಲ್ಲಿ ೩೪ [illegible] ಲು ರೇಲ್ವೆ ಪ್ರವಾಸ ಮಾಡುತ್ತಾನೆ. ಮತ್ತು ಅತ[illegible] ನ ಬಾಳಿಗೆ ಮೂರನೇ ವರ್ಗದ ಪೆಟ್ಟಿಗೆ ಒರುತ್ತದೆಂದು ಅಂಕಿಗಳ ಬಂಗಾಳಿ ಅವನ್ನು ತೋರಿಸಿದರಲ್ಲ. ಈ ಬಗ್ಗೆ ಎರಡು ಸಹಾನುಭೂತಿಯ ಮಾತುಗಳನ್ನು ಸಹ ಆಡಲಿಲ್ಲ.

ಸರಕಾರದ ಈ ಪರಿಯ ಏಕಪಕ್ಷೀಯ ಮತ್ತು ಪಕ್ಷಪಾತದ ವರ್ತನವನ್ನು ಪಂಡಿತ ಮೋತೀಲಾಲರು ತೀವ್ರ ಶಬ್ದಗಳಿಂದ ನಿಷೇಧಿಸಲು ರೇಲ್ವೆಯ ಮಂತ್ರಿಯಾದ ಸರ ಇನ್ಸ ಸಾಹೇಬರು ಇವರ ಮೇಲೆ ಮೂರನೆಯ ಕಣ್ಣು ತೆಗೆದವರಂತೆ ಕೋಪ ಪರವಶರಾಗಿ "ಪಂಡಿತರೇ ಸರಕಾರದ ಎಲ್ಲ ಖಾತೆಗಳಿಗೆ ಹಣದ ಮಂಜೂರಿ ಕೊಡಬೇಡಿರಿ. ಘಟನಾತ್ಮಕ ರಾಜ್ಯ ಪದ್ಧತಿಗೆ [illegible] ಅಲ್ಲಾಬಾದಕ್ಕೆ ಹೋಗಿ, ಸ್ವರಾಜ್ಯ ಸೈನ್ಯ ಕೂಡಿಸಿ, [illegible] ಪಡೆಯ ಹೊಸ ಕಾರ್ಯಗಳಾಗಿರಿ" ಎಂಬದಾಗಿ ಬಿರುನುಡಿಗಳನ್ನು ಆಡಿದರು. [illegible] ಇವರಿಗೆ ಉತ್ತರವಾಗಿ ಪಂಜಾಬದ ಶ್ರೀ [illegible] ಅವೇಶಪೂರ್ಣ ಭಾಷಣ ಮಾಡಿದರು. ಅದೇನೆಂದರೆ—

"ಪಂಡಿತರೇ, [illegible] ಅಲ್ಲಾಬಾದಿಗೆ ಹೋಗಿ [illegible] ಕೂಡಿಸಿ, [illegible] ಯುದ್ಧ ಮಾಡಿದರೆ [illegible] ಸಾಹೇಬರು [illegible] ಈ ತರದಿಂದ [illegible] ಸಾಹೇಬ [illegible] ಕೊಟ್ಟಂತಾಗುವದಿ[illegible] ಯುದ್ಧಕ್ಕೆ [illegible] (ಗೋ[illegible] ಯುದ್ಧವಾಗುವದೇ[illegible]) ಸರಕಾರದ ಬೆಂಡುಗಳ ಮೇಲೆ [illegible] ಬಂದೂಗಾರರೇ ಆಗಿದ್ದೀರಿ. ನಾ[illegible] ರಾಜ್ಯವಾಳಬೇಕೆಂದು [illegible] ನಮ್ಮ ಬಾಯಿಗೆ ಹಂದು ತುರುಕಬೇಕೆ[illegible]. ನಿಮ್ಮನ್ನು ಗಂಟು ಗಡಡಿ ಸಹಿತವಾಗಿ [illegible] ಅಧಿಕಾರದಿಂದ ಬಿಡ್ಡು [illegible] ಬೇಕೆಂದು ನಮ್ಮ ಹೇತುವಾಗಿದೆ"

ಮದ್ರಾಸ ಸರಕಾರದ ಪ್ರತಿನಿಧಿಯಾದ ಮಿ. [illegible] ಸಾಹೇಬರು ಪಂಡಿತರ ಭಾಷಣದ ಮೇಲೆ ಟೀಕೆ ಮಾಡಿ, ಹೋದ ವರ್ಷ ಬಜೆಟ್ಟನ್ನು ನಾಮಂಜೂರ ಮಾಡಿದ್ದರಿಂದ ಬಜೆಟ್ಟಿನ ಮೇಲೆ ಯಾವ ಅನಿಷ್ಟ ಪರಿಣಾಮವಾಗಲಿಲ್ಲೆಂದು ಹೇಳಿ, [illegible] ಪಾಂದಲ್ಲಿ ರಾಜಕಾರಣವನ್ನು ಸೇರಿಸಬಾರದೆಂದನು. ರೇಲ್ವೆಯುಂಟಂತಹೇ ದೂರ ದೂರದವರು ದಿಲ್ಲಿಯಲ್ಲಿ ಕೂಡುತ್ತಿರೆನ್ನಲು ನೀವೇನು ಇಂಗ್ಲಂಡದಿಂದ ಇಳಿದು ಬಂದಿರುವಿರಾ ಎಂಬದಾಗಿ ಶ್ರೀ. ಪಟೇಲರು ಮರ್ಮಭೇದಕ ಪ್ರಶ್ನೆ ಮಾಡಿದರು. ಇವರಿಗೆ ಉತ್ತರವಾಗಿ ಮದ್ರಾಸದವರೇ ಶ್ರೀ. ರಂಗಯ್ಯರು ಮಾಡಿದ ಭಾಷಣವು ಎದೆಗೆ ಬಾಣ ಹೊಡೆದು, [illegible] ಮಾಡಿದಂತಾಯಿತು. ಇವರು ಅಂದದ್ದೇನಂದರೆ–

"ಇಂಗ್ಲಿಷರು ಹಿಂದುಸ್ಥಾನಕ್ಕೆ ಅಂಗಡಿಕಾರರಾಗಿ ಬಂದರು. ಇಂಗ್ಲಂಡವು ಅಂಗಡಿಕಾರರ ನಾಡಾಗಿರುತ್ತದೆಂದು ನೆಪೋಲಿಯನ ಬೋನಾಪಾರ್ಟನು ತಿರಸ್ಕಾರ ಬುದ್ಧಿಯಿಂದಲೇ ಅಂದಿದ್ದಾನೆ. ಇವರು ಪರದೇಶಗಳಿಗೆ ಸಮುದ್ರದ ನಾಯಿಯಂತೆಯೂ ಸುಲುಕೊಳ್ಳುವವರಂತೆಯೂ ಹೋಗಿದ್ದಾರೆ. (ದೊಡ್ಡ–ನಗೆ) ಇಷ್ಟಕ್ಕೆ ಸಾಲದೂ ದುವ ಸಾಹುಕಾರರಂತೆ ಹೋದರು. ಹಿಂದುಸ್ಥಾನಕ್ಕೆ ಬಂದು ಇಲ್ಲಿಯ ಔದ್ಯೋಗಿಕ ಚಟುವಟಿಕೆಯನ್ನು ನಿಲ್ಲಿಸಿಬಿಟ್ಟರು. ಇದನ್ನು ಬಂದು ಮಾಡುವಾಗ ರಾಜಕೀಯ ಶಸ್ತ್ರವನ್ನೇ ಉಪಯೋಗಿಸಿದರು. ಅಂದ ಬಳಿಕ ನಾವು ವ್ಯಾಪಾರ ಮತ್ತು ರಾಜಕಾರಣವನ್ನು [illegible]? ಹಿಂದುಸ್ಥಾನವು [illegible] ವರ್ಷಗಳಿಂದ [illegible] ಆಳಿಕೆಯಲ್ಲಿ [illegible]. [illegible] ದೊರೆತನವನ್ನು [illegible]. ಈ ವಾಗಿಗೆ [illegible] ನಮ್ಮನ್ನು [illegible] ವ್ಯಾಪಾರದ ರಾಜ್ಯ [illegible] ವ್ಯಾಪಾರದ [illegible] ಮಾಡುವದಕ್ಕಾಗಿ ನಿಮ್ಮ [illegible] ಗಳು [illegible] ಅಸ್ತಿತ್ವದಲ್ಲಿವೆಯೋ?"

ಸ್ವರಾಜ್ಯ ಮತ್ತು ಸರಕಾರ ಪಕ್ಷದ ಹೊಂ[illegible] ನಡುವೆ ಈ ಪ್ರಕಾರ [illegible] ನಡೆದಿರಲು, ಸ್ವತಂತ್ರ ಪಕ್ಷೀಯರು [illegible] ಮಾಡಿದ್ದರು. [illegible] ಪ್ರಸಂಗದಲ್ಲಿ ಸ್ವ[illegible] ಪಕ್ಷೀಯರು [illegible] ಸ್ವರ [illegible] ಕಷ್ಟ [illegible]. ಈ ವರ್ಷ [illegible] ತಪ್ಪನ್ನು ಮತ್ತೆ ಮಾಡುವದಿಲ್ಲೆಂದು [illegible] ತಪ್ಪು [illegible] ಭಾಷಣ ಮಾಡಿ, [illegible] ಕೊಟ್ಟರು. [illegible] ಲ್ಲಿ ಮೂವರು ಸ್ವರಾಜ್ಯ ಪಕ್ಷಕ್ಕೆ ಅನುಕೂಲರಾಗಿ ಮತ ಕೊಟ್ಟರು.

ಸ್ವರಾಜ್ಯ ಪಕ್ಷೀಯರ ತರುವ ಅವಮಾನ ದೊಂದಿನ ಬಳಿಕ ಸ್ವತಂತ್ರ ಪಕ್ಷೀಯರ ನಿಷೇಧದ [illegible]. ಪಂಡಿತ ಮೋತೀಲಾಲರ [illegible] ಸ್ವರಾಜ್ಯ ವಾದಿಗಳೆಲ್ಲರು ಇವರಿಗೆ ಅನುಕೂಲವಾಗಿ ಮತಕೊಡಲು ಸರಕಾರದ ನೆತ್ತಿಯ ಮೇಲೆ ಈ ಗೂಟ ಕೂತಿತು. ಸರಕಾರವು ಈ ಸೋಲ[illegible] ವನ್ನು ಹೇಗೆ ತಾಳಿಕೊಳ್ಳುವದು? ಕೆಂಪುದ್ದವರ [illegible] ದಿವಸಗಳು ನಿಜವಾಗಿ ಹಿಂದಾ[illegible].

ರಸ್ತೆಯ ಚೋತಿಸಮಾಚಾರಾಂಶ

ಪಂಡಿತ ಶಂಕರ ಶಾಸ್ತ್ರಿ ಮಹಾ ಭವಿಷ್ಯ.

ಲಾರ್ಡ ರೀಡಿಂಗ ಸಾಹೇಬರ ಅವಧಿ [illegible] ವರ್ಷದವರ ಕಟ್ಟೇಯದವರಾಗಿದ್ದರೂ, ಅವರ [illegible] ಸ್ಥಳದಲ್ಲಿ ಬಂದವರು ಹಿಂದುಸ್ಥಾನದ ಗವ್ಹರ್ನರ ಜನರಲರಾಗುವರು. [illegible] ನ ಹೊಡಬನೆಯ ಅಕ್ಷರವು ಸಿ, ಎಲ್, ಎಮ್, [illegible] ಅಥವಾ ಎ ಆಗುವದು. ಇವರ ಆಳಿಕೆಯಲ್ಲಿ ಹಿಂದುಸ್ಥಾನದ ದೊರೆತನದಲ್ಲಿ ಬಹುವಾಗಿ ಬದಲಾವಣೆಯಾಗುವದು!

ಅಸಂಬದ್ಧ ಪ್ರಲಾಪ.

—೦—

ಲೆಜಿಸ್ಲೇಟಿವ್ಹ ಅಸೆಂಬ್ಲಿಯಲ್ಲಿ ರೇಲ್ವೆಯಲ್ಲಿ ಪ್ರವಾಸ ಮಾಡುವ ಯುರೋಪಿಯನ ಮತ್ತು ಯುರೇಶಿಯನ್ನರಿಗಾಗಿ ಸ್ವತಂತ್ರವಾದ ಕಂಪಾರ್ಟಮೆಂಟನ್ನು ಕಾದಿಡಬಾರದೆಂದು ಪಾಸಾದ ಠರಾವನ್ನು ಕೌನ್ಸಿಲ ಆಫ ಸ್ಟೇಟದ ವೃದ್ಧರೆಂಬ ಬುದ್ಧಿವಂತ ಮೆಂಬರರು ನಾಮಂಜೂರ ಮಾಡಿದರು. ಈ ಸಮಯದಲ್ಲಿ ಮತ್ತು ಈ ಬಗ್ಗೆ ಜನರು ಆಡಿದ ಮಾತುಗಳು ತೀರ ಅಪ್ರಯೋಜಕ ಮತ್ತು ಅಸಂಬದ್ಧವಾಗಿರುತ್ತವೆ. ರೇಲ್ವೆ ಸ್ಟೇಶನಗಳಲ್ಲಿ ಹಿಂದೂ ಆಹಾರ ಗೃಹ, ಹಿಂದೂ ಜನರಿಗಾಗಿ [illegible] ಸ್ವತಂತ್ರ ವ್ಯವಸ್ಥೆಯು [illegible] ಹಿಂದೂ ಜನರು ಈ ಪ್ರಕಾರ ವ್ಯವಸ್ಥೆಯನ್ನು ಅಪೇಕ್ಷಿಸುವಾಗ ಯುರೋಪಿಯನ್ನರು ಸ್ವತಂತ್ರವಾದ ಪ್ರಯಾಣದ ವ್ಯವಸ್ಥೆಯನ್ನೇ ಬಯಸುವದು [illegible] ಕೇಳುತ್ತಾರೆ. ಇಂಥ ವಿಚಾರವು [illegible] ಪಂಡಿತರಿಗೇ ಒಪ್ಪುವಂಥ [illegible] ತೀರ್ಥಗಳಲ್ಲಿ ಧರ್ಮ [illegible] ಪ್ರವಾಸ [illegible] ದೊಂದನ್ನು [illegible] ಪಾತ್ರರಾಗುವದಿಲ್ಲ. [illegible] ಜಾಗಿ ಬೇರೆಯವನ್ನು [illegible] ರೇಲ್ವೆಯಲ್ಲಿ [illegible] [illegible] ಜಾತಿಯ [illegible] ದೇಟುತಿರುತ್ತದೆ. ಇದಕ್ಕೆ ಹಿಂದೀ [illegible] ಧೋಫ ಭಾವನ್ನು [illegible] ನೋಡಿ [illegible] ಅಧ್ಯಕ್ಷರಾಗುತ್ತದೆ. ಹಾಗೆ ಮನಸಿನ [illegible] ಯಿಂದ [illegible] "ಹಿಂದೂ ಜನರು [illegible] ಪ್ರವಾಸ ಮಾಡಲಿಚ್ಛಿಸುವ [illegible] ಯುರೋಪಿಯನ ಮತ್ತು ಹಿಂದೀ ಜನರು ಬೇರೆ ಬೇರೆ [illegible] ಹಿಂಸೆ [illegible] ರತ್ತವಾಗುವದು" ಎಂಬವಾಗಿ ಮಾತಾಡುವ ಅನೇಕ ಮೆಂಬರರು ಹೊಳ್ಳಿನ ನಕ್ಷಕ್ಕೆ ರೇಲ್ವೆಗಳು [illegible] ಇವುಗಳಲ್ಲಿ [illegible] ಮಿಸ್ಟರ ಖಾಪರ್ಡೆ, ಸಾತಾರೆಯ ಕರಂದೀಕರ, ಮದ್ರಾಸ ನಟೇಶನ ಮೊದಲಾದವರು ವಾದಿಸಿದರು. ಇವರ ಮಾತು ಅರಣ್ಯ ರೋದನವಾಗಿ ಠರಾವು ನಾಮಂಜೂರಾಯಿತು.

ಪದವಿಗಳು ಬೇಡೆಂಬ ಬಿನ್ನಹ.

ದಕ್ಷಿಣ ಆಫ್ರಿಕೆಯವರು ತಮ್ಮ ಜನರಿಗೆ ಬಾದಶಹರು ದಯಮಾಡಿ ಪದವಿಗಳನ್ನು ಕೊಡಬಾರದೆಂದು ಬಿನ್ನಹ ಮಾಡಿಕೊಳ್ಳಬೇಕೆಂಬ ಠರಾವು ಪಾಸ ಮಾಡಿದರು. ಪದವಿಯೆಂದರೆ ದಾಸ್ಯವೃತ್ತಿಯೆಂದು ಅವರು ತಿಳಿದಿದ್ದಾರೆ. ಹಿಂದುಸ್ಥಾನದ ಪದವಿಗಳಿಗಾಗಿ ಹಪಾಪಿಸುವವರಿಗೆ ಇಂಥ ಸುಬುದ್ಧಿ ಯಾವಾಗ ಬರುವದು!

ಕೋರ್ಟ ಫೀ ಸ್ಟಾಂಪ ಹೆಚ್ಚಿಸುವ ಬಿಲ್ಲು ನಾಮಂಜೂರಾಯಿತು.

—೦—

ಶುಕ್ರವಾರ ಸಾಯಂಕಾಲದಲ್ಲಿ ಈ ಬಿಲ್ಲಿನ ಬಗ್ಗೆ ಮತ ತಕ್ಕೊಳ್ಳಲು ಸರಕಾರ ಪಕ್ಷಕ್ಕೆ ೪೩ ಮತ್ತು ಲೋಕಪಕ್ಷಕ್ಕೆ ೪೪ ಮತಗಳು ಬಿದ್ದು ಬಿಲ್ಲು ನಾಮಂಜೂರಾಯಿತು. ಮಿಸ್ಟರ್ ಕಂಬಳಿ, ದಳವಿ ಮತ್ತು ಅಂಗಡಿಯವರು ಸರಕಾರ ಪಕ್ಷಕ್ಕೆ ಮತಕೊಟ್ಟರು. ಪ್ರಜರಲ್ಲಿ ಬಂದು ದುಷ್ಟ ಪದ್ಧತಿಗೆ [illegible] ಇವರು ಮಿ. ಅಂಗಡಿಯವರು [illegible], ಸರಕಾರದಂತೆ ಮತಕೊಟ್ಟದ್ದು [illegible]! ಮಿಸ್ಟರ್ [illegible], ಮೋಗ [illegible], ಕಿರ್ಕಿಯವರು ಪ್ರಜಾಪಕ್ಷಕ್ಕೆ ಅನುಕೂಲವಾಗಿ ಮತಕೊಟ್ಟಿರುವರು.

ಬಂಗಾಲದ ರಾಜಕಾರಣಗಳು.

—೦—

ಬಂಗಾಲದ ಕೌನ್ಸಿಲದಲ್ಲಿ ಸ್ವರಾಜ್ಯ ಪಕ್ಷೀಯರು [illegible] ಹೆಚ್ಚಳಿಯಂತೆ ಗರ್ಜನೆ ನಡೆಸಿದೆ. [illegible] ಸೋಲು ಗೆಲವು ಇದ್ದೇ [illegible]. ಇಂಗ್ಲಂಡದಲ್ಲಿ ಕಾನ್ಸರವೇಟಿವ್ಹ ಪ್ರಧಾನ ಮಂಡಳದವರೂ, ಇವರ ಒಂದು ಬಿಲ್ಲಿನ [illegible] ಸೋತರು. ಲಂಡನ ಪಟ್ಟಣಕ್ಕೆ ವಿದ್ಯುತ್ತನ್ನು ಪೂರೈಸುವ ವಿಷಯವಾಗಿ ಒಂದು ಕಂಪನಿಯ ಬಿಲ್ಲು ಸರಕಾರದಿಂದ ಬರಲ್ಪಟ್ಟಿತು. ಈ ಬಿಲ್ಲು ಸ್ವತಂತ್ರ ರೀತಿಯಿಂದ ಉದ್ಯೋಗ ವ್ಯವಸಾಯ ಮಾಡುವವರಿಗೆ ಆತಂಕ ತರುವ ಕಾರಣ ಇದನ್ನು ನಾಮಂಜೂರ ಮಾಡಬೇಕೆಂದು ಕಾನ್ಸರವೇಟಿವ್ಹ ಪಕ್ಷದವರೇ ಆದ ಅನೇಕ ಮೆಂಬರರು ವಿರೋಧಿಸಿದರು. ಕಾಮಗಾರರೂ, ಲಿಬರಲರೂ ಇದರ ಲಾಭ ತಕ್ಕೊಂಡರು. ಮತತಕ್ಕೊಳ್ಳುವಾಗ ಸರಕಾರ ಪಕ್ಷಕ್ಕೆ ಎಂಟಕ್ಕು ಮತ್ತು ವಿರುದ್ಧ ಪಕ್ಷಕ್ಕೆ ಅದಕ್ಕೆ ಒಂದು ನೂರು ಹೆಚ್ಚು (೧೮೦) ಮತಗಳು ಬಿದ್ದವು. ಕೂಡಲೆ ಜಯಶಾಲಿಗಳು ಮಂತ್ರಿಗಳಿಗೆ ರಾಜೀನಾಮೆ ಕೊಡಿರೆಂದು ಸಭೆಯು ತುಂಬ ಘೋಷ ಗರ್ಜನೆ ಮಾಡಿದರು!!

ಮಹಾಯುದ್ಧದ ವೇಳೆಯಲ್ಲಿ ಜರ್ಮನರು ರೋಮಾನಿಯಾದ ದೊಡ್ಡ ಭಾಗವನ್ನು ಆಕ್ರಮಿಸಿದ್ದರು. ಇದರಿಂದ ರೋಮಾನಿಯಕ್ಕಾದ ಹಾನಿಯನ್ನು ತುಂಬಿಕೊಡಬೇಕೆಂದು ರೋಮಾನಿಯರು ಜರ್ಮನಿಯ ಮುಂಬಾಳ ಬಿದ್ದಿರುತ್ತಾರೆ. ಜರ್ಮನರು ಇಂಗ್ಲೇಂಡ ಫ್ರಾನ್ಸಗಳಿಗೇ ಕೊಡ್ಬ ಹಾಕಲೊಲ್ಲರು. ಅಂದಬಳಿಕ ರೋಮಾನಿಯದಂಥ ಚಿಕ್ಕ ದೇಶದ ಪಾಡೇನು? ಜರ್ಮನಿಯು ಜೀವವೆಂದು ವ್ಯಾಪಾರವು. ಇದನ್ನೇ ಬಂದು ಮಾಡಿದರೆ ಅದು ತಾನಾಗಿ ಜೊಗ್ಗಿ ನಡೆಯುವದೆಂದು ರೋಮಾನಿಯರು ತಿಳಿದುಕೊಂಡು ಅದಕ್ಕೆ ಬಹಿಷ್ಕಾರದ ಭಯ ಹಾಕಿದ್ದಾರೆ.

ಇಂಗ್ಲೇಂಡ ಮತ್ತು ಫ್ರಾನ್ಸದೇಶದ ನಡುವೆ ಆಗುವ ಪರಸ್ಪರ ಆತ್ಮರಕ್ಷಣೆಯ ಒಪ್ಪಂದದಿಂದ ಇಂಗ್ಲಿಷ ಸಮುದ್ರದಲ್ಲಿ ಮಾತ್ರ ಇಂಗ್ಲಿಷರು ನಿರ್ಭೀತರಾಗುತ್ತಾರೆ. [illegible] ವಿಚಾರದಲ್ಲಿ [illegible] ತಲೆಯುಳಿಯಲು [illegible]. ಅಷ್ಟೇ ಅಲ್ಲದೆ [illegible], ಇಂಗ್ಲಂಡ ಫ್ರಾನ್ಸಗಳು ಸ್ವಂತದ ಮಟ್ಟಿಗೆ ಒಪ್ಪಂದ ಮಾಡಿಕೊಳ್ಳುವದು ಯುದ್ಧದ ದು [illegible] ಎಂಬವಾಗಿ [illegible] ರಾಷ್ಟ್ರಗಳ ಪ್ರಧಾನಿಯು [illegible].

ಕೌನ್ಸಿಲ ಮತ್ತು ಅಸೆಂಬ್ಲಿಯ ಸುದ್ದಿಗಳು.

—೦—

ಸರ ದೇಸಾಯ [illegible] ಕೌನ್ಸಿಲರರಾದ ಬಳಿಕ ಎಷ್ಟು [illegible] ಪೋಲೀಸ ಮತ್ತು ನ್ಯಾಯಖಾತೆಯ ಪತ್ರಗಳನ್ನು ತಾವೇ ನೋಡುವರು. ಇದೇನು ಇವರಿಗೆ [illegible] ಎಂದು [illegible] ಕೌನ್ಸಿಲದಲ್ಲಿ ಉದ್ಗಾರ ತೆಗೆದಿದ್ದಾರೆ.

ವಿಜಾಪೂರ ಜಿಲ್ಲೆಯ ಮೆಂಬರರಾದ ಶ್ರೀ. ರಕ್ಷಸಗಿ ಸರ ದೇಸಾಯರು ಕೌನ್ಸಿಲದಲ್ಲಿ ಭಾಷಣ ಮಾಡಿದರು. ಆದರೆ ಅವರ ಮಾತು ಕೇಳಸಲೇ ಇಲ್ಲೆಂದು ರಿಪೋರ್ಟರರು ಗುಣಗುಟ್ಟಿದ್ದಾರೆ.

ರೇಲ್ವೆಯಲ್ಲಿ [illegible] ವರ್ಗದ ಪ್ರಯಾಣಿಕರ ದರವನ್ನು ಕಡಿಮೆ ಮಾಡಬೇಕೆಂಬ ಠರಾವು ಆ ಅಸೆಂಬ್ಲಿಯಲ್ಲಿ ಬಹುಮತದಿಂದ ಪಾಸಾಯಿತು.

ರೇಲ್ವೆ ಪ್ರವಾಸದಲ್ಲಿ ಸಾಹೇಬ ಮತ್ತು ಹಿಂದೂ ಎಂಬ ಜಾತಿಭೇದ ಮಾಡಬಾರದೆಂದು ಅಸೆಂಬ್ಲಿಯಲ್ಲಿ ಪಾಸಾದ ಠರಾವನ್ನು ಕೌನ್ಸಿಲ ಆಫ ಸ್ಟೇಟ ಹಿರಿಯರೆಂಬ ಬುದ್ಧಿವಂತರು ನಾಮಂಜೂರ ಮಾಡಿದರು.

ಇದೇ ಪ್ರಕಾರ ಇವರು ಸರ ಶಿವರಿಂಗ ಗೌಡರು ಫೌಜದಾರಿ ಕಾಯದೆಯ ಬಿಲ್ಲನ್ನು ರದ್ದ ಮಾಡಿ, ಯುರೋಪಿಯನ ಮತ್ತು ಹಿಂದೀ ಎಂಬ ಭೇದ ಬುದ್ಧಿಯನ್ನು ಸ್ಥಿರ ಪಡಿಸಿದರು.

ದಿ ಧಾರವಾಡ ಅರ್ಬನ ಕೋ. ಆಪರೆಟಿವ್ಹ ಬ್ಯಾಂಕ ಲಿಮಿಟಿಡ.

ಮಂಗಳವಾರ ಪೇಟೆ, ಧಾರವಾಡ.

ಕೋ. ಆಪರೇಟಿವ್ಹ ಕ್ರೆಡಿಟ ಸೋಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ

ಜಿಂದಗಿಯು ಅನುಲಕ್ಷದ ಮೇಲಿಟು ಚೆಕ್ಕು, ಹುಂಡಿ ಮೊದಲಾದ ಬ್ಯಾಂಕಿನ ಎಲ್ಲ ಪ್ರಕಾರದ [illegible] ರ ಮಾಡಲ್ಪಡುವವು. ಠಾವಿಯ ಮತ್ತು ಬೇರೆ ತರದ ಠೇವುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ಆರ್. ಎಮ್. ಜ್ಹಾನ್ ಎಂಡ ಸನ್ಸ ಹುಬ್ಬಳ್ಳಿ.

ಎಲ್ಲ ತರದ ಕಾರ್ಬೋನಿಕ್ ಆಸಿಡ್ಡ ಗ್ಯಾಸ, ಮ್ಯಾನ್ಯುಫ್ಯಾಕ್ಚರರ್ ಎಪ್ ಏರೆಟಿಡ ವಾಟರ್.



ನಮ್ಮಲ್ಲಿ ಸಿಗುವ ಸಾಮಾನುಗಳ ವಿವರ

ಫುಲ್‌ಗ್ಯಾಸ ಸಿಲೆಂಡರಗಳು ಇಂಗ್ಲೀಷ ಮತ್ತು ಜರ್ಮನ ಪೇಟೆಂಟ ಕಾರ್ಕ್ಸ್, ಎಂ. ಟಿ ಸೋಡಾ ವಾಟರ ಬಾಟಲಗಳು, [illegible]



ತಾವು ಆರ್ಡರ ಬೇಗ ಕಳಿಸಿರಿ.

[illegible] ೧ [illegible] ಸೋಡಾವಾಟರ್ ಮಶಿನುಗಳು ಮತ್ತು ಎಲ್ಲ ತರದ ಕಲರಿನ ಬಾಟಲಿಗಳ ಎಸನ್ಸಗಳು, ಅಮೇರಿಕನ್ ಆಯಿಸ್ಕ್ರೀಮ ಸೋಡಾ, ಬನಾನಾ, ಕೋಲಾಚೆಂಪೇಜನ್, ಲೆಮನ್ ನಂ. ೧ ಲೆಮನ್ ಜುಯಿಸ್ ಸೋಡಾ ನಂ. ೧ ಮೆಂಗೊ, ಆರೇಂಜ, ಫಾಯಿನಾಪಲ್, ಪಿಕ್ಕವಿ.ಆಪ್, ಕ್ವಿನಿನ್ ಟಾನಿಕ್, ರಾಜಬಿರಿ ನಂ. ೧ ರೋಜ ನಂ. ೧ ಸ್ಟೋನ್ ಜಿಂಜರ್ ಬೀರ ನಂ ೧, ರಬ್ಬರ್ ರಿಂಗ್ಸ್, ಬೆಸ ಇತರ ಸಾಹಿತಿ ಪಾರ್ಟುಗಳು ನಮ್ಮಲ್ಲಿ ಸಿಗುತ್ತವೆ. ಮತ್ತು ಶುದ್ಧ ಸೀಗರಿ ಎಣ್ಣೆಯ ಎಲ್ಲ ತರದ ಬಾಟ್ಲಿಗಳು ಸಿಗುತ್ತವೆ. ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಕೊಡುತ್ತೇವೆ. ನಮ್ಮಲ್ಲಿ ಕಬ್ಬಿಣದ ಮಿಲಿಟ್ರಿ ಸೀಗಲ ಕಾಟ್ಗಳು ಸೋವಿ ದರದಿಂದ ಮಾರಲಿಕ್ಕೆ ಸಿಗುತ್ತವೆ.

ಅಡ್ರೆಸ್— R. M. John & Sons.
Mission Compound HUBLI

LOKHANDE

ಬಕ್ಷೀಸು ಮತ್ತು ಬಹಳ ಬೆಲೆಗೆ ಯೋಗ್ಯವಿದ್ದು ಹೊಸ ಮಾದರಿಯವು.

ಜಿನಸು ಉತ್ತಮ ಮತ್ತು ನಂಬಿಗೆಯುಳ್ಳದ್ದು ನಮ್ಮ ಅಂಗಡಿಯಲ್ಲಿ [illegible] ಲಾಂಗಿನ್ಸ, ವೆಸ್ಟ ಎಂಡ, ಸಿಮಾ, ರೋಯಿನ, ಓಮೇಗಾ ಮತ್ತು [illegible] ಮುಂತಾದ ಪ್ರಸಿದ್ಧ ಕಂಪನಿಗಳ [illegible] ಗಳು, [illegible] ಮತ್ತು ಸರಿಯಾಗಿ [illegible] ನೆ. [illegible] ಕೊಡುವಾಗ [illegible] ಗ್ಯಾರಂಟಿ ಕೊಡುತ್ತೇವೆ. ಒಮ್ಮೆ ತಾವು ನೋಡಬಾರದೇಕೆ?

ಪ್ರೊಪ್ರೈಟರ, ದತ್ತಾತ್ರೇಯ ಲೋಖಂಡೆ
[illegible]

ದಿ ಅಂಕಲಗಿ ಬ್ಯಾಂಕ ಲಿಮಿಟೇಡ್

ಧಾರವಾಡ.

—೦—

೧೯೧೩ ಇಸ್ವಿಯ
ಕಂಪನಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ ಚಾಲೂ ಖಾತೆ, ಠೇವು, ಸೇವಿಂಗ್ಸದ ಡಿಪಾಜಿಟ, ಸಾಲ, ವತ್ತಿ, ಹುಂಡಿ, ಮುಂತಾದ ಬ್ಯಾಂಕಿನ ವ್ಯವಹಾರಗಳು ನಡೆಯುವವು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿಮಾಡುವವರಿಂದ ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ ರಿಂದ ೧೧-೩೦. ಸಾಯಂಕಾಲ ೩ ರಿಂದ ೬ ರವರೆಗೆ ನಡೆಯುವದು.

K.B. Ankalagi
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟಿಡ್

ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೆ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ ವರ್ಗಣೀ ದರ

ನಿತ್ಯಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ ,,	೭—೦—೦ ರೂ
೩ ,,	೪—೦—೦ ರೂ
ವಾರಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ, ಧಾರವಾಡ

ನೋಟೀಸಿನ ದರಗಳು.

ತಿಂಗಳು ಕಾಲಮಿನ ಹತ್ತು ಸಾಲುಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಸಾಲಿಗೆ ಒಂದುವರೆ ಆಣೆ ಇಂಗ್ಲಿಷ ಪ್ರತಿಯೊಂದು ಸಾಲಿಗೆ ಎರಡು ಆಣೆ ಇಂಗ್ಲಿಷದಿಂದ ಅನುವಾದಿಸಿ ಕನ್ನಡದಲ್ಲಿ ಹಾಕುವದಕ್ಕೆ ಇಂಗ್ಲಿಷ ಆಣೆ ಡಬಲ್‌ಕಾಲಮಿನ ಸಾಲುಗಳಿಗೆ ಇಮ್ಮಡಿ ಚಾರ್ಜು ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾ ಪತ್ರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.B.N. 1443

ವಿಜಯ

ನಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು— ಅಪ್ಪಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೬] ಧಾರವಾಡ ಬುಧವಾರ ತಾರೀಖು ೪ನೇ ಮಾರ್ಚ ೧೯೨೫ (ಸಂಚಿಕೆ ೫೩

ಕರ್ನಾಟಕ ತರುಣರಿಗೊಂದು!

ಬಿನ್ ಬಂಡವಾಳಿನ ವ್ಯವಸಾಯ!!

ಕಿರ್ಲೋಸ್ಕರ ನೇಗಿಲುಗಳ ಮಾರಾಟ !!!

ಕಿರ್ಲೋಸ್ಕರ ನೇಗಿಲು ಮತ್ತು ಗಾಣಗಳ ಉಪಯೋಗವು, ಮತ್ತು ಮಹತ್ವವು ಈಗ ದುಸ್ಥಾನದ ಪ್ರತಿಯೊಬ್ಬ ಒಕ್ಕಲಿಗನಿಗೆ ಗೊತ್ತಿದ್ದ ಮಾತು. ಇವುಗಳಿಗೆ ಗಿರಾಕಿಗಳು ಬಹಳ ಅದ್ದರಿಂದ ಅವುಗಳನ್ನು ಮಾರಾಟ ಮಾಡಿಸುವ ದಲಾಲರಿಗೆ ಶ್ರಮ ಬೀಳದು. ಕಂಪನಿಯಿಂದ ದೊರೆಯುವ ಕ್ಯಾಟಲಾಗ, ಜಾಹೀರ ಪತ್ರಿಕೆ, ಗೋಡೆಯ ಚಿತ್ರಪಟ ಇತ್ಯಾದಿ ಜಾಹೀರಾತಿನ ಸಾಮಗ್ರಿಗಳನ್ನು ಹಳ್ಳಿ ಹಳ್ಳಿಗಳಲ್ಲಿ ಪ್ರಸಾರ ಮಾಡಿದಲ್ಲಿ ಆರ್ಡರು ದೊರೆಯುವವು. ಈ ಆರ್ಡರುಗಳೊಡನೆ ೧/೪ ಹಣವನ್ನು ಇಸಕೊಂಡು ಕಂಪನಿಗೆ ಕಳಿಸಿದಲ್ಲಿ ಕಂಪನಿಯು ಅವರ ಹೆಸರಿನ ರಸೀದಿಯನ್ನು ಪಕ್ಕಾ ಹಣಕ್ಕೆ ವ್ಹಿ. ಪಿ. ಮಾಡಿ ದಲಾಲರಿಗೆ ಕಮೀಶನ್ ಕೊಡುವದು.

ಕಮೀಶನ್ ದರಗಳ ಬಗ್ಗೆ ಇಂದೇ ಕಾಗದವನ್ನು ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ } ಕಿರ್ಲೋಸ್ಕರವಾಡಿ— ಜಿಲ್ಹಾ ಸಾತಾರಾ.

ಫಕ್ತ ೨ ಆಣೆಯೊಳಗೇ ಆಶ್ಚರ್ಯಕಾರಕ ಪರಿಣಾಮಕಾರಿ ಉಪಾಯ

ಮೊಮೆಂಟ ಕ್ಯೂರ

ತಲೆಶೂಲಿ, ಅರ್ಧ ತಲೆಶೂಲಿ, ಶೀತ, ಉಷ್ಣ ವ ಪಿತ್ತಾಣ ವ್ಯಾಧಿಗಳಿಂದಾದ ಮಸ್ತಕಶೂಲಿಯು ತ್ವರಿತದಿಂದ ನಿರ್ಮೂಲ ಮಾಡಲು "ಮೊಮೆಂಟ ಕ್ಯೂರ" ಸಿಗೆ ಸರಿಸಮಾನವಾದ ಔಷಧವು ಬೇರೆ ಇಲ್ಲ. ಹೆಚ್ಚು ಜನರು ಮಸ್ತಕಶೂಲಿಯನ್ನು ಸಹಿಸಲು ಅಗದೆ ಮಸ್ತಕಕ್ಕೆ ವಸ್ತ್ರಕಟ್ಟಿ ಎಣ್ಣೆ ವ ಔಷಧಗಳನ್ನು ತಾಗಿಸುತ್ತಾರೆ. ಆದರೆ ನಿರಾಶೆಯಾದವರು ಮೊಮೆಂಟ ಕ್ಯೂರದ ಪುಡಿಯನ್ನು ಬಿಸಿ ಚಹಾದೊಂದಿಗೆ ಅಥವಾ ಬಿಸಿ ನೀರಿನೊಂದಿಗೆ ತೊಗೊಂಡಲ್ಲಿ ತಕ್ಷಣದಲ್ಲಿ ಒಂದೇ ಕ್ಷಣದಲ್ಲಿ ಮಸ್ತಕಶೂಲಿಯು ನಿಲ್ಲುವುದು. ಇದಕ್ಕೆ ಅನೇಕ ಶಿಫಾರಸ ಪತ್ರಗಳು ಉಂಟು.

೧ ಚೀಟಿಗೆ ೨ ಆಣೆ. ಸ್ಯಾಂಪಲ ಸಲುವಾಗಿ ೩ ಆಣೆ ಪೋಸ್ಟ ತಿಕೀಟುಗಳನ್ನು ಕಳಿಸಿದಲ್ಲಿ ರವಾನಿಸುವೆವು.

ವಿಳಾಸ— ದಿ ಕರ್ನಾಟಕ ಮೆಡಿಕಲ ಸ್ಟೋರ್ಸ, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ [illegible] ಹುಬ್ಬಳ್ಳಿ.

ಲೋಕಬಂಧು

ವಾರಪತ್ರಿಕೆ

ಸಂಪಾದಕರು— ಲಕ್ಷ್ಮಣ ರಾಮಚಂದ್ರ ಪಾಂಗಾರಕರ

ಈ ಪತ್ರವು ಧಾರವಾಡದಲ್ಲಿ ಪ್ರತಿ ರವಿವಾರ ಹೊರಡುತ್ತಿದ್ದು ಇದರಲ್ಲಿ ರಾಜಕೀಯ ಸಾಮಾಜಿಕ ಔದ್ಯೋಗಿಕ, ಕೃಷ್ಟಿ ಮುಂತಾದ ವಿಷಯಗಳು ಚರ್ಚಿಸಿ ಪ್ರತಿಪಾದಿಸಲ್ಪಡುವದಲ್ಲದೆ, ಎಲ್ಲ ಪ್ರಮುಖ ಸಂಗತಿಗಳು ಸುಲಭ ಭಾಷೆಯಲ್ಲಿ ಬರೆಯಲ್ಪಡುವವು.

ವಾರ್ಷಿಕ ವರ್ಗಣಿ ಮುಂಗಡ ೩—೮—೦

ಮ್ಯಾನೇಜರ,
ಲೋಕಬಂಧು ಆಫೀಸ, ಧಾರವಾಡ.

ಪ್ರಾಥಮಿಕ ಶಿಕ್ಷಕ

ಮಾಸಪತ್ರಿಕೆ.

ಸಂಪಾದಕರು— ಲಕ್ಷ್ಮಣ ರಾಮಚಂದ್ರ ಪಾಂಗಾರಕರ.

ಉತ್ತರ ಕರ್ನಾಟಕದ ಪ್ರಾಥಮಿಕ ಶಿಕ್ಷಕರ ಹಿತ ಸಂಬಂಧವನ್ನು ಕುರಿತು ಅತ್ಯಂತ ಕಳಕಳಿಯಿಂದ ಪ್ರಯತ್ನ ನಡಿಸುತ್ತಿರುವ ಮಾಸಪತ್ರಿಕೆಯು. ಶಿಕ್ಷಕರು ಇದನ್ನು ತರಿಸಿಕೊಳ್ಳಲು ಅಡ್ಡಿಯಿಲ್ಲೆಂದು ಕೌನ್ಸಿಲ್ಲದವರೂ, ನಾನಾಧಿಕಾರಿಗಳೂ ಒಪ್ಪಿರುವರು.

ವಾರ್ಷಿಕ ವರ್ಗಣಿ ಮುಂಗಡ ೨—೦—೦

ಮ್ಯಾನೇಜರ
ಪ್ರಾಥಮಿಕ ಶಿಕ್ಷಕ ಆಫೀಸ, ಧಾರವಾಡ

ಚಂದಾದಾರರಿಗೆ ಸೂಚನೆ

೧೯೨೫ನೆಯ ಹೊಸ ವರ್ಷಾರಂಭವಾಗಿದ್ದು, ನಡೆಯುವ ತಿಂಗಳದ ಬಗ್ಗೆ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸಲಿಕ್ಕೆ ಪ್ರಾರಂಭಿಸಿದೆವು. ಚಂದಾದಾರರು ವ್ಹಿ. ಪಿ. ಯನ್ನು ಸ್ವೀಕರಿಸಿ, ವಿಜಯವನ್ನು ಈ ಮೊದಲಿನಂತೆ ಪ್ರೋತ್ಸಾಹಿಸಬೇಕೆಂದು ಆಶಿಸುತ್ತೇನೆ.

ವ್ಯವಸ್ಥಾಪಕ ವಿಜಯ
ಧಾರವಾಡ.

ವಿಜಯ.

ಧಾರವಾಡ ತಾ- ೪-೩-೨೬ ನೇ ಇಸ್ವಿ

ಕೌನ್ಸಿಲದ ಬೆಳಗಾವಿಯ ಮತ್ತು ಹುಬ್ಬಳ್ಳಿಯ ಮೆಂಬರರ ವಿಚಿತ್ರ ವರ್ತನ.

—o—

ಕೋರ್ಟ ಫೀ ಸ್ಟಾಂಪಿನ ದರಗಳನ್ನು ಹೆಚ್ಚಿಸಬೇಕೆಂದು ಮುಂಬಯಿ ಸರಕಾರದವರು ಕೌನ್ಸಿಲದಲ್ಲಿ ತಂದ ಠರಾವು ಒಂದೇ ವೋಟಿನಿಂದ ನಾಮಂಜೂರವಾಯಿತು. ಈ ವಿಷಯವಾಗಿ ಸರಕಾರದವರು ಅಪಜಯ ಹೊಂದಿದ್ದು ಇದೇ ಮೊದಲಲ್ಲ. ಇದು ಮುಂಬಯಿ ಕಾಯಿದೆ ಕೌನ್ಸಿಲದಲ್ಲಿ ನಾಮಂಜೂರವಾಗಿತ್ತು. ಅನಂತರ ಹೋದ ವರ್ಷ ನಾಮಂಜೂರವಾಗಿ, ಈ ವರ್ಷ ಮತ್ತೆ ಅದೇ ಗತಿಯನ್ನು ಹೊಂದಿತು. ಸರಕಾರವು ಮೂರು ಸಾರೆ ಕೈ ಹೊಡೆಸಿ ಅಪಲಕ್ಷಣ ಮಾಡಿಕೊಂಡಿತು. ಸಿವಿಲ ಸರ್ವಂಟರ ಪಗಾರ ತುಂಬಲಿಕ್ಕೆ ಹತ್ತೆಂಟು ಲಕ್ಷ ರೂಪಾಯಿಗಳ ಇನಿಗಂಟನ್ನು ತೆಗೆದಿಡಲು ಸಿದ್ಧವಾದ ಸರಕಾರವು ಎಷ್ಟು ನ್ಯಾಯ ನಿಷ್ಪಕ್ಷಪಾತದಿಂದ ರಾಜ್ಯ ಮಾಡುತ್ತದೆಂಬುದು ತಾನಾಗಿ ವಿದಿತವಾಗುತ್ತದೆ. ಸರ ಚೇಮನ್‌ಲಾಲ ಸಾಹೇಬರು, ದಿವಾನ ಬಾಧಿಸುವಂಥ ಬಡ ಜನರ ಗೋಳು ಹೋಗುವಂಥ ಕಾಯದೆಯು ಬೇರೆಯಿಂದ ಸವಿ ಮಾತಿನಿಂದ ಮೆಂಬರರನ್ನು ಒಲಿಸಿಕೊಳ್ಳಬೇಕಾಗಿದ್ದು ಅವರ ದೃಷ್ಟಿಯಿಂದ ಯೋಗ್ಯವಾಗಬಹುದು. ಸ್ಟಾಂಪಿನ ದರ ಹೆಚ್ಚಿದರೆ ಸಾವುಕಾರರು ಕೊಡುವರು. ಬಡವರ ಮೇಲೆ ಅದರ ಭಾರ ಬೀಳಲಾರದೆಂದು ಹೇಳುವದೇ ವಿವೇಕ ಶೂನ್ಯತೆಯನ್ನು ತೋರಿಸುತ್ತದೆ. ಸಾಲಗಾರರು ಕಟ್ಟಾದ ನಂತರ ಸಾವುಕಾರನು ಕೋರ್ಟಿಗೆ ಬರುವಾಗ ಮೊದಲು ಸ್ಟಾಂಪಿಗೆ ದುಡ್ಡು ಹಾಕತಕ್ಕವನು ಸಾವುಕಾರನು; ಆ ಸ್ಟಾಂಪಿನ ದುಡ್ಡು ಬಡುತ್ತದೆಂದು ಸರ ಚೇಮನ್‌ಲಾಲ ಸಾಹೇಬರು ಹೇಳುವದು ಪ್ರಥಮ ದರ್ಶನದಲ್ಲಿ ನಿಜ ತೋರುವದು. ಕೋರ್ಟಿನ ಡಿಕ್ರಿಯಾಗಿ, ಸಾಲಗಾರರ ಮೇಲೆ ಜಪ್ತಿಯ ವಾರಂಟು ಹೋದಾಗ ಸ್ಟಾಂಪಿನ ವೆಚ್ಚವನ್ನು ಬಡ ಸಾಲಗಾರನೇ ತೆತ್ತುತ್ತಾನೆಂಬದು ಸಾಹೇಬರಿಗೆ ತಿಳಿಯುವದಿಲ್ಲೆಂಬದು ಸೋಜಿಗವು. ಏಕೆಂದರೆ ಅವರು ಅರ್ಥಶಾಸ್ತ್ರ, ತರ್ಕಶಾಸ್ತ್ರಗಳಲ್ಲಿ ಪರಿಣತ ಪ್ರಜ್ಞರಾಗಿರುತ್ತಾರೆ.

ಈ ಬಿಲ್ಲಿನ ಠರಾವಿನ ಪ್ರಸಂಗದಲ್ಲಿ ಬ್ರಾಹ್ಮಣೇತರ ಪ್ರಮುಖ ಮೆಂಬರರಾದ ಮುಂಜಿಯವರು ಸುಮ್ಮನೆ ಸಹ, ಸರಕಾರದ ಈ ಕೃತ್ಯವನ್ನು ನಿಷೇಧಿಸಿದರು. ಇವರ ತರುವಾಯ ನಮ್ಮ ಕರ್ನಾಟಕ ಪ್ರಾಂತದಲ್ಲಿ ಬ್ರಾಹ್ಮಣೇತರರಾಗಿರುವ ಮಿ. ಅಂಗಡಿಯವರು ಪ್ರಜರಲ್ಲಿ ಒಂದು ದುಡ್ಡು ಸಹ ಹೆಚ್ಚಿಗೆ ಕರ ಕೊಡುವ ತ್ರಾಣವಿಲ್ಲೆಂದು ಭಾಷಣ ಮಾಡಿದರು. ಬಳಿಕ ತುಸು ಹೊತ್ತಿನ ನಂತರ ವೋಟು ಕೊಡುವ ಹೊತ್ತು ಬಂದ ಕೂಡಲೆ, ಸರಕಾರ ಪಕ್ಷಕ್ಕೆ ಅನುಕೂಲವಾಗಿ ಮತ ಕೊಟ್ಟರು. ಈ ಪ್ರಕಾರ ಮತ ಕೊಡುವದೆಂದರೆ ಪ್ರಜರಲ್ಲಿ ಕರ ಕೊಡುವ ಶಕ್ತಿವು ಉಂಟೆಂದು ಒಪ್ಪಿದಂತಾಗುತ್ತದೆ. ಇವರು ಈ ಪ್ರಕಾರ್ಯ ಒಂದಕ್ಕೊಂದು ವಿರೋಧವಾಗಿರುವ ಕೃತ್ಯ ಮಾಡಿದ್ದನ್ನು ನೋಡಿ, ಪ್ರತಿಯೊಬ್ಬರು ಇವರ ಪಾಂಡಿತ್ಯ ಚತುರ್ಯದ ಬಗ್ಗೆ ವಿಸ್ಮಯ ಪಡುವಂತಿದೆ. ಮಿ. ಅಂಗಡಿಯವರಂತೇ ಮಿ. ದಳವಿಯವರು ಹಿಂಬಾಲಿಸಿದರು. ಇವರಿಬ್ಬರು ಮೆಂಬರರಾಗುವಾಗ ಸ್ವರಾಜ್ಯ ಪಕ್ಷೀಯರೆಂದು ಹೇಳಲ್ಪಟ್ಟವರು. ಇವರಿಗೆ ಕಾಂಗ್ರೆಸ ಪಕ್ಷದಿಂದ ಮತ್ತು ದೇಶಭಕ್ತರ ಧರಣಾಯದಿಂದ ಎಷ್ಟು ಸಹಾಯ ದೊರೆತಿತ್ತು ಎಂಬುದು ಎಲ್ಲರಿಗೂ ತಿಳಿದ ಮಾತಾಗಿದೆ. ಕಾಂಗ್ರೆಸ ಸಹಾಯದಿಂದ ಸ್ವರಾಜ್ಯ ಪಕ್ಷದವರೆನಿಸಿಕೊಂಡ ಇವರೀರ್ವರು ಕೈತಂದ ಹಿತದ ವಿರುದ್ಧ ನಿಲ್ಲುವ ಮತವು ಸಂಪೂರ್ಣವಾಗಿ ಆಕ್ಷೇಪಾರ್ಹವಾಗಿ, ಮತದಾರರ ವಿಶ್ವಾಸವನ್ನು ಕಳೆಕೊಳ್ಳುವದಕ್ಕೆ ಕಾರಣವೆಂದು ಧಾರಾಳವಾಗಿ ಹೇಳುವಂತಿದೆ.

ಮಿ. ಕಂಬಳಿಯವರು ತಾವು ಪ್ರಜಾಪಕ್ಷದ ಮೆಂಬರರೆಂದು ಹೇಳುತ್ತಾರೆ. ಆ ಪ್ರಕಾರ ಅವರ ಸಂಗಡದವರು ತಿಳಿದಿರುತ್ತಾರೆ. ಪ್ರಸ್ತುತದ ಪ್ರಸಂಗದಲ್ಲಿ ಇವರು ಕೊಟ್ಟ ವೋಟಿನಿಂದ ಇವರು ಸರಕಾರ ಪಕ್ಷವನ್ನು ಸೇರಿದರೆಂದು ಒಡೆದು ಕಾಣಿಸುತ್ತದೆ. ಇವರು ದಿವಾನ ಬಾಧಸರಾವ ಮೊದಲಾದವರ ಗುಂಪಿನಲ್ಲಿ ಸೇರಿದವರು. ಬೆಳಗಾವಿಯಲ್ಲಿ ಕೂಡಿದ ಬ್ರಾಹ್ಮಣೇತರ ಪರಿಷತ್ತಿನಲ್ಲಿ ಈ ಕಂಪನಿಯು ಮತ್ತಿಷ್ಟು ಗಟ್ಟಿಯಾಗಿದೆ. ಮಿ. ಅಂಗಡಿಯವರು ರೈತರಲ್ಲಿ ಒಂದು ದುಡ್ಡು ಸಹ ಹೆಚ್ಚಿಗೆ ಕೊಡುವ ತ್ರಾಣವಿಲ್ಲೆಂದು ಮೊದಲು ಮಾತಾಡಿ, ಅನಂತರ ಸರಕಾರಕ್ಕೆ ಅನುಕೂಲವಾಗಿ ಮತ ಕೊಡಲಿಕ್ಕೆ ದಿವಾನ ಬಾಧಸರಾಯರ ದಾಕ್ಷಿಣ್ಯದ ದೆಸೆಯಿಂದಲೇ ಎಂದು ತರ್ಕ ಮಾಡಿದರೆ ತಪ್ಪಾಗಲಾರದು.

ವಿಜಾಪೂರ ಜಿಲ್ಲೆಯ ಮೆಂಬರರಾದ ರಕ್ಷನಗಿಯ ಶ್ರೀಮಂತ ಸಂಗಪ್ಪದೇಸಾಯರು ಮತ್ತು ನಮ್ಮ ಕಡೆಯ ಮುಸಲಮಾನ ಮೆಂಬರರಾದ ಮೌ. ಕಾಜಿ ಸಾಹೇಬರು ಪ್ರಜಾ ಪಕ್ಷಕ್ಕೆ ಅನುಕೂಲವಾಗಿ ಮತ ಕೊಟ್ಟ ಬಗ್ಗೆ, ನಾವು ಮನಃಪೂರ್ವಕವಾಗಿ ಅವರ ಅಭಿನಂದನ ಮಾಡುತ್ತೇವೆ. ಶ್ರೀ. ದೇಸಾಯರು ಇದೇ ಸಮಯದಲ್ಲಿ ಮಾತ್ರವಲ್ಲ; ಹೋದ ವರ್ಷವೂ, ಪಾರ್ಶಿಮನ ಸಾಹೇಬರಿಗೆ ಈ ದೇಶಕ್ಕೆ ಒಯ್ಯುವ ಪಾಸಪೋರ್ಟ ಕೊಡಬೇಕೆಂಬ ಠರಾವಿಗೂ ಅನುಕೂಲ ಮತಕೊಟ್ಟಿದ್ದರು. ಇವರು ಬ್ರಾಹ್ಮಣೇತರ, ದೊಡ್ಡ ಜಮೀನದಾರರಿದ್ದರೂ ದಿವಾಣರ ಪ್ರೀತಿಸಂಪಾದನೆ ಎಂಬ ವ್ಯರ್ಥ ಬಲೆಯಲ್ಲಿ ಸಿಕ್ಕಿಕೊಳ್ಳಗೊಡದೆ ತಮ್ಮ ಮತ ಸ್ವಾತಂತ್ರ್ಯ ಕಾಯ್ದುಕೊಂಡಿರುವದು ನಿಜವಾಗಿ ಪ್ರಶಂಸನೀಯವಾಗಿರುತ್ತದೆ. ಮೊಸರ್ಲ ಜೋಗ ಮತ್ತು ಅರ್ಕಿಯವರು ಸರಕಾರದ ವಿರುದ್ಧ ವೋಟು ಕೊಟ್ಟದ್ದು ಅವರು ಕೈಕೊಂಡ ಪ್ರತಿಜ್ಞೆ ಅನುಸರಿಸಿರುತ್ತದೆ. ಇವರಿಬ್ಬರೂ ಸ್ವರಾಜ್ಯ ಪಕ್ಷದವರಿದ್ದು, ಇವರು ತಮ್ಮ ಕರ್ತವ್ಯ ಮಾಡಿದರೆಂದು ಹೇಳಬೇಕಾಗುತ್ತದೆ. ಸ್ವಕರ್ತವ್ಯ ಮಾಡತಕ್ಕವರಿಗೆ ಭೂಷಣವಿಲ್ಲ. ಮಾಡದಿದ್ದರೆ ಮಾತ್ರ ಪಾಪವಿರುತ್ತದೆಂದು ಧರ್ಮೋಕ್ತಿಯುಂಟು. ಆದಕಾರಣ ಸ್ವರಾಜ್ಯ ನಿಷ್ಠ ಕರ್ಮನಿಷ್ಠರಾದ ಮೊಸರ್ಲ ಜೋಗ ಮತ್ತು ಅರ್ಕಿಯವರ ಅಭಿನಂದನ ಮಾಡುವ ಕಾರಣವಿರುವದಿಲ್ಲ.

ಹಿಂದುಸ್ಥಾನ ಸರಕಾರದ ಬಜೆಟ್ಟು.

— o—

ಮೂರು ಕೋಟಿಯ ಉಳಿತಾಯ.

—o—

ಕಳೆದ ಶನಿವಾರ ಸಾಯಂಕಾಲದಲ್ಲಿ ಹಿಂದುಸ್ಥಾನ ಸರಕಾರದವರು ೧೯೨೬- ೨೭ ವರ್ಷದ ಬಗ್ಗೆ ಬಜೆಟ್ಟನ್ನು ಪ್ರಸಿದ್ಧ ಮಾಡಿದರು. ಅದರ ಮುಖ್ಯಾಂಶಗಳು.

ಉತ್ಪನ್ನ—	೧, ೩೩, ೭೮೦೦೦೦೦
ವೆಚ್ಚ—	೧, ೩೧ ೯೪೦೦೦೦೦
ಉಳಿತಾಯ	೩, ೨೪, ೦೦೦೧೦

ಸರಕಾರದವರು ಉಪ್ಪು, ಮತ್ತು ಗಿರಣಿಗಳ ಸೋಲಿನ ಕರವನ್ನು ಕಡಿಮೆ ಮಾಡುವರೆಂದು ಮೆಂಬರರು ಬಹುವಾಗಿ ನಿರೀಕ್ಷಿಸಿದ್ದರು. ಅದರ ನಿರಾಶೆಯಾಯಿತು.

ಪ್ರಾಂತಿಕ ವಿಭಾಗದನ್ನು ೨೬ ಕೋಟಿಗೆ ತಂದಿದ್ದಾರೆ. ವೆಚ್ಚ ಕಡಿಮೆ ಮಾಡುವ ಕಮಿಟಿಯ ಶಿಫಾರಸಿನ ಪ್ರಕಾರ ಇದು ಇನ್ನೂ ೧೦ ಕೋಟಿ ಕಡಿಮೆಯಾಗತಕ್ಕದ್ದುಂಟು.

ಪೆಟ್ರೋಲದ ಜಕಾತಿಯನ್ನು ಮಾತ್ರ ಕಡಿಮೆ ಮಾಡಿದ್ದಾರೆ. ಒಂದು ಗ್ಯಾಲನಕ್ಕೆ ನಾಲ್ಕಾಣೆಯನ್ನು ಕಡಿಮೆ ಮಾಡಿಂದು. ಇದು ಮೊದಲು ಆರಾಣೆ ಇತ್ತು. ಪರದೇಶದಿಂದ ಬರುವ ಪೆಟ್ರೋಲದ ಜಾವು ಗ್ಯಾಲನಕ್ಕೆ ಎಂಟಾಣೆದ ಅಗ್ಗ ಕಡಿಮೆ ಮಾಡಲ್ಪಟ್ಟಿತು.

ಹಿಂದುಸ್ಥಾನ ಸರಕಾರದವರು ಇಲಾಖಾ ಸರಕಾರಗಳಿಗೆ ಸೈರಾತ ಮಾಡಿದ್ದಾರೆ. ಈ ಪ್ರಸಾದವು ಮುಂಬಯಿ ಇಲಾಖೆಗೇ ಸಿಕ್ಕಿಲ್ಲ!!

ಸಾರ್ವಜನಿಕ ಕೆಲಸಗಳಲ್ಲಿ ವಿಲಾಯತಿಯಲ್ಲಿ ಸಾಲ ಮಾಡುವದನ್ನು ಈ ವರ್ಷ ರಹಿತ ಮಾಡಿ, ಹಿಂದುಸ್ಥಾನದಲ್ಲಿಯೇ ೧೨ ಕೋಟಿ ರೂಪಾಯಿಯ ಸಾಲ ತೆಗೆಯುವರು.

ಮುಂಬಯಿಯ ಕೊಲೆಯ ಪ್ರಕರಣದಲ್ಲಿ
ದೇಶಬಂಧುವಿನ ವಕೀಲಿಯು
ಮತ್ತು
ರೊಕ್ಕದ ಸುರಿಮಳೆಯು

—೦—

ಬಾವಲಾಸಾಹೇಬರ ಕೊಲೆಯಲ್ಲಿ ಆರೋಪಿಗಳಾಗಿರುವ ಜನರ ವಿಷಯವಾಗಿ ಮಾಡತಕ್ಕ ಪೋಲೀಸ ತಪಾಸಣೆಯು ಮುಗಿಯಿತು. ಪೋಲೀಸರು ಆರೋಪಿಗಳನ್ನು ಮ್ಯಾಜಿಸ್ಟ್ರೇಟರ ಅಧಿಕಾರಕ್ಕೆ ಒಪ್ಪಿಸಿದರು. ಮತ್ತು ಆರೋಪಿಗಳು ಬೇಲಿನಲ್ಲಿ ಬಿಡಲ್ಪಟ್ಟರು.

ಈ ಪ್ರಕರಣದಲ್ಲಿ ಹೋಳ್ಕರ ಸರಕಾರದವರು ಆರೋಪಿಗಳ ಪರವಾಗಿ ಕೆಲಸ ನಡಿಸಲು ದೇಶಬಂಧು ದಾಸರಿಗೆ ವಕೀಲಿ ಕೊಟ್ಟು ಒಟ್ಟು ೩೦ ಲಕ್ಷ ರೂಪಾಯಿಗಳನ್ನು ಕರಾರ ಮಾಡಿದರೆಂದೂ, ಈಗಾಗಲೆ ಹತ್ತು ಲಕ್ಷ ರೂಪಾಯಿಗಳನ್ನು ಕೊಟ್ಟಿರುತ್ತಾರೆಂದು ಕಲಕತ್ತೆಯ ಒಂದು ವರ್ತಮಾನಪತ್ರವು [illegible]. ಈ ಸುದ್ದಿಯು ನೀಲಗೆಟ್ಟದ್ದೆಂದು ಮುಂಬಯಿ ಪೋಲೀಸರೆನ್ನುತ್ತಾರೆ.

ದೇಶಬಂಧು ದಾಸರು ವಕೀಲಿ ಹಿಡಿಯುವನಾದರೆ ಇವರು ಪ್ರಕರಣವನ್ನು ಮುಂಬಯಿಗೆ ಕಲಕತ್ತೆಯ ಹಾಯಕೋರ್ಟಿಗೆ ವರ್ಗಮಾಡಿಸಿಕೊಳ್ಳುವರೆಂದು ಸ್ಟೇಟ್ಸಮನ ಪತ್ರವು ಅನ್ನುತ್ತದೆ

ನಾವು ಮುಂಬಯಿ ಕೊಲೆಯಲ್ಲಿ ವಕೀಲಿ ಹಿಡಿಯುವವರೆಂಬುದಾಗಿ ಹುಟ್ಟಿದ ಸುದ್ದಿಯು ನಿರಾಧಾರವಾದದ್ದೆಂದು ದೇಶಬಂಧು ದಾಸರು ಪ್ರಸಿದ್ಧ ಮಾಡಿದ್ದಾರೆ.

ಮುಂಬಯಿ ಇಲಾಖೆಯ ಪ್ರೋಸ್ಟಿಬಾತೆಯ ಪರಿಷತ್ತು ಬಸೋಡೆಯಲ್ಲಿ ಎಪ್ರಿಲ ತಿಂಗಳ ೧೧-೧೨ ನೇ ತಾರೀಖುಗಳಲ್ಲಿ ಕೂಡುವದು. ಪುಣೆಯ ಶ್ರೀ. ಕೇಳಕರರು ಅಧ್ಯಕ್ಷರಾಗುವರು.

ಸ್ವರಾಜ್ಯ ಪಕ್ಷೀಯರು ಮಂತ್ರಿಪದವನ್ನು ಸ್ವೀಕರಿಸುವರೆಂದು ಹುಟ್ಟಿದ ಸುದ್ದಿಯು ನಿರಾಧಾರವಾದದ್ದು. ಸರಕಾರದ ಪ್ರಕೃತಿಯಲ್ಲಿ ಬದಲಾದ ಹೊರತು ಈ ಸ್ಥಳ ಸ್ವೀಕಾರ ಮಾಡುವದಿಲ್ಲೆಂದು ದೇಶಬಂಧು ದಾಸರು ಪ್ರಸಿದ್ಧ ಮಾಡಿದ್ದಾರೆ.

ಕಲ್ಲೆಣ್ಣೆಯಿಂದಾದ ಭಯಂಕರ ಹಾನಿಯು.

—೦—

ನೂರು ಜನರು ಸತ್ತರು; ಆರು ನೂರು ಜನರು ಘಾಯವಾದರು; ಮೂರು ಸಾವಿರ ಮನೆಗಳು ನಾಶವಾದವು.

—೦—

ದಕ್ಷಿಣ ಅಮೇರಿಕೆಗೆ ಸೇರಿದ ಬ್ರಾಜಿಲ ದೇಶದ ಮುಖ್ಯ ಪಟ್ಟಣವಾದ ರಾಯೋಡಿ ಜನೆರೋ ಪಟ್ಟಣದಲ್ಲಿ ಕಲ್ಲೆಣ್ಣೆಯ ಕಂಪನಿಯ ಕೆರೆಗೆ ಬೆಂಕಿ ಹತ್ತಿ, ಭಯಂಕರವಾದ ಅನರ್ಥವಾಯಿತು. ಇದರಿಂದ ನೂರು ಜನರು ಸತ್ತರು, ಆರು ನೂರು ಜನರು ಸುಟ್ಟುಕೊಂಡರು ಮತ್ತು ಮೂರು ಸಾವಿರ ಮನೆಗಳು ನಾಶವಾದವೆಂದು ಅಲ್ಲಿಂದ ಬಂದ ತಾರಿನ ವರ್ತಮಾನವಾಗಿರುತ್ತದೆ.

ವಿಲಾಯತಿಯ ಜೊಬ್ಬಾಚಾರ್ಯನು.

—೦—

ಅದ್ಭುತ ಸಾಮರ್ಥ್ಯವು.

—೦—

ಸ್ಯಾಂಡೋ ಅಥವಾ ರಾಮಮೂರ್ತಿಯು ಎಷ್ಟೋ ಸಾಲು ಹಿಂದೆ ಮಾಡಿದಂಥ ಸಿಮನೆಂಬ ಸಾಹೇಬನು ವಿಲಾಯತಿಯಲ್ಲಿ ತನ್ನ ಶಕ್ತಿ ಸಾಮರ್ಥ್ಯವನ್ನು ತೋರಿಸುತ್ತಿದ್ದಾನೆ. ರಾಮಮೂರ್ತಿಯು ಮೋಟಾರ ನಿಲ್ಲಿಸುವನು! ಸಿಮ ಸಾಹೇಬನು ಎಡಗಯ್ಯಿಂದ ಒಂದು ಮತ್ತು ಬಲಗಯ್ಯಿಂದ ಒಂದು ಕುದುರೆಯ ಹಗ್ಗ ಹಿಡಿದು, ಅವನ್ನು ಬೇಕಾದಷ್ಟು ಹೊಡೆದರೂ ಅವು ಮಿಸುಕಾಡದಂತೆ, ನಿಂತಲ್ಲಿ ನಿಲ್ಲಿಸುವನು. ಹಲ್ಲಿನಿಂದ ನೀರು ತುಂಬಿದ ಕೊಡ ಎತ್ತುವದನ್ನು ನಮ್ಮ ದೇಶದಲ್ಲಿ ಅನೇಕರು ಮಾಡಿ ತೋರಿಸುತ್ತಾರೆ. ಸಿಮ ಸಾಹೇಬನು ಅರ್ಧ ಇಂಚು ಕಬ್ಬಿಣದ ಗೇಣು ತುಂಡನ್ನು ದುಂಡಗೆ ಮಣಿಸುವನು. ಕಯ್ಯಿಂದ ತೆಂಗಿನಕಾಯಿ ಒಡೆದರೆ ನಮ್ಮಲ್ಲಿ ಬಹಳ ಗಟ್ಟಿಗನು, ಸಿಮ ಸಾಹೇಬನು ಮೂರು ಇಂಚಿನ ಮೊಳೆಯನ್ನು ಅಂಗಯ್ಯಿಯ ಒಂದೇ ಪೆಟ್ಟಿನಿಂದ ದೊಡ್ಡ ತೊಲೆಯಲ್ಲಿ ಹೊಗಿಸುವನು

ಹಿಂದೀ ಜನರ ವಿರುದ್ಧ ಪಿಕೆಟಿಂಗ

—೦—

ದಕ್ಷಿಣ ಆಫ್ರಿಕೆಯಲ್ಲಿ ವಾಸವಾಗಿರುವ ಹಿಂದೀ ಜನರ ಅಂಗಡಿಗಳಲ್ಲಿ ಗೌರಕಾಯಸ್ಥರು ವ್ಯಾಪಾರ ಮಾಡಬಾರದೆಂದು ದೊಡ್ಡ ದೊಡ್ಡ ಜನರು ಹುಡುಗ- ಹುಡುಗಿಯರನ್ನು ಪಿಕೆಟಿಂಗ ಮಾಡಲಿಕ್ಕೆ ಹಚ್ಚಿದ್ದಾರೆ. ಇವರು ಮಹಾತ್ಮರ ಅಹಿಂಸೆಯ ಅಸಹಕಾರವನ್ನು ಅಂಗೀಕರಿಸಿರುತ್ತಾರೆ. ಗೌರವರ್ಣದವರು ಕೃಷ್ಣವರ್ಣದವರ ಅಂಗಡಿಗೆ ಯಾರು ಹೋಗುತ್ತಾರೆಂಬದನ್ನು ಸ್ವಯಂಸೇವಕರು ನೋಡುವರು. ಬಂಡಿತುಂಬ ಸರಕು ಬಂದ ಕೂಡಲೆ, ಅದು ಯಾವದು ಯಾವ ಹಿಂದೀ ಮನುಷ್ಯನ ಅಂಗಡಿಗೆ ಹೋಗುವದೆಂಬದನ್ನು ನೋಡಲು ನಾಯಕರು ಸ್ವಯಂಸೇವಕರನ್ನು ಇಟ್ಟಿರುತ್ತಾರೆ. ಹಿಂದೀಜನರ ಮೇಲೆ ಮೊದಲೇ ಸರಕಾರದ ಕೋಪ! ಅದರ ಮೇಲೆ ಪಿಕೆಟಿಂಗದ ಬಾಧೆ!!

ಜರ್ಮನಿಯ ಅಧ್ಯಕ್ಷರ ಮರಣ

—೦—

ಕೈಸರಶಾಹಿಯು ಅಳಿದಬಳಿಕ ಜರ್ಮನ ರಾಜ್ಯದಲ್ಲಿ ಪ್ರಜಾಸತ್ತಾತ್ಮಕ ಘೋಷಣವಾದಕೂಡಲೆ, ಮಿ. ಏಬರ್ಟಸಾಹೇಬರು ಅದರ ಅಧ್ಯಕ್ಷರಾದರು. ಇವರು ಒಬ್ಬ ಶಿಂಪಿಗನ ಮಕ್ಕಳು. ವಿದ್ಯೆ, ಬುದ್ಧಿಯಿಂದ ಅಧ್ಯಕ್ಷಪದಾರೋಹಣ ಮಾಡಿದರು. ಮರಣ ಸಮಯದಲ್ಲಿ ೫೪ ವರ್ಷದವರಾಗಿದ್ದರು. ಇವರ ಹೊಟ್ಟೆಯ ಮೇಲೆ ಶಸ್ತ್ರ ಕ್ರಿಯೆ ಮಾಡಲ್ಪಟ್ಟಿತು. ಅದರಿಂದಲೇ ಅಕಸ್ಮಾತವಾಗಿ ದಿವಂಗತರಾದರು.

ತಾರಿನ ಸುದ್ದಿಗಳು.

ಮೈಸೂರ ಇಲಾಖೆಯಲ್ಲಿ ಕೋಲಾರದ ಚಿನ್ನದ ಕಣಿಯ ಹತ್ತರ ಕಲ್ಲಿದ್ದಲಿಯ ಕಣಿ ದೊರೆತಿದೆ. ಇದರಿಂದ ಮೈಸೂರ ದರಬಾರಕ್ಕೆ ದೊಡ್ಡ ಆದಾಯವಾಗುವದು.

ಬಾವರ ಆರೋಪಿಗಳ ಬಂಡಾಯದ ವಿಚಾರಣೆಯಲ್ಲಿ ಐವರಿಗೆ ಗಲ್ಲಿನ ಶಿಕ್ಷೆಯಾಯಿತು. ೫೪ ಜನರಿಗೆ ಭಾರೀ ಶಿಕ್ಷೆ ವಿಧಿಸಲ್ಪಟ್ಟಿತು.

ನಾಭಾದ ತುರಂಗದಲ್ಲಿರುವ ಅಕಾಲೀ ಸತ್ಯಾಗ್ರಹಿಗಳನ್ನು ಅತ್ಯಂತವಾದ ಅಮಾನುಷ ಕೃತ್ಯದಿಂದ ಹಿಂಸಿಸುತ್ತಿರುವರೆಂದು ಗುರುದ್ವಾರ ಕಮಿಟಿಯವರು ಮಹಾತ್ಮರಿಗೆ ತಾರಿನಿಂದ ತಿಳಿಸಿದ್ದಾರೆ.

ನಾಗಪೂರ ಇಲಾಖೆಯಲ್ಲಾದ ಒಂದು ಉಪ ಚುನಾವಣೆಯಲ್ಲಿ ಸ್ವರಾಜ್ಯ ಪಕ್ಷದ ಉಮೇದವಾರನು ಜಯ ಹೊಂದಲಿಲ್ಲ. ಇದರಿಂದ ಅವರ ವಜನ್ನು ಕಳೆಗುಂದಹತ್ತಿತೆಂದು ಇಂಗ್ಲಿಷ ಪತ್ರಗಳು ಟೀಕೆ ಮಾಡಿವೆ.

ಧಾರವಾಡ ಬೆಳಗಾವಿಯಲ್ಲಿ ಕಲೆಕ್ಟರರಾಗಿದ್ದ ಮಿ. ಮ್ಯಾಕರಸಾಹೇಬರು ಪರಲೋಕವಾಸಿಯಾದರು. ಮರಣ ಸಮಯದಲ್ಲಿ ಇವರು ೮೦ ವರ್ಷದವರಾಗಿದ್ದರು.

ತುರ್ಕಸ್ಥಾನದಲ್ಲಿ ಕುರ್ದರ ಬಂಡಾಯವು ಮತ್ತೊತ್ತಿಗೆ ಬಂತು. ತುರುಕ ಸೈನಿಕರು ಇವರ ಸಮಾಚಾರ ತಕ್ಕೊಳ್ಳುತ್ತಿದ್ದಾರೆ.

ದಿ ಧಾರವಾಡ ಅರ್ಬನ ಕೋ. ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ, ಧಾರವಾಡ.

ಕೋ. ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ

ಜಿಂದಿಗೆಯು ಆರುಲಕ್ಷದ ಮೇಲುಂಟು. ಚೆಕ್ಕು, ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ಮಾಡಲ್ಪಡುವದು. ಕಾಹೀಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.
ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೆಜಿಂಗ ದಾಯರೆಕ್ಟರ

ಆರ್. ಎಮ್. ಜ್ಹೋನ್ ಎಂಡ ಸನ್ಸ ಹುಬ್ಬಳ್ಳಿ.

ಏಜಂಟ್ಸ ಫೋರ ಕಾರಬೋನಿಕ್ ಆಸಿಡ್ಡ ಗ್ಯಾಸ, ಮ್ಯಾನುಫ್ಯಾಕ್ಚರರ್ ಆಫ್ ಏರೆಟೆಡ ವಾಟರ್ಸ.

ತಾವು ಖರೆ ಬೇಗ ಆಳಕಿಸಿರಿ.

ನಮ್ಮಲ್ಲಿ ಸಿಗುವ ಸಾಮಾನುಗಳ ವಿವರ

ಫುಲ್‌ಗ್ಯಾಸ ಸಿಲಿಂಡರಗಳು ಇಂಗ್ಲೀಷ ಮತ್ತು ಜರ್ಮನ ಪೇಟೆಂಟ ಕಾಡ್ಸ, ಎಮ. ಟಿ ಸೋಡಾ ವಾಟರ ಬಾಟಲಗಳು, ೫೧೦ ನೇ. ಸಾಬು



ಕೀನ ಚೆಪ್ಪಿ ೧ ಪಾಂಡನವು. ಸೋಡಾವಾಟರ್ ಮಶಿನುಗಳು ಮತ್ತು ಎಲ್ಲ ತರದ ಕಲರಿಸ ಬಾಟಲಿಗಳ ಎಸನ್ಸಗಳು, ಅಮೆರಿಕನ್ ಆಯಿಸ್ಕ್ರೀಮ ಸೋಡಾ, ಬನಾನಾ, ಕೋಲಾಚೆಂಪೇಜನ್, ಲೆಮನ್ ನಂ. ೧ ಲೆಮನ್ ಜುಯಿಸ್ ಸೋಡಾ ನಂ. ೧ ಮೆಂಗೋ, ಆರೇಂಜ, ಫಾಯಿನಾಪಲ್, ಪಿಕ್ಕಮಿಲಪ್, ಕ್ವಿನಿನ್ ಟಾನಿಕ್, ರಾಜಬರಿ ನಂ. ೧ ಕೋಲ ನಂ. ೧ ಸ್ಟೋನ್ ಜಿಂಜರ್ ಬೀರ ನಂ ೧, ರಬ್ಬರ್ ರಿಂಗ್ಸ, ಬಿಸ್ಕತರ ಮಶಿನರಿ ಪಾರ್ಟಗಳು ನಮ್ಮಲ್ಲಿ ಸಿಗುತ್ತವೆ. ಮತ್ತು ಶುದ್ಧ ನೀಲಗಿರಿ ಎಣ್ಣಿಯು ಎಲ್ಲ ತರದ ಬಾಟಲ್ಸಗಳು ಸಿಗುತ್ತವೆ. ವ್ಯಾಪಾರಸ್ಥರಿಗೆ ಒಳ್ಳೇ ಕಮೀಶನ್ ಕೊಡುತ್ತೇವೆ. ನಮ್ಮಲ್ಲಿ ಕಬ್ಬಿಣದ ಮಿಲಿಟರಿ ಸಿಂಗಲ ಕಾಟ್ಸಗಳು ಸೋವಿ ದರದಿಂದ ಮಾರಲಿಕ್ಕೆ ಸಿಗುತ್ತವೆ.

ಅಡ್ರೆಸ್— R M. John &Sons.
Mission Compound HUBLI

ದಿ. ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

—o—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೆ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಿರುತ್ತದೆ.

ಎ. ಕೆ. ಕಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ

ನಿತ್ಯಪತ್ರಿಕೆ

೧೨ ತಿಂಗಳಿಗೆ	೧೨—೮—೦ ರೂ
೬ ,,	೭—೦—೦ ರೂ
೩ ,,	೪—೦—೦ ರೂ
ವಾರಪತ್ರಿಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ
ಮ್ಯಾನೇಜರ ವಿಜಯ, ಧಾರವಾಡ

ಜಾಹೀರಾತಿನ ದರಗಳು.

ಸಿಂಗಲ ಕಾಲಮಿನ ಹತ್ತು ಪಂಕ್ತಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಂಕ್ತಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ಆಣೆ ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಓಳಿಗಳಿಗೆ ಇಮ್ಮಡಿ ಚಾರ್ಜ. ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

LOKHANDE



ಬಕ್ಷೀಸು ಮತ್ತು ಅರ್ಥ ಬೆಲೆಗೆ ಹೋಡಮಟ್ಟು ಹೊಸ ಹೊಗಲೇರಿ.

ಬೇಸಿಗೆ ಉತ್ತಮ ವ ಸ್ತು ನಂಬಿಗೆಯುಳ್ಳದ್ದು ನಮ್ಮ ಅಂಗಡಿಯಲ್ಲಿ ಸಾವರೆ ಲೂಜಾ, ವೆಸ್ಟಎಂಡ, ಮೂವಾಡೊ, ಓಮೇಗಾ ಮತ್ತು ಸ್ವಿಸ ಜನರಲ ಕಂಪನಿ ಮುಂ. ಬೇರೆ ಪ್ರಸಿದ್ಧ ಕಂಪನಿಗಳ ಗಡಿಯಾರಗಳು ಈಗೀಗ ಬಂದಿದ್ದು, ಇವು ನೋಡಲಿಕ್ಕೆ ಸುಂದರವಾಗಿರುವಲ್ಲದೆ ಗಟ್ಟಿ ಮತ್ತು ಸರಿಯಾಗಿ ನಡೆಯುವಂತಹವುಗಳಾಗಿವೆ. ಐದು ರೂಪಾಯಿಯಿಂದ ಬೇಕಾದ ಬೆಲೆಯ ಗಡಿಯಾರಗಳು ಸಿಗುವವು. ಕೊಳ್ಳುವಾಗ ಪ್ರತಿಯೊಂದಕ್ಕೆ ಗ್ಯಾರಂಟಿ ಕೊಡುತ್ತೇವೆ. ಒಮ್ಮೆ ಬಂದು ನೋಡುವಿರಷ್ಟೇ?

ಪ್ರೊಪ್ರಾಯಿಟರ, ದತ್ತುರಾವ ಲೋಖಂಡೆ
ಟ ಟ್ಯಾಂಡ ಸ್ಕ್ವಾರ ಮಾರ್ಕೆಟ ಧಾರವಾಡ.

ದಿ. ಅಂಕಲಗಿ ಬ್ಯಾಂಕ ಲಿಮಿಟೇಡ್ ಧಾರವಾಡ.

—o—

೧೯೧೩ ಇಸ್ವಿಯ

ಕಂಪನಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ಚಾಲೂ ಖಾತೆ, ಠೇವು, ಸೆವ್ಹಿಂಗ್ಸ ಡಿಪಾಜಿಟ, ಸಾಲ, ವತ್ತಿ, ಹುಂಡಿ, ಮುಂತಾದ ಯಾವತ್ತು ವ್ಯವಹಾರಗಳು ನಡೆಯುವವು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡುವವರಿಂದ ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ ರಿಂದ ೧೦-೩೦. ಸಾಯಂಕಾಲ ೩ ರಿಂದ ೬ ರವರೆಗೆ ನಡೆಯುವದು.

K.B . Ankalagi
ಮ್ಯಾನೆಜಿಂಗ ಡಾಯರೆಕ್ಟರ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವ್ಯಾಖ್ಯಾನಪದ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಪಡಿಸಿದರು.

R.B.N. 1443

ನಿತ್ಯ ಪತ್ರ — ಬಿಡಿ ಪ್ರತಿಗೆ ಅರ್ಧ ಆಣೆ

ಸಂಪಾದಕರು- ಅಧ್ಯಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೬) ಧಾರವಾಡ ಗುರುವಾರ ತಾರೀಖು ೫ನೇ ನವಂಬರ ೧೯೩೬ (ಸಂಚಿಕೆ ೫೪

ಕರ್ನಾಟಕ ತರುಣರಿಗೊಂದು!

ಬಿನ್ ಬಂಡವಾಳಿನ ವ್ಯವಸಾಯ!!

ಕಿರ್ಲೋಸ್ಕರ ನೇಗಿಲುಗಳ ಮಾರಾಟ !!!

ಕಿರ್ಲೋಸ್ಕರ ನೇಗಿಲು ಮತ್ತು ಗಾಣಗಳ ಉಪಯೋಗವು, ಮತ್ತು ಮಹತ್ವವು ಹಿಂದುಸ್ಥಾನದ ಪ್ರತಿಯೊಬ್ಬ ಒಕ್ಕಲಿಗನಿಗೆ ಗೊತ್ತಿದ್ದ ಮಾತು. ಇವುಗಳಿಗೆ ಗಿರಾಕಿಗಳು ಬಹಳ ಇದ್ದರಿಂದ ಅವುಗಳನ್ನು ಖರ್ಚು ಮಾಡಿಸುವ ದಲಾಲರಿಗೆ ಶ್ರಮ ಬೀಳದು. ಕಂಪನಿಯಿಂದ ದೊರೆಯುವ ಕ್ಯಾಟಲಾಗು, ಜಾಹೀರ ಪತ್ರಿಕೆ, ಗೋಡೆಯ ಚಿತ್ರಪಟ ಇತ್ಯಾದಿ ಜಾಹೀರಾತಿನ ಸಾಮಗ್ರಿಗಳನ್ನು ಹರಿಸಿ ಹಳ್ಳಿಗಳಲ್ಲಿ ಪ್ರಸಾರ ಮಾಡಿದಲ್ಲಿ ಆರ್ಡರು ದೊರೆಯುವವು. ಈ ಆರ್ಡರ ಕೂಡ ೧/೪ ಹಣವನ್ನು ತಗೆಕೊಂಡು ಕಂಪನಿಗೆ ಕಳುಹಿಸಿದಲ್ಲಿ ಕಂಪನಿಯು ಅವರ ವರ ಹೆಸರಿನ ರಸೀದಿಯನ್ನು ಮಿಕ್ಕ ಹಣಕ್ಕೆ ವ್ಹಿ. ಪಿ. ಮಾಡಿ ದಲಾಲರಿಗೆ ಕಮಿಶನ್ ಕೊಡುವದು.

ಕಮೀಶನ್ ದರಗಳ ಬಗ್ಗೆ ಇಂದೇ ಕಾಗದವನ್ನು ಬರೆದು ತಿಳಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ } ಕಿರ್ಲೋಸ್ಕರವಾಡಿ. ಜಿಲ್ಲಾ ಸಾತಾರಾ.

ಫಕ್ತ ೨ ಆಣೆಯೊಳಗೇ ಆಶ್ಚರ್ಯಕಾರಕ ವ ರಾಮಬಾಣ ಉಪಾಯ

ಮೊಮೆಂಟ ಕ್ಯೂರ್

ತಲೆಶೂಲಿ, ಅರ್ಧ ತಲೆಶೂಲಿ, ಶೀತ, ಉಷ್ಣ ವ ನಿತ್ರಾಣ ವಗೈರೆಗಳಿಂದಾದ ಮಸ್ತಕಶೂಲಿಯು ತ್ವರಿತದಿಂದ ನಿರ್ಮೂಲ ಮಾಡಲು " ಮೊಮೆಂಟ ಕ್ಯೂರ " ನಿಗೆ ಸರಿಸಮಾನನಾದ ಔಷಧವು ಬೇರೆ ಇಲ್ಲ. ಹೆಚ್ಚು ಜನರು ಮಸ್ತಕಶೂಲೆಯನ್ನು ಸಹಿಸಲು ಆಗದೆ ಮಸ್ತಕಕ್ಕೆ ವಸ್ತ್ರಕಟ್ಟಿ ಎಷ್ಟೋ ವ ಆ ಕರನ್ನು ಕಳೆಗಿಸುತ್ತಾರೆ. ಆದರೆ ನಿರಾಶೆಯಾದವರು ಮೋಮೆಂಟ ಕ್ಯೂರದ ಪುಡಿಯನ್ನು ಬಿಸಿ ಚಹಾದೊಂದಿಗೆ ಅಥವಾ ಬಿಸಿ ನೀರಿನೊಂದಿಗೆ ಹೊಟ್ಟೆಯಲ್ಲಿ ತಕ್ಕೊಂಡಲ್ಲಿ ಒಂದೇ ಕ್ಷಣದಲ್ಲಿ ಮಸ್ತಕಶೂಲಿಯು ನಿಲ್ಲುವುದು. ಇದಕ್ಕೆ ಅನೇಕ ಶಿಫಾರಸ ಪತ್ರಗಳು ಉಂಟು.

೧ ಪೇಟಿಗೆ ೨ ಆಣೆ. ಸ್ಯಾಂಪಲ ಸಲುವಾಗಿ ೩ ಆಣೆ ಪೋಸ್ಟ ತಿಕೀಟುಗಳನ್ನು ಕಳಿಸಿದಲ್ಲಿ ಕಳಿಸುವೆವು.

ವಿಳಾಸ— ದಿ ಕರ್ನಾಟಕ ಮೆಡಿಕಲ ಸ್ಟೋರ್ಸ್, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರ: ಸ್ಟೇಶನರೋಡ ಹುಬ್ಬಳಿ.

ಲೋಕಬಂಧು

ವಾರಪತ್ರಿಕೆ

ಸಂಪಾದಕರು- ಲಕ್ಷ್ಮಣ ರಾಮಚಂದ್ರ ಪಾಂಗೆ

ಈ ಪತ್ರವು ಧಾರವಾಡದಲ್ಲಿ ಪ್ರತಿ ರವಿವಾರ ಹೊರಡುತ್ತಿದ್ದು ಇದರಲ್ಲಿ ರಾಜಕೀಯ ಸಾಮಾಜಿಕ ಔದ್ಯೋಗಿಕ, ಕೃಷ್ಯಾದಿ ಮುಂತಾದ ವಿಷಯಗಳು ಚನ್ನಾಗಿ ಪ್ರತಿಪಾದಿಸಲ್ಪಡುವದಲ್ಲದೆ, ಎಲ್ಲ ಪ್ರಾಚಲಿತ ಸಂಗತಿಗಳು ಸುಲಭ ಭಾಷೆಯಲ್ಲಿ ಬರೆಯಲ್ಪಡುವವು.

ವಾರ್ಷಿಕ ವರ್ಗಣಿ ಮುಂಗಡ ೩—೮—೦

ಮ್ಯಾನೇಜರ,
ಲೋಕಬಂಧು ಆಫೀಸ, ಧಾರವಾಡ.

ಪ್ರಾಥಮಿಕ ಶಿಕ್ಷಕ

ಮಾಸಪತ್ರಿಕೆ.

ಸಂಪಾದಕರು- ಲಕ್ಷ್ಮಣ ರಾಮಚಂದ್ರ ಪಾಂಗೆ.

ಉತ್ತರ ಕರ್ನಾಟಕದ ಪ್ರಾಥಮಿಕ ಶಿಕ್ಷಕರ ಹಿತ ಸಂಬಂಧವನ್ನು ಕುರಿತು ಅತ್ಯಂತ ಕಳಕಳಿಯಿಂದ ಪ್ರಯತ್ನ ನಡಿಸುವ ಮಾಸಪತ್ರಿಕೆಯು. ಶಿಕ್ಷಕರು ಇದನ್ನು ತರಿಸಿಕೊಳ್ಳಲು ಅಡ್ಡಿಯಿಲ್ಲೆಂದು ಕೌನ್ಸಿಲ್ಲದವರೂ, ಶಾಲಾಧಿಕಾರಿಗಳೂ ಒಪ್ಪಿರುವರು.

ವಾರ್ಷಿಕ ವರ್ಗಣಿ ಮುಂಗಡ ೨—೦—೦

ಮ್ಯಾನೇಜರ
ಪ್ರಾಥಮಿಕ ಶಿಕ್ಷಕ ಆಫೀಸ, ಧಾರವಾಡ

ಚಂದಾದಾರರಿಗೆ ಸೂಚನೆ

೧೯೩೭ನೆಯ ಹೊಸ ವರ್ಷಪ್ರಾರಂಭವಾಗಿದ್ದು, ನಡೆಯುವ ತಿಂಗಳದಬಗ್ಗೆ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ ಯನ್ನು ಕಳಿಸಲಿಕ್ಕೆ ಪ್ರಾರಂಭಿಸುವೆವು. ಚಂದಾದಾರರು ವ್ಹಿ. ಪಿ. ಯನ್ನು ಸ್ವೀಕರಿಸಿ, ವಿಜಯವನ್ನು ಈ ಮೊದಲಿನಂತೆ ಪ್ರೋತ್ಸಾಹಿಸಬೇಕೆಂದು ಬಯಸುತ್ತೇವೆ.

ವ್ಯವಸ್ಥಾಪಕ ವಿಜಯ
ಧಾರವಾಡ.

ವಿಜಯ.

ಧಾರವಾಡ ತಾ- ೪-೩-೨೬ ನೇ ಇಸ್ವಿ

ಮೂರನೇ ವರ್ಗದ ಪ್ರಯಾಣಿಕರ ಗೋಳು.

—೦—

ಲೆಜಿಸ್ಲೇಟಿವ್ಹ ಅಸೆಂಬ್ಲಿಯಲ್ಲಿ ಮೂರನೇ ವರ್ಗದ ಪ್ರಯಾಣಿಕರು ಎಷ್ಟು ಕಷ್ಟ ಪಡುತ್ತಾರೆಂಬ ವಿಷಯವಾಗಿ ವಾದವಿವಾದ ನಡೆಯಿತು. ಸರಕಾರದ ಮೆಂಬರರು ಪ್ರಾರಂಭದಲ್ಲಿ ಯಾವ ಮಾತನ್ನು ಒಪ್ಪ ಕೊಡದೆಂದು ಪಂಥ ಮಾಡಿರುವರು. ಇವರು ಈ ಠರಾವನ್ನು ವಿರೋಧಿಸಿದರು. ನಾವು ರಿಪೋರ್ಟ ಪ್ರಸಿದ್ಧ ಮಾಡಿದ್ದೇವೆ. ಅದನ್ನು ಓದಿರೆಂದು ಸರ ಇನ್ನ ಸಾಹೇಬರು ಹೇಳಿದರು. ಪ್ರತ್ಯಕ್ಷ ಅನುಭವಕ್ಕೆ ಎರಡನೆಯ ಪುರಾವೆಯು ಬೇಕಿಲ್ಲವೆಂದು ಶ್ರೀ ಗಯಾ ಪ್ರಸಾದಸಿಂಗರು ಇನ್ನ ಸಾಹೇಬರಿಗೆ ಉತ್ತರ ಕೊಟ್ಟರು. ಇದಕ್ಕೆ ಈ ವರ್ಷ ಮೂರನೇ ವರ್ಗದ ಐದು ಹೊಸ ಡಬ್ಬಿಗಳನ್ನು ಮಾಡಿಸುತ್ತೇವೆಂದು ಸಾಹೇಬರು ಉತ್ತರ ಕೊಟ್ಟರು. ಇಷ್ಟು ಡಬ್ಬಿಗಳಿಂದ ಪ್ರಯಾಣಿಕರ ದಟ್ಟಣೆಯು ಕಡಿಮೆಯಾಗಲಾರದು. ರೇಲ್ವೆ ಕಂಪನಿಗಳು ಈಗ ಬಿಡುವ ಬಂಡಿಗಳಿಗಿಂತ ಹೆಚ್ಚಿಗೆ ಬಂಡಿಗಳನ್ನು ಬಿಟ್ಟರೇ ದಟ್ಟಣೆಯು ಕಡಿಮೆಯಾಗುವದು. ರೇಲ ಬಂಡಿಯಲ್ಲಿ ಗದ್ದಲವಿಲ್ಲದಂಥ ದಿವಸವೇ ಇರುವದಿಲ್ಲ. ಒಂದು ಬಂಡಿಯ ಹಿಂದೆ ಅಷ್ಟೇ ವೇಗದ ಮತ್ತೊಂದು ಬಂಡಿಯನ್ನು ಬಿಟ್ಟ ಹೊರತು, ದಟ್ಟಣೆಯು ಕಡಿಮೆಯಾಗಲಾರದು.

ಮೂರನೇ ವರ್ಗದ ಪ್ರಯಾಣಿಕರ ದೆಸೆಯಿಂದ ಸ್ಟೇಶನದಲ್ಲಿ ಯಾವ ಪ್ರಕಾರದ ಸೋಯಿ ಇರುವದಿಲ್ಲ. ೧ ನೇ ಮತ್ತು ಎರಡನೇ ವರ್ಗದ ಒಬ್ಬಿಬ್ಬ ಪ್ರಯಾಣಿಕರ ದೆಸೆಯಿಂದ ವಿಶಾಲವಾದ ಕೋಣೆಗಳಿದ್ದು, ಖುರ್ಚಿ, ಬಾಕು, ಮೇಜು ಮುಂತಾದ ಉಪಕರಣಗಳಿರುತ್ತವೆ. ಆದರೆ ಕಂಪನಿಗಳ ಬೊಕ್ಕಸವನ್ನು ದಿನಾಲು ತುಂಬತಕ್ಕಂಥ ೩ ನೇ ವರ್ಗದ ಪ್ರಯಾಣಿಕರ ದೆಸೆಯಿಂದ ಎರಡು ಬಾಕುಗಳು ಕೂಡ ಇರುವದಿಲ್ಲ. ಇವರಿಗೆ ಟಿಕೀಟಕ್ಕೆ ಕೆಳಗೆ ನೆಲವಿದ್ದಂತೆ ಮೇಲೆ ನೆರಳಿಗೆ ಆಕಾಶವೇ ಇರುವದು. ಈ ದುರವಸ್ಥೆಯು ಪ್ರತಿಯೊಂದು ಸ್ಟೇಶನದಲ್ಲಿ ಕಂಡು ಬರುವದು. ಆದ್ದರಿಂದ ಕಂಪನಿಗಳು ಪ್ರತಿಯೊಂದು ಸ್ಟೇಶನದಲ್ಲಿ ಈ ವರ್ಗದ ಜನರ ಸೋಯಿಗಾಗಿ ವೇಟಿಂಗ ರೂಮುಗಳನ್ನು ಹೆಚ್ಚಿಸುವದು ಅವಶ್ಯವಾಗಿರುತ್ತದೆ.

ಈ ವರ್ಗದ ಪ್ರಯಾಣಿಕರಿಗೆ ೧೫ ಶೇರು ತೂಕದಷ್ಟು ಲಗೇಜ ಒಯ್ಯಗೊಡುವರು. ಇದರಿಂದ ಅಷ್ಟ ಜನರು ಲಗೇಜ ಚಾರ್ಜದ ಭೂದಂಡವನ್ನು ತೆರುತ್ತಿದ್ದಾರೆ. ಇದನ್ನು ೨೦ ಶೇರು ಮಾಡಬೇಕೆಂದು ಮಿ. ಚಾಂದಾ ಎಂಬೋರ್ವ ಮೆಂಬರರು ಸೂಚಿಸಿದ್ದಾರೆ. ಈ ಸೂಚನೆಯನ್ನು ರೇಲ್ವೆ ಬೋರ್ಡಿನವರು ಅಂಗೀಕರಿಸುವರೆಂದು ತಿಳಿಯುತ್ತೇವೆ.

———

ಮುಂಬಯಿ ಇಲಾಖೆಯೇ ಮಾಡಿದ ತಪ್ಪೇನು?

—೦—

ಹಿಂದುಸ್ಥಾನದ ಆಡಳಿತೆಯಲ್ಲಿ ಹೊಸ ಸುಧಾರಣೆಯಾದಂದಿನಿಂದ ಪ್ರತಿಯೊಂದು ಇಲಾಖೆಯು ಆ ಸರಕಾರದ ವೆಚ್ಚಕ್ಕಾಗಿ ಕೆಲವು ರಕಮು ಕೊಡಬೇಕೆಂದು ಗೊತ್ತಾಗಿದೆ. ಈ ರಕಮನ್ನು ಗೊತ್ತು ಮಾಡುವದಕ್ಕಾಗಿ ಲಾರ್ಡ ಮೆಸ್ಟನ ಸಾಹೇಬರು ನೇಮಿಸಿದ್ದರು. ಅವರು ಮಾಡಿದ ನಿರ್ಣಯವು ಅನ್ಯಾಯದ್ದಾಗಿರುತ್ತದೆಂದು ಪ್ರತಿಯೊಂದು ಇಲಾಖೆಯು ಅನುಭವಿಸುತ್ತದೆ. ಈ ಅನ್ಯಾಯವನ್ನು ತುಸುವಾದರೂ ಕಡಿಮೆ ಮಾಡಬೇಕೆಂಬ ಉದ್ದೇಶದಿಂದ ಹಿಂದುಸ್ಥಾನ ಸರಕಾರದವರು ಮದ್ರಾಸಕ್ಕೆ ೧೨೬, ಅಲ್ಲಾಬಾದ ಇಲಾಖೆಗೆ ೫೬, ಪಂಜಾಬಕ್ಕೆ ೬೧ ಮತ್ತು ಬ್ರಹ್ಮದೇಶಕ್ಕೆ ಏಳು ಲಕ್ಷಗಳ ಉಳಿತಾಯ ಮಾಡಿಕೊಟ್ಟಿದ್ದಾರೆ. ಆದರೆ ಈ ಶ್ರೀಮಂತದ ಒಂದು ಕಾಸು ಕೂಡ ಮುಂಬಯಿ ಇಲಾಖೆಗೆ ದೊರೆತಿರುವದಿಲ್ಲ. ಪ್ರತಿಯೊಂದು ಇಲಾಖೆಯ ಜನಸಂಖ್ಯೆ ಮತ್ತು ಪ್ರತಿಯೊಬ್ಬನ ತಲೆಗೆ ಬರುವ ಕರಭಾರ ನೋಡಿದರೆ- ಮುಂಬಯಿ ಇಲಾಖೆಯೇ ಕರಭಾರದಿಂದ ಬಾಗಿರುತ್ತದೆಂದು ಕಂಡು ಬರುತ್ತದೆ. ಆದರೂ ಹಿಂದುಸ್ಥಾನ ಸರಕಾರವು ಈ ಭಾರ ಕಡಿಮೆ ಮಾಡಲು ತುಸುವಾದರೂ ಸಹಾನುಭೂತಿ ತೋರಿಸಿಲ್ಲ. ವರಿಷ್ಠ ಸರಕಾರದ ಈ ಕೃತ್ಯ ನಿಷೇಧಿಸುವದಕ್ಕಾಗಿ ಮುಂಬಯಿ ಕೌನ್ಸಿಲದಲ್ಲಿ ಠರಾವು ತರಬೇಕು. ಮತ್ತು ಎಲ್ಲ ಪಕ್ಷದವರು ಒಮ್ಮತದಿಂದ ಇದನ್ನು ಪಾಸ ಮಾಡಬೇಕೆಂದು ಬ್ಯಾರಿಸ್ಟರ ಜಯಕರರು ಸ್ವರಾಜ್ಯ ಪಕ್ಷದ ಪರಿಯಿಂದ ಅಭಿಪ್ರಾಯ ಪಟ್ಟಿರುತ್ತಾರೆ.

ಒಂದು ವರ್ಷದಲ್ಲಿ ಕಾರವಾರ ಜಿಲ್ಲೆಯಲ್ಲಿ ಕಾಡ ಪಶುಗಳಿಂದ ಏಳು ಲಕ್ಷ ರೂಪಾಯಿ ಬೆಲೆ ಬಾಳುವಷ್ಟು ಬೆಳೆಯು ನಾಶವಾಗಿರುತ್ತದೆಂದು ಕೌನ್ಸಿಲದಲ್ಲಿ ಕೇಳಿದ ಪ್ರಶ್ನೆಕ್ಕೆ ಉತ್ತರ ದೊರೆತಿರುತ್ತದೆ.

ಸ್ವರಾಜ್ಯ ಕಮಿಟಿಯು ಸೆನೆಗುದಿಗೆ ಬಿತ್ತು.

—೦—

ಅಖಿಲ ಭಾರತೀಯ ಸ್ವರಾಜ್ಯ ಕಮಿಟಿಯ ಸಭೆಯು ಹೋದ ಆದಿತ್ಯವಾರದ ದಿವಸ ದಿಲ್ಲಿಯಲ್ಲಿ ಕೂಡಿತ್ತು. ಮಹಾತ್ಮರು ಅಧ್ಯಕ್ಷರಾಗಿದ್ದರು. ಸಭೆಗೆ ೧೫ ಕ್ಕಿಂತ ಹೆಚ್ಚು ಜನರು ಬರಲಿಲ್ಲ. ಹಿಂದೂ ಮುಸಲಮಾನರ ಐಕ್ಯದ ವಿಷಯವಾಗಿ ಮಹಾತ್ಮರು ವ್ಯಕ್ತ ಪಡಿಸಿದ ವಿಚಾರದ ವಿರುದ್ಧವಾಗಿ ಲಾಲಾ ಲಜಪತರಾಯರು ಮಾಡಿದ ಟೀಕೆಯ ಬಗ್ಗೆ ಸಭೆಯಲ್ಲಿ ವಿಚಾರವಾಯಿತು. ಮುಸಲಮಾನರ ಜನಸಂಖ್ಯೆಯು ಹೆಚ್ಚಿರುವಲ್ಲಿ ಮುಸಲಮಾನ ಬಹುಮತ, ಹಿಂದೂ ಜನರ ಜನ ಸಂಖ್ಯೆ ಹೆಚ್ಚಿರುವಲ್ಲಿ ಹಿಂದೂಗಳ ಬಹುಮತ ಈ ಪ್ರಕಾರ ಕೌನ್ಸಿಲ, ಸರಕಾರೀ ಕೆಲಸ ಮುಂತಾದವುಗಳಲ್ಲಿ ವಿಭಾಗವಾಗಬೇಕೆಂದು ಹಿಂದೂ ಮುಸಲಮಾನ ಪಕ್ಷಗಳು ಅನ್ನುತ್ತಲಿವೆ. ಈ ಪ್ರಕಾರದ ಬೇಡಿಕೆಯು ಬಗೀ ಹರಿಯುವ ಕೃತ್ಯವಾಗದ್ದರಿಂದ, ಮತ್ತು ಬೇಗನೆ ಉಭಯ ಪಂಗಡಗಳಲ್ಲಿ ರಾಜೀ ಆಗುವ ಸಂಭವವಿಲ್ಲದ್ದರಿಂದ, ಈ ವಿಷಯದ ವಿಚಾರವನ್ನು ಸದ್ಯದಲ್ಲಿ ಹಕಕೊಟ್ಟು ಮಾಡಬೇಕೆಂದು ಹೇಳಿ, ಮಹಾತ್ಮರು ಸಭೆಯ ವಿಸರ್ಜನ ಮಾಡಿದರು.

———

ಸ್ಮರಣ ಶಕ್ತಿಯ ಸಾಮರ್ಥ್ಯ

ಸರ ಬ್ಯಾಸಿಲ ಬ್ಲ್ಯಾಕೆಟ ಸಾಹೇಬರು ಅಸೆಂಬ್ಲಿಯಲ್ಲಿ ಅಂದಾಜುಪತ್ರದ ಪತ್ರಿಕೆಯನ್ನು ಕುರಿತು ಒಂದೂ ಮುಕ್ಕಾಲು ತಾಸಿನ ತನಕ ಭಾಷಣ ಮಾಡಿದರು. ಅನೇಕ ಖಾತೆಗಳು, ಕೋಟಿ, ಲಕ್ಷ, ಸಾವಿರ, ವಿಸವುದ ಅಂಕೆಗಳು ಅನೇಕವಾಗಿದ್ದರೂ, ಸಾಹೇಬರು ಇವನ್ನೆಲ್ಲ ಸ್ಮರಣ ಶಕ್ತಿಯಿಂದಲೇ ಹೇಳಿದರು. ಇವರ ಈ ಅದ್ಭುತ ಸಾಮರ್ಥ್ಯದ ಬಗ್ಗೆ ಮೆಂಬರರು ಇವರ ಅಭಿನಂದನ ಮಾಡಿದರು.

೧ಲಕ್ಷಾನೆಯ ತಾರೀಖಿಯಲ್ಲಿ ಪುಣೆಯಲ್ಲಿ ರಾಷ್ಟ್ರೀಯ ಸಭೆಯು ಕೂಡಿದಾಗ ಅಧ್ಯಕ್ಷರಾಗಿದ್ದ ಸರ ಸುರೇಂದ್ರನಾಥ ಬ್ಯಾನರಜಿಯವರು ಮೂರು ತಾಸು ಭಾಷಣ ಮಾಡಿದರು. ಭಾಷಣವು ಅಸ್ಖಲಿತವಾಗಿತ್ತು ಮತ್ತು ಇವರು ಯಾವಾಗಲು ಮುದ್ರಿಸಿದ ಪ್ರತಿಗೆ ಕೈ ಹಚ್ಚಲಿಲ್ಲೆಂದು ಅವರ ಪ್ರಶಂಸೆ ಮಾಡಲ್ಪಟ್ಟಿತು.

ಮದ್ದಿನ ಮನೆಯು ಸುಟ್ಟು ಭಯಂಕರ ಪ್ರಾಣ ಹಾನಿ.

ತುರುಕರಿಗೂ ಖುರ್ದರಿಗೂ ನಡೆದ ಯುದ್ಧದಲ್ಲಿ ಖುರ್ದರು ಪೂರಾ ಸೋತರು. ಖಾರಪುಟ ಪೇಟೆಯಲ್ಲಿ ಖುರ್ದರು ಒಂದು ಮದ್ದಿನ ಮನೆಗೆ ಬೆಂಕಿ ಹಚ್ಚಲು, ಅದರ ಹಾರಿಕೆಯಿಂದ ನೂರು ಜನ ಪಹರೆಗಾರರೂ, ೫೦ ಜನ ಪಟ್ಟಣಿಗರೂ ಮಡಿದರು.

ದಕ್ಷಿಣ ಆಫ್ರಿಕೆಯಲ್ಲಿ ವರ್ಣದ್ವೇಷ.

—o—

ದಕ್ಷಿಣ ಆಫ್ರಿಕೆಯಲ್ಲಿ ನಡೆವಿರುವ ವರ್ಣದ್ವೇಷವು ಅದರ ನಿಜಸ್ಥಿತಿಯನ್ನು ಅರಿಯುವವರ ಕಲ್ಪನೆಗೆ ಮೀರುವಂತಾಗಿರುತ್ತದೆ. ಈ ಜಗಳವು ಮಹಾತ್ಮರು ಆ ದೇಶದಲ್ಲಿ ಇರುವ ಕಾಲದಿಂದ ಸತತವಾಗಿ ನಡೆಯುತ್ತದೆ. ಇದು ಕಡಿಮೆಯಾಗುವದರ ಬದಲು ಹೆಚ್ಚುತ್ತಲಿದೆ. ಇಂಗ್ಲಿಷ ಸರಕಾರಕ್ಕೆ ಇದೊಂದು ರೋಗ ಬಾಧೆಯಾಗಿರುತ್ತದೆಂದರೂ ಸಲ್ಲುವದು. ಆಫ್ರಿಕಾ ಸರಕಾರದವರು ತಮ್ಮನ್ನಾಳುವ ಕೇಳಲಿಕ್ಕೆ ... ಹಿಂದೀ ಜನರನ್ನು ಹೊರಹಾಕುವ ಯುಕ್ತಿಗಳನ್ನು ಶೋಧಿಸಬೇಕೆಂದಿದ್ದರೆ. ಅಲ್ಲಿಯ ಗೌರವಾಯುಕ್ತರು ಇವರ ಅಂಗಡಿಗಳಲ್ಲಿ ಸ್ವಜಾತಿಯರು ವ್ಯಾಪಾರ ಮಾಡಬಾರದೆಂದು ಶಿಕ್ಷೆಯಿಂದ ಸಾರಿದರೆ, ಸರಕಾರವು ಇವರು ಪಟ್ಟಣಗಳಲ್ಲಿ ವಾಸಮಾಡಬಾರದೆಂದೂ, ಅವು ಸ್ಥಳದಲ್ಲಿ ಇವರು ಯಾವ ಪ್ರಕಾರದ ವ್ಯಾಪಾರ ಉದ್ಯೋಗ ಮಾಡಬಾರದೆಂದೂ ಕಾಯಿದೆ ಮಾಡಲಿದ್ದಾರೆ. ಹಿಂದೀ ಜನರ ದುಸ್ಥಿತಿಗಳನ್ನು ಸಾರಲು ಹಿಂದುಸ್ತಾನ ಸರಕಾರದ ಪ್ರತಿನಿಧಿ ... ಮರಾರಿ ಶ್ರೀನಿವಾಸ ಶಾಸ್ತ್ರಿಯವರು ಜನರಲ ಹರ್ಟಜೋಗ ಸಾಹೇಬರ ಕೂಡ ತಿಕ್ಕಾಟ ಮಾಡಿದರು. ಸಾಹೇಬರು ... ನೆಪ ಹೇಳಿದರು. ಈಗ ಆಫ್ರಿಕಾ ಸರಕಾರದ ವರ್ಣದ್ವೇಷ ನೀತಿಯಿಂದ ... ಆಫ್ರಿಕಾ ... ದ್ವೇಷಕಟ್ಟಿ ಕೊಳ್ಳುತ್ತಿದೆಂದು ಅಲ್ಲಿಯ ಪಾರ್ಲಮೆಂಟ ಸಭೆಯಲ್ಲಿ ಭಾಷಣ ಮಾಡುತ್ತಿದ್ದಾರೆ. ಸಾಹೇಬರು ತಮ್ಮ ಒಡಂಬಡಿಕೆಯನ್ನು, ವರ್ಣದ್ವೇಷದ ಮೂಲ ತಿಳಿದು ಹಾಕಬೇಕಾಗಿತ್ತು. ಅಧಿಕಾರ ಹೋದ ಕೂಡಲೆ ತಕರಾರು ಮಾಡುವದು ವ್ಯರ್ಥ ಮಾತೇ ಸರಿ.

ರಶಿಯಾದ ದೊರತನದ

ಪ್ರಶಂಸೆ ಮತ್ತು ಟೀಕೆ.

—o—

ಇಂಗ್ಲೆಂಡದ ಕೂಲಿಕಾರ ಪಕ್ಷದ ವರ್ತಕ ಸಂಘದವರು ರಶಿಯಾದಲ್ಲಿ ರಾಜ್ಯಕಾರಭಾರ ಹೇಗೆ ನಡೆದಿರುತ್ತದೆಂಬದನ್ನು ಪ್ರತ್ಯಕ್ಷ ಕಂಡುಬರುವದಕ್ಕಾಗಿ ಕೆಲವು ಪ್ರತಿನಿಧಿಗಳನ್ನು ಕಳಿಸಿದ್ದರು. ಇವರು ಆರು ವಾರಗಳ ವರೆಗೆ ಆ ರಾಜ್ಯದಲ್ಲಿ ತಿರುಗಾಡಿ ಒಂದು ರಿಪೋರ್ಟು ಪ್ರಸಿದ್ಧ ಮಾಡಿದ್ದಾರೆ. ಅದರಲ್ಲಿ ಅನ್ನುವದೇನಂದರೆ—

"ಬೋಲ್ಶೆವಿಕ ಸರಕಾರವು ಚಿರಸ್ಥಿರವಾಗಿದೆ ಬಲಿಷ್ಠವಾಗಿದೆ. ರಾಜ್ಯವೆಲ್ಲ ರಾಷ್ಟ್ರೀಯ ಆಸ್ತಿಯೆಂದು ಇದರ ತತ್ವವು. ಕೂಲಿಕಾರರೂ ರೈತರೂ ಬಹು ಸಂಖ್ಯೆಯಿಂದ ಈ ತತ್ವವನ್ನು ಅಂಗೀಕರಿಸಿದ್ದಾರೆ. ಜಾತಿಜಾತಿಗಳಿಗೂ, ಬೇರೆ ಬೇರೆ ತತ್ವಾಭಿಮಾನಿಗಳಿಗೂ ಉದಾರ ಬುದ್ಧಿಯಿಂದ ವಿಚಾರ ಸ್ವಾತಂತ್ರ್ಯ ಕೊಡಲ್ಪಟ್ಟಿರುತ್ತದೆ. ರಾಜ್ಯಶಕ್ತಿಯು ಸಬಲವಾಗಿ ಸಾಗಿದೆ. ಸರಕಾರವು ಜಲೋಸ್ಥಿತಿಯಲ್ಲಿರುವದು. ಇಂಥ ದೊರೆತನವು ಹಿಂದೆ ಇದ್ದಿಲ್ಲ. ಬೇರೆ ಸರಕಾರಗಳು ಅನ್ಯಾಯಕ ಹೊಂದಿದಂಥ ಮತ್ತು ಹೊಂದುತ್ತಿರುವಂಥ ಕೃತಿಗಳನ್ನು ಇದು ಯುಕ್ತವನ್ನು ಕರವಾಗಿ ಮಾಡಿ ತೋರಿಸುತ್ತಿರುವದು. ಈ ಉತ್ತಮವಾದ ವ್ಯವಸ್ಥೆಗೆ ತುರು ಜನರು ಮೂಗು ಮುರಿಯುತ್ತಿರುವರು. ರಶಿಯಾದ ಅನೇಕತೆಯು ನವೀನವಾಗಿದ್ದು ಪರದೇಶೀಯರು ಅಲ್ಲಿಯ ಪ್ರಾಚೀನತನವನ್ನು ತಿಳಕೊಳ್ಳಲು ಬೋಧಪ್ರದವಾದ ವಿಷಯವಾಗಿರುತ್ತದೆ.

ರಶಿಯಾದ ಆಡಳಿತವನ್ನು ಮೇಲಿನಂತೆ ಸ್ತುತಿಸಿದ ಬಗ್ಗೆ ಇಂಗ್ಲಂಡದ ಪತ್ರಗಳು ಪ್ರತಿನಿಧಿಗಳ ಮೇಲೆ ಬಹಳವಾಗಿ ರೇಗಿವೆ. ಕೂಲಿಕಾರರ ಪಕ್ಷದ ಹೇಳಿ ಮಾಡಲ್ಪಟ್ಟ ಮಾತ್ರ ಇವರ ಪ್ರಶಂಸೆ ಮಾಡಿದೆ. ರಶಿಯಾವು ಇಂಗ್ಲಿಷ ಪ್ರತಿನಿಧಿಗಳ ಕಣ್ಣಿಗೆ ಬಂಗು ಹಚ್ಚಿದರು. ರಶಿಯಾದ ಹೊರಗಿನ ಜನರಿಗೆ ತಿಳಿಯ ಸಂಗತಿಗಳಿಗೆ ವಿಪರೀತವಾದ ಸುದ್ದಿಗಳನ್ನೇ ಇವರು ಹೇಳುತ್ತಾರೆ. ಇವರಿಗೆ ರಶಿಯಾದ ಭಾಷೆ ಗೊತ್ತಿಲ್ಲ. ಆರೇ ವಾರಗಳಲ್ಲಿ ದುಭಾಷಿಗಳ ಕೂಡ ತಿರುಗಾಡಿ ಬಂದವರು; ಇಂಥವರ ಹೇಳಿಕೆ ನಿಜವಾಗಲಾರದೆಂದು ಅಂದನ ಟಾಯಿಮ್ಸವು ಟೀಕೆ ಮಾಡಿರುತ್ತದೆ. ಈ ರಿಪೋರ್ಟು ರಶಿಯಾದ ಹುಳುಕುಗಳನ್ನು ಮುಚ್ಚುವದಕ್ಕಾಗಿ ಸುಣ್ಣದ ಸಾರಣೆಯಾಗಿರುತ್ತದೆಂದು ಬೇರೆ ಪತ್ರಗಳು ಅಂದಿರುತ್ತವೆ.

ವಿವಿಧ ವಿಷಯಗಳು

—o—

ತಿರುಪತಿಯ ಮ್ಯುನಿಸಿಪಾಲಿಟಿಯವರು ಮಹಾತ್ಮರ ಹೆಸರಿನಿಂದ ಒಂದು ವಾಚನಾಲಯ ಸ್ಥಾಪಿಸಿದ್ದಾರೆ. ಕಲೆಕ್ಟರ ಸಾಹೇಬರು ಈ ಹೆಸರು ಸ್ಥಿರ ಕಾಯಬೇಕೆಂದು ನಾಮಂಜೂರ ಮಾಡಿದರು. ಮ್ಯುನಿಸಿಪಾಲಿಟಿಯು ಗಾಂಧಿ ವಾಚನಾಲಯವೆನ್ನುವದರ ಬದಲು- ಯಾವನೊಬ್ಬ ಗೌರಕಾಯ ದೊರೆಯ ಹೆಸರಿಟ್ಟಿದ್ದರೆ- ಸಾಹೇಬರು ಸಂತೋಷದಿಂದ ಮಂಜೂರ ಮಾಡಿ, ಮೇಲೆ ಮ್ಯುನಿಸಿಪಾಲಿಟಿಯನ್ನು ಬಹುವಾಗಿ ಹೊಗಳುತ್ತಿದ್ದರು. ಸಾಹೇಬರು ಜನದ ಮಂಜೂರಿ ಕೊಡದಿದ್ದರೂ, ಮ್ಯುನಿಸಿಪಾಲಿಟಿಯು ಲಾಯಬ್ರರಿಯನ್ನು ನಡಿಸತಕ್ಕದ್ದೆಂದು ಪಂಥಗಟ್ಟಿದೆ. ಸಾಹೇಬ ಜನರು ಈ ಪ್ರಕಾರ ಅಕಾರಣ ಜಗಳ ತೆಗೆಯುವದನ್ನು ಬಿಡುವದು ಲೇಸು.

ತಿರುಪತಿಯ ಮ್ಯುನಿಸಿಪಾಲಿಟಿಯಂಥ ಬಂಟತನವನ್ನು ಗೂಡೂರ ತಾಲೂಕ ಲೋಕಲಬೋರ್ಡ ತೋರಿಸಿದೆ. ಬೋರ್ಡಿನ ಶಾಲೆಗಳಲ್ಲಿ ಖಾದಿಯನ್ನು ಧರಿಸಬೇಕು; ಶಿಕ್ಷಕರು ವಿದ್ಯಾರ್ಥಿಗಳಿಗೆ ಖಾದಿಯ ಬಗ್ಗೆ ಪ್ರೋತ್ಸಾಹನ ಕೊಡಬೇಕೆಂಬ ವಿಷಯವಾಗಿ ಮಾಡಿದ ಠರಾವನ್ನು ಮಂತ್ರಿಯು ರದ್ದು ಮಾಡಿದರೂ, ಬೋರ್ಡು ತನ್ನ ಠರಾವನ್ನು ಆಚರಣೆಯಲ್ಲಿ ತರಬೇಕೆಂದು ನಿಶ್ಚಯಿಸಿದೆ. ಮಂತ್ರಿಗಳು ಇಂಥ ಜಗಳ ತೆಗೆಯುವರುವದೇ ಗೌರವವೆನಿಸುತ್ತದೆ.

ಮುಂಬಯಿ ಮತ್ತು ಮದ್ರಾಸದ ಗವರ್ನರರಾಗಿದ್ದ ಲಾರ್ಡ ವೆಲಿಂಗ್ಡನ ಸಾಹೇಬರು ಕೆನಡಾ ರಾಜ್ಯಕ್ಕೆ ಹೋಗಿ, ಹಿಂದುಸ್ತಾನದ ವಿಷಯವಾಗಿ ವ್ಯಾಖ್ಯಾನಗಳನ್ನು ಕೊಡುವರು. ವ್ಯಾಖ್ಯಾನ ಕೊಡುವದಕ್ಕಾಗಿ ಅಲ್ಲಿಯ ನಿವಾಸಿಗಳು ಇವರನ್ನು ಕರೆಸಿದ್ದಾರೆ. ಇದೇ ಸಮಯದಲ್ಲಿ ಬ್ರಾಹ್ಮಣೇತರ ಪಕ್ಷದ ಧುರೀಣರಾದ ಸಿ. ರಾಮಸ್ವಾಮಿ ಮೊದಲಿಯಾರರು ಇಂಗ್ಲಂಡಕ್ಕೆ ಹೋಗಿ ಜಸ್ಟಿಸ ಪಕ್ಷದ ತತ್ವಗಳನ್ನು ಅಲ್ಲಿಯ ಜನರಿಗೆ ತಿಳಿಸಿಕೊಡುವರು.

ಮದ್ರಾಸದ ಕಾಯದೆ ಕೌನ್ಸಿಲದ ಬಜೆಟ್ಟಿನ ವಾಚನವಾಯಿತು. ಈ ಸರಕಾರವು ೮೮ ಲಕ್ಷದ ಕೊರತೆ ತೋರಿಸಿರುತ್ತದೆ. ಉತ್ಪನ್ನ ೧೬ ಕೋಟಿ ೫೧ ಲಕ್ಷ, ವೆಚ್ಚ ೧೭ ಕೋಟಿ ೩೯ ಲಕ್ಷ. ಸರಕಾರವು ಹೀಗೆ ಇದ್ದರೂ, ಕಾಲಹಾಕಬೇಕಲ್ಲವೇ? ಮುಖ್ಯವಾಗಿ ಯುರೋಪಿಯನ ಕಾಮದಾರರ ಕೂಡ ಹೊರಲಾರದಷ್ಟು ಸಂಬಳವನ್ನು ಕಡಿಮೆ ಮಾಡತಕ್ಕದ್ದು. ಇದರ ವಿರುದ್ಧ ಸರಕಾರದ ವರ್ತನೆಯಾಗಿರುವದರಿಂದ, ಕೊರತೆಯಲ್ಲಿ ಅಕಾಶ ಉಳಿಯುತ್ತದೆ. ಮದ್ರಾಸ ಇಲಾಖೆಯಷ್ಟೇ ಹಾನಿಯು ಬ್ರಹ್ಮದೇಶಕ್ಕೂ ಒಂದಿದೆ!!

ಅಮೇರಿಕೆಯಲ್ಲಿ ಭೂಕಂಪ!

—o—

ಕಾನಡಾ ಮತ್ತು ಸಂಯುಕ್ತ ಪ್ರಾಂತದಲ್ಲಿ ಭೂಕಂಪವಾಯಿತು. ಅನೇಕ ದೊಡ್ಡ ದೊಡ್ಡ ಕಟ್ಟಡಗಳು ಹೊಯ್ದಾಡಿದವು. ಜಗತ್ತೇ ತುಣುಗಿತೆಂದು ಅನೇಕ ಗ್ರಾಮಗಳ ಜನರು ಮನೆಗಟ್ಟು ಓಡಿದರು. ಅನೇಕರು ಎಚ್ಚರದಪ್ಪಿದರು. ಭೂಕಂಪದ ಕಸವಿಗೆ ತಕ್ಕಂತೆ ಜನಲಯವಾಗಲಿಲ್ಲ.

ದಿ ಧಾರವಾಡ ಅರ್ಬನ ಕೋ. ಆಪರೆಟಿವ್ಹ ಬ್ಯಾಂಕ ಲಿಮಿಟೆಡ.

ಮಂಗಳವಾರ ಪೇಟೆ, ಧಾರವಾಡ.

ಕೋ. ಆಪರೇಟಿವ್ಹ ಕ್ರೆಡಿಟ ಸೊಸಾಯಟೀಜ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಧಾರವಾಡದಲ್ಲಿ ಬ್ಯಾಂಕಿನ ವ್ಯವಹಾರಕ್ಕೆ ಶ್ರೇಷ್ಠವಾದ ಸ್ಥಾನ

ಜಾಮೀನಿನ ಆಧಾರದ ಮೇಲೆ ಸಾಲ, ಚೆಕ್ಕು, ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ಮಾಡಲ್ಪಡುವದು. ಕಾಯಂ ಮತ್ತು ಚಾಲು ತರದ ಠೇವುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,

ಮ್ಯಾನೇಜಿಂಗ ಡಾಯರೆಕ್ಟರ

ಆರ್. ಎಮ್. ಜ್ಹಾನ್ ಎಂಡ ಸನ್ಸ. ಹುಬ್ಬಳ್ಳಿ.

ಎಜಂಟ್ಸ್ ಫೋರ ಕಾರ್ಬೋನಿಕ್ ಆಸಿಡ್ಡ ಗ್ಯಾಸ, ಮ್ಯಾನ್ಯುಫ್ಯಾಕ್ಚರರ್ ಆಫ್ ಏರೆಟೆಡ ವಾಟರ್ಸ.



ತಾವು ಆರ್ಡರ ಬೇಗ ಕಳಿಸಿರಿ.

ನಮ್ಮಲ್ಲಿ ಸಿಗುವ ಸಾಮಾನುಗಳ ವಿವರ.

ಫುಲ್‌ಗ್ಯಾಸ ಸಿಲೆಂಡರಗಳು ಇಂಗ್ಲೀಷ ಮತ್ತು ಜರ್ಮನ ಮಶಿನ್ ಕಾಡ್ಸ, ಎಮ. ಟಿ. ಸೋಡಾ ವಾಟರ ಬಾಟಲಗಳು, ೫೦೦ ನಂ. ನಾಬ



ಲೀಸ ಡಬ್ಬಿ ೧ ಸಂಖ್ಯ, ಸೋಡಾವಾಟರ್ ಮಶಿನುಗಳು ಮತ್ತು ಎಲ್ಲ ತರದ ಕಲರ್ಸ ಬಾಟಲಿಗಳ ಎಸೆನ್ಸಗಳು, ಅಮೇರಿಕನ್ ಆಯಿಸ್ಕ್ರೀಮ ಸೋಡಾ, ಬನಾನಾ, ಕೋಲಾಚಾಂಪೇಜನ್, ಲಿಮನ್ ನಂ. ೧ ಲೆಮನ್ ಜ್ಯುಯಿಸ್ ಸೋಡಾ ನಂ. ೧ ಮೆಂಗೋ, ಆರೇಂಜ, ಫಾಯಿನಾಪಲ್, ಪಿಸ್ತಮಿಲ್ಕ, ಕ್ವಿನಿನ್ ಟಾನಿಕ್, ರಾಜ್‌ಬೆರಿ ನಂ. ೧ ರೋಜ ನಂ. ೧ ಸ್ಟೋನ ಜಿಂಜರ್ ಬೀರ ನಂ ೧, ರಬ್ಬರ್ ರಿಂಗ್ಸ, ಬೇಸಿ ಡಾಕರ ಮಶಿನರಿ ಪಾರ್ಟುಗಳು ನಮ್ಮಲ್ಲಿ ಸಿಗುತ್ತವೆ. ಮತ್ತು ಶುದ್ಧ ಸೀಲಿಂಗ ವ್ಯಾಕ್ಸ ಎಲ್ಲ ತರದ ಬಾಟ್ಲುಗಳು ಸಿಗುತ್ತವೆ. ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ ಕೊಡುತ್ತೇವೆ. ನಮ್ಮಲ್ಲಿ ಕಮ್ಮೀದ ಮಿಠಾಯಿ ಸಿಂಗಲ ಕಿಟ್ಲಿಗಳು ಸೋವಿ ದರದಿಂದ ಮಾರಲಿಕ್ಕೆ ಸಿಗುತ್ತವೆ.

ಅಡ್ರೆಸ್— R. M. John & Sons.

Mission Compound HUBLI

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಾಗಿರುತ್ತದೆ.

ಎ. ಕೆ. ಶೆಟ್ಟಿ,

ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ ವರ್ಗಣೀ ದರ

ನಿತ್ಯಪತ್ರಕ್ಕೆ

೧೨ ತಿಂಗಳಿಗೆ	೧೨—೮—೦	ರೂ
೬ ,,	೭—೦—೦	ರೂ
೩ ,,	೪—೦—೦	ರೂ
ವಾರಪತ್ರಕ್ಕೆ ೧ ವರ್ಷಕ್ಕೆ	೩—೧೨—೦	ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ, ಧಾರವಾಡ

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಪಳಿಗೆ ಐದು ಆಣೆ ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಪಳಿಗಳಿಗೆ ಇಮ್ಮಡಿ. ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡಿಸತಕ್ಕದ್ದು.

ಮ್ಯಾನೇಜರ ವಿಜಯ ಧಾರವಾಡ

ನೋಟೀಸು

ರಾ|| ರಾ|| ರಾಮಪ್ಪಾ ಬಿನ್ನ ಮಲ್ಲಪ್ಪಾ ತಮ್ಮಯ್ಯವರ ಸಾಕೀನ ಮುನಿರಾಬಾದ ತಾಲ್ಲೂಕು ಕೊಪ್ಪಳ ಜಿಲ್ಹಾ ರಾಯಚೂರ ನಿಜಾಮ ಇಲಾಖಾ ಹಾಲಿ ವಸ್ತಿ ಬೆಟಗೇರಿ ತಾಲೂಕ ಗದಗ ಇವರಿಗೆ—

ನೀನು ನನ್ನ ಲಗ್ನದ ಗಂಡನಿದ್ದು ನನ್ನನ್ನು ಲಗ್ನಮಾಡಿಕೊಂಡು ಅಜಮಾಸು ೧೦ ೧೧ ವರ್ಷಗಳಾದವು ನೀನು ನನಗೆ ಕರಕೊಂಡು ಹೋಗಲಿಲ್ಲಾ ನನ್ನ ತವರ ಮನೆಯವರು ಕರಕೊಂಡು ಹೋಗಿ ನಿನ್ನಲ್ಲಿ ಬಿಟ್ಟು ಬಂದರು. ನೀನು ನನಗೆ ಕೇಲಿ ಅಲ್ಲ ಹೊಡಿಯೋದು ಬಡಿಯೋದು ಮಾಡಿ ನನ್ನ ಸಂಗಡ ಚನ್ನಾಗಿ ಬಾಳ್ವೆ ಮಾಡಲಿಲ್ಲಾ ನನಗೆ ನನ್ನ ತವರ ಮನಿಗೆ ನೂಕಿಸಿಕೊಟ್ಟು ನನ್ನ ಮೇಲೆ ಇನ್ನೊಬ್ಬಳನ್ನ ನೀನು ಉಡಕಿ ಮಾಡಿಕೊಂಡು ಬಾಳ್ವೆ ಮಾಡಲಿಕ್ಕೆ ಹತ್ತೀದಿ ನೀನು ನನಗೆ ಬಿಟ್ಟು ಇಲ್ಲಿಗೆ ಅಂದರೆ ಅಜಮಾಸ ೩-೪ ವರ್ಷಗಳಾದವು ನನ್ನ ತವರ ಮನೆಯವರು ಬಡವರಿರುವದು ನನಗೆ ಹೊಟ್ಟಿಗೆ ಅನ್ನ ಅರಿವೆ ಕೊಡೋದು ಆಗೋಲ್ಲ ಅದ್ದರಿಂದ ನಾನು ಮುರಡನೀಯವರ ಕಡೆ ಮೇಲೆ ಮಾಡಿ ನನ್ನ ಹೊಟ್ಟೀ ಉಪಜೀವನ ಮಾಡುತ್ತ ಬಂದೆನು. ನೀನು ಬಿಟ್ಟಂದಿನಿಂದಾ ಅಂದ್ರೆ ಇಲ್ಲಿಯ ವರೆಗೆ ನೂರಿನ್ನೂರು (೨೦೦) ರೂಪಾಯಿ ಸಾಲಾ ಮಾಡಿರುತ್ತೇನೆ. ನನ್ನ ದಕಿಂದಾ ನೀನು ಸಮೊಂದು ವ್ಯವಸ್ಥಾ ಮಾಡಲಿಲ್ಲಾ ನಾನು ಎಲ್ಲೀವರೆಗೆ ಹೀಗೆ ಮಾಡುತ್ತಾ ಹೋಗಬೇಕು. ನಾನಾದರೂ ನನ್ನ ಹೊಟ್ಟೀ ನೂಕಿಕೊಳ್ಳುವದು ಆಗುವದಿಲ್ಲ ಮತ್ತು ಈ ಸಾಲದವರ ಪ್ರಯತ್ನ ಬಹಳ ಆಗಿದೆ. ಅದ್ದರಿಂದ ನಿನಗೆ ನೋಟೀಸು ಕೊಡುವ ಭಾಗ ಬಿತ್ತು ನಿನಗೆ ಈ ನೋಟೀಸು ಮುಟ್ಟಿದ ಮೇಲೆ ದಿವಸದೊಳಗಾಗಿ ನಾನು ಮಾಡಿದ ದೇಣೆ ೨೦೦ ರೂಪಾಯಿ ಸಾಲಾ ಫೇಡ ಮಾಡಿ ನನ್ನನ್ನು ಕರಕೊಂಡು ಹೋಗಿ ಚನ್ನಾಗಿ ಬಾಳ್ವೇ ಮಾಡಬೇಕು. ಇಲ್ಲದಿದ್ದರೆ ನಾನು ನನ್ನ ಮರ್ಜಿ ಬಂದವನ್ನು ಉಡಕಿ ಮಾಡಿಕೊಂಡು ಹೋಗೇನು ನಿನ್ನದು ನನ್ನ ಉಡಕಿಯಾದವನ ಮೇಲೆ ನನ್ನ ಮೇಲೆ ನಿನ್ನ ಹಕ್ಕು ನಡಿಯಲಿಕ್ಕಿಲ್ಲಾ ನಿನಗ ಇದೇ ಒಂದು ನೋಡಕಕ್ರನೆಂದು ತಿಳಿಯಬೇಕು. ಈ ನೋಟೀಸಿನ ಖರ್ಚು ನಿನ್ನ ತಲೆಮೇಲೆ ಅದೆ ತಿಳಿಯೋದು.

ತಾರೀಖು ೨-೩-೧೯೨೫ ಇಸ್ವಿ

ಈ ಯಮನವ್ವ ಹೆಬ್ಬಟ್ಟಿನ ಗುರ್ತ ಹನಮವ್ವಾ ಕೋಂ ರಾಮಪ್ಪಾ ತಮ್ಮಯ್ಯವರ ಸಾ|| ಕದಡ ತಾಲ್ಲೂಕು ಸಭರ ಇಲಾಖಾ ನದಾ ಹಾಲಿವಸ್ತಿ ಗದಗ ತಾಲ್ಲೂಕು ಗದಗ ಭಕ್ತಿ ಮಾಡಿದ್ದು ಅದೆ.

ಈ ಪತ್ರವನ್ನು ಆನ್ನಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ಕ. ವ. ವಾರ್ತಾಪತ್ರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R B.N. 1443

ನಿತ್ಯ ಪತ್ರ — ವಿಜಯ — ಚಿಲ್ಲರೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೬ | ಧಾರವಾಡ ಶುಕ್ರವಾರ ತಾರೀಖು ೬ ನೇ ಮಾರ್ಚ ೧೯೨೫ (ಸಂಚಿಕೆ ೫೫)

ಕರ್ನಾಟಕ ತರುಣರಿಗೊಂದು !

ಬಿನ್ ಬಂಡವಾಳದ ವ್ಯಾಪಾರ!!

ಕಿರ್ಲೋಸ್ಕರ ನೇಗಿಲುಗಳ ಪ್ರಚಾರ !!!

ಕಿರ್ಲೋಸ್ಕರ ನೇಗಿಲು ಮತ್ತು ಸಾಮಾಗಳ ಉಪಯೋಗವು. ಮತ್ತು ಮಹತ್ವವು ಹಿಂದುಸ್ಥಾನದ ಪ್ರತಿಯೊಬ್ಬ ಒಕ್ಕಲಿಗನಿಗೆ ಗೊತ್ತಿದ್ದ ಮಾತು. ಅವುಗಳಿಗೆ ಗಿರಾಕಿಗಳು ಬಹಳ ಆದ್ದರಿಂದ ಅವುಗಳನ್ನು ಖಪ್ಪು ಮಾಡಿಸುವ ದಲಾಲರಿಗೆ ಶ್ರಮ ಬೀಳದು. ಕಂಪನಿಯಿಂದ ದೊರೆಯುವ ಕ್ಯಾಟಲಾಗು, ಬೇರೆ ಪತ್ರಿಕೆ, ಗೋಡೆಯ ಚಿತ್ರಪಟ ಇತ್ಯಾದಿ ಜಾಹೀರಾತಿನ ಸಾಮಗ್ರಿಗಳನ್ನು ಹಂಚಿ ಹಳ್ಳಿಗಳಲ್ಲಿ ಪ್ರಸಾರ ಮಾಡಿದಲ್ಲಿ ಆರ್ಡರು ದೊರೆಯುವವು. ಈ ಆರ್ಡರ ಕೂಡ ೧/೪ ಹಣವನ್ನು ಅಡ್ವಾನ್ಸ ಕಂಪನಿಗೆ ಕಳಿಸಿದಲ್ಲಿ ಕಂಪನಿಯು ಆವರ ವರ ಹೆಸರಿನ ರಸೀದಿಯನ್ನು ಗಿರಾಕಿ ಹಣಕ್ಕೆ ವ್ಹಿ. ಪಿ. ಮಾಡಿ ದಲಾಲರಿಗೆ ಕಮಿಶನ್ ಕೊಡುವದು.

ಕಮಿಶನ್ ದರಗಳ ಬಗ್ಗೆ ಇಂದೇ ಕಾಗದವನ್ನು ಬರೆದು ತಿಳಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ } ಕಿರ್ಲೋಸ್ಕರವಾಡಿ-
ಸಾತಾರಾ.

ಸ್ವಲ್ಪ ೨ ಆಣೆಯೊಳಗೇ ಆಶ್ಚರ್ಯಕಾರಕ ವ ರಾಮಬಾಣ ಉಪಾಯ

ಮೊಮೆಂಟ ಕ್ಯೂರ್

ತಲೆಶೂಲಿ, ಅರ್ಧ ತಲೆಶೂಲಿ, ಶೀತ, ಉಷ್ಣ ವ ನಿತ್ರಾಣ ವಗೈರೆಗಳಿಂದಾದ ಮಸ್ತಕಶೂಲಿಯು ತ್ವರೆಯಿಂದ ನಿರ್ಮೂಲ ಮಾಡಲು "ಮೊಮೆಂಟ ಕ್ಯೂರ" ನಿಗೆ ಸರಿಸಮಾನವಾದ ಔಷಧವು ಬೇರೆ ಇಲ್ಲ. ಶಿಷ್ಟ ಜನರು ಮಸ್ತಕಶೂಲಿಯನ್ನು ಸಹಿಸಲು ಆಗದೆ ಮಸ್ತಕಕ್ಕೆ ವಸ್ತ್ರಕಟ್ಟಿ ಎಷ್ಟೋ ವ ಆ ಕರನ್ನು ಕಳೆಯುತ್ತಾರೆ. ಆದರೆ ಸರಾಸರಿಯಾದವರು ಮೊಮೆಂಟ ಕ್ಯೂರದ ಪುಡಿಯನ್ನು ಬಿಸಿ ಚಹಾದೊಂದಿಗೆ ಅಥವಾ ಬಿಸಿ ನೀರಿನೊಂದಿಗೆ ಸೇವಿಸಿದಲ್ಲಿ ತಕ್ಷಣದಲ್ಲಿ ಒಂದೇ ಕ್ಷಣದಲ್ಲಿ ಮಸ್ತಕಶೂಲಿಯು ನಿಲ್ಲುವದು. ಇದಕ್ಕೆ ಅನೇಕ ಶಿಫಾರಸ ಪತ್ರಗಳು ಉಂಟು.

೧ ಚೀಟಿಗೆ ೨ ಆಣೆ. ಸ್ಯಾಂಪಲ ಸಲುವಾಗಿ ೩ ಆಣೆ ಪೋಸ್ಟ ತಿಕೀಟುಗಳನ್ನು ಕಳಿಸಿದಲ್ಲಿ ರವಾನಿಸುವೆವು.

ವಿಳಾಸ— ದಿ ಕರ್ನಾಟಕ ಮೆಡಿಕಲ ಸ್ಟೋರ್ಸ, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ್ಸ ಸ್ಟೇಶನರೋಡ ಹುಬ್ಬಳ್ಳಿ.

LOKBANDE



Lasts A life time

Strongest Watches

ಬಿಕ್ಕಿನ ಮತ್ತು ಅರ್ಧ ಬೆಲೆಗೆ ಮಾರಿದವುಗಳು ಮೋಸದ ಹೊರಗಿವೆ.

ಜನರು ಉತ್ತಮ ವ ಹಿತ್ತಿ ನಂಬಿಗೆಯುಳ್ಳದ್ದು ನಮ್ಮ ಅಂಗಡಿಯಲ್ಲಿ ಘಡಿ ಆಲಾರ್ಮ, ಟೈಮ್‌ಪೀಸ, ಮೊರೆ, ಹೆನ್ಸ ಮತ್ತು ಸ್ವಿಸ ಬೆಸ್ಟಲ ಕಂಪನಿ ಮತ್ತು ಬೇರೆ ಪ್ರಸಿದ್ಧ ಕಂಪನಿಗಳ ಘಡಿಯಾಳಗಳು ಈಗ ಬಂದಿದ್ದು, ಅವು ನೋಡಲಿಕ್ಕೆ ಸುಂದರವಾದಂಥವುಗಳಿದ್ದು ಮತ್ತು ಸರಿಯಾಗಿ ಹೊತ್ತು ತೋರಿಸುವಂಥವುಗಳಾಗಿವೆ. ಇವು ರಿಪೇರಿಯಿಂದ ಬೇಕಾದ ಬೆಲೆಯ ಗಡಿಯಾರಗಳು ಸಿಗುವವು. ಕೆಲವಂದ ಪ್ರತಿಯೊಂದಕ್ಕೆ ಗ್ಯಾರಂಟಿ ಕೊಡುವೆವು. ಒಮ್ಮೆ ಬರಿ ನೋಡುವಿರಷ್ಟೇ!

ಪ್ರೊಪ್ರಾಯಟರ, ದತ್ತಾತ್ರೇಯ ಲೋಕಬಂಡೆ
ವಾಚ ಮರ್ಚಂಟ ಧಾರವಾಡ.

ದಿ. ಅಂಕಲಗಿ ಬ್ಯಾಂಕ ಲಿಮಿಟೇಡ್
ಧಾರವಾಡ.
೧೯೧೩ ಇಸ್ವಿಯ
ಕಂಪನಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ಚಾಲೂ ಖಾತೆ, ಠೇವು, ಸೇವಿಂಗ್ಸದ ಡಿಪಾಜಿಟ, ಸಾಲ, ಪತ್ರಿ, ಹುಂಡಿ, ಮುಂತಾದ ಯಾವತ್ತು ವ್ಯವಹಾರಗಳು ನಡೆಯುವವು. ವಿಶೇಷ ಸಂಗತಿಗಳನ್ನು ಕಛೇರಿಗೆ ಭೆಟ್ಟಿಯಾಗುವವರಿಂದ ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ ರಿಂದ ೧೦-೩೦. ಸಾಯಂಕಾಲ ೩ ರಿಂದ ೬ ರವರೆಗೆ ನಡೆಯುವದು.

K B . Aukalagi
ಮ್ಯಾನೇಜಿಂಗ ಡಾಯರೆಕ್ಟರ

ವಿಜಯ.

ಧಾರವಾಡ ತಾ- ೬-೩-೨೫ ನೇ ಇಸ್ವಿ

ಬ್ರಾಹ್ಮಣರ ಹಾನಿ ಕಾಲ.

—o—

ವ್ಯಕ್ತಿಗಾಗಲಿ, ರಾಷ್ಟ್ರಕ್ಕಾಗಲಿ ಯಾವಾಗಲು ಒಂದೇ ಕಾಲವಿರುವದಿಲ್ಲ. ಕುಲಾಲ ಚಕ್ರದಂತೆ ಪರಿವರ್ತನವು ಇದ್ದೇ ಇರುವದು. ಬ್ರಾಹ್ಮಣರ ಮೇಲೆ ಹಿಂದಕ್ಕೆ ಅನೇಕ ಕಷ್ಟಗಳು ಬಂದಿರಬಹುದು. ಧರ್ಮದ್ವೇಷದಿಂದ ಅವರು ಹಿಂಸೆಗೂ ಒಳಗಾಗಿರಬಹುದು. ಆದರೆ ಅವರ ಸಾಂಪತ್ತಿಕ ಸ್ಥಿತಿಯು ಹಾನಾಗಲು ಕೆಡಲಿಲ್ಲ. ಕ್ಷತ್ರಿಯ ರಾಜರಾದರು; ಮುಸಲಮಾನರು ಬಂದರು; ಆದರೂ ಬ್ರಾಹ್ಮಣರ ಜೀವನಕ್ಕೆ ಬಾಧೆ ಇರಲಿಲ್ಲ. ಇಂಗ್ಲಿಷರು ಈ ದೇಶದಲ್ಲಿ ತಳವೂರಿ ನೂರು ವರ್ಷಗಳಾದವು. ಬ್ರಾಹ್ಮಣರು ಬದಲಾದ ಪರಿಸ್ಥಿತಿಯ ಲಾಭ ಪಡೆದುಕೊಂಡು ಸರಕಾರೀ ಕೆಲಸಗಳಲ್ಲಿ ಸೇರಿದ್ದರಿಂದ, ಅವರ ಜೀವನಕ್ಕೆ ಆತಂಕ ಉಂಟಾಗಲಿಲ್ಲ.

ಸರಕಾರದವರು ಬ್ರಾಹ್ಮಣ ಬ್ರಾಹ್ಮಣೇತರ ಎಂಬ ಭೇದ ಮಾಡಿ, ಕಾರಕೂನರ ನೂರು ಸ್ಥಳಗಳಲ್ಲಿ ೬೦ ಬ್ರಾಹ್ಮಣೇತರರಿಗೂ ನಾಲ್ವತ್ತು ಬ್ರಾಹ್ಮಣರಿಗೂ ಕೊಡಬೇಕೆಂಬ ಠರಾವು ಮಾಡಿದ್ದರಿಂದ, ಬ್ರಾಹ್ಮಣರಿಗೆ ಹಾನಿಕಾಲ ಬಂತೆಂದು ಪ್ರತಿಯೊಬ್ಬ ಬ್ರಾಹ್ಮಣನು ಅನ್ನಲಾರಂಭಿಸಿದ್ದಾನೆ. ಈ ನಾಲ್ವತ್ತು ಸ್ಥಳಗಳು ಸಹ ಬ್ರಾಹ್ಮಣರ ಪಾಲಿಗೇ ಇರುವದಿಲ್ಲ. ಮುಂಬಯಿ ಕರ್ನಾಟಕ ಪ್ರಾಂತದ ಮಟ್ಟಿಗೆ ನೋಡಲಾಗಿ ಇವರ ವರ್ಗದಲ್ಲಿ ಪಾರ್ಸಿ ಮತ್ತು ಕ್ರಿಶ್ಚನ್ ಜನಾಂಗದವರು ಬರುತ್ತಾರೆ. ನೂರರಲ್ಲಿ ೬೦-೪೦ ಪ್ರಮಾಣದಿಂದ ಭಾಗ ಮಾಡಿದ್ದೊಂದಿದೆ. ಮುಲ್ಕಿಯಲಿ, ಮುಸಲಮಾನರಿಗೆ ಎಷ್ಟು ಜಾಗಗಳನ್ನು ಕೊಡತಕ್ಕದ್ದೆಂಬುವನ್ನು ಸರಕಾರದವರು ಜಾಹೀರ ಮಾಡಿಲ್ಲ. ಈ ವಿಭಾಗವನ್ನು ಸೂಕ್ಷ್ಮ ದೃಷ್ಟಿಯಿಂದ ನೋಡಿದರೆ ಬ್ರಾಹ್ಮಣರ ಪಾಲಿಗೆ ಅನೆಗುಂದಿಯ ಲೆಖ್ಖದಷ್ಟು ಸ್ಥಳಗಳು ಉಳಿಯುತ್ತವೆ. ಇವುಗಳಿಂದ ಸುಶಿಕ್ಷಿತರಾದ ಬ್ರಾಹ್ಮಣರೆಲ್ಲರು ಕೆಲಸದಲ್ಲಿ ತೊಡಗುವದು ತೀರ ಅಶಕ್ಯವು.

ಶಾಲೆ ಕಾಲೇಜುಗಳಲ್ಲಿ ನೋಡಲಾಗಿ ಬ್ರಾಹ್ಮಣರ ವಿದ್ಯಾರ್ಥಿಗಳೇ ಬಹು ಸಂಖ್ಯೆಯಿಂದ ಕಲಿಯುತ್ತಾರೆ. ಇವರಿಗೆ ದೊರೆಯುವ ಶಿಕ್ಷಣವೆಲ್ಲ ಒಂದಿಲ್ಲೊಂದು ಖಾತೆಯಲ್ಲಿ ಸರಕಾರದ ಸೇವೆ ಮಾಡುವದೇ ಆಗಿರುತ್ತದೆ. ಶಿಕ್ಷಣವು ಈ ತರಹದ್ದಾದರೂ ಅದಕ್ಕೆ ತಕ್ಕ ಪ್ರತಿಫಲವಿಲ್ಲದಾದ ಬಳಿಕ ಕಲಿತು ಫಲವೇನೆಂಬ ಪ್ರಶ್ನವು ಸಹಜವಾಗಿ ಹೊರಡುತ್ತದೆ. ಶಿಕ್ಷಣ ಬೇಡೆಂದು ಬ್ರಾಹ್ಮಣರು ಅನ್ನುವಂತಿಲ್ಲ, ಏಕೆಂದರೆ ವಿದ್ಯೆಯೇ ಇವರ ಜೀವನ ಸರ್ವಸ್ವ ಆಗಿರುತ್ತದೆ. ಬ್ರಾಹ್ಮಣರು ಬೇಕಾದಷ್ಟು ಓದುಗರಿಯಲಿ, ಅವರು ಸ್ವತಂತ್ರ ವೃತ್ತಿಯಿಂದ ಜೀವಿಸುವಂಥ ಹೋರಿಕೆಯನ್ನು ಕೈಕೊಂಡ ವಿನಹ ಅವರಿಗೆ ಅನ್ಯ ಮಾರ್ಗವೇ ಇರುವದಿಲ್ಲ. ಇವರು ತಮ್ಮ ಅಭ್ಯುದಯ ಕಾಲದಲ್ಲಿ ಬೇಕಾದಷ್ಟು ಭೂಮಿ ಸಂಪಾದಿಸಬಹುದಾಗಿತ್ತು. ರಾಜರುಗಳಾಗಬಹುದಾಗಿತ್ತು. ರಾಜ್ಯನಾಳುವದು, ಕೃಷಿವಾಣಿಜ್ಯ ಮಾಡುವದು ತಮ್ಮ ಕೆಲಸವಲ್ಲೆಂದು ಬಿಟ್ಟು, ಅದನ್ನು ಇತರ ವರ್ಣದವರಿಗೆ ಒಪ್ಪಿಸಿ, ತಾವು ಕೇವಲ ಭಿಕ್ಷುಕರಾದರು. ಭಿಕ್ಷುಕರಾದರೂ ಪ್ರಪಂಚದ ಚಿಂತೆಯಿದ್ದಿಲ್ಲ; ಈಗ ಬರೇ ಪ್ರಪಂಚದ ಚಿಂತೆಯಲ್ಲ: ಉಳಿಗಾಲದ ಚಿಂತೆ ಸಹ ಮಾಡಬೇಕಾಗಿರುತ್ತದೆ.

ಬ್ರಾಹ್ಮಣರು ಸ್ವತಂತ್ರ ವೃತ್ತಿಯಿಂದ ಜೀವಿಸಬೇಕೆಂದು ಅನೇಕರಿಗೆ ವ್ಯಾಪಾರ ಉದ್ದಿಮೆಯಲ್ಲಿ ಮನಸ್ಸು ಹಾಕಿದ್ದಾರೆ. ಇದು ಸ್ವಲ್ಪದರ ಮಾತಾಯಿತು. ನಿರ್ಧನಿಕರಿಗೆ ಹೀಗೆ ಜೀವಿಸಲು ಧನ ಸಹಾಯವಿರುವದಿಲ್ಲ. ಮಾರವಾಡಿಯು ಬರೇ ಲೋಟಾ ಸೋಟಾ ತಕ್ಕೊಂಡು ಈ ದೇಶಕ್ಕೆ ಬಂದು ಧನಾಢ್ಯನಾಗುತ್ತಾನೆ. ಇವನಿಗೆ ಶ್ರೀಮಂತ ಮಾರವಾಡಿಗಳ ಬೆಂಬಲವಿರುತ್ತದೆ. ಬೇಕಾದಷ್ಟು ದುಡ್ಡಿನ ನೆರವು ಸಿಗುತ್ತದೆ. ಇಂಥ ನೆರವನ್ನು ಕೊಡುವಂಥ ಲಕ್ಷಾಧೀಶ ಕೋಟ್ಯಾಧೀಶರು ಬ್ರಾಹ್ಮಣರಲ್ಲಿಲ್ಲವೇ ಇಲ್ಲ. ಇದ್ದವರು ಎಷ್ಟು ಶ್ರೀಮಂತರಾದರೂ, ಮಧ್ಯಮ ಸ್ಥಿತಿಯವರೆನಿಸಲ್ಪಟ್ಟಿದ್ದಾರೆ. ಆದ್ದರಿಂದ ಬ್ರಾಹ್ಮಣರು ಸಂಘಶಕ್ತಿಯಿಂದ ಬಂಡವಲ ಕೂಡಿಸಿ, ಬಡ ಜನರಿಗೆ ಸಹಾಯ ಮಾಡಬೇಕಾಗಿರುತ್ತದೆ. ಆ ವಿಚಾರದಿಂದ ಈ ಊರ ಪ್ರಮುಖ ಬ್ರಾಹ್ಮಣರು ಜಿಲ್ಹೆಯ ಬ್ರಾಹ್ಮಣ ಪ್ರತಿನಿಧಿಗಳ ಒಂದು ಪುಟ್ಟ ಪರಿಷತ್ತನ್ನು ಕೂಡಿಸಬೇಕೆಂದು ವಿಚಾರ ಮಾಡಿದ್ದಾರೆ. ಎಲ್ಲ ಬ್ರಾಹ್ಮಣರು ತಂತಮ್ಮ ಶಕ್ತ್ಯನುಸಾರವಾಗಿ ಈ ಕಾರ್ಯಕ್ಕೆ ನೆರವಾಗುವದು ಕರ್ತವ್ಯ ಕರ್ಮ ಮಾತ್ರವಲ್ಲ; ಅವಶ್ಯವಾದ ಧರ್ಮವಾಗಿರುತ್ತದೆ.

ಬ್ರಾಹ್ಮಣರು ಈ ಬಗೆಯಾಗಿ ಸ್ವಾವಲಂಬನದ ಮಾರ್ಗ ಹಿಡಿಯುವದಕ್ಕಾಗಿ ನಡೆಸಿದ ಉದ್ಯೋಗದ ಬಗ್ಗೆ ಅನ್ಯ ಮತೀಯರಲ್ಲಿ ಈಗಾಗಲೆ ವಿಪರೀತ ಕಲ್ಪನೆಗಳು ಹುಟ್ಟುತ್ತಿವೆ. ಇವರು ಈ ಪ್ರಕಾರ ಕುಕಲ್ಪನೆ ಮಾಡದೆ, ತಂತಮ್ಮ ಕುಲಗಳ ಜನರ ಯೋಗಕ್ಷೇಮಕ್ಕಾಗಿ ಬ್ರಾಹ್ಮಣರಂತೆ ಉದ್ಯೋಗಶೀಲರಾಗುವದು ಅವಶ್ಯ. ಸರಕಾರದವರು ಬ್ರಾಹ್ಮಣೇತರರಿಗೆ ೬೦ ಸ್ಥಳಗಳನ್ನು ಕೊಡಬೇಕೆಂದು ಠರಾವು ಮಾಡಿದ್ದರೂ, ಒಳ ಭೇದಗಳ ದೃಷ್ಟಿಯಿಂದ ನೋಡಲಾಗಿ, ಒಂದು ಕುಲಕ್ಕೆ ಒಂದು ಸ್ಥಳ ದೊರೆಯದಷ್ಟು ಭೇದಗಳುಂಟು. ಬ್ರಾಹ್ಮಣೇತರರು ಕೊಡಿಯುವದೆಲ್ಲ ಚನ್ನವಲ್ಲೆಂದು ತಿಳಿಯದೆ, ತಂತಮ್ಮ ಪರಿಯಾಗಿ ಸ್ವಾವಲಂಬನದ ಮಾರ್ಗ ಹುಡುಕಿಕೊಳ್ಳುವದೇ ಹಿತವು.

———

ಸಾತಾರಿಯಲ್ಲಿ ಕೊಳ್ಳೀ ದೆವ್ವ !!

—o—

ಹಗಲೇ ಬೆಂಕಿ ಹತ್ತುವದು !!!

—o—

ಕಳೆದೊಂದು ತಿಂಗಳಿಂದ ಸಾತಾರಿ ಪಟ್ಟಣದಲ್ಲಿ ದಿನಾಲು ಒಂದಿಲ್ಲೊಂದು ಸ್ಥಳದಲ್ಲಿ ಬೆಂಕಿ ಹತ್ತುವದ [illegible] ನೋಡ ಮೊದಲು, ಬೆಂಕಿಯು ರಾತ್ರಿಯಲ್ಲಿ ಹತ್ತುತ್ತಿತ್ತು. ಈಗ ಹಗಲು ಸಹ ಹತ್ತುವದು. ಬೆಂಕಿಯು ಅಂಥಲ್ಲೇ ಹತ್ತುತ್ತದೆಂಬ ನಿಯಮವಿಲ್ಲ. ಒಂದು ಮನೆಯಲ್ಲಿ ಊಟದವರ ಊಟ ನಡೆದಾಗ ಹತ್ತಿರದಲ್ಲಿ ಉರಿಯು ಎದ್ದಿತು. ಮಾರವಾಡಿಗಳ ಪೇಟೆ ಒಮ್ಮೆ ಉರಿ ಹತ್ತಿತ್ತು. ಇದನ್ನು ಆ ಕ್ಷಣವೇ ಆರಿಸಿದ್ದರಿಂದ ಪೇಟೆ ಉಳಿಯಿತು.

ಸಾತಾರಿಯು ಮಲ್ಲಾಡಕ್ಕೆ ಸೇರಿದ್ದು. ಅನೇಕ ಮನೆಗಳು ಗುಡ್ಡದ ಓರೆಯಲ್ಲಿರುವವು. ಒಂದು ಮನೆಗೆ ಮತ್ತೊಂದು ಮನೆಯ ಸಂಬಂಧ ಕೂಡ ಇರುವದಿಲ್ಲ. ಪೇಟೆಯಲ್ಲಿ ಮಾತ್ರ ಮನೆಗಳು ಸಾಲಾಗಿರುವವು. ಈ ಪ್ರಕಾರ ಊರ ಸ್ಥಿತಿಯಾಗಿರುವದರಿಂದ ಕೊಳ್ಳೀ ದೆವ್ವಕ್ಕೆ ಮುಂಗಾಟವಾಡಿ, ಅದೃಶ್ಯವಾಗಲು ಅನುವು ಸಿಗುತ್ತದೆ. ಊರೊಳಗೆ ೧೦-೨೦ ಕಡೆಗೆ ಬೆಂಕಿ ಎದ್ದರೂ, ಇದನ್ನು ಹಚ್ಚುತ್ತವನು ಪೋಲೀಸರಿಗಾಗಲಿ, ಪಟ್ಟಣದಲ್ಲಿ ಹಗಲು ರಾತ್ರಿ ಗಸ್ತೀ ತಿರುಗುವ ಸ್ವಯಂಸೇವಕರಿಗಾಗಲಿ ಸಿಗಲೊಲ್ಲನು. ಇವನು ನಿಜವಾಗಿ ಕಣ್ಣುಕಟ್ಟು ಮಾಡುತ್ತಿರಬಹುದು.

ಪೋಲೀಸರು ಸಂಶಯದಿಂದ ನಾಲ್ಕಾರು ಜನರನ್ನು ಹಿಡಿದರು. ಇವರಲ್ಲಿ ರಾಷ್ಟ್ರೀಯ ಶಾಲೆಯ ಒಬ್ಬ ಅಧ್ಯಾಪಕರಾಗಿದ್ದನು. ಪೋಲೀಸರ ಮೇಲೆ ಜನರ ವಿಶ್ವಾಸವು ಇರದ್ದರಿಂದ ಅವರು ಸಂಶಯದಿಂದ ಬೇಕಾದವನನ್ನು ಹಿಡಿದು, ಅವರ ಮರ್ಯಾದೆಗೆ ಕುಂದು ತರುತ್ತಿರುವದು ಮೊದಲೇ ಅಗ್ನಿಭಯದಿಂದ ಚಿಂತಿಸುತ್ತಿರುವವರ ಹೃದಯದ ಮೇಲೆ ಬರೀ ಕೊಡುವಂತಾಗಿದೆ.

———

ಮುಂಬಯಿ ಕೌನ್ಸಿಲದಲ್ಲಿ ಚಕಮಕಿಯು.

—೦—

ಮೊನ್ನಿನ ದಿವಸ ಮುಂಬಯಿ ಕೌನ್ಸಿಲದಲ್ಲಿ ಸ್ವತಂತ್ರ ಪಕ್ಷೀಯರಾದ ಮಿ. ನರಿಮನ್ನರಿಗೂ ಸರಕಾರ ಪಕ್ಷೀಯರಾದ ಮೊಸಸ್ಸ ಲಾರೆನ್ಸ ಹೆಪ್ಪರ ಮತ್ತು ಸರ ಕೋವಾಸಜಿ ಸಾಹೇಬರಿಗೂ ಮುಂಬಯಿ ಪಟ್ಟಣದ ಅಭಿವೃದ್ಧಿಯ ಕಾಮಗಾರಿಯ ವಿಷಯವಾಗಿ ದೊಡ್ಡ ಚಕಮಕಿಯಾಯಿತು. ಈ ಖಾತೆಗೆ ಬಜೆಟ್ಟಿನಲ್ಲಿ ಬರೆದ ೬೧ ಲಕ್ಷ ರೂಪಾಯಿಗಳಿಗೆ ಮಂಜೂರಿಯನ್ನೇ ಕೊಡಬಾರದೆಂದು ಮಿ. ನರಿಮನ್ನರು ಸೂಚಿಸಿದರು. ಅಭಿವೃದ್ಧಿ ಖಾತೆಯಲ್ಲಿ ನಡೆಯುವ [illegible] ಇವರು ಸರಸಾಗಿ ಮಾಡಿಸಲು ಒಂದು ಕಮಿಶನ ನೇಮಿಸಿರಿ; ಅವರ ಎದುರಿಗೆ ಎಲ್ಲ ಮಾತುಗಳನ್ನು ಹೊರಗೆಡಹಿ [illegible] ಸ್ಪಷ್ಟವಾಗಿ ಹೇಳುವೆನು. [illegible] ಹೆಸರನ್ನು ನಮ್ಮ ಕಮಿಟಿಯಲ್ಲಿ ಹೇಳಿ [illegible] ಮಾಡುವೆನೆಂದು ಕೌನ್ಸಿಲದವರ [illegible] ಗೆ ಸ್ಪಷ್ಟ [illegible]. ಕಮಿಶನ ನೇಮಿಸಿರಿ [illegible] ಕೈಗೆ ಕೊಡುವೆನೆಂದರು. ಇವರ ಈ ತರದ ಗಟ್ಟಿಗತನವನ್ನು ಕಂಡು, ಮತ್ತು ಇವರ ರೀತಿಯು ಸಾಹೇಬ ಜನರ ಮೇಲೆ ಬರುತ್ತಿರುವದೆಂಬ ವ್ಯಸನದಿಂದ ಸರ ಲಾರೆನ್ಸ ಹೆಪ್ಪರ ಮತ್ತು ಸರ ಕೋವಾಸಜಿ ಸಾಹೇಬರು ಸಂತಪ್ತರಾದರು. ಮಿ. ನರಿಮನ ಸಾಹೇಬರು ಇವರ ಸಂತಾಪಕ್ಕೆ ಹೆದರದೆ, ತಮ್ಮ ಮಾತನ್ನು ಗಟ್ಟಿಯಾಗಿ ಹಿಡಿದರು. ಸರ ಕಾವಸಜಿ ಜಹಾಂಗೀರರು ಈ ಬಗ್ಗೆ ವಿಚಾರ ಮಾಡುತ್ತೇವೆಂದು ಆಶ್ವಾಸನ ಕೊಡಲು ಇವರ ಸೂಚನೆಯು ಮಂಜೂರಾಗಲಿಲ್ಲ.

ಲಾರ್ಡ ರೀಡಿಂಗ ಸಾಹೇಬರ ರಜೆ.

ಲಾರ್ಡ ರೀಡಿಂಗ ಸಾಹೇಬರು ರಜೆ ತಕ್ಕೊಂಡು ಲಾರ್ಡ ಬರ್ಕನ ಹೆಡ್ಡರ ಕೂಡ ಆಲೋಚಿಸುವ ಕುರಿತು ಎಪ್ರಿಲ ತಿಂಗಳಲ್ಲಿ ವಿಲಾಯತಿಗೆ ಹೋಗುವರು. ಈ ರಜೆಯು ಎರಡು ತಿಂಗಳಿಗಿಂತ ಹೆಚ್ಚಿಗಿರಲಾರದು. ಬಂಗಾಲದ ಗವರ್ನರರಾದ ಲಾರ್ಡ ಲಿಟನ ಸಾಹೇಬರು ಇವರ ಬದಲೀ ಗವರ್ನರ ಜನರಲರಾಗುವರು.

ಬಂಗಾಲದ ದಬ್ಬಾಳಿಕೆಗೆ ಅನುಮೋದನ

ಲಾರ್ಡ ಲಿಟನ ಸಾಹೇಬರು ದಬ್ಬಾಳಿಕೆಯಿಂದ ದಸ್ತಗಿರ ಮಾಡಿದ ಕಾಯದೆಕ್ಕೆ ಮುಂದಾಗಿ ಮಾಫಿ ಕೊಟ್ಟಿದ್ದರಷ್ಟೇ. ಸ್ಟೇಟ ಸೇಕ್ರೆಟರಿಯಾದ ಲಾರ್ಡ ಒಲೀವಿಯರ ಸಾಹೇಬರೂ ಇದಕ್ಕೆ ಪೂರ್ಣ ಸಮ್ಮತಿ ಕೊಟ್ಟಂತೆ ಲಂಡನದಿಂದ ತಾರಿನ ವರ್ತಮಾನ ಬಂದಿದೆ.

ಕೌನ್ಸಿಲದಲ್ಲಿಯ ಪ್ರಶ್ನೆಗಳು.

—೦—

ಪ್ರಾವಿನ್ಶಿಯಲ ಸಿವ್ಹಿಲ ಸರ್ವೀಸ ಅಂದರೆ ಡೆಪ್ಯುಟಿ ಕಲೆಕ್ಟರ ಕೆಲಸಕ್ಕಾಗಿ ಅರ್ಜಿ ಮಾಡಿದಂಥ ಜಾತಿಗಳಲ್ಲಿ ಬ್ರಾಹ್ಮಣರು ೪೮, ಮುಸಲಮಾನರು ೧೨, ಮರಾಠರು ಒಂಭತ್ತು ಮತ್ತು ಲಿಂಗಾಯಿತ ೭ ಕ್ರಿಶ್ಚನ್ನರು ೩, ಪಾರಶಿ ೧ ಎಂಬದಾಗಿ ಬೇರೆ ಬೇರೆ ಜಾತಿಗಳ ೧೩೦ ಜನರಾಗಿದ್ದಾರೆಂದು ಉತ್ತರ ದೊರೆಯಿತು.

ಸರಕಾರದವರು ರೇಲ್ವೆಯಂತೆ ತಮ್ಮ ಖಾತೆಗಳಲ್ಲಿಯೂ [illegible] ಮತ್ತು ಯುರೋಪಿಯನ ಜನರನ್ನು ಆರಿಸುವರೇ? ಎಂದು [illegible] ಪ್ರಶ್ನೆಗೆ [illegible] ಸರಕಾರದ ಖಾತೆಗಳಲ್ಲಿ ಮಾತ್ರ ದೊರೆಯುವದು. ಬೇರೆ ಖಾತೆಗಳಲ್ಲಿ ಮಾತ್ರ ಯುರೋಪಿಯನ ಜನರಿಗೆ ಕೊಡುವೆವೆಂದು ಉತ್ತರ ಕೊಟ್ಟರು.

ವಿದ್ಯಾಖಾತೆಯಲ್ಲಿ ಬ್ರಾಹ್ಮಣೇತರ ಶಿಕ್ಷಕರ ಸಂಖ್ಯೆಯನ್ನು ಹೆಚ್ಚಿಸಲಿಕ್ಕೆ ಸರಕಾರದವರು ಯಾವ ವಿಚಾರವು ಮಾಡುವರೆಂಬ ಪ್ರಶ್ನೆಗೆ—[illegible] ತಿಂಗಳಲ್ಲಿ ಸೇಕಂಡರಿ ಟ್ರೇನಿಂಗ ಕಾಲೇಜಕ್ಕೆ ಆರಿಸಿದ ವಿದ್ಯಾರ್ಥಿಗಳಲ್ಲಿ ೧/೩ ಜನರು ಬ್ರಾಹ್ಮಣೇತರರಾಗಿದ್ದರು. ಡಿ. ಟಿ. ಡಿಗ್ರಿ ಪಡೆದವರಿಗೆ ಮಾತ್ರ ಕಾಲೇಜು ಕೆಲಸ ದೊರೆಯುವದು. ಬರುವ ಕೆಲಸಗಳನ್ನು ದಕ್ಷಿಣದ ಮಟ್ಟಿಗೆ ಬ್ರಾಹ್ಮಣೇತರರಿಗೇ ಕೊಡುವೆವೆಂದು ವಿದ್ಯಾ ಖಾತೆಯವರು ಉತ್ತರ ಕೊಟ್ಟರು.

ಅಮೇರಿಕೆಯ ಕೆಲವು ಸಂಗತಿಗಳು

—೦—

ಅಮೇರಿಕಾ ಅಂದರೆ ಯುನಾಯಿಟೆಡ್ ಸ್ಟೇಟ್ಸದಲ್ಲಿ ರೇಶಿಮೆಯ ಬಟ್ಟೆಗಳ ವ್ಯಾಪಾರವು ಬಹಳವಾಗಿ ಸಾಗುತ್ತದೆ. ೨೫ ವರ್ಷಗಳ ಕೆಳಗೆ ಅಲ್ಲಿ ನೂರವತ್ತು ಕೋಟಿಯ ಬಟ್ಟೆ ಹೋಗುತ್ತಿತ್ತು. ಅದು ಈಗ ಎರಡು ಅಬ್ಜ ಮಿಕ್ಕಿದೆ. ಜಪಾನ ರೇಶಿಮೆಯನ್ನು ಮುಖ್ಯವಾಗಿ ಜಪಾನವು ಪೂರೈಸುತ್ತದೆ. ಇದರ ಪ್ರಮಾಣವು ನೂರಕ್ಕೆ ೮೦ ರಷ್ಟಿರುತ್ತದೆ.

ಈ ದೇಶದಲ್ಲಿ ರೇಲ್ವೆಯ ವಿಸ್ತಾರವು ೨ ಲಕ್ಷ ೬೫ ಸಾವಿರ ಮೈಲನಷ್ಟು ಇರುತ್ತದೆ. ಇದು ಜಗತ್ತಿನಲ್ಲಿರುವ ರೇಲ್ವೆಯ ಉದ್ದಳತೆಯ ಮೂರರಲ್ಲಿ ಒಂದು ಭಾಗವಾಗಿದೆ. ಈ ರೇಲ್ವೆಗಾಗಿ ಆರು ಖರ್ವ ರೂಪಾಯಿ ಬಂಡವಲ ಹತ್ತಿದೆ. ಕಂಪನಿಗಳಿಗಾಗಿಯೇ ಪ್ರತಿವರ್ಷ ಸರಾಸರಿ ೧೮ ಅಬ್ಜ ರೂಪಾಯಿಯ ಉತ್ಪನ್ನ ಹತ್ತುತ್ತದೆ. ಒಂದು ವರ್ಷದಲ್ಲಿ ಮೂರು ಖರ್ವ ಎಂಟು ಅಬ್ಜ ಜನರು ಪ್ರವಾಸ ಮಾಡಿದರು. ರೇಲ್ವೆಯ ಹಾಸಲು ಅಗ್ಗವಾಗಿರುತ್ತದೆ.

ಅಮೇರಿಕೆಯು ಮೊದಲಿನಿಂದಲೇ ಶ್ರೀಮಂತ ರಾಷ್ಟ್ರವು. ಮಹಾಯುದ್ಧದಿಂದಂತೂ ಇದರ ಶ್ರೀಮಂತಿಕೆಯು ಮತ್ತಷ್ಟು ಹೆಚ್ಚಾಗಿ ಏರಿದೆ. ಇದು ಇಂಗ್ಲೆಂಡ ಮೊದಲಾಗಿ ಜಗತ್ತಿನಲ್ಲಿರುವ ಎಲ್ಲ ಪ್ರಮುಖ ದೇಶಗಳಿಗೆ ಸಾಲ ಕೊಟ್ಟಿದೆ. ಇದರ ಉತ್ತರ ಗಡಿಯಲ್ಲಿರುವ ಇಂಗ್ಲಿಷರ ವಸಾಹತು ಕೆನಡಾ ದೇಶದಲ್ಲಿ ಇದರ ಬಂಡವಲವೇ [illegible]ಯುತ್ತಿರುವದು. ಅಮೇರಿಕೆಯು ವಿಲಾಯತಿಯ ರಾಜಕಾರಣದಲ್ಲಿ ಯಾವ ಸಂಬಂಧವನ್ನೂ ಇಟ್ಟುಕೊಳ್ಳಬಾರದೆಂದು ಹೇಳುವದು. ಮತ್ತು ವ್ಯಾಪಾರ ದೃಷ್ಟಿಯಿಂದ ಶಾಂತಿಕೆಲಸ ಪ್ರಸ್ತಾಪಿಸುತ್ತಿರುವದು. ಮಹಾಯುದ್ಧದ ಪೂರ್ವದಲ್ಲಿ ಲಂಡನವು ಜಗತ್ತಿನ ವ್ಯಾಪಾರದ ಕೇಂದ್ರವಾಗಿತ್ತು. ಆ ಬಹುಮಾನವು ಈಗ ನ್ಯೂಯಾರ್ಕ ಪಟ್ಟಣಕ್ಕೆ ಬಂದಿರುತ್ತದೆ.

ಹಾಂವಿನಿಂದ ದರೋಡೆ.

ಕಡಪಿ ಜಿಲ್ಲೆಗೆ ಸೇರಿದ ಗಂಗಾದೇವರಪಲ್ಲಿ ಗ್ರಾಮದಲ್ಲಿ ದರೋಡೆಗಾರರು ಒಬ್ಬ ಶ್ರೀಮಂತನ ಮನೆಯಲ್ಲಿ ಹೊಕ್ಕು, ಜನರನ್ನು ಕಂಬಕ್ಕೆ ಬಿಗಿದು, ಕೈಗೆ ಸಿಕ್ಕದ್ದನ್ನು ತಕ್ಕೊಂಡು ಹೋದರು. ದರೋಡೆ ಮಾಡುವಾಗ ಇವರು ಹಾವು ತಂದಿದ್ದರು. ಅಲ್ಲಿ ಇವರು ಬಿಟ್ಟು ಹೋದ ಹಾವು ಕೆಲವರ ಮೇಲೆ ಹಾರಿತು. ಸುದೈವದಿಂದ ಯಾರಿಗೂ ಅಪಾಯವಾಗಲಿಲ್ಲ.

ಇಂಗ್ಲಿಷರಿಗೆ ಮಾತ್ರ ಸಂತಾಪ!!

—೦—

ಕಾಶಮೀರದಲ್ಲಿರುವ ಆರ್ಥರ್ ಸಾಹೇಬರ ಗೋರಿಯನ್ನು ಪಟ್ಟಣದ ಮಧ್ಯ ಸ್ಥಳದಿಂದ ತೆಗೆಯಬೇಕೆಂಬದಾಗಿ ಸದರ ಚಳವಳಿಯು ಜರುಗಿ ಅಲ್ಲಿಯ ಮ್ಯುನಸಿಪಾಲಿಟಿಯಲ್ಲಿ ನಡೆದಿದೆ. ಸಾಹೇಬರು ಸತ್ತಿದ್ದಾರೆ. ಅವರ ಗೋರಿಯನ್ನು ಬೇರೆ ಸ್ಥಳಕ್ಕೆ ಒಯ್ಯುವದು ಸಹ ಅವರ ಅವಮಾನ ಮಾಡಿದಂತಾಗುತ್ತದೆ. ಯಾವನೂ ಇಂಥ ಅವಮಾನವನ್ನು ಸಹಿಸಲಾರನೆಂದು ಇಂಗ್ಲಿಷ ಮಂದಿಯು ಭಾಷಣ ಮಾಡಿದ್ದಾರೆ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ, ಧಾರವಾಡ.

ಕೋ. ಆಪರೇಟಿವ್ಹ ಕ್ರೆಡಿಟ ಸೋಸಾಯಟಿಜ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ

ಹೊಂದಿಗೆಯು ಅರ್ಧಲಕ್ಷದ ಮೇಲೆ ಮೀರಿ. ಚೆಕ್ಕ, ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ಮಾಡಲ್ಪಡುವವು. ಕಾಯಿಮ ಮತ್ತು ಮೇರಿ ತರದ ಠೇವಣೆದಾರರಿಗೆ ಚನ್ನಾಗಿ ಬಡ್ಡಿ ದೊರೆಯುವದು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಹಗೀರದಾರ,

ಮ್ಯಾನೇಜಿಂಗ ಡಾಯರೆಕ್ಟರ

ಆರ್. ಎಮ್. ಜ್ಯಾನ್ ಎಂಡ ಸನ್ಸ, ಹುಬ್ಬಳ್ಳಿ.

ಎಜಂಟ್ಸ ಫೋರ ಕಾರಬೋನಿಕ್ ಆಸಿಡ್ಡ ಗ್ಯಾಸ. ಮ್ಯಾನುಫ್ಯಾಕ್ಚರರ್ ಆಫ್ ಏರೇಟೆಡ ವಾಟರ್ಸ.



ತಾವು ಆರ್ಡರ ಬೇಗ ಕಳಿಸಿರಿ.

ನಮ್ಮಲ್ಲಿ ಸಿಗುವ ಸಾಮಾನುಗಳ ವಿವರ

ಫುಲ್‌ಗ್ಯಾಸ ಸಿಲೆಂಡರಗಳು ಇಂಗ್ಲೀಷ ಮತ್ತು ಜರ್ಮನ ಪೇಟೆಂಟ ಕಾಡ್ಸ, ಎಮ್. ಟಿ. ಸೋಡಾ ವಾಟರ ಬಾಟಲಗಳು, ೫೦೦ ನ ಸಾವ



ನಮ್ಮಲ್ಲಿ ಸಿಗುವವು

ರೇಸ ಡೆಪ್ಪ ೧ ಪಾಂಡಸಮ್ಮ. ಸೋಡಾವಾಟರ್ ಮಶಿನುಗಳು ಮತ್ತು ಎಲ್ಲ ತರದ ಕಲರಿನ ಬಾಟಲಿಗಳ ಎಸೆನ್ಸಗಳು, ಅಮೇರಿಕನ್ ಆಯಿಸ್ಕ್ರೀಮ ಸೋಡಾ, ಪಿನಾಪಾ, ಕೋಲಾಜಿಂಜೇರಿಯಾ, ಲೆಮನ್ ನಂ. ೧ ಲೆಮನ್ ಜುಯಿಸ್ ಸೋಡಾ ನಂ. ೧ ಮೆಂಗೋ, ಆರೇಂಜ, ಫಾಯಿನಾಪಲ್, ಪಿಕ್ಸಮಿಕ್ಸ್, ಕ್ವಿನಿನ್ ಟಾನಿಕ್, ರಾಸಬೇರಿ ನಂ. ೧ ರೋಜ ನಂ. ೧ ಸ್ಟೋನ್ ಜಿಂಜರ್ ಬೀರ ನಂ ೧, ರಬ್ಬರ್ ರಿಂಗ್ಸ್, ಮೇಸ ಇತರ ಮಶಿನರಿ ಪಾರ್ಟಗಳು ನಮ್ಮಲ್ಲಿ ಸಿಗುತ್ತವೆ. ಮತ್ತು ಶುದ್ಧ ನೀಲಗಿರಿ ಎಣ್ಣೆಯು ಎಲ್ಲ ತರದ ಬಾಟಲ್ಲಗಳು ಸಿಗುತ್ತವೆ. ವ್ಯಾಪಾರಸ್ಥರಿಗೆ ಒಳ್ಳೇ ಕಮೀಶನ್ ಕೊಡುತ್ತೇವೆ. ನಮ್ಮಲ್ಲಿ ಕಬ್ಬಿಣದ ಮೇಟಲ್ಡ್ ಸಿಂಗಲ ಕಾಟ್ಸಗಳು ಸೋವಿ ದರದಿಂದ ಮಾರಲಿಕ್ಕೆ ಸಿಗುತ್ತವೆ.

ಅಡ್ರೆಸ್— R· M. John &Sons.

Mission Compound HUBLI

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯು ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಾಗಿರುತ್ತದೆ.

ಎ. ಕೆ. ಶೆಟ್ಟಿ,

ಮ್ಯಾನೇಜಿಂಗ ಡಾಯರೆಕ್ಟರ.

ವಿಜಯದ ವರ್ಗಣೀ ದರ

ನಿಶ್ಚಪತ್ರಕ್ಕೆ

೧೨ ತಿಂಗಳಿಗೆ	೧೨—೮—೦	ರೂ
೬ ,,	೭—೦—೦	ರೂ
೩ ,,	೪—೦—೦	ರೂ
ವಾರಪತ್ರಕ್ಕೆ ೧ ವರ್ಷಕ್ಕೆ	೩—೧೨—೦	ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ, ಧಾರವಾಡ

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಓಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಓಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ಆಣೆ ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಓಳಿಗಳಿಗೆ ಇಮ್ಮಡಿಚಾರ್ಜ ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

LOKHANDE



ಬತ್ತೀಸು ಮತ್ತು ಅರ್ಧ ಬೆಲೆಗೆ ಸೂಚಿಸಲ್ಪಟ್ಟ ಹೊಸ ಮೋಡಿನವು.

ಹೊಸಸು ಶಾಕ್ತೀಸು ಮತ್ತು ಸಂಪಾದನೆಯುಳ್ಳವು ನಮ್ಮ ಅಂಗಡಿಯಲ್ಲಿ ಫಾರ್ವರ ಲ್ಯೂಬಾ, ವೆಸ್ಟ ಎಂಡ, ಮೊರಿಯಸ, ಓಮೇಗಾ ಮತ್ತು ಸ್ವಿಸ ಜನರಲ ಕಂಪನಿ ಮುತ, ಬೇರೆ ಪ್ರಸಿದ್ಧ ಕಂಪನಿಗಳ ಗಡಿಯಾರಗಳು ಈಗಿನ ಬಂದಿದ್ದು, ಇವು ನಿಂಬಲಿಕ್ಕೆ ಸುಂದರವಾಗಿಯೂ ಗಟ್ಟಿ ಮತ್ತು ಸರಿಯಾಗಿ ವೇಳೆ ತೋರಿಸುವಂಥವುಗಳಾಗಿವೆ. ಇವು ರೂಪಾಯಿಯಿಂದ ಹಿಡಿದು ನೂರು ರೂಪಾಯಿಗಳ ವರೆಗೆ ಸಿಗುವವು. ಲೋಖಂಡೆಯವರು ಪ್ರತಿಯೊಂದಕ್ಕೆ ಗ್ಯಾರಂಟಿ ಕೊಡುತ್ತಾರೆ. ಒಮ್ಮೆ ಬಂದು ನೋಡಬಾರದೆ?

ಪ್ರೊಪ್ರಾಯಿಟರ. ದತ್ತುರಾವ ಲೋಖಂಡೆ

ಚ ವ್ಯಾಂಡ ಕ್ಲಾಕ ಮರ್ಚಂಟ ಧಾರವಾಡ.

ದಿ. ಅಂಕಲಗಿ ಬ್ಯಾಂಕ ಲಿಮಿಟೇಡ್ ಧಾರವಾಡ.

—೦—

೧೯೧೩ ಇಸ್ವಿಯು

ಕಂಪನಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ಚಾಲೂ ಖಾತೆ, ಠೇವು, ಸೇವ್ಹಿಂಗ್ಸದ ಡಿಪಾಜಿಟ, ಸಾಲ, ಪತ್ತಿ, ಹುಂಡಿ, ಮುಂತಾದ ಯಾವತ್ತು ವ್ಯವಹಾರಗಳು ನಡಿಯುವವು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡುವವರಿಂದ ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ ರಿಂದ ೧೦-೩೦. ಸಾಯಂಕಾಲ ೩ ರಿಂದ ೬ ರವರೆಗೆ ನಡಿಯುವದು.

K.B . Ankalagi

ಮ್ಯಾನೇಜಿಂಗ ಡಾಯರೆಕ್ಟರ

ಈ ಪತ್ರವನ್ನು ಲಕ್ಷ್ಮಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾಗ್ಭೂಷಣದ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.B.N. 1443

ಬೆಲೆ ಅರ್ಧ ಆಣೆ

ಧಾರವಾಡ ... ತಾ|| ೭ ಸೆಪ್ಟೆಂಬರ ೧೯೨೫ ನೇ ಇಸ್ವಿ

[illegible]

೧೯೨೫ (ಸಂಚಿಕೆ ೩೩

ನೋಟೀಸು.

— ೦ —

ಕಮಲಾ ರಾವಳ ಗ-ಹ-ಮು-ಗಜೇಂದ್ರಗಡ ಇವರಿಗೆ—

ಕೆಳಗೆ ಸಹಿ ಮಾಡಿದ ನಾನು ಈ ನೋಟೀಸಿನಿಂದ ತಿಳಿಸುವದೇನೆಂದರೆ- ಸನ್ ೧೯೧೮ ನೇ ಇಸ್ವಿಯಿಂದ ನಮ್ಮ ತಿಮ್ಮಕ್ಕ ... ನೀನು ನನ್ನ ಮೇಲೆ ಗದಗ ಕೋರ್ಟಿನಲ್ಲಿ ಅಸಲ ನಂ ೪೭೮/೧೯೧೯ ರಲ್ಲಿ ದಾವೆ ಮಾಡಿದಿ ಮತ್ತು ಅದೇ ಕಾಲಕ್ಕೆ ನಿಮ್ಮ ತಾಯಿಯು ಕಡಿದ ಫೌಜದಾರಿ ಸಹ ಮಾಡಿದ್ದಿ. ಇದಲ್ಲದೆ ಒಂದರ ಮೇಲೊಂದು ಭಯಂಕರ ಹಂಟಿಗಳನ್ನು ನನ್ನ ಮೇಲೆ ತರುತ್ತಾ ಬಂದದ್ದರಿಂದ ನಾನು ಅದರೊಳಗಿಂದ ಪಾರಾಗುವದಕ್ಕಾಗಿ ಸಾವಿರಾರು ರೂಪಾಯಿಗಳನ್ನು ಖರ್ಚ ಮಾಡಿಕೊಂಡರು ಸಹ ಪಾರಾಗದಂತೆ ಕಂಡದ್ದರಿಂದ ನನ್ನ ಮತ್ತು ನನ್ನ ಮನೆತನದ ಮರ್ಯಾದೆಯನ್ನು ಕಾಯ್ದುಕೊಳ್ಳುವದಕ್ಕಾಗಿ ನಿಮ್ಮಿಂದ ನನ್ನ ಲಗ್ನದ ಖರ್ಚಿನ ಹಣವನ್ನು ತೆಗೆದುಕೊಂಡು ತಾ|| ೨೩-೮-೧೯೨೦ ನೇ ಇಸ್ವಿಯ ದಿವಸ ನಿನಗೆ ಸೋಡಪತ್ರವನ್ನು ಕೊಟ್ಟು ಬಿಟ್ಟು ಬಿಟ್ಟಿದ್ದೇನೆ ಅಂದಿನಿಂದಾ ನೀನು ನಿನ್ನ ಮನಬಂದಂತೆ ಇರಹತ್ತಿರುತ್ತೀದಿ. ಮತ್ತು ನಾನು ಸಹ ನಿನ್ನ ಹೆಸರನ್ನು ನನ್ನ ಕನಸು ಮನಸಿನಲ್ಲಿ ಕೂಡಾ ತಗಿದಿರುವದಿಲ್ಲ.

ಹೀಗಿದ್ದು ನೀನು ನನ್ನ ಮೇಲೆ ಮತ್ಯಾವ ಕೋಪವನ್ನು ತಾಳುವ ಇರಾದೆಯಿಂದಲೋ ಮೋಸಗೊಳಿಸುವ ನೆವದಿಂದಲೋ ನನ್ನನ್ನು ಕಾಡುವ ದುರುದ್ದೇಶದಿಂದ ಕೂಡಿದವಳಾಗಿ ನಾನು ನಿನ್ನ ಮನೆಗೆ ಬರುತ್ತಾ ಹೋಗುತ್ತಾ ಇರುವೆನೆಂತಲೂ ನಿನಗೆ ಕೊಟ್ಟ ಸೋಡಪತ್ರವನ್ನು ರದ್ದು ಪಡಿಸುವದಕ್ಕಾಗಿ ಬೇರೆ ಒಂದು ಲೇಖವನ್ನು ಬರೆಕೊಟ್ಟಿರುವೆನೆಂತಲೂ ಸುಳ್ಳುಸುಳ್ಳೇ ಸಾಧಿಸಲಿಕ್ಕೆ ಹತ್ತಿರುತ್ತೀದಿ ಎಂದು ನನ್ನ ಕೇಳಿಕೆಯಲ್ಲಿ ಬರುತ್ತದೆ. ನೀನು ನಿನ್ನ ದುಷ್ಟ ಕೃತ್ಯದಿಂದ ಮಾಡಿಕೊಂಡ ಅವಿಚಾರದ ಭಾರವನ್ನು ನನ್ನ ಮೇಲೆ ಹೊರಿಸುವ ದುರುದ್ದೇಶದಿಂದ ನನಗೆ ಉಪದ್ರವ ಮಾಡಿ ಮೋಸಗೊಳಿಸಿ ನನ್ನ ಮನನೋಯಿಸುವದಕ್ಕಾಗಿ ಕೆಲವು ಅಜಾಣ ಸ್ತ್ರೀಯರನ್ನು ನನ್ನ ಮನೆಗೆ ಸ್ವಂಥಕ್ಕಾಗಿ ಕಳಿಸಿರುತ್ತೀಯೆಂದು ನನಗೆ ತಿಳಿಯುತ್ತದೆ. ಈ ಪ್ರಕಾರ ನೀನು ಮಾಡುವದು ಮತ್ತು ಸುಳ್ಳು ಸುಳ್ಳೇ ಇಲ್ಲದ ಸಂಗತಿಯನ್ನು ಪ್ರಕಟಿಸಿರುತ್ತಿರುವದನ್ನು ನೋಡಿದರೆ ನಿನ್ನ ಕಾಟದ ಮೋಸ ಕೃತಿಯು ಪ್ರಕಟವಾಗಿ ನನಗೆ ಅನೇಕರಿಂದ ದುರಾಲೋಚನೆಗಳು ಬರಹತ್ತಿವೆ. ಈ ನಿನ್ನ ಸುಳ್ಳಿನ ಕೃತಿಯಿಂದ ನನಗೆ ಕಷ್ಟ ಕೊಡತಕ್ಕವರು ಸಹ ಕೊಡಲಿಕ್ಕೆ ಹಿಂದು ಮುಂದು ನೋಡಲಿಕ್ಕಿಲ್ಲವಾದ್ದರಿಂದಾ ಈ ನೋಟಿಸು ಕೊಡುವ ಭಾಗ ಬಿತ್ತು.

ನಿನಗೆ ಸೋಡಪತ್ರವನ್ನು ಕೊಟ್ಟಂದಿನಿಂದ ನಿನ್ನ ಮನೆಗೆ ನಾನು ಎಂದೂ ಬಂದಿಲ್ಲಾ ಬರಲಿಕ್ಕೆ ಕಾರಣವಿಲ್ಲಾ ಮತ್ತೆ ಮುಂದಾದರು ಎಂದೆಂದಿಗೂ ಬರುವದಿಲ್ಲಾ ಮತ್ತೆ ನಿನಗೆ ಕೊಟ್ಟ ಸೋಡಪತ್ರವನ್ನು ರದ್ದ ಪಡಿಸಲಿಕ್ಕೆ ನಿನಗೆ ಯಾವ ಲೇಖವನ್ನು ಬರಕೊಟ್ಟಿಲ್ಲಾ ಬರಕೊಡಲಿಕ್ಕೆ ಕಾರಣವು ಇಲ್ಲಾ ಮತ್ತು ಆ ಸೋಡಪತ್ರವನ್ನು ಮುಂದೆ ನಾನು ಯಾವ ರೀತಿಯಿಂದಲೂ ರದ್ದು ಪಡಿಸಿಕೊಳ್ಳುದಿಲ್ಲಾ ನಿನ್ನ ಮೋಸದ ಕೃತಿಯು ನನ್ನ ಮೇಲೆ ಬರಬಾರದೆಂದು ಇದ್ದ ನಿಜಸಂಗತಿಯನ್ನು ಈ ನೋಟೀಸಿನ ದ್ವಾರ ಪ್ರಕಟಿಸಿರುವೆನು.

ನೀನು ಸಾಧಿಸುವಂತೆ ನಾನು ನಿನ್ನ ಮನೆಗೆ ಬರಹೋಗುವದೂ ಮತ್ತು ಸೋಡಪತ್ರವನ್ನು ರದ್ದು ಪಡಿಸುವದಕ್ಕಾಗಿ ಬರೆಕೊಟ್ಟ ಲೇಖವು ನಿಜವೆಂತಲೂ ನಿನ್ನ ಅಭಿಪ್ರಾಯವಿದ್ದರೆ ಈ ನೋಟೀಸು ಮುಟ್ಟಿದ ಎಂಟು ದಿವಸದೊಳಗೆ ಸದರ ಲೇಖವನ್ನು ಕೋರ್ಟಿನಲ್ಲಿ ಹಾಜರಪಡಿಸಿ ಸಿದ್ಧ ಮಾಡಿಕೊಳ್ಳಬೇಕು ಹಾಗೆ ಮಾಡದೆ ಇದ್ದರೆ ನಿನ್ನ ಸುಳ್ಳಿನ ದುಷ್ಟಕೃತಿಯಿಂದ ಆದ ನನ್ನ ಮಾನಹಾನಿ ಬಗ್ಗೆ ನಿನ್ನ ಮೇಲೆ ರೀತಿ ಪ್ರಕಾರ ಇಲಾಜ ನಡಿಸಲಾದೀತು. ಮತ್ತು ನಿನ್ನ ದುಷ್ಟಕೃತಿಯಿಂದ ನನ್ನನ್ನು ಮೋಸಗೊಳಿಸಲಿಕ್ಕೆ ಮಾಡಿದ ಯತ್ನವನ್ನು ಸಹಾ ನಿನ್ನ ಪರಿಷ್ಕಾರ ತಪಾ ವೈದು ನಿನಗೆ ಯೋಗ್ಯ ಬಂದುಬಸ್ತು ಮಾಡಿಸಲಾದೀತು, ಈ ನೋಟೀಸಿನ ಖರ್ಚ ನಿನ್ನ ತಲೆಯ ಮೇಲೆ ಅದೆ.

ತಾ|| ೭-೩-೨೫ ಇಸ್ವಿ

ಈ ಎಡಗೈ ಹೆಬ್ಬೆಟ್ಟಿನ ಗುರ್ತು ಪರಶರಾಮಪ್ಪಾ ಸಾವಳಿಗಿಪ್ಪಾ ಹಿಂದೆ ಸಾ|| ಗದಗ ಇವರ ಮಾಡಿದ್ದು ಇರುತ್ತದೆ.

ಲೋಕಬಂಧು

ವಾರಪತ್ರಿಕೆ

ಸಂಪಾದಕರು- ಲಕ್ಷ್ಮಣ ರಾಮಚಂದ್ರ ಪಾಂಗೆ

ಈ ಪತ್ರವು ಧಾರವಾಡದಲ್ಲಿ ಪ್ರತಿ ರವಿವಾರ ಹೊರಡುತ್ತಿದ್ದು ಇದರಲ್ಲಿ ರಾಜಕೀಯ ಸಾಮಾಜಿಕ ಔದ್ಯೋಗಿಕ, ಶೈಕ್ಷಣಿಕ ಮುಂತಾದ ವಿಷಯಗಳು ಚನ್ನಾಗಿ ಪ್ರತಿಪಾದಿಸಲ್ಪಡುವದಲ್ಲದೆ, ಎಲ್ಲ ಪ್ರಾಸಂಗಿಕ ಸಂಗತಿಗಳು ಸುಬೋಧ ಭಾಷೆಯಲ್ಲಿ ಬರೆಯಲ್ಪಡುವವು.

ವಾರ್ಷಿಕ ವರ್ಗಣಿ ಮುಂಗಡ ೩—೮—೦

ಮ್ಯಾನೇಜರ,

ಲೋಕಬಂಧು ಆಫೀಸ, ಧಾರವಾಡ.

ಪ್ರಾಥಮಿಕ ಶಿಕ್ಷಕ

ಮಾಸಪತ್ರಿಕೆ.

ಸಂಪಾದಕರು- ಲಕ್ಷ್ಮಣ ರಾಮಚಂದ್ರ ಪಾಂಗೆ.

ಉತ್ತರ ಕರ್ನಾಟಕದ ಪ್ರಾಥಮಿಕ ಶಿಕ್ಷಕರ ಹಿತ ಸಂಬಂಧವನ್ನು ಕುರಿತು ಅತ್ಯಂತ ಕಳಕಳಿಯಿಂದ ಪ್ರಯತ್ನ ಪಡುತ್ತಿರುವ ಮಾಸಪತ್ರಿಕೆಯು. ಶಿಕ್ಷಕರು ಇದನ್ನು ತಪ್ಪದೆ ಕೊಳ್ಳಲು ಅತ್ಯಗತ್ಯವಿದ್ದರೂ ಕೊಳ್ಳಲ್ಲದವರೂ, ಅಧಿಕಾರಿಗಳೂ ಓದತಕ್ಕವರು.

ವಾರ್ಷಿಕ ವರ್ಗಣಿ ಮುಂಗಡ ೨—೦—೦

ಮ್ಯಾನೇಜರ

ಪ್ರಾಥಮಿಕ ಶಿಕ್ಷಕ ಆಫೀಸ, ಧಾರವಾಡ

ಚಂದಾದಾರರಿಗೆ ಸೂಚನೆ

೧೯೨೫ನೆಯ ಹೊಸ ವರ್ಷಾರಂಭವಾಗಿದ್ದು, ನಡೆಯುವ ತಿಂಗಳದ ಬಗ್ಗೆ ನಿತ್ಯ ಮತ್ತು ವಾರಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ ಯನ್ನು ಕಳಿಸಲಿಕ್ಕೆ ಪ್ರಾರಂಭಿಸುವೆವು. ಚಂದಾದಾರರು ವ್ಹಿ. ಪಿ. ಯನ್ನು ಸ್ವೀಕರಿಸಿ, ವಿಜಯವನ್ನು ಈ ಮೊದಲಿನಂತೆ ಪ್ರೋತ್ಸಾಹಿಸುವರೆಂದು ಆಶಿಸುತ್ತೇವೆ.

ವ್ಯವಸ್ಥಾಪಕ ವಿಜಯ

ಧಾರವಾಡ.

ಕಾರ್ಣಾಟಕ ಪ್ರೆಸ್ ಧಾರವಾಡ

ದಿ ಧಾರವಾಡ ಅರ್ಬನ ಕೋ. ಆಪರೆಟಿವ್ಹ ಬ್ಯಾಂಕ ಲಿಮಿಟಡ

ಮಂಗಳವಾರ ಪೇಟೆ, ಧಾ

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯ ಟಿಯ ಆಕ್ಟ ಕ
ನ ಬ್ಯಾಂಕಿನ ಪ

ಬಿಂದಿಗೆಯು ಆಲಕ್ಷ್ಯದ ಮೇಲೆ ಜೆ, ಹ ಮ
ಮಾಡಲ್ಪಡುವದು. ಕಾಯಿದೆ ಮತ್ತು ಬೇರೆ ತರದ
ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊ

ಮ್ಯಾ

ಆರ್. ಎಮ್. ಜೆ ನ್ ಎಂಡ
ಎಜಂಟ್ಸ ಪೋರ ಕಾರಬೋನಿಕ್ ಆಸಿಡ್ಡ ಗ್ಯಾಸ



, ನಮ್ಮಲ್ಲಿ ಸಿಗುವ ಸಾಮಾನುಗಳ ವಿವರ

ತಾವು ಆರ್ಡರ ಬೇಗ ಕಳಿಸಿರಿ.

ಫುಲ್‌ಗ್ಯಾಸ ಸಿಲೆಂಡರಗಳು ಇಂಗ್ಲೀಷ ಮತ್ತು ಅಮೇರಿಕ ಕಾರ್ಬಾನಿಕ, ಎಮ್. ಟಿ ಸೋಡಾ ಬಾಟಲಗಳು, ೫೦೦ ನಂ ದಿನ ಬೆಳ್ಳಿ ೧ ಪಾನಿ. ಸೋಡಾವಾಟರ್ ಮಶಿನುಗಳು ಎಸೆನ್ಸಗಳು, ಅಮೇರಿಕನ್ ಆಯಿಸ್ಕ್ರೀಮ ಸೋಡಾ, ಬನಾನಾ, ಲೆಮನ್ ಜುಯಿಸ್ ಸೋಡಾ ನಂ. ೧ ಮೆಂಗೊ, ಆರೇಂಜ, ಟಾನಿಕ್, ರಾಜಬಿರಿ ನಂ. ೧ ರೋಜ ನಂ. ೧ ಸ್ಟೋನ ಜಿಂಜ ಇತರ ಸಾಮಾನುಗಳು ನಮ್ಮಲ್ಲಿ ಸಿಗುತ್ತವೆ. ಮತ್ತು ಸಿಗುತ್ತವೆ. ವ್ಯಾಪಾರಸ್ಥರಿಗೆ ಒಳ್ಳೇ ಕಮೀಶನ್ ಕೊಡಲಾಗುತ್ತದೆ. ಸಿಂಗಲ ಬಾಟ್ಲುಗಳು ಸೋವಿ ದರದಿಂದ ಮಾರಲಿಕ್ಕೆ ಸಿಗುತ್ತವೆ

ಆ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷ ಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೆ ಇಟ್ಟುಕೊಳ್ಳುವ ಬಡ್ಡಿಯು ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ

ಎ. ಕೆ. ಕಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ.

ದಿ
೧೩
೭
ವಾರ
ವಿಶೇ

ಬೋ
ಆಣೆ
ಗ್ಲಿಷ
ದ
ಕ
ವಿ

LOKHANDE

R.B.N. 1443

ನಿತ್ಯ ಪತ್ರ

ವಿಜಯ

ಬಿಡಿ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೬) ಧಾರವಾಡ ಶನಿವಾರ ತಾರೀಖು ೭ನೇ ಮಾರ್ಚ ೧೯೨೫ (ಸಂಚಿಕೆ ೫೬

ಕನ್ನಡ ತರುಣರಿಗೊಂದು !

ಬಿನ್ ಬಂಡವಾಳಿನ ವ್ಯವಸಾಯ!!

ಕಿರ್ಲೋಸ್ಕರ ನೇಗಿಲುಗಳ ವ್ಯಾಪಾರ !!!

ಕಿರ್ಲೋಸ್ಕರ ನೇಗಿಲು ಮತ್ತು ನಾಗರಗಳ ಉಪಯೋಗವು, ಮತ್ತು ಉಪಯುಕ್ತತೆ ಹಿಂದುಸ್ಥಾನದ ಪ್ರತಿಯೊಬ್ಬ ಒಕ್ಕಲಿಗನಿಗೆ ಗೊತ್ತಿದ್ದ ಮಾತು. ಅವುಗಳಿಗೆ ಗಿರಾಕಿಗಳು ಬಹಳ ಇದ್ದುದರಿಂದ ಅವುಗಳನ್ನು ಮಾರಾಟ ಮಾಡಬಲ್ಲ ದಲಾಲರಿಗೆ ಸ್ಥಳ ಬೇಕಾಗಿದೆ. ಕಂಪನಿಯಿಂದ ದೊರೆಯುವ ಕ್ಯಾಟಲಾಗ, ಚೀಟಿ ಪತ್ರಗಳು, ಗೋಡೆಯ ಚಿತ್ರಪಟ ಇತ್ಯಾದಿ ಜಾಹೀರಾತಿನ ಸಾಮಗ್ರಿಗಳನ್ನು ತರಿಸಿ ಹಳ್ಳಿಗಳಲ್ಲಿ ಪ್ರಸಾರ ಮಾಡಿದಲ್ಲಿ ಆರ್ಡರು ದೊರೆಯುವವು. ಈ ಆರ್ಡರ ಕೂಡ ೧/೪ ಹಣವನ್ನು ಇಸಕೊಂಡು ಕಂಪನಿಗೆ ಕಳಿಸಿದಲ್ಲಿ ಕಂಪನಿಯು ಆನಂತರ ಮಿಕ್ಕ ರಕಮನ್ನು ವ್ಹಿ. ಪಿ. ಮಾಡಿ ದಲಾಲರಿಗೆ ಕಮೀಶನ್ ಕೊಡುವದು.

ಕಮೀಶನ್ ದರಗಳ ಬಗ್ಗೆ ಇಂದೇ ಕಾಗದವನ್ನು ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ } ಕಿರ್ಲೋಸ್ಕರವಾಡಿ. ಜಿಲ್ಹಾ ಸಾತಾರಾ.

ಭಕ್ತ ೩ ಆಣೆಯೊಳಗೇ ಆಶ್ಚರ್ಯಕಾರಕ ವ ರಾಮಬಾಣ ಉಪಾಯ

ಮೊಮೆಂಟ ಕ್ಯೂಅರ

ತಲೆಶೂಲಿ, ಅರ್ಧ ತಲೆಶೂಲಿ, ಶೀತ, ಉಷ್ಣ ವ ನಿದ್ರಾನಾಶ ವಗೈರೆಗಳಿಂದಾದ ಮಸ್ತಕಶೂಲಿಯು ತ್ವರಿತದಿಂದ ನಿರ್ಮೂಲ ಮಾಡಲು "ಮೊಮೆಂಟ ಕ್ಯೂಅರ" ಇದಕ್ಕೆ ಸರಿಸಮಾನವಾದ ಔಷಧವು ಬೇರೆ ಇಲ್ಲ. ಹೆಚ್ಚು ಜನರು ಮಸ್ತಕಶೂಲಿಯನ್ನು ಸಹಿಸಲು ಆಗದೆ ಮಸ್ತಕಕ್ಕೆ ವಸ್ತ್ರಕಟ್ಟಿ ಎಣ್ಣೆ ವ ಅರ್ಕಗಳನ್ನು ತಾಗಿಸುತ್ತಾರೆ. ಆದರೆ ಸರಾಸರಿಯಾದವರು ಮೊಮೆಂಟ ಕ್ಯೂಅರದ ಗುಳಿಗೆಯನ್ನು ಬಿಸಿ ಚಹಾದೊಂದಿಗೆ ಅಥವಾ ಬಿಸಿ ನೀರಿನೊಂದಿಗೆ ತೊಗೊಂಡಲ್ಲಿ ತತ್ಕ್ಷಣದಲ್ಲಿ ಒಂದೇ ಕ್ಷಣದಲ್ಲಿ ಮಸ್ತಕಶೂಲಿಯು ನಿಲ್ಲುವದು. ಇದಕ್ಕೆ ಅನೇಕ ಶಿಫಾರಸ ಪತ್ರಗಳು ಉಂಟು.

೧ ಡಬ್ಬಿಗೆ ೩ ಆಣೆ. ಸ್ಯಾಂಪಲ ಸಲುವಾಗಿ ೩ ಆಣೆ ಪೋಸ್ಟ ತಿಕೀಟುಗಳನ್ನು ಕಳಿಸಿದಲ್ಲಿ ಕಳಿಸುವೆವು.

ವಿಳಾಸ— ಪಿ ಕಿಸನದಾಸ ಮಹಿಕಲ ಸೆಟ್ಲೀ, ಮಿಸ್ತ್ರಿಂಗ ಕೆಮಿಸ್ಟ ಮತ್ತು ಡ್ರ:
ಸ್ಟೇಶನರೋಡ ಮುಂಬಯಿ.

ಲೋಕಬಂಧು

ವಾರಪತ್ರಿಕೆ

ಸಂಪಾದಕರು- ಲಕ್ಷ್ಮಣ ರಾಮಚಂದ್ರ ಪಾಂಗೆ

ಈ ಪತ್ರವು ಧಾರವಾಡದಲ್ಲಿ ಪ್ರತಿ ಶನಿವಾರ ಹೊರಡುತ್ತಿದ್ದು ಇದರಲ್ಲಿ ರಾಜಕೀಯ ಸಾಮಾಜಿಕ ಔದ್ಯೋಗಿಕ, ಧಾರ್ಮಿಕ ಮುಂತಾದ ವಿಷಯಗಳು ಚನ್ನಾಗಿ ಪ್ರತಿಪಾದಿಸಲ್ಪಡುತ್ತವಲ್ಲದೆ, ಎಲ್ಲ ಸ್ಥಳಿಕ ಸಂಗತಿಗಳು ಸುಲಭ ಭಾಷೆಯಲ್ಲಿ ಬರೆಯಲ್ಪಡುವವು.

ವಾರ್ಷಿಕ ವರ್ಗಣಿ ಮುಂಗಡ ೩—೮—೦

ಮ್ಯಾನೇಜರ,
ಲೋಕಬಂಧು ಆಫೀಸ, ಧಾರವಾಡ.

ಪ್ರಾಥಮಿಕ ಶಿಕ್ಷಕ

ಮಾಸಪತ್ರಿಕೆ.

ಸಂಪಾದಕರು- ಲಕ್ಷ್ಮಣ ರಾಮಚಂದ್ರ ಪಾಂಗೆ.

ಉತ್ತರ ಕರ್ನಾಟಕದ ಪ್ರಾಥಮಿಕ ಶಿಕ್ಷಕರ ಹಿತ ಸಂಬಂಧವನ್ನು ಕುರಿತು ಅತ್ಯಂತ ಆಸ್ಥೆಯಿಂದ ಪ್ರಯತ್ನ ಮಾಡುತ್ತಿರುವ ಮಾಸಪತ್ರಿಕೆಯು. ಶಿಕ್ಷಕರು ಇದನ್ನು ತಕ್ಕೊಳ್ಳಲು ಅಡ್ಡಿಯಿಲ್ಲೆಂದು ಶಿಕ್ಷಣಾಧಿಕಾರಿಗಳೂ ಒಪ್ಪಿರುವರು.

ವಾರ್ಷಿಕ ವರ್ಗಣಿ ಮುಂಗಡ ೨—೦—೦

ಮ್ಯಾನೇಜರ
ಪ್ರಾಥಮಿಕ ಶಿಕ್ಷಕ ಆಫೀಸ, ಧಾರವಾಡ

ಚಂದಾದಾರರಿಗೆ ಸೂಚನೆ

೧೯೨೫ನೆಯ ಹೊಸ ವರ್ಷಾರಂಭವಾಗಿದ್ದು, ಹಿಂದೆ ಉಳಿದ ತಿಂಗಳದ ಬಗ್ಗೆ ನಿತ್ಯ-ಮತ್ತು ವಾರಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸಲಿಕ್ಕೆ ಪ್ರಾರಂಭಿಸುವೆವು. ಚಂದಾದಾರರು ವ್ಹಿ. ಪಿ. ಯನ್ನು ಸ್ವೀಕರಿಸಿ, ವಿಜಯವನ್ನು ಈ ಮೊದಲಿನಂತೆ ಪ್ರೋತ್ಸಾಹಿಸುವರೆಂದು ಆಶಿಸುತ್ತೇವೆ.

ವ್ಯವಸ್ಥಾಪಕ ವಿಜಯ
ಧಾರವಾಡ.

ವಿಜಯ.

ಧಾರವಾಡ ತಾ- ೬-೩-೨೫ ನೇ ಇಸ್ವಿ

ಲಂಡನದಲ್ಲಿ ಸ್ವರಾಜ್ಯ ವಿಚಾರಣೆಯು ಮಹತ್ವದ ಕಮಿಟಿ.

—೦—

ಲಾರ್ಡ ರೀಡಿಂಗ ಸಾಹೇಬರು ರಜೆ ತಕ್ಕೊಂಡು ವಿಲಾಯತಿಗೆ ಹೋಗುವರೆಂಬ ಸಂಗತಿಯನ್ನು ಹಿನ್ನಿನ ಸಂಚಿಕೆಯಲ್ಲಿ ಬರೆದಿರುತ್ತೇವೆ. ಸಾಹೇಬರು ನಾಲ್ಕು ತಿಂಗಳ ರಜೆ ತಕ್ಕೊಂಡಿರುವರು. ಇದು ದಣಿವಾರಿಸಿಕೊಳ್ಳುವದಕ್ಕಲ್ಲ. ಲಾರ್ಡ ಬರ್ಕನಹೆಡ್ಡ ಸಾಹೇಬರ ಕೂಡ ಹಿಂದುಸ್ಥಾನದ ರಾಜ್ಯ ಕಾರಭಾರದಲ್ಲಿ ಮಾಡತಕ್ಕ ಹೆಚ್ಚಿನ ಸುಧಾರಣೆಗಳ ದೆಸೆಯಿಂದಿರುತ್ತದೆ. ಈ ಸಮಯದಲ್ಲಿ ಇವರೊಬ್ಬರೇ ವಿಲಾಯತಿಗೆ ಪ್ರಯಾಣ ಮಾಡುವದಿಲ್ಲ. ಬಹಾರ ಪ್ರಾಂತದ ಗವ್ಹರ್ನರರಾದ ಸರ ವ್ಹೀಲರ ಮತ್ತು ಬ್ರಹ್ಮದೇಶದ ಗವ್ಹರ್ನರರಾದ ಸರ ಬಟ್ಲರ ಸಾಹೇಬರೂ, ಹಿಂದುಸ್ಥಾನ ಸರಕಾರದ ಕೋಶಾಧ್ಯಕ್ಷರಾದ ಸರ ಬ್ಲಕೆಟ ಸಾಹೇಬರೂ ಒಂದು ವಾರ ಹಿಂದೆ ಮುಂದೆ ವಿಲಾಯತಿಗೆ ಪ್ರಯಾಣ ಮಾಡುವರು. ಇವರೆಲ್ಲರೂ ಕೂಡಿ, ಹಿಂದುಸ್ಥಾನಕ್ಕೆ ಎಷ್ಟು ಪ್ರಮಾಣದಿಂದ ಹೆಚ್ಚಿಗೆ ಅಧಿಕಾರ ಕೊಡಬಹುದೆಂಬದನ್ನು ಆಲೋಚಿಸುವರು.

ಹತ್ತು ವರ್ಷದ ಕಂತ್ತ ಮುಗಿದ ಬಳಿಕ, ಸರಕಾರದವರು ಪುನಃ ಒಂದು ಕಮಿಶನ ನೇಮಿಸಬೇಕು; ಅದರ ವಿಚಾರಣೆ ಮುಗಿದು, ಸಿಫಾರಸ್ಸು ಆಗಿ ಆ ಪ್ರಕಾರ ಆಡಳಿತೆಯಲ್ಲಿ ಹಿಂದೀ ಪ್ರಜೆಗೆ ಹೆಚ್ಚಿನ ಅಧಿಕಾರ ದೊರೆಯಬೇಕಾದರೆ ಮುಂದೆ ಮೂರು ನಾಲ್ಕು ವರ್ಷಗಳಾದರೂ ಬೇಕಾಗುವವು. ಹೀಗೆ ಹತ್ತು ವರ್ಷವು ೧೩-೧೪ ವರ್ಷಗಳಲ್ಲಿ ಪರಿಣಮಿಸುವದು. ಅಸೆಂಬ್ಲಿಯು ಠರಾವಿನ ಸಮಾಧಾನಕ್ಕೆಂದು ಕೂತ ಸ್ವರಾಜ್ಯ ಕಮಿಟಿಯ ರಿಪೋರ್ಟಿನಲ್ಲಿ ಮುಂದಿನ ವರ್ಷ ಕಮಿಶನದ ನೇಮಕವಾಗಿ, ಸ್ವರಾಜ್ಯದ ಎರಡನೆಯ ಕಂತವು ಸರಿಯಾಗಿ ಹತ್ತನೇ ವರ್ಷ ಮುಗಿದ ಕೂಡಲೆ ಪ್ರಾರಂಭವಾಗುವದೆಂದು ಕೆಲವರ ತರ್ಕವಿರುತ್ತದೆ. ಲಾರ್ಡ ರೀಡಿಂಗರೇ ಮೊದಲಾಗಿ ನಾಲ್ವರು ಪ್ರಮುಖ ಗೌರಸ್ವಾಯು ಅಧಿಕಾರಸ್ಥರು ವಿಲಾಯತಿಗೆ ಪ್ರಯಾಣ ಮಾಡಿದ್ದರ ಕೊನೆಯು ವಿಚಾರಕ್ಕೆ ಒಂದು ರಾಯಲ ಕಮಿಶನ ಕೊಡಿಸುವದಕ್ಕಿಂತ ಹೆಚ್ಚಿಗೆ ಮುಂದೆ ಹೋಗಲಾರದೆಂದು ಸರ್ವಸಾಮಾನ್ಯವಾದ ತರ್ಕವಿರುತ್ತದೆ.

ಯುರೋಪಿಯನ ಕೌನ್ಸಿಲರರ ಅಧಿಕಾರ ಮತ್ತು ಗುಟ್ಟು ಬೇರೆ; ಹಿಂದೀ ಮಂತ್ರಿಗಳ ಸಂಬಂಧ ಬೇರೆ ಆಗಿರುವದು. ಇದು ರಾಜ್ಯಕಾರಭಾರದೊಳಗಿನ ಪ್ರಬಲವಾದ ದೋಷವಾಗಿರುತ್ತದೆಂದು ಸ್ವರಾಜ್ಯ ಕಮಿಟಿಯ ಹಿಂದೀ ಮೆಂಬರರು ಅಭಿಪ್ರಾಯ ಪಟ್ಟಿರುವಷ್ಟೇ; ಈ ಅಭಿಪ್ರಾಯವನ್ನು ಕಸದಾರ್ಥ ಮಾಡಿ, ಅದಕ್ಕೆ ಕಸದ ಬುಟ್ಟಿಯನ್ನು ತೋರಿಸುವಂತಿಲ್ಲ. ಮುಖ್ಯವಾಗಿ ಸದ್ಯದಲ್ಲಿ ಪ್ರತಿಯೊಂದು ಇಲಾಖೆಗೆ ಸ್ವತಂತ್ರಾಧಿಕಾರ ಬೇಕಾಗಿರುತ್ತದೆ. ಗವ್ಹರ್ನರರ ಪ್ರಭಾವಳಿಯಲ್ಲಿರುವ ಹಿಂದೀ ಮತ್ತು ಯುರೋಪಿಯನ್ನ ಅಧಿಕಾರಿಗಳ ಹಕ್ಕು ಹಾಗು ಅಧಿಕಾರವನ್ನು ಒಂದೇ ರೀತಿಯಾಗಿ ಮಾಡಿದ ವಿನಹ ದ್ವಾಯಕಿಯು ಅಳಿಯದು ಮತ್ತು ರಾಜ್ಯಕಾರಭಾರವು ಸುರಕ್ಷಿತವಾಗಿ ಸಾಗಲಾರದು.

ಲಾರ್ಡ ರೀಡಿಂಗ ಸಾಹೇಬರೂ, ಸರ ತ್ರಯರಾದ ವ್ಹೀಲರ, ಬಟ್ಲರ ಮತ್ತು ಬ್ಲಕೆಟ ಸಾಹೇಬರೂ ಲಾರ್ಡ ಬರ್ಕನಹೆಡ್ಡರ ಕೂಡ ಗುಪ್ತವಾಗಿ ಮಾತಾಡುವಾಗ ಯಾರು ತಮ್ಮ ಮತ ಕೇಳತಕ್ಕವರೆಂದು ಅಸೆಂಬ್ಲಿಯ ಮೆಂಬರರು ಚಿಂತಿಸ್ವಕಗೆ ಒಳ ಕೊಳ್ಳುತ್ತಲಿದ್ದಾರೆ. ಬರುವ ವಾರದಲ್ಲಿ ಸ್ವರಾಜ್ಯ ಕಮಿಟಿಯ ರಿಪೋರ್ಟು ಪ್ರಸಿದ್ಧವಾಗುವದು. ಆ ನಂತರ ಒಂದು ದಿವಸ ಅಸೆಂಬ್ಲಿಯಲ್ಲಿ ಈ ರಿಪೋರ್ಟನ್ನು ಕುರಿತು ಚರ್ಚೆಯಾಗುವದು. ಆಗ ಮಾತ್ರ ಇವರಿಗೆ ತಮ್ಮ ಅಭಿಪ್ರಾಯ ಹೇಳಲು ಅವಕಾಶ ದೊರೆಯುವದು. ಹೋದ ವರ್ಷ ಅಸೆಂಬ್ಲಿಯಲ್ಲಿ ರಾವುಂಡ ಟೇಬಲ ಕಾನ್ಫರನ್ಸ ಕೂಡಿಸಬೇಕೆಂಬ ಠರಾವು ಪಾಸಾಗಿತ್ತು. ಈಗ ಸಹ ಸರಕಾರದವರು ಈ ಠರಾವಿನಂತೆ ವರ್ತಿಸದೆ ತಮಗೆ ಉಚಿತ ತೋರಿದಂತೆ ನಡಿಯುವರೆಂದು ಸ್ಪಷ್ಟವಾಗುತ್ತದೆ. ಲೋಕ ಪಕ್ಷದ ಹಿಂದೀ ಪ್ರಮುಖರ ಆಲೋಚನೆಯಿಂದ ಕೊಡದಂಥ ಯಾವ ಹಕ್ಕೂ ಪ್ರಜಾ ಸಮ್ಮತವಾಗಲಾರದು.

ಬ್ರಾಹ್ಮಣೇತರರಿಗೆ ಕೆಲಸ ಹಂಚುವ ಕಮಿಟಿಯು.

—೦—

ಮದ್ರಾಸದ ಕಾಯದೆ ಕೌನ್ಸಿಲದಲ್ಲಿ ಬ್ರಾಹ್ಮಣೇತರರಿಗೆ ಅವರ ಜನಸಂಖ್ಯೆಯ ಪ್ರಮಾಣದಿಂದ ಸರಕಾರೀ ಕೆಲಸಗಳನ್ನು ಕೊಡಬೇಕೆಂಬ ಠರಾವು ಬಂತು. ಇದನ್ನು ಕ್ರಿಶ್ಚನ್ನ ಮತ್ತು ಮುಸಲಮಾನ ಮೆಂಬರರು ವಿರೋಧಿಸಿ, ಈ ವಿಷಯವಾಗಿ ಒಂದು ಕಮಿಟಿ ನೇಮಿಸಬೇಕೆಂದು ಸೂಚಿಸಿದರು. ಬ್ರಾಹ್ಮಣ ಮೆಂಬರರು ಇದನ್ನು ಅನುಮೋದಿಸಲು ಕಮಿಟಿ ನೇಮಿಸುವ ಠರಾವು ಪಾಸಾಯಿತು.

ಇವೇ ತಲೆಭಾರವಾದ ರಾಜ್ಯ ಕಾರಭಾರ.

ರಾಜ್ಯ ಕಾರಭಾರದಲ್ಲಿ ವರಿಷ್ಠ ಕಾಮದಾರರ ಸಂಖ್ಯೆಯು ಬಹಳವಾಗಿ, ಅವರು ತಿನ್ನುವ ಸಂಬಳದಿಂದ ಪ್ರಜರಿಗೆ ಕರಭಾರವು ತಲೆಭಾರವಾಗಿರುತ್ತದೆಂದು ಹೇಳುವದಕ್ಕೆ ಗವ್ಹರ್ನರರ ಬಳಗದಲ್ಲಿರುವ ಕೌನ್ಸಿಲರ ಮತ್ತು ಮಂತ್ರಿಗಳ ಸಂಖ್ಯೆಯು ಒಂದು ಪ್ರತ್ಯಕ್ಷ ಕುರುಹಾಗಿರುತ್ತದೆ. ಸುಧಾರಣೆಯ ಹೊಸ ಅಮಲಿನ ಪೂರ್ವದಲ್ಲಿ ಒಬ್ಬ ಗವ್ಹರ್ನರರಿಗೆ ಇಬ್ಬರು ಕೌನ್ಸಿಲರರು ಇರುತ್ತಿದ್ದರು. ಮೋರ್ಲೆ ಮಿಂಟೋ ಸುಧಾರಣೆಯಿಂದ ಇವರಿಬ್ಬರು ಯಥಾಪ್ರಕಾರ ಉಳಿದು, ಒಬ್ಬ ಹಿಂದೀ ಗೃಹಸ್ಥರು ಕೌನ್ಸಿಲರರಾದರು. ಮಾಂಟೆಗು, ಚೆಮ್ಸಫರ್ಡ ಸುಧಾರಣೆಯಿಂದ ಮೂವರು ಮಂತ್ರಿಗಳು ಹೆಚ್ಚಿದರು. ಕೆಲಸದಲ್ಲೇನೂ ಹೆಚ್ಚು ಕಡಿಮೆ ಇರುವದಿಲ್ಲ. ಇಬ್ಬರು ಹೋಗಿ ಮೂವರಾದರು; ಮೂವರು ಹೋಗಿ ಆರು ಜನರಾದರು. ಬಂಗಾಲದ ಗವ್ಹರ್ನರರಾದ ಲಾರ್ಡ ಲಿಟನ ಸಾಹೇಬರು ಹಿಂದೂ ಮತ್ತು ಮುಸಲಮಾನರನ್ನು ಸಂತೋಷ ಪಡಿಸುವದಕ್ಕಾಗಿ ಮಂತ್ರಿ ವರ್ಗದಲ್ಲಿ ಇಬ್ಬರು ಹಿಂದೂ ಮತ್ತು ಇಬ್ಬರು ಮುಸಲಮಾನರನ್ನು ನೇಮಿಸಿಕೊಳ್ಳಬೇಕೆಂದಿದ್ದಾರೆ. ಇಬ್ಬರಿಂದಾಗುತ್ತಿದ್ದ ಕೆಲಸಕ್ಕೆ ಏಳು ಜನರು ಹತ್ತುವಂತಾಯಿತು? ಇದು ಕರೆ ಭಾರವೆನಿಸುವದಿಲ್ಲವೇ?

ಗದಗಿನಲ್ಲಿ ಪೋಲೀಸ ಬಂದೋಬಸ್ತಿನ ವಿಚಿತ್ರ ಮಾದರಿಯು.

—೦—

ಮೊನ್ನಿನ ದಿವಸ ಗದಗ ಪಟ್ಟಣದಲ್ಲಿ ಹೊಸದಾಗಿ ಕಟ್ಟಿದ ಲೋಕಲಬೋರ್ಡ ಕಚೇರಿಯನ್ನು ತೆರೆಯುವ ಸಮಾರಂಭವು ಮೆ ಪೆಂಟರ ಸಾಹೇಬರಿಂದ ನೆರವೇರಿಸಲ್ಪಟ್ಟಿತು. ಸಾಹೇಬರು ಬಂದು ಹೋಗುವ ತನಕ ಪೋಲೀಸರು ಮೂರು ತಾಸುಗಳ ತನಕ ದಾರಿಯನ್ನು ಬಂದು ಮಾಡಿ, ವ್ಯವಹಾರಕ್ಕೆ ದೊಡ್ಡ ಅತಂಕ ತಂದರು. ಗವ್ಹರ್ನರರು ಬಂದಾಗ ದಾರಿಯನ್ನು ಬಂದು ಮಾಡುವ ಪದ್ಧತಿಯುಂಟು. ಕಮಿಶನರ ಸಾಹೇಬರ ದೆಸೆಯಿಂದ ಈ ಪ್ರಕಾರ ಬಂದೋಬಸ್ತು ಮಾಡುವದನ್ನು ಎಲ್ಲಿಯೂ ಕೇಳಲಿಲ್ಲ. ಇರಲಿಲ್ಲ. ಸಾಹೇಬರು ಕಲೆಕ್ಟರರಿದ್ದಾಗ ಹಲವು ಸಾರೆ ಗದಿಗ್ಗೆ ಹೋಗಿದ್ದು, ಅಲ್ಲಿಯವರಿಗೆ ಪೂರ್ಣ ಪರಿಚಯಸ್ಥರಾಗಿದ್ದಾರೆ. ಅಂದ ಬಳಿಕ ಈಗೇ ಇಷ್ಟು ಬಂದೋಬಸ್ತು ಏಕೆ? ವ್ಯರ್ಥ ಶ್ರಮ ಮತ್ತು ತಾಪವೇ ಸೈ!!

ಬ್ಯಾರಿಸ್ಟರ ಅಭ್ಯಂಕರರ ಭಾಷಣವು.

—೦—

ಲೆಜಿಸ್ಲೇಟಿವ್ಹ ಅಸೆಂಬ್ಲಿಯಲ್ಲಿ ಬಜೆಟ್ಟದಲ್ಲಿ ಕಂಡು ಬಂದ ದೋಷಗಳನ್ನು ಕುರಿತು ಮೆಂಬರರು ಸರ್ವ ಸಾಮಾನ್ಯವಾದ ಅಭಿಪ್ರಾಯ ಪಟ್ಟಂಥ ಭಾಷಣಗಳನ್ನು ಮಾಡುತ್ತಿದ್ದಾರೆ. ಈ ಭಾಷಣಗಳಲ್ಲಿ ಬ್ಯಾರಿಸ್ಟರ ಅಭ್ಯಂಕರರ ಭಾಷಣವು ಕೆಳಗೆ ಕೊಟ್ಟಂತಿರುತ್ತದೆ.

ಬಜೆಟ್ಟು ಪರದೇಶಿಯರ ಹಿತಕ್ಕಾಗಿ ಬರೆದಿಟ್ಟಿರುತ್ತದೆ. ಇದನ್ನು ಮುದ್ರಿಸಲಿಕ್ಕೆ ಹತ್ತಿದಷ್ಟು ಕಾಗದದ ಬೆಲೆಯನ್ನು ಬೆಲೆ ಕೂಡ ಇದಕ್ಕೆ ಇರುವದಿಲ್ಲ. ರೇಲ್ವೆ, ತಾರು ಮತ್ತು ಪೋಸ್ಟ ಖಾತೆಗಳು ಸಾರ್ವಜನಿಕ ಉಪಯೋಗಕ್ಕಾಗಿರುತ್ತವೆಂದು ಹೇಳುತ್ತೀರಿ; ಅವುಗಳ ಉಪಯೋಗವು ಹಿಂದೀ ಜನರಿಗಾಗದೆ, ಅವುಗಳ ದುಡ್ಡು ಹಿಂದೀ ಜನರ ಸಂಬಳಕ್ಕಾಗಿ ವಿನಿಯೋಗವಾಗದಿದ್ದರೆ ಹಿಂದುಸ್ಥಾನಕ್ಕೆ ಅವುಗಳ ಪ್ರಯೋಜನವೇನು? ಹಿಂದೀ ಪ್ರಜರ ಕೈಯಿಂದ ಆಳುವರ ಪ್ರಭುತ್ವ ನಡೆಯಬೇಕೆಂದು ಮುಖ್ಯ ಉದ್ದೇಶವಾಗಿದೆ. (ಮಿ. ಬೆಳವಿಯವರು ಕೇಳಿರಿ, ಕೇಳಿರಿ) ಹಿಂದುಸ್ಥಾನವೊಂದು ಜಿಂದಿಗೆ ಒಂದು ತೀರದ ವರಲ್ಲದೆ, ದೇಶವೆಂದು ತಿಳಿದು, ರಾಜ್ಯಕಾರಭಾರ ಮಾಡುತ್ತಿರುವದಿಲ್ಲ. ಇಂಗ್ಲಿಷರ ೧೫೦ ವರ್ಷಗಳ ಆಳಿಕೆಯಲ್ಲಿ ಹಿಂದುಸ್ಥಾನವು ಪೌರುಷ ಹೀನವೂ, ಅರಾಜಕೀಯವೂ ಆಗಿದೆ. ಹಿಂದುಸ್ಥಾನದ ಸೈನ್ಯವು ಹಿಂದೀ ಆಗಬೇಕಲ್ಲದೆ, ಇದಕ್ಕೆ ಪೂರೈಸುವ ಬಂದೂಕುಗಳನ್ನು ಹಿಂದುಸ್ಥಾನದಲ್ಲಿಯೇ ಮಾಡಬೇಕು. (ಬರ್ಡನ ಸಾಹೇಬರು ಇದನ್ನು ಹಿಂದುಸ್ಥಾನದಲ್ಲಿಯೇ ಮಾಡುವರು.) ಹಾಗಾದರೆ ತೋಫುಗಳನ್ನೂ ಮುಟುಟ ಪೈದಾನದಂಥ ಹಾವಿನ ತೋಫುಗಳನ್ನೂ ಈ ದೇಶದಲ್ಲಿಯೇ ಹೊಯ್ಯಬೇಕು. ನೀವು ಸೈನ್ಯವನ್ನು ಹಿಂದೀ ಮಾಡಿದ ಬಳಿಕ, ನಿಮ್ಮ ತೋಫುಗಳನ್ನು ಮಾಡಲಿಕ್ಕೆ ಬರುವದಿಲ್ಲೆಂಬ ನೆವನ ಹೇಳಿ, ನೀವು ಸ್ವರಾಜ್ಯಕ್ಕೆ ಅಪಾತ್ರರಿದ್ದೀರೆಂದು ಅನ್ನಬಹುದು. ನಮ್ಮ ಕೌನ್ಸಿಲಗಳು ವಾದವಿವಾದ ಮಾಡುವ ಸಂಘಗಳಿಗಿಂತ ಹೆಚ್ಚಿನ ಯೋಗ್ಯತೆಯವಾಗಿರುವದಿಲ್ಲ. ಸರಕಾರದ ಬೇಡಿಕೆಗಳು ಥೀಕ್ಷ್ಣ ಮುಂಗನಾ ಕದೀಥಿ ರಬನಾ ಎಂಬಂತಿರುತ್ತವೆ. ಆದರೂ ಇಲ್ಲಿ ಕೆಲವರು ತರ್ಕ ಮತ್ತು ಜಾಣತನದಿಂದ ಉದ್ದೇಶ ಪೂರ್ಣ ಮಾಡಿಕೊಳ್ಳಬೇಕೆಂದಿದ್ದಾರೆ. ಜಾಣತನದಿಂದಲೂ, ತರ್ಕಶಾಸ್ತ್ರದಿಂದಲೂ ಸ್ವಾತಂತ್ರ್ಯ ಸಂಪಾದಿಸಿದ ಸುದ್ದಿಯನ್ನೇ ಕೇಳಿಲ್ಲ. ಹೀಗಾದರೆ ಹಿಂದುಸ್ಥಾನದ ಇತಿಹಾಸವನ್ನು ಬೇರೆ ಪ್ರಕಾರದಿಂದ ಬರೆಯಬೇಕಾದೀತು! ಅಷ್ಟರೊಳಗಿನ ನಮಗಿಂತ ಹೆಚ್ಚಿಗೆ ತರ್ಕಶಾಸ್ತ್ರ ಬಲ್ಲವರಿಗೆ ಬಜೆಟ್ಟು ನಾಮಂಜೂರ ಮಾಡಿದ ಗುದಿಕೆ ಕೊಟ್ಟೇ ಅವರನ್ನು ಸೋಲಿಸತಕ್ಕದ್ದು.

ಅಂಗೋರಾದ ಮಂತ್ರಿಗಳ ರಾಜೀನಾಮೆ.

—೦—

ಖುರ್ದರ ಬಂಡಾಯವನ್ನು ಮುರಿಯುವ ವಿಷಯವಾಗಿ ತುರುಕ ಪಾರ್ಲಮೆಂಟ ಸಭೆಯಲ್ಲಿ ದೊಡ್ಡ ವಾದವಿವಾದಾಯಿತು. ಸರಕಾರದವರು ನಿಷ್ಕರುಣೆಯಿಂದ ಬಂಡಾಯ ಮುರಿಯಬೇಕೆಂದು ಉಗ್ರ ಪಕ್ಷದವರು ಸೂಚನೆ ತಂದರು. ಇದು ನ್ಯಾಯವು ಅಲ್ಲ; ಅಷ್ಟು ಕಠಿಣ ಉಪಾಯ ಮಾಡುವದು ವಿಹಿತವೂ ಅಲ್ಲೆಂದು ಮುಖ್ಯ ಮಂತ್ರಿಯಾದ ಫೇತಿಬೆಯವರು ಉತ್ತರವಾಡಿದರು. ಇದು ಉಗ್ರ ಪಕ್ಷಕ್ಕೆ ಸಹನವೂ ಸಮ್ಮತವೂ ಆಗಲಿಲ್ಲ. ಮತ ತೆಗೆದುಕೊಳ್ಳಲು ಇವರದೇ ಬಹುಮತವಾಯಿತು. ತಮ್ಮ ಮಾತು ಸೋತ ಕೂಡಲೆ, ಫೇತಿಬೆ ಮೊದಲಾದ ಮಂತ್ರಿಗಳು ರಾಜೀನಾಮೆ ಕೊಟ್ಟರು. ಉಗ್ರ ಪಕ್ಷದವರು ಮಂತ್ರಿ ಮಂಡಲ ಸ್ಥಾಪಿಸುವ ತನಕ ಇವರೇ ಕೆಲಸ ನೋಡುವರು. ಇಸ್ಮತ ಪಾಷಾನು ಮಂತ್ರಿಮಂಡಲ ಸ್ಥಾಪಿಸುವನು.

ಜರ್ಮನಿಯ ಅಧ್ಯಕ್ಷನಾಗಬೇಕೆಂದು ಪದಚ್ಯುತ ಯುವರಾಜನ ಹಾರೈಕೆ!!

—೦—

ಎಬರ್ಟ ಸಾಹೇಬರ ಮರಣದಿಂದ ತೆರವಾದ ಅಧ್ಯಕ್ಷ ಪದದ ಮಾಲೆಯು ಯಾರ ಕೊರಳಿಗೆ ಬೀಳುವದೆಂದು ಜರ್ಮನಿಯಲ್ಲಿ ಲೋಕ ಚರ್ಚೆ ನಡೆದಿದೆ. ಲೋಕರ ವಿಶ್ವಾಸ ಸಂಪಾದಿಸಿಕೊಂಡಿದ್ದ ಹಿಂಡೆನಬರ್ಗ, ಮ್ಯಾಕನಸ್ಸನ, ಟಿರಪಿಜ, ಹ್ಯಾನಟುಲೋ ಇವರು ಅಧ್ಯಕ್ಷರಾಗಬಹುದು. ಆದರೆ ಇವರು ವೃದ್ಧರಾಗಿರುವದರಿಂದ, ಇವರು ಉಮೇದವಾರರಾಗಲಾರರು. ಪದಚ್ಯುತ ಯುವರಾಜರು ಈ ಸ್ಥಳದ ಅಪೇಕ್ಷೆ ಮಾಡಬಹುದೆಂದು ಸುದ್ದಿ ಹೊರಬಿದ್ದಿದೆ. ಇವರು ಅಧ್ಯಕ್ಷರಾಗುವದು ತಮಗೆ ಸಮ್ಮತವಾದರೂ ಇದು ಯುಕ್ತ ಕಾಲವಲ್ಲೆಂದು ಇವರ ಪಕ್ಷದವರು ಅನ್ನುತ್ತಾರೆ.

ಸಾಹುಕಾರಿಯಂತೆ ಪೆರಂಬೂರಲ್ಲಿ ಕೊಳ್ಳೇದೆವ್ವ.

ಮದ್ರಾಸದ ಹತ್ತರಿರುವ ಪೆರಂಬೂರ ಪಟ್ಟಣದಲ್ಲಿ ಕಳೆದ ೧೫ ದಿವಸಗಳಲ್ಲಿ ಅನೇಕ ಕಡೆಗೆ ಬೆಂಕಿ ಹತ್ತಿ, ೫೦ ಸಾವಿರದ ಹಾನಿಯಾಗಿರುತ್ತದೆ. ಪೋಲೀಸರು ಸಂಶಯದಿಂದ ೩೫ ಜನರನ್ನು ಹಿಡಿದಿದ್ದಾರೆ. ಇವರಲ್ಲಿ ಅನೇಕರು ಶ್ರೀಮಂತರಾದ ರೆಡ್ಡಿಗಳಿರುತ್ತಾರೆ.

ಪೂರಾ ಸುಳ್ಳು ಸುದ್ದಿ.

ದೇಶಬಂಧು ದಾಸರು ಕಲಕತ್ತೆಯ ಸ್ಟೇಟ್ಸ್ಮನ ಪತ್ರಕ್ಕೆ ಕೆಳಗೆ ಕೊಟ್ಟಂತೆ ತಾರು ಕಳಿಸಿದ್ದಾರೆ.

"ನಾನು ಪುನಃ ವಕೀಲಿ ಮಾಡುವದಿಲ್ಲ. ಮುಂಬಯಿ ಖಟ್ಲೆಯ ಸುದ್ದಿಯೇ ಗೊತ್ತಿಲ್ಲ. ಯಾರೂ ನನ್ನ ಕಡೆಗೆ ಬಂದಿಲ್ಲ"

ಆಗಲಾರದ ಜನರು ಎಂಥೆಂಥ ಸುಳ್ಳು ಸುದ್ದಿಗಳನ್ನು ಬೀರುತ್ತಾರೆಂಬದಕ್ಕೆ ಇದೊಂದು ಉದಾಹರಣೆಯಾಗಿರುತ್ತದೆ.

ಕರಾಚಿ ಮ್ಯುನಿಸಿಪಾಲಿಟಿಯ ಸುಧಾರಣೆ.

ಮುಂಬಯಿ ಮ್ಯುನಿಸಿಪಾಲಿಟಿಯಂತೆ ತಮ್ಮ ಮ್ಯುನಿಸಿಪಾಲಿಟಿಯ ಆಡಳಿತೆಯಲ್ಲಿಯೂ ತಿದ್ದುಪಡಿಯನ್ನು ಸೂಚಿಸುವದಕ್ಕಾಗಿ ಕರಾಚಿಯವರು ಸರ ವಿಶ್ವೇಶ್ವರಯ್ಯನವರನ್ನು ಕರಿಸಿಕೊಳ್ಳುವರು. ಇವರಿಗೆ ಈ ಕೆಲಸಕ್ಕಾಗಿ ಆರು ಸಾವಿರ ರೂಪಾಯಿ, ಕರಾಚಿಯಲ್ಲಿರುವ ತನಕ ಒಂದು ಬಂಗ್ಲೆ ಮತ್ತು ಮೋಟಾರ ಕೊಡಬೇಕೆಂದು ಗೊತ್ತು ಮಾಡಿದ್ದಾರೆ.

ದೇಶಭಾಷೆಗಳಿಗೆ ಉತ್ತೇಜನ.

ಕೌನ್ಸಿಲದಲ್ಲಿ ಮೆಂಬರರು ಉರ್ದು ಮತ್ತು ಹಿಂದೀ ಭಾಷೆಯಲ್ಲಿ ಮಾಡುವ ಭಾಷಣಗಳ ತರ್ಜುಮೆಯನ್ನು ಇಂಗ್ಲಿಷದಲ್ಲಿ ಮುದ್ರಿಸದೆ, ಅದನ್ನು ದೇಶಭಾಷೆಯಲ್ಲಿಯೇ ಮುದ್ರಿಸಬೇಕೆಂಬ ಠರಾವು ಅಲ್ಲಾಬಾದಿನ ಕಾಯದೆ ಕೌನ್ಸಿಲ ಸಭೆಯಲ್ಲಿ ಪಾಸಾಯಿತು.

ಬಂಗಾಲದಲ್ಲಿ ಐದು ಕೋಟಿಯ ಸಾಲ.

ಬಂಗಾಲ ಇಲಾಖೆಯಲ್ಲಿ ವಿದ್ಯೆ ಆರೋಗ್ಯ ಮತ್ತು ಕಲಾಶಿಕ್ಷಣದ ಅಭಿವೃದ್ಧಿಗಾಗಿ ಐದು ಕೋಟಿಯ ಸಾಲ ತೆಗೆದು, ಅದನ್ನು ೩೦ ವರ್ಷಗಳಲ್ಲಿ ಕಂತದಿಂದ ಮುಟ್ಟಿಸುತ್ತಾ ಹೋಗಬೇಕೆಂದು ಸೂಚಿಸಲ್ಪಟ್ಟಿದೆ.

ಬಂಗಾಲದಲ್ಲಿ ಮುಸಲಮಾನ ಗವ್ಹರ್ನರ

ಲಾರ್ಡ ಲಿಟನ ಸಾಹೇಬರು ಗವ್ಹರ್ನರ ಜನರಲರಾಗಿರುವ ತನಕ ಸರ ಅಬ್ದುಲ ರಹಿಮಾನ ಸಾಹೇಬರು ಬಂಗಾಲದ ಆಕ್ಟಿಂಗ ಗವ್ಹರ್ನರರಾಗುವರು.

ನಾಗಪೂರದಲ್ಲಿ ಸ್ವರಾಜ್ಯ ಪಕ್ಷೀಯರು ತಮ್ಮ ಮೆಂಬರರಾದ ಶ್ರೀ. ತಾಂಬೆಯವರನ್ನು ಕೌನ್ಸಿಲದ ಅಧ್ಯಕ್ಷರಾಗಿ ಆರಿಸಿದರು. ಇವರ ಸಂಬಳವು ವರ್ಷಕ್ಕೆ ೩೬ ಸಾವಿರವೆಂದು ಗೊತ್ತು ಮಾಡಲ್ಪಟ್ಟಿತು.

ದಿ ಧಾರವಾಡ ಅರ್ಬನ ಕೋ. ಆಪರೆಟಿವ್ಹ ಬ್ಯಾಂಕ ಲಿಮಿಟೆಡ.

ಮಂಗಳವಾರ ಪೇಟೆ, ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೋಸಾಯಟಿಯು ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ

ಹೊಂದಿಗೆಯು ಆರು ಲಕ್ಷದ ಮೇಲೆ ... ಜೀವ ... ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ಮಾಡಲ್ಪಡುವದು. ... ಮತ್ತು ಚೇರಿ ... ಚನ್ನಾಗಿ ಒಪ್ಪಿ ... ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡುವವರಿಂದ ತಿಳಕೊಳ್ಳಬೇಕು.

ಮಾಧವರಾವ ಬಿ. ಜಕಾತಿ,

ಮ್ಯಾನೇಜಿಂಗ ಡಾಯರೆಕ್ಟರ

ಆರ್. ಎಮ್. ಜ್ಹೋನ್ ಎಂಡ ಸನ್ಸ, ಹುಬ್ಬಳ್ಳಿ.

ಎಜಂಟ್ಸ ಫೋರ ಕಾರಬೋನಿಕ್ ಆಸಿಡ್ಡ ಗ್ಯಾಸ, ಮ್ಯಾನುಫ್ಯಾಕ್ಚರರ್ ಆಫ್ ಏರೆಟೆಡ ವಾಟರ್ಸ.



ತಾವು ಆರ್ಡರ ಬೇಗ ಕಳಿಸಿರಿ.

ನಮ್ಮಲ್ಲಿ ಸಿಗುವ ಸಾಮಾನುಗಳ ವಿವರ.

ಫುಲ್‌ಗ್ಯಾಸ ಸಿಲೆಂಡರಗಳು ಇಂಗ್ಲೀಷ ಮತ್ತು ಜರ್ಮನ ಎಮಟಿಕ ... ಎಮ. ಟಿ. ಸೋಡಾ ವಾಟರ ಬಾಟಲಿಗಳು, ೫೦೦ ನಂ. ... ಹೀನ ... ೧ ... ಸೋಡಾವಾಟರ್ ಮಶಿನುಗಳು ಮತ್ತು ಎಲ್ಲ ತರದ ಕಲರಿನ ಬಾಟಲಿಗಳ ಎಸನ್ಸಗಳು, ಅಮೇರಿಕನ್ ಆಯಿಸ್ಕ್ರೀಮ ಸೋಡಾ, ಬನಾನಾ, ಕೋಲಾಚೆಂಪೇಬನ, ಲೆಮನ್ ನಂ. ೧ ಲೆಮನ್ ಜುಯಿಸ್ ಸೋಡಾ ನಂ. ೧ ಮೆಂಗೋ, ಆರೇಂಜ, ಫಾಯಿನಾಪಲ್, ಪಿಕ್ಕಮಿಅಪ್, ಕ್ವಿನಿನ್ ಟಾನಿಕ್, ರಾಜಬಿರಿ ನಂ. ೧ ರೋಜ ನಂ. ೧ ಸ್ಟೋನ್ ಜಿಂಜರ್ ಬೀರ ನಂ. ೧, ರಬ್ಬರ್ ರಿಂಗ್ಸ, ಬೇಸಿಗೆ ... ಮತಿನ ... ಗಳು ನಮ್ಮಲ್ಲಿ ಸಿಗುತ್ತವೆ. ಮತ್ತು ಶುದ್ಧ ನೀಲಗಿರಿ ಎಣ್ಣೆಯು ಎಲ್ಲ ತರದ ಬಾಟಲ್ಲಿಗಳು ಸಿಗುತ್ತವೆ. ವ್ಯಾಪಾರಸ್ಥರಿಗೆ ಒಳ್ಳೇ ಕಮೀಶನ್ ಕೊಡುತ್ತೇವೆ. ನಮ್ಮಲ್ಲಿ ಕಬ್ಬಿಣದ ಮಿಟಿಂಗಲ ... ಗಳು ಸೋವಿ ದರದಿಂದ ಮಾರಲಿಕ್ಕೆ ಸಿಗುತ್ತವೆ.

ಅಡ್ರೆಸ್— R· M. John &Sons.

Mission Compound HUBLI

ದಿ· ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

—o—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯು ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯೂ ತಿರುತ್ತದೆ.

ಎ. ಕೆ. ಶಟ್ಟಿ,

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ

ನಿತ್ಯಪತ್ರಕ್ಕೆ

೧೨ ತಿಂಗಳಿಗೆ	೧೨—೮—೦	ರೂ
೬ ,,	೬—೦—೦	ರೂ
೩ ,,	೪—೦—೦	ರೂ
ವಾರಪತ್ರಕ್ಕೆ ೧ ವರ್ಷಕ್ಕೆ	೩—೧೨—೦	ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ, ಧಾರವಾಡ

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಐದು ಆಣೆ ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಒಳಗಳಿಗೆ ಇಮ್ಮಡಿಚಾರ್ಜು ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು.

ಮ್ಯಾನೇಜರ ವಿಜಯ ಧಾರವಾಡ

LOKHANDE

ಬಕ್ಷೀಸು ಮತ್ತು ಅರ್ಧ ಬೆಲೆಗೆ ಮೋಸಹೋಗಬೇಡಿರಿ.

ಜೀನಸು ಉತ್ತಮ ಮತ್ತು ಸಂಖ್ಯೆಯುಳ್ಳದ್ದು ನಮ್ಮ ಅಂಗಡಿಯಲ್ಲಿ ಫೇವರೆ ಲ್ಯೂಬಾ, ವೆಸ್ಟ ಎಂಡ, ಮೊಡಿಯುನ, ಓಮೇಗಾ ಮತ್ತು ಸ್ವಿಸ ಜನರಲ ಕಂಪನಿ ಮತ್ತು ಬೇರೆ ಪ್ರಸಿದ್ಧ ಕಂಪನಿಗಳ ಗಡಿಯಾರಗಳು ಈಗೀಗ ಬಂದಿದ್ದು, ಇವು ನೋಡಲಿಕ್ಕೆ ಸುಂದರವಾಗಿ ... ಗಟ್ಟಿ ಮತ್ತು ಸರಿಯಾಗಿ ... ಗಿವೆ. ... ಯಾರಗಳು ಸಿಗುವವು. ಕೊಳ್ಳುವಾಗ ... ಕ್ಕೆ ಗ್ಯಾರಂಟಿ ಕೊಡುವೆವು. ಒಮ್ಮೆ ಸರಿಸಿ ನೋಡುವಿರಷ್ಟೇ?

ಪ್ರೊಪ್ರಾಯಟರ, ದತ್ತಾತ್ರಯ ಲೋಖಂಡೆ

ವಾಚ್ ಎಂಡ ಕ್ಲಾಕ ಮರ್ಚಂಟ ಧಾರವಾಡ.

ದಿ. ಅಂಕಲಗಿ ಬ್ಯಾಂಕ ಲಿಮಿಟೇಡ್ ಧಾರವಾಡ.

—o—

೧೯೧೩ ಇಸ್ವಿಯ

ಕಂಪನಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ಚಾಲೂ ಖಾತೆ, ಠೇವು, ಸೇವ್ಹಿಂಗ್ಸದ ಡಿಪಾಜಿಟ, ಸಾಲ, ವತ್ತಿ, ಹುಂಡಿ, ಮುಂತಾದ ಯಾವತ್ತು ವ್ಯವಹಾರಗಳು ನಡಿಯುವವು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿಮಾಡುವವರಿಂದ ಸಮಕ್ಷಮ ತಿಳಕೊಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ ರಿಂದ ೧೦-೩೦. ಸಾಯಂಕಾಲ ೩ ರಿಂದ ೬ ರವರೆಗೆ ನಡಿಯುವದು.

K.B . Ankalagi

ಮ್ಯಾನೆಜಿಂಗ ಡಾಯರೆಕ್ಟರ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.B.N. 1443

ವಿಜಯ

ನಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೬) ಧಾರವಾಡ ರವಿವಾರ ತಾರೀಖು ೮ನೇ ಮಾರ್ಚ ೧೯೨೫ (ಸಂಚಿಕೆ ೫೭

ಕರ್ನಾಟಕ ತರುಣರಿಗೊಂದು !

ಬಿನ್ ಬಂಡವಾಳಿನ ವ್ಯವಸಾಯ!!

ಕಿರ್ಲೋಸ್ಕರ ನೇಗಿಲುಗಳ ವ್ಯಾಪಾರ !!!

ಕಿರ್ಲೋಸ್ಕರ ನೇಗಿಲು ಮತ್ತು ಗಾಣಗಳ ಉಪಯೋಗವು, ಮತ್ತು ಮಹತ್ವವು ಈ ದುಸ್ಥಾನದ ಪ್ರತಿಯೊಬ್ಬ ಒಕ್ಕಲಿಗನಿಗೆ ಗೊತ್ತಿದ್ದ ಮಾತು. ಇವುಗಳಿಗೆ ಗಿರಾಕಿಗಳು ಬಹಳ ಆದ್ದರಿಂದ ಅವುಗಳನ್ನು ಮಾರಾಟ ಮಾಡಿಸುವ ದಲಾಲರಿಗೆ ಪ್ರಮ ಬೇಕದು. ಕಂಪನಿಯಿಂದ ದೊರೆಯುವ ಕ್ಯಾಟಲಾಗ, ಜಾಹಿರ ಪತ್ರಿಕೆ, ಗೋಡೆಯ ಚಿತ್ರಪಟ ಇತ್ಯಾದಿ ಜಾಹೀರಾತಿನ ಸಾಮಗ್ರಿಗಳನ್ನು ತರಿಸಿ ಹಳ್ಳಿಗಳಲ್ಲಿ ಪ್ರಸಾರ ಮಾಡಿದಲ್ಲಿ ಆರ್ಡರು ದೊರೆಯುವವು. ಈ ಆರ್ಡರ ಕೂಡ ೧/೪ ಹಣವನ್ನು ಇಸಕೊಂಡು ಕಂಪನಿಗೆ ಕಳಿಸಿದಲ್ಲಿ ಕಂಪನಿಯು ಆವರ ವರ ಹೆಸರಿನ ರಸೀದಿಯನ್ನು ಮಿಕ್ಕ ಹಣಕ್ಕೆ ವ್ಹಿ. ಪಿ. ಮಾಡಿ ದಲಾಲರಿಗೆ ಕಮಿಶನ ಕೊಡು ವದು.

ಕಮೀಶನ್ ದರಗಳ ಬಗ್ಗೆ ಇಂದೇ ಕಾಗದವನ್ನು ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ } ಕಿರ್ಲೋಸ್ಕರವಾಡಿ- ಜಿಲ್ಹಾ ಸಾತಾರಾ.

ಫಕ್ತ ೨ ಆಣೆಯೊಳಗೇ ಆಶ್ಚರ್ಯಕಾರಕ ವ ರಾಮಬಾಣ ಉಪಾಯ

ಮೊಮೆಂಟ ಕ್ಯುಅರ

ತಲೆಶೂಲಿ, ಅರ್ಧ ತಲೆಶೂಲಿ, ಶೀತ, ಉಷ್ಣ ವ ನಿತ್ರಾಣ ವಗೈರೆಗಳಿಂದಾದ ಮಸ್ತಕಶೂಲಿಯು ಕ್ಷಣಾರ್ಧದಿಂದ ನಿರ್ಮೂಲ ಮಾಡಲು "ಮೊಮೆಂಟ ಕ್ಯುಅರ" ನಿಗೆ ಸರಿಸಮಾನವಾದ ಔಷಧವು ಬೇರೆ ಇಲ್ಲ. ಕೆಲವು ಜನರು ಮಸ್ತಕಶೂಲೆಯನ್ನು ಸಹಿಸಲು ಆಗದೆ ಮಸ್ತಕಕ್ಕೆ ವಸ್ತ್ರಕಟ್ಟಿ ಎಣ್ಣೆ ವ ಔಷಧಗಳನ್ನು ತಾಗಿಸುತ್ತಾರೆ. ಆದರೆ ನಿರಾಶೆಯಾದವರು ಮೋಮೆಂಟ ಕ್ಯುಅರದ ಹುಡಿಯನ್ನು ಬಿಸಿ ಚಹಾದೊಂದಿಗೆ ಅಥವಾ ಬಿಸಿ ನೀರಿನೊಂದಿಗೆ ಹೊಟ್ಟೆಯಲ್ಲಿ ತಕ್ಕೊಂಡಲ್ಲಿ ಒಂದೇ ಕ್ಷಣದಲ್ಲಿ ಮಸ್ತಕಶೂಲಿಯು ನಿಲ್ಲುವುದು. ಇದಕ್ಕೆ ಅನೇಕ ಶಿಫಾರಸ ಪತ್ರಗಳು ಉಂಟು.

೧ ಚೀಟಿಗೆ ೨ ಆಣೆ. ಸ್ಯಾಂಪಲ ಸಲುವಾಗಿ ೩ ಆಣೆ ಪೋಸ್ಟ ತಿಕೀಟುಗಳನ್ನು ಕಳಿಸಿದಲ್ಲಿ ರವಾನಿಸುವೆವು.

ವಿಳಾಸ— ದಿ ಕನಕಾದಿತ್ಯ ಮೆಡಿಕಲ ಸ್ಟೋರ್ಸ, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ ಸ್ಟೇಶನರೋಡ ಮುಂಬಯಿ.

ಲೋಕಬಂಧು

ಮಾಸಪತ್ರಿಕೆ

ಸಂಪಾದಕರು- ಲಕ್ಷ್ಮಣ ರಾಮಚಂದ್ರ ಪರಚೆ

ಈ ಪತ್ರವು ಧಾರವಾಡದಲ್ಲಿ ಪ್ರತಿ ತಿಂಗಳ ಹೊರಡುತ್ತಿದ್ದು ಇದರಲ್ಲಿ ರಾಜಕೀಯ ಸಾಮಾಜಿಕ ಔದ್ಯೋಗಿಕ, ಕೃಷಿ ಮುಂತಾದ ವಿಷಯಗಳು ಚನ್ನಾಗಿ ಪ್ರತಿಪಾದಿಸಲ್ಪಡುವವಲ್ಲದೆ ಪ್ರತಿ ತಿಂಗಳ ಸಂಗತಿಗಳು ಸಹ ಧಾರವಾಹಿಯಾಗಿ ಬರೆಯಲ್ಪಡುವವು.

ವಾರ್ಷಿಕ ವರ್ಗಣಿ ಮುಂಗಡ ೧—೪—೦

ಮ್ಯಾನೇಜರ.
ಲೋಕಬಂಧು ಆಫೀಸ, ಧಾರವಾಡ

ಪ್ರಾಥಮಿಕ ಶಿಕ್ಷಕ

ಮಾಸಪತ್ರಿಕೆ.

ಸಂಪಾದಕರು- ಲಕ್ಷ್ಮಣ ರಾಮಚಂದ್ರ ಪರಚೆ.

ಉತ್ತರ ಕರ್ನಾಟಕದ ಪ್ರಾಥಮಿಕ ಶಿಕ್ಷಕರ ಹಿತ ಸಂಬಂಧವನ್ನು ಕುರಿತು ಅತ್ಯಂತ ಕಳಕಳಿಯಿಂದ ಪ್ರಯತ್ನ ನಡಿಸುತ್ತಿರುವ ಮಾಸಪತ್ರಿಕೆಯಿದು. ಶಿಕ್ಷಕರು ಇದನ್ನು ತರಿಸಿಕೊಳ್ಳಲು ಅಡ್ಡಿಯಿಲ್ಲೆಂದು ಕೌನ್ಸಿಲ್ಲದವರೂ, ಶಾಲಾಧಿಕಾರಿಗಳೂ ಒಪ್ಪಿರುವರು.

ವಾರ್ಷಿಕ ವರ್ಗಣಿ ಮುಂಗಡ ೨—೦—೦

ಮ್ಯಾನೇಜರ
ಪ್ರಾಥಮಿಕ ಶಿಕ್ಷಕ ಆಫೀಸ, ಧಾರವಾಡ

ಚಂದಾದಾರರಿಗೆ ಸೂಚನೆ.

೧೯೨೫ನೆಯ ಹೊಸ ವರ್ಷವಾರಂಭವಾಗಿದ್ದು, ನಡೆಯುವ ತಿಂಗಳದಬಗ್ಗೆ ನಿತ್ಯ ಮತ್ತು ವಾರ ಪತ್ರದ ಚಂದಾವಾರದ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸಲಿಕ್ಕೆ ಪ್ರಾರಂಭಿಸುವೆವು. ಚಂದಾದಾರರು ವ್ಹಿ. ಪಿ. ಯನ್ನು ಸ್ವೀಕರಿಸಿ, ವಿಜಯವನ್ನು ಈ ಹೊದಲಿನಂತೆ ಪ್ರೋತ್ಸಾಹಿಸುವರೆಂದು ಆಶಿಸುತ್ತೇವೆ.

ವ್ಯವಸ್ಥಾಪಕ ವಿಜಯ
ಧಾರವಾಡ.

ವಿಜಯ.

ಧಾರವಾಡ ತಾ- ೮-೩-೨೫ ನೇ ಇಸ್ವಿ

ಮುಂಬಯಿ ಗಿರಣಿಗಳ ದೈನ್ಯಾವಸ್ಥೆಯು.

— ೧ —

ಹಿಂದುಸ್ಥಾನದ ಗಿರಣಿಗಳಲ್ಲಿ ಹುಟ್ಟುವ ಬಟ್ಟೆಗಳಿಗಿಂತ ಜಪಾನದ ಗಿರಣಿಗಳಲ್ಲಿ ಹುಟ್ಟುವ ಬಟ್ಟೆಯು ಈ ದೇಶದಲ್ಲಿ ಅಗ್ಗವಾಗಿ ಮಾರುತ್ತದೆಂಬ ಸಂಗತಿಯನ್ನು ಈ ಮೊದಲು ವಿಜಯದಲ್ಲಿ ಬರೆದಿರುತ್ತೇವೆ. ಹಿಂದುಸ್ಥಾನ ಸರಕಾರದವರು ಗಿರಣಿಗಳಲ್ಲಿ ಹುಟ್ಟುವ ಬಟ್ಟೆಗಳ ಮೇಲೆ ನೂರಕ್ಕೆ ಮೂರೂವರೆ ರೂಪಾಯಿ ಸುಂಕ ಕೂಡ್ರಿಸಿದ್ದರಿಂದ, ಜಪಾನದ ಗಿರಣಿಯ ಬಟ್ಟೆಯು ಇಲ್ಲಿ ಅಗ್ಗವಾಗಿ ಮಾರಲು ಕಾರಣವಾಗಿರುತ್ತದೆ. ಈ ಸುಂಕವನ್ನು ತೆಗೆದು ಹಾಕಬೇಕೆಂದು ಕಳೆದ ೧೦-೧೫ ವರ್ಷಗಳಿಂದ ಒಂದೇ ಸವನೆ ಚಳವಳಿ ನಡೆದಿರುತ್ತದೆ. ಹಿಂದುಸ್ಥಾನದ ಸ್ಥಿತಿಯಾಗಲಿ; ಅನುಕೂಲ ಕಾಲ ಬರಲಿ; ಕೂಡಲೆ ಈ ಕರ ತೆಗೆದು ಹಾಕುವೆವೆಂದು ಲಾರ್ಡ ಹಾರ್ಡಿಂಜ ಸಾಹೇಬರು ಮಾತು ಕೊಟ್ಟಿದ್ದರು. ಇವರ ನಂತರ ಇಬ್ಬರು ಗವ್ಹರ್ನರ ಜನರಲರಾದರೂ, ಸುಂಕವು ಯಥಾಪ್ರಕಾರ ಉಳಿದಿದೆ. ಹೋದ ವರ್ಷ ಲೆಜಿಸಲೆಟಿವ್ಹ ಅಸೆಂಬ್ಲಿಯಲ್ಲಿ ಇದನ್ನು ತೆಗೆದು ಹಾಕಬೇಕೆಂಬ ಠರಾವು ಪಾಸಾಯಿತು. ಆ ಪ್ರಕಾರ ಸರಕಾರದವರು ಬಜೆಟ್ಟಿನಲ್ಲಿ ಇದನ್ನು ರದ್ದು ಮಾಡುವರೆಂದು ಪ್ರಜರು ಆಶೆ ಮಾಡಿದ್ದರು. ಕೋಶಾಧ್ಯಕ್ಷರಾದ ಸರ ಬ್ಲೆಕೆಟ ಸಾಹೇಬರು ಈ ಮಾತೇ ಎತ್ತಿರುವದಿಲ್ಲ. ಇದಲ್ಲದೆ, ಬೇರೆ ಇಲಾಖೆಗಳಿಗೆ ಕೋಟಿಯ ತನಕ ದ್ರವ್ಯ ಸಹಾಯ ಮಾಡಿದರೂ, ಮುಂಬಯಿ ಇಲಾಖೆಗೆ ಕಾಸು ಕೂಡ ಕೊಡುವ ಧೋರಣ ತೋರಿಸಲಿಲ್ಲ. ಈ ಕಾರಣವಾಗಿ ವರಿಷ್ಠ ಸರಕಾರದವರು ಬಾವರ ಮೇಲೆಕೊಂದರಂತೆ ಮುಂಬಯಿ ಇಲಾಖೆಗೆ ಎಂದು ಕಡತಗಳನ್ನು ಕೂಡಿಸಿದ್ದು ಇಡೀ ಇಲಾಖೆಗೇ ವ್ಯಥೆಯನ್ನುಂಟು ಮಾಡಿದೆ. ಜಪಾನ ಸರಕಾರವು ರಶಿಯಾದ ಕೂಡ ಒಪ್ಪಂದ ಮಾಡಿಕೊಂಡಿತು. ಜಪಾನಕ್ಕೆ ಸಿಂಗಾಪೂರದ ಭಯ ಹೋಗಿದೆ. ಕರ ತೆಗೆದು ಅದನ್ನು ಮತ್ತಿಷ್ಟು ಕೆಳಕ್ಕೆ ಹಾಕದೆ; ಯಾವ ಬಗೆಯಿಂದಾದರೂ ಅದನ್ನು ಸಮಾಧಾನ ಪಡಿಸಬೇಕೆಂದು ಇಂಗ್ಲಿಷ ಸರಕಾರದವರು ಈ ಕರವನ್ನು ರದ್ದು ಮಾಡಲಿಲ್ಲೆಂದು ಜನರು ಸ್ಪಷ್ಟವಾಗಿ ಆಡಲಾರಂಭಿಸಲು- ಇದು ನಿಜವಲ್ಲೆಂದು ಸರಕಾರದವರು ಉತ್ತರ ಕೊಟ್ಟಿದ್ದಾರೆ.

ಸರಕಾರದ ರಾಜತಂತ್ರ ಹೇಗೇ ಇರಲಿ; ಗಿರಣಿಗಳಿಗೆ ಅಧೋಗತಿಯು ಬಂದಿರುವದು ನಿಜ. ಈ ಸುಂಕದ ವಿಪತ್ತು ಮುಂಬಯಿ ಮತ್ತು ಅಹಮದಾಬಾದಿನ ಗಿರಣಿಗಳಿಗೆ ಮಾತ್ರ ಬಂದಿಲ್ಲ. ಹಿಂದುಸ್ಥಾನದಲ್ಲಿರುವ ಎಲ್ಲ ಗಿರಣಿಗಳ ಮೇಲೆ ಬಂದಿರುತ್ತದೆ. ಇದೊಂದು ರಾಷ್ಟ್ರೀಯ ಸಂಕಟವಾಗಿರುತ್ತದೆಂದು ಹೇಳಬಹುದು. ಮುಂಬಯಿಯ ಗಿರಣಿ ಮಾಲಕರು ಈ ಕರ ತೆಗೆದು ಹಾಕುವ ಬಗ್ಗೆ ತಮ್ಮ ದುಃಖ ತಾಪವನ್ನು ನಿವೇದಿಸಿಕೊಳ್ಳಬೇಕೆಂದು ಮುಂಬಯಿ ಗವ್ಹರ್ನರ ಸಾಹೇಬರ ಕಡೆಗೆ ಹೋಗಿದ್ದರು. ಸಾಹೇಬರು ಇವರಿಗೆ ಸಮಾಧಾನ ಹೇಳುವದಕ್ಕಾಗಿ ತಾವೂ ಕಣ್ಣೀರ ಹನಿಗಳನ್ನು ಉದುರಿಸಿದರು. ಆದರೆ ಉಪಯೋಗವೇನು? ಸಂಕಟವಾದಾಗ್ಯೂ ಗಳ್ಳಿಗೆ ಹಾಕಬೇಕೆಂದು ತರಾವು ಬರೆದ ಸಾಹೇಬರಿಗೆ ಅವನ ಪರಮ ಮಿತ್ರನಾದ ಸಾಹೇಬನು ಸಿಕ್ಕಿದ! ಇದೇ ತೆರವಾಗಿ ಮುಂಬಯಿ ಮತ್ತು ಹಿಂದುಸ್ಥಾನ ಸರಕಾರದ ಸಂಬಂಧವನ್ನು ಹೇಳಬಹುದು. ಇದನ್ನು ರದ್ದು ಮಾಡಬೇಕೆಂದು ಅಸೆಂಬ್ಲಿಯಲ್ಲಿ ಠರಾವು ಬರತಕ್ಕದ್ದಿದೆ. ಹೋದ ವರ್ಷದಂತೆ ಆ ಪ್ರಸಂಗ ಬಹುಮತದಿಂದ ಪಾಸಾಗುವದು. ಹಿಂದುಸ್ಥಾನ ಸರಕಾರದವರು ಪೂರ್ವದ ದುರಾಗ್ರಹದ ಮೇಲಿದ್ದರೆ ಮುಂಬಯಿ ಮಾಡುವದೇನೆಂಬ ಪ್ರಶ್ನವು ಸಹಜವಾಗಿ ಹೊರಡುತ್ತದೆ.

ಗಿರಣಿಗಳ ಸ್ಥಿತಿಯು ಶೋಚನೀಯವಾಗಿರುತ್ತದೆಂಬದು ಸರಕಾರಕ್ಕೂ ಗೊತ್ತುಂಟು. ಆದರೂ ಅದು ದುರಾಗ್ರಹಮಾಡಲು- ಅದು ಎಷ್ಟರ ಮಟ್ಟಿಗೆ ಮಾಜಾವಿ ಸರಕಾರವಿರುತ್ತದೆಂಬದು ರಾಷ್ಟ್ರೀಯ, ಸ್ವರಾಜ್ಯ, ಮವಾಳ, ಬ್ರಾಹ್ಮಣೇತರ, ಖಿಲಾಫತ ಮೊದಲಾದ ಎಲ್ಲ ಜನರಿಗೂ ಗೊತ್ತಾಗುವದು. ಇವರಿಗೆ ಈ ರೀತಿಯಾಗಿ ತಿಳಿಯುವ ಮುಂಚಿತವಾಗಿ ಸಾವಿರಾರು ಕೂಲಿಕಾರರು ಅನ್ನಾನುಗತಿಯಾಗುವರು. ಅದರ ಮೊದಲನೇ ಅನುಭವವು ಮುಂಬಯಿಯ ಪೆಟಿಟ ಮಿಲ್ಲಿನಲ್ಲಾಗಿರುತ್ತದೆ. ಅರಳಿಯ ಧಾರಣೆಯು ವಿಪರೀತದಿಂದ ಮತ್ತು ವ್ಯಾಪಾರವು ಮಂದವಾಗಿರುವದರಿಂದ, ೧ನೇ ಎಪ್ರಿಲದಿಂದ ಗಿರಣಿಯನ್ನು ಬಂದು ಮಾಡುವೆವೆಂದು ವ್ಯಾನೇಜರರು ನೋಟೀಸು ಹಚ್ಚಿದ್ದಾರೆ. ಇದರಲ್ಲಿ ಎರಡು ಸಾವಿರ ಜನರು ಕೆಲಸ ಮಾಡುತ್ತಿದ್ದಾರೆ. ಗಿರಣಿ ಬಂದಾದ ಕೂಡಲೆ, ಎರಡು ಸಾವಿರ ಜನರ ಹೊಟ್ಟೆಯ ಮೇಲೆ ಜಪಾನದ ಅಗ್ಗದ ವ್ಯಾಪಾರವು ಕಾಲು ಕೊಟ್ಟಂತಾಗುತ್ತದೆ. ಒಂದು ಗಿರಣಿಯು ಇನ್ನೊಂದು ಗಿರಣಿಯನ್ನು ಹಿಂಬಾಲಿಸಿದರೆ- ಒಂದೂವರೆ ಲಕ್ಷ ಜನರು ಅನ್ನಾನುಗತಿಯಾಗುವರು. ಇದರಂತೆ ಅಹಮದಾಬಾದ ಸೋಲಾಪೂರ ಮುಂತಾದ ಪಟ್ಟಣಗಳ ಗಿರಣಿಗಳ ಅವಸ್ಥೆಯಾಗಿ ಲಕ್ಷಾವಧಿ ಜನರು ಹೊಟ್ಟೆಯ ದೊಡ್ಡ ಚಿಂತೆಯಿಂದ ಬೇನೆ ಹೋಗುವರು. ಇದರ ಪ್ರತ್ಯಕ್ಷ ಅಪಕೀರ್ತಿಯು ಮಾಜಾವಿಸುವ ಸರಕಾರಕ್ಕೇ ಬರುವದು.

ಸ್ವರಾಜ್ಯಾಧಿಕಾರದ ಅಂತರಂಗ ಬಹಿರಂಗವಾಯಿತು.

— ೧ —

ಹಿಂದೀ ಜನರು ತಿಪ್ಪರಲಾಗ ಹೊಡೆದರೂ, ಅವರಿಗೆ ವಸಾಹಾತಿನಂಥ ಸ್ವರಾಜ್ಯ ದೊರೆಯಬೇಕಾದರೆ ನೂರಾರು ವರ್ಷಗಳು ಬೇಕೆಂದು ಹಿಂದುಸ್ಥಾನದ ಸರ್ವ ಸೇನಾಧಿಪತಿಯಾದ ಲಾರ್ಡ ರಾವಲಿನ್ಸನ ಸಾಹೇಬರ ಭಾಷಣದಿಂದ ಸ್ಪಷ್ಟವಾಗುತ್ತದೆ. ಕಳೆದ ಬಧವಾರ ನ್ಯಾಹಸಭೆಯ ತಾರೀಖಿನ ದಿವಸ ಇವರು ಸೈನ್ಯಖಾತೆಯ ವೆಚ್ಚದ ಸಂಬಂಧದಲ್ಲಿ ಮಾಡಿದ ಭಾಷಣದಲ್ಲಿ ಹಿಂದೀ ಜನರು ಕ್ಷಾತ್ರ ವಿದ್ಯಾಪ್ರವೀಣರಾಗಿ, ಸ್ವಸಂರಕ್ಷಣೆ ಮಾಡಿಕೊಳ್ಳಬೇಕಾದರೆ ಅನಂತಕಾಲ ಬೇಕೆಂಬ ಭಾವವನ್ನು ವ್ಯಕ್ತ ಪಡಿಸಿದರು. ಇವರು ಎಲ್ಲಕ್ಕೂ ಮೊದಲು ಹಿಂದೂ ಎಂಬುವರು ಒಂದು ಜನಾಂಗದವರೇ ಅಲ್ಲೆಂದು ಹೇಳಿ, ಮೂಲಕ್ಕೇ ಕೊಡಲಿಯ ಪೆಟ್ಟು ಹಾಕಿದರು. "ಹಿಂದೂ ಜನರು ಒಂದು ರಾಷ್ಟ್ರದವರಾಗದ್ದರಿಂದ, ಹಿಂದೂ ಸೈನ್ಯದ ದಳವಾಯಿಗಳು ಯುರೋಪಿಯನ್ನರೇ ಆಗಬೇಕು; ಈಗ ಎಂಟು ಕಂಪನಿಗಳ ಮೇಲೆ ಹಿಂದೂ ದಳವಾಯಿಗಳನ್ನು ನೇಮಿಸಿದೆ. ಯುದ್ಧ ಪ್ರಸಂಗ ಬಂದು, ಇವರು ತಮ್ಮ ಸೈನ್ಯದೊಡನೆ ಹೊಗಳುವಂಥ ಸಾಮರ್ಥ್ಯವು ತೋರಿಸಿದರೆ ಈ ಸಂಖ್ಯೆಯನ್ನು ಹೆಚ್ಚಿಸಲಾಗುವದು. ಹಿಂದೀ ಸೈನ್ಯ ಮತ್ತು ಹಿಂದೀ ಸೇನಾಪತಿಗಳೆಂದು ಸುಮ್ಮನೆ ಸಂಖ್ಯೆಯನ್ನು ಬೆಳೆಸುವದರಿಂದ ಫಲವಾಗಲಾರದು. ರಶಿಯದು ಕಾಬೂಲದಲ್ಲಿ ಕಾರಸ್ಥಾನ ನಡಿಸಿದ್ದಾರೆ. ಚೀನ ಮತ್ತು ರಶಿಯಾ ಒಪ್ಪಂದವಾಗುತ್ತಿರುವದು. ರಶಿಯಾದು ಮಧ್ಯ ಆಶಿಯಾದಲ್ಲಿ ಹೊಸ ಪದ್ಧತಿಯ ದ ತಂತ್ರಗಳನ್ನು ಹೂಡಿದ್ದಾರೆ. ಆದ್ದರಿಂದ ಈಗಿನ ಸೈನ್ಯ ಮತ್ತು ಸಿಸ್ತಿನಲ್ಲಿ ಕುಸುವಾದರು ಬದಲು ಮಾಡಲಿಕ್ಕಾಗುವದಿಲ್ಲ" ಎಂಬದಾಗಿ ಸಾಹೇಬರು ಹೇಳಿ, ಸ್ಯಾಂಡಹರ್ಸ್ಟದಂಥ ಕಾಲೇಜ ಸ್ಥಾಪನೆಯು ಶಕ್ಯವಲ್ಲೆಂದು ಉದ್ಗಾರ ತೆಗೆದರು. ಸಾಹೇಬರ ಈ ಭಾಷಣ ಕೇಳಿ ಬ್ಯಾರಿಸ್ಟರ ಜಿನ್ನಾ ಸಾಹೇಬರು ಬಹಳವಾಗಿ ಸಂತಾಪಗೊಂಡರು. ಹಿಂದುಸ್ಥಾನ ಸರಕಾರದ ಪ್ರತಿನಿಧಿಯಾಗಿ ಮಾಡಿದ ಈ ಭಾಷಣವನ್ನು ನಿಷೇಧಿಸಿ, ದಂಡಿನ ಖಾತೆಗೆ ಹಣದ ಮಂಜೂರಿ ಕೊಡುವ ಸಮಯ ಬಂದಾಗ ಸ್ವ

ಸ್ವಾತಂತ್ರ್ಯದ ಮೇಲೆ ಸಿಂದಾಬ್ಯಂಜಕ ಠರಾವು ತರು ವಾತ ಮುಂದಾಗಿ ಸೂಚಿಸಿದರು. ಇವರನಂತರ ಸಂಚಾಲದ ಶ್ರೀ. ಚಮುಲಾಲರು ಅಂದದ್ದೇನೆಂದರೆ— ಹಿಂದುಸ್ಥಾನದಲ್ಲಿ ಅನೇಕ ಜಾತಿಗಳು ಮತ್ತು ಅನೇಕ ಪಂಥಗಳು ಮತ್ತು ಅನೇಕ ಭಾಷೆಗಳಿರುತ್ತವೆಂದು ಹಿಂದುಸ್ಥಾನವು ಒಂದು ರಾಷ್ಟ್ರವಲ್ಲೆನ್ನುವರು. ಜರ್ಮನಿಯಲ್ಲಿ ನೋಡಿರಿ. ಹಿಂದುಸ್ಥಾನದಂತೆ ಅಲ್ಲಿಯ ಸ್ಥಿತಿಯೂ ಇದ್ದು ಜರ್ಮನ ಸ್ವಸ್ವ ನೆನ್ನುವದು ಇರುತ್ತದೆ. ಹಿಂದುಸ್ಥಾನದಲ್ಲಿರುವ ಬ್ರಿಟಿಶ ಸೈನ್ಯವು ಒಳದೇಶದ ಸುರಕ್ಷಿತೆಗಾಗಲಿ, ಪರ [illegible] ತಪ್ಪಿಸುವದಕ್ಕಾಗಲಿ ಇರದೆ [illegible] ಬ್ರಿಟಿಶ ಪ್ರಭುತ್ವದ [illegible] ಹಿಂದುಸ್ಥಾನ [illegible] ರಕ್ಷ ಒದಗಿಸುತ್ತಾರೆ." ಇವರ ನಂತರ ಶ್ರೀ. [illegible] ಭಾಷಣ ಮಾಡಿದರು. "[illegible] ಗಣ್ಯಗ [illegible] ಆದದ್ದಾಗಿ ದೇಶದ [illegible] ನಾಯಕನು. ಮತ್ತು [illegible] ಮಾಡುವೆನು." ನಂತ [illegible] ರಂಗಾಚಾರ್ಯ [illegible] ಸೇನಾಧಿಪತಿಗಳ ಭಾಷಣದ ಮೇಲೆ ಟೀಕೆ ಮಾಡಿದರು. [illegible] ಅಗತ್ಯವಾಗಿ ಸವಿಸ್ತರ ಬರೆಯುವೆವು.

ಅಗಸಾಲಿಗನೇ ಕಿವೀ ಹಚ್ಚಿದನು.

—o—

ಮದ್ರಾಸ ಇಲಾಖೆಗೆ ಸೇರಿದ ನೆಲ್ಲೂರ [illegible] ಟ್ಟಣದ ಒಂದು ಗುಡ್ಡದ ಕೆಳಗೆ ಕ್ರಿಶ್ಚನರ ಗುಡಿಯುಂಟು. ಈ ಗುಡಿಯ ಹತ್ತಿರ ಹಿಂದು ಜನರ ತಮ್ಮ ದೇವಾಲಯ ಕಟ್ಟಬೇಕೆಂದಿದ್ದರೆ ಹಿಂದೂ ಜನರು ದೇವಾಲಯದಲ್ಲಿ ಮಾಡುವ ಭಜನೆ, ಪೂಜೆಯ ವೇಳೆಯಲ್ಲಿ ಬಾರಿಸುವ ವಾದ್ಯದಿಂದ ತಮ್ಮ ಪ್ರಾರ್ಥನೆಗೂ, ರಾತ್ರಿಯಲ್ಲಿ ನಿದ್ರೆಗೂ ತೊಂದರೆಯಾಗುವ ಕಾರಣ, ಹಿಂದೂ ಜನರಿಗೆ ಗುಡೀ ಕಟ್ಟಗೊಡಬಾರದೆಂದು ಕ್ರಿಶ್ಚನರು ಕಲೆಕ್ಟರ ಕಡೆಗೆ ಅರ್ಜಿ ಮಾಡಿದರು. ಸಾಹೇಬರು ಈ ಅರ್ಜಿಗೆ ಕೊಟ್ಟ ಉತ್ತರವು ಅಗಸಾಲಿಗನು ಕಿವೀ ಹಚ್ಚಿದಂತಾಗಿರುತ್ತದೆ. ಹಿಂದೂ ಜನರಿಂದ ನಿಮಗೆ ತ್ರಾಸವಾದರೆ ಆದಿತ್ಯವಾರ ಮತ್ತು ಹಬ್ಬದ ದಿವಸ ನಿಮ್ಮ ಗಂಟೆಯಿಂದ ಹಿಂದೂ ಜನರಿಗೆ ತ್ರಾಸವಾಗುತ್ತದೆಂದು ನೀವೇಕೆ ತಿಳಿಯಬಾರದು? ದೇಶದಲ್ಲಿ ಹಿಂದೂ ಮುಸಲ್ಮಾನ ಜಗಳವೇ ಸಾಕಾಗಿದೆ. ಕ್ರಿಶ್ಚನ ಜಗಳವನ್ನು ನಾನು ಎಬ್ಬಿಸಲಿಚ್ಛಿಸುವದಿಲ್ಲೆಂದು ಸಾಹೇಬರು ಹಿಂದೂ ಜನರಿಗೆ ಗುಡೀ ಕಟ್ಟಿಕೊಳ್ಳಲು ಅಪ್ಪಣೆ ಕೊಟ್ಟರು.

ಜರ್ಮನಿಯು ಯಾರ ಕಡೆಗೆ?

—o—

ರಶಿಯಾದ ದುರ್ದೈವಿ ಝಾರರ ರತ್ನ ಮೌಕ್ತಿಕಗಳ ಆಭರಣಗಳನ್ನು ಬೊಲ್ಶೆವಿಕ ಸರಕಾರದವರು ಫ್ರಾನ್ಸದ ಒಂದು ಕಂಪನಿಗೆ ಮಾರಿದರು. ಇದರಿಂದ ಖರ್ಚಕ್ಕಿಂತ ಹೆಚ್ಚು ಬೆಲೆ ಬಂತು. ಬೊಲ್ಶೆವಿಕರು ಈ ದ್ರವ್ಯವನ್ನು ಕೈಗಾರಿಕೆಯ ಅಭಿವೃದ್ಧಿಗಾಗಿ ಉಪಯೋಗಿಸುವರು.

ಲಗೇಜ ಮತ್ತು ಪಾರ್ಸಲುಗಳ ಕಳವಿನ ಬೊಬ್ಬಾಟ.

—o—

ಸೌಥ ಇಂಡಿಯನ್ನ ರೇಲ್ವೆಯಲ್ಲಿ ಲಗೇಜ ಮತ್ತು ಪಾರ್ಸಲುಗಳ ಕಳವು ಬಹಳವಾಗುತ್ತದೆಂದು ಲೆಜಿಸ್ಲೇಟಿವ್ಹ ಅಸೆಂಬ್ಲಿಯಲ್ಲಿ ಕೂಡ ಬೊಬ್ಬಾಟವಾಯಿತು. ಪಾರ್ಸಲ ಅಥವಾ ಲಗೇಜ ಕಳೆದ ಸುದ್ದಿ ಬಂದ ಕೂಡಲೆ, ಆಯಾ ಸ್ಟೇಶನದ ಜನರನ್ನೂ ಗಾರ್ಡರನ್ನೂ ಆಸಿಬುಸಿ ನೋಡದೆ ಬರಖಾಸ್ತ ಮಾಡುವೆನೆಂದು ಕಂಪನಿಯವರು ಸರಕ್ಯೂಲರ ತೆಗೆದಿದ್ದಾರೆ.

———

ಗಿರಣಿಯ ಮೇಲಿನ ಸುಂಕ ತಪ್ಪಲಿಲ್ಲ.

—o—

ಜಪಾನದ ಕೂಡ ಸ್ಪರ್ಧೆ ಮಾಡುವದಾದರೆ- ದೇಶೀ ಗಿರಣಿಗಳ ಮೇಲಿನ ಸುಂಕವನ್ನು ತೆಗೆದು ಹಾಕಬೇಕೆಂದು ಅಸೆಂಬ್ಲಿಯಲ್ಲಿ ಠರಾವು ಬಂತು. ಸರಕಾರಕ್ಕೆ ವಿಚಾರ ಮಾಡಲು ಅವಕಾಶ ದೊರೆಯಬೇಕೆಂದು ವಿಚಾರಣೆಯು ತಹಕೂಬ ಮಾಡಲ್ಪಟ್ಟಿತು. ಸರ ಬ್ಲೆಕೆಟ ಸಾಹೇಬರು ಸುಂಕ ತೆಗೆದು ಹಾಕಲಿಕ್ಕಾಗುವದಿಲ್ಲೆಂದು ಹೇಳಿ, ಒಂದು ದೊಡ್ಡ ವ್ಯಾಖ್ಯಾನ ಹೇಳಿದ್ದಾರೆ.

———

ಖುರ್ದರ ಸೇನಾ ಸಾಮರ್ಥ್ಯ.

—o—

ತುರುಕರ ವಿರುದ್ಧ ಬಂಡಾಯವೆಬ್ಬಿಸಿದ ಖುರ್ದರ ಜನ ಸಂಖ್ಯೆಯು ೨೫ ಲಕ್ಷವುಂಟು. ಇನ್ನು ೨೫ ಲಕ್ಷ ಜನ ಸಂಖ್ಯೆಯುಳ್ಳ ಕಾಡು ಜನರು ಇವರಿಗೆ ಸಹಾಯಕರಾಗಿದ್ದಾರೆ. ಆದ್ದರಿಂದ ಇದೊಂದು ರಾಜ್ಯಕ್ರಾಂತಿಯಂಥ ಬಂಡಾಯವಾಗಿದೆ. ಡಾಯಾರ-ಬೇಕರ ಪಟ್ಟಣದಲ್ಲಿ ದೊಡ್ಡ ಕಾಳಗವಾಗಿ ಖುರ್ದರು ಒಹುವಾಗಿ ನಾಶ ಹೊಂದಿದರು.

———

ಜರ್ಮನಿಯ ಉದ್ಯೋಗ ಶೀಲತೆ.

—o—

ಜರ್ಮನರು ಯುದ್ಧ ಮುಗಿದ ಕೂಡಲೆ, ವ್ಯಾಪಾರದ ಅಭಿವೃದ್ಧಿಯಲ್ಲಿ ಮನಸು ಹಾಕಿದರು. ಇವರು ಕರ್ತವ್ಯ ದಕ್ಷತೆಯಿಂದ ಉದ್ಯೋಗದಲ್ಲಿ ಜಗತ್ತಿನಲ್ಲಿ ಉತ್ತಮ ಸ್ಥಿತಿ ಹೊಂದಿದವರಾಗಿದ್ದು ಇವರ ಕೆಲಸ ಮಾಡುವ ಸಾಮರ್ಥ್ಯವೂ, ಪರಸ್ಪರ ಸಹಕಾರವೂ ಅಸಾಧಾರಣವಾಗಿರುತ್ತವೆಂದು ಪಾರ್ಲಮೆಂಟ ಸಭೆಯ ಮೆಂಬರರಾದ ಸರ ಫಿಲಿಪ ಡಾಸನ ಸಾಹೇಬರು ಪ್ರಶಂಸೆ ಮಾಡಿದ್ದಾರೆ.

———

ಸನ್ನ-ಯುತ- ಸೇನರ ಮೃತ್ಯು.

—o—

ಚೀನದ ನರಪುಂಗವರಾದ ಸನ್ನ- ಯುತ ಸೇನರು ಈ ಸಾರೆ ನಿಜವಾಗಿ ದಿವಂಗತರಾದರೆಂದು ತಾರಿನ ವರ್ತಮಾನ ಬಂದಿದೆ. ಇವರು ಸ್ವದೇಶೋದ್ಧಾರಕ್ಕಾಗಿ ಲೋಕಮಾನ್ಯ ಟಿಳಕ ಅಥವಾ ಝಗಲುಲ ಪಾಶಾ ಇವರಂತೆ ಕಷ್ಟಬಟ್ಟವರಾಗಿದ್ದಾರೆ.

———

ಆಶಿಯಾಖಂಡದವರೆಲ್ಲರು ಒಂದು!!

—o—

ವಿಲಾಯತಿಯಲ್ಲಿ ಸ್ಥಾಪಿಸಲ್ಪಟ್ಟ ರಾಷ್ಟ್ರಸಂಘವು ಯುರೋಪಿಯನರ ಹಿತಕ್ಕಾಗಿಯೇ ಇರುವದು ದೇಶಬಂಧು ದಾಸರು ಆಶಿಯಾಖಂಡದವರೆಲ್ಲರು ಒಂದೆಂಬ ಭಾವನೆಯನ್ನು ಹುಟ್ಟಿಸಬೇಕೆಂದಿದ್ದಾರೆ. ಈ ವಿಚಾರಕ್ಕನುಸರಿಸಿ, ಒಂದು ರಾಷ್ಟ್ರಸಂಘವಿರಬೇಕೆಂದು ಶ್ರೀ. ಶ್ರೀನಿವಾಸ ಅಯ್ಯಂಗಾರ ಸಟಲೂರವರು ಅಭಿಪ್ರಾಯಪಟ್ಟು ಒಂದು ಲೇಖವನ್ನು ಪ್ರಸಿದ್ಧ ಮಾಡಿದ್ದಾರೆ.

———

ಖಿಲಾಫತದ ವಿರುದ್ಧ ಚಳವಳಿಯು.

—o—

ಕಾಲೀಕತ್ತ ಪಟ್ಟಣದಲ್ಲಿ ಮೌಲಾನಾ ಮಹಮದಲ್ಲಿಖಾನರ ಅಧ್ಯಕ್ಷತೆಯಲ್ಲಿ ಖಿಲಾಫತ ಪರಿಷತ್ತನ್ನು ಕೂಡಿಸುವ ಏರ್ಪಾಡು ನಡೆದಿದೆ. ಈ ಸಭೆಯು ಕೂಡಿದರೆ- ಮಲಬಾರದಲ್ಲಿ ಪುನಃ ಮಾಪಿಳ್ಳೆ ಜನರ ಬಂಡಾಯವೇಳಬಹುದಾದ ಕಾರಣ ಇದನ್ನು ನೆರಯಗೊಡಬಾರದೆಂದು ಹಿಂದೂ ಮುಸಲಮಾನರು ಸೇರಿ ಸರಕಾರಕ್ಕೆ ಅರ್ಜಿಯನ್ನು ಮಾಡತಕ್ಕವರಿದ್ದಾರೆ ಇದು ಸಹಕಾರಿಗಳ ಚಳವಳಿಯಾಗಿರಬಹುದು.

———

ಲೋಕಮಾನ್ಯರ ಪುಟ್ಟ ಸ್ಮಾರಕ

—o—

ಪುಣೆಯ ಫರಗ್ಯೂಸನ ಕಾಲೇಜದಲ್ಲಿ ಲೋಕಮಾನ್ಯ ಟಿಳಕರ ಒಂದು ಪುಟ್ಟ ಪ್ರತಿಮೆ ಇಡಬೇಕೆಂಬ ಠರಾವಾಗಿ ಅದರ ಪ್ರತಿಷ್ಠಾಪನೆ ಮಾಡುವ ಸಮಾರಂಭವು ದಿವಾನ ಬಹಾದ್ದೂರ ಗೋಡಬೋಲೆಯವರಿಂದ ನೆರವೇರಿಸಲ್ಪಟ್ಟಿತು. ಲೋಕಮಾನ್ಯರು ಮೊದಲು ಶಿಕ್ಷಕರು, ಅನಂತರ ಇತಿಹಾಸ ಸಂಶೋಧಕರು, ಬಳಿಕ ಸರಕಾರದ ಮೇಲೆ ನಿರ್ಭಯದಿಂದ ಟೀಕೆ ಮಾಡುವಂಥ ಮಹಾನುಭಾವರಾಗಿದ್ದರೆಂದು ಇವರು ತಮ್ಮ ಭಾಷಣದಲ್ಲಿ ನುಡಿದರು.

ತಮ್ಮ ತಾಲೂಕಿನ ಹದ್ದಿನಲ್ಲಿ ಶೆಂದೀಗಿಡಕ್ಕೆ ಕಚ್ಚು ಹಾಕಬಾರದು ಮತ್ತು ಕರೆಯ ಅಂಗಡಿಗಳನ್ನು ಹಚ್ಚಬಾರದೆಂದು ತೆನ್ನಾಲಿಯ ತಾಲೂಕ ಲೋಕಲಬೋರ್ಡಿನವರು ಠರಾವು ಮಾಡಿದ್ದಾರೆ.

ನಾಗಪೂರದ ಸ್ವರಾಜ್ಯ ಪಕ್ಷದಲ್ಲಿ ಒಡಕು.

—o—

ದಿವಾನಗಿರಿಯ ಅಭಿಲಾಷೆ.

—o—

ನಾಗಪೂರದ ಸ್ವರಾಜ್ಯ ಪಕ್ಷೀಯರಲ್ಲಿ ಮರಾಠದ ಮೆಂಬರರು ದಿವಾನಗಿರಿಯು ಅಂಗೀಕಾರ ಮಾಡಬೇಕೆಂಬ ಮತದವರಾದರು. ಪಾಟಣಾದಲ್ಲಿ ಪಂಡಿತ ಮೋತೀಲಾಲರೂ, ದೇಶಬಂಧು ದಾಸರೂ ಈ ವಿಷಯವಾಗಿ ವಿಚಾರ ಮಾಡುತ್ತಿರುವಾಗ ನಾಗಪೂರದ ಹಿಂದುಸ್ಥಾನೀ ಭಾಗದವರೂ, ವಠ್ಹಾಡದವರೂ ಸೇರಿ, ಮಂತ್ರಿಗಳಾಗುವ ಅಭಿಲಾಷೆಯನ್ನು ವ್ಯಕ್ತಪಡಿಸಿದ್ದಾರೆ. ಹಿಂದುಸ್ಥಾನಿ ಭಾಗದ ಪತಿಯಿಂದ ಶ್ರೀ. ರಾಘವೇಂದ್ರರಾಯರು ದಿವಾನರಾಗುವದು ಮಹಾರಾಷ್ಟ್ರ ಭಾಗದವರು ಮೊದಲಿನಂತೆ ವಿರುದ್ಧ ಇದ್ದಾರೆ.

———

ವಿವಿಧ ಪ್ರ[illegible]ಧಾನಗಳು

—o—

ಮದ್ರಾಸ ಪಟ್ಟಣದಲ್ಲಿ ಬ್ರಾಹ್ಮಣ ಬ್ರಾಹ್ಮಣೇತರವಾದ ತೀರಿರುವದಕ್ಕಾಗಿ [illegible]ರ ವರದರಾಜರ ಸೂಚನೆಯ ಮೇರೆಗೆ ಕೂಡಬೇಕಾಗಿದ್ದ ರಾವುಂಡ ಟೇಬಲದ ವಿಚಾರವು ಸದ್ಯದಲ್ಲಿ [illegible] ಮಾಡಲ್ಪಟ್ಟಿತು.

———

ಕಾಂಗ್ರೆಸದ ಹೊಸ ನಿಯಮ ಪ್ರಕಾರ ತಿಂಗಳಿಗೆ ಎರಡು ಸಾವಿರ ಯಾರ್ಡ ನೂಲನ್ನು ಕೊಡಬೇಕೆಂಬ ಕರಾರ ಪ್ರಕಾರ ಎಸ್. ಶ್ರೀನಿವಾಸ ಅಯ್ಯಂಗಾರ, ಆಲ ಇಂಡಿಯಾ ಕಾಂಗ್ರೆಸ ಕಮಿಟಿಯ ಮೆಂಬರರಾದ ಎ. ಬಿಳಗಾವಕರ ಇಂಥವರೇ ನೂಲು ಕೊಟ್ಟಿಲ್ಲ. ಕರ್ನಾಟಕದ ಪಾಡು ಇದಕ್ಕೂ ಶೋಚನೀಯವಾಗಿರುತ್ತದೆ.

———

ಲೆಜಿಸಲೆಟಿವ್ಹ ಅಸೆಂಬ್ಲಿಯಲ್ಲಿ ಸ್ವರಾಜ್ಯ, ರಾಷ್ಟ್ರೀಯ ಉದಾರ ಎಂಬ ಪಕ್ಷಗಳಿರುತ್ತವಷ್ಟೇ; ಮುಸಲಮಾನರೂ ತಮ್ಮದೊಂದು ಸ್ವತಂತ್ರ ಬಣಕಟ್ಟಿ ಚೇರಮನ, ಸೇಕ್ರೆಟರಿ ಮೊದಲಾದ ನೇಮಣೂಕುಗಳನ್ನು ಮಾಡಿಕೊಂಡಿದ್ದಾರೆ.

———

ಮಹಾತ್ಮರು ಮುಂಬಯಿ ಮಾರ್ಗವಾಗಿ ಮದ್ರಾಸಕ್ಕೆ ಹೋಗುವಾಗ, ಗುಂತಕಲ್ಲನಲ್ಲಿ ವಿಲಾಯತಿಯ ಬಟ್ಟೆಗಳನ್ನು ಧರಿಸಿದ ಒಬ್ಬನು ಕೆಲವು ಪದ್ಯಗಳನ್ನು ಅನ್ನಲಿಟ್ಟಿಸಿದನು. ವಿಲಾಯತಿಯ ಬಟ್ಟೆ ಸುಡು, ಖಾದೀ ಧರಿಸು, ಅನಂತರ ಗೀತ ಹೇಳೆಂದು ಮಹಾತ್ಮರು ಈತನಿಗೆ ಉಪದೇಶ ಮಾಡಿದರು.

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ.

ಮಂಗಳವಾರ ಪೇಟೆ, ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ [illegible] ಸ್ಥಾನ

ಚಿಂದಿಗೆಯು ಆರುಲಕ್ಷದ ಮೇಲುಂಟು. ಚೆಕ್ಕು, ಹುಂಡಿ ಮೊದಲಾದ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ಮಾಡಲ್ಪಡುವದು. ಕಾಯಂ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಿರಿ.

ಮ್ಯಾನೇಜಿಂಗ ಬಿ. ಜಕಾತಿ,

ಮ್ಯಾನೇಜಿಂಗ ಡಾಯರೆಕ್ಟರ

ಆರ್. ಎಮ್. ಜ್ಯಾನ್ ಎಂಡ ಸನ್ಸ್ ಹುಬ್ಬಳ್ಳಿ.

ಏಜಂಟ್ಸ ಫೋರ ಕಾರಬೋನಿಕ್ ಅಸಿಡ್ಡ ಗ್ಯಾಸ, ಮ್ಯಾನುಫ್ಯಾಕ್ಚರರ್ ಆಫ್ ಎರೆಟಿಡ ವಾಟರ್ಸ.

ತಾವು ಆರ್ಡರ ಬೇಗ ಕಳಿಸಿರಿ.

ನಮ್ಮಲ್ಲಿ ಸಿಗುವ ಸಾಮಾನುಗಳ ವಿವರ.

ಫುಲ್‌ಗ್ಯಾಸ ಸಿಲೆಂಡರಗಳು ಇಂಗ್ಲೀಷ ಮತ್ತು ಜರ್ಮನಿ ಪೇಟೆಂಟ ಕಾರ್ಡ್ಸ, ಎಮ. ಟಿ. ಸೋಡಾ ವಾಟರ ಬಾಟಲಗಳು, ೫೫೦ ನಂ. ಸಾಬಣ



ರೀನ ಡೆಪ್ಪಿ ೧ ಪೌಂಡನಷ್ಟು. ಸೋಡಾವಾಟರ್ ಮಶಿನುಗಳು ಮತ್ತು ಎಲ್ಲಾ ತರದ ಕಲರಿನ ಬಾಟಲಿಗಳ ಎಸನ್ಸಗಳು, ಅಮೇರಿಕನ್ ಆಯಿಸ್ಕ್ರೀಮ ಸೋಡಾ, ಬನಾನಾ, ಕೋಕಾಪೇಂಪೇಬನ, ಲೆಮನ್ ನಂ. ೧ ಲೆಮನ್ ಜುಯಿಸ್ ಸೋಡಾ ನಂ. ೧ ಮೇಂಗೊ, ಆರೇಂಜ, ಫಾಯಿನಾಪಲ್, ಪಿಕ್ಕಮಿಅಪ್, ಕ್ವಿನಿನ್ ಟಾನಿಕ್, ರಾಜಬರಿ ನಂ. ೧ ರೋಜ ನಂ. ೧ ಸ್ಟೋನ್ ಜಿಂಜರ್ ಬೀರ ನಂ. ೧, ರಬ್ಬರ್ ರಿಂಗ್ಸ್, ಬೇರೆ ಇತರ ಮಶಿನರಿ ಪಾರ್ಟಗಳು ನಮ್ಮಲ್ಲಿ ಸಿಗುತ್ತವೆ. ಮತ್ತು ಶುದ್ಧ ನೀಲಗಿರಿ ಎಣ್ಣೆಯ ಎಲ್ಲ ತರದ ಬಾಟಲ್ಸಗಳು ಸಿಗುತ್ತವೆ. ವ್ಯಾಪಾರಸ್ಥರಿಗೆ ಒಳ್ಳೇ ಕಮೀಶನ್ ಕೊಡುತ್ತೇವೆ. ನಮ್ಮಲ್ಲಿ ಕಬ್ಬಿಣದ ಮಿಲಿಟ್ರಿ ಸಿಂಗಲ ಕಾಟ್ಸಗಳು ಸೋವಿ ದರದಿಂದ ಮಾರಲಿಕ್ಕೆ ಸಿಗುತ್ತವೆ.

ಅಡ್ರೆಸ್— R. M. John &Sons.

Mission Compound HUBLI

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ,

ಮ್ಯಾನೇಜಿಂಗ ಡಾಯರೆಕ್ಟರ.

ನೋಟೀಸು

ಬಸವಣ್ಣಾ ಬಿನ್ನ ನಾಗಪ್ಪಾ ಲಕ್ಷ್ಮೇಶ್ವರ ಸಾಕೀನ ರಾಣೇಬೆನ್ನೂರ ಈತನಿಗೆ—

ಕೆಳಗೆ ಸಹಿ ಮಾಡಿದ ರುದ್ರಪ್ಪಾ ತಂದಿ ನಾಗಪ್ಪಾ ಲಕ್ಷ್ಮೇಶ್ವರ ಸಾಕೀನ ರಾಣೇಬೆನ್ನೂರ ಈತನು ಈ ನೋಟೀಸಿನ ಮೂಲಕ ಪ್ರಸಿದ್ಧರೀತಿಯಿಂದಾ ತಿಳಿಸುವದೇನಂದ್ರೆ—

ನೀನು ನನ್ನ ಖಾಸ ತಮ್ಮನಾಗಿರುತ್ತೀದಿ ನಿನ್ನ ತಮ್ಮಾ ಇನ್ನೊಬ್ಬ ಚನ್ನಪ್ಪಾ ಯಂಬುವವ ಇದ್ದಾನೆ ಈ ಪ್ರಕಾರ ನಾವು ಮೂರು ಮಂದಿ ಅಣ್ಣತಮ್ಮಂದಿರು ಒಂದೇ ಮನಿತನದಲ್ಲಿ ಕೂಡಿ ಇರುತ್ತೇವೆ ನಾನು ಹಿರಿಯವನಿದ್ದು ಮನಿತನದ ಮ್ಯಾನೆಜರನಾಗಿ ಕುಟುಂಬ ರಕ್ಷಣೆ ಮಾಡುತ್ತೇನೆ.

ನಿನ್ನ ಲಗ್ನ ಆಗಿದ್ದು ಎರಡು ಹೆಣ್ಣು ಮಕ್ಕಳು ಜಡದಿದ್ದು ನಿನ್ನ ಹೆಂಡತಿ ಪುನಃ ಗರ್ಭಿಣಿ ಇದ್ದು ಪೂರ್ಣ ಜನನಕಾಲವಿರುತ್ತದೆ.

ನೀನು ಮನೆತನದ ಯಾವದೂ ಕೆಲ್ಸ ಮಾಡದೇ ವ್ಯರ್ಥಾಳನಾಗಿ ಜುಗಾರ ಜನರಲ್ಲಿ ಸೇರಿಕೊಂಡು ಮನೆಯಲ್ಲಿ ಕೈಗೆ ಸಿಕ್ಕದ್ದು ಸಂಗಾ ಹುಡುಗರ ದಾಗಿನೆಸಹಿತ ತೆಗೆದುಕೊಂಡು ಹೋಗಿ ಹಾಳಮಾಡುತ್ತಿ ಬಿ ನಿನ್ನ ಹೆಂಡತಿಯು ಗಂಡು ಹಡದರೆ ನಿನ್ನ ಹಿಸ್ಸೇದ ಆಸ್ತಿಗೆ ಮಾಲಕನಾಗುತ್ತಾನೆ.

ಈಗ ನಿನಗೆ ಮನಿಯಲ್ಲಿ ಏನೂ ಸಿಗದಂತೆ ಆದ್ದರಿಂದ ಮನಿತನದ ಸ್ಥಾವರ ಆಸ್ತಿ ಪತ್ರಿ ವಗೈರೆ ಒತ್ತಿಕೊಟ್ಟು ವಿಕ್ರಿಯಾಟ ಮಾಡತಕ್ಕವನಿರುತ್ತೀದಿ ಅಂಥಾ ಕೇಳಿದ್ದೇನೆ ನೀನು ಮಾಡತಕ್ಕ ಸಾಲಾ ಮನೆತನದ ಹಿತಕ್ಕಾಗಿ ಆಗುವದಿಲ್ಲಾ ನಿನ್ನ ದುರ್ವ್ಯಸನದ ಬಗ್ಗೆ ನಲುವಾಗಿ ಮಾಡುವ ಸಾಲಕ್ಕೆ ನಾವು ಅಥವಾ ನಮ್ಮ ಮನೆತನದ ಆಸ್ತಿ ಜವಾಬದಾರ ಇರೋದಿಲ್ಲಾ. ಕದಾಚಿತ ನೀನು ಸಾಲ ಮಾಡಿದರೆ ಸಾಲಕೊಟ್ಟವರು ಲುಕ್ಸಾನಕ್ಕೆ ಪಾತ್ರರಾಗುವರು. ಕಾರಣಾ ಮನೆತನದ ಆಸ್ತಿ ಮೇಲೆ ಯಾವ ವಿಧದಿಂದಲೂ ನೀನು ಸಾಲ ತೆಗೆಯಬಾರದು ತಿಳಿಯುವದು—

ಇದೇ ನೋಟೀಸಿನಿಂದ ಯಾವತ್ತು ಜನರಿಗೆ ತಿಳಿಸುವದೇನಂದ್ರೆ— ಮೇಲೆ ಬರೆದಂತೆ ನನ್ನ ತಮ್ಮಾ ಬಸಪ್ಪಾ ಈತನು ವ್ಯರ್ಥಾಳನಿದ್ದು ಜುಗಾರ ಆಡಕ್ಕಾ ಜನರಲ್ಲಿ ಸೇರಿದವನಿರುತ್ತಾನೆ. ಅವನಿಗೆ ನಮ್ಮ ಮನೆತನದ ಆಸ್ತಿಯ ಆಧಾರದ ಮೇಲಿಂದಾಗಲೀ ಅಥವಾ ಖಾಸಗಿ ಮೇಲಿಂದಾಗಲೀ ಯಾರೂ ಸಾಲಾ ಅಥವಾ ಕೈಗಡಾದಿಂದ ಹಣಾ ಕೊಡಬಾರದು ಕದಾಚಿತ ಯಾರಾದರೂ ಕೊಟ್ಟರೆ ಆ ಹಣಕ್ಕೆ ನಾವು ಅಥವಾ ನಮ್ಮ ಮನಿತನದ ಆಸ್ತಿ ಸಹಾ ಜವಾಬದಾರ ಇರೋದಿಲ್ಲಾ ಅವನು ಮಾಡಿದ ಸಾಲಾ ಮನೆತನದ ಹಿತಕ್ಕೆ ಇರುವದಿಲ್ಲಾ ಕದಾಚಿತ ಯಾರಾದರೂ ಅವನ ಹಿಸ್ಸೇದ ಆಸ್ತಿ ಅಪಹಾರ ಮಾಡಬೇಕೆಂಬ ದುರ್ಬುದ್ಧಿಯಿಂದಾ ಪತ್ರಿ ವಗೈರೆ ಬರಸಿಕೊಂಡರೆ ಲುಕ್ಸಾನಕ್ಕೆ ಪಾತ್ರರಾದೀರಿ ಅವನ ಹಿಸ್ಸೇದ ಆಸ್ತಿಮೇಲೆ ಅವನ ಹೆಂಡತಿ ಎರಡು ಹೆಣ್ಣು ಹುಡಿಗೆಯರು ಇವರ ರಕ್ಷಣೆ ವ ಹೆಣ್ಣು ಹುಡುಗಿಯರ ಲಗ್ನದ ಖರ್ಚಿನ ಬೋಜಾ ಸಹಾ ಇರುತ್ತದೆ ಅವನ ಹಿಸ್ಸೇದ ಆಸ್ತಿಗೆ ಗಂಡು ಮಗನು ಪೂರ್ಣ ಮಾಲಕನಾಗುತ್ತಾನೆ. ಅದ್ದರಿಂದಾ ನನ್ನ ತಮ್ಮಾ ಬಸಪ್ಪಾ ಈತನಿಗೆ ಸಾಲ ವಗೈರೆ ಯೇನೂ ಕೊಡಬಾರದು.

ತಾರೀಖು ೧೩-೩-೧೯೨೫ ನೇ ಇಸ್ವಿ

ರುದ್ರಪ್ಪಾ ನಾಗಪ್ಪಾ ಲಕ್ಷ್ಮೇಶ್ವರ ಸಾ॥ ರಾಣೇಬೆನ್ನೂರ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R.B.N. 1443

ನಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕ ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೬) ಧಾರವಾಡ ಸೋಮವಾರ ತಾರೀಖು ೧೬ನೇ ಮಾರ್ಚ ೧೯೩೫ (ಸಂಚಿಕೆ ೩

ಕರ್ನಾಟಕದ ರೈತರಿಗೆ ಬಂದು!

ಬಿನ್ ಬಂಡವಾಳಿನ ವ್ಯವಸಾಯ!!

ಕಿರ್ಲೋಸ್ಕರ ನೇಗಿಲುಗಳ ಜಯಜಯಕಾರ!!!

ಕಿರ್ಲೋಸ್ಕರ ನೇಗಿಲು ಮತ್ತು ಗಾಣಗಳ ಉಪಯೋಗವು, ಮತ್ತು ಮಹತ್ವ ಹಿಂದುಸ್ಥಾನದ ಪ್ರತಿಯೊಬ್ಬ ಒಕ್ಕಲಿಗನಿಗೆ ಗೊತ್ತಿದ್ದ ಮಾತು. ಅವುಗಳಿಗೆ ಗಿರಾಕಿಗಳು ಬಹಳ ಆದ್ದರಿಂದ ಅವುಗಳನ್ನು ಖರೀದಿ ಮಾಡಿಸುವ ದಲಾಲರಿಗೆ ಶ್ರಮ ಬೀಳದು. ಕಂಪನಿಯಿಂದ ದೊರೆಯುವ ಕ್ಯಾಟಲಾಗು, ಬೇರೆ ಪತ್ರಿಕೆ, ಗೋಡೆಯ ಚಿತ್ರಪಟ ಇತ್ಯಾದಿ ಜಾಹೀರಾತಿನ ಸಾಮುಗ್ರಿಗಳನ್ನು ಹಳ್ಳಿ ಹಳ್ಳಿಗಳಲ್ಲಿ ಪ್ರಸಾರ ಮಾಡಿದಲ್ಲಿ ಆರ್ಡರು ದೊರೆಯುವವು. ಈ ಆರ್ಡರ ಕೂಡ ೧/೪ ಹಣವನ್ನು ತೆಗೆದುಕೊಂಡು ಕಂಪನಿಗೆ ಕಳುಹಿಸಿದಲ್ಲಿ ಕಂಪನಿಯು ಅವರ ಪರ ಬಿಸಲ್ ರಸೀದಿಯನ್ನು ಮಿಕ್ಕ ಹಣಕ್ಕೆ ವ್ಹಿ. ಪಿ. ಮಾಡಿ ದಲಾಲರಿಗೆ ಕಮಿಶನ್ ಕೊಡುವದು.

ಕಮೀಶನ್ ದರಗಳ ಬಗ್ಗೆ ಒಂದೇ ಕಾಗದವನ್ನು ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ } ಕಿರ್ಲೋಸ್ಕರವಾಡಿ- ಜಿಲ್ಹಾ ಸಾತಾರಾ.

LOKHANDE



ಬಿಸ್ಸೀಸು ಮತ್ತು ಅರ್ಧ ಬೆಲೆಗೆ ದೊರೆಯುವವು ಹೊಸ ಹೊಸ ನಮೂನೆಯವು.

ಜೀವನದ ಉತ್ತಮ ವಸ್ತು ಎಂಬುವದು ಗಡಿಯಾರವು. ನಮ್ಮ ಅಂಗಡಿಯಲ್ಲಿ ಥಾವರ ಲಾಕ, ವಿಸ್ಸವಿಂಡ, ಮಿರೆಕಲ್, ಓಮೇಗಾ ಮುತ್ತು ಸ್ವಿಸ ಬಹಳ ಕಂಪನಿಗಳು ಮತ್ತು ಬೇರೆ ಪ್ರಸಿದ್ಧ ಕಂಪನಿಗಳ ಗಡಿಯಾರಗಳು ಈಗ ಬಂದಿದ್ದು, ಅವು ನೋಡಲಿಕ್ಕೆ ಸುಂದರವಾಗಿದ್ದು ಗಟ್ಟಿ ಮತ್ತು ಸರಿಯಾಗಿ ಹೊತ್ತು ತೋರಿಸುವಂಥವುಗಳಾಗಿವೆ. ಇವು ರೂಪಾಯಿಯಿಂದ ಹೆಚ್ಚಾದ ಬೆಲೆಯು ೯೮ ಯಾದಗಳು ಸಿಗುವವು. ಕೊಳ್ಳುವಾಗ ಪ್ರತಿಯೊಂದಕ್ಕೆ ಗ್ಯಾರಂಟಿ ಕೊಡುವೆವು. ಒಮ್ಮೆ ಅಂಗಡಿ ನೋಡುವಿರಷ್ಟೇ?

ಪ್ರೊಪ್ರಾಯಿಟರ, ದತ್ತಾತ್ರೇಯ ಲೋಖಂಡೆ
ಕ ವ್ಯಾಪಾರ ಸ್ಟ್ರೀಟ ಮಾರ್ಕೇಟ ಧಾರವಾಡ.

ಶಕ್ತ ೨ ಆಣೆಯೊಳಗೇ ಆಶ್ಚರ್ಯಕಾರಕ ವ ರಾಮಬಾಣ ಉಪಾಯ

ಮೊಮೆಂಟ ಕ್ಯೂಅರ

ತಲೆಶೂಲಿ, ಅರ್ಧ ತಲೆಶೂಲಿ, ಶೀತ, ಉಷ್ಣ ವ ನಿಶಕ್ತಿ ವಗೈರೆಗಳಿಂದಾದ ಮಸ್ತಕಶೂಲಿಯು ತ್ವರೆಯಿಂದ ನಿರ್ಮೂಲ ಮಾಡಲು "ಮೊಮೆಂಟ ಕ್ಯೂಅರ" ದಿಗೆ ಸರಿಸಮಾನವಾದ ಔಷಧವು ಬೇರೆ ಇಲ್ಲ. ಹೆಚ್ಚು ಜನರು ಮಸ್ತಕಶೂಲೆಯನ್ನು ಸಹಿಸಲು ಆಗದೆ ಮಸ್ತಕಕ್ಕೆ ವಸ್ತ್ರಕಟ್ಟಿ ಎಣ್ಣೆ ವ ಅರ್ಕನ್ನು ಹಾಗಿಸುತ್ತಾರೆ. ಆದರೆ ನಿರಾಶೆಯಾದವರು ಮೋಮೆಂಟ ಕ್ಯೂಅರದ ಪುಡಿಯನ್ನು ಬಿಸಿ ಚಹಾದೊಂದಿಗೆ ಅಥವಾ ಬಿಸಿ ನೀರಿನೊಂದಿಗೆ ಹೊಟ್ಟೆಯಲ್ಲಿ ತಕ್ಕೊಂಡಲ್ಲಿ ಒಂದೇ ಕ್ಷಣದಲ್ಲಿ ಮಸ್ತಕಶೂಲೆಯು ನಿಲ್ಲುವದು. ಇದಕ್ಕೆ ಅನೇಕ ಶಿಫಾರಸ ಪತ್ರಗಳು ಉಂಟು.

೧ ಪೇಟಿಗೆ ೨ ಆಣೆ. ಸ್ಯಾಂಪಲ ಸಲುವಾಗಿ ೩ ಆಣೆ ಪೋಸ್ಟ ತಿಕೀಟುಗಳನ್ನು ಕಳಿಸಿದಲ್ಲಿ ರವಾನಿಸುವೆವು.

ವಿಳಾಸ— ದಿ ಕರ್ನಾಟಕ ಮೆಡಿಕಲ ಸ್ಟೋರ್ಸ, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ ಸ್ಟೇಶನರೋಡ ಹುಬ್ಬಳ್ಳಿ.

ದಿ. ಅಂಕಲಗಿ ಬ್ಯಾಂಕ ಲಿಮಿಟೇಡ್
ಧಾರವಾಡ.

೧೯೧೩ ಇಸ್ವಿಯ ಕಂಪನಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ಚಾಲೂ ಖಾತೆ, ಠೇವು, ಸೇವಿಂಗ್ಸದ ಡಿಪಾಜಿಟ, ಸಾಲ, ಪತ್ತಿ, ಹುಂಡಿ, ಮುಂತಾದ ಯಾವತ್ತು ವ್ಯವಹಾರಗಳು ನಡಿಯುವವು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿಮಾಡುವವರಿಂದ ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ ರಿಂದ ೧೦-೩೦, ಸಾಯಂಕಾಲ ೩ ರಿಂದ ೬ ರವರೆಗೆ ನಡಿಯುವದು.

K.B. Ankalagi
ಮ್ಯಾನೇಜಿಂಗ ಡಾಯರೆಕ್ಟರ

ವಿಜಯ.

ಧಾರವಾಡ ತಾ- ೧೬-೩-೨೫ ನೇ ಇಸ್ವಿ

ಅನ್ನ ಆಳರಸರಿಗೆ, ಗಂಜಿ ಹಿಂದುಸ್ಥಾನಕ್ಕೆ.

—೦—

ಪೇಶ್ವೆಯರ ಕೋಟೆಯು ಮುತ್ತಿಗೆಯಲ್ಲಿ ಹಿಂದೀ ಶಿಪಾಯರು ಪೇಶ್ವೆಯರಿಗೆ ಅಕ್ಕಿಯ ಅನ್ನ ಕೊಟ್ಟು, ಅದರ ಮೇಲಿನ ಗಂಜಿಯನ್ನು ತಾವು ಕುಡಿದರೆಂಬ ಸಂಗತಿಯು ಇತಿಹಾಸ ಪ್ರಸಿದ್ಧವಾದದ್ದು. ರಾಜ್ಯಕಾರಭಾರದಲ್ಲಿ ಅದೇ ಪ್ರಕಾರದ ವ್ಯವಸ್ಥೆ ಇರಬೇಕೆಂದು ಇಂದಿಗೂ ಆಳರಸರ ಕೋರಿಕೆ ಸ್ವರಾಜ್ಯದ ದೊಡ್ಡ ದೊಡ್ಡ ಮಾತುಗಳನ್ನಾಡುವವು. ಮಾಕ್‌ನೇಂಡ ಚೂಂಫಾರದೂ ಹೊಟ್ಟೆ ತುಂಬುವದೇ ಸ್ವರಾಜ್ಯ ಕಮಿಟಿಗೆ ಪ್ರತಿಯೊಂದು ಇಲಾಖೆಯವರು ತಮ್ಮ ಅನುಭವದ ರಿಪೋರ್ಟು ಕಳಿಸಿದ್ದಾರೆ. ಅದರಲ್ಲಿ ಯುರೋಪಿಯನ್ನರಾದವರು ಸರಕಾರದ ಅಭಿಪ್ರಾಯವನ್ನೇ ಕೊಟ್ಟಿದ್ದಾರೆ. ಇವರ ಒರವಣಿಗೆ ನೋಡಲಾಗಿ ಸಿವ್ಹಿಲ ಸರ್ವಂಟರ ಅಧಿಕಾರವು ಅದಷ್ಟು ಗಟ್ಟಿಮುಟ್ಟಿಯಾಗಿ, ಸೂರ್ಯ ಚಂದ್ರರಿರುವ ತನಕ ಅವರ ಅಧಿಕಾರವು ಅಬಾಧಿತವಾಗಿ ನಡೆಯಬೇಕೆಂದೂ, ಸ್ವರಾಜ್ಯದ ಹಕ್ಕುಗಳನ್ನು ಕಂತಿನಿಂದ ಕೊಡುವದನ್ನು ಸಹ ಅವರು ವಿರೋಧಿಸಬೇಕೆಂದೂ ಸ್ವರಾಜ್ಯ ಕಮಿಟಿಯು ಗೌರಕಾಯ ಮೆಂಬರರ ಮತವಾಗುತ್ತದೆ. ಬಂಗಾಲದ ವ್ಯಕ್ತಿವಂತ ಗವ್ಹರ್ನರರಾದ ಲಾರ್ಡ ಲಿಟನ ಸಾಹೇಬರಂತೂ ತಿದ್ದುಪಡಿಯ ವಿರುದ್ಧ ಕೊಟ್ಟ ಮತ ನೋಡಿದರೆ- ಕಮಿಟಿಯು ಮಾಡಿದ ಕ್ರಮವು ಹೊಳೆಯಲ್ಲಿ ಹುಣಸೆ ಕಿವಿದಂತಾಯಿತೆಂದು ಸ್ಪಷ್ಟವಾಗುತ್ತದೆ. ಈಗಿನ ರಾಜ್ಯ ಘಟನೆಯಲ್ಲಿ ಯಾವ ಬಗೆಯ ಬದಲಾವಣೆ ಮಾಡಬಾರದು; ಕಾಯಿದೆ ಮತ್ತು ಒಪ್ಪಿಸಲ್ಪಟ್ಟ ಖಾತೆಗಳಲ್ಲಿ ಹೆಚ್ಚು ಕಡಿಮೆ ಮಾಡಬಾರದು; ಹಿಂದೀ ಗೇಣಾಪರು ಮಾತುವದಾದರೆ ಅದನ್ನು ತಾವು ಬಲವಾಗಿ ವಿರೋಧಿಸತಕ್ಕವರೆಂದು ಸಾಹೇಬರು ಅಂದಿದ್ದಾರೆ. ಇದೇ ಸಾಹೇಬರು ಲಾರ್ಡ ರೀಡಿಂಗರ ಗೈರಹಜರಿ, ಗವ್ಹರ್ನರ ಜನರಲರಾಗುವರು. ಹಿಂದೀ ಮೆಂಬರರು ಅಸೆಂಬ್ಲಿಯಲ್ಲಿ ರಾವ್ಪಂಡ ಟೀಬಲ ಪರಿಷತ್ತಿನ ಠರಾವು ತಂದು ರಾಜ್ಯಕಾರಭಾರದಲ್ಲಿ ಬದಲಾಗತಕ್ಕದ್ದೆಂದು ಸೂಚಿಸಿ, ಆ ಪ್ರಕಾರ ಠರಾವು ಪಾಸಾದರೂ ಈ ಠರಾವಿಗನುಸರಿಸಿ, ಸ್ವರಾಜ್ಯ ಕಮಿಟಿ ಕೂಡಿದ್ದು ಮಾತ್ರ ನಿಜವಾಯಿತು. ಪರಿಣಾಮದಲ್ಲಿ ಮಾತ್ರ ಹೆಚ್ಚು ಕಡಿಮೆಯಾಗಲಿಲ್ಲ. ಮಮಾಳ ಮೆಂಬರರು ಕಾಯಲು ಕಮಿಶನ ನೇಮಿಸಬೇಕೆಂದು ಅಂದಿದ್ದಾರೆ. ಇದರಿಂದಾದರೂ ಆಗುವ ಪ್ರಯೋಜನವೇನು? ಹತ್ತು ವರ್ಷದ ಕಂತ ಮುಗಿಯುವ ತನಕ ಯಾವ ಹಕ್ಕಿನ ವಿಚಾರ ಮಾಡಕೂಡದೆಂದು ಬಹುತೇಕ ಗೌರಕಾಯಸ್ಥರ ಮತವಾಗಿದೆ. ಅವರ ಉದ್ದೇಶ ನೆರವೇರುವಂತೆ ಅನುವು ಮಾಡಿಕೊಟ್ಟಂತಾಗುತ್ತದೆ. ಹಿಂದೀ ಜನರು ಸ್ವರಾಜ್ಯದ ಯೋಜನೆ ಬರಿಯಬೇಕು; ರಾವ್ಪಂಡ ಟೇಬಲ ಪರಿಷತ್ತು ಕೂಡಿ, ಅದರಲ್ಲಿ ಏನಾದರೂ ಬದಲಾವಣೆ ಮಾಡಬೇಕು, ಮತ್ತು ವಸಾಹತಿನ ಸ್ವರಾಜ್ಯವೇ ಇರಲಿ; ಅದು ಇಂತಿಷ್ಟು ವರ್ಷಗಳಲ್ಲಿ ಪೂರ್ಣವಾಗಬೇಕೆಂದು ಸರಕಾರವು ವಚನಬದ್ಧವಾಗಬೇಕು, ಅಂದರೇ ಹಿಂದೀ ಜನರ ಸಮಾಧಾನವಾಗುವದು. ಸ್ವರಾಜ್ಯ ಕಮಿಟಿಯ ರಿಪೋರ್ಟಿನಿಂದ ದೇಶದಲ್ಲಿ ಮತ್ತಿಷ್ಟು ಅಸಂತೋಷ ಹಬ್ಬಲು ಕಾರಣವಾಗಿರತ್ತದೆಂದು ಈ ಒಂದೇ ವಾರದಲ್ಲಿ ಸರಕಾರಕ್ಕೆ ತಿಳಿದ ಸಂಗತಿಯಾಗಿದೆ. ಇಂಗ್ಲಿಷ ಜನರು ವಿಲಾಯತಿಯವರ ಅಭಿಪ್ರಾಯದಂತೆ ನಡೆದರೆ ಅದು ಹೆಚ್ಚು ದೇಶಬಕ್ಕೇ ಮುಳುವಾಗುವದುಂಟು. ಲಂಡನದಲ್ಲಿ ಪ್ರಕಟವಾಗುವ ಡೇಲೀ ಟೆಲಿಗ್ರಾಫ ಎಂಬ ಪತ್ರವು ಅಲ್ಪ ಸಂಖ್ಯಾಕ ಮೆಂಬರರು ಕೊಟ್ಟ ಅಭಿಪ್ರಾಯದಿಂದ ದೇಶದಲ್ಲಿ ಕಂಟಕವುಂಟಾಗುವದರ ಬದಲು ಶಕ್ತಿಯನ್ನು ಹಿಡಿಯುವ ಅಗತ್ಯವುಂಟಾಗುವದೆಂದು ಬರೆದಿರುತ್ತದೆ. ಬ್ರಿಟಿಶ ಮುತ್ಸದ್ದಿಗಳು ಈ ಅಭಿಪ್ರಾಯವನ್ನು ತಿರಿವಿ ಓದುವ ಪ್ರಸಂಗ ಬರಬಾರದೆಂಬ ಮತದವರಾಗಿದ್ದರೆ ಸ್ವರಾಜ್ಯದ ಹಾದಿಯನ್ನು ಸನಿಯ ಮಾಡುವದೇ ಕಾರಣವಾಗುತ್ತದೆ

ನಾಗಪೂರ ಇಲಾಖೆಯ ಸ್ವರಾಜ್ಯ ಪಕ್ಷೀಯರು ಮುಂಡಾಸ ತಿರಿವಿದರು.

—೦—

ನಾಗಪೂರ ಇಲಾಖೆಯಲ್ಲಿ ಮುಖ್ಯ ಮೂರು ಭಾಗಗಳಿವೆ. ೧ ವರ್‍ಹಾಡ ೨ ನಾಗಪೂರದ ಮರಾಠಿಸ್ಥ ಭಾಗ ೩ ಹಿಂದುಸ್ಥಾನಿ ಭಾಗ ಈ ಮೂರರಲ್ಲಿ ವರ್‍ಹಾಡ ಮತ್ತು ಮರಾಟಿ ಭಾಗದವರು ಲೋಕಮಾನ್ಯರ ನೆಚ್ಚಿನ ಪ್ರತೀಕಾರದವರು. ಸರಕಾರದಿಂದ ಲಾಭವಾಗುತ್ತಿದ್ದರೆ ಅದನ್ನು ಉಡಿಯಲ್ಲಿ ಹಾಕಿಕೊಳ್ಳತಕ್ಕದ್ದು. ಅಹಿತವಾಗುತ್ತಿದ್ದರೆ- ಅದನ್ನು ವಿರೋಧಿಸತಕ್ಕದ್ದು. ಈ ರೀತಿಯಾಗಿ ಕ್ರಮೇಣ ಹೆಚ್ಚೆಚ್ಚು ರಾಜಕೀಯ ಹಕ್ಕುಗಳನ್ನು ಸಂಪಾದಿಸುತ್ತ ಹೋಗಬೇಕೆಂಬ ಲೋಕಮಾನ್ಯರ ಮತ. ಈ ಮತವನ್ನೇ ಅವಲಂಬಿಸಬೇಕೆಂದು ಬೆಳಗಾವಿಯ ಕಾಂಗ್ರೆಸದ ಮೊದಲು ಮಹಾರಾಷ್ಟ್ರದ ಸ್ವರಾಜ್ಯ ಪಕ್ಷೀಯರು ಬಗಳ ತೆಗೆದರು. ದೇಶಬಂಧು ದಾಸರೂ ಪಂಡಿತ ಮೋತೀಲಾಲರೂ ಇವರನ್ನು ಸಮಾಧಾನ ಪಡಿಸುತ್ತಲೇ ಬಂದರು. ಆದರೂ ಇನ್ನು ವಿವಾದವಾಗಬೇಕೆಂದು ಹೆಚ್ಚೆಚ್ಚು ಅಭಿಮಾನಪಟ್ಟು, ಆದಕ್ಕೆ ತಾವು ಸಿದ್ಧರಿರುವಂತೆ ಸರಕಾರಕ್ಕೆ ಸಹ ಪವಾಡದಿಂದ ತಿಳಿಸಿದರು. ಧೂರ್ತರ ಸರಕಾರವು ಗಾಳ ಬಿಟ್ಟಾಗ ಕಬಳಿಕೊಳ್ಳಬೇಕೆಂದು ಇವರ ಬೆನ್ನು ಬಿದ್ದರಿತು. ಇಷ್ಟರಲ್ಲಿ ವರ್‍ಹಾಡದವರಾದ ಶ್ರೀ ತಾಂಬೆಯವರು ಕೌನ್ಸಿಲದ ಅಧ್ಯಕ್ಷರಾದರು. ಗುಪ್ತರೀತಿಯಾಗಿ ವರ್‍ಹಾಡದ ಸ್ವರಾಜ್ಯ ಪಕ್ಷೀಯರಿಂ ಕೂಡ ಮನಸುತ್ತು ಮಾಡಲಿಕ್ಕೆ ಅಳೆರ ಅನುಕೂಲವಾಯಿತು. ತುಸು ಸಳ್ವಾದ ಕೂಡಲೆ- ಸಂಚಾರ ಪಕ್ಷೀಯರಾದ ಸರ ಜೋಶಿ, ಮೆಸರ್ಸ ಕ್ಯಾಂಡನ ಮತ್ತು ನೆಲಸನರು ಮರಾಟಿ ಭಾಗದ ಮುಂದಾಳುವಾದ ಡಾಕ್ಟರ ಮುಂಜೆ, ಹಿಂದುಸ್ಥಾನಿ ಭಾಗದ ಪ್ರಮುಖರಾದ ಶ್ರೀ ರಾಘವೇಂದ್ರರಾಯರನ್ನು ಕೌನ್ಸಿಲ ಹಾಲಿನಲ್ಲಿಯೇ ಆಲೋಚನೆಗೆ ಕರೆದು, ಅಲ್ಲಿ ಮಾತಾಡಿಕೊಂಡು, ಕೂಡಲೆ ಇವರನ್ನು ಗವ್ಹರ್ನರ ಸಾಹೇಬರ ಭೆಟ್ಟಿಗೆ ಕರೆಕೊಂಡು ಹೋದರು. ಅಲ್ಲಿ ಡಾಕ್ಟರ ಮುಂಜೆಯವರು ಸರಕಾರವನ್ನು ವಿರೋಧಿಸುವ ತಮ್ಮ ಮತವನ್ನು ಶಿಥಿಲವಾಗಿಟ್ಟುಕೊಂಡರು. ಆದರೆ ಶ್ರೀ ರಾಘವೇಂದ್ರರಾಯರು ದಿವಾನಗಿರಿಯ ಪಾಶದಲ್ಲಿ ಬಿದ್ದು, ತಾವು ಸ್ವಂತ ಮಂತ್ರಿಯಾಗಿ, ಬೇರೆಯೊಬ್ಬರನ್ನು ಮಂತ್ರಿ ಮಾಡಲು ಒಪ್ಪಿಗೆ ಕೊಟ್ಟು ಬಂದಿದ್ದಾರೆ.

ಇದಕ್ಕೂ ಮುಂದೆ ಕೌನ್ಸಿಲದಲ್ಲಿ ಬೇರೆಂದು ಪ್ರಕಾರದ ಪ್ರಸಂಗ ನಡೆಯಿತು. ಕೌನ್ಸಿಲದ ಪ್ರಾರಂಭದಲ್ಲಿ ವರ್‍ಹಾಡದ ಪ್ರತಿನಿಧಿಗಳು ಲ್ಯಾಂಡ ರಿವ್ಹಿನ್ಯೂ ಖಾತೆಯಲ್ಲಿ ೨೪ ಸಾವಿರ ರೂಪಾಯಿ ಒಂದು ಬಾಬಿಗೆ ಮಂಜೂರಿ ಕೊಡಬಾರದೆಂಬ ಠರಾವು ತಂದರು. ಇದಕ್ಕೆ ನಾಗಪೂರದ ಮರಾಟಿ ಮತ್ತು ಹಿಂದುಸ್ಥಾನೀ ಭಾಗದವರು ಒಪ್ಪಿಗೆ ಕೊಡಬೇಕಾಗಿತ್ತು. ಆದರೆ ಅವರು ಅನುಕೂಲ ಅಥವಾ ಪ್ರತಿಕೂಲ ಮತ ಕೊಡದೆ ಮೂಡಿ ಬಸಪ್ಪನಂತೆ ಕುಳಿತುಕೊಂಡರು. ಇದರಿಂದ ಸರಕಾರದ ಮೋರೆ ಮೇಲಾಯಿತು. ವರ್‍ಹಾಡದ ಪ್ರತಿನಿಧಿಗಳ ಇನ್ನು ಮೂರು ನಾಮಂಜೂರಿನ ಠರಾವುಗಳಿದ್ದವು. ಇವಂತೂ ಸರಕಾರಕ್ಕೆ ಹರ್ಷವಾಯುವನ್ನುಂಟುಮಾಡುತ್ತಿದ್ದವು. ಇಷ್ಟರಲ್ಲಿ ಪಂಡಿತ ಮೋತೀಲಾಲರಿಂದ ಟೆಲಿಗ್ರಾಮು ಒಂದು ಡಾಕ್ಟರ ಮುಂಜೆಯವರ ಕಯ್ಯಲ್ಲಿ ಬಿದ್ದಿತು. ಕೂಡಲೆ ಎರಡೂ ಭಾಗದ ಮೆಂಬರರು ಸರಕಾರಕ್ಕೆ ಪ್ರತಿಕೂಲವಾಗಿ ಮತಕೊಟ್ಟರು. ಒಂದರ ಮೇಲೊಂದರಂತೆ ಮೂರು ಸಾರೆ ಸರಕಾರದ ಹಣದ ಬೇಡಿಕೆಗಳು ನಾಮಂಜೂರಾಗಿ ಸಂತೋಷದ ಬದಲಾಗಿ ದುಃಖವಾಯಿತು.

ಪಂಜಾಬ ಮತ್ತು ಹಿಂದುಸ್ಥಾನ ಭಾಗದ ಸ್ವರಾಜ್ಯ ಪಕ್ಷೀಯರೂ ಬಿಟ್ಟಿರುವನಗಿರಿಯನ್ನಾಳಲು ಒಪ್ಪಿದ್ದರೂ, ಉಳಿದ ಸ್ವರಾಜ್ಯ ಪಕ್ಷದವರು ಇವರ ಸಂಬಳದ ಮಂಜೂರಿಗೆ. ಕರ್ನಾಟಕ ಬರುವ ಕನಕ ತಡೆದು, ಆ ಸಮಯ ಒಂದ ಕಡೆಲೆ ಇವರಿಗೆ ವರ್ಷಕ್ಕೆ ಒಂದೇ ರೂಪಾಯಿ ಸಂಬಳ ಕೊಡಬೇಕೆಂಬ ಠರಾವು ತಂದು ಇದನ್ನು ಪಡಚ್ಯುತ ಮಾಡಬೇಕೆಂದಿದ್ದಾರೆ.

ನಾಕ್ಸ ಮುಂಡೆ ಮತ್ತು ರಾಘವೇಂದ್ರರಾವ ರು ಮಂತ್ರಿಯ ಸಂಬಳವು ಒಂದೆಸಂದೇ ರೂಪಾಯಿ ಯಾಗಬೇಕೆಂಬ ಸ್ವರಾಜ್ಯ ಪಕ್ಷದ ಠರಾವು ಬಹುಮತದಿಂದ (೬೭-೪೮) ಪಾಸಾಗಿ ತೆಂದು ಸಿನ್ನೆ ನ ಘಟನೆಯಲ್ಲಿ ೧೭ ಪರ್ವಾಸಾಗಿದೆ.

ಗಿರಣಿಯ ಮೇಲಿನ ಕರದ ವಿಷಯವಾಗಿ ಹಿಂದುಸ್ಥಾನ ಸರಕಾರದ ದುರಾಗ್ರಹ.

—೦—

ಗಿರಣಿಗಳ ಮೇಲಿನ ಕರವನ್ನು ರದ್ದು ಮಾಡಿದರೆ. ಈ ದೇಶದ ನೂಲು ಮತ್ತು ಬಟ್ಟೆಯ ವ್ಯಾಪಾರಕ್ಕೆ ಶೇಖಿಯುಂಟಾಗುವದೆಂದು ಅಸೆಂಬ್ಲಿಯ ಹಿಂದೀ ಮೆಂಬರ ಒಂದೇ ಮತವಾಗಿದ್ದರೂ ಇದನ್ನು ತೆಗೆದು ಹಾಕಲಿಕ್ಕಾಗುವದಿಲ್ಲೆಂದು ಸರಕಾರದವನು ಹಟ ಹಿಡಿದಿದ್ದಾರೆ ಕೊಂಕಣಪ್ಪನ್ನನು ಹೇಳಿದ ಕಾರಣವು ತೀರ ಅಪ್ರಯೋಜಕ ಮತ್ತು ಸಂಶಯಪಡ ತಕ್ಕಂಥಾಗಿರುತ್ತದೆ. ಈ ವರ್ಷ ಕರವನ್ನು ರದ್ದು ಮಾಡಿದರೆ- ರಾಜಕೀಯ ಹಾನಿಗೆ ಹಾಗಿ ನಡೆದಂತಾಗುತ್ತದೆಂದು ಸಾಹೇಬರು ಅಂದಿದ್ದಾರೆ. ಅಸೆಂಬ್ಲಿಯಲ್ಲಿ ಪ್ರಚಂಡ ಬಹುಮತದಿಂದ ಪಾಸಾದ ಠರಾವುಗಳನ್ನೆಲ್ಲ ರಾಜಕೀಯ ಹಾನಿಗಳಿಗೆ ಹಾಗಿ ನಡೆದಂತಾಗುತ್ತದೆಂದು ಹೇಳಿ ಅವಕ್ಕೆ ಕಸದ ಬುಟ್ಟಿಯನ್ನು ತೋರಿಸುತ್ತಾ ಹೋದರೆ ಅಸೆಂಬ್ಲಿ, ಕೌನ್ಸಿಲ, ಇ.ನಾಪಣಿ ಮೊಂತಾದವು ಎಲ್ಲ ರಾಜ್ಯಕಾರಭಾರವೆಂಬ ಆ ಮ್ಯಾನಡೆಕಳಗಿನ ಘಾಸೇ ಆಗುವದು. ಈ ವರ್ಷ ತುಸು ೩ ಕೋಟಿ ಪರ್ಯಾಯ, ಮುಂದಿನ ವರ್ಷ ಉಳಿದದ್ದನ್ನು ತೆಗೆದು ಹಾಕಿರೆಂದು ಬ್ಯಾರಿಸ್ಟರ ಚಿನ್ನಾ. ಶ್ರೀ ರಂಗಾಚಾರ್ಯರ ಮೊದಲಾದವರು ಸಮಾಧಾನ ಹೇಳಿದರೂ ಸರಕಾರದ ಲಕ್ಷ್ಯದತ್ತ ಕನ್ನಡೇ ಹಟ ಹಿಡಿಯಬೇಕೆಂದಿತು. ಆಗ ಮೆಂಬರರೆಲ್ಲರು ಈ ಕರ ವಸೂಲ ಮಾಡುವ ಖಾತೆಗೆ ಬೇಕಾಗಿರುವ ೭೭ ಸಾವಿರ ರೂಪಾಯಿಕ್ಕೆ ನಾಮ ಹಾಕಿದರು. ಇದರಿಂದ ಸಂತೋಷವು ಹೇಳಿತಕ್ಕಂದಿದೆ. ಕರ ವಸೂಲ ಮಾಡುವ ಕಾರಭಾರರೇ ಇಲ್ಲದಂತಾದ ಬಳಿಕ, ಕರ ಕೊಡುವದು ತಾನಾಗಿ ನಿಂತು ಹೋಗುತ್ತದೆ. ಆದರೆ ಕಾಯದೆ ಎಂಬುವದಿರುವ ತನಕ ಅದು ಅನುಕೂಲದಲ್ಲೇ ಬೇಕಾಗುತ್ತದೆ. ಅದ್ದರಿಂದ ಭಾರ್ಗರೀಡಿಂಗ ಸಾಹೇಬರು ಇದಕ್ಕೆ ಪುನಃ ಸರ್ಟಿಫಿಕೆಟು ಕೊಡಬೇಕಾಗುವದು. ಇಲ್ಲವೆ ಮತ್ತೊಂದು ಕಾಯದೆ ಮಾಡಿ, ಮೂಲ ಕಾಯದೆಯನ್ನು ರದ್ದು ಮಾಡಬೇಕಾಗುವದು. ಸರಕಾರದ ತನ್ನ ದುರಾಗ್ರಹ ಬಿಡಬಾರದೆಂಬದೇ ನಿಜ.

ಹುಣ್ಣು ಮಾಡಿದರೂ, ಕಲೆ ಹೋಗಲಾರದು.

೧೯೨೨ ನೆಯ ಇಸವಿಯಲ್ಲಿ ದೇಶಭಕ್ತ ಗಂಗಾಧರರಾಯರು ಕಾರವಾರಕ್ಕೆ ಹೋಗಿದ್ದರು. ವಾದ್ಯ ಸ್ವಾಗತದ ಮೆರವಣಿಗೆಯಿಂದ ಇವರ ಸ್ವಾಗತ ಮಾಡಬೇಕೆಂದು ಪುರವಾಸಿಗಳು ಏರ್ಪಾಡು ಮಾಡಿ, ಆ ಪ್ರಕಾರ ಮ್ಯಾಜಿಸ್ಟ್ರೇಟರ ಅಪ್ಪಣೆ ಕೇಳಿದರು. ವಾದ್ಯ ಬಾರಿಸಿದರೆ ಶಾಂತತಾ ಭಂಗವಾಗುತ್ತದೆಂಬ ನೆವನ ಹೇಳಿ, ಮ್ಯಾಜಿಸ್ಟ್ರೇಟರು ಅಪ್ಪಣೆ ಕೊಡಲಿಲ್ಲ. ವಾದ್ಯ ಧ್ವನಿಯಿಲ್ಲದ್ದರೂ ಜಯಘೋಷದಿಂದ ಮೆರವಣಿಗೆ ತೆಗೆದರು. ಈ ಮಾತು ಸಂಭವಿಸಿ ಎರಡು ವರ್ಷಗಳಾದ ನಂತರ ಕಾರವಾರದ ಮೆಂಬರರಾದ ಶ್ರೀ ಕರ್ಕಿಯವರು ವಾದ್ಯದಿಂದ ಹೇಗೆ ಶಾಂತತಾ ಭಂಗವಾಗುವದೆಂದು ಕೌನ್ಸಿಲದಲ್ಲಿ ಪ್ರಶ್ನ ಕೇಳಿದರು. ಮ್ಯಾಜಿಸ್ಟ್ರೇಟರಿಗೆ ಹಾಗೆ ಅನಿಸಿತೆಂದು ಸರಕಾರದಿಂದ ಪಡಿಮುಚ್ಚಿನಂಥ ಉತ್ತರ ಕೊಡಲ್ಪಟ್ಟಿತು. ಹುಣ್ಣು ಮಾಡಿದರೂ, ಆದ ಕಲೆಯ ವಿಷಯವಾಗಿ ಕಾರವಾರಿಗಳ ಮನಸ್ಸಿನಲ್ಲಿ ಖೇದವಿರುತ್ತದೆಂದು ಈ ಪ್ರಶ್ನದಿಂದ ವ್ಯಕ್ತವಾಗುತ್ತದೆ.

ತುರಂಗದಲ್ಲಿ ಸ್ತ್ರೀಯರ ನಾಟಕ

ಲಿವ್ಹರಪೂಲ ಪಟ್ಟಣದ ತುರಂಗದಲ್ಲಿಯ ಕೈದಿಗಳಿಗೆ ಮನರಂಜನವಾಗಬೇಕೆಂದು ಜೇಲಿನ ಅಧಿಕಾರಿಗಳು ಸ್ತ್ರೀಯರಿಗೆ ನಾಟಕ ಕಲಿಸಿದರು. ಪಾರ್ಟ ಮುಂತಾದ ಎಲ್ಲ ವ್ಯವಸ್ಥೆಗಳನ್ನು ಸ್ತ್ರೀಯರೇ ಮಾಡಿಕೊಂಡಿದ್ದರು ವಿಶಾಯತಿಯಲ್ಲಿ ಕೈದಿಗಳ ಮನರಂಜನೆಗಾಗಿ ಜೇಲಿನಲ್ಲಿ ನಾಟಕ ಸಹ ಆಡಿಸುವರು. ಹಿಂದುಸ್ಥಾನದಲ್ಲಿ ಗಟ್ಟಿಯಾಗಿ ಮಾತಾಡುವದು ಕೂಡ ಅಪರಾಧವಾಗುತ್ತದೆ.

ಕುಲಬುರ್ಗೆಯಲ್ಲಿ ಪುನಃ ದಂಗೆ.

ರಜಪೂತರು ಬೀದಿಯಲ್ಲಿರುವ ಒಂದು ಶಿವಾಲಯದ ಮೇಲೆ ಮುಸಲಮಾನರು ಹಲ್ಲೆ ಮಾಡಲು ದಂಗೆಯಾಯಿತು, ರಜಪೂತರು ಮುಸಲಮಾನರನ್ನು ತಡೆದು ದಂಗೆ ತಪ್ಪುಗೊಡಲಿಲ್ಲ. ಪೋಲೀಸರು ಕೆಲ ರಜಪೂತರನ್ನು ದಸ್ತಗಿರ ಮಾಡಿದ್ದಾರೆ.

ರಾಣೇಬೆನ್ನೂರ ಮ್ಯುನಿಸಿಪಾಲಿಟಿಯ ಚುನಾವಣೆಯು.

—೦—

ಈ ಕೆಳಗಿನ ಗೃಹಸ್ಥರು ಕಳೆದ ೯ ನೇ ತಾರೀಖಿನಲ್ಲಾದ ಚುನಾವಣೆಯಲ್ಲಿ ಆರಿಸಲ್ಪಟ್ಟಿದ್ದಾರೆ.

೧ ನೇ ವಾರ್ಡ—

ಮೆಸರ್ಸ ಬಾದಾಮಿ, ಅಶೀರಪ್ಪ ರ, ಹಿತ್ತಲ್ಲಪ್ಪಾ ಬಂಗಾರ ಮತ್ತು ಜನ್ನಪ್ಪಾ ಮಾಕನೂರ

೨ ನೇ ವಾರ್ಡ—

ಮೆಸರ್ಸ ಕಾಮಣ್ಣಾನಾಯಕ ಮಳಗೀದ, ಸಣ್ಣನಗೌಡರು, ಗುರಪ್ಪಾನಾಯಕ

೩ ನೇ ವಾರ್ಡ—

ಮೆಸರ್ಸ ಗೋವಿಂದಪ್ಪಾ ಸಾಲಿಗೇರ, ಬಸಪ್ಪಾ ಕಟ್ಟೀಮನಿ ನರಸಿಂಗಪ್ಪಾ ಶಾನಭೋಗ

ಮುಸಲಮಾನರು—

ಮೆಸರ್ಸ ನಿಜಾಮುದ್ದೀನ ಸಾಹೇಬ ಮತ್ತು ಮೊಹಮದಿನ ಸಾಹೇಬ ಕಾಂಟ್ರ್ಯಾಕ್ಟರ

ಧಾರವಾಡ—

ಇಂದಿನಿಂದ ಸ್ಕೂಲ ಫಾಯನಲ ಮತ್ತು ಬುಧವಾರದಿಂದ ಮ್ಯಾಟ್ರಿಕ ಪರೀಕ್ಷೆಯು ಪ್ರಾರಂಭವಾಗುವವು.

ಕಳೆದ ಮೂರು ದಿವಸಗಳಿಂದ ದಿನಾಲು ಮೋಡ ಹಾಕುತ್ತಿರುವದು ನಿನ್ನೆ ನ ದಿವಸ ಸಾಯಂಕಾಲದಲ್ಲಿ ಕಲ್ಲು ಕೊಡ್ಯ್ಯದಷ್ಟು ಮಳೆಯಾಯಿತು.

ಇವತ್ತಿನ ದಿವಸ ಸಾಯಂಕಾಲದ ೫.೩೦ ಕ್ಕೆ ಸರಿಯಾಗಿ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಕಲೆಕ್ಟರರಾದ ಮಿ. ಮಾಂಟೇಥ ಸಾಹೇಬರಿಗಾಗಿ ಆಂಬುಕೂಲ ಸಮಾರಂಭವಿರುತ್ತದೆ.

ಬಂಕಾಪೂರ ತಾಲೂಕಿನ ಶಿರೂರ ಗ್ರಾಮದ ಬಸವನಗೌಡನ ಕೊಲೆಯ ಪ್ರಕರಣದ ಅಪೀಲಿನ ವಿಚಾರಣೆಯು ಹಾಯಕೋರ್ಟಿನಲ್ಲಾಗಿ ೩-೫ ಮತ್ತು ಆರನೇ ಆರೋಪಿಗಳಿಗೆ ಕರೇ ನೀರಿನ ಶಿಕ್ಷೆಯಾಗಿ ಉಳಿದವರು ದೋಷಮುಕ್ತ ಮಾಡಲ್ಪಟ್ಟರು.

ಮುನಿಸಿಪಲ ರಿಪೋರ್ಟಿನ ಒಗ್ಗೆ ಅಸೆಂಬ್ಲಿಯನ್ನು ತಿಳಿಸಬಹುದೇಕೆಂದು ಪಂಡಿತ ಮೋತಿಲಾಲರು ಕಳಿಸಿದ ಸೂಚನೆಯು ಠರಾವನ್ನು ಸರಕಾರದವರು ನಾಮಂಜೂರ ಮಾಡಿದರು.

ಇಜಿಪ್ತದಲ್ಲಿ ಚುನಾವಣೆಯಾಗಿ, ಝುಗಲುಲ ಪಾಶ್ಯಾನ ಬಹುಮತವಾಯಿತು.

ಧಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ದುಂಗಳವಾರ ಪೇಟೆ, ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ

ಜಿಂದಿಗೆಯು ಆರುಲಕ್ಷದ ಮೇಲ್ಬಂಡು. ಚೆಕ್ಕು, ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ನಡೆಲ್ಪಡುವದು. ಕಾಯಿಮ ಮತ್ತು ಸೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ಕೊಡಿಯುವದು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ಆರ್. ಎಮ್. ಜ್ಹಾನ್ ಎಂಡ ಸನ್ಸ, ಹುಬ್ಬಳ್ಳಿ.

ಏಜಂಟ್ಸ ಫೋರ ಕಾರಬೋನಿಕ್ ಅಸಿಡ್ ಗ್ಯಾಸ, ಮ್ಯಾನುಫ್ಯಾಕ್ಚರರ್ ಆಫ್ ಏರೆಟೆಡ ವಾಟರ್ಸ.



ತಾವು ಆರ್ಡರ ಬೇಗ ಕಳಿಸಿರಿ

ನಮ್ಮಲ್ಲಿ ಸಿಗುವ ಸಾಮಾನುಗಳ ವಿವರ.



ಫುಲ್‌ಗ್ಯಾಸ ಸಿಲೆಂಡರಗಳು ಇಂಗ್ಲೀಷ ಮತ್ತು ಜರ್ಮನ ಪೆಟೆಂಟ ಕಾಡ್ಸ, ಎಮ. ಟಿ. ಸೋಡಾ ವಾಟರ ಬಾಟಲಗಳು, ೫೦೦ ನಂ. ಸಾಖರೀನ ಡಬ್ಬಿ ೧ ಪೌಂಡಿನವು. ಸೋಡಾವಾಟರ್ ಮಶಿನುಗಳು ಮತ್ತು ಎಲ್ಲ ತರದ ಕಲರಿನ ಬಾಟಲಿಗಳ ಎಸೆನ್ಸಗಳು, ಅಮೇರಿಕನ್ ಆಯಿಸ್ಕ್ರೀಮ ಸೋಡಾ, ಪಿನಾಪಲ್, ಕ್ರೀಮ ಸೋಡಾ, ಲೆಮನ್ ನಂ. ೧ ಲೆಮನ್ ಜ್ಯೂಯಿಸ್ ಸೋಡಾ ನಂ. ೧ ಮೇಂಗೋ, ಆರೇಂಜ, ಫಾಯಿನಾಪಲ್, ಪಿಕ್ಕ ಮಿ ಅಪ್, ಕ್ವಿನಿನ್ ಟಾನಿಕ್, ರಾಸ್ಬೆರಿ ನಂ. ೧ ರೋಜ ನಂ. ೧ ಸ್ಟೋನ ಜಿಂಜರ್ ಬೀರ ನಂ. ೧, ರಬ್ಬರ್ ರಿಂಗ್ಸ್, ಬೇರೆ ಇತರ ಮಶಿನರಿ ಪಾರ್ಟಗಳು ನಮ್ಮಲ್ಲಿ ಸಿಗುತ್ತವೆ. ಮತ್ತು ಶುದ್ಧ ಸೋಡಾ ಎಲ್ಲ ತರದ ಬಾಟ್ಲಿಗಳು ಸಿಗುತ್ತವೆ. ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಕೊಡುತ್ತೇವೆ. ನಮ್ಮಲ್ಲಿ ಕಲ್ಪಿಸಿದ ಮಿಲಿಟರಿ ಸಿಂಗಲ ಬಾಟ್ಲಿಗಳು ಸೋವಿ ದರದಿಂದ ಮಾರಲಿಕ್ಕೆ ಸಿಗುತ್ತವೆ.

ಅಡ್ರೆಸ್— R. M. John & Sons.
Mission Compound HUBLI

ಧಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

—o—

ಈ ಬ್ಯಾಂಕಿನಲ್ಲಿ ಮುದತು, ಸಾಲ್ಕು ಅರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದ್ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ

ನಿತ್ಯಪತ್ರಕ್ಕೆ

೧೨ ತಿಂಗಳಿಗೆ	೧೨—೮—೦	ರೂ
೬ ,,	೬—೦—೦	ರೂ
೩ ,,	೪—೦—೦	ರೂ
ವಾರಪತ್ರಕ್ಕೆ ೧ ವರ್ಷಕ್ಕೆ	೩—೧೨—೦	ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ, ಧಾರವಾಡ

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಒಳಗೆ ಐದು ಆಣೆ ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಒಳಗಳಿಗೆ ಇಮ್ಮಡಿ ಚಾರ್ಜು ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

LOKHANDE



ಬಕ್ಷೀಸು ಮತ್ತು ಆರ್ಡರ ಬೆಲೆಗೆ ಮೋಹಪಟ್ಟು ಮೋಸ ಹೋಗಬೇಡಿರಿ.

ಜೀನಸು ಉತ್ತಮ ಮತ್ತು ಗಂಟಿಗೆಯುಳ್ಳದ್ದು ನಮ್ಮ ಅಂಗಡಿಯಲ್ಲಿ ಫಾವರೆ ಲೂಬಾ, ವೆಸ್ಟ ಎಂಡ, ರೋಲಡಿಯನ, ಓಮೇಗಾ ಮತ್ತು ಸ್ವಿಸ ಜನರಲ ಕಂಪನಿ ಮತ್ತು ಬೇರೆ ಪ್ರಸಿದ್ಧ ಕಂಪನಿಗಳ ಗಡಿಯಾರಗಳು ಈಗೀಗ ಬಂದಿದ್ದು, ಇವು ನೋಡಲಿಕ್ಕೆ ಸುಂದರವಾಗಿದ್ದು ಗಟ್ಟಿ ಮತ್ತು ಸರಿಯಾಗಿ ಹೊತ್ತು ತೋರಿಸುವಂಥವುಗಳಾಗಿವೆ. ಐದು ರೂಪಾಯಿಯಿಂದ ಬೇಕಾದ ಬೆಲೆಯ ಗಡಿಯಾರಗಳು ಸಿಗುವವು. ಕೊಳ್ಳುವಾಗ ಪ್ರತಿಯೊಂದಕ್ಕೆ ಗ್ಯಾರಂಟಿ ಕೊಡುವೆವು. ಒಮ್ಮೆ ಬರಿಸಿ ನೋಡುವಿರಷ್ಟೇ?

ಪ್ರೊಪ್ರಾಯಿಟರ, ದತ್ತುರಾವ ಲೋಖಂಡೆ
ಜ ಕ್ಯಾಂಡ ಸ್ಟ್ಯಾಕ ಮಾರ್ಕೇಟ ಧಾರವಾಡ.

ಧಿ. ಅಂಕಲಗಿ ಬ್ಯಾಂಕ ಲಿಮಿಟೆಡ್

ಧಾರವಾಡ.

—o—

೧೯೧೩ ಇಸ್ವಿಯ

ಕಂಪನಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ಚಾಲೂ ಖಾತೆ, ಸೇವು, ಸೇವಿಂಗ್ಸ ದ ಡಿಪಾಜಿಟ, ಸಾಲ, ವತ್ತಿ, ಹುಂಡಿ, ಮುಂತಾದ ವ್ಯಾಪಕ್ತು ವ್ಯವಹಾರಗಳು ನಡಿಯುವವು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡುವವರಿಂದ ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ ರಿಂದ ೧೦-೩೦. ಸಾಯಂಕಾಲ ೩ ರಿಂದ ೬ ರವರೆಗೆ ನಡೆಯುವದು.

K. B. Ankalagi
ಮ್ಯಾನೇಜಿಂಗ ಡಾಯರೆಕ್ಟರ

ಈ ಪತ್ರವನ್ನು ಆನ್ನಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾಗ್ವಿಲಾಸ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

1443 R.B.N.

ನಿತ್ಯ ಪತ್ರ — ಬಿಡಿ ಪ್ರತಿ ಅರ್ಧ ಆಣೆ

ಸಂಪಾದಕರು:- ಅನಂತಾಚಾರ್ಯ ಬಾಳಾಚಾರ್ಯ ಜೋಶಿ.

ವರ್ಷ ೬೧ ಧಾರವಾಡ ಬುಧವಾರ ತಾರೀಖು ೧೬ ನೇ ಮಾರ್ಚ ೧೯೩೫ (ಸಂಚಿಕೆ ೬೩

ಕರ್ನಾಟಕ ತರುಣರಿಗೊಂದು!

ಬಿನ್ ಬಂಡವಾಳಿನ ವ್ಯವಸಾಯ!!

ಕಿರ್ಲೋಸ್ಕರ ನೇಗಿಲುಗಳ ಮಾರಾಟ !!!

ಕಿರ್ಲೋಸ್ಕರ ನೇಗಿಲು ಮತ್ತು ಗಾಣಗಳ ಉಪಯೋಗವು, ಮತ್ತು ಮಹತ್ವವು ಹಿಂದುಸ್ಥಾನದ ಪ್ರತಿಯೊಬ್ಬ ಒಕ್ಕಲಿಗನಿಗೆ ಗೊತ್ತಿದ್ದ ಮಾತು. ಇವುಗಳಿಗೆ ಗಿರಾಕಿಗಳು ಬಹಳ ಇದ್ದದ್ದರಿಂದ ಅವುಗಳನ್ನು ಮಾರಾಟ ಮಾಡಿಸುವ ದಲಾಲರಿಗೆ ಶ್ರಮ ಬೀಳದು. ಕಂಪನಿಯಿಂದ ದೊರೆಯುವ ಕ್ಯಾಟಲಾಗ, ಜಾಹಿರ ಪತ್ರಿಕೆ, ಗೋಡೆಯ ಚಿತ್ರಪಟ ಇತ್ಯಾದಿ ಜಾಹೀರಾತಿನ ಸಾಮಗ್ರಿಗಳನ್ನು ತರಿಸಿ ಹಳ್ಳಿಗಳಲ್ಲಿ ಪ್ರಸಾರ ಮಾಡಿದಲ್ಲಿ ಆರ್ಡರು ದೊರೆಯುವವು. ಈ ಆರ್ಡರ ಕೂಡ ೧/೪ ಹಣವನ್ನು ಇಸಕೊಂಡು ಕಂಪನಿಗೆ ಕಳುಹಿದಲ್ಲಿ ಕಂಪನಿಯು ಗಿರಾಕಿ ಯವರ ಹೆಸರಿನ ರಸೀದಿಯನ್ನು ಬಾಕಿ ಹಣಕ್ಕೆ ವ್ಹಿ. ಪಿ. ಮಾಡಿ ದಲಾಲರಿಗೆ ಕಳಿಸಿಕೊಡುವದು.

ಕಮೀಶನ್ ದರಗಳ ಬಗ್ಗೆ ಇಂದೇ ಕಾಗದವನ್ನು ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ } ಕಿರ್ಲೋಸ್ಕರವಾಡಿ- ಜಿಲ್ಹಾ ಸಾತಾರಾ.

ಫಕ್ತ ೩ ಆಣೆಯೊಳಗೇ ಆಶ್ಚರ್ಯಕಾರಕ ವ ರಾಮಬಾಣ ಉಪಾಯ

ಮೊಮೆಂಟ ಕ್ಯೂಅರ

ತಲೆಶೂಲಿ, ಅರ್ಧ ತಲೆಶೂಲಿ, ಶೀತ, ಉಷ್ಣ ವ ನಿತ್ರಾಣ ವಗೈರೆಗಳಿಂದಾದ ಮಸ್ತಕಶೂಲಿಯು ಶೀಘ್ರದಿಂದ ನಿರ್ಮೂಲ ಮಾಡಲು "ಮೊಮೆಂಟ ಕ್ಯೂಅರ" ನಿಗೆ ಸರಿಸಮಾನವಾದ ಔಷಧವು ಬೇರೆ ಇಲ್ಲ. ಹೆಚ್ಚು ಜನರು ಮಸ್ತಕಶೂಲಿಯನ್ನು ಸಹಿಸಲು ಆಗದೆ ಮಸ್ತಕಕ್ಕೆ ವಸ್ತ್ರಕಟ್ಟಿ ಬಹಳ ವೇಳೆ ಅನ್ನ ತ್ಯಾಗಿಸುತ್ತಾರೆ. ಆದರೆ ನಿರಾಶರಾದವರು ಮೊಮೆಂಟ ಕ್ಯೂಅರದ ಪುಡಿಯನ್ನು ಬಿಸಿ ಚಹಾ ದೊಂದಿಗೆ ಅಥವಾ ಬಿಸಿ ನೀರಿನೊಂದಿಗೆ ಹೊಟ್ಟೆಯಲ್ಲಿ ತಕ್ಕೊಂಡಲ್ಲಿ ಒಂದೇ ಕ್ಷಣದಲ್ಲಿ ಮಸ್ತಕಶೂಲಿಯು ನಿಲ್ಲುವದು. ಇದಕ್ಕೆ ಅನೇಕ ಶಿಫಾರಸ ಪತ್ರಗಳು ಉಂಟು.

೧ ಪೇಟಿಗೆ ೩ ಆಣೆ. ಸ್ಯಾಂಪಲ ಸಲುವಾಗಿ ೩ ಆಣೆ ಪೋಸ್ಟ ತಿಕೀಟುಗಳನ್ನು ಕಳಿಸಿದಲ್ಲಿ ಕಳಿಸಲಾಗುವದು.

ವಿಳಾಸ— ಬಿ ಕನಕಾದಿತ್ಯ ಮೆಡಿಕಲ ಸ್ಟೋರ್ಸ, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ, ಸ್ಟೇಶನರೋಡ ಹುಬ್ಬಳ್ಳಿ.

ನೋಟೀಸು.

—೦—

ಯಲ್ಲಪ್ಪಾ ಕೋಮ ನಿಂಗಪ್ಪಾ ಕರಿಗಾರ ಜಾತೀಲ ಲಿಂಗಾಯತ ರಾಹಣಾರ ಹುಬ್ಬಳ್ಳಿ ಇವಗೆ— ಕಳಗಿ ಹೆಬ್ಬಟ್ಟಿನ ಗುರ್ತಾ ಮಾಡುವ ನಿಂಗಪ್ಪಾ ತಂದೆ ರಾಮಪ್ಪಾ ಕರಿಗಾರ ಮಾಹಿತಗಾರ ಸಾ ಕೀನ ಹುಬ್ಬಳ್ಳಿ ಇವರು ನಿನಗೆ ಈ ನೋಟೀಸಿನಿಂದ ತಿಳಿಸುವದೇನಂದರೆ— ನೀನು ನನ್ನ ಮಗನ ಹೆಂಡತಿ ಯಾಗಿದ್ದು ನಿನ್ನ ಹೊಟ್ಟೆಯಿಂದ ಮೂರು ಗಂಡುಮಕ್ಕ ಳಾಗಿವೆ. ಎರಡು ನನ್ನ ಹತ್ತರ ಇದ್ದು ಮೂರನೆ ಯವನ್ನು ನೀನು ತಕ್ಕೊಂಡು ಹೋಗಿ, ಬೇರೆ ಕಡೆಗೆ ಇರುತಿ. ಈ ಮಗುವಿನ ಮೇಲೆ ನನ್ನ ಹಕ್ಕು ಇದ್ದು ಆ ಕೂಸನ್ನು ನನ್ನ ವಶಕ್ಕೆ ಕೊಡಬೇಕು ಮತ್ತು ನಾನು ಈ ನೋಟೀಸಿನಿಂದ ನಿನ್ನ ಕಡಿದ ಫಟಸ್ಫೋಟ ಮಾಡಿಕೊಂಡಿರುತ್ತೇನೆ ನಿನ್ನ ಹಕ್ಕು ನನ್ನ ಸ್ಥಾವರ ಜಂಗಮ ಆಸ್ತಿಯ ಮೇಲೆ ಮತ್ತು ನನ್ನ ಹಾಗು ನನ್ನ ಮಕ್ಕಳ ಮೇಲೆ ಯಾವ ರೀತಿ ಯಿಂದಲೂ ನಡೆಯದಂತೆ ಕಾಯದೆ ಮತ್ತು ಧರ್ಮ ಶಾಸ್ತ್ರದಿಂದ ಉಳಿಯಲಿಲ್ಲ. ನೀನು ನಿನ್ನ ಮನಸಿಗೆ ಬಂದಂತೆ ನಡಿಯಬೇಕು. ನೀನು ಈ ನಂತರ ಹಡೆದರೆ ಅದು ನನ್ನ ಸಂತತಿಯಾಗಲಾರ ದು. ಅದಕ್ಕೆ ಜನನ ರಜಿಸ್ಟರದಲ್ಲಿ ಜನಕ ತಂದೆ ಎಂದು ನನ್ನ ಹೆಸರು ಹಚ್ಚಸಬಾರದು. ಹೆಸರು ಹಚ್ಚಿಸುವ ಅಧಿಕಾರ ನಿನ್ನದು ಇದ್ದು, ನನಗೆ ಇರು ವದಿಲ್ಲ ನೀನು ಒಂದು ವೇಳೆ ಲುಚ್ಚೇಗಿರಿಯಿಂದ ನನ್ನ ಹೆಸರು ಹಚ್ಚಿಸಿದರೆ ಅದು ಕಾಯದೆಶೀರ ಆಗಲಾ ರದು. ಅಂತಾ ಕೊಟ್ಟ ನೋಟೀಸು ತಾರೀಖು ೧೭ ಮಾರ್ಚ ೧೯೩೫ ನೇ ಇಸವಿ

ಈ ಎಡಗೈ ಹೆಬ್ಬಟ್ಟಿನ ಗುರ್ತಾ ನಿಂಗಪ್ಪಾ ತಂದೆ ರಾಮಪ್ಪಾ ಕರಿಗಾರ ಇವರ ಕೈದು ಇರು ತ್ತದೆ.

ವಿಜಯ.

ಧಾರವಾಡ ತಾ- ೧೮-೩-೨೫ ನೇ ಇಸ್ವಿ

ಸ್ವರಾಜ್ಯ ಪಕ್ಷದ ಜಯವು.

—o—

ನಾಗಪೂರದಲ್ಲಿ ಸ್ವರಾಜ್ಯ ಪಕ್ಷೀಯರು ಮಂತ್ರಿಗಳಾಗಲಿಕ್ಕೆ ಒಪ್ಪದಿದ್ದದ್ದು ಸ್ವರಾಜ್ಯ ಪಕ್ಷದ ಜಯವೆನಿಸುತ್ತದೆ. ಬಂಗಾಲದಲ್ಲಿ ಸ್ವರಾಜ್ಯ ಪಕ್ಷವನ್ನು ಸ್ವತಂತ್ರರು ಕೂಡಿಸಿದರೇ ಬಹುಮತವಾಗುತ್ತದೆ. ನಾಗಪೂರದ ಪರಿಸ್ಥಿತಿಯು ಹೀಗಿರುವದಿಲ್ಲ. ಇಲ್ಲಿ ಇವರ ಬಹುಮತವಿರುವದು. ಗೃಹಕೃತ್ಯದ ಅನಾನುಕೂಲತೆಯಿಂದಾಗಲಿ ಬೇರೆ ಬೇರೆ ಕಾರಣದಿಂದಾಗಲಿ ನಾಲ್ಕಾರು ಜನ ಮೆಂಬರರು ಕೌನ್ಸಿಲಕ್ಕೆ ಬರದಿದ್ದರೂ ಅವರ ಬಹುಮತವಾಗುವಷ್ಟು ಸಂಖ್ಯಾಬಲವುಂಟು. ಬಂಗಾಲವು ಡೋಲಾಯಮಾನವಾದ ಸ್ಥಿತಿಯಲ್ಲಿರುವಾಗ, ನಾಗಪೂರವು ದಿವಾನಗಿರಿಯನ್ನು ಹೊಂದಿದ್ದರೆ- ಹಿಂದುಸ್ಥಾನ ಮಾತ್ರವಲ್ಲ; ವಿಲಾಯತಿಯಲ್ಲಿ ಸಹ ಈ ಪಕ್ಷದ ಚಿಗೆ ಚಲ್ಲಿ ಹೋಗುತ್ತಿತ್ತು. ಅಸಹಕಾರವನ್ನು ಕೊಂದೆವೆಂದು ಸರಕಾರದವರು ಆನಂದ ಪಟ್ಟಿರುವರು. ಅದರ ಹೊಟ್ಟೆಯೊಳಗಿಂದ ಹುಟ್ಟಿದ ಈ ಭೂತವು ಸೆಟೆದು ಬದ್ದಿದ್ದರೆ- ಅರಸರು ಜಯಭೇರಿ ಹೊಡೆಯುತ್ತಿದ್ದರು. ಆ ಪ್ರಸಂಗವನ್ನು ನಾಗಪೂರದವರು ತಪ್ಪಿಸಿದರು, ತಾವು ಅಂಗೀಕರಿಸಿದ ವ್ರತವನ್ನು ಬಿಡಲಿಲ್ಲೆಂಬದು ಸಂತೋಷದ ಸಂಗತಿಯಾಗಿರುವದು ಮತ್ತು ಈ ಗಟ್ಟಿಗತನವು ಹಿಂದುಸ್ಥಾನದ ತುಂಬ ಇವರಿಗೆ ಕೀರ್ತಿ ತಂದಿತು. ಇದರಿಂದ ಸ್ವರಾಜ್ಯ ಪಕ್ಷೀಯರಲ್ಲಿ ಒಕ್ಕಟ್ಟು ಇರುತ್ತದೆಂದು ಜಗತ್ತಿಗೆ ಸಾರಿ ಹೇಳಿದಂತಾಯಿತು.

ಸ್ವರಾಜ್ಯ ಪಕ್ಷೀಯರು ದ್ವಿದಳ ದೊರೆತನವನ್ನು ಧ್ವಂಸ ಮಾಡುವ ಸಂಕಲ್ಪದಿಂದ ಕೌನ್ಸಿಲದಲ್ಲಿ ಸೇರಿದ್ದಾರೆ. ಇವರಿಗೆ ಅನುಕೂಲವಾಗಿ ಮವಾಳರು ಸಹ ಅಭಿಪ್ರಾಯಪಟ್ಟು, ಈ ಕಾರಭಾರವನ್ನು ಹಳಿದಿದ್ದಾರೆ. ದ್ವಿದಳ ದೊರೆತನವು ತೀರ ಅಸಹ್ಯವಾಗಿರುತ್ತದೆಂದು ಸ್ಪಷ್ಟವಾದ ಬಳಿಕ, ಅದರ ಹಂಬಲ ತೊರೆಯುವದೆಂದರೆ- ಆನೆಯು ಕಸವನ್ನು ತನ್ನ ತಲೆಯ ಮೇಲೆ ಚಲ್ಲಿಕೊಳ್ಳುವಂಥ ಹುಡುಗಾಟಿಕೆಯಾಗುತ್ತದೆ. ಇದರ ತರುವಾಯ ಸರಕಾರವು ಹಿಂದೀ ಪ್ರಜರ ಸಾಕ್ಷಿಗ್ಯವನ್ನಷ್ಟು ಇರುತ್ತದೆಂಬದು ಮುಂದಿನ ಕಪಿಊಟಿಯಿಂದ ವ್ಯಕ್ತವಾಗಿದೆ. ಡಾಯರ್ಕಿ, ದಟಪ್ಪಳಿಕೆ, ಮುದಿಮನನ ರಿಪೋರ್ಟುಗಳು ಹುಣ್ಣಿನ ಮೇಲೆ ಉಪ್ಪು ಸವರುವಂತಾಗಿವೆ. ದೇಶದ ಪರಿಸ್ಥಿತಿಯು ಈ ರೀತಿಯಾಗಿ ಶೋಚನೀಯ ಮತ್ತು ಗರ್ಹಣೀಯವಾಗಿರುವಾಗ ದಿವಾನಗಿರಿಯ ಅಂಗೀಕಾರ ಮಾಡುವದೆಂದರೆ- ತಮಗೇನೂ ಮನೋವ್ಯಥೆ ಇಲ್ಲವೆಂದು ಒಪ್ಪುವಂತಾಗುತ್ತದೆ. ಇದೇ ವಿಚಾರದಿಂ ಪಂಡಿತ ಮೋತೀಲಾಲರೂ ದೇಶಬಂಧು ದಾಸರೂ ದಿವಾನಗಿರಿಯ ಸ್ವೀಕಾರ ಮಾಡಬಾರದೆಂದು ಸಂದೇಶ ಕಳಿಸಲು, ಅದಕ್ಕೆ ಮರ್ಹಾಠ ನಾಗಪೂರ ಪ್ರಾಂತಗಳ ಮೆಂಬರರು ಸಮ್ಮತ ಪಟ್ಟಿದ್ದು ಕೊನೆಯಲ್ಲಿ ಪರಿಣಮಿಸುವದೆಲ್ಲ ಸುಖಪ್ರದವಾಗುವದೆಂದು ಹೇಳುವಂತಾಗಿರುತ್ತದೆ.

ಹಿಂದೂ ಜನರಿಗೆ ಈರ್ವರು ಮುಸಲಮಾನರ ಸೋಜಿಗದ ಬುದ್ಧಿಯ ಮಾತು.

—o—

ಪೇಶಾವರದಲ್ಲಿ ಡಾಕ್ಟರ ಕಿಚಲು ಮತ್ತು ಜಮೀನದಾರ ಪತ್ರದ ಸಂಪಾದಕರಾದ ಮೌಲಾನಾ ಜಾಫರಲ್ಲಿ ಖಾನರ ಭಾಷಣಗಳಾದವು. ಅವುಗಳೊಳಗಿನ ಕೆಲವು ಸಂಗತಿಗಳನ್ನು ಇಲ್ಲಿ ಕೊಡುತ್ತೇವೆ.

ಡಾಕ್ಟರ ಕಿಚಲು—

ಪಂಡಿತ ಮದನ ಮೋಹನ ಮಾಲವಿಯಾ ಮತ್ತು ಲಾಲಾ ಲಜಪತರಾಯರಿಂದಲೇ ಹಿಂದೂ ಮುಸಲಮಾನ ದಂಗೆಗಳಾಗಲು ಕಾರಣವಾಯಿತು. ಬಂಗಾಲಿಗಳು ಬಾಬು ಸುರೇಂದ್ರನಾಥ, ಮದ್ರಾಸಿಗಳು ಅನಿಬಿಸ್ಸೆಂಟರನ್ನು ಮೂಲೆಗುಂಪು ಮಾಡಿದಂತೆ ನೀವು ಇವರನ್ನು ಮಾಡಿರಿ. ನಮ್ಮ ತಾಂಜೀಮ ಕೆಲಸಕ್ಕೆ ನೀವೆಷ್ಟು ಮಾತ್ರಕ್ಕೂ ಅಡ್ಡ ಬರಕೂಡದು. ಕಾಂಗ್ರೆಸವು ೪೦ ವರ್ಷಗಳಲ್ಲಿ ಮಾಡದಂಥ ಕೆಲಸವನ್ನು ಖಿಲಾಫತವು ಒಂದೇ ವರ್ಷದಲ್ಲಿ ಮಾಡಿತು. ತಾಂಜಿಮ ಕೆಲಸದಲ್ಲಿ ನೀವು ವಿಘ್ನ ತಂದಿದ್ದಾದರೆ ನಾವು ಅಫಗಾಣ ಮತ್ತು ಬೇರೆ ಮುಸಲಮಾನ ರಾಜ್ಯಗಳ ಕೂಡ ಸಹಕಾರ ಮಾಡಿ, ಹಿಂದುಸ್ಥಾನದಲ್ಲಿ ಪುನಃ ಮುಸಲಮಾನ ರಾಜ್ಯ ಸ್ಥಾಪಿಸುವೆವು. ಇಲ್ಲವಾದರೆ ನಿಮಗೆ ಸ್ವರಾಜ್ಯ ಸ್ಥಾಪಿಸಲು ಅನುಕೂಲರಾಗುವೆವು.

ಮೌಲಾನಾ ಜಾಫರಲ್ಲಿಖಾನ.

ಈ ದೇಶದಲ್ಲಿ ಮುಸಲಮಾನರು ಬಲಿಷ್ಠರಾಗುವಂತೆ ನಾವು ಕರ್ತವ್ಯ ಕರ್ಮ ಮಾಡತಕ್ಕದ್ದು. ಸ್ವರಾಜ್ಯದ ಚಳವಳಿಯು ಸತ್ತು ಹೋಯಿತು. ಬ್ರಿಟಿಶರ ಯುನಿಯನ ಜಾಕ ನಿಶಾನೆಯು ಮೆರೆಯುವದು. ನಮ್ಮ ಪೂರ್ವಜರು ೮೦೦ ವರ್ಷಗಳ ವರೆಗೆ ಈ ದೇಶದಲ್ಲಿ ಆಳಿದರು. ನಾವು ನೀಚ ದರ್ಜೆಯಲ್ಲಿರಲಾರೆವು. ಇಂಗ್ಲಿಷರು ಈ ದೇಶದಲ್ಲಿರಬೇಕಾಗಿರುವಂತೆ, ನಾವೂ ರಾಜ್ಯ ಕರ್ತರಾಗಿರಬೇಕೆಂದಿದ್ದೇವೆ. ಇಂಗ್ಲಿಷರು ನಮ್ಮ ಬಂಧುಗಳಾಗಿದ್ದಾರೆ. ಇಬ್ಬರೂ ಆದಮನ ವಂಶಸ್ಥರೇ! ಇಂಗ್ಲಿಷರ ಕೂಡ ನಮ್ಮ ಜಗಳವಿಲ್ಲ. ಹಿಂದೂ ಜನರು ಮೂರ್ತಿ ಪೂಜಕರಾಗಿದ್ದಾರೆ. ಇವರು ಮೂರ್ತಿ ಪೂಜೆಯನ್ನು ಬಿಟ್ಟು ಕೊಡುವ ತನಕ ರಾಜ್ಯವಾಳಲಿಕ್ಕೆ ಪಾತ್ರರಾಗಲಾರರು. ಗ್ರೀಕರು, ಐಗುಪ್ತರು ಮತ್ತು ಬೆಬಿಲೋನಿಯನ್ನರು ಹೆಸರಿಲ್ಲದವರಾಗಲಿಕ್ಕೆ ಅವರು ಮೂರ್ತಿ ಪೂಜಕರಾದದ್ದೇ ಕಾರಣ. ತಾವು ಜೀವನ ಮಾಡಿಕೊಂಡು ಇರಬೇಕೆಂದು ಹಿಂದೂ ಜನರು ಅಪೇಕ್ಷಿಸಿದರೆ- ಅವರು ಮೂರ್ತಿ ಪೂಜೆಯನ್ನು ಬಿಟ್ಟುಕೊಡತಕ್ಕದ್ದು.

ಮಹಾತ್ಮರಿಗೂ ಮಹಾರಾಣಿಯವರಿಗೂ ಸಂಭಾಷಣ.

—o—

ಈ ಮೊದಲು ಪ್ರಸಿದ್ಧವಾದ ಮೇರೆಗೆ ಮಹಾತ್ಮರು ಮಹಾರಾಣಿ ರೀಜಂಟರನ್ನು ಕಾಣುವದಕ್ಕಾಗಿ ದಯ ಮಾಡಿಸಿದರು. ದಿವಾನ ಪೇಷಕಾರ ಮೊದಲಾದ ದೊಡ್ಡ ಜನರು ಮಹಾತ್ಮರ ಸ್ವಾಗತ ಮಾಡಿ ಅವರನ್ನು ಮಹಾರಾಣಿಯವರ ಹತ್ತಿರ ಕರಕೊಂಡು ಹೋದರು. ಮಹಾರಾಣಿಯವರು ಅಂತ್ಯಜೋದ್ಧಾರದ ವಿಷಯವಾಗಿ ಸ್ವಂತ ಸಹಾನುಭೂತಿ ತೋರಿಸಿದರು. ಆದರೆ ಧರ್ಮಾಭಿಮಾನಿಗಳ ಹಾಗು ಕೌನ್ಸಿಲದ ವಿರೋಧದ ಮೂಲಕ ಈಗಿನ ಸ್ಥಿತಿಯಲ್ಲಿ ಒದಲು ಮಾಡಲಿಕ್ಕಾಗುವದಿಲ್ಲ. ಲೋಕಮತವನ್ನು ಒಲಿಸಿಕೊಳ್ಳಿರಿ. ಅಂದರೆ ಈ ಕೆಲಸವು ನಿರಾಯಾಸದಿಂದ ಕೈಗೂಡುವದೆಂದು ಮಹಾರಾಣಿಯವರು ಮಹಾತ್ಮರಿಗೆ ಹೇಳಿದರು. ಮಹಾತ್ಮರು ಈ ಮಾತಿಗೆ ಸಂತೋಷಪಟ್ಟು, ಅವರ ಸಹಾನುಭೂತಿಯ ಬಗ್ಗೆ ಮಹಾರಾಣಿಯವರ ಅಭಿನಂದನ ಮಾಡಿದರು.

ಮಹಾರಾಣಿಯವರನ್ನು ಕಂಡು ಬಂದ ನಂತರ ಮಹಾತ್ಮರು ನಾರಾಯಣ ಗುರುವಿನ ದರ್ಶನಕ್ಕೆ ಹೋದರು. ಇವರು ಅಂತ್ಯಜರ ಗುರುಗಳು. ಅಂತ್ಯಜೋದ್ಧಾರದ ವಿಷಯವಾಗಿ ಮಹಾತ್ಮರು ನಡೆಸಿರುವ ಚಳವಳಿಯನ್ನು ಶ್ಲಾಘಿಸಿ, ದೇಶ ಕಲ್ಯಾಣಕ್ಕಾಗಿ ತಾವೂ ದಿನಾಲು ಸ್ತುತಿಸುವಂತೆ ಗುರುಗಳು ಮಹಾತ್ಮರಿಗೆ ಆಶ್ವಾಸನ ಕೊಟ್ಟರು.

ಮದ್ರಾಸ ಪಟ್ಟಣದಲ್ಲಿ ಅಖಿಲ ಭಾರತೀಯ ದೇವಾಂಗ ಪರಿಷತ್ತು ಕೂಡುವದು. ಸೇಲಮ ಮ್ಯುನಿಸಿಪಾಲಿಟಿಯ ಚೇರಮನರಾದ ಶ್ರೀ. ವೆಂಕಟಪ್ಪನವರು ಅಧ್ಯಕ್ಷರಾಗುವರು.

ದಿವಾನರ ವಿರುದ್ಧ ಮೆಂಬರರ ಸಂತಾಪ.

—o—

ತ್ರಾವಣಕೋರ ಕೌನ್ಸಿಲದ ಮೆಂಬರರು ದಿವಾನರ ಉದ್ಧಾಮತನದ ವರ್ತನದ ವಿರುದ್ಧ ಆಕ್ಷೇಪಣೆಗೊಂಡು ಕೌನ್ಸಿಲ ಸಭೆ ಬಿಟ್ಟು ಎದ್ದು ಹೋದ ಸಂಗತಿಯನ್ನು ಈ ಮೊದಲು ಬರೆದಿದ್ದೇವೆ. ಕೌನ್ಸಿಲದಲ್ಲಿ ೮೫ ಜನ ಮೆಂಬರರಿದ್ದು ಇವರಲ್ಲಿ ೮೦ ಜನರು ದಿವಾನರ ವಿರುದ್ಧ ಮುನಿಸಿಕೊಂಡಿದ್ದಾರೆ. ಇವರು ಕೌನ್ಸಿಲಕ್ಕೆ ಹೋಗಿ ಹೊರಗೇ ನಿಂತುಕೊಂಡರು. ದಿವಾನರು ಕರೆದರೂ ಒಳಗೆ ಹೋಗಲಿಲ್ಲ. ಆಗ ದಿವಾನರು ಕೌನ್ಸಿಲ ಸಭೆಯು ಬಂದಾಯಿತೆಂದು ಹೇಳಿ ಕಚೇರಿಯ ದಾರಿ ಹಿಡಿದರು. ದಿವಾನರ ವರ್ತನವು ಉದ್ಧಾಮತನದ್ದಾಗಿರುತ್ತದೆ. ಆದ್ದರಿಂದ ಇವರನ್ನು ಕೆಲಸದಿಂದ ತೆಗೆದು ಹಾಕಬೇಕೆಂದು ಮೆಂಬರರು ಮಹಾರಾಣಿ ರೀಜಂಟರವರಿಗೆ ವಿನಂತಿ ಮಾಡಿಕೊಂಡಿದ್ದಾರೆ.

———

ತಲೆಪಟ್ಟಿಯ ವಿರುದ್ಧ ಠರಾವು.

—o—

ಬ್ರಹ್ಮದೇಶದಲ್ಲಿ ಥಾಯವಾಡಿ ಮುಂತಾದ ಜಿಲ್ಲೆಗಳಲ್ಲಿ ತಲೆಪಟ್ಟಿ ಇರುತ್ತದೆ. ಇದು ವ್ಯಕ್ತಿಮಾತ್ರನಿಗೆ ಅಪಮಾನಕರವಾದ ಕರವಾಗಿರುವದರಿಂದ, ಇದನ್ನು ತೆಗೆದು ಹಾಕಬೇಕೆಂದು ಬ್ರಹ್ಮೀ ಜನರು ಅದ್ಭುತವಾದ ಚಳವಳಿ ಮಾಡಿದ್ದಾರೆ. ಸರಕಾರದವರು ಇವರ ನೂರಾರು ಸಂಸ್ಥೆಗಳನ್ನು ಬೇಕಾಯದೇಶೀರ ಮಾಡಿ, ಅನೇಕರನ್ನು ತುರಂಗಕ್ಕೆ ಕಳಿಸಿದ್ದಾರೆ. ಈ ವಿಷಯವು ಅಲ್ಲಿಯ ಕಾಯದೆ ಕೌನ್ಸಿಲ ಸಭೆಯಲ್ಲಿ ಬಂತು. ಇದನ್ನು ತೆಗೆದು ಹಾಕಬೇಕೆಂದು, ಹಿಂದೂ, ಬ್ರಹ್ಮೀ ರಾಷ್ಟ್ರೀಯ ಮವಾಳರಾದಿ ಎಲ್ಲ ಮೆಂಬರರು ಮತ ಕೊಟ್ಟರು. ತಲೆ ಪಟ್ಟಿಯಿಂದ ವರ್ಷಕ್ಕೆ ೫೯ ಲಕ್ಷದ ಆದಾಯವಿರುತ್ತದೆ. ಇದನ್ನು ನಿಲ್ಲಿಸಿದರೆ ವಿದ್ಯೆ, ವೈದ್ಯಕಿ ಮುಂತಾದ ಖಾತೆಗಳಿಗೆ ದ್ರವ್ಯಾನುಕೂಲತೆಯು ಕಡಿಮೆಯಾಗುವದೆಂದು ಸರಕಾರದವರು ಉತ್ತರ ಕೊಟ್ಟು, ದ್ರವ್ಯದ ಹೊಸ ಹಾದಿಯನ್ನು ಹುಡುಕಲು ಒಂದು ಕಮಿಟಿ ನೇಮಿಸಬೇಕೆಂದು ಸೂಚಿಸಿದರು. ಮೆಂಬರರು ಈ ಸೂಚನೆಯನ್ನು ಅಂಗೀಕರಿಸದೆ, ಮೂಲ ಠರಾವನ್ನು ಪಾಸ ಮಾಡಿದರು. ಸಿವ್ಹಿಲ ಸರ್ವಂಟರ ಭತ್ತೆ, ಸಂಬಳವನ್ನು ಹೆಚ್ಚಿಸಲಿಕ್ಕೆ ಸರಕಾರಕ್ಕೆ ದಾರಿ ಸಿಗುತ್ತದೆ ಅಪಮಾನವೆನಿಸುವಂಥ ಕರ ತೆಗೆಯುವದಕ್ಕೆ ದಾರಿ ಸಿಗುವದಿಲ್ಲವಲ್ಲ!!

ದೇಶಬಂಧು ದಾಸರು ಪಾಟಣಾದಿಂದ ಕಲಕತ್ತೆಗೆ ಬಂದರು. ದೇಹಾರೋಗ್ಯವಾಗಿದೆ.

ಝಗಲೂಲ ಪಾಶಾನ ಚುನಾವಣೆ ಮತ್ತು ಲೋಕ ಪಕ್ಷದ ಜಯವು.

—o—

ಇಜಿಪ್ತದಲ್ಲಾದ ಚುನಾವಣೆಯಲ್ಲಿ ಝಗಲೂಲ ಪಾಶಾನು ಪ್ರಚಂಡ ಬಹುಮತದಿಂದ ಚುನಾಯಿಸಲ್ಪಟ್ಟನು. ಮತ್ತು ಈತನ ಪಕ್ಷದ್ದೇ ಬಹುಮತವಾಯಿತು. ಝಗಲೂಲ ಪಾಶಾನ ಚುನಾವಣೆಯಾಗಬಾರದೆಂದು ಸರಕಾರದವರು ವಿಶ್ವಪ್ರಯತ್ನ ಮಾಡಿದರು. ಜನರು ಪಾಶಾ ಮತ್ತು ಇವರ ಬಣದ ಮುಖ್ಯ ಮುಖ್ಯ ಜನರ ಸನಿಗೆ ಹೋಗದಂತೆ ಪೋಲೀಸ ಬಂದೋಬಸ್ತು ಇಟ್ಟಿದ್ದರು. ಇವರು ಚುನಾವಣೆಯ ವೇಳೆಯಲ್ಲಿ ವ್ಯಾಖ್ಯಾನ ಕೊಡುವದನ್ನು, ಹೊಸ ಪತ್ರಿಕೆಗಳಿಂದ ತಮ್ಮ ಪಕ್ಷ ಸಮರ್ಥನ ಮಾಡುವದನ್ನೂ ಕೂಡ ಒತ್ತಾಯದಿಂದ ಬಂದು ಮಾಡಿದ್ದರು. ಆದರೂ ಪಾಶಾನ ಪಕ್ಷದ್ದೇ ಬಹುಮತವಾಯಿತು.

———

ಮಸ್ತಕಾಭಿಷೇಕ.

—o—

ಶ್ರವಣ ಬೆಳಗೋಳದಲ್ಲಿ ಶ್ರೀ ಗುಮ್ಮಟೇಶ್ವರನ ಮಸ್ತಕಾಭಿಷೇಕವು ಬಹು ಸಮಾರಂಭದಿಂದ ನೆರವೇರಿತು. ಮೈಸೂರಿನ ಮಹಾರಾಜರು ದಿವಾನ ಮೊದಲಾದ ಅಧಿಕಾರಿಗಳ ಕೂಡ ಅಲ್ಲಿಗೆ ಹೋಗಿ ಜೈನ ಪರಿಷತ್ತನ್ನು ತೆರೆಯುವ ಭಾಷಣ ಮಾಡಿದರು. ಪರಿಷತ್ತಿನ ಅಧ್ಯಕ್ಷರಾದ ಇಂದೂರಿನ ಶೇಟ ಹುಕುಮಚಂದರು ಮಹಾರಾಜರಿಗೆ ಬೆಳ್ಳಿಯ ಕರಂಡಕವನ್ನೂ ಮುತ್ತಿನ ಸರವನ್ನೂ ಕಾಣಿಕೆಯಾಗಿ ಕೊಟ್ಟರು.

———

ಮಳೆ ನೋಟವು

—o—

ಕಳೆದ ನಾಲ್ಕು ದಿವಸಗಳಿಂದ ಪ್ರಾಂತದಲ್ಲಿ ಮೋಡ ಹಾಕಿ; ಸಣ್ಣ ಹನಿಗಳು ಉದುರಿದವು. ಇದು ಕೋಚೀನ ತ[illegible]ದಿಂದ ಬಂದಿದೆ. ಅಲ್ಲಿ ಹೆಚ್ಚಾಗಿ ಮಳೆ ಬಿದ್ದಿದೆ. ಕಾಲಿಕತ್ತದಲ್ಲಿ ೩, ಮಂಗಳೂರಲ್ಲಿ ೧|| ಕೋಚೀನದಲ್ಲಿ ೧ ಇಂಚು ಮಳೆ ಬಿದ್ದದೆ.

———

ಆನೆಯ ಅದ್ಭುತ ಕೋರೆ.

ಪಾರ್ಕರನೆಂಬ ಸಾಹೇಬರು ಲಂಕೆಯಿಂದ ಮುಂಬಯಿಗೆ ಆನೆಯ ಎರಡು ಕೋರೆಗಳನ್ನು ತಂದಿದ್ದಾರೆ. ಒಂದೊಂದು ಏಳು ಫೂಟು ಎಂಟು ಇಂಚು ಉದ್ದವಾಗಿದ್ದು, ಸುತ್ತಳತೆಯು ೧೮ ಇಂಚು ಇರುತ್ತದೆ.

———

ವಿವಿಧ ವರ್ತಮಾನಗಳು

—o—

ಮದ್ರಾಸ ಪಟ್ಟಣದಲ್ಲಿ ಧಳವಾಯಿಪಾಳೆಯದ ಒಬ್ಬ ಶ್ರೀಮಂತ ರಡ್ಡೀ ಗೃಹಸ್ಥರ ಮನೆಯಲ್ಲಿ ಮದುವೆಯಾಯಿತು. ಶ್ರೀ. ರಂಗಶ್ರೇಷ್ಠಿ ಎಂಬವರು ಇವರಿಗೆ ಒಂದು ರಾಟಿಯನ್ನು ಉಡುಗರೆ ಕೊಟ್ಟರು

———

ಬರುವ ತಿಂಗಳಲ್ಲಿ ಪುಣೆಯಲ್ಲಿ ಮಹಾರಾಷ್ಟ್ರ ಹಿಂದೂ ಧರ್ಮ ಪರಿಷತ್ತು ಕೂಡುವದು. ಹೈದರಾಬಾದಿನ ಶ್ರೀ. ವಾಮನನಾಯಕರು ಸ್ವಾಗತ ಕಮಿಟಿಯ ಚೇರಮನ್ನರೂ, ಗೋಸ್ವಾಮಿ ರಾಜಾ ಬಹಾದ್ದೂರ ನರಸಿಂಗರಾಜರು ಅಧ್ಯಕ್ಷರೂ ಆಗುವರು.

———

ಮದುವೆ ಮುಂತಾದ ಮಂಗಲ ಕಾರ್ಯಗಳಲ್ಲಿ ಸರೆ ಮತ್ತು ಅಫುವಿನ ಉಪಯೋಗ ಮಾಡಬಾರದೆಂದೂ, ಸಂಸ್ಥಾನದಲ್ಲಿ ಕೆಲಸವನ್ನು ಬಯಸುವವರು ಇವಾದ ವ್ಯಸನಗಳುಳ್ಳವರಾಗಿರಬಾರದೆಂದೂ ಕಾಠೇವಾಡದ ಒಂದು ಸಂಸ್ಥಾನವಾದ ಜಸದಣದ ಮಹಾರಾಜರು ಸರಕ್ಯೂಲರ ತೆಗೆದಿದ್ದಾರೆ.

———

ಜರ್ಮನಿಯಲ್ಲಿ ಬೋಲ್ಶೆವಿಕ ಪಂಥಾನುಯಾಯಿಗಳಿಗೂ, ಪೋಲೀಸರಿಗೂ ಚಕಮಕಿಯಾಗಿ ಆರು ಜನರು ಸತ್ತರು. ಅನೇಕರು ಘಾಯವಾದರು.

———

ಹಿಂದುಸ್ಥಾನದ ರಾಜ್ಯಕಾರಭಾರದ ವಿಷಯವಾಗಿ ಲಾರ್ಡ ಬರ್ಕನಹೆಡ್ಡ ಸಾಹೇಬರು ಮುಂದಿನ ವಾರದಲ್ಲಿ ಒಂದು ಮಹತ್ವದ ಭಾಷಣ ಮಾಡತಕ್ಕವರಿದ್ದು, ಈ ಭಾಷಣವನ್ನು ಬರೆಯುವದರಲ್ಲಿ ಅವರು ಈಗ ತೊಡಗಿದ್ದಾರೆಂದು ಒಂದು ಪತ್ರ ಹೇಳುತ್ತದೆ.

———

ರಶಿಯಾದ ತುಂಬ ರೈತರ ಸಂಘಗಳ ಸ್ಥಾಪನೆಯಾಗಬೇಕು; ಮತ್ತು ಪಟ್ಟಣಗಳಲ್ಲಿಯ ಕೂಲಿಕಾರರು ದಿನಾಲು ಹತ್ತು ತಾಸು ದುಡಿಯಬೇಕೆಂದು ರೈತರು ಅನ್ನುತ್ತಿದ್ದು, ಇದಕ್ಕೆ ಆ ಸರಕಾರದ ಒಪ್ಪಿಗೆ ಇಲ್ಲ. ರೈತರು ಈ ಬಗ್ಗೆ ಚಳವಳಿ ಎಬ್ಬಿಸಿದ್ದಾರೆ.

———

ಮುಂಬಯಿಯಲ್ಲಿ ಮೂವರು ಪೋಲೀಸರು ಒಬ್ಬ ಬಡವನ ಮೇಲೆ ಸುಳ್ಳೇ ಕಳವಿನ ಆರೋಪ ಹೊರಿಸಿ, ಅವನಿಂದ ೬೫ ರೂಪಾಯಿ ತಕ್ಕೊಂಡರು. ಈ ಕೃಷ್ಣ ಕೃತ್ಯ ಹೊರಬಿದ್ದು, ಮ್ಯಾಜಿಸ್ಟ್ರೇಟರು ಈ ಮೂವರಿಗೂ ಎರಡೆರಡು ತಿಂಗಳ ಕಠಿಣ ಕೈದು ಮತ್ತು ಮೂವತ್ತು ಮೂವತ್ತು ರೂಪಾಯಿ ದಂಡ ಮಾಡಿದರು.

ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ, ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ

ಹೊಂದಿಗೆಯು ಆರುಲಕ್ಷದ ಮೋಲಂಟು. ಚೆಕ್ಕ, ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ಕೊಡಲಾಗುವದು.
ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ಆರ್. ಎಮ್. ಜ್ಯೋನ್ ಎಂಡ ಸನ್ಸ, ಹುಬ್ಬಳ್ಳಿ.

ಎಜಂಟ್ಸ ಫೋರ ಕಾರಬೋನಿಕ್ ಅಸಿಡ್ ಗ್ಯಾಸ, ಮ್ಯಾನುಫ್ಯಾಕ್ಚರರ್ ಅಫ್ ಅರೆಟೆಡ ವಾಟರ್ಸ.



ತಾವು ಆರ್ಡರ ಬೇಗ ಕಳಿಸಿರಿ

ನಮ್ಮಲ್ಲಿ ಸಿಗುವ ಸಾಮಾನುಗಳ ವಿವರ

ಫ್ಯೂರ್ ಗ್ಯಾಸ ಸಿಲೆಂಡರಗಳು ಇಂಗ್ಲೀಷ ಮತ್ತು ಜರ್ಮನ ಎಜೆಟೇಡ ಕಾಡ್ಸ, ಎಮ. ಟಿ. ಸೋಡಾ ವಾಟರ ಬಾಟಲಗಳು, ೫೫೦ ನಂ ಸಿಲಿಂಡರ ಚೆಪ್ಪಿ ೧ ಪೌಂಡಿನವು. ಸೋಡಾವಾಟರ್ ಮಶಿನುಗಳು ಮತ್ತು ಎಲ್ಲ ತರದ ಕಲರಿನ ಬಾಟಲಿಗಳ ಎಸೆನ್ಸಗಳು, ಅಮೆರಿಕನ್ ಆಯಿಸ್ಕ್ರೀಮ ಸೋಡಾ, ಬನಾನಾ, ಕೋಕಾನಟ್ ಚಿಪಿನ್, ಲೆಮನ್ ನಂ. ೧ ಲೆಮನ್ ಜುಯಿಸ್ ಸೋಡಾ ನಂ. ೧ ಮೆಂಗೋ, ಆರೇಂಜ, ಫಾಯಿನಾಪಲ್, ಪಿಕ್ಸವಿಲಅಪ್, ಕ್ವಿನಿನ್ ಟಾನಿಕ್, ರಾಜಬಿರಿ ನಂ. ೧ ಕೋಲ ನಂ. ೧ ಸ್ಟೋನ ಜಿಂಜರ ಬೀರ ನಂ. ೧, ರಬ್ಬರ ರಿಂಗ್ಸ್, ಬೇರೆ ಇತರ ಮಶಿನರಿ ಪಾರ್ಟಗಳು ನಮ್ಮಲ್ಲಿ ಸಿಗುತ್ತವೆ. ಮತ್ತು ಶುದ್ಧ ಗಾಜಿನ ಗೋಲಿಯ ಎಲ್ಲ ತರದ ಬಾಟಲ್ಸಗಳು ಸಿಗುತ್ತವೆ. ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಕೊಡುತ್ತೇವೆ. ನಮ್ಮಲ್ಲಿ ಕಬ್ಬಿಣದ ಮಿಲಿಟರಿ ಸಿಂಗಲ ಕಾಟ್ಸಗಳು ಸೋವಿ ದರದಿಂದ ಮಾರಲಿಕ್ಕೆ ಸಿಗುತ್ತವೆ.

ಅಡ್ರೆಸ್— R. M. John &Sons.
Mission Compound HUBLI

ದಿ. ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಿರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ನೋಟೀಸು

ಸಂಗಾ ಬಿನ್ನ ಗೋಣ್ಯಾ ತಳವಾರ ಸಾ॥ ಲಿಂಗಾಪೂರ ತಾಲ್ಲೂಕ ಕೋಡ ಇವನಿಗೆ—

ಕೆಳಗೆ ಸಹಿ ಮಾಡಿದವರ ಕಡಿಂದಾ ನೋಟೀಸ ಕೊಡಲಿಕ್ಕೆ ಕಾರಣ. ಬರತದಲ್ಲಾ ನನ್ನ ತಾಯಿ ಹೊಳಿಯವ್ವಾ ಮತ್ತು ನೀನು ದಾಮಾ ಈ ಪ್ರಕಾರ ೩ ಜನರು ನಂಮ ತಂದಿ ಗೋಣ್ಯಾ ಬಿನ್ನ ಗೋಣ್ಯಾ ತಳವಾರ ಇವನ ಮಕ್ಕಳು ಇದ್ದು ಇವರ ಸೈಕಿ ನಂನ ತಾಯಿಯ ಹಿರೇ ಅಕಿ ಇರುತ್ತಾಳೆ. ಹಿಂಗಿದ್ದು ತಾಲ್ಲೂಕ ಮುಜಕೂರ ಧೋಕೊಪ್ಪದಲ್ಲಿ ಸರಕಾರಿ ರಿ॥ ಸರ್ವೇನಂಬರ ೪೧ ಯಕರೆ ತರಮ ಮತ್ತು ಚಿನ್ನಮುಳಗುಂದ ಮಜಕೂರ ಲಿಂಗಾಪೂರದಲ್ಲಿ ಸರಕಾರಿ ರಿ॥ ಸರ್ವೇನಂಬರು ೧೭೮ ಯಕರೆ ತರಮ ಪ್ರಕಾರ ಇಗ್ಗು ಇವೆರಡು ಹೊಲಗಳಲ್ಲಿ ಈ ಮೂರು ಜನರು ಸಮನಾಗಿ ಹಿಸ್ಸೆ ಮಾಡಿಕೊಂಡು ದರವರ್ಷ ೧/೩ ಜಮೀನು ಉಪಭೋಗ ಮಾಡುತ್ತಾ ಬಂದಿವಿ ಮತ್ತೂ ಲಿಂಗಾಪೂರದಲ್ಲಿರುವ ನಂಮ ಹುಲ್ಲು ಮನಿ ಇದರ ಚಕ್ಕಬಂದಿ ಪೂರ್ವಕ್ಕೆ ಪುಟ್ಟಪ್ಪಾರ ಕೊಳಕಮುಲ್ಲ ಇವನ ಮನಿ ಪಶ್ಚಿಮಕ್ಕೆ ರಸ್ತೆ ದಾಟಿ ಅಗಸಿಬಾಗಲ ಗೋಣೆಪ್ಪನ ಹುಲ್ಲುಮನಿ ದಕ್ಷಿಣಕ್ಕೆ ಅಗಸರ ಫಕ್ಕೀರಪ್ಪನ ಮನಿ ಉತ್ತರಕ್ಕೆ ತಳವಾರ ಗುಡ್ಡ ಇರೋ ನಂಮ ಮನಿ ಈ ಚಕ್ಕಬಂದಿ ಮಧ್ಯದಲ್ಲಿ ಇರುವ ಹುಲ್ಲು ಮನಿಯನ್ನು ಸಮನಾಗಿ ೩ ಮೂರು ಹಿಸ್ಸೆ ಮಾಡಿಕೊಂಡು ವಹಿವಾಟು ಮಾಡುತ್ತಾ ಇದ್ದು ಹಿಂಗ ಇರತಾ ನನ್ನ ಕಿರಿ ಚಿಗವ್ವಾ ದಾಮಾ ಯಂಬಾತನು ಅಜಮಾಸ ೧ ವರ್ಷದ ಕೆಳಗ ಫೋತಿ ಆದ ಆದೇ ಕತಸ್ಕಾಲಕ್ಕೆ ನನ್ನ ತಾಯಿ ಹೊಳಿಯವ್ವಾ ಯಂಬಾಕಿಯು ಫೋತಿ ಆದಳು ಇವತ್ತಿನಿಂದಾ ನಮ್ಮ ಅಜ್ಜಿ ಬಾಳವ್ವಾ ಯಂಬಾಕಿಯು ನನ್ನನ್ನು ನನ್ನ ತಮ್ಮಾ ಭಿಮಾ ಮತ್ತು ನಂನ ತಂಗಿ ದ್ಯಾಮವ್ವಾ ಈ ಪ್ರಕಾರ ೩ ಜನ ಅಲ್ಪ ವಯಿಯವರನ್ನು ಸಂರಕ್ಷಣೆ ಮಾಡಿಕೋತ ಬಂದಳು ಈಗ ನನ್ನ ಮುಣಗ ನಬೇಕೆಂಬೋ ಇರಾದೆಯಿಂದ ಫೋತಿ ನನ್ನ ಚಿಗಪ್ಪನ ಹೊಲಾ ಮತ್ತು ಮನಿ ಯರಡನ್ನವರಿಗೆ ಮಾರಬೇಕೆಂಬೋ ಇರಾದೆಯಿಂದಾ ಜನರ ಮುಂದೆ ಖರೀದಿಗೆ ಹಚ್ಚಿದಂತೆ ನನ್ನ ಕೇಳಿಕೆಯಲ್ಲಿ ಬಂದದರಿಂದ ನಿನಗೆ ಮತ್ತು ಖರೀದಿಗೆ ತೆಗೆದುಕೊಳ್ಳುವವರಿಗೆ ಈ ನೋಟೀಸಿನಿಂದ ತಿಳಿಸೋದೇನಂದರೆ ನೀನು ಫೋತಿಯ ಹೊಲಾ ಮನಿ ಮಾರಲಿಕ್ಕೆ ನಿನ್ನ ವಬ್ಬನ ಹಕ್ಕು ಇರೋದಿಲ್ಲಾ ನಿನ್ನಂತೆ ನನ್ನದು ಸಂಪೂರ್ಣ ಹಕ್ಕು ಇರುತ್ತದೆ. ನನ್ನ ಕಬೂಲು ಇಲ್ಲದೆ ನೀನು ಮಾರಿದಲ್ಲಿ ನಿನ್ನ ಮೇಲೂ ಖರೀದಿಗೆ ತೆಗೆದುಕೊಂಡವರ ಮೇಲೂ ಇಲಾಜ ನಡಸೋದರಲ್ಲಿ ಒಂದೀತು ಈ ನೋಟೀಸಿನ ಖರ್ಚ ನಿನ್ನ ತಲೀಮೇಲೆ ಇರುತ್ತದೆ.

ತಿಳಿಯೋದು ತಾ॥ ೧೨-೩-೨೯ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತು ಗೋಣ್ಯಾ ಅಲ್ಪವಯಿ ಸಂರಕ್ಷಣದಾರ ಅಜ್ಜಿ ಬಾಳವ್ವಾ ಕೋಂ ಗೋಣ್ಯಾ ತಳವಾರ ಈಕಿ ಮಾಡಿದ್ದು ಇರುತ್ತದೆ.

ವಿಜಯದ ವರ್ಗಣೀ ದರ

ನಿತ್ಯಪತ್ರಕ್ಕೆ

೧೨ ತಿಂಗಳಿಗೆ	೧೨—೮—೦	ರೂ
೬ ,,	೬—೦—೦	ರೂ
೩ ,,	೪—೦—೦	ರೂ
ದಾರಪತ್ರಕ್ಕೆ ೧ ವರ್ಷಕ್ಕೆ	೩—೧೨—೦	ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ
ಮ್ಯಾನೇಜರ ವಿಜಯ, ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾಗ್ಭೂಷಣ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

1443 R.B.N.

ನಿತ್ಯ ಪತ್ರ ... ಬೆಲೆ ಅರ್ಧ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೬) ಧಾರವಾಡ ಗುರುವಾರ ತಾರೀಖು ೧೯ನೇ ಮಾರ್ಚ ೧೯೨೫ (ಸಂಚಿಕೆ ೪

ಕರ್ನಾಟಕ ತರುಣರಿಗೊಂದು !

ಬಿನ್ ಬಂಡವಾಳಿನ ವ್ಯವಸಾಯ!!

ಕಿರ್ಲೋಸ್ಕರ ನೇಗಿಲುಗಳ ಮಾರಾಟ !!!

ಕಿರ್ಲೋಸ್ಕರ ನೇಗಿಲು ಮತ್ತು ಗಾಣಗಳ ಉಪಯೋಗವು, ಮತ್ತು ಮಹತ್ವವು ಹಿಂದುಸ್ಥಾನದ ಪ್ರತಿಯೊಬ್ಬ ಒಕ್ಕಲಿಗನಿಗೆ ಗೊತ್ತಿದ್ದ ವಿಷಯ. ಇವುಗಳಿಗೆ ಗಿರಾಕಿಗಳು ಬಹಳ ಇದ್ದರಿಂದ ಅವುಗಳನ್ನು ಖಪಾಯ ಮಾಡಿಸುವ ದಲಾಲರಿಗೆ ... ಬೇಕಿದೆ. ಕಂಪನಿಯಿಂದ ದೊರೆಯುವ ಕ್ಯಾಟಲಾಗು, ಬೇರೆ ಪತ್ರಿಕೆ, ಗೋಡೆಯ ಚಿತ್ರಪಟ ಇತ್ಯಾದಿ ಜಾಹೀರಾತಿನ ಸಾಮುಗ್ರಿಗಳನ್ನು ತರಿಸಿ ಹಳ್ಳಿಗಳಲ್ಲಿ ಪ್ರಸಾರ ಮಾಡಿದಲ್ಲಿ ಆರ್ಡರು ದೊರೆಯುವವು. ಈ ಆರ್ಡರ ಕೂಡ ೧/೪ ಹಣವನ್ನು ತೆಗೆದುಕೊಂಡು ಕಂಪನಿಗೆ ಕಳಿಸಿದಲ್ಲಿ ಕಂಪನಿಯು ಅವರವರ ಹೆಸರಿನ ರಸೀದಿಯನ್ನು ಮಿಕ್ಕ ಹಣಕ್ಕೆ ವ್ಹಿ. ಪಿ. ಮಾಡಿ ದಲಾಲರಿಗೆ ಕಮಿಶನ್ ಕೊಡಲಿದೆ.

ಕಮೀಶನ್ ದರಗಳ ಬಗ್ಗೆ ಇಂದೇ ಕಾಗದವನ್ನು ಬರೆದು ತಿಳಿದುಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ } ಕಿರ್ಲೋಸ್ಕರವಾಡಿ.
ಜಿಲ್ಲಾ ಸಾತಾರಾ.

ಫಕ್ತ ೩ ಆಣೆಯೊಳಗೇ ಆಶ್ಚರ್ಯಕಾರಕ ವ ರಾಮಬಾಣ ಉಪಾಯ

ಮೊಮೆಂಟ ಕ್ಯೂರ

ತಲೆಶೂಲಿ, ಅರ್ಧ ತಲೆಶೂಲಿ, ಶೀತ, ಉಷ್ಣ ವ ನಿತ್ರಾಣ ವಗೈರೆಗಳಿಂದಾದ ಮಸ್ತಕಶೂಲಿಯು ತ್ವರೆಯಿಂದ ನಿರ್ಮೂಲ ಮಾಡಲು "ಮೊಮೆಂಟ ಕ್ಯೂರ" ಇದಿಗೆ ಸರಿಸಮಾನವಾದ ಔಷಧವು ಬೇರೆ ಇಲ್ಲ. ಹೆಚ್ಚು ಜನರು ಮಸ್ತಕಶೂಲಿಯನ್ನು ಸಹಿಸಲು ಆಗದೆ ಮಸ್ತಕಕ್ಕೆ ವಸ್ತ್ರಕಟ್ಟಿ ಎಣ್ಣೆ ವಗೈರೆಗಳನ್ನು ತಾಗಿಸುತ್ತಾರೆ. ಆದರೆ ನಿರಾಶೆಯಾದವರು ಮೊಮೆಂಟ ಕ್ಯೂರದ ಪುಡಿಯನ್ನು ಬಿಸಿ ಚಹಾದೊಂದಿಗೆ ಅಥವಾ ಬಿಸಿ ನೀರಿನೊಂದಿಗೆ ಹೊಟ್ಟೆಯಲ್ಲಿ ತಕ್ಕೊಂಡಲ್ಲಿ, ಒಂದೇ ಕ್ಷಣದಲ್ಲಿ ಮಸ್ತಕಶೂಲಿಯು ನಿಲ್ಲುವದು. ಇದಕ್ಕೆ ಅನೇಕ ಶಿಫಾರಸ ಪತ್ರಗಳು ಉಂಟು.

೧ ಚೀಟಿಗೆ ೩ ಆಣೆ. ಸ್ಯಾಂಪಲ ಸಲುವಾಗಿ ೩ ಆಣೆ ಪೋಸ್ಟ ತಿಕೀಟುಗಳನ್ನು ಕಳಿಸಿದಲ್ಲಿ ಕಳಿಸುವೆವು.

ಪ್ರಕಾಶಕ— ದಿ ಕರ್ನಾಟಕ ಮೆಡಿಕಲ ಸ್ಟೋರ್ಸ್, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ ಸ್ಟೇಶನರೋಡ ಹುಬ್ಬಳ್ಳಿ.

LOKHANDE



ಬಕ್ಷೀಸು ಮತ್ತು ಅರ್ಧ ಬೆಲೆಗೆ ಮೋಹಪಟ್ಟು ಮೋಸ ಹೋಗಬೇಡಿರಿ.

ಜಿನಸು ಉತ್ತಮ ಮತ್ತು ನಂಬಿಗೆಯುಳ್ಳದ್ದು ನಮ್ಮ ಅಂಗಡಿಯಲ್ಲಿ ಫಾವರೆ ಲೂಬಾ, ವೆಸ್ಟ ಎಂಡ, ಮೆರಡಿಯನ, ಒಮೇಗಾ ಮತ್ತು ಸ್ವಿಸ ಜನರಲ ಕಂಪನಿ ಮತ್ತು ಬೇರೆ ಪ್ರಸಿದ್ಧ ಕಂಪನಿಗಳ ಗಡಿಯಾರಗಳು ಈಗೀಗ ಬಂದಿದ್ದು, ಇವು ನೋಡಲಿಕ್ಕೆ ಸುಂದರವಾಗಿರುವಲ್ಲದೆ ಗಟ್ಟಿ ಮತ್ತು ಸರಿಯಾಗಿ ಹೊತ್ತು ತೋರಿಸುವಂಥವುಗಳಾಗಿವೆ. ಐದು ರೂಪಾಯಿಯಿಂದ ಬೇಕಾದ ಬೆಲೆಯು ಗಡಿಯಾರಗಳು ಸಿಗುವವು. ಕೊಳ್ಳುವಾಗ ಪ್ರತಿಯೊಂದಕ್ಕೆ ಗ್ಯಾರಂಟಿ ಕೊಡುವೆವು. ಒಮ್ಮೆ ತರಿಸಿ ನೋಡುವಿರಷ್ಟೇ!

ಪ್ರೊಪ್ರಾಯಿಟರ, ದತ್ತುರಾವ ಲೋಖಂಡೆ
ವಾಚ ಆ್ಯಂಡ ಕ್ಲಾಕ ಮರ್ಚಂಟ ಧಾರವಾಡ.

ದಿ. ಅಂಕಲಗಿ ಬ್ಯಾಂಕ ಲಿಮಿಟೇಡ್

ಧಾರವಾಡ.

೧೯೧೩ ಇಸ್ವಿಯ

ಕಂಪನಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ಚಾಲೂ ಖಾತೆ, ಸೇವಿಂಗ್ಸ, ಸೇವಿಂಗ್ಸದ ಡಿಪಾಜಿಟ, ಸಾಲ, ವತ್ತಿ, ಹುಂಡಿ, ಮುಂತಾದ ಯಾವತ್ತು ವ್ಯವಹಾರಗಳು ನಡೆಯುವವು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿಮಾಡುವವರಿಂದ ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ ರಿಂದ ೧೦-೩೦. ಸಾಯಂಕಾಲ ೩ ರಿಂದ ೬ ರವರೆಗೆ ಆಗುವದು.

K.B. Ankalagi

ವಿಜಯ.

ಧಾರವಾಡ ತಾ- ೧೯-೩-೩೫ ನೇ ಇಸ್ವಿ

ಉಪ್ಪಿನ ಕರ ಮತ್ತು ಪೋಸ್ಟಕಾರ್ಡಿನ ಬೆಲೆ ಕಡಿಮೆ ಮಾಡುವ ವಿಚಾರ.

—o—

ಲೆಜಿಸ್ಲೆಟಿವ್ ಅಸೆಂಬ್ಲಿಯಲ್ಲಿ ಉಪ್ಪಿನ ಕರವನ್ನು ಎಂಟಾಣೆ ಕಡಿಮೆ ಮಾಡಬೇಕೆಂದೂ ಪೋಸ್ಟಕಾರ್ಡಿನ ಬೆಲೆಯನ್ನು ಮೊದಲಿನಂತೆ ಮೂರು ಕಾಸು ಮಾಡಬೇಕೆಂದೂ ಸ್ವರಾಜ್ಯ ಪಕ್ಷೀಯರು ಠರಾವು ತರತಕ್ಕವರಿದ್ದಾರೆ. ಇದರ ಹೊರ್ತು ಪೆಟ್ರೋಲದ ಕರ ಕಡಿಮೆ ಮಾಡುವದರ ಬದಲಾಗಿ ಸೀಮೆಎಣ್ಣೆಯ ಕರ ಕಡಿಮೆ ಮಾಡಬೇಕೆಂಬದೊಂದು ಮೂರನೇ ಠರಾವೂ ಅಸೆಂಬ್ಲಿಯ ಮುಂದೆ ಬರತಕ್ಕದ್ದಿದೆ. ಈ ಮೂರೂ ಠರಾವಿಗೆ ಸ್ವತಂತ್ರ ಪಕ್ಷೀಯರು ಅನುಕೂಲ ಮತ ಕೊಟ್ಟರೇ ಅವು ಪಾಸಾಗುವವೆಂದು ಹೇಳುವಂತಾಗಿದೆ. ಸ್ವರಾಜ್ಯ ಮತ್ತು ಸ್ವತಂತ್ರ ಪಕ್ಷಗಳ ನಡುವೆ ಈ ವರ್ಷ ದೊಗರು ಬಿದ್ದಿದ್ದು, ಇದು ದಿವಸ ಹೋದಂತೆ ದೊಡ್ಡದಾಗುವ ದುರ್ಲಕ್ಷಣವನ್ನೇ ತೋರಿಸುತ್ತದೆ. ದೇಶೀ ಉಪ್ಪಿನ ಹೊರ್ತು ವಿಲಾಯತಿಯ ಉಪ್ಪಿನ ವ್ಯಾಪಾರವೂ ಈ ದೇಶದಲ್ಲಿ ಬಹುವಾಗಿ ಸಾಗುತ್ತದೆ. ಸರಕಾರದವರು ಈ ಉಪ್ಪಿನ ಮೇಲೆ ಕರ ತಗ್ಗಿಸಲಾರರು. ದೇಶೀ ಉಪ್ಪಿನ ಕರ ಕಡಿಮೆ ಮಾಡಿದರೆ ರಾಜ್ಯಕಾರಭಾರಕ್ಕೆ ದುಡ್ಡಿನ ಕೊರತೆಯಾಗುವದೆಂಬ ವಿಚಾರದಿಂದ ಸ್ವತಂತ್ರ ಪಕ್ಷೀಯರು ಈಗಿನ ಕರವನ್ನು ಇದ್ದಕ್ಕಿದ್ದಂತೆ ಇಡಬೇಕೆಂಬದಾಗಿ ಮತ ಕೊಡುವರು. ಅಂದರೆ ಇವರು ಸರಕಾರ ಪಕ್ಷವನ್ನೇ ಹಿಡಿಯುವರು.

ಇದರ ತರುವಾಯ ಪೋಸ್ಟ ಕಾರ್ಡಿನ ಠರಾವು ಬರುವದು. ಈ ಬಗ್ಗೆ ತಮ್ಮ ಮತ ಹೇಗೆ ಕೊಡಬೇಕೆಂಬ ವಿಷಯವಾಗಿ ಸ್ವತಂತ್ರ ಪಕ್ಷೀಯರು ಒಟ್ಟಾಗಿ ನಿರ್ಧರಿಸಿರುವದಿಲ್ಲ. ಮೆಂಬರರು ತಮ್ಮ ಮನಸ್ಸಿಗೆ ಬಂದಂತೆ ವೋಟು ಕೊಡಬಹುದು. ಹೀಗಾದರೆ ಸ್ವರಾಜ್ಯ ಪಕ್ಷದ ಬಹುಮತವಾಗುವ ಸಂಭವವುಂಟು. ಕಾರ್ಡಿನ ಬೆಲೆಯು ಮೂರು ಕಾಸು ನ್ನು ಇತ್ತು ಅರ್ಧ ಬೆಲೆ ಕಾರ್ಡುಗಳ ಪತ್ರಕ್ಕೆ ಅರ್ಧ [illegible] ಇರಬೇಕೆಂದು ಸ್ವರಾಜ್ಯ ಪಕ್ಷೀಯರ [illegible] ಇರುತ್ತದೆ.

ಸೀಮೆಎಣ್ಣೆಯದಾದ ಪೆಟ್ರೋಲಿಯಮ್ಮಿನ ಎಣ್ಣೆಯ ಕರ ಕಡಿಮೆ ಮಾಡಬೇಕೆಂದು ಸ್ವತಂತ್ರ ಪಕ್ಷೀಯರೇ ಠರಾವು ತರುವರು. ಪೆಟ್ರೋಲ ಎಣ್ಣೆಯ ಕರ ಕಡಿಮೆ ಮಾಡುವದರಿಂದ ಶ್ರೀಮಂತರಿಗೇ ಹಿತ [illegible] ಕರ ಕಡಿಮೆ ಮಾಡಬೇಕೆಂದು ಸ್ವತಂತ್ರ ಪಕ್ಷೀಯರು ಠರಾವು ತರುವರು. ಇದಕ್ಕೆ ಸ್ವರಾಜ್ಯ ಪಕ್ಷೀಯರ ಅನುಕೂಲ ಮತ ಸಿಕ್ಕು ಅದು ಪಾಸಾಗುವದೆಂಬದು ನಿಃಸಂದೇಹವಾದದ್ದು.

—

ಮುಂಬಯಿ ಕೌನ್ಸಿಲದಲ್ಲಿ ಬ್ರಾಹ್ಮಣ-ಬ್ರಾಹ್ಮಣೇತರ ಚಕಮಕಿಯು.

—o—

ಕಳೆದ ಶನಿವಾರದ ದಿವಸ ಮಿ ಪಿ. ಜಿ. ಜೋಶಿಯವರು ವಿದ್ಯಾಖಾತೆಯ ವೆಚ್ಚದಲ್ಲಿ ಒಂದು ಲಕ್ಷ ರೂಪಾಯಿ ಕಡಿಮೆ ಮಾಡಬೇಕೆಂಬ ಠರಾವು ತಂದರು. ಈ ಠರಾವಿನಿಂದ ಮಂತ್ರಿಯಾದ ಮಿ ಜಾಧವರಾಯರ ಮೇಲೆ ನಿಂದೆಯ ಠರಾವು ತಂದಿರುತ್ತದೆಂದು ತಿಳಿಯ ಕೂಡದೆಂದೂ, ಸಾಮಾನ್ಯವಾಗಿ ಸರಕಾರದ ಈ ಖಾತೆಯ ಸಂಬಂಧವಾದ ವರ್ತನದ ವಿರುದ್ಧ ಟೀಕೆ ಇರುತ್ತದೆಂದೂ ಮಿ. ಜೋಶಿಯವರು ಸ್ಪಷ್ಟೀಕರಿಸಿದರೂ, ದಿವಾನರು ಈ ಸಂಗತಿಯನ್ನು ಮನಸ್ಸಿಗೆ ಹಚ್ಚಿಕೊಂಡರು. ಮಿ. ಜೋಶಿಯವರ ತರುವಾಯ ಬ್ಯಾರಿಸ್ಟರ ಬಾಪ್ಟಿಸ್ಟಾ ಸಾಹೇಬರು, ಸರಕಾರದ ವಿದ್ಯಾವಿಷಯಕವಾದ ಆಡಳಿತೆಯ ಮೇಲೆ ಕಡುತರವಾದ ಟೀಕೆ ಮಾಡಿದರು "ಮಿ. ಜಾಧವರಾಯರೇ- ನೀವು ಇನ್ನಿಬ್ಬರು ಮಂತ್ರಿಗಳಂತೆ ನಮ್ರತೆಯಿಂದ ಕೆಲಸ ಮಾಡದೆ, ಸರಂಬರದ ಧ್ವನ್ಯರಾಗಿ, ನಿಮ್ಮ ಗೌರವ ಕಡಿಮೆ ಮಾಡಿಕೊಳ್ಳುತ್ತೀರಿ. ನೀವು ಸ್ವರಾಜ್ಯ ಪಕ್ಷವನ್ನು ನಿಂದಿಸುತ್ತೀರಿ ಈ ಸಾರೆ ನಾವು ನಿಮ್ಮಂತೆ ಮತಕೊಟ್ಟು, ನಿಮಗೆ ಅನುಕೂಲರಾಗಿರುತ್ತೇವೆಂಬದನ್ನು ಧ್ಯಾನದಲ್ಲಿಡಿರಿ" ಎಂಬದಾಗಿ ಬ್ಯಾರಿಸ್ಟರ ಬಯುಕ್ಕರರು ನುಡಿದರು. ರಾಜ್ಯಕಾರಭಾರದಲ್ಲಿ ಬಲವಂತಿಕೆಯೇ ಬೇಕಾಗುವದಿಲ್ಲ ಬುದ್ಧಿವಂತಿಕೆಯೂ ಬೇಕಾಗುತ್ತದೆಂದು ವೈಸ್ಪ್ರೆಸಿಡೆಂಟ ರಫಿಯುದ್ದೀನ ಸಾಹೇಬರೆಂದ ಕೂಡಲೆ, ಮಿ. ಸುರ್ವೆಯವರಿಗೆ ಬಹಳ ಸಿಟ್ಟು ಬಂದು, ನಾವೇನೂ ಸರಕಾರದ ಚೇಲಾಗಳಲ್ಲ; ಸರಕಾರದ ಉಪಕಾರದ ಹೆಸರಿಂದ ಬಾಯಿ ತೆರಕೊಂಡು ಕೂತಿಲ್ಲ, ನಮಗೂ ಸ್ವಾಭಿಮಾನವುಂಟೆಂದು ಗರ್ವೋಕ್ತಿಯನ್ನಾಡಿದರು. ಇವರ ನಂತರ ಮಿ. ಜಾಧವರಾಯರೇ ಅಂದದ್ದೇನಂದರೆ-

ಈ ಠರಾವು ನನ್ನ ಆಡಳಿತೆಯನ್ನು ದೂಷಿಸುವದಾಗಿರುತ್ತದೆಂಬದನ್ನು ಬಲ್ಲೆನು. ಆದರೆ ಅದಕ್ಕೆ ಹೆದರತಕ್ಕವನಲ್ಲ. ಆಡಳಿತೆಯಲ್ಲಿ ಅಪಜಯ ಹೊಂದಿದೆನೆಂದು ನನ್ನ ಅನ್ನವು ಹೇಳುವದಿಲ್ಲ. ನನ್ನ ಕಡೆಗೆ ಬಹುಮತವುಂಟೆಂಬದನ್ನು ನಾನು ಬಲ್ಲೆನು. ಬ್ರಾಹ್ಮಣೇತರರಾದ ನಾವೂ ಸ್ವರಾಜ್ಯ ಪಕ್ಷೀಯರಂತೆ ದೇಶಾಭಿಮಾನಿಗಳೇ ಆಗಿದ್ದೇವೆ. ಸ್ವರಾಜ್ಯ ಪಕ್ಷೀಯರಂತೆ ಮೊದಲಿನಿಂದ ಹಠತನದ ಸರಕಾರವನ್ನು ವಿರೋಧಿಸತಕ್ಕವರಾಗಿದ್ದರೂ, ಸರಕಾರವನ್ನು ಪೂರಾ ಎತ್ತಿ ಹಿಡಿಯುತಕ್ಕವರಲ್ಲ.

ಬ್ರಾಹ್ಮಣೇತರರು ಸರಕಾರದ ವಿರುದ್ಧ ವೋಟು ಕೊಟ್ಟಿದ್ದಾರೆ. ಕೌನ್ಸಿಲದಲ್ಲಿ ವೋಟುಗಳನ್ನು ಕೊಡುವಾಗ ಮಂತ್ರಿ ಅಥವಾ ಅವರ ಪಕ್ಷದವರು ಹೇಳುವದನ್ನು ಬಗ್ಗಿ, ಅವರ ಮೇಲೆ ಹೇಗೆ ಬಲಾತ್ಕಾರ ಮಾಡುತ್ತಾರೆಂಬ ಸಂಗತಿಯನ್ನು ಬ್ಯಾರಿಸ್ಟರ ಬಾಪ್ಟಿಸ್ಟಾ ಸಾಹೇಬರು ಅಧ್ಯಕ್ಷರಿಗೆ ತಿಳಿಸಿದರು. ಈ ಬಗ್ಗೆ ನಾನು ತಾಕೀತು ಮಾಡಿದ್ದೇನೆ ಪುನಃ ಮಾಡುತ್ತೇನೆಂದು ಅಧ್ಯಕ್ಷರು ಉತ್ತರ ಕೊಟ್ಟರು. ಮತಗಳು ಸರಕಾರದಕ್ಕೆ ಹೇಗೆ ಅನುಕೂಲವಾಗುತ್ತವೆಂಬದಕ್ಕೆ ಬಾಪ್ಟಿಸ್ಟಾ ಮತ್ತು ಅಧ್ಯಕ್ಷರ ನಡುವೆ ನಡೆದ ಸಂವಾದವು ಪ್ರತ್ಯಕ್ಷ ಪ್ರಮಾಣವಾಗಿರುತ್ತದೆ. ಮತಗಳಿದ್ದರು [illegible] ತಪ್ಪಿ ಬ್ರಾಹ್ಮಣೇತರರು ಸರಕಾರದ ವಿರುದ್ಧ ಮತಕೊಟ್ಟರೆ- ಅವರಲ್ಲಿ ಸ್ವಾತಂತ್ರ್ಯಸ್ಫೂರ್ತಿಯುಂಟಾದದ್ದು ತೋರಲಿಕ್ಕೆ ಬರಲಾರದು.

—

ಮದ್ರಾಸದ ಮಂತ್ರಿಗಳಲ್ಲಿ ಅವಿಶ್ವಾಸದ ಠರಾವು

—o—

ಮದ್ರಾಸದ ಮಂತ್ರಿಗಳು ಆಳರಸರಿಗಿಂತ ಹೆಚ್ಚಿನ ಆಳರಸರಾಗಿದ್ದಾರೆ. ಇವರ ವರ್ತನದ ದೆಸೆಯಿಂದಲೇ ಅನೇಕ ಜನ ಬ್ರಾಹ್ಮಣೇತರ ಮೆಂಬರು ಇವರ ಬಣದಿಂದ ಹೊರಬಿದ್ದು, ಸ್ವತಂತ್ರ ರಾಷ್ಟ್ರೀಯ ಪಕ್ಷವನ್ನು ಸ್ಥಾಪಿಸಿದರು. ಮಂತ್ರಿಗಳ ಕೆಟ್ಟ ಬಣದ ಮತ್ತು ಸ್ವರಾಜ್ಯ ಪಕ್ಷೀಯರ ಜಯಸ್ಸಿಗೆ ಮಾತ್ರ ಕಾರಣವಾಗಿಲ್ಲ. ಮುಸಲಮಾನರ ಸಹಾನುಭೂತಿಯನ್ನು ಕಳಕೊಂಡಿದ್ದಾರೆ. ಸರಕಾರದ ಒಂದಾಯದ ಪ್ರಸಂಗದಲ್ಲಿ ಇವರು ಸರಕಾರದ ಕೂಡ ಮಾಡಿದ ಅಸಭ್ಯವಾದ ಸಹಾಯವು ಮುಸಲಮಾನರ ಅಂತಃಕರಣಕ್ಕೆ ಬಹಳ ನೋವುಂಟಾಗಿರುತ್ತದೆ. ಹೋದ ವರ್ಷ ಇವರಲ್ಲಿ ತಮ್ಮ ನಂಬಿಗೆಯಿಲ್ಲೆಂದು ಮುಸಲಮಾನರು ಮತ ಕೊಟ್ಟಿದ್ದರು. ಅದೇ ಪ್ರಕಾರ ಈ ವರ್ಷವೂ ಮತ ಕೊಡುವರು. ಸ್ವರಾಜ್ಯ, ಬ್ರಾಹ್ಮಣೇತರ ಮತ್ತು ಮುಸಲಮಾನರು ಈ ಪ್ರಕಾರ ಮೂವರು ಇವರ ವಿರುದ್ಧ ನಿಂತರೂ, ಇವರಿಗೆ ಸರಕಾರದ ಬೆಂಬಲವಿರುವದರಿಂದ, ಈ ಠರಾವು ಎಷ್ಟರ ಮಟ್ಟಿಗೆ ಪಾಸ ಆಗುವದೆಂದು ಹೇಳಲಿಕ್ಕಾಗುವದಿಲ್ಲ. ಠರಾವು ಹೇಗೇ ಇರಲಿ; ಮಂತ್ರಿಗಳ ದೊರೆತನದ ಕುಂದು ಕೊರತೆಗಳೆಲ್ಲ ಬೈಲಿಗೆ ಬರುವವು.

ಶ್ರೀಗೊಮ್ಮಟೇಶ್ವರ ಮಸ್ತಕಾಭಿಷೇಕ ಸಮಾರಂಭವು.

—೦—

ಶ್ರವಣ ಬೆಳಗೊಳದಲ್ಲಾದ ಈ ಉತ್ಸವಕ್ಕೆ ನಾನಾ ಕಡೆಗಳಿಂದ ಹತ್ತು ಸಾವಿರ ಜನ ಕೂಡಿತ್ತು. [illegible] ಜನ ಕೂಡಬಹುದೆಂದು, ಆ ಪ್ರಕಾರ ವ್ಯವಸ್ಥೆ [illegible] ಏರ್ಪಾಟು ಮಾಡಿದ್ದರು. ಆದರೆ ಅಷ್ಟು ಜನ ಕೂಡಲಿಲ್ಲ. ಮಸ್ತಕಾಭಿಷೇಕಕ್ಕಾಗಿ ನಾಲ್ಕು [illegible] ದಯಮಾಡಿಸಿದ್ದರು. ಇವರ [illegible] ಮಾರ್ಗವಾಗಿ ಹೋದ [illegible].

[illegible] ಮೂರ್ತಿಗಳಂತೆ [illegible] ಎತ್ತರದ [illegible] ಹೇಗೆ ಕೆತ್ತಿರಬಹುದು? ಇದನ್ನು [illegible] ಕಟ್ಟಿರುವರೋ? [illegible] ಮೇಲೆ [illegible]? [illegible] ಬಗೆ ಪರಿದಾಗಿದೆ. ಇದು ಜಗತ್ತಿನಲ್ಲಿ [illegible] ಪ್ರತಿಮೆ. [illegible] ಎತ್ತರ [illegible]. ಒಂದೊಂದು [illegible] ಅಡಿ [illegible]. [illegible] ಎರಡು [illegible]. [illegible] ಎರಡು [illegible]. ಮೂರ್ತಿ[illegible] ಅನೇಕ [illegible] ಕಾಣಿಸುತ್ತದೆ.

[illegible] ವರ್ಷಗಳ ಹಿಂದೆ ಮೂರ್ತಿಯ ಸುತ್ತ [illegible] ಹಾಕ್ಕು [illegible], [illegible]. [illegible] ಮೂರ್ತಿಯನ್ನು [illegible]. ಇವನ್ನೆಲ್ಲ ತೆಗೆದು ಸ್ವಚ್ಛಮಾಡಿ, ಮಸ್ತಕಾಭಿಷೇಕ ಮಾಡಿದರು. [illegible] ಇದು [illegible] ಸಮಾರಂಭವಾಗಿದೆ. ಮೂರ್ತಿಯ ಎತ್ತರ [illegible] ಇದ್ದು ಕೊಡ[illegible] ಹಾಲು, [illegible] ತುಪ್ಪ, [illegible] ಸಹ[illegible] ಸಾವಿರ ಸಂಖ್ಯೆಯಿಂದ [illegible] ಸುರುವಿ, ಮಹಾಮಸ್ತಕಾಭಿಷೇಕ ಮಾಡಿದರು.

ತಮ್ಮ ಅಭಿಷೇಕ ಮೊದಲು ಆಗಬೇಕೆಂದು [illegible] ಸ್ಪರ್ಧೆ ನಡೆಸಿದರು. ಅಭಿಷೇಕದ ಮ[illegible] ಲಿಲಾವು ಆಗುವದು. ಹೋದ ಸಾರೆ [illegible] ಸಾವಿರ ರೂಪಾಯಿಗೆ ಲಿಲಾವು ನಿಂತಿತು. ಈ ಸಾರೆ [illegible] ಸ್ವರೂಪದ [illegible] ಪ್ರಯಾಣ ಮಾಡಿಸಿದ್ದರಿಂದ, ಹೆಚ್ಚು [illegible] ಬೇಕೆಂದು ಹೇಳುವ ಕಾರಣ [illegible].

—

ವಕೀಲರಾಗುವ ವಿದ್ಯಾರ್ಥಿಗಳಿಗೆ ಮಹಾತ್ಮರ ಉಪದೇಶ.

—

ತ್ರಿವೇಂದ್ರಮದ ಲಾ ಕ್ಲಾಸಿನ ವಿದ್ಯಾರ್ಥಿಗಳು ಮಹಾತ್ಮರಿಗೆ ಒಂದು ಮಾನಪತ್ರ ಕೊಟ್ಟರು. ಆಗ ಅವರು ಅಂದದ್ದೇನೆಂದರೆ-

ಕಾಲಕ್ಕೆ ಕೊಟ್ಟಯ ಫೀಸಿಯಿಂದ ನಿಮ್ಮ ಸ್ವಾಭಿಮಾನವನ್ನು ಮಾರಿಕೊಳ್ಳಬೇಡಿರಿ. ಮನ ಮೋಹನ ಘೋಷರಂಥ ವಕೀಲರಾಗುವ ಮಹತ್ವಾಕಾಂಕ್ಷೆಯುಳ್ಳವರಾಗಿರಿ. ಇವರು ಬಡವರ ಹಿತ್ತಿಲಿಗಾಗಿದ್ದು ಬಡವರ ದೆಸೆಯಿಂದ ಅಪಮಾನ ಪಟ್ಟರು. ಕೇವಲ ದುಡ್ಡಿನ ಕೋರಿಯನ್ನು ನೋಡಬಾರದು. ಸ್ವದೇಶ ಮತ್ತು ಮಾನವ ಕೋಟಿಯ ಹಿತಕ್ಕಾಗಿ ಶ್ರಮ ಪಡಬೇಕು. ಪತಿತರಾದಂಥ ಜನರಿಗೆ ಕೋರ್ಟುಗಳಲ್ಲಿ ನ್ಯಾಯ ಸಂಪಾದನೆ ಮಾಡಿಕೊಡುವದು ಗಟ್ಟಿಯಿಂದಲೇ ನಾನು ವಕೀಲಿಯನ್ನು ಬಿಟ್ಟೆನು. ರಾಷ್ಟ್ರೀಯ ದೇಶವನ್ನು ರಾಜಕೀಯ ಗುಲಾಮಗಿರಿಯಿಂದ ಮುಕ್ತ ಮಾಡುವದಾದ ಕಾರಣ ನಿಮ್ಮ ಗೊಟ್ಟಿನ ವ್ಯವಸಾಯ ಮಾಡಿರಿ.

—

ದೇಶೀ ಹೆಂಕೆ ಕಟ್ಟಿಯ ವಿರುದ್ಧ ಅಮೇರಿಕೆಯವರ ಉದ್ಯೋಗ.

—೦—

ಮುಂಬಯಿ ಇಲಾಖೆಯಲ್ಲಿ ನಾಲ್ಕು ಸ್ವದೇಶೀ ಹಡಗದ ಕಟ್ಟಿಗೆಯ ಕಾರಖಾನೆಗಳಿರುತ್ತವೆ ಇವು ಅನ್ನ ಬಾಲ್ಯಾವಸ್ಥೆಯಲ್ಲಿರುವಾಗ, ಅಮೇರಿಕೆಯ ಒಂದು ಕಂಪನಿಯವರು ಎರಡು ಕೋಟಿ ರೂಪಾಯಿ ಬಂಡವಲ ಹಾಕಿ ಮುಂಬಯಿ ಹತ್ತರ ಒಂದು ಕಾರಖಾನೆಯನ್ನು ತೆಗೆಯತಕ್ಕವರಿದ್ದಾರೆ. ಇದರಲ್ಲಿ ಇನ್ನೊಂದು ಚಮತ್ಕಾರವೇನಂದರೆ- ಕಡ್ಡಿಗಾಗಿ ಬೇಕಾಗುವ ದೇವದಾರದ ಕೊರಡುಗಳನ್ನು ಹಿಮಾಲಯದಿಂದ ತರುವರು. ಹಿಮಾಲಯದಿಂದ ಮುಂಬಯಿಗೆ ಬರುವ ರೇಲ್ವೆ ಚಾರ್ಜು ಸ್ವೀಡನ್ನಿಂದ ರೇಲ್ವೆ ಮತ್ತು ಜಲಮಾರ್ಗದಿಂದ ಬರುವ ಹಾಸಿಲಿಗಿಂತ ಹೆಚ್ಚಾಗುತ್ತದೆ. ಉದ್ಯೋಗ ಖಾತೆಯ ದಿವಾನ ಬಾಧಶಾಹಯರ ವಶದಲ್ಲಿದ್ದು ಅವರ ಮುಂದೆ ಈ ಎರಡೂ ಸಂಗತಿಗಳನ್ನಿಡಲು, ಅವರು ತಮ್ಮ ಅಜ್ಞಾನವನ್ನು ಒಪ್ಪಿದರು!!

ಮಹಾತ್ಮರು ತಮ್ಮೂರಿಗೆ ಬಂದಾಗ ಅವರಿಗೆ ಮಾನಪತ್ರ ಕೊಡಬೇಕೆಂದು ತಂಜಾವರ, ಕುಂಭಕೋಣ, ಶ್ರೀರಂಗದ ಮ್ಯುನಸಿಪಾಲಿಟಿಗಳು ಠರಾವು ಮಾಡಿರುತ್ತವೆ.

ಬಲವಿಲ್ಲದಾಗ ನೆಲಕ್ಕೆಲ್ಲ ಬಡಿಯುವದು.

—

ಝಗಲುಲ ಪಾಶಾ ನವರಿಗೆ ಜಯವಾಯಿತೆಂದು ಹಿನ್ನಿನ ಸಂಚಿಕೆಯಲ್ಲಿ ಬರೆದಿದ್ದೇವೆ. ಆದರೆ ಇವರು ಎರಡೂ ಪಕ್ಷಕ್ಕೆ ಸೇರದೆ, ಸ್ವತಂತ್ರವಾಗಿರುವಂತೆ ನಟಿಸಿದ್ದರಿಂದ, ಮವಾಳರ ಬಹುಮತವಾಗಿ, ಅವರೇ ಮಂತ್ರಿಯಾದರು.

ಕೂಡಲೆ ಮವಾಳರ ಪ್ರಧಾನಿಯಾದ ಇಂಗ್ಲ್ಯಾಂಡಿನ [illegible] ಝಗಲುಲ ಪಾಶಾನ ಮನೆಗೆ ಹೋಗಿ, ನಿಮ್ಮ ಜನರು ಸರಕಾರದ ಅಪ್ಪಣೆಯಿಲ್ಲದೆ ಸಭೆ ಕೂಡಿಸುತ್ತಾರೆ. ಸರಕಾರದ ವಿರುದ್ಧ ಭಾಷಣ ಮಾಡುತ್ತಾರೆ. ಇವನ್ನು ನಿಲ್ಲಿಸಿರಿ. ಇಲ್ಲವಾದರೆ ಕಾಯದೆಯನ್ನು ಅಮಲಿನಲ್ಲಿ ತರಬೇಕಾಗುವದೆಂದು ಧಮಕಿ ಹಾಕಿದ್ದಾರೆ. ಬಲವಿಲ್ಲದಾಗ ಕೂಡಲೆ ನೆಲವನ್ನು ಬಡಿಯುವದು.

—

ಸಮುದ್ರದಲ್ಲಿ ಪ್ರಚಂಡ ಬಿರುಗಾಳಿ

ಮದ್ರಾಸ ಮತ್ತು ಬಂಗಾಲದ ಸಮುದ್ರದಲ್ಲಿ ಮತ್ತು ಭೂಮಧ್ಯ ಸಮುದ್ರದಲ್ಲಿ ಪ್ರಚಂಡ ಬಿರುಗಾಳಿ ಬೀಸಿ, ಹಡಗಗಳ ಹಾಯಿಗಳಿಗೆ ಕೊರತೆಯಾಗಿದೆ. ಭೂಮಧ್ಯ ಸಮುದ್ರದಲ್ಲಿರುವ ಇಂಗ್ಲಿಷರ ಯುದ್ಧದ ೪೦ ಹಡಗಗಳು ಸುರಕ್ಷಿತವಾಗಿ ಆ ಜೋಕಾಲಕ್ಕೆ ಹೋಗಿರುತ್ತವೆ.

—

ಪೋಲೀಸ ಸುಪರಿಂಟೆಂಡೆಂಟರ ಕೊಲೆ.

ನಾಸಿಕಬಾಗದ ಸಂಸ್ಥಾನದಲ್ಲಿ ಒಬ್ಬ ಪೋಲೀಸ ಸಿಪಾಯಿಯು ತನ್ನ ಮೇಲಧಿಕಾರಿಯಾದ ಪೋಲೀಸ ಸಾಹೇಬನನ್ನು ಕೊಡ್ಡಿಯಿಂದ ಹೊಡೆದು ಕೊಂದನು. ಇವರಿಬ್ಬರಿಗೂ ದ್ವೇಷವಿತ್ತೆಂದು ಹೇಳಲ್ಪಟ್ಟಿದೆ.

—

ದಿಲ್ಲಿಯಲ್ಲಿ ಹಿಂದೂ ಮುಸಲಮಾನ ದಂಗೆ.

ಮುನಸಿಪಾಲಿಟಿಯ ಚುನಾವಣೆಯಲ್ಲಿ ದಿಲ್ಲಿಯಲ್ಲಿ ಹಿಂದೂ ಮುಸಲಮಾನರೊಳಗೆ ದಂಗೆಯಾಗಿ ೧೮ ಜನ ಹಿಂದುಗಳೂ ನಾಲ್ವರು ಮುಸಲಮಾನರೂ ಭಯಂಕರ ಗಾಯ ಹೊಂದಿದರು. ಆಸ್ಪತ್ರೆಯಲ್ಲಿ ಒಬ್ಬ ಮುಸಲಮಾನನು ನಿಧನಹೊಂದಿದನು.

—

ಕೋಹಾಟದ ದಂಗೆಯಲ್ಲಿ ಸರಕಾರೀ ಕಾರ್ಯದಿಂದ ಹಿಂದೂ ಜನರಿಗೆ ಯಾವ ಸಹಾಯವೂ ದೊರೆಯಲಿಲ್ಲ. ಇದರಿಂದ ದೊಡ್ಡ ಅಪರಾಧ ಸಂಭವಿಸಿತು. ಕಮಿಶನ ನೇಮಿಸಿ ಈ ಅಪರಾಧವನ್ನು ಸಿದ್ಧ ಮಾಡಿ ಕೊಡಬೇಕೆಂದು ಪಂಡಿತ ಮದನ ಮೋಹನ ಮಾಲವೀಯರವರು ಅಸೆಂಬ್ಲಿಯಲ್ಲಿ ಪ್ರಶ್ನೆ ಕೇಳಿದ್ದಾರೆ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟಿಡ.

ಮಂಗಳವಾರ ಪೇಟಿ, ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರೆಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ

ಜಿಂದಿಗೆಯು ಆರುಲಕ್ಷದ ಮೇಲ ಟ. ಚೆಕ್ಕ, ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ನಡಿಲ್ಪಡುವದು. ಕಾರ್ಪೇಂ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಹೆಚ್ಚಿಗಿ ಬಡ್ಡಿ ದೊರಿಯುವದು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ಆರ್. ಎಮ್. ಜ್ಞಾನ್ ಎಂಡ ಸನ್ಸ, ಹುಬ್ಬಳ್ಳಿ.

ಏಜಂಟ್ಸಫೋರ ಕಾರಬೋನಿಕ್ ಅಸಿಡ್ಡ ಗ್ಯಾಸ, ಮ್ಯಾನುಫ್ಯಾಕ್ಚರರ್ ಆಫ್ ಏರೇಟಿಡ ವಾಟರ್ಸ.

ತಾವು ಆರ್ಡರ ಬೇಗ ಕಳಿಸಿರಿ

ನಮ್ಮಲ್ಲಿ ಸಿಗುವ ಸಾಮಾನುಗಳ ವಿವರ.

ಫುರ್‌ಗ್ಯಾಸ ಸಿಲಿಂಡರಗಳು ಇಂಗ್ಲೀಷ ಮತ್ತು ಜರ್ಮನ ಪೇಟೆಂಟ ಕಾರ್ಡ್ಸ, ಎಮ. ಟಿ. ಸೋಡಾ ವಾಟರ ಬಾಟಲಗಳು, ೫೫೦ ನೇ. ನಾಬ



ಲೀನ ಡಬ್ಬಿ ೧ ಪೌಂಡಿನವು. ಸೋಡಾವಾಟರ್ ಮಶಿನುಗಳು ಮತ್ತು ಎಲ್ಲ ತರದ ಕಲರಿನ ಬಾಟಲಿಗಳ ಎಸನ್ಸಗಳು, ಅಮೆರಿಕನ್ ಅಯ್ಸ್ಕ್ರೀಮ ಸೋಡಾ, ಬನಾನಾ, ಕೋಲಾಚೆಂಪೇಜನ್, ಲೆಮನ್ ನಂ. ೧ ಲೆಮನ್ ಜುಯಿಸ್ ಸೋಡಾ ನಂ. ೧ ಮೆಂಗೋ, ಆರೇಂಜ, ಫಾಯಿನಾಪಲ್, ಪಿಸ್ತಮಿಳವ್, ಕ್ವಿನಿನ್ ಟಾನಿಕ್, ರಾಜಬರಿ ನಂ. ೧ ಕೋಲ ನಂ. ೧ ಸ್ಟೋನ್ ಜಿಂಜರ್ ಬೀರ ನಂ ೧, ರಬ್ಬರ್ ರಿಂಗ್ಸ್, ಟೆಸ್ ಟಾನಿಕ್ ... ನಮ್ಮಲ್ಲಿ ಸಿಗುತ್ತವೆ. ಮತ್ತು ಶುದ್ಧ ನೀಲಗಿರಿ ಎಣ್ಣೆಯು ಎಲ್ಲ ತರದ ಬಾಟಲಗಳು ಸಿಗುತ್ತವೆ. ವ್ಯಾಪಾರಸ್ಥರಿಗೆ ಒಳ್ಳೇ ಕಮೀಶನ್ ಕೊಡುತ್ತೇವೆ. ನಮ್ಮಲ್ಲಿ ಕಬ್ಬಿಣದ ಮಿಲ್ಲಗಳು ಸಿಗುತ್ತವೆ. ಸಿಂಗಲ ಕಟ್ಲಗಳು ಸೋವಿ ದರದಿಂದ ಮಾರಲಿಕ್ಕೆ ಸಿಗುತ್ತವೆ.

ಅಡ್ರೆಸ್— R. M. John & Sons.
Mission Compound HUBLI

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

—○—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೆ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ಜಾಹೀರ ನೋಟೀಸು

ರಾ|| ರಾ|| ಹನಮಪ್ಪಾ ಗೋವಿಂದಪ್ಪಾ ಕೋಟಿ ಸಾ| ದೇವಗೊಂಡನಕಟ್ಟಿ ತಾಲೂಕ ರಾಣೇಬಿನ್ನೂರ ಇವರಿಗೆ—

ಈ ಕೆಳಗೆ ಹೆಬ್ಬೆಟ್ಟಿನ ಗುರತಾ ಮಾಡಿದವಳಿಂದ ನೋಟೀಸು ಕೊಡುವದೇನಂದರೆ- ನೀನು ನನ್ನ ಲಗ್ನ ಆದ ಮೇಲೆ ಅಜಮಾಸ ೪-೫ ವರ್ಷ ಸುಶೀಲತ ಬಾಳ್ವೆ ಮಾಡತಿದ್ದವನು ನನ್ನ ಮೇಲೆ ವಿನಃ ಕಾರಣಾ ವ್ಯಭಿಚಾರ ದೋಷ ಹೊರಿಸಿ ಬನಾವಟ ಖಟ್ಲೆ ಮಾಡಿಸಿ ಸಜಾ ಸಹಾ ಮಾಡಿಸಿದಿ. ಸಜಾ ತೀರಿ ಬಂದ ಮೇಲೆ ಮನೆಗೆ ಬಂದರೆ ನನ್ನ ಹೊಡೆದು ತವರ ಮನೆಗೆ ಕಳಸಿದಿ. ಸ್ವಲ್ಪ ದಿವಸದ ಮೇಲೆ ಒಂದು ನೋಟೀಸು ಕೊಟ್ಟೆ. ಅದಕ್ಕೆ ನಾನು ಉತ್ತರ ಕೊಟ್ಟೆನು. ತಗ್ಗಿ ನಾನು ಚಿಲ್ಲರ ಅಂಗಡಿಯಿಂದ ಜೀವನ ಮಾಡತಾ ಇದ್ದೆ; ಮತ್ತೆ ನೀನು ಬರಹೋಗ ಹತ್ತಿದಿ. ಅಗ್ಗೆ ಒಂದು ಗಂಡು ಕೂಸು ನನಗೆ ನಿನ್ನಿಂದ ಹುಟ್ಟಿತು. ಆಗದವರ ಮಾತು ಕೇಳಿ ಸದರ ಕೂಸಿಗೆ ತಂದಿ ಹೆಸರು ಹಚ್ಚಬಾರದಂತ ಅರ್ಜಿ ಕೊಟ್ಟೆ ನಾನು ನಿನ್ನ ಹೆಸರೇ ಹಚ್ಚಬೇಕಂತಾ ದಿವಾಣಿಯಲ್ಲಿ ದಾವಾ ತಂದೆ. ದಾವೇ ನೋಟೀಸು ಬಂದ ಮೇಲೆ ನೀನು ನನಗೆ ಸಂಧಾನ ಹಚ್ಚಿ ನನ್ನನ್ನು ಕೂಡಿದಿ. ನಂತರಾ ಸದರ ಕೂಸಿಗೆ ಬಾಲಗ್ರಹ ಬಂದಾಗ ಅವಷಧ ಕೊಡಿಸಲಿಕ್ಕೆ ೩ ತಿಂಗಳ ಹಿಂದೆ ಮಾಗೋಡಿಗೆ ನೀನು ವ ನನ್ನ ಅಣ್ಣಾ ತಾಯಿ ಕೂಡಿ ಕರಕೊಂಡು ಹೋದಿರಿ ಅವಷಧ ಕೊಡಿಸಿತು. ಆ ದಿವಸ ಅಲ್ಲಿ ಅಂಗಡಿ ಸಾಮಾನ ಜಾಮೀನ ಆಗಿ ಕೊಡಿಸಿದ ಮಲ್ಲಪ್ಪಾ ಪೊಸಳ್ಳಿ ಈತಾ ತನಗೆ ಬರುವ ರೂಪಾಯಿ ಕೊಡ್ರಿ ಅಂದಾ. ನೀನು ವ ನನ್ನ ಅಣ್ಣಾ ಸಿಟ್ಟಿಗೆದ್ದು ಮಲ್ಲಪ್ಪನನ್ನು ಹೊಡೆಯಲಿಕ್ಕೆ ಹೋದಿರಿ. ನಾನು ಬೇಡ ಅಂದರೆ ಕೇಳದೆ ಅವನನ್ನು ಹೊಡೆದು ಒಡೆದು ನನ್ನನ್ನು ಒಲ್ತಾತ್ಕಾರದಿಂದ ಹಾಗೆ ಹಾವೇರಿಗೆ ಕರಕೊಂಡು ಹೋಗಿ ದಿವಾಣಿ ದಂಡೆ ರಾಜೀ ಮಾಡಿಸಿದಿರಿ. ಊರಿಗೆ ಬಂದ ಮೇಲೆ ಸದರ ಮಲ್ಲಪ್ಪಾ ನಿಮ್ಮ ಮೇಲೆ ಫಿರ್ಯಾದಿ ಮಾಡಿದ್ದು ತಿಳಿದು ಅವನ ಮೇಲೆ ಉಲಟ ಮಾಡಲಿಕ್ಕೆ ಬಂದ ಬಗ್ಗೆ ನೀನು ಸುಳ್ಳು ಫಿರ್ಯಾದಿ ಮಾಡು ಅಂತಾ ನನಗೆ ತ್ರಾಸ ಕೊಡಹತ್ತಿದಿರಿ. ನಾನು ಜೀವಕ್ಕೆ ಹೆದರಿ ಯೇನೊಂದು ಸಾಮಾನ ತಗೊಳ್ಳದೆ ನನ್ನ ಸ್ವಂತ ಬುದ್ಧಿಯಿಂದ ನನ್ನ ಮಗನನ್ನು ಕರಕೊಂಡು ಬೇರೆ ಇರುತ್ತೇನೆ. ನಾನಿದ್ದಲ್ಲಿ ಬಂದು ಮುಂದೆ ನೀವು ತ್ರಾಸ ಕೊಟ್ಟರೆ ಆ ಬಗ್ಗೆ ನಿಮ್ಮ ಮೇಲೆ ಕೆಲಸ ನಡಿಸುವದಲ್ಲದೆ ನನ್ನ ಪೋಟಿಗಿ ಬಗ್ಗೆ ದಾವೇ ಸಹಾ ಮಾಡುತ್ತೇನೆ. ತಿಳಿಯುವದು ತಾ|| ೭-೩-೧೯೩೫ ನೇ ಇಸ್ವಿ.

ಈ ಎಡಗೈ ಹೆಬ್ಬೆಟ್ಟಿನ ಗುರತು ಭರಮವ್ವಾ ಕೋಂ ಹನಮಪ್ಪಾ ಕೋಟಿ ಸಾ| ದೇವಗೊಂಡನಕಟ್ಟಿ ಇವಳದು ಅದೆ.

ವಿಜಯದ ವರ್ಗಣೀ ದರ

ಚಿಲ್ಲರಪತ್ರಕ್ಕೆ		
೧೨ ತಿಂಗಳಿಗೆ	೧೨—೮—೦	ರೂ
೬ ,,	೭—೦—೦	ರೂ
೩ ,,	೪—೦—೦	ರೂ
ವಾರಪತ್ರಕ್ಕೆ ೧ ವರ್ಷಕ್ಕೆ	೩—೧೨—೦	ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ, ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ಜಾಗೃತಿಪರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

1443 R.B.N.

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೬) ಧಾರವಾಡ ಶುಕ್ರವಾರ ತಾರೀಖು ೨೦ನೇ ಮಾರ್ಚ ೧೯೨೫ (ಸಂಚಿಕೆ ೫

ಬೇಸಿಗೆ ಪ್ರಾರಂಭವಾಯಿತು!

ದನಗಳ ಆಹಾರವಾದ ಕಣಿಕೆಯನ್ನು ಕಾದಿರಿ "

ಕಿರ್ಲೋಸ್ಕರ ಕಣಿಕೆ ಯಂತ್ರವನ್ನು ಉಪಯೋಗಿಸಿರಿ "!

ನಮ್ಮ ಕಾರ್ಖಾನೆಯಲ್ಲಿ ಎರಡು ನಮೂನೆಯ ಕಣಿಕೆ ಕತ್ತರಿಯುವ ಯಂತ್ರಗಳು ತಯಾರಾಗುತ್ತವೆ. ಒಂದು ಕೈಯಂತ್ರ ಬೆಲೆ ೨೦ರೂ ಇನ್ನೊಂದು ಗಾಲೀಯಂತ್ರ ಬೆಲೆ ೮೫ ರೂಪಾಯಿ ಸಣ್ಣ ಕಮತವುಳ್ಳವರು ಕೈ ಯಂತ್ರವನ್ನು, ದೊಡ್ಡ ಕಮತವುಳ್ಳವರು ಗಾಲೀ ಯಂತ್ರವನ್ನು ಉಪಯೋಗಿಸಬಹುದು. ಕಣಿಕೆಯು ೪ ಇಂಚುಗಳಿಂದ ಒಂದು ಇಂಚಿನ ವರೆಗೆ ಕೊರೆಯಲ್ಪಡುತ್ತದೆ.

ಸವಿಸ್ತರ ಸಂಗತಿಯ ಬಗ್ಗೆ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ } ಕಿರ್ಲೋಸ್ಕರವಾಡಿ- ಜಿಲ್ಲಾ ಸಾತಾರಾ.

LOKHANDE



ಬಕ್ಷೀಸು ಮತ್ತು ಅರ್ಧ ಬೆಲೆಗೆ ಮೋಹಪಟ್ಟು ಮೋಸ ಹೋಗಬೇಡಿರಿ.

ಜೀನಸು ಉತ್ತಮ ಮತ್ತು ನಂಬಿಗೆಯುಳ್ಳದ್ದು ನಮ್ಮ ಅಂಗಡಿಯಲ್ಲಿ ಫಾವರ ಲೂಬಾ, ವೆಸ್ಟ ಎಂಡ, ಮೆರಡಿಯನ, ಓಮೇಗಾ ಮತ್ತು ಸ್ವಿಸ ಜನರಲ ಕಂಪನಿ ಮತ್ತು ಬೇರೆ ಪ್ರಸಿದ್ಧ ಕಂಪನಿಗಳ ಗಡಿಯಾರಗಳು ಈಗೀಗ ಬಂದಿದ್ದು, ಇವು ನೋಡಲಿಕ್ಕೆ ಸುಂದರವಾಗಿರುವಲ್ಲದೆ ಗಟ್ಟಿ ಮತ್ತು ಸರಿಯಾಗಿ ಹೊತ್ತು ತೋರಿಸುವಂಥವುಗಳಾಗಿವೆ. ಐದು ರೂಪಾಯಿಯಿಂದ ಬೇಕಾದ ಬೆಲೆಯ ಗಡಿಯಾರಗಳು ಸಿಗುವವು. ಕೊಳ್ಳುವಾಗ ಪ್ರತಿಯೊಂದಕ್ಕೆ ಗ್ಯಾರಂಟಿ ಕೊಡುವೆವು. ಒಮ್ಮೆ ತರಿಸಿ ನೋಡುವಿರಷ್ಟೇ!

ಪ್ರೊಪ್ರಾಯಿಟರ, ದತ್ತುರಾವ ಲೋಖಂಡೆ
ವಾಚ ಆ್ಯಂಡ ಕ್ಲಾಕ ಮರ್ಚಂಟ ಧಾರವಾಡ.

ಫಕ್ತ ೨ ಆಣೆಯೊಳಗೇ ಆಶ್ಚರ್ಯಕಾರಕ ವ ರಾಮಬಾಣ ಉಪಾಯ

ಮೊಮೆಂಟ ಕ್ಯೂರ

ತಲೆಶೂಲಿ, ಅರ್ಧ ತಲೆಶೂಲಿ, ಶೀತ, ಉಷ್ಣ ವ ನಿತ್ರಾಣ ವಗೈರೆಗಳಿಂದಾದ ಮಸ್ತಕಶೂಲಿಯ ತ್ವರೆಯಿಂದ ನಿರ್ಮೂಲ ಮಾಡಲು "ಮೊಮೆಂಟ ಕ್ಯೂರ" ನಿಗೆ ಸರಿಸಮಾನವಾದ ಔಷಧವು ಬೇರೆ ಇಲ್ಲ. ಹೆಚ್ಚು ಜನರು ಮಸ್ತಕಶೂಲೆಯನ್ನು ಸಹಿಸಲು ಆಗದೆ ಮಸ್ತಕಕ್ಕೆ ವಸ್ತ್ರಕಟ್ಟಿ ಎಣ್ಣೆ ವ ಅರ್ಕನ್ನು ಹಾಗಿಸುತ್ತಾರೆ. ಆದರೆ ವಿಚಾರಿಯಾದವರು ಮೋಮೆಂಟ ಕ್ಯೂರದ ಹುಡಿಯನ್ನು ಬಿಸಿ ಚಹಾದೊಂದಿಗೆ ಅಥವಾ ಬಿಸಿ ನೀರಿನೊಂದಿಗೆ ಹೊಟ್ಟೆಯಲ್ಲಿ ತಕ್ಕೊಂಡಲ್ಲಿ ಒಂದೇ ಕ್ಷಣದಲ್ಲಿ ಮಸ್ತಕಶೂಲಿಯು ನಿಲ್ಲುವುದು. ಇದಕ್ಕೆ ಅನೇಕ ಶಿಫಾರಸ ಪತ್ರಗಳು ಉಂಟು.

೧ ಚೀಟಿಗೆ ೨ ಆಣೆ. ಸ್ಯಾಂಪಲ ಸಲುವಾಗಿ ೩ ಆಣೆ ಪೋಸ್ಟ ತಿಕೀಟುಗಳನ್ನು ಕಳಿಸಿದಲ್ಲಿ ಕಳಿಸುವೆವು.

ಠಾವು— ಪಿ ಕನಕಾದಿತ್ಯ ಮೆಡಿಕಲ ಸ್ಟೋರ್ಸ, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ ಸ್ಟೇಶನರೋಡ ಹುಬ್ಬಳ್ಳಿ.

ಬಿ. ಅಂಕಲಗಿ ಬ್ಯಾಂಕ ಲಿಮಿಟೇಡ್

ಧಾರವಾಡ.

೧೯೧೩ ಇಸ್ವಿಯ ಕಂಪನಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ಚಾಲೂ ಖಾತೆ, ಠೇವು, ಸೇವಿಂಗ್ಸದ ಡಿಪಾಜಿಟ, ಸಾಲ, ವತ್ತಿ, ಹುಂಡಿ, ಮುಂತಾದ ಯಾವತ್ತು ವ್ಯವಹಾರಗಳು ನಡೆಯುವವು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿಮಾಡುವವರಿಂದ ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ ರಿಂದ ೧೦-೩೦. ಸಾಯಂಕಾಲ ೩ ರಿಂದ ೬ ವರೆಗೆ ನಡೆಯುವದು.

K.B. Ankalagi
ಮ್ಯಾನೇಜಿಂಗ ಡಾಯರೆಕ್ಟರ

ವಿಜಯ.

ಧಾರವಾಡ ತಾ- ೩೦-೩-೨೮ ನೇ ಇಸ್ವಿ

ಅಸೆಂಬ್ಲಿಯೊಳಗಿನ ಮೂರು ಠರಾವುಗಳು.

—೦—

ಇಬ್ಬರ ಜಗಳ ಮೂರನೆಯವರಿಗೆ ಲಾಭ.

—೦—

ಅಸೆಂಬ್ಲಿಯಲ್ಲಿ ಸ್ವರಾಜ್ಯ ಮತ್ತು ಸ್ವತಂತ್ರ ಪಕ್ಷೀಯರ ನಡುವೆ ಉಂಟಾಗಿರುವ ಪ್ರಬಲವಾದ ಮತಭೇದದಿಂದ ಸರಕಾರದ ಅಭೀಷ್ಟವು ಸಿದ್ಧಿಯಿಂದ ಪೂರ್ಣವಾಗುತ್ತಿರುವದು. ಹೋದ ವರ್ಷ ಚುನಾವಣೆಯ ಹೊಸ ಮನ್ವಂತರವಿತ್ತು. ಎರಡೂ ಪಕ್ಷಗಳು ಸೇರಿ, ಬಜೆಟ್ಟನ್ನು ನಾಮಂಜೂರ ಮಾಡಿದವು. ಈ ವರ್ಷ ಸ್ವತಂತ್ರ ಪಕ್ಷೀಯರು ಬೇರೆ ಮಾರ್ಗ ಹಿಡಿದರು. ಬ್ಯಾರಿಸ್ಟರ ಜಿನ್ನಾ ಸಾಹೇಬರಂಥವರು ತಾವು ಬಜೆಟ್ಟು ನಾಮಂಜೂರು ಮಾಡಿದ್ದು ತಪ್ಪಾಯಿತೆಂದು ಒಪ್ಪಿದರು. ಇದು ಅಪ್ರಬುದ್ಧ ಭಾಷಣವೆಂದು ಕಂಡು ಬಂದ ಕೂಡಲೆ ಇದೇ ಬಣದವರಾದ ಪಂಡಿತ ಮಾಲವಿಯಾಯವರು ಹೋದ ವರ್ಷ ನಾವು ತಪ್ಪು ಮಾಡಿದೆವೆಂಬ ಅನ್ನದಿದ್ದರೂ, ಈ ವರ್ಷ ಬಜೆಟ್ಟನ್ನು ರದ್ದು ಮಾಡುವ ವಿಷಯವಾಗಿ ಸ್ವರಾಜ್ಯ ಪಕ್ಷವನ್ನು ಕೂಡಿಕೊಳ್ಳಲಾರೆವೆಂದರು. ಎರಡೂ ಪಕ್ಷಗಳು ಕೂಡಿದರೇ ಸರಕಾರದ ವಿರುದ್ಧ ಬಹುಮತವಾಗುತ್ತದೆ. ಇವೆರಡೂ ಒಡೆದು, ಎತ್ತು ಎರೆಗೆಳೆದರೆ ಕೋಣ ಕೆರೆಗೆಳೆಯಿತೆಂಬಂತಾದ್ದರಿಂದ, ಸರಕಾರವು ಅಸೆಂಬ್ಲಿಯಲ್ಲಿ ಎದುರ್ಗಾರಿಯಾಗುವದರ ಬದಲು, ಪ್ರೇಕ್ಷಕವಾಗಿ, ಇಬ್ಬರ ಜಗಳ ನೋಡುತ್ತ ಕೂಡ್ರುವದು. ಸರಕಾರವು ಭೇದ ನೀತಿಯಿಂದ ರಾಜ್ಯಮಾಡುತ್ತದೆಂದು ಪಂಡಿತ ಮಾಲವಿಯಾ, ಬ್ಯಾರಿಸ್ಟರ ಜಿನ್ನಾ ಮೊದಲಾದ ಸ್ವತಂತ್ರರು ಆಗಾಗ್ಗೆ ಟೀಕಿಸುತ್ತಾರೆ, ಈ ಭೇದ ನೀತಿಯು ಪ್ರತ್ಯಕ್ಷ ತಮ್ಮ ಬಾಗಿಲಕ್ಕೆ ಬಂದಿದೆಂಬ ಇವರಿಗೆ ತಿಳಿದರೆ ಸಾಕು.

ಅಸೆಂಬ್ಲಿಯಲ್ಲಿ ಉಪ್ಪಿನ ಕರ ಕಡಿಮೆ ಮಾಡುವದು, ಪೋಸ್ಟಕಾರ್ಡಿನ ಬೆಲೆ ಕಡಿಮೆ ಮಾಡುವದು ಮತ್ತು ಸೀಮೆಯ ಎಣ್ಣೆಯ ಜಕಾತಿ ಕಡಿಮೆ ಮಾಡುವದು ಈ ಪ್ರಕಾರ ಮೂರು ಠರಾವುಗಳು ಬರುವವೆಂದು ನಿನ್ನಿನ ಸಂಚಿಕೆಯಲ್ಲಿ ಬರೆದಿದ್ದೇವೆ. ಇವತ್ತಿನ ಪತ್ರಿಕೆಯಲ್ಲಿ ಅವುಗಳ ಫಲಶ್ರುತಿ ಬರೆಯುವ ಹೊತ್ತು ಬಂದು ಹೋಯಿತು. ಲಾರ್ಡ ರೀಡಿಂಗ ಸಾಹೇಬರು ಸರ್ಟಿಫಿಕೇಟು ಕೊಟ್ಟು ಉಪ್ಪಿನ ೨|| ರೂಪಾಯಿ ಇದ್ದ ಕರವನ್ನು ೧|| ರೂಪಾಯಿ ಮಾಡಿದ್ದರು. ಇದನ್ನು ಎಂಟು ಅಥವಾ ೧೨ ಆಣೆ ಮಾಡಬೇಕೆಂದು ಸ್ವರಾಜ್ಯವಾದಿಗಳ ಮೂಲ ಉದ್ದೇಶವಾಗಿತ್ತು. ಇವೆರಡೂ ಬಹುಮತದಿಂದ ನಾಮಂಜೂರಾದವು. ಅದು ಸಾಧ್ಯವಾಗದಾಗಲು ರೂಪಾಯಿ ಕರವಿರಬೇಕೆಂದು ಠರಾವು ಪಾಸಾಯಿತು. ನೀವು ಈ ಕರ ಕಡಿಮೆ ಮಾಡಿದರೆ- ಬೇರೆ ಬೇರೆ ಖಾತೆಗಳಿಗೆ ಕೂಡಿದ ಪೈಲಾತದ ಗಂಟು ಇಲ್ಲದಂತಾಗುವದೆಂದು ಸರ ಬ್ಲೆಕೆಟ ಸಾಹೇಬರು ಭಯ ಹಾಕಿದ್ದರಿಂದ, ಉಳಿದಷ್ಟೇ ಲಾಭವೆಂದು ನಾಲ್ಕಾಣೆಯಷ್ಟು ಕಡಿಮೆಯಾಯಿತು. ಇದರಿಂದ ಸರಕಾರಕ್ಕೆ ಒಂದು ಕೋಟಿಯ ಕೊರತೆ ಬೀಳಿತು. ಇದನ್ನು ಕಡಿಮೆ ಮಾಡುವದಕ್ಕಾಗಿ ಸ್ವತಂತ್ರರು ಅಳಬುರುಕನದ ವೋಟು ಕೊಟ್ಟರು. ೬೧ ಅನುಕೂಲ ಮತ್ತು ೫೬ ಪ್ರತಿಕೂಲ ಅಂದರೆ ಐದೇ ಓಟುಗಳಿಂದ ಠರಾವು ಪಾಸಾಯಿತು. ಸ್ವರಾಜ್ಯ ಸ್ವತಂತ್ರ ಪಕ್ಷೀಯರು ಸರ ಬ್ಲೆಕೆಟ ಸಾಹೇಬರ ಬೆದರಿಕೆಗೆ ಹೆದರಿದರಲ್ಲದೆ, ಬಡವರ ಕಲ್ಯಾಣದ ವಿಚಾರ ಮಾಡಲಿಲ್ಲೆಂದು ಇದರಿಂದ ಧ್ವನಿತವಾಗುತ್ತದೆ.

ಎರಡನೆಯ ಮಹತ್ವದ ಠರಾವು ಪೋಸ್ಟಕಾರ್ಡಿನ ಬೆಲೆಯನ್ನು ಮೂರು ಕಾಸು ಮಾಡಬೇಕೆಂಬುದಾಗಿತ್ತು. ಸ್ವತಂತ್ರರು ಇದಕ್ಕೆ ಅನುಕೂಲ ಮತ ಕೊಡುವದು ನಿಶ್ಚಿತವಾಗಿತ್ತು. ವಿಲಾಯತಿಯಲ್ಲಿ ಕೂಡ ಈ ದರ ಕಡಿಮೆ ಮಾಡಿದ್ದಾರೆ. ಹಿಂದುಸ್ಥಾನದಲ್ಲಿಯೂ ಆ ಪ್ರಕಾರ ಆಗಬೇಕಾಗಿತ್ತು. ಆದರೆ ಸ್ವತಂತ್ರರು ಪ್ರತಿಕೂಲ ಮತ ಕೊಟ್ಟದ್ದರಿಂದ, ಇದು ನಾಮಂಜೂರಾಯಿತು. ಇದಕ್ಕೆ ಪ್ರತಿಕೂಲ ೬೮ ಮತ್ತು ಅನುಕೂಲ ೫೩ ಮತಗಳು ಬಿದ್ದವು. ಉಪ್ಪಿನ ಕರ ಕಡಿಮೆ ಮಾಡುವದಕ್ಕೆ ಮತ ಕೊಟ್ಟವರು ಕೂಡ ಇದರ ವಿರುದ್ಧ ಓಟು ಕೊಟ್ಟರೆಂದು ಸ್ಪಷ್ಟವಾಗುತ್ತದೆ.

ಮೂರನೆಯದಾದ ಪೆಟ್ರೋಲಿನ ಜಕಾತಿಯನ್ನು ಒಂದು ಗ್ಯಾಲನಕ್ಕೆ ಎರಡಾಣೆ ಕಡಿಮೆ ಮಾಡಬೇಕೆಂಬ ಠರಾವು ೫೦ ಅನುಕೂಲ ಮತ್ತು ೬೮ ಪ್ರತಿಕೂಲ ಮತಗಳಿಂದ ಬಿದ್ದುಹೋಯಿತು. ಇದರಲ್ಲಿಯೂ ಸರಕಾರಕ್ಕೆ ಎರಡಾಣೆ ಉಳಿತಾಯವಾಗಿ, ಕಳ್ಳೆಣ್ಣೆಯ ಕರವು ಹಾಗೇ ಉಳಿಯಿತು. ಇದು ಭೇದನೀತಿಯ ಪ್ರತ್ಯಕ್ಷ ಫಲವು.

ದೇವತೆಗಳಿಗೆ ಬಲಿಯೆಂದು ಕುರಿ ಕೋಳಿಗಳನ್ನು ಕೊಲ್ಲುವ ಪದ್ಧತಿಯನ್ನು ತೆಗೆದು ಹಾಕಬೇಕೆಂಬ ಠರಾವು ಪುದುಕೋಟೆ ಸಂಸ್ಥಾನದ ಕಾಯದೆ ಕೌನ್ಸಿಲ ಸಭೆಯಲ್ಲಿ ಬರಲಿಕ್ಕಿದೆ.

ಗೌರಕಾಯಸ್ಥರಿಗೆ ಸಿವ್ಹಿಲ ಸರ್ವಂಟರಾಗುವ ಉಪದೇಶ.

—೦—

ಹೂವು ಮಾರಿದಲ್ಲಿ ಹುಲ್ಲು ಮಾರಬಾರದು.

—೦—

ಹಿಂದುಸ್ಥಾನದ ಬದಲಾದ ಪರಿಸ್ಥಿತಿಯ ಮೂಲಕ ಇಂಗ್ಲಿಷ ತರುಣರು ಸಿವ್ಹಿಲ ಸರ್ವೀಸ ಪರೀಕ್ಷೆಗೆ ಕೂಡ್ರುವದು ಬಹಳ ಕಡಿಮೆಯಾಗಿರುತ್ತದೆಂಬ ಸಂಗತಿಯನ್ನು ಈ ಮೊದಲು ಬರೆದಿರುತ್ತೇವೆ. ತರುಣ ಜನರು ಹಿಂದುಸ್ಥಾನದ ರಾಜ್ಯಕಾರಭಾರದ ವಿಷಯವಾಗಿ ಉಪೇಕ್ಷೆ ಮಾಡಬಾರದು; ಪರೀಕ್ಷೆಗೆ ಕೂತು ಪಾಸಾಗಿ, ದೊರೆತನ ಮಾಡಲು ಏಳು ಸಾವಿರ ಮೈಲು ದಾಟಿ ಹೋಗಬೇಕೆಂದು ಉಪದೇಶ ಮಾಡಲು- ಲಾರ್ಡ ಮೆಸ್ಟನ ಮತ್ತು ಅನೇಕ ಪ್ರತಿಷ್ಠಿತರು ಮುಂದೊರೆದಿದ್ದಾರೆ. ಇವರು ಇಂಗ್ಲಂಡ ಮಾತ್ರವಲ್ಲ, ಆಯರ್ಲಂಡದ ಯುನಿವ್ಹರ್ಸಿಟಿಯಾದ ಡಬ್ಲಿನಕ್ಕೂ, ಸ್ಕಾಟಲಂಡದ ಯುನಿವ್ಹರ್ಸಿಟಿಯಾದ ಎಡಿಂಬರೋಕ್ಕೂ ಹೋಗಿ, ಅಲ್ಲಿಯ ಕಾಲೇಜುಗಳ ಪ್ರೊಫೇಸರರ ಸಹಾಯದೊಂದಿಗೆ ವಿದ್ಯಾರ್ಥಿಗಳಿಗೆ ಗುರುಮಂತ್ರ-ಕಿವಿಮಂತ್ರ ಹೇಳುತ್ತಿದ್ದಾರೆ. ಇವರು ಸ್ವಬುದ್ಧಿಯಿಂದ ರಾಜಕೀಯ ಮಿಶನರಿಗಳಾಗಿಲ್ಲ. ಸ್ಟೇಟ ಸೇಕ್ರೆಟರಿಯಾದ ಲಾರ್ಡ ಬರ್ಕನ ಹೆಡ್ಡ ಸಾಹೇಬರು ಲಾರ್ಡ ಮೆಸ್ಟನ ಸಾಹೇಬರೇ ಮೊದಲಾಗಿ ಹಲವರ ಒಂದು ಕಮಿಟಿ ಕೂಡಿಸಿ, ಅವರಿಂದ ಈ ವ್ಯಾಖ್ಯಾನ ಮಾಲಿಕೆ ಪ್ರಾರಂಭಿಸಿದ್ದಾರೆ. ಇವರ ಪ್ರವಾಸದ ವೆಚ್ಚವನ್ನು ಸ್ಟೇಟ ಸೇಕ್ರೆಟರಿಯು ಟ್ರೆಜರಿಯಿಂದ ಕೊಡುವರು. ಈ ಸ್ಥಿತಿಯು ತೀರ ಕಳವಳವಾಗಿರುತ್ತದೆಂದು ಲಾರ್ಡ [illegible] ಸಾಹೇಬರು ಹೇಳುತ್ತಾರೆ. ಇದರಲ್ಲಿ ಮುಖ್ಯವಾದ ಪ್ರಶ್ನವು ಬುದ್ಧಿಸಲಾಗಿಲ್ಲ. ಸರಕಾರದ ತಳವಳಿಯಾಗಿರುತ್ತದೆ. ಇಂಗ್ಲಿಷ ತರುಣರು ಒಲ್ಲೆನ್ನುತ್ತಿದ್ದರೂ, ಅವರ ಮನಸ್ಸೊಲಿಸುವದರಿಂದಾದರೂ ಸರಕಾರದ ಉದ್ದೇಶವು ಎಷ್ಟರ ಮಟ್ಟಿಗೆ ಕೊನೆಗಾಣುವದೆಂಬದು ಸಂಶಯದ ಪ್ರಶ್ನವಾಗಿರುತ್ತದೆ. ಏಕಂದರೆ ನೀವು ಇಂಗ್ಲಿಷ ಜನರು ಈ ದೇಶಕ್ಕೆ ದೊರೆಯಾಗಿ ಬರಬೇಡಿರಿ; ದಾಸಾನುದಾಸರಾಗಿ ಬನ್ನಿರೆಂದು ಸ್ವರಾಜ್ಯಪಕ್ಷೀಯರು ಕೌನ್ಸಿಲದಲ್ಲಿ [illegible] ಮಾಡಿ ಹೇಳುತ್ತಿದ್ದಾರೆ. ತಮ್ಮ ಹಿರಿಯರು ದೊರೆತನ ಮಾಡಿದ ದೇಶದಲ್ಲಿ ತಾವು ದಾಸರಾಗಿ ಹೋಗಬೇಕಾಗುವದು ತರುಣರಿಗೆ ಅಸಹ್ಯವೆನಿಸುವದು ಸ್ವಾಭಾವಿಕವು. ಹೂವು ಮಾರಿದಲ್ಲಿ ಯಾರೂ ಹುಲ್ಲು ಮಾರಲೊಲ್ಲರು.

ಮದ್ರಾಸದ ರೆವ್ಹಿನ್ಯೂ ಬೋರ್ಡಿಗೆ ಮಂಗಳಾರುತಿಯು

—o—

ಮುಂಬಯಿ ಇಲಾಖೆಯಲ್ಲಿರುವಂತೆ ಮದ್ರಾಸ ಇಲಾಖೆಯಲ್ಲಿ ಕಮಿಶನರರಿರುವದಿಲ್ಲ. ರೆವ್ಹಿನ್ಯೂ ಬೋರ್ಡವಿರುವದು. ಇದು ಮುಲಕೀ ಕೆಲಸವನ್ನು ನೋಡುವದು. ಈ ಬೋರ್ಡಿನಲ್ಲಿ ಮೊದಲು ನಾಲ್ವರು ಮೆಂಬರಿರುತ್ತಿದ್ದರು. ಈಗ ಇಬ್ಬರಿದ್ದಾರೆ. ಇವರಿಬ್ಬರಿಂದಾದರೂ ಪ್ರಯೋಜನವಿರುವದಿಲ್ಲೆಂದು ಮೆಂಬರರು ಬಗೆದು, ಈ ಬೋರ್ಡನ್ನೇ ತೆಗೆದು ಹಾಕಬೇಕೆಂಬ ಠರಾವು ತಂದರು. ಠರಾವಿಗೆ ಮಂತ್ರಿಗಳ ಪಕ್ಷದ ಜನರೂ ಅನುಕೂಲ ಮತಕೊಟ್ಟದ್ದರಿಂದ, ಪ್ರಚಂಡ ಬಹುಮತದಿಂದ ಪಾಸಾಯಿತು. [illegible] ಮೂವರು ಕೌನ್ಸಿಲರರು ಮತ್ತು ಮೂವರು ಮಂತ್ರಿಗಳಾಗಿದ್ದಾಗ ಬೋರ್ಡಿನ ಅಗತ್ಯವೇ ಉಳಿಯಲಿಲ್ಲ. ಬದಲಾದರೆ ಒಬ್ಬ ಕಮಿಶನರರನ್ನಾದರೂ ಅವಶ್ಯಗೊಳ್ಳುವ ಕಾರ್ಯಕ್ಕೆ ನೇಮಿಸಬೇಕೆಂದು ಕೆಲವರು ಸೂಚಿಸಿದರು. ಮೆಂಬರರು ಈ ಸೂಚನೆಯನ್ನು ಒಪ್ಪದೆ, ಇಡೀ ಬೋರ್ಡಿಗೆ ಮಂಗಳಾರುತಿ ಮಾಡಬೇಕೆಂಬುದಾಗಿ ಮತಕೊಟ್ಟರು.

———

ಲೋಕಪಕ್ಷದ ವಿರುದ್ಧ ಸರಕಾರ ಪಕ್ಷದ ಚಳವಳಿಯು.

—o—

ನಾಗಪೂರ ಇಲಾಖೆಯಲ್ಲಿ ಸ್ವರಾಜ್ಯ ಪಕ್ಷೀಯರು ಸರಕಾರದ ಆಟ ನಡೆಯದಂತೆ ವಿರೋಧ ಮಾಡಿ ಕೊಟ್ಟದ್ದು ಅವರ ಹೊಟ್ಟೆಯಲ್ಲಿ ಕಳವಳವನ್ನುಂಟು ಮಾಡುವದು ಸಹಜವಾದದ್ದು. ಸ್ವರಾಜ್ಯ ಪಕ್ಷೀಯರ ವಿರುದ್ಧ ತಾವೂ ಚಳವಳಿ ಮಾಡಿ, ಲೋಕಮತವನ್ನು ಅನುಕೂಲ ಮಾಡಿಕೊಳ್ಳಬೇಕೆಂದು ಹಿಂದಿನ ಗವ್ಹರ್ನರರಾದ ಸರ ಸ್ಲಾಯಿ ಸಾಹೇಬರು ಇಲಾಖೆಯ ತುಂಬ ಪ್ರವಾಸ ಮಾಡಿದರು. ಇವರ ತರುವಾಯವೂ ಗೃಹಮಂತ್ರಿಯಾದ ಸರ ಮೋರೋಪಂತ ಜೋಶಿಯವರು ವ್ಯಾಖ್ಯಾನಗಳ ಸತ್ರ ನಡೆಸಿದರು. ಸರಕಾರೀ ಕಾರಭಾರ; ಸರಕಾರದ ದುಡ್ಡು; ಅಂದ ಬಳಿಕ ಅವರಿಗೆ ಯಾತರ ಆಯಾಸವೂ ಇರಲಿಲ್ಲ. ಈ ವ್ಯಾಖ್ಯಾನಗಳ ಜೊತೆಗೆ ಒಂದಿಷ್ಟು ಹ್ಯಾಂಡಬಿಲ್ಲುಗಳನ್ನು ಮುದ್ರಿಸಿ ದೇಶದ ತುಂಬ ಹಂಚಿದರು. ಇದಕ್ಕೆ ಇಪ್ಪತ್ತೆಂಟು ಸಾವಿರ ವೆಚ್ಚ ಬಂತು. ಮೆಂಬರರು ಸರಕಾರದ ಈ ಕೃತ್ಯವನ್ನು ನಿಷೇಧಿಸಿದ ಠರಾವು ಪಾಸು ಮಾಡಿದರು. ಅನಂತರ ಈಗ ಕೌನ್ಸಿಲದಲ್ಲಿ ಪಾಸಾದ ಠರಾವಿನ ವಿರುದ್ಧ ಇವರು ದೇಶದ ತುಂಬ ಚಳವಳಿ ಮಾಡದಂತೆ ಇವರ ಬಾಯಿ ಕಟ್ಟುವ ಠರಾವು ತಂದಿದ್ದಾರೆ.

———

ಮನುಷ್ಯರ ಮೇಲಿನ ನಾಯಿಯ ಪ್ರೀತಿಯು.

—o—

ನಾಯಿಯು ಸಾಕಿದವನ ಮೇಲೆ ಮಾತ್ರ ಪ್ರೀತಿಯನ್ನು ಮಾಡಿ, ಆತನ ಭೃತ್ಯವಾಗಿರುತ್ತದೆಂದು ಸಾಮಾನ್ಯ ತಿಳುವಳಿಕೆ. ಯಾವನೊಬ್ಬನು ಬೇರೊಬ್ಬನ ಸಾಕಿದ ನಾಯಿಯನ್ನು ತನ್ನ ಮನೆಗೆ ಒಯ್ದರೆ ಆತನಿಗೆ ಎರಡು ಪೌಂಡು ದಂಡ ಮಾಡಬೇಕೆಂದು ಇಂಗ್ಲಂಡದ ಕಾಯದೆ. ಈ ಕಾಯದೆಯ ವಿರುದ್ಧ ಜಡ್ಜರು ಒಂದು ತೀರ್ಪು ಕೊಟ್ಟಿದ್ದಾರೆ. ಒಬ್ಬನ ನಾಯಿಯು ಇನ್ನೊಬ್ಬನ ಬೆನ್ನು ಹತ್ತಿ ಹೋಯಿತು. ಇದನ್ನು ಮೊದಲಿನ ಯಜಮಾನನ ಮನೆಗೆ ಕಳಿಸಿದರೂ, ಒಂದುಕಟ್ಟಿ ಹಾಕಿದರೂ ಅದು ಸಮಯ ಸಾಧಿಸಿ, ಆ ಮನೆ ಬಿಟ್ಟು, ಹೊಸ ಯಜಮಾನನ ಮನೆಗೆ ಹೋಯಿತು. ನಾಯಿಗೂ ತನ್ನ ಮಾಲಕನನ್ನು ಗೊತ್ತು ಮಾಡಿಕೊಳ್ಳುವ ಬುದ್ಧಿಯುಂಟೆಂದು ಜಡ್ಜರು ತೀರ್ಪು ಹೇಳಿದರು. ಕಾಯದೆಯ ಫೇರಬದಲು ಮಾಡಬೇಕಾಯಿತು.

———

ಮಂಗನನ್ನು ಮನುಷ್ಯ ಮಾಡುವ ಸಾಹಸಕ್ಕೆ ಯತ್ನ

—o—

ಮನುಷ್ಯನ ಪೂರ್ವಜನ್ಮವು ಮಂಗದ ಕುಲವಾಗಿತ್ತೆಂದು ಸರ್ವಸಾಧಾರಣವಾಗಿ ತಿಳಿಯಲ್ಪಟ್ಟಿದೆ. ಮಂಗನನ್ನೇ ಮನುಷ್ಯನಾಗಿ ಮಾಡುವ ಪ್ರಯತ್ನವನ್ನು ಯಾರೂ ಮಾಡಲಿಲ್ಲ. ಈ ಉದ್ಯೋಗವನ್ನು ಜರ್ಮನ ಪಶುವಿದ್ಯಾವಿಶಾರದನಾದ [illegible] ಕೈಕೊಂಡಿದ್ದಾನೆ. ಆತನು ಒಂದು ಮಂಗನ ಮರಿಯನ್ನು ತಂದು ಅದಕ್ಕೆ ಬಾಟ್ಲಿಯಿಂದ ಹಾಲು ಕುಡಿಸಹತ್ತಿದನು. ಸಂರಕ್ಷಣೆಗಾಗಿ ಒಬ್ಬ ದಾಯಿಯನ್ನಿಟ್ಟನು. ದಾಯಿಯು ಹುಡುಗರಿಗೆ ಕಲಿಸುವಂಥ ಹಲವು ಆಟಗಳನ್ನು ಕಲಿಸಿದಳು. ಮಂಗವು ಈಗ ದೊಡ್ಡದಾಗಿ ಬಾಟ್ಲಿಯಿಂದ ಹಾಲು ಕುಡಿಯುವದನ್ನು ಬಿಟ್ಟು, ಚಿಕ್ಕ ಮಕ್ಕಳಂತೆ ತರತರದ ಆಟನೋಟಗಳಲ್ಲಿ ಬುದ್ಧಿಯ ಉಪಯೋಗ ಮಾಡುತ್ತಿರುವದು. ಇದು ತಾನಾಗಿ ವಿದ್ಯುತ್ತಿನ ದೀಪಹತ್ತುವದು ಮತ್ತು ಆರಿಸುವದು ದಾಯಿ ಬರಲೆಂದು ಗಂಟೆಬಾರಿಸುವದು. ಗೊಂಬೆಗಳನ್ನಿಟ್ಟುಕೊಂಡು ಆಡುವದು. ಪ್ರೊಫೆಸರರು ಬರಬರುತ್ತ ಇದಕ್ಕೆ ಓದು ಬರಹ ಕೂಡ ಕಲಿಸುವರು.

———

ವಿವಿಧ ವರ್ತಮಾನಗಳು.

—o—

ಜರ್ಮನಿಯ ಓರ್ವ ದೊರೆಸಾನಿಯಾದ ಶ್ಯಾಮಬರ್ಗ ಫಗ್ಗರೆಳೆಂಬವಳು ಹತ್ತು ವರ್ಷದವಳಾದಂದಿನಿಂದ ಹಾಲು ಮತ್ತು ಹತ್ತಿಯನ್ನು ಮಾತ್ರ ತಿಂದು ಜೀವಿಸುತ್ತಾ ಬಂದಿದ್ದಾಳೆ. ಇವಳಿಗೆ ಎರಡು ಮಕ್ಕಳಾಗಿವೆ. ಇವಕ್ಕೂ ತನ್ನಂತೆ ಆಹಾರ ಕೊಡುತ್ತಿದ್ದಾಳೆ.

———

ಅಜನಿಯಲ್ಲಿರುವ ಪೋಸ್ಟ ಮತ್ತು ತಾರ ಆಫೀಸಗಳಲ್ಲಿ ಕೆಲಸ ಮಾಡಲು ಮಂಗಗಳಿಗೆ ಶಿಕ್ಷಣ ಕೊಡುವಂತೆ ಈ ಖಾತೆಯ ಡಾಯರೆಕ್ಟರ ಜನರಲರು ಆಲೋಚನೆ ಮಾಡುತ್ತಿರುವದು ನಿಜವೇ ಹೇಗೆಂದು ಅಸೆಂಬ್ಲಿಯಲ್ಲಿ ಮಾಡಿದ ಪ್ರಶ್ನಕ್ಕೆ ಈ ಸಂಗತಿಯು ತಮಗೆ ತಿಳಿಯದೆಂದು ಸರ ಮುನಿಮನ್ನರು ಉತ್ತರ ಕೊಟ್ಟರು.

———

ಹಿಂದುಸ್ಥಾನದ ಬಜೆಟ್ಟಿನಲ್ಲಿ ಆಪದ್ಧನವೆಂದು ಕಾದಿಟ್ಟ ೭೪ ಲಕ್ಷದಲ್ಲಿ ಮುಂಬಯಿ ಇಲಾಖೆಗೆ ೩೩ ಲಕ್ಷ, ಬ್ರಹ್ಮದೇಶಕ್ಕೆ ೧೧ ಲಕ್ಷ, ನಾಗಪೂರ ನಾಡಿಗೆ ೯ ಲಕ್ಷ ಮತ್ತು ಆಸಾಮಕ್ಕೆ ೬ ಲಕ್ಷ ಕೊಡುವೆವೆಂದು ಸರ ಬ್ಲೆಕೆಟ ಸಾಹೇಬರು ಜಾಹೀರ ಮಾಡಿದ್ದಾರೆ.

———

ರಾಜಪಿಂಪಳಾ ಸಂಸ್ಥಾನದ ಮಹಾರಾಜರು ತಮ್ಮ ರಾಜ್ಯದಲ್ಲಿ ಸಕ್ತಿಯ ಶಿಕ್ಷಣವು ಸಂಸ್ಥಾನದ ವೆಚ್ಚದಿಂದಲೇ ಅಮಲಿನಲ್ಲಿ ಬರಬೇಕೆಂದು ಅಪ್ಪಣೆ ಮಾಡಿದ್ದಲ್ಲದೆ, ಉಚ್ಚ ಮತ್ತು ಕಲಾ ಶಿಕ್ಷಣಕ್ಕಾಗಿ ಯೋಗ್ಯ ವಿತರಣೆಯಿಂದ ದ್ರವ್ಯ ಕೊಡುವಂತೆ ವಾಗ್ದಾನ ಮಾಡಿದ್ದಾರೆ.

———

ಮುಂಬಯಿಯ ಬಾವಲಾ ಸಾಹೇಬರ ಕೊಲೆಯೊಳಗಿನ ಆರೋಪಿಗಳ ಪರವಾಗಿ ಕಲಕತ್ತೆಯ ಸುಪ್ರಸಿದ್ಧ ಸ್ವರಾಜ್ಯವಾದಿಯಾಗಿ, ದೇಶಬಂಧು ದಾಸರ ಬಲಗೈಯಂತಿರುವ ಬ್ಯಾರಿಸ್ಟರ ಸೇನಗುಪ್ತರು ಕೆಲಸ ನಡಿಸಲು ಬರುವರೆಂದು ನಿಶ್ಚಿತವಾಗಿ ಪ್ರಸಿದ್ಧವಾಗಿರುತ್ತದೆ.

———

ಹಾಯಸ್ಕೂಲ ಮತ್ತು ಕಾಲೇಜಗಳಲ್ಲಿ ವಿದ್ಯಾರ್ಥಿಗಳಿಗೆ ಬಂದೂಕಿನಿಂದ ಗುರಿ ಹಿಡಿಯುವ ಹೊಡೆಯುವ ವಿದ್ಯೆಯನ್ನು ಕಲಿಸಬೇಕೆಂದು ಡಾಕ್ಟರ ಮುಂಜೆಯವರು ನಾಗಪೂರದ ಕೌನ್ಸಿಲದಲ್ಲಿ ಠರಾವು ತರಹತ್ತಿದ್ದಾರೆ.

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ, ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಚಂದಗೆಯು ಆರುಲಕ್ಷದ ಮೇಲುಂಟು. ಚೆಕ್ಸ, ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ನಡೆಲ್ಪಡುವದು. ಕಾಳಿಯ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೆಜಿಂಗ ಡಾಯರೆಕ್ಟರ

ಆರ್. ಎಮ್. ಜ್ಹೋನ್ ಎಂಡ ಸನ್ಸ. ಹುಬ್ಬಳ್ಳಿ.

ಎಜಂಟ್ಸ ಫೋರ ಕಾರಬೋನಿಕ್ ಅಸಿಡ್ಡ ಗ್ಯಾಸ, ಮ್ಯಾನುಫ್ಯಾಕ್ಚರರ್ ಆಫ್ ಏರೆಟೆಡ ವಾಟರ್ಸ.



ತಾವು ಆರ್ಡರ ಬೇಗ ಕಳಿಸಿರಿ

ನಮ್ಮಲ್ಲಿ ಸಿಗುವ ಸಾಮಾನುಗಳ ವಿವರ.

ಫುಲ್‌ಗ್ಯಾಸ ಸಿಲೆಂಡರಗಳು ಇಂಗ್ಲೀಷ ಮತ್ತು ಜರ್ಮನ ಪೆಟೆಂಟ ಕಾರ್ಡ್ಸ, ಎಮ. ಬಿ. ಸೋಡಾ ವಾಟರ ಬಾಟಲಗಳು, ೫೫೦ ನಂ. ಸಾಬೀನ ಡಬ್ಬಿ ೧ ಪೌಂಡಿನವು. ಸೋಡಾವಾಟರ್ ಮಶಿನುಗಳು ಮತ್ತು ಎಲ್ಲ ತರದ ಕಲರಿನ ಬಾಟಲಿಗಳ ಎಸೆನ್ಸಗಳು, ಅಮೆರಿಕನ್ ಆಯಿಸ್ಕ್ರೀಮ ಸೋಡಾ, ಬನಾನಾ, ಕೋಲಾಚೆಂಪೇಜನ್, ಲೆಮನ್ ನಂ. ೧ ಲೆಮನ್ ಜುಯಿಸ್ ಸೋಡಾ ನಂ. ೧ ಮೇಂಗೋ, ಆರೇಂಜ, ಫಾಯಿನಾಪಲ್, ಪಿಸ್ಕಮಿಳವ್, ಕ್ವಿನಿನ್ ಟಾನಿಕ್, ರಾಜಬಿರಿ ನಂ. ೧ ಕೋಲ ನಂ. ೧ ಸ್ಪೇಶ ಜಿಂಜರ್ ಬೀರ ನಂ. ೧, ರಬ್ಬರ್ ರಿಂಗ್ಸ, ಬೆಸ್ ಇತರ ಮಶಿನರಿ ಪಾರ್ಟುಗಳು ನಮ್ಮಲ್ಲಿ ಸಿಗುತ್ತವೆ. ಮತ್ತು ಶುದ್ಧ ನೀಲಗಿರಿ ಎಣ್ಣೆಯು ಎಲ್ಲ ತರದ ಬಾಟ್ಲಗಳು ಸಿಗುತ್ತವೆ. ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಕೊಡುತ್ತೇವೆ. ನಮ್ಮಲ್ಲಿ ಕಬ್ಬಿಣದ ಮಿಲಿಟರಿ ಸಿಂಗಲ ಕಾಟ್ಸಗಳು ಸೋವಿ ದರದಿಂದ ಮಾರಲಿಕ್ಕೆ ಸಿಗುತ್ತವೆ.



ಹೆಚ್ಚಿಗೆ ಮಾಹಿತಿಗೆ ಬರೆಯಿರಿ

ಅಡ್ರೆಸ್— R. M. John &Sons.
Mission Compound HUBLI

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

—•—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ

ನಿತ್ಯಪತ್ರಿಕೆ

೧೨ ತಿಂಗಳಿಗೆ	೧೨—೮—೦ ರೂ
೬ ,,	೭—೦—೦ ರೂ
೩ ,,	೪—೦—೦ ರೂ
ವಾರಪತ್ರಿಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ, ಧಾರವಾಡ

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಐದು ಆಣೆ ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಒಳಗಳಿಗೆ ಇಮ್ಮಡಿಚಾರ್ಜ ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

LOKHANDE

Lasts A life time



Strongest Watches

ಬಕ್ಷೀಸು ಮತ್ತು ಅರ್ಧ ಬೆಲೆಗೆ ಮೋಹಪಟ್ಟು ಮೋಸ ಹೋಗಬೇಡಿರಿ.

ಜೇನನು ಉತ್ತಮ ಮತ್ತು ನಂಬಿಗೆಯುಳ್ಳದ್ದು ನಮ್ಮ ಅಂಗಡಿಯಲ್ಲಿ ಫಾವರೆ ಲೂಬಾ, ವೆಸ್ಟಎಂಡ, ಮೆರಡಿಯನ, ಓಮೇಗಾ ಮತ್ತು ಸ್ವಿಸ ಜನರಲ ಕಂಪನಿ ಮತ್ತು ಬೇರೆ ಪ್ರಸಿದ್ಧ ಕಂಪನಿಗಳ ಗಡಿಯಾರಗಳು ಈಗ ಬಂದಿವೆ, ಇವು ನೋಡಲಿಕ್ಕೆ ಸುಂದರವಾಗಿರುವಲ್ಲದೆ ಗಟ್ಟಿ ಮತ್ತು ಸರಿಯಾಗಿ ಹೊತ್ತು ತೋರಿಸುವಂಥವಗಳಾಗಿವೆ. ಐದು ರೂಪಾಯಿಯಿಂದ ಬೇಕಾದ ಬೆಲೆಯ ಗಡಿಯಾರಗಳು ಸಿಗುವವು. ಕೊಳ್ಳುವಾಗ ಪ್ರತಿಯೊಂದಕ್ಕೆ ಗ್ಯಾರಂಟಿ ಕೊಡುವೆವು. ಒಮ್ಮೆ ತರಿಸಿ ನೋಡುವಿರಷ್ಟೇ?

ಪ್ರೊಪ್ರಾಯಿಟರ, ದತ್ತಾತ್ರರಾವ ಲೋಖಂಡೆ
ವಾಚ ಆ್ಯಂಡ ಕ್ಲಾಕ ಮರ್ಚಂಟ ಧಾರವಾಡ

ದಿ. ಅಂಕಲಗಿ ಬ್ಯಾಂಕ ಲಿಮಿಟೇಡ್ ಧಾರವಾಡ.

—o—

೧೯೧೩ ಇಸ್ವಿಯ

ಕಂಪನಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ಚಾಲೂ ಖಾತೆ, ಠೇವು, ಸೆವ್ಹಿಂಗ್ಸದ ಡಿಪಾಜಿಟ, ಸಾಲ, ವತ್ತಿ, ಹುಂಡಿ, ಮುಂತಾದ ಯಾವತ್ತು ವ್ಯವಹಾರಗಳು ನಡಿಯುವವು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿಮಾಡುವವರಿಂದ ಸಮಕ್ಷಮ ತಿಳಕೊಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ ರಿಂದ ೧೦-೩೦. ಸಾಯಂಕಾಲ ೩ ರಿಂದ ೬ ರವರೆಗೆ ನಡಿಯುವದು.

K.B. Ankalagi
ಮ್ಯಾನೆಜಿಂಗ ಡಾಯರೆಕ್ಟರ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443]

ನಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೬) ಧಾರವಾಡ ಶನಿವಾರ ತಾರೀಖು ೨೧ನೇ ಮಾರ್ಚ ೧೯೨೫ (ಸಂಚಿಕೆ ೬೬

ಬೇಸಿಗೆ ಪ್ರಾರಂಭವಾಯಿತು!

ದನಗಳ ಆಹಾರವಾದ ಕಣಿಕೆಯನ್ನು ಕಾದಿರಿ!!

ಕಿರ್ಲೋಸ್ಕರ ಕಣಿಕೆ ಯಂತ್ರವನ್ನು ಉಪಯೋಗಿಸಿರಿ!!!

ನಮ್ಮ ಕಾರ್ಖಾನೆಯಲ್ಲಿ ಎರಡು ನಮೂನೆಯ ಕಣಿಕೆ ಕೊರೆಯುವ ಯಂತ್ರಗಳು ತಯಾರಾಗುತ್ತವೆ. ಒಂದು ಕೈಯಂತ್ರ ಬೆಲೆ ೨೦ರೂ. ಇನ್ನೊಂದು ಗಾಲೀಯಂತ್ರ ಬೆಲೆ ೮೫ ರೂಪಾಯಿ ಸಣ್ಣ ಕಮತವುಳ್ಳವರು ಕೈ ಯಂತ್ರವನ್ನೂ, ದೊಡ್ಡ ಕಮತವುಳ್ಳವರು ಗಾಲೀ ಯಂತ್ರವನ್ನೂ ಉಪಯೋಗಿಸಬಹುದು. ಕಣಿಕೆಯು ೪ ಇಂಚುಗಳಿಂದ ಒಂದು ಇಂಚಿನ ವರೆಗೆ ಕೊರೆಯಲ್ಪಡುತ್ತದೆ.

ಸವಿಸ್ತರ ಸಂಗತಿಯ ಬಗ್ಗೆ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ } ಕಿರ್ಲೋಸ್ಕರವಾಡಿ-
ಜಿಲ್ಲಾ ಸಾತಾರಾ.

ದಿ ಪುನಾ ಬ್ಯಾಂಕ ಲಿಮಿಟೆಡ
ಆ್ಯಂಡ ರಿಡೂಸಡ

ನೋಟೀಸು

(ಮೂರನೆ ಹಪ್ತೆಯು)

ನೋಟೀಸು ಕೊಡುವದೇನಂದರೆ— ಸದರ ಬ್ಯಾಂಕಿನಲ್ಲಿ ಠೇವು ಇಟ್ಟವರಿಗೆ ಮತ್ತು ಸೇವ್ಹಿಂಗ ಬ್ಯಾಂಕ ಹಾಗು ಕರಂಟ ಠೇವಿನ ಖಾತೆದಾರರಿಗೆ ಕೊಡತಕ್ಕ ರಕಮಿನಲ್ಲಿ ಮೂರನೇ ಹಪ್ತೆಯು ಒಂದು ನಾಲ್ಕಾಂಶ ರಕಮು ಕೊಡುವ ಠರಾವು ಮಾಡಿರುತ್ತದೆ. ಆದ್ದರಿಂದ ಈ ಪ್ರಕಾರ ರಕಮು ತಕ್ಕೊಳ್ಳುವ ಇಚ್ಛೆಯುಳ್ಳವರು ರಜೆಯ ದಿವಸಗಳನ್ನು ಹೊರ್ತು ಪಡಿಸಿ, ಯಾವದೇ ದಿವಸ ಮಧ್ಯಾನ್ಹದಲ್ಲಿ ೧೨ ರಿಂದ ೩ ಹೊಡಿಯುವ ತನಕ, ಲಿಕ್ವಿಡೇಟರರ ಕಚೇರಿಯಲ್ಲಿ ಹಾಜರಾಗಿ ಪಾವತಿ ಕೊಟ್ಟು, ರಕಮು ತಗೆದುಕೊಂಡು ಹೋಗುವ ವ್ಯವಸ್ಥೆ ಮಾಡಿಕೊಳ್ಳಬೇಕು ಬರುವಾಗ ಸೇವಿಂಗ್ಸ ಬ್ಯಾಂಕ ಮತ್ತು ಕರಂಟ ಅಕೌಂಟಿನ ಪುಸ್ತಕ ಮತ್ತು ಡಿಪಾಜಿಟದ ಪಾವತಿಗಳನ್ನು ತಕ್ಕೊಂಡು ಬರಬೇಕು, ತಿಳಿಯುವದು.

ತಾರೀಖು ೧೨ ಮಾರ್ಚ ೧೯೨೫ ನೇ ಇಸ್ವಿ

L. J. APTE.
ಲಿಕ್ವಿಡೇಟರ
ಪುನಾ ಬ್ಯಾಂಕ ಲಿಮಿಟೆಡ ಆ್ಯಂಡ
ರಿಡ್ಯೂಸಡ

ವಿಳಾಸ ಪುಣೇ ಸದಾಶಿವಪೇಟ ಮನಿ ನಂಬರ ೩೩೫ ನಾಗನಾಥನ ಪಾರದ ಹತ್ತರ

ಫಕ್ತ ೨ ಆಣೆಯೊಳಗೇ ಆಶ್ಚರ್ಯಕಾರಕ ವ ರಾಮಬಾಣ ಉಪಾಯ

ಮೊಮೆಂಟ ಕ್ಯೂಅರ

ತಲೆಶೂಲಿ, ಅರ್ಧ ತಲೆಶೂಲಿ, ಶೀತ, ಉಷ್ಣ ವ ನಿತ್ರಾಣ ವಗೈರೆಗಳಿಂದಾದ ಮಸ್ತಕಶೂಲಿಯ ಸ್ಥೈರ್ಯದಿಂದ ನಿರ್ಮೂಲ ಮಾಡಲು "ಮೊಮೆಂಟ ಕ್ಯೂಅರ" ಇದಕ್ಕೆ ಸರಿಸಮಾನವಾದ ಔಷಧವು ಬೇರೆ ಇಲ್ಲ. ಹೆಚ್ಚು ಜನರು ಮಸ್ತಕಶೂಲೆಯನ್ನು ಸಹಿಸಲು ಆಗದೆ ಮಸ್ತಕಕ್ಕೆ ವಸ್ತ್ರಕಟ್ಟಿ ಎಷ್ಟೋ ವ ಆ ಕರನ್ನು ತಾಗಿಸುತ್ತಾರೆ. ಆದರೆ ಫಿರಾಕಿಯಾದವರು ಮೊಮೆಂಟ ಕ್ಯೂಅರದ ಹುಡಿಯನ್ನು ಬಿಸಿ ಚಹಾ ದೊಂದಿಗೆ ಅಥವಾ ಬಿಸಿ ನೀರಿನೊಂದಿಗೆ ಹೊಟ್ಟೆಯಲ್ಲಿ ತಕ್ಕೊಂಡಲ್ಲಿ ಒಂದೇ ಕ್ಷಣದಲ್ಲಿ ಮಸ್ತಕಶೂಲಿಯು ನಿಲ್ಲುವದು. ಇದಕ್ಕೆ ಅನೇಕ ಶಿಫಾರಸ ಪತ್ರಗಳು ಉಂಟು.

೧ ಪೇಟಿಗೆ ೨ ಆಣೆ. ಸ್ಯಾಂಪಲ ಸಲುವಾಗಿ ೩ ಆಣೆ ಪೋಸ್ಟ ತಿಕೀಟುಗಳನ್ನು ಕಳಿಸಿದಲ್ಲಿ ರವಾನಿಸುವೆವು.

ವಿಳಾಸ— ದಿ ಕರ್ನಾಟಕ ಮೆಡಿಕಲ ಸ್ಟೋರ್ಸ, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಪ್ರಾಪ್ರೈಟರ
ಸ್ಟೇಶನರೋಡ ಹುಬ್ಬಳ್ಳಿ.

ಚಂದಾದಾರರಿಗೆ ಸೂಚನೆ

೧೯೨೫ನೆಯ ಹೊಸ ವರ್ಷಪ್ರಾರಂಭವಾಗಿದ್ದು, ನಡೆಯುವ ತಿಂಗಳದಬಗ್ಗೆ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ ಯನ್ನು ಕಳಿಸಲಿಕ್ಕೆ ಪ್ರಾರಂಭಿಸುವೆವು. ಚಂದಾದಾರರು ವ್ಹಿ. ಪಿ. ಯನ್ನು ಸ್ವೀಕರಿಸಿ, ವಿಜಯವನ್ನು ಈ ಮೊದಲಿನಂತೆ ಪ್ರೋತ್ಸಾಹಿಸುವರೆಂದು ಆಶಿಸುತ್ತೇವೆ.

ವ್ಯವಸ್ಥಾಪಕ ವಿಜಯ
ಧಾರವಾಡ. ಜಿಲ್ಲಾ

ವಿಜಯ.

ಧಾರವಾಡ ತಾ- ೨೧-೩-೨೫ ನೇ ಇಸ್ವಿ

ಗೋರಕ್ಷಣದ ಹೊಸ ಮನ್ವಂತರ.

—೦—

ದೇಶದಲ್ಲಿ ಹಾಲು, ತುಪ್ಪ ಕಡಿಮೆಯಾಗಿ ಚಿಕ್ಕ ಮಕ್ಕಳು ಕಿಂಚಿತ್ತು ದಯವಿಲ್ಲದ ಅಂತಕನ ದೂತರ ವಶರಾಗಲಾರಂಭಿಸಿದರು. ದೊಡ್ಡ ದೊಡ್ಡ ಜನರು ಪೌಷ್ಟಿಕ ಆಹಾರವಿಲ್ಲದೆ, ಅಶಕ್ತರಾಗ ಹತ್ತಿದರು. ಗೋರಕ್ಷಣವಾಗಬೇಕು; ಅದರಿಂದ ಹಾಲು ಬೆಣ್ಣೆ ವಿಪುಲವಾಗಿ ದೊರೆಯಬೇಕೆಂದು ೩೦ ವರ್ಷಗಳ ಕೆಳಗೆ ಗೋರಕ್ಷಣ ಸಂಸ್ಥೆಗಳು ಹೊರಟವು. ಇಂಗ್ರೇಜಿ ಸರಕಾರಕ್ಕೆ ಇವುಗಳಲ್ಲಿ ರಾಜಕೀಯ ಸೂಕ್ಷ್ಮ ಜಂತುಗಳು ಕಂಡು ಬಂದದ್ದರಿಂದ, ಈ ಸಂಸ್ಥೆಗಳು ಎಲ್ಲಿಯೂ ಅಭಿವೃದ್ಧಿ ಹೊಂದಲಿಲ್ಲ. ಆದರೂ ಹಿಂದೂ ಜನರು ಈ ವಿಷಯಕವಾದ ಉತ್ಸಾಹಾಭಿಲಾಷೆಯನ್ನು ತೊರೆಯಲಿಲ್ಲ. ಇವರ ಪ್ರಯತ್ನದಿಂದ ಅನೇಕ ಸಂಸ್ಥಾನಿಕರು ತಮ್ಮ ಸೀಮೆಯಲ್ಲಿ ಗೋವಧ ಮಾಡಬಾರದೆಂಬ ಅಪ್ಪಣೆ ವಿಧಿಸಿದ್ದಾರೆ. ಕಾಂಗ್ರೆಸದ ಕೂಡ ಗೋರಕ್ಷಣ ಸಭೆಯೂ ಕೂಡಲಾರಂಭಿಸಿದ್ದರಿಂದ ಇದಕ್ಕೆ ರಾಷ್ಟ್ರೀಯ ಸ್ವರೂಪ ಬಂದಿದೆ. ಈ ರಾಷ್ಟ್ರೀಯತ್ವದ ದೃಷ್ಟಿಯಿಂದಲೇ ಮ್ಯುನಿಸಿಪಾಲಿಟಿಯ ಹದ್ದಿನಲ್ಲಿ ಗೋವಧವಾಗಬಾರದೆಂಬ ಠರಾವುಗಳಾಗುತ್ತಿರುವವು. ಹಿಂದುವ ದನಗಳನ್ನು ಕಟುಕರ ಚೂರಿಯ ಬಾಯಿಗೆ ಕೊಡಬಾರದೆಂದು ಕೌನ್ಸಿಲ ಮತ್ತು ಅಸೆಂಬ್ಲಿಯಲ್ಲಿ ಚರ್ಚೆ ನಡೆಯುವದು.

ಪ್ಲೇಗಿನ ಮುಂಚೆ ಧಾರವಾಡದ ತುಂಬ ಹಾಲು-ತುಪ್ಪದ ಕಾಲುವೆ ಹರಿಯುತ್ತಿತ್ತು. ಆದರೆ ಈಗ ಹಾಲಿನ ತಗರವಾಗಿರುವ ಊರಲ್ಲಿ ಸಹ ದುರ್ಲಭವಾಗಿದೆ. ಹಳ್ಳಿಗಳ ಸ್ಥಿತಿಯೇ ಇಷ್ಟು ಶೋಚನೀಯವಾಗಿರುವಾಗ ಪಟ್ಟಣಗಳ ಅವಸ್ಥೆಯು ಎಷ್ಟು ನಿಕೃಷ್ಟವಾಗಿರಬೇಕೆಂಬದನ್ನು ಹೇಳುವ ಕಾರಣವಿಲ್ಲ. ಹಾಲು ದುರ್ಲಭವಾದ ಕೂಡಲೆ, ಗೌಳಿಗರೂ, ಮನೆಮಾರಿಗೆಯವರೂ ನೀರು ಕೂಡಿಸಿದ ವಿನಹ ಹಾಲನ್ನು ಮಾರುವದೇ ಇಲ್ಲ, ಬೆಳ್ಳಗಿದ್ದರಾಯಿತು. ಅದು ಹಾಲೆಂದು ತಿಳಿಯಬೇಕೆಂದು ಇಪ್ಪತ್ತನೆಯ ಶತಮಾನದಲ್ಲಿ ಪ್ರತ್ಯಕ್ಷ ಭರಿಯಬೇಕಾಗಿಬಿತ್ತದೆ.

ಹಾಲಿನ ಮೇಲೆ ಭಯಂಕರ ಸಂಕ್ರಾಂತಿ ಬರಲಿಕ್ಕೆ ಆಕಳಗಳ ಕೊರತೆಯೊಂದು ಕಾರಣ. ಅದರ ತರುವಾಯ ಹಳ್ಳಿ ಪಟ್ಟಣಗಳಲ್ಲಿ ದನಗಳು ಮೇಯುವದಕ್ಕೆ ಅಡವಿಯ ಕೊರತೆಯು ಎರಡನೆಯ ಕಾರಣ. ಗೋಸಂಖ್ಯೆಯು ಕಡಿಮೆಯಾದರೆ- ಮನುಷ್ಯಮಾತ್ರನಲ್ಲಿರುವ ಶರೀರ ಸಂಪತ್ತಿನ ಲಯವಾಗುವದೆಂಬ ಮುಖ್ಯ ವಿಚಾರದಿಂದಲೇ ಋಷಿ ಜನರು ಗೋವಿಗೆ ದೇವತ್ವವನ್ನು ಕೊಟ್ಟಿರುತ್ತಾರೆ.

ಹಿಂದುಸ್ಥಾನದಲ್ಲಿ ಎರಡು ಪ್ರಕಾರದ ಗೋರಕ್ಷಣವಿರುವದು. ಒಂದು ಹಾಲಿನ ದೆಸೆಯಿಂದಲೇ ಅವುಗಳ ಸಂರಕ್ಷಣೆ ಮಾಡುವದು. ಇದನ್ನು ಆಧುನಿಕ ಪಾಶ್ಚಿಮಾತ್ಯ ಪದ್ಧತಿ ಪ್ರಕಾರ ಮಾಡುತ್ತಿರುವರು. ಎರಡನೆಯ ಪಾಂಜರಪೋಳವೆಂಬ ಅನಾಥ ಪಶುಗಳ ಪಟ್ಟಿಯು. ಪಾಂಜರಪೋಳಿನ ದೆಸೆಯಿಂದ ಪಾಶ್ಚಿಮಾತ್ಯರ ಸಹಾನುಭೂತಿ ಇರುವದಿಲ್ಲ. ದನಗಳು ನಿರುಪಯೋಗವಾದವೆಂದರೆ- ಅವನ್ನು ಕೊಲ್ಲಬೇಕೆಂದು ಅವರ ಮತ. ಹಿಂದೀ ಜನರ ಮನಸ್ಸು ಇವರಂತೆ ಕಟುಕವಾಗಿರುವದಿಲ್ಲ. ಸಮಸ್ತ ಪ್ರಾಣಿಗಳಲ್ಲಿಯೂ ಭೂತದಯವುಳ್ಳವರಾಗಿ, ಅವುಗಳ ಸಂರಕ್ಷಣೆ ಮಾಡಬೇಕೆಂದು ಇವರ ಧರ್ಮ. ಮನುಷ್ಯರನ್ನು ಕೊಂದರೇ ಕೊಲೆ; ಗಲ್ಲಿನ ಶಿಕ್ಷೆ; ಎಂಬದಾಗಿ ಪಾಶ್ಚಿಮಾತ್ಯರ ಮನೋಭಾವನೆಯು. ಯಾವ ಪ್ರಾಣಿಯನ್ನು ಕೊಂದರೂ ಪಾಪ! ಪರಲೋಕದಲ್ಲಿ ನರಕವೆಂದು ಹಿಂದೂ ಜನರ ಧರ್ಮಾಜ್ಞೆ.

ಪಾಂಜರಪೋಳನಲ್ಲಿರುವ ದನಗಳಿಂದ ಹಾಲು ತುಪ್ಪದ ಕೊರತೆ ಪರಿಹರಿಸಲಾರದೆಂದು ಪ್ರತಿಯೊಬ್ಬರು ಒಪ್ಪುವರು. ಇಷ್ಟು ಭೂತದಯೆಯ ದೆಸೆಯಿಂದಲೇ ಇರತಕ್ಕದ್ದು. ಇದರ ಹೊರತು ವಿಲಾಯತಿಯ ಪದ್ಧತಿಗನುಸರಿಸಿ, ಪುಷ್ಟ ಆಕಳುಗಳ ಸಂರಕ್ಷಣೆ ಮಾಡಿ, ಬಹುವಾಗಿ ಹಾಲು ಕರೆಯಬೇಕೆಂದು ಹೊಸ ವಿಚಾರ; ಇದೇ ಹೊಸ ಮನ್ವಂತರ. ಇದಕ್ಕೆ ಸರಕಾರದ ಸಹಾನುಭೂತಿಯುಂಟಾಗಿರುವದೆಂಬದು ಒಂದು ವಿಶೇಷ. ಮುಂಬಯಿ ಹತ್ತರ ಕಂಪಾವಲಿ ಎಂಬಲ್ಲಿ ಸ್ಥಾಪಿಸಲ್ಪಟ್ಟ ಗೋರಕ್ಷಣ ಸಭೆಗೆ ನಾಮದಾರ ಗವ್ಹರ್ನರ ಸಾಹೇಬರೂ, ಕೌನ್ಸಿಲರರೂ, ಮಂತ್ರಿಗಳೂ ಡಾಕ್ಟರ ಮ್ಯಾನ ಸಾಹೇಬರೂ, ಬೇರೆ ಹೊರರಾರು ಪ್ರತಿಷ್ಠಿತರೂ ಹೋಗಿದ್ದರು. ಡಾಕ್ಟರ ಮ್ಯಾನ ಮತ್ತು ಗವ್ಹರ್ನರ ಸಾಹೇಬರ ಭಾಷಣಗಳಾದವು. ಈಗಿನ ದನಗಳ ಸಂತತಿಯು ತೀರ ನಿಕೃಷ್ಟವಾಗಿದೆ. ಸಂತತಿಯು ಸಶಕ್ತವಾಗಬೇಕಾದರೆ- ಧಷ್ಟಪುಷ್ಟ ಹೋರಿಗಳು ಬೇಕು; ಸರಕಾರದ ದನ ಸಂಗೋಪನಾಲಯದಲ್ಲಿ ಅಂಥ ಹೋರಿಗಳನ್ನು ಸಾಕುವರು. ಜಾತೀ ಸಂತತಿಯಾದರೇ ಆಕಳುಗಳು ವಿಪುಲವಾಗಿ ಹಾಲು ಕೊಡುವವೆಂದು ಹೇಳುವದೇ ಇವರೀರ್ವರ ಭಾಷಣದ ಸಾರಾಂಶವಾಗಿದೆ.

ವಿಲಾಯತಿ ಅಮೇರಿಕೆಯಲ್ಲಿ ಹಾಲು ಬೆಣ್ಣೆಯ ವ್ಯಾಪಾರ ಮಾಡುವ ದೊಡ್ಡ ದೊಡ್ಡ ಕಂಪನಿಗಳಿರುತ್ತವೆ. ಇವು ಹತ್ತಾರು ಸಾವಿರ ದನ ಸಾಕಿ ದೇಶದ ತುಂಬ ಹಾಲಿನ ಡಬ್ಬಿಗಳನ್ನು ಮಾರಲಿಕ್ಕೆ ಕಳುಹಿಸುತ್ತವೆ. ಈ ತರದ ಗೋರಕ್ಷಣ ಮತ್ತು ಗೋಸಂಗ್ರಹವಾದರೇ ಈ ದೇಶದಲ್ಲಿ ಮೊದಲಿನಂತೆ ಹಾಲಿನ ಪೂರೈಕೆಯಾಗುವದು. ಗವ್ಹರ್ನರ ಸಾಹೇಬರು ಬದಲಾದ ಪರಿಸ್ಥಿತಿಯನ್ನು ಲಕ್ಷ್ಯಕ್ಕೆ ತಂದು, ಗೋರಕ್ಷಣ ಸಭೆಗೆ ಹೋಗಿದ್ದು ಅಭಿನಂದನೀಯವಾಗಿರುವದು ನಿಜ. ಆದರೆ ಅವರು ಈ ದೇಶದಲ್ಲಿ ಗೋಸಂಘ ಸ್ಥಾಪನೆಗೂ, ಅವಕ್ಕೆ ಬೇಕಾಗುವ ಅಡವಿಯನ್ನು ದೊರಕಿಸಿ ಕೊಡುವದಕ್ಕೂ ಸಹಾಯ ಮಾಡಿದರೇ- ಗೋರಕ್ಷಣೆಯ ಉದ್ದೇಶವು ನೆರವೇರುವದು.

ಅಸೆಂಬ್ಲಿಯಲ್ಲಿ ಇಬ್ಬಣ.

—೦—

ಹಿಂದಿನ ಸಂಚಿಕೆಯಲ್ಲಿ ಬರೆದಂತೆ ಅಸೆಂಬ್ಲಿಯಲ್ಲಿ ಫಾಯನಾನ್ಸ ಬಿಲ್ಲು ಪಾಸಾಗುವಾಗ ಸ್ವರಾಜ್ಯ ಮತ್ತು ಸ್ವತಂತ್ರ ಪಕ್ಷೀಯರಿಗೆ ಬಾಯಿಗೆ ಬಾಯಿ ಹತ್ತಿ, ಉಭಯತರ ಮಾತಿನ ಮರ್ಯಾದೆಯ ಮಾರಾಟವಾಯಿತು. ಹೋದ ವರ್ಷ ಈ ಬಿಲ್ಲನ್ನು ನಾಮಂಜೂರ ಮಾಡುವ ಠರಾವು ತಂದಿದ್ದ ಪಂಡಿತ ಮಾಲವಿಯಾಯವರು ಈ ಹೊಡೆದಾಟದಲ್ಲಿ ಸೇರಲಿಲ್ಲ ಮತ್ತು ಮತಕೊಡದೆ ತಟಸ್ಥರಾಗಿದ್ದರು. ನಾವು ಸರಕಾರದ ಧ್ವಂಸ ಮಾಡಲಿಕ್ಕೆ ಬಂದಿಲ್ಲ. ಆದರಲ್ಲಿ ತಿದ್ದುಪಡೆ ಮಾಡತಕ್ಕವರೆಂದು ಬ್ಯಾರಿಸ್ಟರ ಜಿನ್ನಾ ಸಾಹೇಬರು ಹೇಳಿದರು. ಈಗಿನ ರಾಜ್ಯ ಪದ್ಧತಿಯು ಪಿಶಾಚಿಯಂತಾಗಿದೆ. ಇದನ್ನು ಅಳಿಯಲೇ ಬೇಕೆಂದು ಶ್ರೀ. ಜಮನಾಲಾಲರೆಂಬವರು ಉದ್ಗಾರ ತೆಗೆದರು. ಲಾರ್ಡ ರೀಡಿಂಗ ಸಾಹೇಬರನು ಹಿಂದುಸ್ಥಾನದ ಪ್ರತಿನಿಧಿಯಾಗಿ ವಿಲಾಯತಿಯ ಸ್ವರಾಜ್ಯ ಕಮಿಟಿಗೆ ಕಳಿಸಿದ್ದರೂ, ನೈತಿಕ ದೃಷ್ಟಿಯಿಂದ ಅವರು ಪ್ರತಿನಿಧಿಯಾಗಿ ಹೋಗುವದರಿಂದ, ಅವರ ಮಾರ್ಗದಲ್ಲಿ ವಿಘ್ನ ತರಬಾರದೆಂದು ತಾವು ಫಾಯನಾನ್ಸ ಬಿಲ್ಲಿಗೆ ಮಂಜೂರಿ ಕೊಡುತ್ತೇವೆಂದು ಬಾಬು ಬಿಪಿನಚಂದ್ರರೆಂದರು. ಸರಕಾರ ಪಕ್ಷದ ಮೆಂಬರರಲ್ಲಿ ಇಬ್ಬರು ಮಾತಾಡಿದರೂ ಅದರಲ್ಲಿ ಹೋದ ವರ್ಷದಂಥ ಹುರುಪು ಇರಲಿಲ್ಲ. ಕಡೆಗೆ ಸರಕಾರ, ಸ್ವತಂತ್ರ ಮತ್ತು ಮುಸಲ್ಮಾನ ಮೆಂಬರರು ಅನುಕೂಲ ಮತ ಕೊಟ್ಟರು ಮತ್ತು ಸ್ವರಾಜ್ಯ ಪಕ್ಷೀಯರು ಮಾತ್ರ ಪ್ರತಿಕೂಲ ಮತಕೊಟ್ಟು... ಇವರ [illegible]

ಮತಗಳಾಗಿದ್ದವು. ಉಳಿದ ಮತಗಳು ೭೫ ಆಗಿ ಹೋದ ವರ್ಷ ನಾಮಂಜೂರ ಆದ ಸ್ಥಳದಲ್ಲಿಯೇ ಈ ವರ್ಷ ಮಂಜೂರಾಯಿತು.

ಪ್ರಕಟನೆ.

—೦—

ಜನ ಸೇವೆಯಲ್ಲಿ ಸದಾ ನಿರತರಾಗಿ ದೇಶ ಕಲ್ಯಾಣದ ಪ್ರತಿಯೊಂದು ಕೆಲಸದಲ್ಲಿ ತಮ್ಮ ಕೈಲಾದ ಮಟ್ಟಿಗೆ ಮನಮುಟ್ಟಿ ಕೆಲಸ ಮಾಡುವ ಜನರು ದೇಶದಲ್ಲಿ ಬಹು ಕಡಿಮೆ. ಇಂಥ ಜನರ ಯೋಗಕ್ಷೇಮದ ಚಿಂತನವನ್ನು ವಾಸ್ತವಿಕವಾಗಿ ಜನರೇ ಮಾಡತಕ್ಕದ್ದು. ಪೂರ್ವ ಪದ್ಧತಿಯ ಪ್ರಕಾರ ನಡೆದು ಬಂದ ಸ್ವಾಮಿ, ಸನ್ಯಾಸಿ, ಬೈರಾಗಿ ಮುಂತಾದ ಜನರ ಯೋಗಕ್ಷೇಮವು ಇವತ್ತಿಗೂ ಜನತೆಯಿಂದಾನೇ ಸಾಗುತ್ತದೆ. ಆದರೆ ಆಧುನಿಕ ಪದ್ಧತಿ ಪ್ರಕಾರ ಹೊಸ ರೀತಿಯಿಂದ ದೇಶದಲ್ಲಿ ನಡೆದ ಅನೇಕ ಚಳವಳಿಗಳಲ್ಲಿ ಮನಸು ಹಾಕಿ ಕಾಂಗ್ರೆಸ, ಕಾನ್ಫರನ್ಸ ಮುಂತಾದ ಸ್ಥಳಗಳಲ್ಲಿ ತಪ್ಪದೆ ಹಾಜರಾಗಿ ಮತ್ತು ಜನತೆಯನ್ನು ಹೊಸ ಜಾಗೃತೆಯಲ್ಲಿ ಎಚ್ಚರಗೊಳಿಸುವ ಎಲ್ಲ ಬಗೆಯ ಕಾರ್ಯಗಳಲ್ಲಿ ಮುಂದಾಗಿ ಕೆಲಸ ಮಾಡುವ ಜನರ ಸಂಬಂಧವಾಗಿ ದೇಶದಲ್ಲಿ ಏನೂ ವ್ಯವಸ್ಥೆಯಿಲ್ಲ. ಈ ಬಗೆಯ ಸಾಮಾನ್ಯ ಜನರ ಯೋಗಕ್ಷೇಮಕ್ಕಾಗಲಿ ಅಥವಾ ಅವರಿಗೆ ಬಂದ ತೊಂದರೆಗಳ ಸಂಬಂಧವಾಗಿ ಕೈಲಾದ ಮಟ್ಟಿಗೆ ಸಹಾಯ ಮಾಡುವ ಕೆಲಸವನ್ನು ಮಹಾರಾಷ್ಟ್ರ ಜನತೆಯು ಮಾಡಿರುತ್ತದೆ. ಹರಡೀಕರ, ರಾನಡೆ, ಸಾವರಕರ, ಕಾಳೆ ಪೈಸಾಫಂಡ ಉತ್ಪಾದಕ ಮುಂತಾದ ಜನರ ಸಂಬಂಧವಾಗಿ ದೇಶದಲ್ಲಿ ಚಿಕ್ಕ ದೊಡ್ಡ ಫಂಡುಗಳನ್ನು ಕೂಡಿಸಿ, ಅವುಗಳನ್ನು ಅವರಿಗೆ ಅರ್ಪಿಸಿ ಇಂಥ ಜನರ ಋಣದಿಂದ ಮಹಾರಾಷ್ಟ್ರವು ಕೈಲಾದ ಮಟ್ಟಿಗೆ ಮುಕ್ತವಾಗುವ ಕೆಲಸವನ್ನು ಮಾಡಿರುತ್ತದೆ.

ಆದರೆ ಕರ್ನಾಟಕದಲ್ಲಿ ಈ ಬಗೆಯ ಕೆಲಸ ಮಾಡುವ ಜನರ ಬಗ್ಗೆ ಕರ್ನಾಟಕವು ಯಾವ ಕೆಲಸವನ್ನೂ ಮಾಡಿಲ್ಲ. ಕರ್ನಾಟಕದಲ್ಲಿ ದೇ. ಭ. ಅನಂತರಾವ ದಾಬಡೆ ಇವರ ಹೆಸರು ಗೊತ್ತಿಲ್ಲದಂಥ ಮನುಷ್ಯರೇ ವಿರಳ. ದೇ. ಭ. ಅನಂತರಾವ ದಾಬಡೆಯವರು ಪದವೀಧರರಲ್ಲ. ಆಧುನಿಕ ಪದ್ಧತಿಯ ಶಿಕ್ಷಣ ಪಡೆದವರಲ್ಲ. ಆದರೂ ಕರ್ನಾಟಕದ ಪ್ರತಿಯೊಂದು ಜಿಲ್ಲೆಯಲ್ಲಿ ಯಾವದೇ ತರಹದ ದೇಶ ಸೇವೆಯ ಕೆಲಸವು ಬಂದರೆ, ಅಲ್ಲಿ ಶ್ರೀ ಅನಂತರಾವ ದಾಬಡೆ ಇವರು ಹಾಜರ ಇಲ್ಲವೆಂತಾಗಿಲ್ಲ. ಇವರು ಲೋಕಮಾನ್ಯ ಟಿಳಕರ ಪಟ್ಟ ಶಿಷ್ಯರು, ಮಹಾತ್ಮಾಜಿಯವರ ಕೇವಲ ಸೇವಕರು. ಇಳಿತದ ವಯಸ್ಸಿನಲ್ಲಿ ಧಾರವಾಡ ಗೋಳೀಬಾರ ಖಟ್ಲೆಯಂಥ ದುರ್ಧರ ಪ್ರಸಂಗವು ಬಂದು ಅವರಿಗೆ ಎರಡು ವರ್ಷದ ಕಠಿಣ ಶಿಕ್ಷೆಯನ್ನು ಅನುಭವಿಸಬೇಕಾಯಿತು. ಮನೆಯಲ್ಲಿ ದೊಡ್ಡ ಸಂಸಾರ, ಈಗಿನ ಕಾಲದಂಥ ಕಟ್ಟತರ ದಿವಸಗಳು, ಇಂಥ ಪ್ರಸಂಗಗಳಲ್ಲಿ ಅನೇಕ ಹೆಣ್ಣು ಮಕ್ಕಳ ಲಗ್ನ ಮುಂತಾದ ಕಾರ್ಯಗಳು ಮೇಲಿಂದ ಮೇಲೆ ಆಗಿ ಸಂಸಾರ ವಿವಂಚನೆಯಲ್ಲಿ ಬೀಳಬೇಕಾಗಿದೆ. ಕರ್ನಾಟಕದ ಎಲ್ಲ ಬಗೆಯ ಜನರು ಕರ್ನಾಟಕದ ಬಣಕೂಗಿನಲ್ಲಿಯೇ ಮಗ್ನರಾಗಿದೆ, ಸತತ ೩೦ ವರ್ಷಗಳ ವರೆಗೆ ದೇಶ ಸೇವೆ ಮಾಡಿದಂಥ ಶ್ರೀ ಅನಂತರಾಯರಂಥ ಹಳೇ ಗುರುತಿನ ಕನ್ನಡ ದೇಶ ಸೇವಕನ ಋಣದಿಂದ ಮುಕ್ತರಾಗುವರೆಂದು ನಾವು ತುಂಬಾ ನಂಬಿದ್ದೇವೆ.

ಗಂಗಾಧರರಾವ ದೇಶಪಾಂಡೆ,
ಬೆಳಗಾಂವ
ಡಾ. ಹಣಮಂತ ವೆಂಕಟೇಶ
ಸವಣೂರ, ಬೆಳಗಾಂವ
ಡಾ. ವಾಸುದೇವ ಶ್ರೀನಿವಾಸ
ಉಮಚಗಿ ಗದಗ
ಗೋಪಾಳರಾವ ಧೋಂಡರಾವ
ದೇಶಪಾಂಡೆ, ಧಾರವಾಡ
ಮಧ್ವರಾವ ರಾಘವೇಂದ್ರರಾವ
ಕೆಂಭಾವಿ, ಬಿಜಾಪೂರ

ಪಂಜಾಬದ ಮುಸಲಮಾನ ಮಂತ್ರಿಗೆ ಹಿಂದೂ ಶೀಖರ ಬಹಿಷ್ಕಾರ.

—೦—

ಪಂಜಾಬದ ಮುಸಲಮಾನ ಮಂತ್ರಿಯಾದ ಸರ ಫಜಲಿ ಹುಶೇನರವರ ರಾಜನೀತಿಯು ಹಿಂದೂ ಮತ್ತು ಶೀಖರ ಹಿತ ಸಂಬಂಧಗಳಿಗೆ ವಿರೋಧವುಳ್ಳಂತಹದಾಗಿರುವದರಿಂದ, ಅವರಿಗಾಗಿ ಲಾಹೋರದ ಮುಸಲಮಾನರು ಮಾಡಿಸತಕ್ಕಂಥ ವನೋಪಹಾರಕ್ಕೆ ಯಾವಾರೂ ಹೋಗಕೂಡದೆಂದು ಹಿಂದೂ ಮತ್ತು ಶೀಖ ಜನರು ಠರಾವು ಮಾಡಿ, ಅದಕ್ಕೆ ಬಹಿಷ್ಕಾರ ಹಾಕಿದ್ದಾರೆ.

ಒಬ್ಬರ ಅನ್ನ, ಇಬ್ಬರ ವಿಷವು.

—೦—

ಬಂಗಾಲದ ಕೌನ್ಸಿಲದ ಹೊಸ ಮಂತ್ರಿಯಾಗಿರುವ ರಾಜಾ ಮನ್ಮಥರಾಯ ಚವಧರಿಯವರು ಮಂತ್ರಿ ಪದದ ರಾಜನಿಷ್ಠೆಯ ಆಣೆ ಮಾಡುತ್ತಿದ್ದಾಗ ಆಳರಸರ ಪತಿಯ ಮೆಂಬರರು ಆನಂದ ಘೋಷ ಮಾಡಿದ ಕೂಡಲೆ, ಸ್ವರಾಜ್ಯ ಪಕ್ಷದವರು ಶೇಮ, ಶೇಮ, ಎಂದು ಕೂಗಿ ಅವರ ನಿರ್ಭರ್ತ್ಸನೆ ಮಾಡಿದರು. ರಾಜಾ ಮನ್ಮಥರಾಯರು ಕುಲ ಬಿಟ್ಟು, ಬೇರೆ ಕುಲ ಸೇರಿದ್ದರಿಂದಲೇ ನಿರ್ಭರ್ತ್ಸನೆಗೆ ಗುರಿಯಾದರು.

ವಿಲಾಯತಿಯಲ್ಲಿ ಬ್ರಾಹ್ಮಣೇತರ ಚಳವಳಿಯು.

—೦—

ಬೆಳಗಾವಿಯಲ್ಲಿ ಕೂಡಿದ್ದ ಬ್ರಾಹ್ಮಣೇತರ ಪರಿಷತ್ತಿನ ಅಧ್ಯಕ್ಷರಾಗಿದ್ದ ಮಿ. ರಾಮಸ್ವಾಮಿ ಮೊದ್ಲಿಯಾರರು ಮುಡಿಮನ ಕಮಿಟಿಯ ರಿಪೋರ್ಟಿನ ಪ್ರಕಾರ ಆಗತಕ್ಕದಾದ ರಾಜ್ಯಕಾರಭಾರ ಸುಧಾರಣೆಯಲ್ಲಿ ಬ್ರಾಹ್ಮಣೇತರ ಪಂಗಡದ ವಿಚಾರ ಹೇಳುವದಕ್ಕಾಗಿ ಬರುವ ತಿಂಗಳಲ್ಲಿ ವಿಲಾಯತಿಗೆ ಹೋಗುವರು. ಅಲ್ಲಿ ನಾಲ್ಕು ತಿಂಗಳ ತನಕ ಇದ್ದು, ಮರಳಿ ಬರುವಾಗ ತುರುಕ ಮತ್ತು ಇಜಿಪ್ತ ದೇಶಗಳಿಗೆ ಹೋಗಿ, ಅಲ್ಲಿಯ ರಾಜಕೀಯ ವಿದ್ಯಮಾನಗಳನ್ನು ಕಣ್ಣಾರೆ ನೋಡುವರು.

ಮೂರು ಸಾವಿರ ಮನೆಗಳು ಸುಟ್ಟವು.

—೦—

೨೦ ಸಾವಿರ ಜನರು ನಿರಾಶ್ರಿತರಾದರು.

—೦—

ಜಪಾನದ ರಾಜಧಾನಿಯಾದ ಟೋಕಿಯೋ ಪಟ್ಟಣದ ಉತ್ತರ ಭಾಗದಲ್ಲಿ ಅಗ್ನಿನಾರಾಯಣನ ಕೋಪವಾಯಿತು ಪ್ರಚಂಡವಾದ ಗಾಳಿಬಟ್ಟದ್ದರಿಂದ ಉರಿಯು ಹಬ್ಬಿತು. ಸೈನಿಕರು ಬಂದು ಅನೇಕ ಮನೆಗಳನ್ನು ಕೆಡವಿ ಬೆಂಕಿಯನ್ನು ಹಬ್ಬಗೊಡಲಿಲ್ಲ. ಆದರೂ ಮೂರು ಸಾವಿರ, ಮನೆಗಳು ಸುಟ್ಟು, ೨೦ ಸಾವಿರ ಜನರು ನಿರಾಶ್ರಿತರಾಗಿದ್ದಾರೆ.

ದಿಲ್ಲಿಯಲ್ಲಿ ದಂಗೆ

ದಿಲ್ಲಿಯಲ್ಲಾದ ದಂಗೆಯಲ್ಲಿ ಸತ್ತೊಬ್ಬ ಮುಸಲಮಾನನ ಪ್ರೇತಯಾತ್ರೆ ನಡೆದಿರುವಾಗ ಮುಸಲಮಾನರು ಯಾವ ಕಾರಣದಿಂದಲೋ ರೇಗಿ, ಅಂಗಡಿಗಳಲ್ಲಿದ್ದ ಗಳಗಳನ್ನು ಹಿರಿದು, ದಂಗೆಗೆ ಪ್ರಾರಂಭ ಮಾಡಿ, ಒಂದು ಗುಡಿಯನ್ನು ಕೆಡವಿ, ಮೂರ್ತಿಯನ್ನು ಒಡೆದು, ಅಲ್ಲಿ ವಿಗ್ರಹಗಳನ್ನು ಚಲ್ಲಿದರು. ಹೊಡೆದಾಟದಲ್ಲಿ ೩೨ ಜನರು ಗಾಯವಾಗಿದ್ದಾರೆ. ದಂಗೆಯು ಹಬ್ಬಿದ ಕೂಡಲೆ ಪೇಟೆ ಬಂದಾಯಿತು. ಪೋಲೀಸರೂ [illegible] ಬಂದು, ನಗರ ರಕ್ಷಣೆ ಮಾಡುತ್ತಿದ್ದಾರೆ.

ತಾಸಿಗೆ ೩೭೦ ಮೈಲು ಹೋಗುವಂಥ ವಿಮಾನವನ್ನು ಇಂಗ್ಲಂಡದ ದೆಸೆಯಿಂದ ಅಮೇರಿಕೆಯಲ್ಲಿ ಕಟ್ಟುತ್ತಿದ್ದಾರೆ. ಇದಕ್ಕೆ ೮ ನೂರು ಕುದುರೆಯ ಶಕ್ತಿಯನ್ನು ಕೊಡುವರು.

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ.

ಮಂಗಳವಾರ ಪೇಟೆ, ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ,

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜೆಂದಿಗೆಯು ಆರುಲಕ್ಷದ ಮೇಲುಂಟು. ಚೆಕ್ಕ, ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ನಾಡಲ್ಪಡುವದು. ಠಾಕೀಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,

ಮ್ಯಾನೆಜಿಂಗ ಡಾಯರೆಕ್ಟರ

LOKHANDE

Lasts A life time



Strongest Watches

ಬಕ್ಷೀಸು ಮತ್ತು ಅರ್ಧ ಬೆಲೆಗೆ ಮೋಹಪಟ್ಟು ಮೋಸ ಹೋಗಬೇಡಿರಿ.

ಜಿನಸು ಉತ್ತಮ ಮತ್ತು ನಂಬಿಗೆಯುಳ್ಳದ್ದು ನಮ್ಮ ಅಂಗಡಿಯಲ್ಲಿ ಫಾವರಿ ಲೂಬಾ, ವೆಸ್ಟಎಂಡ, ಮೊರಡಿಯನ, ಓಮೇಗಾ ಮತ್ತು ಸ್ವಿಸ ಜನರಲ ಕಂಪನಿ ಮತ್ತು ಬೇರೆ ಪ್ರಸಿದ್ಧ ಕಂಪನಿಗಳ ಗಡಿಯಾರಗಳು ಈಗೀಗ ಬಂದಿದ್ದು, ಇವು ನೋಡಲಿಕ್ಕೆ ಸುಂದರವಾಗಿರುವಲ್ಲದೆ ಗಟ್ಟಿ ಮತ್ತು ಸರಿಯಾಗಿ ಹೊತ್ತು ತೋರಿಸುವಂಥವುಗಳಾಗಿವೆ. ಐದು ರೂಪಾಯಿಯಿಂದ ಬೇಕಾದ ಬೆಲೆಯ ಗಡಿಯಾರಗಳು ಸಿಗುವವು. ಕೊಳ್ಳುವಾಗ ಪ್ರತಿಯೊಂದಕ್ಕೆ ಗ್ಯಾರಂಟಿ ಕೊಡುವೆವು. ಒಮ್ಮೆ ಖರಿಸಿ ನೋಡುವಿರಷ್ಟೇ!

ಪ್ರೊಪ್ರಾಯಿಟರ, ದತ್ತುರಾವ ಲೋಖಂಡೆ

ವಾಚ ಅ್ಯಂಡ ಕ್ಲಾಕ ಮರ್ಚಂಟ ಧಾರವಾಡ.

ಆರ್. ಎಮ್. ಜ್ಹೋನ್ ಎಂಡ ಸನ್ಸ. ಹುಬ್ಬಳ್ಳಿ.

ಎಜಂಟ್ಸ ಫೋರ ಕಾರಬೋನಿಕ್ ಆಸಿಡ್ಡ ಗ್ಯಾಸ, ಮ್ಯಾನುಫ್ಯಾಕ್ಚರರ್ ಅಫ್ ಏರೆಟಿಡ ವಾಟರ್ಸ.

ತಾವು ಆರ್ಡರ ಬೇಗ ಕಳಿಸಿರಿ

ನಮ್ಮಲ್ಲಿ ಸಿಗುವ ಸಾಮಾನುಗಳ ವಿವರ.

ಫುಲ್‌ಗ್ಯಾಸ ಸಿಲೆಂಡರಗಳು ಇಂಗ್ಲೀಷ ಮತ್ತು ಜರ್ಮನ ಪೆಟೆಂಟ ಕಾರ್ಕ್ಸ, ಎಮ. ಟಿ. ಸೋಡಾ ವಾಟರ ಬಾಟಲಗಳು, ಕ್ರೌನ ನಂ. ಸಾಬೀನ ಡೆಸ್ಸಿ ೧ ಪೌಂಡಿನವು. ಸೋಡಾವಾಟರ್ ಮಶಿನುಗಳು ಮತ್ತು ಎಲ್ಲ ತರದ ಕಲರಿನ ಬಾಟಲಿಗಳ ಎಸೆನ್ಸಗಳು, ಅಮೇರಿಕನ್ ಆಯಿಸ್ಕ್ರೀಮ ಸೋಡಾ, ಬನಾನಾ, ಕೋಲಾಚಾಂಪೇಜನ, ಲೆಮನ್ ನಂ. ೧ ಲೆಮನ್ ಜುಯಿಸ್ ಸೋಡಾ ನಂ. ೧ ಮೆಂಗೋ, ಆರೇಂಜ, ಫಾಯಿನಾಪಲ್, ಪಿಕ್ಕಮಿಅಪ್, ಕ್ವಿನಿನ್ ಟಾನಿಕ್, ರಾಜಬೆರಿ ನಂ. ೧ ರೋಜ ನಂ. ೧ ಸ್ಪೇನ್ ಜಿಂಜರ್ ಬೀರ ನಂ. ೧, ರಬ್ಬರ್ ರಿಂಗ್ಸ, ಬೇರೆ ತರದ ಮಶಿನರಿ ಪಾರ್ಟುಗಳು ನಮ್ಮಲ್ಲಿ ಸಿಗುತ್ತವೆ. ಮತ್ತು ಶುದ್ಧ ಸೋಡಾ ವಾಟರ್ ಎಲ್ಲ ತರದ ಬಾಟಲಗಳು ಸಿಗುತ್ತವೆ. ವ್ಯಾಪಾರಸ್ಥರಿಗೆ ಒಳ್ಳೇ ಕಮೀಶನ ಕೊಡುತ್ತೇವೆ. ನಮ್ಮಲ್ಲಿ ಅಜ್ಞಾನದ ಮಿಲಿಟರಿ ಸಿಂಗಲ ಬಾಟ್ಲಗಳು ಸೋಡಾ ದರಬಂದ ಮಾಲಕ್ಕೆ ಸಿಗುತ್ತವೆ.



ನಮ್ಮಲ್ಲಿ ಕಳಿಸಿರಿ

ಅಡ್ರೆಸ್— R. M. John &Sons.

Mission Compound HUBLI

ಡಿ. ಅಂಕಲಗಿ ಬ್ಯಾಂಕ ಲಿಮಿಟೇಡ್ ಧಾರವಾಡ.

—o—

೧೯೧೩ ಇಸ್ವಿಯ

ಕಂಪನಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ಚಾಲೂ ಖಾತೆ, ಠೇವು, ಸೇವ್ಹಿಂಗ್ಸದ ಡಿಪಾಜಿಟ, ಸಾಲ, ಪತ್ತಿ, ಹುಂಡಿ, ಮುಂತಾದ ಯಾವತ್ತು ವ್ಯವಹಾರಗಳು ನಡೆಯುವವು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿಮಾಡುವವರಿಂದ ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ ರಿಂದ ೧೦-೩೦. ಸಾಯಂಕಾಲ ೩ ರಿಂದ ೬ ರವರೆಗೆ ನಡೆಯುವದು.

K.B. Ankalagi

ಮ್ಯಾನೆಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

—o—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಾಗಿರುತ್ತದೆ.

ಎ. ಕೆ. ಶೆಟ್ಟಿ

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ

ದೈನಿಕಪತ್ರಿಕೆ

೧೨ ತಿಂಗಳಿಗೆ	೧೨—೮—೦	ರೂ
೬ ,,	೬—೪—೦	ರೂ
೩ ,,	೩—೦—೦	ರೂ
ವಾರಪತ್ರಿಕೆ ೧ ವರ್ಷಕ್ಕೆ	೩—೧೨—೦	ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ, ಧಾರವಾಡ

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಪಳಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಒಳಗೆ ಐದು ಆಣೆ ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಒಳಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾಗ್ಭೂಷಣ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443]

ವಿಜಯ

ನಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೬) ಧಾರವಾಡ ರವಿವಾರ ತಾರೀಖು ೨೩ನೇ ಮಾರ್ಚ ೧೯೨೫ (ಸಂಚಿಕೆ ೭

ಬೇಸಿಗೆ ಪ್ರಾರಂಭವಾಯಿತು!

ದನಗಳ ಆಹಾರವಾದ ಕಣಿಕೆಯನ್ನು ಕಾದಿಡಿರಿ !!

ಕಿರ್ಲೋಸ್ಕರ ಕಣಿಕೆ ಯಂತ್ರವನ್ನು ಉಪಯೋಗಿಸಿರಿ !!

ನಮ್ಮ ಕಾರಖಾನೆಯಲ್ಲಿ ಎರಡು ನಮೂನೆಯ ಕಣಿಕೆ ಕೊರೆಯುವ ಯಂತ್ರಗಳು ತಯಾರಾಗುತ್ತವೆ. ಒಂದು ಕೈಯಂತ್ರ ಬೆಲೆ ೨೦ರೂ. ಇನ್ನೊಂದು ಗಾಲೀಯಂತ್ರ ಬೆಲೆ ೮೫ ರೂಪಾಯಿ ಸಣ್ಣ ಕಮತವುಳ್ಳವರು ಕೈ ಯಂತ್ರವನ್ನೂ, ದೊಡ್ಡ ಕಮತವುಳ್ಳವರು ಗಾಲೀ ಯಂತ್ರವನ್ನೂ ಉಪಯೋಗಿಸಬಹುದು. ಕಣಿಕೆಯು ೪ ಅಂಚುಗಳಿಂದ ಒಂದು ಇಂಚಿನ ವರೆಗೆ ಕೊರೆಯಲ್ಪಡುತ್ತದೆ.

ಸವಿಸ್ತರ ಸಂಗತಿಯ ಬಗ್ಗೆ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ } ಕಿರ್ಲೋಸ್ಕರವಾಡಿ- ಜಿಲ್ಹಾ ಸಾತಾರಾ.

ಫಕ್ತ ೩ ಆಣೆಯೊಳಗೇ ಅರ್ಧಶಿರೋವ್ಯಾಧಿ ಆರಾಮು ಮಾಡುವ ಉಪಾಯ

ಮೊಮೆಂಟ ಕ್ಯೂಅರ

ತಲೆಶೂಲಿ, ಅರ್ಧ ತಲೆಶೂಲಿ, ಶೀತ, ಉಷ್ಣ ವ ನಿತ್ರಾಣ ವಗೈರೆಗಳಿಂದಾದ ಮಸ್ತಕಶೂಲಿಯು ಕ್ಷಣಾರ್ಧದಿಂದ ನಿರ್ಮೂಲ ಮಾಡಲು " ಮೊಮೆಂಟ ಕ್ಯೂಅರ " ದಂತೆ ಸರಿಸಮಾನವಾದ ಔಷಧವು ಬೇರೆ ಇಲ್ಲ. ಹೆಚ್ಚು ಜನರು ಮಸ್ತಕಶೂಲೆಯನ್ನು ಸಹಿಸಲು ಆಗದೆ ಮಸ್ತಕಕ್ಕೆ ವಸ್ತ್ರಕಟ್ಟಿ ಎಷ್ಟೋ ವ ಅ ಕಾಸನ್ನು ಕಳೆಯುತ್ತಾರೆ. ಆದರೆ ನಿರಾಶೆಯಾದವರು ಮೋಮೆಂಟ ಕ್ಯೂಅರದ ಹುಡಿಯನ್ನು ಬಿಸಿ ಚಹಾ ದೊಂದಿಗೆ ಅಥವಾ ಬಿಸಿ ನೀರಿನೊಂದಿಗೆ ಹೊಟ್ಟೆಯಲ್ಲಿ ತಕ್ಕೊಂಡಲ್ಲಿ ಒಂದೇ ಕ್ಷಣದಲ್ಲಿ ಮಸ್ತಕಶೂಲಿಯು ನಿಲ್ಲುವದು. ಇದಕ್ಕೆ ಅನೇಕ ಶಿಫಾರಸ ಪತ್ರಗಳು ಉಂಟು.

೧ ಚೀಟಿಗೆ ೩ ಆಣೆ. ಸ್ಯಾಂಪಲ ಸಲುವಾಗಿ ೩ ಆಣೆ ಪೋಸ್ಟ ತಿಕೀಟುಗಳನ್ನು ಕಳಿಸಿದಲ್ಲಿ ರವಾನಿಸುವೆವು.

ಠಿಕಾಣ— ದಿ ಕರ್ನಾಟಕ ಮೆಡಿಕಲ ಸ್ಟೋರ್ಸ್, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ ಸ್ಟೇಶನರೋಡ ಹುಬ್ಬಳ್ಳಿ.

ಚಂದಾದಾರರಿಗೆ ಸೂಚನೆ.

—೦—

೧೯೨೫ನೆಯ ಹೊಸ ವರ್ಷಾರಂಭವಾಗಿದ್ದು, ನಡೆಯುವ ತಿಂಗಳದಬಗ್ಗೆ ನಿತ್ಯ ಮತ್ತು ವಾರಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ ಯನ್ನು ಕಳಿಸಲಿಕ್ಕೆ ಪ್ರಾರಂಭಿಸುವೆವು. ಚಂದಾದಾರರು ವ್ಹಿ. ಪಿ. ಯನ್ನು ಸ್ವೀಕರಿಸಿ, ವಿಜಯವನ್ನು ಈ ಮೊದಲಿನಂತೆ ಪ್ರೋತ್ಸಾಹಿಸುವರೆಂದು ಆಶಿಸುತ್ತೇವೆ.

ವ್ಯವಸ್ಥಾಪಕ ವಿಜಯ
ಧಾರವಾಡ.

ಶ್ರೀ.

ವೈಷ್ಣವೈಕಾದಶಿ.

—೦—

ಧಾರವಾಡದ ನಿವಾಸಿಗಳಾದ ಶ್ರೀಮದುತ್ತರಾದಿ ಮಠದ ಶಿಷ್ಯರು ತಮ್ಮ ಮಟ್ಟಿಗೆ ಏಕಾದಶಿಯ ನಿರ್ಣಯಗಳನ್ನು ಮಾಡಿಕೊಂಡು, ಒಂದೇ ರೀತಿಯನ್ನು ಅವಲಂಬಿಸುವದು ಉಚಿತವಾದ್ದರಿಂದ, ಹಾಗೆ ಮಾಡಲಿಕ್ಕೆ ಪ್ರಯತ್ನಿಸುವದಕ್ಕಾಗಿ ಧಾರವಾಡದ ನಿವಾಸಿಗಳಾಗಿ ಶ್ರೀಮದುತ್ತರಾದಿ ಮಠದ ಶಿಷ್ಯರಾದಂಥವರ ಸಭೆಯನ್ನು ಸೋಮವಾರ ಸಾಯಂಕಾಲದಲ್ಲಿ ಶ್ರೀ ವಿಠ್ಠಲದೇವರ ಗುಡಿಯಲ್ಲಿ ಕೂಡಿಸಬೇಕೆಂದು ಗೊತ್ತು ಮಾಡಿದೆ. ಶ್ರದ್ಧಾಳುಗಳು ಈ ವಿಷಯವಾಗಿ ವಿಚಾರ ಮಾಡಿಕೊಂಡು ಸಭೆಗೆ ಬರಬೇಕೆಂದು ಶ್ರೀ ವೆಂಕಟರಾವ ಆಲೂರ ಇವರು ಸೂಚಿಸುತ್ತಾರೆ.

ಲಾರ್ಡ ರೀಡಿಂಗ ಸಾಹೇಬರು ರಜೆಯ ಮೇಲಿರುವ ತನಕ ಗವ್ಹರ್ನರ ಜನರಲರೆಂದು ಕರೆಯಲ್ಪಡುವರು. ಇವರ ಬದಲೀ ಕೆಲಸ ಮಾಡುವ ಲಾರ್ಡ ಲಿಟನ ಸಾಹೇಬರು ಬ್ರಿಟಿಶ ಗವ್ಹರ್ನರ ಜನರಲ ಮತ್ತು ವ್ಹಾಯಿಸರಾಯ ಎನಿಸುವರು.

ವಿಜಯ.

ಧಾರವಾಡ ತಾ- ೨೨-೩-೨೫ ನೇ ಇಸ್ವಿ

ಹಿಂದುಸ್ಥಾನದ ಗಿರಣಿಗಳ ಮೇಲೆ ವಿಲಾಯತಿಯ ಪಿಡುಗು.

—೦—

ಹಿಂದುಸ್ಥಾನದ ಗಿರಣಿಗಳಲ್ಲಿ ಹುಟ್ಟುವ ನೂಲು ಮತ್ತು ಬಟ್ಟೆಯು ಚೀನ ಮತ್ತು ಜಪಾನದ ಮಾರ್ಕೆಟುಗಳನ್ನು ತುಂಬುತ್ತಿದ್ದವು. ಜಪಾನ ಮತ್ತು ಚೀನವು ಪರದೇಶಗಳಿಗೆ ತಮ್ಮ ದುಡ್ಡು ಹೋಗುವದನ್ನು ನಿಲ್ಲಿಸುವ ವಿಚಾರ ಮಾಡಿ, ತಾವೂ ಗಿರಣಿಗಳನ್ನು ಕಟ್ಟಿದವು. ಚೀನದ ಪ್ರಗತಿಯು ಮಂದವಾಗಿರುವದು. ಜಪಾನದ ಪ್ರಗತಿಯು ವಿದ್ಯುದ್ವೇಗದಂತಾಗಿ, ಅದು ಹಿಂದುಸ್ಥಾನದ ಮೇಲೆ ತಿರುಗುಪ್ಪ ತೋರಿಸಿದೆ. ಜಪಾನರು ಈ ದೇಶದಲ್ಲಿ ಹತ್ತಿಯನ್ನು ಕೊಂಡು, ತಮ್ಮ ನಾಡಿಗೆ ವೈದು, ಅಲ್ಲಿ ಬಟ್ಟೆಯನ್ನು ಮಾಡಿ, ಅದನ್ನು ಇಲ್ಲಿಗೆ ತಂದು, ಇಲ್ಲಿಯೇ ಹುಟ್ಟಿ, ಇಲ್ಲಿಯೇ ಬೆಳೆಯುವ ಬಟ್ಟೆಗಿಂತ ಅಗ್ಗವಾಗಿ ಮಾರುತ್ತಿದ್ದಾರೆ. ಇಂಗ್ಲಂಡದ ಗಿರಣಿಗಳ ವ್ಯಾಪಾರಕ್ಕೆ ವಿಘ್ನ ಬರಬಾರದೆಂದು ಸರಕಾರದವರು ಇಲ್ಲಿಯ ಗಿರಣಿಗಳ ಮೇಲೆ ಸುಂಕ ಕೂಡ್ರಿಸಿದರು. ಮ್ಯಾಂಚೆಸ್ಟರದಲ್ಲಿ ಹುಟ್ಟುವ ಅರಿವೆಯು ನುಣುಪಾದದ್ದು. ಈ ದೇಶದಲ್ಲಿ ಹುಟ್ಟುವದು ಹುರಬರಕ. ಆದರೂ ಹುರಬರಕ ಅರಿವೆಗಿಂತ ನುಣುಪಾದದ್ದು ಅಗ್ಗವಾಗಿ ಮಾರಬೇಕೆಂದು ಸುಂಕ ಕೂಡ್ರಿಸಿದರು. ಬರಬರುತ್ತ ವಿಲಾಯತಿಯ ಬಟ್ಟೆಯ ವ್ಯಾಪಾರದಿಂದ ಇಲ್ಲಿಯ ಗಿರಣಿಗಳಿಗೆ ಧಕ್ಕಿ ಇರುವದಿಲ್ಲೆಂದೂ, ಜಪಾನದ ಗಿರಣಿಗಳಿಂದಲೇ ಹಾನಿಯಿರುತ್ತದೆಂದೂ ಕಂಡು ಬಂತು. ವಿಲಾಯತಿಯ ಗಿರಣಿಗಳಿಗೆ ನಮ್ಮಿಂದೇನೂ ಅಹಿತವಾಗದಿರುವಾಗ ಸುಂಕವನ್ನೇಕೆ ಕಡಿಮೆ ಮಾಡಬಾರದೆಂದು ನ್ಯಾಯಪ್ರಿಯ ಸರಕಾರಕ್ಕೆ ಗಿರಣಿಯವರೂ ಕೌನ್ಸಿಲದ ಮೆಂಬರರೂ ಪ್ರಶ್ನೆ ಮಾಡಿದರು. ಜಪಾನ ಮತ್ತು ಇಂಗ್ಲಿಷ ಸರಕಾರದ ನಡುವೆ ಗುಪ್ತ ಒಡಂಬಡಿಕೆಯಾಗಿದ್ದು, ಆ ಒಡಂಬಡಿಕೆಯ ಶರ್ತಿನ ಪ್ರಕಾರ ಸರಕಾರವು ಸುಂಕ ತೆಗೆದು ಹಾಕುವದಿಲ್ಲೆಂದು ಸರ ಬಾಟ್ಲಿ ಸಾಹೇಬರು ಸ್ವಾನುಭವದ ಮಾತು ಸಹ ಹೇಳಿದ್ದಾರೆ. ಈ ಸುಂಕವನ್ನು ತೆಗೆದು ಹಾಕಬೇಕೆಂದು ಹೋದ ವರ್ಷ ಅಸೆಂಬ್ಲಿಯಲ್ಲಿ ಠರಾವಾಯಿತು; ಈ ವರ್ಷ ಪುನಃ ಠರಾವಾಯಿತು; ಆದರೂ ಸರಕಾರದವರು ಇಲ್ಲದ ಸಲ್ಲದ ನೆವ ಹೇಳುತ್ತ ಸುಂಕವನ್ನು ಇದ್ದಕ್ಕಿದ್ದಂತೆ ಸ್ಥಿರಪಡಿಸಿದ್ದಾರೆ. ಈ ಸಂಗತಿಯು ಸಂಭವಿಸಿ ಒಂದು ಪಕ್ಷ ಕೂಡ ಆಗಿಲ್ಲ. ಅಷ್ಟರಲ್ಲಿ ವಿಲಾಯತಿಯ ಗಿರಣಿಗಳು ಹಿಂದುಸ್ಥಾನದಲ್ಲಿ ಹುಟ್ಟುವಂಥ ೧೦, ೨೦, ೩೦ ನಂಬರಿನ ನೂಲಿನ ಹುರಬರಕ ಬಟ್ಟೆಯನ್ನು ಮಾಡಿ, ಇಲ್ಲಿಯ ಗಿರಣಿಗಳ ಕೂಡ ಸ್ಪರ್ಧೆ ಮಾಡಬೇಕೆಂದಿರುತ್ತವೆಂದು ತಾರಿನ ವರ್ತಮಾನ ಬಂದಿದೆ. ಇಂಗ್ಲಿಷ ಗಿರಣಿಯವರು ಆಟದಂತೆ ಮಾಡುವದಕ್ಕೆ ತಡವಾಗಲಾರದು. ಅವರು ತಮ್ಮ ವ್ಯಾಪಾರಕ್ಕೆ ಧಕ್ಕಿ ಬರುತ್ತದೆಂದು ಕಂಡರೆ ಇಲ್ಲಿಯ ಗಿರಣಿಗಳ ಮೇಲೆ ಸುಂಕ ಕೂಡಿಸಬೇಕೆಂದು ಸರಕಾರವನ್ನು ಒತ್ತಾಯಪಡಿಸಲಾರರು. ಲ್ಯಾಂಕೇಶಾಯರವು ನುಡಿದಂತೆ ಈ ದೇಶದ ರಾಜ್ಯಭಾರ ನಡಿಯುತ್ತದೆಂದು ಹೇಳುವ ನಾಣ್ಣುಡಿಯಾಗಿರುತ್ತದೆ. ಸುಂಕವೇಳದಿಂಲಿಕ್ಕೆ ಇದೊಂದು ಮುಂಗುರುತು ಆಗಿದೆಂದು ಏಕೆ ಅನ್ನಬಾರದು? ವಿಲಾಯತಿಯಲ್ಲಿಯೂ ಉರುಟ ಬಟ್ಟೆಗಳು ಹುಟ್ಟಿ ಇಲ್ಲಿಗೆ ಬರುವದಾದರೆ- ಇಲ್ಲಿಯ ಬಟ್ಟೆಗಳಿಗೆ ಮತ್ತು ವಿಶೇಷವಾಗಿ ಗಿರಣಿಗಳಿಗೆ ಶನಿಮಂಗಳ ಪೀಡೆಯು ಒಮ್ಮೆಯಲೆ ಒಂದಂತಾಗುತ್ತದೆ.

ತುರಂಗದಲ್ಲಿ ಯಮ ಯಾತನೆ.

—೦—

ಬಳ್ಳಾರಿಯ ತುರಂಗದಲ್ಲಿ ಐದು ಸಾವಿರ ಮಪಿಲಾ ಕೈದಿಗಳಿದ್ದಾರೆ. ತುರಂಗದಲ್ಲಿ ಸಾಕಷ್ಟು ಬಂದೋಬಸ್ತು ಇರದ್ದರಿಂದ ಅಧಿಕಾರಿಗಳು ಕೈದಿಗಳನ್ನು ಸಾಲಂಗಿ ಮಲಗಿಸಿ, ಅವರ ಬೇಡಿಗಳೊಳಗಿಂದ ಒಂದು ಸರಪಳಿ ಹಾಯಿಸುವರು. ಕನಿಷ್ಠ ಹತ್ತು ಜನರು ಒಂದು ಸರಪಳಿಯಲ್ಲಿ ಸಿಗುವರು. ಒಬ್ಬನು ಲಘು ಶಂಕೆಗೆ ಹೋಗಬೇಕಾದರೆ- ತನ್ನ ಕೂಡ ಸರಪಳಿಯಿಂದ ಬಿಗಿಯಲ್ಪಟ್ಟಂಥ ಜನರನ್ನು ಎಬ್ಬಿಸಬೇಕಾಗುತ್ತದೆ. ಹಗಲೆಲ್ಲ ದುಡಿದಂಥ ಕೈದಿಗಳ ನಿದ್ರಾಭಂಗವಾಗುವದೊಂದು ಕಡೆಗಿರಲಿ; ಈ ಪದ್ಧತಿಯು ಅಮಾನುಷವಾಗುತ್ತದೆ. ಅಮಾನುಷವಾಗುತ್ತದೆಂದು ದಿವಾನಬಹಾದ್ದೂರ ಕೇಶವ ಪಿಳ್ಳೆಯವರು ಜೇಲಿನ ವ್ಹಿಜಿಟರ ಪುಸ್ತಕದಲ್ಲಿ ಬರೆದರು. ಅವರ ನಂತರ ಜೇಲಿನ ವ್ಹಿಜಿಟರರಾದ ಶ್ರೀ. ಸೀತಾರಾಮ ಶೆಟ್ಟಿಯವರು ಈ ಕ್ರೂರ ಪದ್ಧತಿಯನ್ನು ಆದಷ್ಟು ಬೇಗನೆ ನಿಲ್ಲಿಸಬೇಕೆಂದು ಬರೆದರು. ಇವರಿಬ್ಬರೂ ಹೀಗೆ ಅಭಿಪ್ರಾಯ ಪಟ್ಟರೂ, ಸರಕಾರದ ಕಾಯದೆ ಮಂತ್ರಿಯಾದ ಸರ ರಾಮಸ್ವಾಮಿಯವರು ಮೇಲಿನ ಟೀಕೆಯನ್ನು ಲಕ್ಷಿಸದೆ ಜೇಲಿನ ಅಧಿಕಾರಿಗಳ ಸ್ತುತಿ ಮಾತ್ರ ಮಾಡಿದರು. ಜೇಲಿನಲ್ಲಿ ಇಷ್ಟು ಸಂಗತಿಯು ಸಂಭವಿಸಿದ ನಂತರ, ಕೌನ್ಸಿಲದಲ್ಲಿ ಪ್ರಶ್ನೆ ಹೊರಟಿತು. ಸರಕಾರ ಪಕ್ಷದ ಯುರೋಪಿಯನ ಮೆಂಬರನು ಸಹ ಈ ಕೃತ್ಯವು ಕ್ರೂರವಾಗಿರುತ್ತದೆಂದು ಒಪ್ಪಿದರು. ಜೇಲಿನಲ್ಲಿ ಸಾಕಷ್ಟು ಬಂದೋಬಸ್ತು ಇಲ್ಲದ್ದರಿಂದ ಅನಿವಾರ್ಯವಾಗಿದೆ. ತುರಂಗದಲ್ಲಿ ಕಬ್ಬಿಣದ ಕಟಾಂಜನದ ಕೋಣೆಗಳನ್ನು ಮಾಡಿಸಲಿಕ್ಕೆ ೨, ೪೦, ೦೦೦ ರೂಪಾಯಿ ಬೇಕಾಗುತ್ತವೆಂದು ದುಡ್ಡಿನ ಕೊರತೆಯ ನೆವನ ಹೇಳಿದರು. ಈ ವರ್ಷ ಬಜೆಟ್ಟಿನಲ್ಲಿ ಈ ರಕಮು ಏಕೆ ಕಾಣಿಸಲಿಲ್ಲೆಂದು ಕೇಳಿದರೆ- ದುಡ್ಡಿನ ಅಭಾವವೆಂದೇ ಪುನಃ ಉತ್ತರ ಕೊಟ್ಟರು. ಈ ಪ್ರಕಾರ ಪ್ರಶ್ನೋತ್ತರ ನಡೆದಾಗ- ಸಿವ್ಹಿಲಸರ್ವಂಟರ ಭತ್ತೆ, ಸಂಬಳ ಹೆಚ್ಚಿಸುವದಕ್ಕೆ ಒಮ್ಮಿಂದೊಮ್ಮೆ ಹೇಗೆ ದುಡ್ಡು ಬಂತೆಂದು ಮೆಂಬರರಿಗೆ ಪ್ರಶ್ನೆ ಮಾಡಲು ಹೇಗೆ ಸೂಚಿಸಲಿಲ್ಲವೋ ತಿಳಿಯದು.

ಸೇಲಮ ಪಟ್ಟಣದಲ್ಲಿ ಕೊಲೆ ಕೊಳ್ಳೆಗಳ ಹಾಹಾಕಾರ.

—೦—

ಸೇಲಮವು ವ್ಯಾಪಾರದ ದೊಡ್ಡ ಪಟ್ಟಣವು. ಜಿಲ್ಹೆಯ ಮುಖ್ಯ ಸ್ಥಳವು ಬೇಕಾದಷ್ಟು ಪೋಲೀಸ ದಂಡುಂಟು. ಆದರೂ ಅಲ್ಲಿ ದರೋಡೆ, ಸುಲಿಗೆ ಕೊಲೆಗಳು ಭಯಂಕರವಾಗಿ ನಡೆದಿರುವವು. ಪೋಲೀಸರು ಇವುಗಳನ್ನು ನಿಲ್ಲಿಸಲು ಉಪಾಯ ಮಾಡುತ್ತಿರಬಹುದು. ಅದು ಒಂದು ಕೊಲೆ, ಎರಡು ದರೋಡೆ, ಮೂರು ಹೊಡದಾಟವೆಂದು ಹೇಳಿ ಕೊನೆಯಲ್ಲಿ ಅಪವೆಲ್ಲವೆಂದು ವರದೀ ಕೊಡುವರೆಂದು ಹೇಳುವಷ್ಟು ಹಾಸ್ಯಾಸ್ಪದವಾಗಿದೆ. ಪೋಲೀಸರಿಂದ ನಗರ ರಕ್ಷಣೆಯ ಕರ್ತವ್ಯಕರ್ಮವು ಸರಿಯಾಗಿ ನಡೆಯದ್ದನ್ನು ಕಂಡು ಊರ ಜನರು ನಗರ ರಕ್ಷಕರ ಒಂದು ಸ್ವತಂತ್ರ ಸಂಘವನ್ನು ಸ್ಥಾಪಿಸಿದರು. ಮತ್ತು ಸಾರ್ವಜನಿಕ ಸಭೆ ಕೂಡಿಸಿ, ಅದರಲ್ಲಿ ಪೋಲೀಸರ ಕರ್ತವ್ಯ ಶೂನ್ಯತೆಯನ್ನೂ ದರೋಡೆಗಳ ಹಾಹಾಕಾರವನ್ನೂ ಸಪ್ರಮಾಣವಾಗಿ ನಿವೇದಿಸಿದರು.

ಸರದಾರ ಹರನಾಮಸಿಂಗರ ದಸ್ತಗಿರಿಯು

—೦—

ಅಕಾಲಿಜನರ ದೆಸೆಯಿಂದ ಫಂಡು ಕೂಡಿಸುವದಕ್ಕಾಗಿ ಮದ್ರಾಸ ಇಲಾಖೆಯಲ್ಲಿ ಫಂಡು ಕೂಡಿಸುತ್ತಿದ್ದ ಸರದಾರ ಹರನಾಮಸಿಂಗರನ್ನು ರಾಜದ್ರೋಹದ ಆರೋಪದಿಂದ ಮದ್ರಾಸದಲ್ಲಿ ದಸ್ತಗಿರ ಮಾಡಿ, ಬೆಂಗಳೂರ ಧಾರವಾಡ ಮಾರ್ಗವಾಗಿ ಪಂಜಾಬಕ್ಕೆ ಒಯ್ದರೆಂದು ತಿಳಿಯುತ್ತದೆ.

ಕಲೆಕ್ಟರರ ವಿರುದ್ಧ ಠರಾವು.

—o—

ನಾಗಪೂರ ಇಲಾಖೆಯಲ್ಲಿ ನರಸಿಂಗಪೂರವೆಂಬ ಜಿಲ್ಲೆಯ ಕಲೆಕ್ಟರರು ಮೊಗಲ ಬಾದಶಹರಂತೆ ದೊರೆತನ ಮಾಡುತ್ತಿದ್ದಾರೆ. ಇವರು ಆನೆಯ ಮೇಲೆ ಪ್ರವಾಸ ಮಾಡುತ್ತಾ ಜಮಾಬಂದಿಗೆ ಹೋಗುವರು ದುಡ್ಡು ಕೂಡಿಸಿ, ದರಬಾರ ಮತ್ತು ಮೇಜವಾನಿಯಲ್ಲಿ ವ್ಯಯ ಮಾಡುವರು. ಸ್ವರಾಜ್ಯ ಪಕ್ಷದ ಮೇಲಂತೂ ಶಸ್ತ್ರ ಹಿಡಿಯುವರು. ಅಸಹಕಾರದ ವಿರುದ್ಧ ಬಿಚ್ಚುಗತ್ತಿಯನ್ನು ಹಿಡಿದಿದ್ದರು. ಇವರ ವಿರುದ್ಧ ವರ್ತಮಾನ ಪತ್ರಗಳಲ್ಲಿ ಲೇಖಗಳು ಬಂದವು. ಸರಕಾರವು ಇವರನ್ನು ಎರಡನೆಯ ಜಿಲ್ಲೆಗೆ ವರ್ಗ ಮಾಡಲಿಲ್ಲ. ಆದ್ದರಿಂದ ಇವರ ಕಾರಭಾರದ ನಿಷೇಧ ಮಾಡುವ ಠರಾವು ಕೌನ್ಸಿಲದಲ್ಲಿ ಬಂದುದಾಗಿ, ಸರಕಾರದವರು ಒಂದು ಕಮಿಟಿ ನೇಮಿಸುವಂತೆ ಆಶ್ವಾಸನ ಕೊಟ್ಟಿದ್ದಾರೆ. ಸಾಹೇಬರ ಹೆಸರು ಜೋರ್ಸ ಎಂದಿರುತ್ತದೆ.

ಸಾವಿರ ನಂಬರಿನ ನೂಲು.

—o—

ಗೋದಾವರಿ ಜಿಲ್ಹೆಗೆ ಸೇರಿದ ರಾಜೋಲ ತಾಲೂಕಿನಲ್ಲಿ ವೈದ್ಯರಾಗಿರುವ ಸೋಮಯಾಜಿ ಎಂಬ ಗೃಹಸ್ಥರು ಹಗಲು ವೈದ್ಯಕಿಯ ವ್ಯವಸಾಯ ಮಾಡಿಕೊಂಡು ರಾತ್ರಿಯಲ್ಲಿ ನೂಲುವರು. ನೂಲುವದರಲ್ಲಿ ಇವರು ಪರಿಣಿತ ಪ್ರಜ್ಞರಾಗಿದ್ದಾರೆ. ಆರನೂರಿನಿಂದ ಎಂಟು ನೂರು ನಂಬರಿನ ನೂಲನ್ನು ಸಹಜವಾಗಿ ತೆಗೆಯುವರು. ಪ್ರತಿ ತಿಂಗಳಿಗೊಮ್ಮೆ ಕಾಂಗ್ರೆಸ ಕಮಿಟಿಗೆ ಕೊಡತಕ್ಕ ನೂಲನ್ನು ತಪ್ಪದೆ ಕೊಡುವರು. ಇವರು ಈ ನಂತರ ಸಾವಿರ ನಂಬರಿನ ನೂಲನ್ನು ತೆಗೆಯುವ ವ್ಯವಸ್ಥೆ ಮಾಡುತ್ತಲಿದ್ದಾರೆ. ಇವರು ನೂಲುವದರಲ್ಲಿ ಹೊಂದಿದ ಪ್ರಗತಿಯನ್ನು ನೋಡಿ, ರಾಟಿಯ ಮೇಲೆ ಢಾಕಾದ ಮಲಮಲು ತೆಗೆಯಬಹುದೆಂಬ ಹುರುಪು ಹುಟ್ಟುವಂತಾಗಿದೆ.

ಝಗಲುಲ ಪಾಷಾ ಮತ್ತು ಅಧಿಕಾರ ಪರಾಯಣರಾದ ಮುಖಂಡರ ನಡುವೆ ಸುಮಾರೈದು ಮತಗಳ ಅಂತರವಿರುವದರಿಂದ ಮತ್ತು ಕೆಲವರು ಸಮಯಾನುಸಾರ ಝಗಲುಲ ಪಾಷಾನಂತೆ ಮತ ಕೊಡುವಂತೆ ಜಾಹೀರು ಮಾಡಿದ್ದರಿಂದ, ಪ್ರಧಾನ ಮಂಡಲವು ತತ್ತರಿಸಿದೆ. ನಮ್ಮ ದಿವಾನಗಿರಿಯು ತತ್ತರಿಸಿದರೇನಾಯಿತು! ಪಾರ್ಲಮೆಂಟ ಸಭೆಯನ್ನು ಒಂದರ ತರುವಾಯ ಒಂದರಂತೆ ನೂರು ಸಾರೆ ವಿಸರ್ಜನೆ ಮಾಡುವ ಹಕ್ಕು ಸುಲ್ತಾನನಿಗುಂಟು. ಅದನ್ನು ಉಪಯೋಗಿಸುವೆವೆಂದು ಮಂತ್ರಿಗಳೆನ್ನುತ್ತಿದ್ದಾರೆ.

ಸುಟ್ಟರ ಗಾಳಿಯಿಂದ ಭಯಂಕರ ಪ್ರಾಣಹಾನಿ.

—o—

ಸಾವಿರ ಜನರು ಸತ್ತರು; ೩೭೦೦ ಜನರು ಘಾಯವಾದರು.

—o—

ಅಮೇರಿಕೆಯಲ್ಲಿ ಜಗತ್ತೇ ಲಯವಾಗುವಂಥ ಬಿರುಗಾಳಿ ಬಿಟ್ಟು ಒಂದು ಸಾವಿರ ಜನರು ಸತ್ತರು. ಮತ್ತು ೩೭೦೦ ಜನರು ಘಾಯವಾದರು. ಅನೇಕ ಹಳ್ಳಿಗಳು ನೆಲಸಮವಾದವು. ಈ ಅನರ್ಥವು ಒಕ್ಕಲತನವೇ ವಿಶೇಷವಾಗಿ ನಡೆಯುವ ಭಾಗದಲ್ಲಾಗಿರುತ್ತದೆ.

ದಬ್ಬಾಳಿಕೆಯ ಕಾಯದೆಗಳೆಲ್ಲ ನಾಪಸಂಜೂರಾದವು.

—o—

ಶ್ರೀ ಪಟೇಲರು ಅಸೆಂಬ್ಲಿಯಲ್ಲಿ ದಬ್ಬಾಳಿಕೆಯ ಕಾಯದೆಗಳನ್ನು ರದ್ದು ಪಡಿಸಬೇಕೆಂಬದಾಗಿ ತಂದಿದ್ದ ಠರಾವಿನ ವಿಚಾರಣೆಯಾಗಿ, ಇದು ಬಹುಮತದಿಂದ ಪಾಸಾಯಿತು. ಸ್ವತಂತ್ರ ಪಕ್ಷೀಯರು ಇದಕ್ಕೆ ಅನುಕೂಲ ಮತ ಕೊಟ್ಟರು; ಪಂಜಾಬದ ಸರಹದ್ದಿನ ಕಾಡು ಜನರ ವಿಷಯಕವಾಗಿದ್ದ ಕಾಯದೆಯ ಹೊರ್ತು ದಬ್ಬಾಳಿಕೆಯ ಎಲ್ಲ ಕಾಯದೆಗಳು ರದ್ದಾಗವವು. ಇವರಲ್ಲಿ ನಾತೂ ಬಂಧು, ಲಾಲಾ ಲಜಪತರಾಯ ಮುಂತಾದವರನ್ನು ಹದ್ದುಪಾರ ಮಾಡಿದಂಥ, ಬಂಗಾಲದ ಈಗಿನ ಆರ್ಡಿನನ್ಸವೆಂಬ ದಬ್ಬಾಳಿಕೆಯ ಹಾಗು ರಾಜದ್ರೋಹದ ಕಾಯದೆಗಳೆ ನಾಪಸಂಜೂರಾಗುತ್ತವೆ.

ಆನೆ ಹೋದರೆ ಕೇಳುವವರಿಲ್ಲ. ಇರುವೆಗೆ ಮಾತ್ರ ಆಸ್ಪದವಿಲ್ಲ.

—o—

ಮುಂಬಯಿ ಪಟ್ಟಣದಲ್ಲಿ ಸಿಪಾಯರ ಸಂಬಳ ಪ್ರ ೩೫ ರಿಂದ ೫೦ ರ ತನಕ ಇರಬೇಕೆಂದು ಮಿ. ಬೋಲೆಯವರು ಕೌನ್ಸಿಲದಲ್ಲಿ ತಂದ ಠರಾವು ಪಾಸಾಯಿತು. ಪದ್ಧತಿ ಪ್ರಕಾರ ಸರಕಾರದ ವತಿಯಿಂದ ದುಡ್ಡಿನ ನೆವನ ಹೇಳಲ್ಪಟ್ಟಿತು. ಸಿವಿಲ ಸರ್ವಂಟರ ದೆಸೆಯಿಂದ ಬೇಕಾದಷ್ಟು ದುಡ್ಡು ಇರುತ್ತದೆ. ಬಡ ಸಿಪಾಯರ ಪಾಲಿಗೆ ಇರುವದಿಲ್ಲವೇ! ನಿಮ್ಮ ರಾಜ್ಯದಲ್ಲಿ ಆನೆ ಹೋದರೆ ಕೇಳುವವರಿಲ್ಲ. ಇರುವೆಗೆ ಸ್ಥಳವಿಲ್ಲವೆಂದು ಮೆಂಬರರು ಸ್ಪಷ್ಟವಾಗಿ ಹೇಳಿ, ಠರಾವು ಪಾಸ ಮಾಡಿದರು.

ನಾಮದಾರ ಆಗಾಖಾನರ ಔದಾರ್ಯ

—o—

ನಾಮದಾರ ಆಗಾಖಾನರು ಮುಂಬಯಿ ಮತ್ತು ಅದರ ಸುತ್ತಲಿರುವ ಉಪಭಾಗಗಳಲ್ಲಿ ವಾಸವಾಗಿರುವ ಖೋಜಾ ಜಾತಿಯ ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ವರ್ಷಕ್ಕೆ ೪೦ ಸಾವಿರ ರೂಪಾಯಿ ಗ್ರಾಂಟು ಕೊಡುವರು. ಇದಲ್ಲದೆ ಮುಂಬಯಿಯಲ್ಲಿ ಎರಡು ಲಕ್ಷ ರೂಪಾಯಿ ವೆಚ್ಚ ಮಾಡಿ, ಒಂದು ಶಾಲೆಯನ್ನು ಕಟ್ಟಿಸಿದ್ದಾರೆ. ಮೇಲೆ ಹೇಳಿದ ಗ್ರಾಂಟು ಸಾಲದೆ ಹೋದರೆ- ಅದಕ್ಕೂ ಹೆಚ್ಚು ರಕಮು ಕೊಡುವಂತೆ ಅಭಿವಚನವಿತ್ತಿದ್ದಾರೆ.

ಲಾರ್ಡ ಕರ್ಜನ ಸಾಹೇಬರ ಮೃತ್ಯು

—o—

ಲಾರ್ಡಕರ್ಜನ ಸಾಹೇಬರು ಹೋದ ವಾರದಲ್ಲಿ ಒಮ್ಮಿಂದೊಮ್ಮೆ ವಿಸ್ಮೃತಿಯಾಗಿ ಬಿದ್ದರು. ಡಾಕ್ಟರರು ಬಲವಾದ ಶಸ್ತ್ರ ಕ್ರಿಯೆ ಮಾಡಿದರು ನಾಲ್ಕು ದಿವಸ ಸಾಹೇಬರು ನೆಟ್ಟಗಿದ್ದರು. ಮುಂದೆ ಘಾಯದೊಳಗಿಂದ ರಕ್ತ ಬಂತು. ಅದನ್ನು ಬಂದು ಮಾಡಿದರು. ಒಳಕ ಅಡ್ಡ ಬೇನೆ ಕೂಡಿತು. ಸಾಯುವರೆಂದು ಪ್ರತಿಕ್ಷಣಗಳಲ್ಲಿಯೂ ನಿರೀಕ್ಷಿಸಲ್ಪಟ್ಟಿತು. ಮೊನ್ನಿನ ದಿವಸ ಪರಲೋಕವಾಸಿಯಾದರೆಂದು ಬರೆಯುವದಕ್ಕೆ ವಿಷಾದಿಸುತ್ತೇವೆ.

ವಿವಿಧ ವರ್ತಮಾನಗಳು

—o—

ರಶಿಯಾ ರಾಜ್ಯದಲ್ಲಿ ವಿಶೇಷವಾಗಿ ಲೆನಿನ ಗ್ರಾಡ ಭಾಗದಲ್ಲಿ ಭಯಂಕರ ಬರಬಿದ್ದದೆ. ಪ್ರಜರು ಅನ್ನದ ದೆಸೆಯಿಂದ ದಂಗೆ ಮಾಡುತ್ತಿದ್ದಾರೆಂದು ಇಂಗ್ರೇಜಿ ವರ್ತಮಾನಪತ್ರಗಳು ಹೇಳುತ್ತವೆ.

ಜರ್ಮನಿಯಲ್ಲಿ ತೆರವಾದ ಅಧ್ಯಕ್ಷ ಪದದ ದೆಸೆಯಿಂದ ಆರು ಜನರು ಉಮೇದವಾರರಾಗಿದ್ದಾರೆ.

ಬಾವಲಾ ಸಾಹೇಬರ ಕೊಲೆಯಲ್ಲಿ ಹಿಡಿದಂಥ ಮುಳಗಾವಕರ ಮತ್ತು ಗಟ ಜನ ಎಂಬುವರ ಮೇಲೆ ಸಾಕಷ್ಟು ಆರೋಪವಿಲ್ಲದ್ದರಿಂದ ಪೋಲೀಸರ ಮ್ಯಾಜಿಸ್ಟ್ರೇಟರು ಮುಚ್ಚಳಿಕೆಯಿಂದ ಅವರನ್ನು ಬಂಧಮುಕ್ತ ಮಾಡಿದ್ದಾರೆ.

ಅಮೇರಿಕೆಯಲ್ಲಿ ಗೋಧಿಯ ಧಾರಣೆಯು ಒಮ್ಮಿಂದೊಮ್ಮೆ ಬಹಳವಾಗಿ ಇಳಿದದ್ದರಿಂದ ಅನೇಕ ಜನ ವ್ಯಾಪಾರಸ್ಥರು ದಿವಾಳಿ ತೆಗೆದರು.

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟಡ.

ಮಂಗಳವಾರ ಪೇಟೆ, ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ

ಬಂಡಿಗೆಯು ಆರುಲಕ್ಷದ ಮೇಲುಂಟು. ಠೇವ, ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ನಡೆಲ್ಪಡುವದು. ಠಾಕೀವು ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು. ವಿಶೇಷ ಸಂಗತಿಗಳನ್ನು ಕಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಠಾರ,
ಮ್ಯಾನೇಜಿಂಗ ಡಾಯರೆಕ್ಟರ

ಆರ್. ಎಮ್. ಜ್ಹೋನ್ ಎಂಡ ಸನ್ಸ, ಹುಬ್ಬಳ್ಳಿ.

ಎಜಂಟ್ಸಫೋರ ಕಾರಬೋನಿಕ್ ಅಸಿಡ್ಡ ಗ್ಯಾಸ, ಮ್ಯಾನುಫ್ಯಾಕ್ಚರರ್ ಆಫ್ ಏರೆಟಿಡ ವಾಟರ್.



ತಾವು ಆರ್ಡರ ಬೇಗ ಕಳಿಸಿರಿ

ನಮ್ಮಲ್ಲಿ ಸಿಗುವ ಸಾಮಾನುಗಳ ವಿವರ.



ಫುಲ್‌ಗ್ಯಾಸ ಸಿಲಿಂಡರಗಳು ಇಂಗ್ಲೀಷ ಮತ್ತು ಜರ್ಮನಿ ಪೆಟೆಂಟ ಕಾಡ್ಸ, ಎಮ್. ಪಿ. ಸೋಡಾ ವಾಟರ ಬಾಟಲಗಳು, ೫೫೦ ನಂ. ಸಾಬೂನಿನ ಪೆಟ್ಟಿ ೧ ೬ ೦...ವು. ಸೋಡಾವಾಟರ್ ಮಶಿನುಗಳು ಮತ್ತು ಎಲ್ಲ ತರದ ಕಲರಿನ ಬಾಟಲಿಗಳ ಎಸೆನ್ಸಗಳು, ಅಮೇರಿಕನ್ ಆಯಿಸ್ಕ್ರೀಮ ಸೋಡಾ, ಬನಾನಾ, ಕೋಲಾಚಂಪೇಜನ, ಲೆಮನ್ ನಂ. ೧ ಲೆಮನ್ ಜುಯಿಸ್ ಸೋಡಾ ನಂ. ೧ ಮೇಂಗೋ, ಆರೇಂಜ, ಫಾಯಿನಾಪಲ್, ಪಿಸ್ತಾನಿಲಾ, ಕ್ವಿನಿನ್ ಟಾನಿಕ್, ರಾಜಬರಿ ನಂ. ೧ ರೋಜ ನಂ. ೧ ಸ್ಟೋನ ಜಿಂಜರ ಬೀರ ನಂ. ೧, ರಬ್ಬರ್ ರಿಂಗ್ಸ, ಬೇರೆ ಇತರ ಮಶಿನರಿ ಪಾರ್ಟುಗಳು ನಮ್ಮಲ್ಲಿ ಸಿಗುತ್ತವೆ. ಮತ್ತು ಶುದ್ಧ ಸೀಲಗಿರಿ ಎಣ್ಣೆಯು ಎಲ್ಲ ತರದ ಬಾಟ್ಲಿಗಳು ಸಿಗುತ್ತವೆ. ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಕೊಡುತ್ತೇವೆ. ನಮ್ಮಲ್ಲಿ ಕಚ್ಚಾ ಣದ ಮಿಲಿಟರಿ ಸಿಂಗಲ ಕಾಟ್ಲೇಗಳು ಸೋವಿ ದರದಿಂದ ಮಾರಲಿಕ್ಕೆ ಸಿಗುತ್ತವೆ.

ಅಡ್ರೆಸ್— R. M. John &Sons.
Mission Compound HUBLI

ದಿ. ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಇಡಲಿಕ್ಕೆ ತಕ್ಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಎಣ್ಣೆಯು ಆಗಿಯುತ್ತಿರುತ್ತದೆ.

ಎ. ಕೆ. ಅಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ

ಶಿಕ್ಷಪತ್ರಕ್ಕೆ

೧೨ ತಿಂಗಳಿಗೆ	೧೨—೮—೦	ರೂ
೬ ,,	೬—೦—೦	ರೂ
೩ ,,	೩—೦—೦	ರೂ
ದಿನಪತ್ರಕ್ಕೆ ೧ ವರ್ಷಕ್ಕೆ	೩—೧೨—೦	ರೂ

ವಿಶೇಷ ಮಾಹಿತಿ ಕೇಳಿಗೆ ವಿಳಾಸಕ್ಕೆ

ಮ್ಯಾನೇಜರ ವಿಜಯ, ಧಾರವಾಡ

ಜಾಹೀರಾತಿನ ದರಗಳು.

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದುವರೆ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಎರಡು ಆಣೆ ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಎರಡು ಆಣೆ ಡಬಲ್ ಕಾಲಮಿನ ಓಳಿಗಳಿಗೆ ಇಮ್ಮಡಿಯಾಗಿ ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡೆಸುವದು.

ಮ್ಯಾನೇಜರ ವಿಜಯ ಧಾರವಾಡ

LOKHANDE

Lasts A life time

Strongest Watches

ಬಕ್ಷೀಸು ಮತ್ತು ಅರ್ಥ ಜೇಬಿಗೆ ಮೋಹಪಟ್ಟು ಮೋಸ ಹೋಗಬೇಡಿರಿ.

ಬೇಸಸು ಉತ್ತಮ ಮತ್ತು ನಂಬಿಗೆಯುಳ್ಳದ್ದು ನಮ್ಮ ಅಂಗಡಿಯಲ್ಲಿ ಫಾವರ ಲೂಬಾ, ವೆಸ್ಟ ಎಂಡ, ಮೆರಡಿಯನ, ಓಮೇಗಾ ಮತ್ತು ಸ್ವಿಸ ಜನರಲ ಕಂಪನಿ ಮತ್ತು ಬೇರೆ ಪ್ರಸಿದ್ಧ ಕಂಪನಿಗಳ ಗಡಿಯಾರಗಳು ಈಗೀಗ ಬಂದಿವೆ, ಇವು ನೋಡಲಿಕ್ಕೆ ಸುಂದರವಾಗಿರುವಲ್ಲದೆ ಗಟ್ಟಿ ಮತ್ತು ಸರಿಯಾಗಿ ಹೊತ್ತು ತೋರಿಸುವಂಥವುಗಳಾಗಿವೆ. ಐದು ರೂಪಾಯಿಯಿಂದ ಬೇಕಾದ ಬೆಲೆಯ ಗಡಿಯಾರಗಳು ಸಿಗುವವು. ಕೊಳ್ಳುವಾಗ ಪ್ರತಿಯೊಂದಕ್ಕೆ ಗ್ಯಾರಂಟಿ ಕೊಡುವೆವು. ಒಮ್ಮೆ ಬಂದು ನೋಡುವಿರಷ್ಟೇ!

ಪ್ರೊಪ್ರಾಯಟರ, ದತ್ತಾತ್ರರಾವ ಲೋಖಂಡೆ
ವಾಚ ಆ್ಯಂಡ ಕ್ಲಾಕ ಮರ್ಚಂಟ ಧಾರವಾಡ.

ದಿ. ಅಂಕಲಗಿ ಬ್ಯಾಂಕ ಲಿಮಿಟೆಡ್
ಧಾರವಾಡ.

—೦—

೧೯೧೩ ಇಸ್ವಿಯ

ಕಂಪನಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ಚಾಲೂ ಖಾತೆ, ಠೇವು, ಸೇವಿಂಗ್ಸ ಡಿಪಾಜಿಟ, ಸಾಲ, ಪತ್ತಿ, ಹುಂಡಿ, ಮುಂತಾದ ಯಾವತ್ತು ವ್ಯವಹಾರಗಳು ನಡಿಯುವವು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿಮಾಡುವವರಿಂದ ಸಮಕ್ಷಮ ತಿಳಕೊಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ ರಿಂದ ೧೧-೩೦. ಸಾಯಂಕಾಲ ೩ ರಿಂದ ೬ ರವರೆಗೆ ನಡಿಯುವದು.

K.B . Ankalagi
ಮ್ಯಾನೇಜಿಂಗ ಡಾಯರೆಕ್ಟರ

ಈ ಪತ್ರವನ್ನು ಅಣ್ಣಾಚಾರ್ಯ ಹಾಲಭಾವಿಯವರ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾತ್ರಾಹಾರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443]

ನಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೬) ಧಾರವಾಡ ಸೋಮವಾರ ತಾರೀಖು ೨೩ನೇ ಮಾರ್ಚ ೧೯೨೫ (ಸಂಚಿಕೆ ೬೮

ಬೇಸಿಗೆ ಪ್ರಾರಂಭವಾಯಿತು!

ದನಗಳ ಆಹಾರವಾದ ಕಣಕಿಯನ್ನು ಕಾಯಿರಿ !!

ಕಿರ್ಲೋಸ್ಕರ ಕಣಕಿ ಯಂತ್ರವನ್ನು ಉಪಯೋಗಿಸಿರಿ !!!

ನಮ್ಮ ಕಾರಖಾನೆಯಲ್ಲಿ ಎರಡು ನಮೂನೆಯ ಕಣಕಿ ಕೊರೆಯುವ ಯಂತ್ರಗಳು ತಯಾರಾಗುತ್ತವೆ. ಒಂದು ಕೈಯಂತ್ರ ಬೆಲೆ ೨೦ರೂ. ಇನ್ನೊಂದು ಗಾಲೀಯಂತ್ರ ಬೆಲೆ ೮೫ ರೂಪಾಯಿ ಸಣ್ಣ ಕಮತವುಳ್ಳವರು ಕೈ ಯಂತ್ರವನ್ನೂ, ದೊಡ್ಡ ಕಮತವುಳ್ಳವರು ಗಾಲೀ ಯಂತ್ರವನ್ನೂ ಉಪಯೋಗಿಸಬಹುದು. ಕಣಕಿಯು ೪ ಇಂಚುಗಳಿಂದ ಒಂದು ಇಂಚಿನ ವರೆಗೆ ಕೊರೆಯಲ್ಪಡುತ್ತದೆ.

ಸವಿಸ್ತರ ಸಂಗತಿಯ ಬಗ್ಗೆ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ } ಕಿರ್ಲೋಸ್ಕರವಾಡಿ-
ಜಿಲ್ಲಾ ಸಾತಾರಾ.

ಕೆಲ್ಲ ೨ ಆಣೆಯೊಳಗೇ ಆಶ್ಚರ್ಯಕಾರಕ ವ ರಾಮಬಾಣ ಉಪಾಯ

ನೊಮೆಂಟ ಕ್ಯೂರ

ತಲೆಶೂಲಿ, ಅರ್ಧ ತಲೆಶೂಲಿ, ಶೀತ, ಉಷ್ಣ ವ ನಿತ್ರಾಣ ವಗೈರೆಗಳಿಂದಾದ ಮಸ್ತಕಶೂಲಿಯ ಕ್ಷಣದಿಂದ ನಿರ್ಮೂಲ ಮಾಡಲು " ನೊಮೆಂಟ ಕ್ಯೂರ " ದಿಗೆ ಸರಿಸಮಾನವಾದ ಔಷಧವು ಬೇರೆ ಇಲ್ಲ. ಹೆಚ್ಚು ಜನರು ಮಸ್ತಕಶೂಲೆಯನ್ನು ಸಹಿಸಲು ಆಗದೆ ಮಸ್ತಕಕ್ಕೆ ವಸ್ತ್ರಕಟ್ಟಿ ಎಷ್ಟೋ ವ ಆ ಕರನ್ನು ಕಳೆಯುತ್ತಾರೆ. ಆದರೆ ಪರಾಶೆಯಾದವರು ನೋಮೆಂಟ ಕ್ಯೂರದ ಪುಡಿಯನ್ನು ಬಿಸಿ ಚಹಾ ದೊಂದಿಗೆ ಅಥವಾ ಬಿಸಿ ನೀರಿನೊಂದಿಗೆ ಹೊಟ್ಟೆಯಲ್ಲಿ ತಕ್ಕೊಂಡಲ್ಲಿ ಒಂದೇ ಕ್ಷಣದಲ್ಲಿ ಮಸ್ತಕಶೂಲಿ ಕಡಿಮೆ ನಿಲ್ಲುವುದು. ಇದಕ್ಕೆ ಅನೇಕ ಶಿಫಾರಸ ಪತ್ರಗಳು ಉಂಟು.

೧ ಪಟೀಗೆ ೨ ಆಣೆ. ಸ್ಯಾಂಪಲ ಸಲುವಾಗಿ ೩ ಆಣೆ ಪೋಸ್ಟ ತಿಕೀಟುಗಳನ್ನು ಕಳಿಸಿದಲ್ಲಿ ಕಳಿಸಲಾಗುವದು.

ವಿಳಾಸ— ದಿ ಆರಾವಿಕ್ಯ ಮೆಡಿಕಲ ಸ್ಟೋರ್ಸ್, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ ಹೋಳಿಗರ ಹುಬ್ಬಳ್ಳಿ.

ವಿವಿಧ ವರ್ತಮಾನಗಳು

—೦—

ಇಂಗ್ಲಂಡ ಮತ್ತು ಐರ್ಲಂಡದ ನಡುವೆ ದಿನಾಲು ಟಪಾಲನ್ನು ವಿಮಾನಗಳಿಂದ ಕಳಿಸುವ ಏರ್ಪಾಡು ಮಾಡಿದ್ದಾರೆ.

ಸರ ಪೀನಾಲ್ಡ ಲಿಂಡಸೆ ಎಂಬವರು ಅಂಗೋರಾದಲ್ಲಿ ಇಂಗ್ಲಿಷ ಸರಕಾರದ ರಾಯಭಾರಿಯಾಗಿ ನೇಮಿಸಲ್ಪಟ್ಟಿದ್ದಾರೆ.

ಲಾರ್ಡ ರೀಡಿಂಗ ಸಾಹೇಬರು ವಿಲಾಯತಿಗೆ ಬಂದು ಅವರ ಕೂಡ ಪ್ರಸ್ತಾಪ ಮಾಡಿದ ವಿನಹ ಹಿಂದುಸ್ಥಾನದ ರಾಜಕಾರಣವನ್ನು ಕುರಿತು ಸರ್ವಸಾಮಾನ್ಯವಾದ ವಿವೇಚನ ಮಾಡಲಾರೆವೆಂದು ಲಾರ್ಡ ಬರ್ಕನಹೆಡ್ಡ ಸಾಹೇಬರು ಜಾಹೀರು ಮಾಡಿದ್ದಾರೆ.

ಕಲಕತ್ತೆಯ ಹಾಯಕೋರ್ಟಿನಲ್ಲಿ ತಮ್ಮನ್ನು ಅನ್ಯಾಯವಾಗಿ ಬರತರ್ಫ ಮಾಡಿದರೆಂದು ಮಿ. ಮ್ಯಾಕೆಂಜಿ ಎಂಬ ಸಾಹೇಬರು ಹಿಮಾಲಯುವೊಂಬ ವಿಮೆಯ ಕಂಪನಿಯ ಮೇಲೆ ೧೬ ಲಕ್ಷದ ನಷ್ಟ ಭರ್ತಿಯ ದಾವೇ ಮಾಡಿದ್ದರು. ಬರತರ್ಫ ಮಾಡಲಿಕ್ಕೆ ಅಧಿಕಾರವಿರುತ್ತದೆಂದು ನ್ಯಾಯಮೂರ್ತಿಗಳು ತೀರ್ಪ ಹೇಳಿದರು.

ಮೈಸೂರಿನ ಯುವರಾಜರು ವಿಲಾಯತಿಯ ಪ್ರವಾಸಕ್ಕೆ ಪ್ರಯಾಣ ಬೆಳೆಸಿದರು.

ಮಹಾತ್ಮರ ಆಗಮನದ ನೆನಪೆಂದು ಅವರ ಕೈಯಿಂದ ಕೋಚೀನದಲ್ಲಿ ಒಂದು ಮಾವಿನಗಿಡವನ್ನು ಹಚ್ಚಿಸಿದರು.

ಮದ್ರಾಸದ ಹಿಂದೂ ಪತ್ರದ ಪ್ರಸಿದ್ಧ ಸಂಪಾದಕರಾಗಿದ್ದ ಸ್ವರ್ಗವಾಸಿ ಕಸ್ತೂರಿ ರಂಗಯ್ಯಂಗಾರರ ಭಾವ ಚಿತ್ರದ ಅನಾವರಣ ಸಮಾರಂಭವು ನಿನ್ನಿನ ದಿವಸ ಮದ್ರಾಸದಲ್ಲಿ ಮಹಾತ್ಮರಿಂದ ನೆರವೇರಿಸಲ್ಪಟ್ಟಿತು.

ವಿಜಯ.

ಧಾರವಾಡ ತಾ- ೨೩-೩-೨೫ ನೇ ಇಸ್ವಿ

ದಬ್ಬಾಳಿಕೆಯ ಕಾಯದೆಯನ್ನು ರದ್ದು ಮಾಡುವಾಗ ಆದ ಭಾಷಣಗಳು.

—೦—

ಪಂಜಾಬದಲ್ಲಿ ಕಾಡು ಬಿಸಿಯ ಮಾಡುವ ಯುರೋಪಿಯನ್ನರ ಕೊಲೆಯ ವಿಷಯವಾಗಿ ಮಾಡಿದ ಕಾಯದೆಯು ಹೊರತು, ಹಿಂದುಸ್ಥಾನದಲ್ಲಿ ಸರಕಾರದವರು ಸ್ವೇಚ್ಛೆಯಿಂದ ಮಾಡಿದ ದಬ್ಬಾಳಿಕೆಯ ಎಲ್ಲ ಕಾಯದೆ ಮತ್ತು ಹುಕುಮುಗಳನ್ನು ರದ್ದು ಮಾಡಬೇಕೆಂಬ ಠರಾವನ್ನು ಅಸೆಂಬ್ಲಿಯಲ್ಲಿ ಶ್ರೀ ಪಟೇಲರು ತಂದದ್ದು ಸ್ವತಂತ್ರ ಪಕ್ಷೀಯರ ನೆರವಿನಿಂದ ಪಾಸಾಯಿತು. ಠರಾವು ಅಸೆಂಬ್ಲಿಯಲ್ಲಿ ಪಾಸಾದರೂ, ಅದಕ್ಕೆ ಬುದ್ಧಿವಂತ ಹಿರಿಯರೆಂಬ ಕೌನ್ಸಿಲ ಆಫ ಸ್ಟೇಟದ ಮೆಂಬರರ ಒಪ್ಪಿಗೆಯು ಸಿಕ್ಕರೇ ಅದು ಒಮಮಟ್ಟಿಗೆ ಅಮಲಿನಲ್ಲಿ ಬರುವ ಅಶಿಯುಂಟಾಗುವದು. ಸ್ಟೇಟನವರೇ ರದ್ದು ಮಾಡಿದರೆ ಗವರ್ನರ ಜನರಲರಿಗೆ ಸರ್ಟಿಫಿಕೇಟು ಕೊಟ್ಟು, ಅದನ್ನು ಮಂಜೂರ ಮಾಡುವ ಅಗತ್ಯವುಂಟಾಗುವದು.

ಈ ಸಮಯದಲ್ಲಾದ ಭಾಷಣಗಳು ಲಕ್ಷ್ಯ ಕೊಡತಕ್ಕಂಥವಾದವು. ಯಾವ ರಾಜ್ಯವೇ ಇರಲಿ, ಅಲ್ಲಿ ಕೆಲಮಟ್ಟಿಗಾದರು ದಬ್ಬಾಳಿಕೆಯ ಕಾಯದೆಗಳು ಬೇಕಾಗುತ್ತವೆ. ನಾಳೆ ಸ್ವರಾಜ್ಯ ದೊರೆತರೂ ಇಂಥ ಕಾಯದೆ ಬೇಕಾಗುವದೆಂದು ಶ್ರೀ ರಂಗಾಚಾರ್ಯರು ಭಾಷಣ ಮಾಡಿದರು. ಈ ಮಾತು ಕೇಳಿ ಸರಕಾರ ಪಕ್ಷೀಯರೆಲ್ಲರಿಗೂ ಆನಂದವಾಯಿತು. ಎಂ. ಸ್ಪೇನಿಯನೆಂಬ ಕಾಯದೇ ಪಂಡಿತರು ಈ ಮಾತನ್ನು ಅನುಮೋದಿಸಿ, ಈಗ ದಬ್ಬಾಳಿಕೆಯ ಕಾಯದೆಗಳನ್ನು ಅಂಗೀಕರಿಸಿರಿ. ಬೇಗನೆ ವಿರಾಯ ವಿಯುಂತ ಇಲ್ಲಿಯೂ ವ್ಯಕ್ತಿ ಸ್ವಾತಂತ್ರ್ಯದ "ಹೀಬಿಯಸ ಕಾರ್ಪಸ" ಕಾಯದೆ ಮಾಡಲ್ಪಡುವದೆಂದು ಆಶೆ ತೋರಿಸಿದರು. ಆದರೆ ಸ್ವರಾಜ್ಯ ಪಕ್ಷೀಯರು ಆ ಚಾರ್ಯರ ಭಾಷಣಕ್ಕೆ ಹಿಗ್ಗಿದರಿಗಲಿಲ್ಲ. ಮತ್ತು ಸಾಹೇಬರ ಭಾವೀ ಆಶೆಯ ಮಾತಿನಲ್ಲಿಯೂ ಬೀಳಲಿಲ್ಲ.

ನಾಗಪೂರದ ಬ್ಯಾರಿಸ್ಟರ ಅಭ್ಯಂಕರರು ಮೊಕ್ಕದ್ದಮೆಗಳಿಗೆ ಪ್ರಾರಂಭ ಮಾಡಿದರು. ನಿಜವಾದ ಅಪರಾಧಿಗಳು ಈ ಅಸೆಂಬ್ಲಿಯಲ್ಲಿಯೇ ಇದ್ದಾರೆ. ಆವರು ಗೃಹಮಂತ್ರಿಗಳೂ ಅವರ ಸಹಾಯಕರೂ ಆಗಿದ್ದಾರೆ. ಮವಾಳರು ಕೂಡ ಸರಕಾರದ ಕೃತ್ಯವನ್ನು ನಿಷೇಧಿಸುತ್ತಿದ್ದಾರೆ. ಬಲಾತ್ಕಾರದಿಂದ ನೊಗ ಲಬಾಡಿಯಂತೆ ರಾಜ್ಯವಾಳುವದು ಹಿಂದುಸ್ಥಾನಕ್ಕೆ ಬೇಕಾಗಿಲ್ಲ. ಎಂದು ನುಡಿದರು. ಸುಧಾರಣೆ ಹಚ್ಚುವ ಬನಬೆಟ್ಟಿಯವರಂತೂ ಸರಕಾರವು ದಬ್ಬಾಳಿಕೆಯ ಕಾಯದೆಯ ನೆವದಿಂದ ಅನ್ಯಾಯಕೃತ್ಯವನ್ನು ಮಾಡಿಸಿರುತ್ತಾರೆಂದರು. ಬಂಗಾಲದ ದಬ್ಬಾಳಿಕೆಯ ಸ್ವರೂಪವಲ್ಲ ಸ್ವರಾಜ್ಯ ಪಕ್ಷೀಯರ ಸದ್ದು ಅಡಗಿಸುವದಕ್ಕಾಗಿರುತ್ತದೆಂದು ಶ್ರೀ. ರಂಗಯ್ಯರರು ಸರಕಾರದ ಸ್ಪಷ್ಟವಾಗಿ ಆರೋಪ ಹೊರಿಸಿದರು. ಬ್ಯಾರಿಸ್ಟರ ಜಿನ್ನಾಸಾಹೇಬರು ಸರಕಾರದ ವಿರುದ್ಧ ಭಾಷಣ ಮಾಡಿದರು. ಆದರೆ ಅದರಲ್ಲಿ ವಿಶೇಷವಾಗಿ ಹೇಳತಕ್ಕದ್ದೇನೂ ಇರುವದಿಲ್ಲ.

ಮುನ್ನಾ ದಿವಸ ಫಾಯನ್ಯಾನ್ಸ ಬಿಲ್ಲಿನ ವಿಷಯವಾಗಿ ಸ್ವರಾಜ್ಯ ಮತ್ತು ಸ್ವತಂತ್ರ ಪಕ್ಷೀಯರ ನಡುವೆ ಜರಗಿದ ಮಾತುಗಳಾಗಿ, ಹಳದು ಕಿಯಾಗಿತ್ತು. ಸ್ವತಂತ್ರರು ಇಂದೂ ತಮಗೆ ಅನುಕೂಲರಾಗಿ ಮತಕೊಡುವರೆಂದು ಸರಕಾರದವರು ಒಪ್ಪವಾಗಿ ಆಶೆ ಮಾಡಿದ್ದರು. ಆದರೆ ಅವರು ಸಂಪೂರ್ಣ ನಿರಾಶೆ ಹೊಂದಿದರು. ಬ್ಯಾರಿಸ್ಟರ ಜಿನ್ನಾಸಾಹೇಬರು ಪಂಡಿತ ಮೋತಿಲಾಲರ ಹಿಂದೆಯೇ ಆ ಮಂತೆ ಹೋಟು ಕೊಡಲಿಕ್ಕೆ ಹೋದದ್ದನ್ನು ಕಂಡು ಗ್ಯಾರಂಟಾಯನ್ನರು ವಿಸ್ಮಯಗೊಂಡರು.

ಜನರು ತಮಗೆ ಅನುಕೂಲರಾಗಿದ್ದಾರೆಂದು ಕಂಡಕೂಡಲೆ, ಸರಕಾರವು ಅವರ ಬೆನ್ನು ಚಪ್ಪರಿಸುವದು. ಪ್ರತಿಕೂಲರಿದ್ದಾರೆಂದು ನೋಡಿದ ಕೂಡಲೆ, ಮೋರೆ ಮೊಗರಿಸುವದು. ಅನುಕೂಲ ಅಥವಾ ಪ್ರತಿಕೂಲವೆಂಬ ವಿಚಾರ ಮಾಡದೆ, ತನಗೆ ತೋರಿದಂತೆ ಕಾಯದೆಯನ್ನು ಅಮಲಿನಲ್ಲಿ ತರುವದು ಆದ್ದರಿಂದಲೇ ತಾವು ಏನ ಮಾಡಿದರೂ ಮಾಡದೆ, ಸರಕಾರವು ಜನಕ್ಕೆ ಬರುವ ತನಳ ಬಂದೇ ಹಿಡಿತ ಹಿಡಿಯ ಬೇಕೆಂದು ಸ್ವರಾಜ್ಯ ಪಕ್ಷೀಯರ ಮತವಾಗಿರುತ್ತದೆ.

ಬೆಂಕೆ ಆರಿಸುವ ಯಂತ್ರವು.

—೦—

ಮುಂಬಯಿಯ ಒಂದು ಮೋಟಾರ ಕಂಪನಿಯವರು ಬೆಂಕೆ ಆರಿಸುವ ಒಂದು ಪುಟ್ಟ ಯಂತ್ರವನ್ನು ಮಾಡಿದ್ದಾರೆ. ಇದರ ಬೆಲೆಯು ಒಂದೇ ರೂಪಾಯಿ. ಕಾಗದ, ಗುಡಿಯ ಕಟ್ಟಿಗೆ, ಕಲ್ಲೆಣ್ಣೆ ಎದ್ದಿದ ಬೇರೆ ಪದಾರ್ಥಗಳಿಗೆ ಹತ್ತಿ ದಚ್ಚಿ, ಈ ಯಂತ್ರದ ಪ್ರಯೋಗ ಮಾಡಿದ ಕೂಡಲೆ, ಉರಿಯು ಆರಿ ಹೋಯಿತು. ಬೀಡೀ ಸೇದತಕ್ಕವರು ಹಾಸಿಗೆಯ ಹತ್ತರ ಇದನ್ನು ಇಟ್ಟುಕೊಂಡರೆ ಹಾಸಿಗೆ ಸುಡುವದೆಂಬ ಭೀತಿಯು ದೂರಾಗುವದು.

ಉಪ್ಪಿನ ಕರದ ವಿಚಾರವೇನು?

—೦—

ಅಸೆಂಬ್ಲಿಯಲ್ಲಿ ಉಪ್ಪಿನ ಈಗಿನ ಕರದಲ್ಲಿ ನಾಲ್ಕಾಣೆ ಕಡಿಮೆ ಮಾಡಬೇಕೆಂಬ ಠರಾವು ಪಾಸಾಯಿತಷ್ಟೇ. ಸರಕಾರದವರು ಅಸೆಂಬ್ಲಿಯ ಠರಾವನ್ನು ಪ್ರಮಾಣವಾಗಿ ಹಿಡಿಯದೆ, ಅದನ್ನು ಹಿರಿಯರೆಂಬ ಬುದ್ಧಿವಂತರ ಸಭೆಗೆ ಕಳಿಸುವರು. ಅವರಾದರೂ ಈ ಠರಾವನ್ನು ಮಂಜೂರ ಮಾಡಬಹುದಾಗಿದೆ. ಆದರೆ ಅವರ ಮುಂದೆ ಎರಡು ಪ್ರಶ್ನೆಗಳನ್ನಿಡುವರು. ಈ ಕರ ಕಡಿಮೆ ಮಾಡಿದರೆ ಸರಕಾರಕ್ಕೆ ಈ ವರ್ಷ ೯೦ ಲಕ್ಷ ಮತ್ತು ಮುಂದಿನ ವರ್ಷದಿಂದ ೧೩೫ ಲಕ್ಷದ ಕೊರತೆಯಾಗುವದು. ಈ ಕೊರತೆಯನ್ನು ಜಾರಿಗೊಡಿಸಬೇಕಾದರೆ ಪ್ರತಿಯೊಂದು ಇಲಾಖೆಗೆ ಹಂಚಿದ ವೈರಾತನ್ನು ನಿಲ್ಲಿಸಬೇಕಾಗುವದು. ಹಿಗೆ ವೈರಾತು ಬೇಕೋ? ಕರ ಕಡಿಮೆ ಮಾಡುವದು ಬೇಕೋ? ಎಂಬ ಸಂದೇಹವನ್ನು ಅವರ ಮುಂದಿಡುವರು. ಉಪ್ಪಿನ ಕರ ಕಡಿಮೆ ಮಾಡಿದರೆ ೩೦ ಕೋಟಿ ಜನರಲ್ಲಿ ಇದು ಹಂಚಿ ಹೋಗಿ, ತಲೆಗೆ ಮುಕ್ಕಾಲು ಆಣೆ ಕರದ ಭಾರ ಇಳಿಯುವದು. ಇಷ್ಟು ಕರವನ್ನು ಪ್ರತಿಯೊಬ್ಬನು ಹೊತ್ತಿದ್ದಾನೆ. ಹಿಂದಾದರು ಹೊರುವನು. ಇದನ್ನು ಈಗಿನಂತೆ ಸ್ಥಿರ ಪಡಿಸಿ, ವೈರಾತನ್ನು ಅಂಗೀಕರಿಸಿದರೆ ಪ್ರತಿಯೊಂದು ಇಲಾಖೆಗೆ ಲಕ್ಷಾವಧಿ ರೂಪಾಯಿಗಳ ಗಂಟು ಸಿಕ್ಕು ಅದರಿಂದ ಲೋಕೋಪಯೋಗದ ಮಹತ್ವದ ಕೆಲಸಗಳನ್ನು ಮಾಡಲನುಕೂಲವಾಗುವದು. ಅಥವಾ ಈ ಮೊದಲು ಮಾಡಿದ ಸಾಲ ಕಡಿಮೆಯಾಗುವದೆಂದು ಹೇಳುವರು. ಬುದ್ಧಿವಂತ ಹಿರಿಯರು ಸರಕಾರದ ಬಯಕೆಯನ್ನು ಪೂರ್ಣ ಮಾಡುವದೇ ತಮ್ಮ ಕರ್ತವ್ಯವೆಂದು ತಿಳಿದದ್ದರಿಂದ, ಅವರ ಬಾಯಿಗೆ ವೈರಾತಿನ ದುಡ್ಡಿನ ದೆಸೆಯಿಂದಲೇ ನೀರು ಬರುವದೆಂಬದೇ ನಿಜ. ಹೀಗಾದ ಪಕ್ಷದಲ್ಲಿ ಉಪ್ಪಿನ ಕರವು ಪುನಃ ಅಸೆಂಬ್ಲಿಯ ಮುಂದೆ ಬರುವದು. ಅಸೆಂಬ್ಲಿಯು ಮತ್ತೆ ಮೊದಲಿನಂತೆ ಠರಾವು ಪಾಸ ಮಾಡಿದರೆ ಗವರ್ನರ ಜನರಲರಿಗೆ ಸರ್ಟಿಫಿಕೇಟು ಕೊಟ್ಟು ಅಸೆಂಬ್ಲಿಯ ಠರಾವಿನ ಕಾಗದವನ್ನು ಹರಕ ಬುಟ್ಟಿಯೊಳಗೆ ಒಗೆಯಬೇಕಾಗುವದು.

ಸ್ಟೇಶನದಲ್ಲಿ ಕಾಗದದ ಗಡಣಿಗಳಲ್ಲಿ ಕೆಲಸ ಮಾಡತಕ್ಕವರು ಸಂಪು ಮಾಡಿದ್ದಾರೆ. ಈ ಸಂಪು ಸಾರ್ವಜನಿಕರಿಗೆ ಕಷ್ಟಕ್ಕೆ ಕಾರಣವಾಗಿದೆ.

ಬಾವಲಿ ಸಾಹೇಬರ ಕೊಲೆಯಲ್ಲಿ ಆರೋಪಿಯಾದವರು ತಮ್ಮ ವಿಚಾರಣೆಯು ಮದ್ರಾಸ ಹಾಯಕೋರ್ಟಿನಲ್ಲಾಗಬೇಕೆಂದು ಲಾರ್ಡ ರೀಡಿಂಗ ಸಾಹೇಬರವರಿಗೆ ಅರ್ಜಿ ಮಾಡಿಕೊಳ್ಳತಕ್ಕವರಿದ್ದಾರೆ.

ಕಾರ್ನವೃಸ್ಥರ ಕಠೋರ ಭಾಷಣ.

—೦—

ಪ್ರಿನ್ಸ ಆಫ ವೆಲ್ಸರು ಇಂಗ್ಲಂಡಕ್ಕೆ ಬರುವರು ಯೋಗಕ್ಷೇಮ ನೋಡುವವರ ಬದಲು ಅವರಿಗೆ ಸಂದೇಶ ಕೊಡಲಿಕ್ಕೆ ಹೋಗುವದಕ್ಕೆ ಹತ್ತುವ ವೆಚ್ಚವನ್ನು ಕೊಡಬಾರದೆಂದು ಪಾರ್ಲಮೆಂಟ ಸಭೆಯಲ್ಲಿ ಕಾರ್ನವೃಸ್ಥರೆಂಬ ಮೆಂಬರರು ಮಾಡಿದ ಭಾಷಣದ ಸಂಗತಿಯನ್ನು ಈ ಮೊದಲು ಬರೆದಿದ್ದೇವೆ. ಅನಂತರ ಇವರು ಮಂತ್ರಿಯಾದ ಮಿ. ಚೆಂಬರಲೇನ ಸಾಹೇಬರು ಮಾತಾಡುವಾಗ ಅವರನ್ನು ನಡುವೆ ತಡವಿದ್ದರಿಂದ, ಸ್ಪೀಕರರು ಇವರನ್ನು ನಿಸ್ಸಂಶಯ ಮಾಡಿದ್ದರಿಂದ, ಕೂಲಿಕಾರರ ಪಕ್ಷದ ಎಲ್ಲ ಮೆಂಬರರು ಪಾರ್ಲಮೆಂಟ ಸಭೆ ಬಿಟ್ಟು ಹೋದದ್ದನ್ನು ಈ ಮೊದಲು ಬರೆದಿದ್ದೇವೆ. ಕಾರ್ನವೃಸ್ಥ ಮೆಂಬರರು ಇವರೆಡೂ ಸಂಗತಿಗಳನ್ನು ಕುರಿತು ತಂಬರಲನೆಂಬಲ್ಲಿ ಭಾಷಣ ಮಾಡಿದರು. ಅದರಲ್ಲಿ "ಪ್ರಿನ್ಸ ಆಫ ವೆಲ್ಸರಂಥ ಶಿಸ್ತಿನವರು ದೆಸೆಯಿಂದ ಕೂಲಿಕಾರರ ದ್ರವ್ಯವನ್ನು ಹಾಳು ಮಾಡಬಾರದೆಂದೂ, ಪಾರ್ಲಮೆಂಟ ಸಭೆಯಲ್ಲಿ ತಾವು ಮಾಡಿದ ವಿರೋಧವು ನ್ಯಾಯವಾಗಿದ್ದು, ಪಾರ್ಲಮೆಂಟ ಸಭೆಯಲ್ಲಿ ಮಾನವಿಲ್ಲದ ಅಸಮರ್ಥ ಮೆಂಬರರಿದ್ದರೆ ಅವರು ಮಿ. ಚೆಂಬರಲೆನ್ನರೇ ಆಗಿದ್ದಾರೆಂದು" ಅಂದಿದ್ದಾರೆ.

ಇಂಗ್ಲಿಷ ಅಧಿಕಾರಿಗೆ ಅರಬರ ಬಹಿಷ್ಕಾರ.

—೦—

ಲಾರ್ಡ ಬಾಲ್ಫರ ಸಾಹೇಬರು ಪಾಲಿಸ್ತಾಯಿನ್ದಲ್ಲಿ ಹೊಸದಾಗಿ ಸ್ಥಾಪಿಸುವ ಹಿಬ್ರೂ ವಿದ್ಯಾಲಯವನ್ನು ತೆರೆಯುವದಕ್ಕೆ ಹೋಗುವರೆಂದೂ, ಆಗ ಅರಬರು ಇವರಿಗೆ ಬಹಿಷ್ಕಾರ ಹಾಕುವರೆಂದೂ ಒಂದು ತಿಂಗಳ ಹಿಂದೆ ಬರೆದಿದ್ದೇವೆ. ಸಾಹೇಬರು ಇಷ್ಟರಲ್ಲಿ ಅಲ್ಲಿಗೆ ಹೋಗುವರು. ಇವರು ಬರುವ ತಾರೀಖು ತಿಳಿಸಿಲ್ಲವೆಂದು ನಮಗೆ ಪರಕಾಳ ಮಾಡಲಿಕ್ಕೆ ಪರಿಹಾರ ದೊರೆಯುವದು; ಇಲ್ಲವಾದರೆ ಎರಡು ದಿವಸ ಪರಕಾಳ ಮಾಡಬೇಕಾಗುತ್ತದೆಂದು ಅರಬರು ಪ್ರಿಟಿಶ ಕಮಿಶನರನವರಿಗೆ ಮುಂದಾಗಿ ಕೇಳಿದ್ದಾರೆ. ಲಾರ್ಡ ಬಾಲ್ಫರ ಸಾಹೇಬರು ಬಂದ ದಿವಸ ಪ್ರತಿಯೊಬ್ಬ ಅರಬನು ಕೂರಳಿಗೆ ಕರೇ ಸಾಲುಪಟ್ಟಿ ಕಟ್ಟಬೇಕು ಮತ್ತು ಬೀದಿಗುಂಟ ಕರೇ ನಿಶಾನೆ ಹಚ್ಚಬೇಕೆಂದು ಜಾಹೀರ ಮಾಡಿದ್ದಾರೆ.

ಸರ ಉಯಿಲಿಯಮ್ಮ ಬರ್ಡವುಡ್ಡ ಸಾಹೇಬರು ಹಿಂದುಸ್ಥಾನದ ಸರ್ವ ಸೇನಾಧಿಪತಿಯಾಗಿ ನೇಮಿಸಲ್ಪಟ್ಟಿದ್ದಾರೆ.

ಜರ್ಮನಿ ಪೋಲಂಡದ ತಕ್ಕರಾರು.

—೦—

ಜರ್ಮನಿ ಮತ್ತು ಪೋಲಂಡದ ನಡುವೆ ಸರಹದ್ದಿನ ದೆಸೆಯಿಂದ ಜಗಳ ಬಂದಿದ್ದು, ಈ ಜಗಳವನ್ನು ಜರ್ಮನಿಯು ಕೂಡ ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷವಾಗಿ ತೀರಿಸಿಕೊಳ್ಳಲು ಸಿದ್ಧವಿಲ್ಲೆಂದೂ, ಸೀಮೆಯು ಈಗಿದ್ದಂತೆಯೇ ಇರತಕ್ಕದ್ದೆಂದೂ ಪೋಲಂಡವನ್ನು ತ್ತದ ಜರ್ಮನಿಯು ರಾಷ್ಟ್ರಸಂಘದಲ್ಲಿಲ್ಲ. ಮತ್ತು ಜಗಳ ತೆಗೆದು ಪೋಲಂಡದ ಕೂಡ ಯುದ್ಧ ಹೂಡುವಂತಿಲ್ಲ. ಏಕೆಂದರೆ- ಇದಕ್ಕೆ ಫ್ರಾನ್ಸದ ಬೆಂಬಲವಿದೆ. ತ್ರಿಶಂಕುದಶೆಯನಂತಿರುವ ಅವಸ್ಥೆಯನ್ನು ದೂರ ಮಾಡಿಕೊಳ್ಳಲು- ಜರ್ಮನಿಯು ರಾಷ್ಟ್ರ ಸಂಘದಲ್ಲಿ ಸೇರಬೇಕಾಗುತ್ತದೆ.

ಹೆಣಗಳು ರವದಿಯಂತೆ ಹಾರಿದವು.

—೦—

ಅಮೇರಿಕೆಯಲ್ಲಿ ಬಿಟ್ಟಂಥ ಸುಂಟರ ಗಾಳಿಯ ಹೊಡತದಲ್ಲಿ ಸಿಕ್ಕ ಜನರು ರವದಿಯಂತೆ ಹಾರಿ ಗಾಳಿಗುಂಟ ಒಂದೊಂದು ಮೈಲಿನ ದೂರ ಹಾರಿಹೋದರು. ಒಂದು ಶಾಲೆ ಬಿದ್ದು, ಅದರಲ್ಲಿದ್ದ ಎಲ್ಲ ಹುಡುಗರು ಮೃತ್ಯುಮುಖದಲ್ಲಿ ಬಿದ್ದರು. ನಾಲ್ಕೂ ಕಡೆಗೆ ಬೆಂಕಿ ಎದ್ದದರಿಂದ ಸಿಲಿಕಿದವರಿಗೆ ಸಹಾಯ ಮಾಡುವದು ಕಠಿಣವಾಗಿರುತ್ತದೆ.

ಬಿ. ಎ. ಆದ ಮೇಲೆ ಮದುವೆ.

—೦—

ಮದ್ರಾಸ ಯುನಿವ್ಹರ್ಸಿಟಿಯಲ್ಲಿ ಶ್ರೀ ಮಾಧವಯ್ಯನೆಂಬವರು ಬಿ. ಎ. ಪರೀಕ್ಷೆ ಪಾಸಾದ ಹೊರತು ವಿದ್ಯಾರ್ಥಿಯು ಮದುವೆ ಮಾಡಿಕೊಳ್ಳಬಾರದೆಂದು ತಂದ ಠರಾವು ಪಾಸಾಯಿತು. ಈ ಮುಂದಾಗಿ ಯಾವನೊಬ್ಬನ ಮದುವೆಯಾಗಿದ್ದರೆ ಅವನು ಆ ಪ್ರಕಾರ ದಾಖಲೆ ಕೊಡಬೇಕು. ಈ ದಾಖಲೆಯು ಮೋಸದ್ದೆಂದು ಕಂಡು ಬಂದರೆ, ಅವನ ಪದವಿಯನ್ನು ರದ್ದು ಮಾಡಬೇಕೆಂದು ಠರಾವಿನ ಶರ್ತು ಆಗಿರುತ್ತದೆ. ಇಂಥ ಠರಾವು ಪ್ರತಿಯೊಂದು ಯುನಿವ್ಹರ್ಸಿಟಿಯಲ್ಲಿ ಆಗುವದು ಅವಶ್ಯಕ.

ಮುಂಬಯಿ ಕೌನ್ಸಿಲದ ತಹಕೂಬಿಯು.

—೦—

ಕಳೆದ ೧೯ ನೆಯ ತಾರೀಖಿನ ದಿವಸ ಮುಂಬಯಿ ಕೌನ್ಸಿಲವು ಸಪ್ಟಂಬರದ ತನಕ ತಹಕೂಬ ಮಾಡಲ್ಪಟ್ಟಿತು. ಸರಕಾರದ ಬಜೆಟ್ಟಿನ ಮೇಲೆ ಮುಖ್ಯವಾದ ಚರ್ಚೆಯಾಯಿತು. ನಾನ ಆಫೀಸಿಯಲರು ೧೫೦ ಠರಾವುಗಳನ್ನು ಕಳಿಸಿದ್ದರು. ಇವೆರಡರ ಹೊರತು ಎಲ್ಲ ಠರಾವುಗಳು ಮುಂದಿನ ಕೌನ್ಸಿಲಕ್ಕೆ ಬಿದ್ದವು. ಪ್ರಾಥಮಿಕ ಶಿಕ್ಷಕರ ಪಗಾರ ಬಡತಿಯ ಠರಾವೂ ಮುಂದೆ ಬಿತ್ತೆಂದು ಹೇಳುವ ಅಗತ್ಯ ಉಳಿಯಲಿಲ್ಲ.

ತಾರಿನ ಸುದ್ದಿಗಳು.

—೦—

ಕೌನ್ಸಿಲ ಆಫ ಸ್ಟೇಟದಲ್ಲಿ ಉಪ್ಪಿನ ಕರವು ಮೊದಲಿನಂತೆ ಒಂದೂ ಕಾಲು ರೂಪಾಯಿ ಇರಬೇಕೆಂಬ ಠರಾವು ಪಾಸಾಯಿತು. ಸಾಲ್ವರೇ ಪ್ರತಿಕೂಲ ಮತಕೊಟ್ಟರು. ಮೆಸರ್ಸ ವೇದಮೂರ್ತಿ, ಕಾಮಲೇಕರ, ರಾಮದಾಸ, ಮತ್ತು ರಂಗಸ್ವಾಮಿ ಅಯ್ಯಂಗಾರ ಇವರೇ ಆ ನಾಲ್ವರು.

ಮದ್ರಾಸ ಮ್ಯುನಿಸಿಪಾಲಿಟಿ ಅಧ್ಯಕ್ಷರಾಗಿರುವ ಪಾತ್ರೊ ಉಸ್ಮಾನ ಸಾಹೇಬರು ಮದ್ರಾಸ ಸರಕಾರದ ಕೌನ್ಸಿಲರರಾಗಿ ನೇಮಿಸಲ್ಪಟ್ಟರು. ಇವರ ಅಧ್ಯಕ್ಷಸ್ಥಾನದ ಅವಧಿ ಮುಗಿಯುವದಕ್ಕಿಂತ ಧಾರ್ಮಿಕ ಪಟ್ಟಿಯವರು ಹೋಟೆಲುಗಳ ಯೋಜನೆ ನಡೆಸಿದ್ದಾರೆ.

ನಾಗಪೂರದ ಲಾಯದ ಕೌನ್ಸಿಲದಲ್ಲಿ ಶಾಲೆ ಕಾಲೇಜುಗಳ ವಿದ್ಯಾರ್ಥಿಗಳಿಗೆ ಗುರಿ ಹೊಡಿಯುವ ಮತ್ತು ಹೊಡೆಯುವ ವಿದ್ಯೆ ಕಲಿಸಬೇಕೆಂಬದಾಗಿ ಡಾಕ್ಟರ ಮುಂಜೆ ಇವರು ತಂದ ಠರಾವು ಪಾಸಾಯಿತು. ಜುಲೈದ ತನಕ ರಜೆಯಿದೆ. ಹಿಂದುಸ್ಥಾನ ಸರಕಾರದ ಉತ್ತರದ ನಿರೀಕ್ಷಣ ಮಾಡುತ್ತಿದ್ದೇವೆಂದು ಗೃಹ ಮಂತ್ರಿಯವರಾದ ಸರ ಮೋರೋಪಂತ ವಿನಂತಿ ಮಾಡಿಕೊಂಡರೂ ಇವರನ್ನು ಮನ್ನಿಸದೆ, ಠರಾವು ಪಾಸ ಮಾಡಿದರು.

ಧಾರವಾಡ —

ಸರಕಾರದವರು ಹೊಸ ಪದ್ಧತಿ ಪ್ರಕಾರ ಶ್ರೀ ವಿನಾಯಕರಾವ ಜೋಶಿ ಮಿ. ಫಕರುದ್ದೀನ ಸಾಹೇಬ, ಮಿ. ಕೇಂದ್ರೇಜಾ ಕಾಕಡೆಕರ, ಶ್ರೀ ಗಂಗಪ್ಪಾ ತಪ್ಪ ಮತ್ತು ಮಿ. ಸಾಂಬ್ರಾಣಿಯವರು ಸ್ಕೂಲಬೋರ್ಡಿನ ಮೆಂಬರರಾಗಿ ಆರಿಸಲ್ಪಟ್ಟರು. ಮ್ಯುನಿಸಿಪಾಲಿಟಿಯವರೂ ಸರಕಾರದವರೂ ತಂತಮ್ಮ ಪತಿಯಿಂದ ನಾಲ್ವರು ಮೆಂಬರರನ್ನು ನೇಮಿಸಲಿಕ್ಕಿದ್ದಾರೆ.

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ, ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಿಗೆಯು ಆರುಲಕ್ಷದ ಮೇಲುಂಟು. ಚೆಕ್ಕು, ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ಮಾಡಲ್ಪಡುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ಆರ್. ಎಮ್. ಜ್ಹೋನ್ ಎಂಡ ಸನ್ಸ್, ಹುಬ್ಬಳ್ಳಿ.

ಎಜಂಟ್ಸ ಫೋರ ಕಾರಬೋನಿಕ್ ಆಸಿಡ್ಡ ಗ್ಯಾಸ, ಮ್ಯಾನುಫ್ಯಾಕ್ಚರರ್ ಆಫ್ ಏರೇಟೆಡ ವಾಟರ್ಸ.

ತಾವು ಆರ್ಡರ ಬೇಗ ಕಳಿಸಿರಿ

ನಮ್ಮಲ್ಲಿ ಸಿಗುವ ಸಾಮಾನುಗಳ ವಿವರ.

ಫುಲ್‌ಗ್ಯಾಸ ಸಿಲೆಂಡರಗಳು ಇಂಗ್ಲೀಷ ಮತ್ತು ಜರ್ಮನ ಪೆಟೆಂಟ ಕಾಡ್ಸ್, ಎಮ. ಟಿ ಸೋಡಾ ವಾಟರ ಬಾಟಲಗಳು, ೫೦ ನೇ. ಸಾಯಿ

ದೀನ ಡೆಪ್ಪಿ ೧ ಪೌಂಡನವು. ಸೋಡಾವಾಟರ್ ಮಶಿನುಗಳು ಮತ್ತು ಎಲ್ಲ ... ರಲರಿನ ಬಾಟಲಿಗಳ ಎಸೆನ್ಸಗಳು, ಅಮೇರಿಕನ್ ಆಯಿಸ್ಕ್ರೀಮ ಸೋಡಾ, ಬನಾನಾ, ಕೋಲಾ ... ಲೆಮನ್ ನಂ. ೧ ಲೆಮನ್ ಜುಯಿಸ್ ಸೋಡಾ ನಂ. ೧ ಮೇಂಗೋ, ಆರೇಂಜ, ಫಾಯಿನಾಪಲ, ... ಮಿಲ್ಕ, ಕ್ವಿನಿನ್ ಟಾನಿಕ್, ರಾಜಬರಿ ನಂ. ೧ ಕೋಲಾ ನಂ. ೧ ಸ್ಟೋನ್ ಜಿಂಜರ್ ಬೀರ ನಂ. ೧, ರಬ್ಬರ್ ರಿಂಗ್ಸ್, ಬೆಸ್ ಇತರ ಮಶಿನರಿ ಪಾರ್ಟುಗಳು ನಮ್ಮಲ್ಲಿ ಸಿಗುತ್ತವೆ. ಮತ್ತು ಶುದ್ಧ ನೀಲಗಿರಿ ... ಯ ಎಲ್ಲ ತರದ ಬಾಟಲ್ಗಳು ಸಿಗುತ್ತವೆ. ವ್ಯಾಪಾರಸ್ಥರಿಗೆ ಒಳ್ಳೇ ಕಮೀಶನ್ ಕೊಡುತ್ತೇವೆ. ... ಕಬ್ಬಿಣದ ಮಿಲಿಟರಿ ಸಿಂಗಲ ಕಾಟ್ಸಗಳು ಸೋವಿ ದರದಿಂದ ಮಾರಲಿಕ್ಕೆ ಸಿಗುತ್ತವೆ.

ಅಡ್ರೆಸ್— R. M. John &Sons.
Mission Compound HUBLI

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

—o—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಚನ್ನೆರಡು ಆಣೆಯುಂತಿರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ

ನಿತ್ಯಪತ್ರಕ್ಕೆ

೧೨ ತಿಂಗಳಿಗೆ	೧೨—೮—೦	ರೂ
೬ „	೬—೦—೦	ರೂ
೩ „	೪—೦—೦	ರೂ
ವಾರಪತ್ರಕ್ಕೆ ೧ ವರ್ಷಕ್ಕೆ	೩—೧೨—೦	ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ, ಧಾರವಾಡ

ಜಾಹೀರಾತಿನ ದರಗಳು.

ಸಿಂಗಲ ಕಾಲಮಿನ ಹತ್ತು ಪಂಕ್ತಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಂಕ್ತಿಗೆ ಒಂದಾಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ಆಣೆ ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆ ಆಣೆ ದುಬ್ಬಳ ಕಾಲಮಿನ ಓಳಿಗಳಿಗೆ ಇನ್ನುಳಿದಂತಹ ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

LOKHANDE

Lasts A life time

Strongest Watches

ಬಕ್ಷೀಸು ಮತ್ತು ಅರ್ಧ ಬೆಲೆಗೆ ಮೋಹಪಟ್ಟು ಮೋಸ ಹೋಗಬೇಡಿರಿ.

ಜಿನಸು ಉತ್ತಮ ಮತ್ತು ನಂಬಿಗೆಯುಳ್ಳದ್ದು ನಮ್ಮ ಅಂಗಡಿಯಲ್ಲಿ ಫಾವರ ಲೂಬಾ, ವೆಸ್ಟಎಂಡ, ಮೆರಡಿಯನ, ಓಮೇಗಾ ಮತ್ತು ಸ್ವಿಸ ಜನರಲ ಕಂಪನಿ ಮತ್ತು ಬೇರೆ ಪ್ರಸಿದ್ಧ ಕಂಪನಿಗಳ ಗಡಿಯಾರಗಳು ಈಗೀಗ ಬಂದಿವೆ, ಇವು ನೋಡಲಿಕ್ಕೆ ಸುಂದರವಾಗಿರುವಲ್ಲದೆ ಗಟ್ಟಿ ಮತ್ತು ಸರಿಯಾಗಿ ಹೊತ್ತು ತೋರಿಸುವಂಥವುಗಳಾಗಿವೆ. ಐದು ರೂಪಾಯಿಯಿಂದ ಬೇಕಾದ ಬೆಲೆಯ ಗಡಿಯಾರಗಳು ಸಿಗುವವು. ಕೊಳ್ಳುವಾಗ ಪ್ರತಿಯೊಂದಕ್ಕೆ ಗ್ಯಾರಂಟಿ ಕೊಡುವೆವು. ಒಮ್ಮೆ ತರಿಸಿ ನೋಡುವಿರಷ್ಟೇ?

ಪ್ರೊಪ್ರಾಯಿಟರ, ದತ್ತುರಾವ ಲೋಖಂಡೆ
ವಾಚ ಎಂಡ ಕ್ಲಾಕ ಮರ್ಚಂಟ ಧಾರವಾಡ.

ದಿ. ಅಂಕಲಗಿ ಬ್ಯಾಂಕ ಲಿಮಿಟೇಡ್ ಧಾರವಾಡ.

—o—

೧೯೧೩ ಇಸ್ವಿಯ

ಕಂಪನಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ಚಾಲೂ ಖಾತೆ, ಠೇವು, ಸೆವ್ಹಿಂಗ್ಸದ ಡಿಪಾಜಿಟ, ಸಾಲ, ಪತ್ತಿ, ಹುಂಡಿ, ಮುಂತಾದ ಯಾವತ್ತು ವ್ಯವಹಾರಗಳು ನಡಿಯುವವು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡುವವರಿಂದ ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ ರಿಂದ ೧೦-೩೦. ಸಾಯಂಕಾಲ ೩ ರಿಂದ ೬ ರವರೆಗೆ ನಡಿಯುವದು.

K.B . Ankalagi
ಮ್ಯಾನೇಜಿಂಗ ಡಾಯರೆಕ್ಟರ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ನಿತ್ಯ ಪತ್ರ ಬೆಲೆ ಅರ್ಧಾಣೆ.

ಸಂಪಾದಕರು- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೬) ಧಾರವಾಡ ಬುಧವಾರ ತಾರೀಖು ೨೫ನೇ ಮಾರ್ಚ ೧೯೨೫ (ಸಂಚಿಕೆ ೬೯

ಬೇಸಿಗೆ ಪ್ರಾರಂಭವಾಯಿತು!

ದನಗಳ ಆಹಾರವಾದ ಕಣಿಕೆಯನ್ನು ಕಾದಿರಿ !!

ಕಿರ್ಲೋಸ್ಕರ ಕಣಿಕೆ ಯಂತ್ರವನ್ನು ಉಪಯೋಗಿಸಿರಿ !!!

ನಮ್ಮ ಕಾರ್ಖಾನೆಯಲ್ಲಿ ಎರಡು ನಮೂನೆಯ ಕಣಿಕೆ ಕೊರೆಯುವ ಯಂತ್ರಗಳು ತಯಾರಾಗುತ್ತವೆ. ಒಂದು ಕೈಯಂತ್ರ ಬೆಲೆ ೨೦ರೂ. ಇನ್ನೊಂದು ಗಾಲೀಯಂತ್ರ ಬೆಲೆ ೬೫ ರೂಪಾಯಿ ಸಣ್ಣ ಕಮತವುಳ್ಳವರು ಕೈ ಯಂತ್ರವನ್ನೂ, ದೊಡ್ಡ ಕಮತವುಳ್ಳವರು ಗಾಲೀ ಯಂತ್ರವನ್ನೂ ಉಪಯೋಗಿಸಬಹುದು. ಕಣಿಕೆಯು ೪ ಇಂಚುಗಳಿಂದ ಒಂದು ಇಂಚಿನ ವರೆಗೆ ಕೊರೆಯಲ್ಪಡುತ್ತದೆ.

ಸವಿಸ್ತರ ಸಂಗತಿಯ ಬಗ್ಗೆ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ } ಕಿರ್ಲೋಸ್ಕರವಾಡಿ.
ಜಿಲ್ಲಾ ಸಾತಾರಾ.

ಕೇವಲ ೨ ಆಣೆಯೊಳಗೇ ಆಶ್ಚರ್ಯಕಾರಕ ವ ರಾಮಬಾಣ ಉಪಾಯ

ಮೊಮೆಂಟ ಕ್ಯುಅರ

ತಲೆಶೂಲಿ, ಅರ್ಧ ತಲೆಶೂಲಿ, ಶೀತ, ಉಷ್ಣ ವ ನಿತ್ರಾಣ ವಗೈರೆಗಳಿಂದಾದ ಮಸ್ತಕಶೂಲಿಯು ಶೀಘ್ರದಿಂದ ನಿರ್ಮೂಲ ಮಾಡಲು "ಮೊಮೆಂಟ ಕ್ಯುಅರ" ನಿಗೆ ಸರಿಸಮಾನವಾದ ಔಷಧವು ಬೇರೆ ಇಲ್ಲ. ಹೆಚ್ಚು ಜನರು ಮಸ್ತಕಶೂಲೆಯನ್ನು ಸಹಿಸಲು ಆಗದೆ ಮಸ್ತಕಕ್ಕೆ ವಸ್ತ್ರಕಟ್ಟಿ ಎಣ್ಣೆ ವ ಆರ್ಕನ್ನು ಹಾಗಿಸುತ್ತಾರೆ. ಆದರೆ ನಿರಾಶೆಯಾದವರು ಮೋಮೆಂಟ ಕ್ಯುಅರದ ಪುಡಿಯನ್ನು ಬಿಸಿ ಚಹಾದೊಂದಿಗೆ ಅಥವಾ ಬಿಸಿ ನೀರಿನೊಂದಿಗೆ ಹೊಟ್ಟೆಯಲ್ಲಿ ತಕ್ಕೊಂಡಲ್ಲಿ ಒಂದೇ ಕ್ಷಣದಲ್ಲಿ ಮಸ್ತಕಶೂಲಿಯು ನಿಲ್ಲುವುದು. ಇದಕ್ಕೆ ಅನೇಕ ಶಿಫಾರಸ ಪತ್ರಗಳು ಉಂಟು.

೧ ಚೀಟಿಗೆ ೨ ಆಣೆ. ಸ್ಯಾಂಪಲ ಸಲುವಾಗಿ ೩ ಆಣೆ ಪೋಸ್ಟ ತಿಕೀಟುಗಳನ್ನು ಕಳಿಸಿದಲ್ಲಿ ಕಳಿಸುವೆವು.

ವಿಳಾಸ— ದಿ ಕರ್ನಾಟಕ ಮೆಡಿಕಲ ಸ್ಟೋರ್ಸ್, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ
ಸ್ಟೇಶನರೋಡ ಹುಬ್ಬಳ್ಳಿ.

ಜಾಹೀರ ನೋಟೀಸು

ಕೆಳಗೆ ಸಹೀ ಮಾಡುವ ಶೇಟ ನಾನಚಂದ ಜೋರಾಜಿ ಗಾಂಧಿ ಸಾಕೀನ ಹುಬ್ಬಳ್ಳಿ, ದೇಶ ಮಾರವಾಡ ಇವರು ಯಾವತ್ತು ಜನರಿಗೆ ಈ ನೋಟೀಸಿನಿಂದ ತಿಳಿಸುವದೇನಂದರೆ—

ಧಾರವಾಡ ಜಿಲ್ಲಾ ಹುಬ್ಬಳ್ಳಿ ಶಹರದಲ್ಲಿ ಜವಾನಮಲ್ಲ ನಾನಚಂದ ಈ ನಾಮದಿಂದ ನಮ್ಮ ಕಾಪಡ ದುಕಾನ ಇರುತ್ತದೆ. ಮತ್ತು ನಾನು ನಾನಚಂದನು ಸದರ ಅಂಗಡಿಯ ವಹಿವಾಟ ಮಾಡುತ್ತೇನೆ. ನಾನು ಗಣೇಶಮಲ್ಲನೆಂಬೊಬ್ಬನನ್ನು ದತ್ತಕ ಮಾಡಿಕೊಂಡಿರುತ್ತೇನೆ. ಆತನ ಮದುವೆ ಮಾಡಿ ಅಜಮಾಸ ಒಂದು ತಿಂಗಳಾಯಿತು. ಇಷ್ಟರಲ್ಲಿಯೇ ಈತನು ನನ್ನ ಮನೆಗೆ ಬರುವದನ್ನು ಬಿಟ್ಟು, ತನ್ನ ಮಾವನ ಮನೆಗೆ ಹೋಗಿ, ನನ್ನ ಆಸ್ತಿಯ ದುಡ್ಡಿನ ದುರುಪಯೋಗ ಮಾಡಲಿಕ್ಕೆ ಹತ್ತಿದ್ದಾನೆ. ಆತನಿಗೆ ಎಷ್ಟು ಸಾರೆ ಬುದ್ಧೀ ಹೇಳಿದರೂ, ಆತನು ಹಲೋ ರೀತಿಯಿಂದ ನಡೆಯದೆ, ನನ್ನ ಮನೆತನಕ್ಕೆ ಮತ್ತು ವ್ಯವಹಾರಕ್ಕೆ ಲುಕಸಾನು ಆಗುವಂಥ ಕೆಲಸ ಮಾಡಲಿಕ್ಕೆ ಹತ್ತಿರುತ್ತಾನೆ. ತನ್ನ ಹೆಂಡತಿಯ ವೈಗೈರೆ ದಾಗೀನೆಗಳನ್ನು ಸಹ ದುರ್ವ್ಯಯವನ್ನೆ ಮಾಡಹೊರಟಿದ್ದಾನೆ. ಅದ್ದರಿಂದ ಈ ಜಾಹೀರ ನೋಟೀಸು ಕೊಡುವ ಅಗತ್ಯ ಬಿತ್ತು. ನಮ್ಮ ಅಂಗಡಿಯ ವ್ಯವಹಾರವು ಬಹಳ ದೊಡ್ಡದಿದ್ದು ಈತನ ವರ್ತಣೂಕಿಯಿಂದ ಅದಕ್ಕೆ ಧಕ್ಕೆ ಬರುವ ಸಂಭವವದೆ ಕಾರಣ ನಮ್ಮ ಅಂಗಡಿಯ ನಾಮದಿಂದ ಆತನ ಕೂಡ ಯಾರೂ ಕೊಡ ತೆಗೆದುಕೊಳ್ಳುವ ವ್ಯವಹಾರ ಮಾಡಬಾರದು. ಆತನಿಗೆ ಸಾಲ ಕೊಡಬಾರದು. ಯಾವದೇ ತರದ ಕಾಗದ ಪತ್ರ ಮಾಡಿಸಿಕೊಳ್ಳಬಾರದು. ಯಾರಾದರೂ ಈ ನೋಟೀಸಿನ ವಿರುದ್ಧ ನಡೆದರೆ ಅದು ಸ್ವೈರಾಯು ನಶೀರ ಆಗುವದು. ಮತ್ತು ತನ್ನ ಮೇಲೆ ಮತ್ತು ನಮ್ಮ ಸ್ಥಾವರ ಜಂಗಮ ಆಸ್ತಿಯ ಮೇಲೆ ಅವರ ಇಲಾಜ ನಡಿಯಲಾರದು. ಅಂತಾ ಜಾಹೀರ ಮಾಡಿದ ನೋಟೀಸು ತಾ॥ ೧೪ ಮಾರ್ಚ ೧೯೨೫

ಸಹಿ ಮಾರವಾಡಿ ನಾನಚಂದ ಜೋರಾಜಿ ಗಾಂಧಿ ಹುಬ್ಬಳ್ಳಿ.

ವಿಜಯ.

ಧಾರವಾಡ ತಾ- ೨೫-೩-೨೫ ನೇ ಇಸ್ವಿ

ಉಪ್ಪಿನ ಕರವು ಇದ್ದಕ್ಕಿದ್ದಂತಾಯಿತು.

—೦—

ಉಪ್ಪಿನ ಕರವು ಅಸೆಂಬ್ಲಿಯಿಂದ ಕೌನ್ಸಿಲ ಆಫ ಸ್ಟೇಟಕ್ಕೆ ಹೋಗಿ, ಅಲ್ಲಿ ಪಾಸಾದ ಸಂಗತಿಯನ್ನು ಈ ಮೊದಲು ಬರೆದಿರುತ್ತೇನೆ. ಬುದ್ಧಿವಂತರಾದ ಹಿರಿಯರು ಪಾಸ ಮಾಡಿದ ಕೂಡಲೆ, ಸರಕಾರದವರು ಇದನ್ನು ಪುನಃ ಅಸೆಂಬ್ಲಿಯ ಮುಂದಿಟ್ಟರು ಆಗ ಸರ ಬ್ಲೆಕೆಟ ಸಾಹೇಬರು ಮೆಂಬರರನ್ನು ಪೇಚಿನಲ್ಲಿ ತಂದರು. ಕೌನ್ಸಿಲ ಆಫ ಸ್ಟೇಟದ ಮೆಂಬರರಿಗೆ ಹಾಕಿದ ಪೇಚೇ ಆಗಿತ್ತು. ನೀವು ಉಪ್ಪಿನ ಕರವನ್ನು ನಾಲ್ಕಾಣೆಯಷ್ಟು ಕಡಿಮೆ ಮಾಡಿದರೆ- ಒಂದೂ ಕಾಲು ಕೋಟಿ ರೂಪಾಯಿಯ ನಷ್ಟವಾಗುತ್ತದೆ. ಈ ನಷ್ಟಭರ್ತಿಗಾಗಿ ಈಗ ಪ್ರತಿಯೊಂದು ಇಲಾಖೆಗೆ ಕರ್ಣಾಂಶ ಸಂಭೂತರಾಗಿ ಹಂಚಬೇಕೆಂಬ ದ್ರವ್ಯವನ್ನು ನಿಲ್ಲಿಸಬೇಕಾಗುವದು ಎಂಬದೇ ಈ ಪೇಚು. ಬುದ್ಧಿವಂತರಾದ ಹಿರಿಯರ ಬಾಯಿಗೆ ದುದ್ದಿನ ನೀರು ಬಿಟ್ಟದ್ದು ಸ್ವಾಭಾವಿಕವು. ಆದರೆ ಅಸೆಂಬ್ಲಿಯ ಮೆಂಬರರು ಸಾಹೇಬರ ಹೆದರಿಸುವಿಕೆಗೆ ಭಯಪಟ್ಟದ್ದು ಮಾತ್ರ ಆಶ್ಚರ್ಯವು. ಈ ಠರಾವು ಮೊದಲನೇ ಸಾರೆ ಪಾಸಾಗಬೇಕೆಂದು ಮತ ಕೊಟ್ಟವರಲ್ಲಿ ಅನೇಕರು, ಸರ ಬ್ಲೆಕೆಟ ಸಾಹೇಬರ ಕೋರಿಕೆ ಬೇಡಿಕೆಯಂತೆ ಮತ ಕೊಟ್ಟರು. ಸ್ವರಾಜ್ಯ ಪಕ್ಷೀಯರು ಮಾತ್ರ ಯಾವ ಬೆದರಿಕೆಗೂ ಹೆದರಲಿಲ್ಲ ಇದರಿಂದ ಲಾರ್ಡ ರೀಡಿಂಗ ಸಾಹೇಬರು ಮಾತ್ರ ಕುತ್ತು ದಾಟಿದರು. ಸಾಹೇಬರು ಸರ್ಟಿಫಿಕೇಟು ಕೊಟ್ಟು ಹಿಂದಿನ ಸಾರೆಯಂತೆ ಕರವನ್ನು ಸ್ಥಿರಪಡಿಸಿದ್ದರೆ- ಇವರ ವಿರುದ್ಧ ಪುನಃ ದೇಶದ ತುಂಬ ಚಳವಳಿಯು ಏಳುತ್ತಿತ್ತು. ಸಾಹೇಬರು ಸ್ವತಂತ್ರ ಪಕ್ಷೀಯರ ವಿಚಾರದ ಮೇರೆಗೆ ವಿಲಾಯತಿಗೆ ಹೋಗುವದು ಸ್ವಕೀಯ ದೃಷ್ಟಿಯಿಂದ ಹಿಂದುಸ್ಥಾನದ ಪ್ರತಿನಿಧಿಯಾಗಿರುವ ಮೂಲಕ, ಅವರಿಗೆ ಪ್ರಯಾಣದ ವೇಳೆಯಲ್ಲಿ ವಿಘ್ನ ತರಬಾರದೆಂದು ಇವರು ತಮ್ಮ ಮಾತು ತಾವೇ ತಿರುಗಿಸಿರಬಹುದು. ನಿನ್ನೆ ಒಂದು ತರದ ಇಂಗ್ಲೆಂಡು ತರಹವಾಗಿ ವರ್ತಿಸುವದರಿಂದ ಮೆಂಬರರಲ್ಲಿ ಸ್ವಾಭಿಮಾನ ಇಲ್ಲೆಂದು ಸ್ಪಷ್ಟವಾಗಿ ತೋರುತ್ತದೆ. ವಾಸ್ತವಿಕವಾಗಿ ನೋಡಿದರೆ- ಆದಾಯ ಪ್ರಕಾರ ವೆಚ್ಚ ಮಾಡುವದಕ್ಕೆ ಮೊದಲು ಮಂಜೂರಿ ಕೇಳಿಕೊಳ್ಳತಕ್ಕದ್ದು ಪ್ರಧಾನರ ಧರ್ಮವು. ಮಂತ್ರಿಯು ಎರಡೂ ಅಧಿಕಾರಗಳನ್ನು ತಮ್ಮ ಕಯ್ಯಲ್ಲಿಟ್ಟುಕೊಂಡು, ಅವಕ್ಕೆ ಮಂಜೂರಿ ಕೊಡಿರೆಂದು ಕೇಳುವದೇ ಅಕ್ರಮವು ಅಸದೃವು ಮೂಲದಲ್ಲಿಯೇ ಇರುವ ಅಕ್ರಮವನ್ನು ತೆಗೆದು ಹಾಕಲಿಕ್ಕೆ ಪ್ರಯತ್ನಿಸದೆ, ಹೆದರಿಸಿದ ಕೂಡಲೆ, ತಥಾಸ್ತು ಎನ್ನುವದು ಅಸದೃವೆಂದು ಯಾರು ತಾನೆ ಅನ್ನಬಹುದು.

—

ಖಾದಿಯ ರಾಜಧಾನಿ, ಖಾದಿಯ ಅರಸು

—೦—

ಮದ್ರಾಸ ಇಲಾಖೆಯಲ್ಲಿ ಜಲಾರಪೇಟ ಸ್ಟೇಶನದ ಹತ್ತರಿರುವ ತಿರಪತ್ತೂರ ಪಟ್ಟಣವು ಅರಳೆಯ ಮತ್ತು ಬಟ್ಟೆಯ ದೊಡ್ಡ ವ್ಯಾಪಾರದ ಸ್ಥಳವಾಗಿದೆ. ಇಲ್ಲಿ ಲಕ್ಷಗಟ್ಟಲೆ ರೂಪಾಯಿಯ ಖಾದಿಯು ಹುಟ್ಟುತ್ತದೆ ಬೇರೆ ವ್ಯಾಪಾರದ ಪೇಟೆ ಮಂದಿಯನ್ನು ಹೇಳುವಂತೆ ಖಾದೀ ವ್ಯಾಪಾರದ ವರಿಕತವನ್ನು ಪೇಟೆಯ ನಿತ್ಯ ಧಾರಣೆಯಲ್ಲಿ ಹೇಳುವರು. ಖಾದಿಯ ಹುಟ್ಟುವಳಿಯಾದ ಇಂಥ ಮಹತ್ವದ ಪಟ್ಟಣಕ್ಕೆ ಮಹಾತ್ಮರು ದಯಮಾಡಿಸಿದರು ಮ್ಯುನಿಸಿಪಾಲಿಟಿಯು ಮಹಾತ್ಮರಿಗೆ ಮಾನಪತ್ರ ಕೊಟ್ಟು, ಮಹಾತ್ಮರು ಖಾದಿಯ ರಾಜಾಧಿರಾಜರಾಗಿದ್ದಾರೆಂದು ಅವರ ಪ್ರಶಂಸೆ ಮಾಡಿತು ತಾವು ಖಾದಿಯ ಅರಸರಾಗದಿದ್ದರೂ, ತಿರಪತ್ತೂರು ಖಾದಿಯ ರಾಜಧಾನಿಯಾಗಿರುತ್ತದೆಂದು ಮಹಾತ್ಮರು ತಮ್ಮ ಉತ್ತರದಲ್ಲಿ ಅದನ್ನು ಹೊಗಳಿದರು.

—

ದಬ್ಬಾಳಿಕೆಯ ಕಾಯಿದೆಗೆ ಜಾಲ ಚಿಗಿಯಿತು.

—೦—

ಹಿಂದುಸ್ಥಾನ ಸರಕಾರದವರು ಈ ಮೊದಲು ಪ್ರಸಿದ್ಧ ಮಾಡಿದ ಮೇರೆಗೆ ಬಾದಶಹರಿಂದ ಈ ಕಾಯಿದೆಗೆ ಮಂಜೂರಿ ತರಿಸಿಕೊಂಡು, ಅದನ್ನು ಅಸೆಂಬ್ಲಿಯಲ್ಲಿ ತರುವ ಸೂಚನೆ ಕೊಟ್ಟಿದ್ದಾರೆ. ಇದರಲ್ಲಿ ಕಂಡು ಬಂದ ಮಹತ್ವದ ಸಂಗತಿಗಳು.

೧ ದಬ್ಬಾಳಿಕೆಯ ವಿಚಾರಣೆಯಲ್ಲಿ ಶಿಕ್ಷೆ ಹೊಂದಿದವರು ಹಾಯಕೋರ್ಟಿಗೆ ಅಪೀಲು ಮಾಡುವದು.

೨ ವಿಚಾರಣೆಯ ಕಮಿಟಿಯವರು ಯಾವನೊಬ್ಬನಿಗೆ ಗಲ್ಲಿನ ಶಿಕ್ಷೆ ವಿಧಿಸಿದರೆ- ಅದಕ್ಕೆ ಹಾಯಕೋರ್ಟಿನಿಂದ ಮಂಜೂರಿ ಪಡಕೊಳ್ಳುವದು.

೩ ಆರೋಪಿಗಳನ್ನು ಹಿಂದೇ ಇರಾದೆಯಲ್ಲಿ ಇಡದೆ, ಸರಕಾರಕ್ಕೆ ಯೋಗ್ಯ ಕಂಡಂತೆ ಬೇರೆ ಜೇಲಿ ಇಲಾಖೆಗಳ ತುರಂಗದಲ್ಲಿಡುವದು.

ಮೇಲಿನ ಕಲಮುಗಳು ದಬ್ಬಾಳಿಕೆಯ ಮೂಲ ಕಾಯಿದೆಯ ಜಾಲದಂತಿರುತ್ತವೆ ಮೂಲ ಕಾಯಿದೆಯನ್ನೇ ರದ್ದು ಮಾಡಿದ ಠರಾವು ಕೌನ್ಸಿಲದಲ್ಲಿ ಪಾಸಾಗಿರುತ್ತದೆ. ಸರಕಾರವು ಸರ್ಟಿಫಿಕೇಟು ಕೊಟ್ಟು, ಅದನ್ನು ಮಂಜೂರ ಮಾಡಿ ಅಸೆಂಬ್ಲಿಯಲ್ಲಿ ಈ ಜಾಲ ಚಿಗಿಸಬಹುದಾಗಿದೆ.

—

ಮುಂದೆ ಬರೆಯುವದು, ಹಿಂದೆ ಅಳಿಸುವದು.

—೦—

ಕೆಲಿಫೋರ್ನಿಯಾದ ದಿವಾನಗಿರಿಯಲ್ಲಿ ಹಿಂದುಸ್ಥಾನದ ಸ್ಟೇಟ ಸೆಕ್ರೆಟರಿಯಾಗಿದ್ದ ಲಾರ್ಡ ಒಲಿವ್ಹರ ಸಾಹೇಬರು ಮ್ಯಾಂಚೆಸ್ಟರ ಗಾರ್ಡಿಯನ ಪತ್ರದಲ್ಲಿ ಸ್ವಾನುಭವದ ಲೇಖಗಳನ್ನು ಬರೆಯುತ್ತಿದ್ದಾರೆ. “ಸ್ವರಾಜ್ಯ ಪಕ್ಷೀಯರಿಗೆ ಕೌನ್ಸಿಲಗಳು ಫಾಸಲ್ ಆಗಿರುತ್ತವೆಂದು ಕಂಡು ಬಂದರೆ, ಅವರು ಮಂತ್ರಿಗಳ ಸಂಬಳವನ್ನು ಮಂಜೂರ ಮಾಡುವದಿಲ್ಲೆನ್ನುವದು ಸಂಪೂರ್ಣ ನ್ಯಾಯವಾಗಿರುತ್ತದೆಂದು” ಅಂದು, ಮುಂದೆ ಇವರು ಮಂತ್ರಿಯಾಗಿ ಸುಧಾರಣೆಗಳನ್ನು ಒರೆಗೆ ಹಚ್ಚಿ ನೋಡಬೇಕಾಗಿತ್ತೆಂದು ಬರೆದಿರುತ್ತಾರೆ ಸ್ವರಾಜ್ಯ ಪಕ್ಷೀಯರೆಂದರೆ, ಮಹಾಳರು ಸಹ ದಿವಾನಗಿರಿಯಲ್ಲಿ ಅರ್ಥವಿಲ್ಲೆಂದು ರಾಜೀನಾಮೆ ಕೊಟ್ಟು, ಗವ್ಹರ್ನರರ ಹಿಲಗಳಲ್ಲಿ ನಡೆಯುವ ಕುಟಿಲತನವನ್ನು ಸ್ಪಷ್ಟಿಗೆ ಹಾಕಿದ್ದಾರೆ. ಈ ಸಂಗತಿಯನ್ನು ತಿಳಿದೇ ಲಾರ್ಡ ಒಲಿವ್ಹರ ಸಾಹೇಬರು ನಿಮಿತ್ತಾದ ಸ್ವರಾಜ್ಯ ಕಮಿಟಿ ನೇಮಿಸಿದರು. ನಿಜ ವಿಚಾರವು ಹೀಗಿರಲು ಸಾಹೇಬರು ಮೊದಲು ಒಂದು ಮಾತು ಒಪ್ಪಿ, ಕೂಡಲೆ ಅದರ ವಿರುದ್ಧ ಪ್ರಮೇಯ ಹೇಳುವದೆಂದರೆ ಮುಂದೆ ಬರೆಯುವದು, ಹಿಂದೆ ಅಳಿಸುವದು ಎಂಬಂತಾಗುತ್ತದೆ.

ಲಾರ್ಡ ಲಿಟನಸಾಹೇಬರು ದಿಲ್ಲಿಗೆ ಬಂದು, ಲಾರ್ಡ ರೀಡಿಂಗ ಸಾಹೇಬರ ಕೂಡ ಆಕ್ಟಿಂಗ ಕೆಲಸದ ವಿಧ್ಯಮಾನಗಳನ್ನು ತಿಳಕೊಂಡು, ಮರಳಿ ಕಲಕತ್ತೆಗೆ ಹೋದರು. ಗವ್ಹರ್ನರ ಜನರಲರಾದಬಳಿಕ ಇವರು ದಿಲ್ಲಿಗಿರಿಗೆ ಬರಬೇಕ್ಕಾಗಿದ್ದಾರೆ.

—

ಕಾಂಗ್ರೆಸದ ನಿಯಮ ಪ್ರಕಾರ ಪ್ರತಿ ತಿಂಗಳಿಗೆ ಕನಿಷ್ಠ ಎರಡು ಸಾವಿರ ಯಾರ್ಡ ನೂಲು ಕೊಡುವಂಥ ಮೆಂಬರರು ಆಂಧ್ರ ದೇಶದಲ್ಲಿ ೧-೦೦ ಜನರಿದ್ದಾರೆ

—

ಕಾಬೂಲದ ವಿದ್ಯಾರ್ಥಿಗೆ ಕಠಿಣ ಶಿಕ್ಷೆ.

—o—

ಕಾಬೂಲದ ಒಬ್ಬ ವಿದ್ಯಾರ್ಥಿಯಾದ ಮಹಮದ ಅಸ್ಲಾಮನೆಂಬವನು ವಿದ್ಯಾಭ್ಯಾಸಕ್ಕಾಗಿ ಬರ್ಲಿನಕ್ಕೆ ಹೋಗಿದ್ದನು. ಈತನು ಮರಳಿ ಬರುವಾಗ ಎರಡು ಟ್ರಂಕು ತುಂಬ ರಿವ್ಹಾಲ್ವರ ಮತ್ತು ಕಾಡತೂಸುಗಳನ್ನು ತಂದನು. ಮುಂಬಯಿಯಲ್ಲಿಳಿದ ಕೂಡಲೆ, [illegible] ಟ್ರಂಕಿನ [illegible] ಸರಕಾರದ ಮಹತ್ವದ ಕಾಗದ ಪತ್ರಗಳಿವೆ ಬೀಗದ ಕೈ ತನ್ನ ಹತ್ತರ ಇಲ್ಲೆಂದು ಹೇಳಿ, ಟ್ರಂಕುಗಳನ್ನು ಅಲ್ಲಿಯೇ ಬಿಟ್ಟು, ಕಾಬೂಲದ ವಕಾಲತಿಗೆ ಹೋದನು. ಸಂಶಯದಿಂದ ಟ್ರಂಕು ಒಡೆದು ನೋಡಲು, ರಿವ್ಹಾಲ್ವರ ಮತ್ತು ಕಾಡತೂಸುಗಳು ಹೊರಟವು. ಕೂಡಲೆ ಈತನನ್ನು ಹಿಡಿದು ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದರು. ಅವರು ಈತನಿಗೆ ಒಂಭತ್ತು ತಿಂಗಳ ಸಶ್ರಮದ ಶಿಕ್ಷೆ ವಿಧಿಸಿದರು.

ನಾಲ್ಕು ಬಿಳೀ ಆನೆಗಳ ಕಥೆ.

—o—

ಸಿಯಾಮದ ಅರಸನ ಹತ್ತರ ಒಂದು ಬಿಳೀ ಆನೆ ಇತ್ತೆಂದು ಒಂದು ಕಥೆ. ಲಾರ್ಡ ರೆಟಿನ ಸಾಹೇಬರು ನಾಲ್ಕು ಇಂಥ ಆನೆಗಳನ್ನು ಕಟ್ಟಬೇಕೆಂದು ಮಾಡಿದ್ದಾರೆ. ಇವರು ಇಬ್ಬರು ಮಂತ್ರಿಗಳನ್ನು ನೇಮಿಸಿಕೊಂಡಿದ್ದಾರಷ್ಟೇ; ಸಚಿವನ್ನೊಯಿಂದ ರಾಜ್ಯಕಾರಭಾರ ಸುರಳಿತ ಸಾಗಲಾರದು. ಇನ್ನಿಬ್ಬರನ್ನು ನೇಮಿಸಿಕೊಳ್ಳಿರೆಂದು ಕೌನ್ಸಿಲದ ಮೆಂಬರರೇ ಲಾರ್ಡ ರಿಟಿನ ಸಾಹೇಬರ ಸನ್ನಿಧಿಯಲ್ಲಿ ಅರಿಕೆ ಮಾಡಿಕೊಳ್ಳಲು ಹೋಗಿದ್ದರು. ಮೆಂಬರರು ಹೇಳಿಕೊಂಡ ಕೂಡಲೆ, ಸಾಹೇಬರು ಸಂತೋಷದಿಂದ ತಥಾಸ್ತು ಎಂದರು. ನಾಲ್ವರು ಮಂತ್ರಿಗಳಿಂದ ಸ್ವರಾಜ್ಯ ಪಕ್ಷದ ವಿರುದ್ಧ ಬಹುಮತಾಗಿ ನೋಟುಗಳು ದೊರೆಯಬಹುದು. ಆದರೆ ಇವರ ಸಂಬಳದ ಭಾರವು ಪ್ರಜರ ಮೇಲೆ ಅನ್ಯಾಯವಾಗಿ ಬೀಳುತ್ತದಲ್ಲ? ಪ್ರಜರಿಗೆ ಬಿಳೀ ಆನೆ ಕಟ್ಟಿರೆಂದು ದಂಡ ಮಾಡಿದಂತಾಗುವದಿಲ್ಲವೇ?

ಮುಂಬಯಿಯಲ್ಲಿ ಜಾವಳಾ ಸಾಹೇಬರ ಕೊಲೆ ನಂತರ, ಕೆಲವರು ಮೋಟಾರದಲ್ಲಿ ಕುಳಿತು ಪಲಾಯನ ಮಾಡಿದವಷ್ಟೇ; ಈ ಮೋಟಾರನ್ನು ಹುಡುಕಿಕೊಟ್ಟವರಿಗೆ ಎರಡು ಸಾವಿರ ರೂಪಾಯಿ ಇನಾಮು ಕೊಡುವಂತೆ ಇಂದೂರ ದರಬಾರಿನವರು ಜಾಹೀರ [illegible] ಪ್ರಸಿದ್ಧ ಮಾಡಿದ್ದಾರೆ.

ಕನ್ನಡ ಮುಲ್ಕೀ ಪರೀಕ್ಷೆಯ ಅರ್ಜಿಗಳ ಸ್ವೀಕಾರದ ದೊಡ್ಡ ಅನ್ಯಾಯವು.

—o—

(ಬರೆದು ಬಂದದ್ದು)

ಪ್ರತಿ ಫಾಲ್ಗುನ ಪರೀಕ್ಷೆಯ ಉಮೇದವಾರರಲ್ಲಿ ಅನೇಕರು ತಮ್ಮ ಅರ್ಜಿಗಳು ತಪ್ಪದೇ ಮುಟ್ಟಬೇಕೆಂಬ ವಿಶೇಷ ಕಾಳಜಿಯಿಂದ ರಜಿಸ್ಟರ ಮಾಡಿ ಕಳಿಸುತ್ತಿರುವ ಪ್ರಘಾತವಿರುತ್ತದೆ. ರಜಿಸ್ಟರಗಳ ಬಿಲೆವರಿಯು ಧಾರವಾಡದಲ್ಲಿ ಮರುದಿವಸವಾಗುತ್ತಿರುವ ಮೂಲಕವಾಗಿಯೂ ಸೂಟಿಯ ಮೂಲಕವಾಗಿಯೂ ರಜಿಸ್ಟರಗಳು ಸಾದಾಲಕೋಟಿಗಳಿಗಿಂತ ತಡವಾಗಿ ಮುಟ್ಟುವ ಸಂಭವವಿರುತ್ತದೆ. ಈ ವರ್ಷ ಇವೆರಡೂ ಕಾರಣಗಳು ಉಪಸ್ಥಿತವಾಗಿ ಆಯತನೇಳಿಗೆ ಕಳಿಸಲ್ಪಟ್ಟ ಎಷ್ಟೋ ಅರ್ಜಿಗಳು ತಡವಾಗಿ ಮುಟ್ಟಿ ಬಹಳ ಹುಡುಗರ ನಿರಾಶೆಯಾಗಿರುವದೆಂದು ಕೇಳುತ್ತೇನೆ.

ತಾ. ೨೪ನೇ ಫೆಬ್ರುವರಿ ದಿವಸ ಧಾರವಾಡ ಪೋಸ್ಟ ಆಫೀಸಕ್ಕೆ ದಾಖಲಾಗಿದ್ದ ರಜಿಸ್ಟರ ಲಕೋಟಗಳ ಬಿಲೆವರಿಯು ಅವತ್ತಿನ ದಿವಸವಾಗದೆ ಇದ್ದರೂ ೧ನೇ ಮಾರ್ಚ ದಿವಸವಾದರೂ ಆಗಬೇಕಾಗಿತ್ತು. ಆದರೆ ಅಂದು ರವಿವಾರ ಇರುವ ಮೂಲಕ ೨ ನೇ ತಾರೀಖಿನ ದಿವಸ ಮುಂಜಾನೆ ಆಗಿರುತ್ತದೆ. ರವಿವಾರ ದಿವಸ ರಾತ್ರಿ ವರೆಗೆ ಬಂದ ಅರ್ಜಿಗಳನ್ನು ಕೂಡ ಹಿಡಿದಿರುವರೆಂದು ಕೇಳುತ್ತೇನೆ. ಅಂದ ಮೇಲೆ ರಜಿಸ್ಟರಗಳಿಗೆ ಬಂದ ಸೂಟಿಯ ಆತಂಕವನ್ನು ಲಕ್ಷ್ಯಕ್ಕೆ ತಂದು ಅರ್ಧ ದಿವಸದ ಮಾಫಿಯನ್ನು ಕೊಟ್ಟು ಸೋಮವಾರ ದಿವಸ ಮುಂಜಾನೆ ಡಿಲಿವರಿಯಾದವುಗಳನ್ನು ಯಾಕೆ ಸ್ವೀಕಾರ ಮಾಡಬಾರದು? ಅವು ರವಿವಾರ ದಿವಸ ಮುಟ್ಟಿದ ಎಷ್ಟೋ ಸಾದಾ ಲಕೋಟಗಳಿಗಿಂತ ಮೊದಲೇ ಧಾರವಾಡದಲ್ಲಿ ಬಂದು ಕೂತಿದ್ದು ಅವುಗಳಿಗಿದ್ದ ಎರಡೂ ತಾರೀಖಿನ ಡಿಲಿವರಿಯ ಆತಂಕವನ್ನು ಲಕ್ಷಿಸಿ ಅವುಗಳಿಗೆ ಅರ್ಧ ದಿವಸದ ಗ್ರೇಸ ಕೊಡುವದು ಸರ್ವತೋಪರಿ ನ್ಯಾಯವಾಗಿರುತ್ತದೆ. ಆದ್ದರಿಂದ ಮೆ|| ಎ|| ಇ|| ಸಾಹೇಬರವರೂ ಮೆ. ಪ್ರಸಿಡೆಂಟ ಸಾಹೇಬರವರೂ ಮುದ್ದತಿನಲ್ಲಿ ಧಾರವಾಡಕ್ಕೆ ದಾಖಲಾಗಿದ್ದ ರಜಿಸ್ಟರಗಳನ್ನು ಸ್ವೀಕರಿಸಿ ಬಡವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಕೂಡುವ ಪರವಾನಿಗೆಯನ್ನು ದಯಪಾಲಿಸುವರೆಂದು ಹಾರೈಸುತ್ತೇನೆ.

ಮೊದಲು ಪರೀಕ್ಷೆಯು ನವ್ಹಂಬರದಲ್ಲಿ ಜರುಗುತ್ತಿದ್ದಾಗ ಅರ್ಜಿಗಳನ್ನು ಆಗಸ್ಟ ೧ ನೇ ತಾರೀಖಿಗೆ ಮುಟ್ಟುವಂತೆ ಕಳಿಸುವ ನೇಮವಿತ್ತು. ಆಗ ಜುಲೈ ತಿಂಗಳಲ್ಲಿ ಮಾಸ್ತರ ಜನರಿಗೆ ಹೆಚ್ಚಿನ ಕೆಲಸಗಳೇನೂ ಇರುತ್ತಿದ್ದಿಲ್ಲ. ಈಗ ಫೆಬ್ರುವರಿ ತಿಂಗಳಲ್ಲಿ ಮಾಸ್ತರ ಜನರಿಗೆ ಶಾಲೆಯ ಪರೀಕ್ಷೆ ತೆಗೆದುಕೊಳ್ಳುವದು ಇಮಾರತಿನ ರಿಪೋರ್ಟ ಮಾಡಿಸುವದು [illegible] ಮೊದಲಾದವುಗಳನ್ನು ತಯಾರಿಸುವದು ಮುಂ। ಕೆಲಸಗಳು ತೊಡಗಿರುತ್ತವೆ. ಮೇಲಾಗಿ ಫೆಬ್ರುವರಿ ತಿಂಗಳವು ಜುಲೈಗಿಂತ ೩ ದಿವಸ ಮುಂಚೆಯಾಗಿಯೇ ಮುಗಿಯುತ್ತದೆ. ಆದ್ದರಿಂದ ಮುಂದಿನ ವರ್ಷದಿಂದ ಅರ್ಜಿ ಹಿಡಿಯುವ ಮುದ್ದತನ್ನು ೨-೩ ದಿವಸ ಹೆಚ್ಚಿಗೆ ಬೆಳಿಸುವ ತಜವೀಜ ಮಾಡುವದು ಯೋಗ್ಯವೆಂದು ತೋರುತ್ತದೆ. ಮತ್ತು ಈ ವರ್ಷದ ರಜಿಸ್ಟರಗಳ ಅಲ್ಪಾವಧಿಯ ವಿಲಂಬವನ್ನು ಮೇಲಿನ ಸಂಗತಿಗಳ ದೃಷ್ಟಿಯಿಂದ ಕ್ಷಮಿಸುವರೆಂತಲೂ ಪುನಃ ಆಶಿಸುತ್ತೇನೆ.

ವಿವಿಧ ವರ್ತಮಾನಗಳು.

—o—

ಮದ್ರಾಸದಲ್ಲಿ ಒಬ್ಬ ಪ್ರೆಂಚ ಇಂಡಿಯನ ರನು ಈ ದೇಶದ ಒಬ್ಬ ಕೂಲಿಯವನನ್ನು ಕೊಂದನು. ಈತನಿಗೆ ಒಂದೇ ವರ್ಷ ಶಿಕ್ಷೆಯಾಯಿತು. ಈತನು ಆರು ತಿಂಗಳ ಕೈದು ಅನುಭವಿಸಿದ ಕೂಡಲೆ, ಸರಕಾರದವರು ಈತನನ್ನು ಬಂಧಮುಕ್ತ ಮಾಡಿದರು. ಕೃತಕರ್ಮದ ಬಗ್ಗೆ ಈತನು ಪಶ್ಚಾತ್ತಾಪ ಪಟ್ಟನೆಂದು ಸರಕಾರದವರು ಈತನ ಮೇಲೆ ಈ ಪ್ರಕಾರ ದಯಮಾಡಿದ್ದಾರೆ!!

ಕರಾಚಿಯ ಮ್ಯುನಿಸಿಪಾಲಿಟಿಯವರು ಆಯುರ್ವೇದ ಮತ್ತು ಯುನಾನಿ ಆಸ್ಪತ್ರಿಗಳನ್ನು ಸ್ಥಾಪಿಸಬೇಕೆಂಬ ಠರಾವು ಮಾಡಿದ್ದಾರೆ.

ಲಾಲಾ ಲಜಪತರಾಯರೂ, ಪಂಡಿತ ಮಾಲವಿಯಾಯವರೂ ಸೇರಿ, ದಿಲ್ಲಿಯಲ್ಲಿ ದಿನಾಲು ಹೊರಡುವ ಹಿಂದುಸ್ಥಾನ ಟಾಯಮ್ಸನೆಂಬ ಪತ್ರವನ್ನು ಕೊಂಡರು.

ಸರಕಾರದವರು ಗಿರಣಿಯ ಮೇಲಿನ ಸುಂಕ ತೆಗೆದರೆ ಗಿರಣಿಯ ಅರಿವೆಯು ಅಗ್ಗವಾಗಿ, ಮೊದಲೇ ಹುಟ್ಟಿಯಾಗಿರುವ ಖಾದಿಯ ವ್ಯಾಪಾರಕ್ಕೆ ದೊಡ್ಡ ಧಕ್ಕೆ ಬಡೆಯುವದೆಂದು ಆಂಧ್ರದೇಶದ ಖಾದಿಯ ವ್ಯಾಪಾರಸ್ಥರು ಅನ್ನಲಾರಂಭಿಸಿದ್ದಾರೆ.

ಧಾರವಾಡ—

ಈ ವಾರದಲ್ಲೆಲ್ಲ ದಿನಾಲು ಮೋಡ ಹಾಕುತ್ತದೆ. ನೊಪ್ಪಿನ ದಿವಸ ಮುಬ್ಬಿನಲ್ಲಿ ದೊಡ್ಡ ಮಳೆಯಾಗಿ ಆಣೀಕಲ್ಲುಗಳು ಬಿದ್ದವು.

ನಾಳಿನ ರಜೆ—

ಇವತ್ತಿನ ದಿವಸ ಯುಗಾದಿಯ ರಜೆಯಿಂದ ಮುದ್ರಾಲಯಕ್ಕೆ ರಜೆ ಇರುವದರಿಂದ ನಾಳಿನ ಸಂಚಿಕೆ ವಿಜಯವು ಪ್ರಕಟಿಸಲ್ಪಡಲಾರದು.

ಮಂಗಳವಾರ ಪೇಟಿ, ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ

ಠೇವಣಿಗೆಯು ಆರುಲಕ್ಷದ ಮೇಲುಂಟು. ಚೆಕ್ಕು, ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ನಡೆಯ್ಲುವವು. ಕಾಯಿಮ ಮತ್ತು ಮುದತ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು

ಮಧ್ವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ಆರ್. ಎಮ್. ಜ್ಹೋನ್ ಎಂಡ ಸನ್ಸ್, ಹುಬ್ಬಳ್ಳಿ.

ಏಜಂಟ್ಸ್ ಫಾರ ಕಾರಬೋನಿಕ್ ಅಸಿಡ್ ಗ್ಯಾಸ, ಮ್ಯಾನುಫ್ಯಾಕ್ಚರರ್ ಆಫ್ ಏರೆಟೆಡ ವಾಟರ್ಸ.



ತಾವು ಅವಶ್ಯ ಬೇಗ ಕಳಿಸಿರಿ

ನಮ್ಮಲ್ಲಿ ಸಿಗುವ ಸಾಮಾನುಗಳ ವಿವರ



ಫುಲ್‌ಗ್ಯಾಸ ಸಿಲೆಂಡರಗಳು ಇಂಗ್ಲೀಷ ಮತ್ತು ಜರ್ಮನ ಪೇಟೆಂಟ ಕಾರ್ಕ್ಸ, ಎಮ. ಬಿ ಸೋಡಾ ವಾಟರ ಬಾಟಲಗಳು, ನಂ ನಂ, ಸಾಬೂನ ಪೆಪ್ಪರ ಮಿಂಟನ್ನು. ಸೋಡಾವಾಟರ್ ಮಶಿನುಗಳು ಮತ್ತು ಎಲ್ಲ ತರದ ಕಲರಿನ ಬಾಟಲಿಗಳ ಎಸನ್ಸಗಳು, ಅಮೇರಿಕನ್ ಆಯಿಸ್ಕ್ರೀಮ ಸೋಡಾ, ಬನಾನಾ, ಕೋಲಾಚಂಪೇಜನ್, ಲೆಮನ್ ನಂ. ೧ ಲೆಮನ್ ಜುಯುಸ್ ಸೋಡಾ ನಂ. ೧ ಮೆಂಗೋ, ಆರೇಂಜ, ಫಾಯಿನಾಪಲ್, ಪಿಕ್ಕಮಿಅಪ್, ಕ್ವಿನಿನ್ ಟಾನಿಕ್, ರಾಜಬೆರಿ ನಂ ೧ ರೋಜ ನಂ. ೧ ಸ್ಪೇಶನ್ ಜಿಂಜರ್ ಬೀರ ನಂ. ೧, ಬಟ್ಟರ್ ಫಿಂಗ್ಸ್, ಬೆನ ಡಿಕ್ಟರ ಮಶಿನರಿ ಪಾರ್ಟಗಳು ನಮ್ಮಲ್ಲಿ ಸಿಗುತ್ತವೆ. ಮತ್ತು ಶುದ್ಧ ನೀಲಗಿರಿ ಎಣ್ಣೆಯ ಎಲ್ಲ ತರದ ಬಾಟಲ್ಲುಗಳು ಸಿಗುತ್ತವೆ. ವ್ಯಾಪಾರಸ್ಥರಿಗೆ ಒಳ್ಳೇ ಕಮೀಶನ್ ಕೊಡುತ್ತೇವೆ. ನಮ್ಮಲ್ಲಿ ಕಪ್ಪಣದ ಮಿಶಿಟರ ಸಿಂಗಲ ಕಾಟ್ಲನ ಸೋಪ ದರದಿಂದ ಮಾರಲಿಕ್ಕೆ ಸಿಗುತ್ತವೆ.

ಅಡ್ರೆಸ್— R. M. John & Sons.
Mission Compound HUBLI

ದಿ· ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ

ನಿತ್ಯಪತ್ರಕ್ಕೆ

೧೨ ತಿಂಗಳಿಗೆ		೧೨—೮—೦ ರೂ
೬	,,	೭—೦—೦ ರೂ
೩	,,	೪—೦—೦ ರೂ
ವಾರಪತ್ರಕ್ಕೆ ೧ ವರ್ಷಕ್ಕೆ		೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ, ಧಾರವಾಡ

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಸಾಲಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಸಾಲಿಗೆ ಒಂಬತ್ತು ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ಆಣೆ ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಓಳಿಗಳಿಗೆ ಇಮ್ಮಡಿಚಾರ್ಜ ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

TOKHANDE

Lasts A life tim

Strongest Watch

ಬಕ್ಷೀಸು ಮತ್ತು ಅರ್ಧ ಬೆಲೆಗೆ ಮೋಹಪಟ್ಟು ಮೋಸ ಹೋಗಬೇಡಿರಿ

ಜೀನಸು ಉತ್ತಮ ಮತ್ತು ನಂಬಿಗೆಯುಳ್ಳದ್ದು ನಮ್ಮ ಅಂಗಡಿಯಲ್ಲಿ ಘಾಮರೆ ಲೂಜಾ, ವೆಸ್ಟ ಎಂಡ, ಸೆರಡಿಯನ, ಓಮೇಗಾ ಮತ್ತು ಸ್ವಿಸ ವಾಚಿಸ ಕಂಪನಿ ಮತ್ತು ಬೇರೆ ಪ್ರಸಿದ್ಧ ಕಂಪನಿಗಳ ಗಡಿಯಾರಗಳು ಈಗ ಬಂದಿವೆ, ಇವು ನಮ್ಮಲ್ಲಿಕ್ಕೆ ಸಂಪದವಾಗಿರುವಲ್ಲದೆ ಗಟ್ಟಿ ಮತ್ತು ಸರಿಯಾಗಿ ಹೊತ್ತು ತೋರಿಸುವಂಥವುಗಳಾಗಿವೆ. ಐದು ರೂಪಾಯಿಯಿಂದ ಪ್ರಾರಂಭವಾದ ಬೆಲೆಯ ಗಡಿಯಾರಗಳು ಸಿಗುವವು. ಕೊಳ್ಳುವಾಗ ಪ್ರತಿಯೊಂದಕ್ಕೆ ಗ್ಯಾರಂಟಿ ಕೊಡುವೆವು. ಒಮ್ಮೆ ಬರಿಸಿ ನೋಡುವಿರಷ್ಟೇ!

ಪ್ರೊಪ್ರಾಯಿಟರ. ದತ್ತುರಾವ ಟೋಕಖಾಂಡೆ
ವಾಚ ಎಂಡ ಕ್ಲಾಕ ಮರ್ಚಂಟ ಧಾರವಾಡ.

ದಿ. ಅಂಕಲಗಿ ಬ್ಯಾಂಕ ಲಿಮಿಟೇಡ್

ಧಾರವಾಡ.

—೦—

೧೯೧೩ ಇಸ್ವಿಯ

ಕಂಪನಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ ಚಾಲೂ ಖಾತೆ, ಠೇವು, ಸೇವ್ಹಿಂಗ್ಸ ದ ಡಿಪಾಜಿಟ, ಸಾಲ, ವತ್ತಿ, ಹುಂಡಿ, ಮುಂತಾದ ಯಾವತ್ತು ವ್ಯವಹಾರಗಳು ನಡೆಯುವವು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡುವವರಿಂದ ಸಮಕ್ಷಮ ತಿಳಕೊಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ ರಿಂದ ೧೦-೩೦. ಸಾಯಂಕಾಲ ೩ ರಿಂದ ೬ ರವರೆಗೆ ನಡೆಯುವದು.

K.B. Ankalagi
ಮ್ಯಾನೆಜಿಂಗ ಡಾಯರೆಕ್ಟರ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೬) ಧಾರವಾಡ ಶುಕ್ರವಾರ ತಾರೀಖು ೨೭ನೇ ಮಾರ್ಚ ೧೯೨೫ (ಸಂಚಿಕೆ ೭೦

ಬೇಸಿಗೆ ಪ್ರಾರಂಭವಾಯಿತು!

ದನಗಳ ಆಹಾರವಾದ ಕಣಿಕೆಯನ್ನು ಕಾದಿರಿ !!

ಕಿರ್ಲೋಸ್ಕರ ಕಣಿಕೆ ಯಂತ್ರವನ್ನು ಉಪಯೋಗಿಸಿರಿ !!!

ನಮ್ಮ ಕಾರ್ಖಾನೆಯಲ್ಲಿ ಎರಡು ನಮೂನೆಯ ಕಣಿಕೆ ಕೊರೆಯುವ ಯಂತ್ರಗಳು ತಯಾರಾಗುತ್ತವೆ. ಒಂದು ಕೈಯಂತ್ರ ಬೆಲೆ ೨೧೦ ರೂ. ಇನ್ನೊಂದು ಗಾಲೀಯಂತ್ರ ಬೆಲೆ ೮೫ ರೂಪಾಯಿ ಸಣ್ಣ ಕಸುಬಿನವರು ಕೈ ಯಂತ್ರವನ್ನೂ, ದೊಡ್ಡ ಕಸುಬಿನವರು ಗಾಲೀ ಯಂತ್ರವನ್ನೂ ಉಪಯೋಗಿಸಬಹುದು. ಕಣಿಕೆಯು ೪ ಇಂಚುಗಳಿಂದ ಒಂದು ಇಂಚಿನ ವರೆಗೆ ಕೊರೆಯಲ್ಪಡುತ್ತದೆ.

ಸವಿಸ್ತರ ಸಂಗತಿಯ ಬಗ್ಗೆ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ } ಕಿರ್ಲೋಸ್ಕರವಾಡಿ-
ಜಿಲ್ಲಾ ಸಾತಾರಾ.

ಕೇವಲ ೨ ಆಣೆಯೊಳಗೇ ಆಶ್ಚರ್ಯಕಾರಕ ವ ರಾಮಬಾಣ ಉಪಾಯ

ಮೊಮೆಂಟ ಕ್ಯೂರ

ತಲೆಶೂಲಿ, ಅರ್ಧ ತಲೆಶೂಲಿ, ಶೀತ, ಉಷ್ಣ ವ ನಿತ್ರಾಣ ವಗೈರೆಗಳಿಂದಾದ ಮಸ್ತಕಶೂಲಿಯು ತ್ವರೆಯಿಂದ ನಿರ್ಮೂಲ ಮಾಡಲು "ಮೊಮೆಂಟ ಕ್ಯೂರ" ನಿಗೆ ಸರಿಸಮಾನವಾದ ಔಷಧವು ಬೇರೆ ಇಲ್ಲ. ಹೆಚ್ಚು ಜನರು ಮಸ್ತಕಶೂಲೆಯನ್ನು ಸಹಿಸಲು ಆಗದೆ ಮಸ್ತಕಕ್ಕೆ ವಸ್ತ್ರಕಟ್ಟಿ ಎಣ್ಣೆ ವ ಅರ್ಕನ್ನು ಹಾಗಿಸುತ್ತಾರೆ. ಆದರೆ ನಿರಾಶೆಯಾದವರು ಮೊಮೆಂಟ ಕ್ಯೂರದ ಪುಡಿಯನ್ನು ಬಿಸಿ ಚಹಾದೊಂದಿಗೆ ಅಥವಾ ಬಿಸಿ ನೀರಿನೊಂದಿಗೆ ಹೊಟ್ಟೆಯಲ್ಲಿ ತಕ್ಕೊಂಡಲ್ಲಿ ಒಂದೇ ಕ್ಷಣದಲ್ಲಿ ಮಸ್ತಕಶೂಲಿಯು ನಿಲ್ಲುವದು. ಇದಕ್ಕೆ ಅನೇಕ ಶಿಫಾರಸ ಪತ್ರಗಳು ಉಂಟು.

೧ ಚೀಟಿಗೆ ೨ ಆಣೆ. ಸ್ಯಾಂಪಲ ಸಲುವಾಗಿ ೩ ಆಣೆ ಪೋಸ್ಟ ತಿಕೀಟುಗಳನ್ನು ಕಳಿಸಿದಲ್ಲಿ ರವಾನಿಸುವವು.

ವಿಳಾಸ:— ದಿ ಕರ್ನಾಟಕ ಮೆಡಿಕಲ ಸ್ಟೋರ್ಸ, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ
ಸ್ಟೇಶನರೋಡ ಹುಬ್ಬಳ್ಳಿ.

NOTICE

THE DHARWAR BANK Ld
DHAWAR.

The Bank and its branch at Hubli will be closed for public on Monday and Tuesday the 30th and 31st March 1925 to faciliate the preparations of accounts.

DHAWAR } A. K. KATTI,
27—3—25 } Managing Director

ವಂದೇಮಾತರಂ

ನಿನ್ನೆ ಯುಗಾದಿಯ ದಿವಸ ೧೦ ಘಂಟೆ ಮಣಿಕಿಲ್ಲೆಯಲ್ಲಿರುವ ಮಠಗಾರ ಓಣಿಯಲ್ಲಿ ವೇ. ರಾ. ರಾ. ಗೋವಿಂದಾಚಾರ್ಯ ಗುತ್ತಲ ಇವರ ಭಜನಿ ಮತ್ತು ಶ್ರೀ ವಿದ್ಯಾಭೂಷಣ ದತ್ತಾತ್ರಯ ಕೃಷ್ಣ ಭಾರದ್ವಾಜ ಇವರ ಉಪನ್ಯಾಸವಾಯಿತು. ಮೊದಲು ವೇ. ರಾ. ರಾ. ಗೋವಿಂದಾಚಾರ್ಯರು ಅಂತಃಕರಣಪೂರ್ವಕವಾಗಿ ಶ್ರೋತ್ರ ವೃಂದದ ಹೃದಯವನ್ನು ಕರಗಿಸುವಂತೆ ಪುರಂದರದಾಸರ ವಿರಕ್ತಿಭಾವದಿಂದ ತುಂಬಿ ತುಳುಕುವ ೪-೫ ಪದಗಳನ್ನು ಹಾಡಿದರು ಆ ಮೇಲೆ ವಿದ್ಯಾಭೂಷಣ ಭಾರದ್ವಾಜರವರು ಜನರ ಮನಸಿನ ಮೇಲೆ ಒಳ್ಳೇ ಪರಿಣಾಮವಾಗುವಂತೆ ಐತಿಹಾಸಿಕ ಮತ್ತು ಪೌರಾಣಿಕ ದೃಷ್ಟಾಂತಗಳನ್ನು ಕೊಟ್ಟು ಭಜನಿಯು ಭಕ್ತಿ ಮಾರ್ಗಕ್ಕೆ ಪ್ರಥಮವೆಂದೂ ಮತ್ತು ಭಕ್ತಿಯೇ ಮೋಕ್ಷಕ್ಕೆ ಕಾರಣವೆಂದೂ ಸಿದ್ಧಪಡಿಸಿ ತಮ್ಮ ಸರಸವಾದ ವ್ಯಾಖ್ಯಾನವನ್ನು ಮುಗಿಸಿದರು. ಪುಷ್ಪಮಾಲೆಗಳಿಂದ ಇವರನ್ನು ಭೂಷಿತ ಮಾಡಿ ಇವರ ಆಭಾರ ಮನ್ನಿಸಿದನಂತರ ಸಮಾರಂಭದ ಕಾರ್ಯವು ಮುಗಿಯಿತು.

ವಿಜಯ.

ಧಾರವಾಡ ತಾ- ೨೭-೩-೨೫ ನೇ ಇಸ್ವಿ

ಕಲಕತ್ತೆಯಲ್ಲಿ ಸ್ವರಾಜ್ಯವಾದಿಗಳ ದೊಡ್ಡ ಜಯ.

—o—

ಮಂತ್ರಿಗಳಲ್ಲಿ ವಿಶ್ವಾಸವಿಲ್ಲೆಂಬ ಠರಾವು ಮಾಡುವದೆಂದರೆ- ಈಗಿನ ಸುಧಾರಣೆಗಳು ನಾಟಕದೊಳಗಿನ ಫಾರ್ಸಿನಂತಿದ್ದು, ಅವು ತಮಗೆ ಬೇಕಾಗಿಲ್ಲೆಂದು ಹೇಳುವದಾಗುತ್ತದೆ. ಸುಧಾರಣೆಯು ಬಹುಜನಪ್ರಿಯವಾಗಿರುತ್ತದೆಂದು ಹೇಳಿದರೆ- ಅದರಿಂದ ತಮ್ಮ ಪ್ರಜಾಹಿತಬುದ್ಧಿಗೆ ಕಲಂಕ ಬರುತ್ತದೆಂದು ಆಳರಸರು ತಿಳಕೊಂಡು, ಅಧಿಕಾರ ಬಲದಿಂದ ಇದು ಫಾರ್ಸಲ್ಲ; ಸ್ವಪ್ನದಲ್ಲಿ ಕಂಡದ್ದಲ್ಲ; ಮಿಥ್ಯವಲ್ಲ; ಸತ್ಯವಾದುದಿರುತ್ತದೆಂದು ತೋರಿಸಲು ಅಟ್ಟಹಾಸ ಪಡುತ್ತಾರೆ. ಇದೇ ಬುದ್ಧಿಯಿಂದ ಬಂಗಾಲದಲ್ಲಿ ಲಾರ್ಡ ಲಿಟನ ಸಾಹೇಬರು ಮಂತ್ರಿಗಳ ಕೂಟ ಸ್ಥಾಪನೆಯಲ್ಲಿ ಅವಿಶ್ರಾಂತ ಶ್ರಮ ಮಾಡುತ್ತಾ ಬಂದರು. ಇವರು ಸ್ವರಾಜ್ಯ ಪಕ್ಷೀಯರನ್ನು ಪಳಿಯುವದಕ್ಕಾಗಿಯೂ, ದಬ್ಬಾಳಿಕೆಯ ಕಾಯದೆಯ ಸಮರ್ಥನ ಮಾಡುವದಕ್ಕೂ ಬಂಗಾಲದ ಬಹು ದೊಡ್ಡ ಭಾಗದಲ್ಲಿ ಸಂಚಾರ ಮಾಡಿದರು. ಕೌನ್ಸಿಲದ ಮೆಂಬರರ ಸ್ಪೇಶಲ ಸಭೆ ಕರೆದು, ಅವರ ಗದ್ದ ಹಿಡಿದು, ಅವರ ಮನವೊಲಿಸಿಕೊಳ್ಳಲು ಪ್ರಯತ್ನಿಸಿದರು. ಮತ್ತು ಇಬ್ಬರನ್ನು ದಿವಾನರನ್ನಾಗಿ ನೇಮಿಸಿಕೊಂಡು, ಇನ್ನಿಬ್ಬರನ್ನು ದಿವಾನ ಮಾಡಿಕೊಳ್ಳುವ ಪೂರ್ವೋಪಾಯವನ್ನು ಮಾಡಿದರು. ಸಾಹೇಬರ ದುರ್ದೈವದಿಂದ ಇದೆಲ್ಲ ಸ್ವಪ್ನ ಸೃಷ್ಟಿಯಾಯಿತು.

ಮಂತ್ರಿಗಳನ್ನು ನೇಮಿಸಿಕೊಳ್ಳುವದು ಸಾಹೇಬರ ಕಯ್ಯಲ್ಲಿದ್ದರೆ ಅವರ ಸಂಬಳ ಕೊಡುವದು ಕೌನ್ಸಿಲದ ಕಯ್ಯಲ್ಲುಂಟು. ಒಂದು ಅಧಿಕಾರ ಒಬ್ಬರ ಕಯ್ಯಲ್ಲಿ, ಮತ್ತೊಂದು ಅಧಿಕಾರ ಅಥವಾ ಚಾಬಿಕೆಯು ಇನ್ನೊಬ್ಬರ ಕಯ್ಯಲ್ಲಿದ್ದರೆ- ಇಂಥ ಅನರ್ಥವಾಗುವದೆಂದು ಸ್ವರ್ಗವಾಸಿ ಮಾಂಟೆಗು ಸಾಹೇಬರಿಗೆ ಹೊಳೆಯಲಿಲ್ಲ. ಲಾರ್ಡ ಚೆಮ್ಸಫೋರ್ಡ ಸಾಹೇಬರಿಗೆ ತಿಳಿಯಲಿಲ್ಲ, ಸುಧಾರಣೆಯ ರಾಜ್ಯಕಾರಭಾರದಲ್ಲಿ ಆಳರಸರಿಗೆ ಇದೊಂದು ದೊಡ್ಡ ಕುತ್ತಾಗಿರುತ್ತದೆ ಈ ಕುತ್ತು ದಾಟಬೇಕೆಂದು ಅವರು ತರತರದ ಹಂಚಿಕೆಗಳನ್ನು ಹಾಕುತ್ತಿದ್ದಾರೆ. ಅದರ ಯಶವು ಕನಸಿಯಲ್ಲಿ ಬರದೆ, ಮೃಗಜಲದಂತೆ ಮತ್ತಿಷ್ಟು ದೂರ ಹೋಗುತ್ತಿರುವದು.

ಲಾರ್ಡ ಲಿಟನ [illegible]

ತ್ರಿಗಳನ್ನೂ ಅವರಿಗೆ ಸಹಾಯವಾಗಿ ಇಬ್ಬರು ಸೇಕ್ರೆಟರಿಗಳನ್ನೂ ನೇಮಿಸಿಕೊಂಡರು. ಸೇಕ್ರೆಟರಿಗಳು ಸಂಬಳದ ಆಳಾದ ಕೂಡಲೆ, ಅವರ ಮೆಂಬರ ಮತ್ತು ವೋಟಿನ ಅಧಿಕಾರ ಹೋಗುತ್ತದೆಂದು ಕಾಯದೆ ಪಂಡಿತರು ಆಕ್ಷೇಪನೆ ತಕ್ಕೊಂಡರು. ಕೌನ್ಸಿಲದಲ್ಲಿ ಈ ವಿಷಯವಾಗಿ ಚರ್ಚೆಯಾಗುವ ಮುಂಚಿತವಾಗಿ ಮಂತ್ರಿಗಳೇ ಮನೆಯ ದಾರೀ ಹಿಡಿದರು ಅಂದ ಬಳಿಕ ಸೇಕ್ರೆಟರಿಗಳನ್ನು ಕೇಳತಕ್ಕವರೇ ಉಳಿಯಲಿಲ್ಲ. ಸರಕಾರದವರು ತಾವಾಗಿ ಇದನ್ನು ಹಿಂದಕ್ಕೆ ತಕ್ಕೊಂಡರು. ಮಂತ್ರಿಗಳ ಸಂಬಳವು ೧, ೨೮, ೦೦೦ ರೂಪಾಯಿಯಾಗತಕ್ಕದ್ದೆಂದು ಸರಕಾರದವರು ಠರಾವು ತಂದರು. ಈ ಸಂಬಳವು ೧, ೨೭ ಸಾವಿರ ರಿಂದ ಕಡಿಮೆಯಾಗಬೇಕೆಂದು ಬಾಬೂ ನಲಿನೀರಂಜನ ಸರಕಾರರೆಂಬವರು ವಿರುದ್ಧ ಠರಾವು ತಂದರು. ಮಂತ್ರಿಗಳ ಸಂಬಳವು ವರ್ಷಕ್ಕೆ ಎರಡೇ ರೂಪಾಯಿಯಾಗಬೇಕೆಂದು ನೀವು ಠರಾವು ತಂದರೆ- ಅವರಲ್ಲಿ ಕೌನ್ಸಿಲದ ನಂಬಿಗೆಯಿಲ್ಲೆಂದು ತಿಳಿಯುವೆವೆಂಬದಾಗಿ ಲಾರ್ಡ ಲಿಟನ ಸಾಹೇಬರು ಈ ಮುಂದಾಗಿ ಹೇಳಿ, ಮಾತು ಕಳಕೊಂಡಿದ್ದಾರೆ. ಸಾಹೇಬರು ಮಾತು ಕಳಕೊಂಡಂತೆ ದಿವಾನರನ್ನೂ ಕಳಕೊಂಡರು. ತಮಗೆ ದಿವಾನರು ಬೇಡೆಂದು ಸ್ವರಾಜ್ಯ ಪಕ್ಷೀಯರು ತಂದ ವಿರುದ್ಧ ಠರಾವಿಗೆ ೭೬ ಮತ್ತು ದಿವಾನರು ಬೇಕೆಂಬದಾಗಿ ಸರಕಾರವು ತಂದ ಠರಾವಿಗೆ ೬೩ ಮತಗಳು ಬಿದ್ದು ದಿವಾನರು ಬೇಡೆಂಬ ಠರಾವೇ ಪಾಸಾಯಿತು. ಈ ಠರಾವಿನಿಂದ ಸರಕಾರವು ಇನ್ನೊಂದು ವರ್ಷದ ತನಕ ಮಂತ್ರಿ ಸೇಕ್ರೆಟರಿ ಎಂಬ ಉಸಾಬರಿ ಮಾಡದಂತಾಯಿತು.

ಮಂತ್ರಿಗಳಲ್ಲಿ ವಿಶ್ವಾಸವಿಲ್ಲೆಂಬ ಠರಾವನ್ನು ಪಾಸ ಮಾಡಿದರೆ ಒಪ್ಪಿಸಲ್ಪಟ್ಟಂಥ ಎಲ್ಲ ಖಾತೆಗಳನ್ನು ಸ್ವತಃ ಗವರ್ನರ ಸಾಹೇಬರೇ ನೋಡುವರೆಂದು ಮೇಲಿಂದ ಮೇಲೆ ಬೆದರಿಸುತ್ತಾ ಬಂದಿದ್ದಾರೆ. ಸ್ವರಾಜ್ಯ ಪಕ್ಷೀಯರಂತೂ ಇರಲಿ; ಮಂತ್ರಿಯಾದವರು ಸಹ ಇದಕ್ಕೆ ಸೊಪ್ಪು ಹಾಕಲಿಲ್ಲ. ಮಿ. ಫಜುಲಿ ಹಕ್ಕರು ಹೋದ ವರ್ಷ ಮೂರೂ ಮುಕ್ಕಾಲು ಗಳಿಗೆ ದಿವಾನರಾಗಿದ್ದರು. ಇವರು ಕೂಡ ಈ ಸಾರೆ ಲಾರ್ಡ ಲಿಟನ ಸಾಹೇಬರ ವಿರುದ್ಧ ಸಡ್ಡು ಹೊಡೆದು ನಿಂತರು. ಗವರ್ನರ ಸಾಹೇಬರು ಹೊಸದಾಗಿ ಇಬ್ಬರು ಮಂತ್ರಿಗಳನ್ನು ನೇಮಿಸಿಕೊಳ್ಳುವರೆಂದು ಖಂಡಿತವಾದ ಕೂಡಲೆ, ಹದಿನೈದೇ ದಿವಸ ತಮಯಿರಿ; ಅದ್ಭುತ ಚಮತ್ಕಾರ ಮಾಡಿ ತೋರಿಸುವೆನೆಂದು ಇವರು ನುಡಿದಿದ್ದರು. ಇವರು ಆಡಿದಂತೆ ಚಮತ್ಕಾರ ಮಾಡಿ ತೋರಿಸಿದರು. ಮಿ. ಹಕ್ಕ ಸಾಹೇಬರು ಪ್ರತಿಕೂಲರಾದದ್ದನ್ನು ಕಂಡ ಕೂಡಲೆ, ಸರ ಸ್ಟೀಫನ ಸಾಹೇಬರು " ದೇವರು ಪ್ರೀತಿಸುವಂಥವ [illegible] ದ್ರ ಭಾಷಣ ಮಾಡಿದರು. ಇಪತ್ತಿನ ದಿವಸ ಹಕ್ಕರು ಸರಕಾರದ ಪಾಲಿಗೆ ಸತ್ತಂತಾಯಿತು. ಸರಕಾರವು ದಬ್ಬಾಳಿಕೆಯ ಉರವಣಿಗೆಯಿಂದ ಒಬ್ಬ ಹಕ್ಕರೇಕೆ? ಇಂಥ ಅನೇಕ ನಂಬಿಗೆಯ ಗೃಹಸ್ಥರನ್ನು ಕಳಕೊಳ್ಳಬಹುದಾಗಿದೆ.

ಒಪ್ಪಿಸಲ್ಪಟ್ಟ ಖಾತೆಗಳನ್ನು ಸರಕಾರವು ತನ್ನಾಧೀನ ಮಾಡಿಕೊಂಡು, ಕಾರ್ಯಕರ್ತೆಯ ಸ್ತಂಭನ ಯಾತ್ರೆ ಮಾಡಿಸಬೇಕೆಂದೇ ಮೇಲಿನ ಠರಾವು ಸೂಚಿಸುತ್ತದೆ. ಈ ಠರಾವು ಒಪ್ಪಿಗೆಯುಳ್ಳದ್ದಾಗದಿದ್ದರೆ ಕೌನ್ಸಿಲ ವಿಸರ್ಜನೆ ಮಾಡಿ, ಪುನಃ ಚುನಾವಣೆಯಾಗಬೇಕೆಂದು ಜಾಹೀರನಾಮೆಯನ್ನು ಹಚ್ಚಬೇಕಾಗುತ್ತದೆ. ಸ್ವರಾಜ್ಯ ಪಕ್ಷೀಯರು ಸಿದ್ಧರಿದ್ದಾರೆ. ಏಕಂದರೆ ಈಗಿನಗಿಂತ ಹೆಚ್ಚು ಸ್ವರಾಜ್ಯವಾದಿಗಳು ಆರಿಸಿ ಬರುವರೆಂದು ದೇಶಬಂಧು ದಾಸರ ಮನೋದೇವತೆಯು ಹೇಳುತ್ತಿರುವದು. ಆದರೆ ಸರಕಾರವೇ ಸಿದ್ಧವಾಗಲಾರದು, ನಾಗಪೂರದಲ್ಲಿಯೂ ಬಂಗಾಲದಂತೆ ಎರಡು ಸಾರೆ ಕೈ ತೋರಿಸಿ, ಅಪಲಕ್ಷಣ ಮಾಡಿಕೊಂಡಿತು. ಯಶಸ್ಸಿನ ನಂಬಿಗೆ ಇದ್ದರೆ- ಅಲ್ಲಿಯ ಕೌನ್ಸಿಲವನ್ನು ಬರಖಾಸ್ತ ಮಾಡಬಹುದಾಗಿತ್ತು. ಹಾಗೆ ಮಾಡದೆ ಬೇನೆಯು ಇದ್ದಕ್ಕಿದ್ದಂತೆ ಇದ್ದರೆ ಗುಣವೆಂದು ತಿಳಿಯುವಂತೆ, ಇದೊಂದು ವರ್ಷ ಹಾಗೇ ಸಾಗಲೆಂದು ಆ ಕಾಲಹರಿಯುವರು ಸುಮ್ಮನೆ ಕೂತಿದ್ದಾರೆ. ಬಂಗಾಲದವರೂ ನಾಗಪೂರದ ಅನುಕರಣ ಮಾಡಬಹುದು.

ಬಂಗಾಲ ಸರಕಾರದ ವರ್ತನವು ಅಲ್ಲಿಯ ಮೆಂಬರರಲ್ಲಿ ಅತಿಶಯ ತ್ವೇಷವನ್ನುಂಟು ಮಾಡಿದೆ. ದಬ್ಬಾಳಿಕೆಯ ಕಾಯದೆಯೂ ಅನೇಕವಾಗಿ ಸ್ವರಾಜ್ಯ ಪಕ್ಷೀಯರನ್ನು ಸೆರೆಮನೆಗಳಲ್ಲಿ ಕೊಳಿಸುವದೂ ಅವರ ಅಂತಃಕರಣಕ್ಕೆ ಬರೀಕೊಳ್ಳಿಯಂತಾಗಿದೆ. ಇದಲ್ಲದೆ ಗೌರಕಾಯಸ್ಥರ ಅಸಹ್ಯವಾದ ಪ್ರಭುತ್ವವು ತೀರ ಅಸಹ್ಯವೆನಿಸುತ್ತದೆ. ಬಂಗಾಲಿಗಳು ವಾಙ್ಮಯ ಶಿಕ್ಷಣದಲ್ಲಿ ಬಹಳ ಮುಂದೆ ಹೋಗಿದ್ದಾರೆ. ಸರ ಜಗದೀಶ ಚಂದ್ರ ಬೋಸ ಮತ್ತು ಸರ ಆಚಾರ್ಯ ರಾಯರಂಥ ಅಸಾಧಾರಣ ಪಾಂಡಿತ್ಯವುಳ್ಳ ಹಿಂದೀ ಜನರ ಮೇಲೆ ವಿಲಾಯತಿಯಲ್ಲಿ ಹೊಸದಾಗಿ ಗ್ರಾಜ್ಯುಯೇಟರಾದಂಥ ಜಗತ್ತಿನ ಜ್ಞಾನವಿಲ್ಲದಂಥ ಹಸಿ ಬಿಸಿ ಪಂಡಿತರನ್ನು ವರಿಷ್ಠಾಧಿಕಾರಿಯಾಗಿ ನೇಮಿಸುವರು. ಇದು ಸಂಪೂರ್ಣ ಅನ್ಯಾಯ ಮಾತ್ರವಲ್ಲ; ಹಿಂದೀ ಜನರ ಯೋಗ್ಯತೆಯನ್ನು ಬುದ್ಧಿಪೂರ್ವಕವಾಗಿ ಕಡಿಮೆ ಮಾಡುವಂತಾಗುತ್ತದೆ. ಸರಕಾರದ ಇಂಥ ಹೀನ ಪದ್ಧತಿಯು ಬಂದಾಗ, ಹಿತಿಯ ಕಿರಿಯವೆಂಬ ತಾರತಮ್ಯ ಕಂಡುಬರುವ ತನಕ, ದೇಶದ ತುಂಬ ಹಬ್ಬಿದ ಬೇಗೆಯು ಆರಲಾರದು.

—

ಪ್ರಾತಃಕಾಲದಲ್ಲಿ ಜನನ,

ಸಾಯಂಕಾಲದಲ್ಲಿ ಮರಣ.

ಝುಗಲುಲ ಪಾಶ್ಯಾನ ದಿಗ್ವಿಜಯ

—o—

ಕಲಕತ್ತೆಯಲ್ಲಿ ಸ್ವರಾಜ್ಯ ಪಕ್ಷೀಯರು ಬ್ರಿಟಿಶ ಸರಕಾರದ ಮೇಲೆ ವ್ಯಾದಿ ಮಾತು ಮಾಡಿದ ವೇಳೆಯಲ್ಲಿ ಇಜಿಪ್ತದಲ್ಲಿ ಝುಗಲುಲ ಪಾಶ್ಯಾನು ಬ್ರಿಟಿಶ ಸಾಮ್ರಾಜ್ಯದ ಕೃಪಾಛತ್ರದಲ್ಲಿರುವ ಪ್ರಧಾನರ ಮೇಲೆ ಮಾತು ಮಾಡಿ, ಅವರನ್ನು ನಿರ್ವೀರ್ಯಮಾಡಿದನು. ಅಂದು ಅಲ್ಲಿಯ ಪಾರ್ಲಮೆಂಟ ಸಭೆಯ ಪ್ರವೇಶ ದಿನವಾಗಿತ್ತು. ಪಾಶ್ಯಾನ ಪಕ್ಷದವರು ಸಾರ್ವಜನಿಕ ಶಾಂತತೆಯನ್ನು ಭಂಗಪಡಿಸಬಾರದೆಂದು ಪಾರ್ಲಮೆಂಟ ಸಭೆಯ ಬೀದಿಗುಂಟ ಕಾಲ್ಬಲದ ಮತ್ತು ರಾಹುತರ ಕಾವಲಿಟ್ಟಿದ್ದರು. ಪಾಶ್ಯಾ ಮತ್ತು ಆತನ ಬಣದವರು ಕಲ್ಪನಾತೀತವೆನಿಸುವಂಥ ಶಾಂತ ವೃತ್ತಿಯಿಂದ ಪಾರ್ಲಮೆಂಟ ಸಭೆಗೆ ಹೋಗಿ, ಕೂತುಕೊಂಡರು. ಮಂತ್ರಿಯಾದ ಝಿವಾರ ಪಾಶ್ಯಾನಿಗೆ ಸಹಾಯವೆಂದು ಲಾರ್ಡ ಅಲೆನಬಿಯವರೂ ದಯಮಾಡಿಸಿದರು. ಈ ತೆರವಾಗಿ ಸರಕಾರದ ಭದ್ರೋಪಾಯ ಭೇದೋಪಾಯಗಳಾಗಿದ್ದರೂ, ಮೊಂಬರಿಕ್ಷಿದ್ದ ರಾಷ್ಟ್ರೀಯ ದಿವ್ಯ ಪ್ರಕಾಶವು ಮಂದವಾಗಿರಲಿಲ್ಲ. ಪದ್ಧತಿ ಪ್ರಕಾರ ಸುಲತ್ತಾನರಾದ ಫಾದಸಾಹೇಬರು ಪಾರ್ಲಮೆಂಟ ಸಭೆಯನ್ನು ತೆರೆಯುವ ಉಪಕ್ರಮದ ಭಾಷಣ ಮಾಡಿದರು. ಅನಂತರ ಪಾರ್ಲಮೆಂಟಿನ ಅಧ್ಯಕ್ಷರನ್ನು ಆರಿಸುವ ವಿಧಿ ನಡೆಯಿತು. ಝುಗಲುಲ ಪಾಶ್ಯಾನವರು ಒಬ್ಬ ಉಮೇದವಾರರಾದರು. ಇವರಿಗೆ ೧೨೫ ಮತಗಳು ಬಿದ್ದು ಅಧ್ಯಕ್ಷರಾದರು. ಇವರು ಅಧ್ಯಕ್ಷರಾಗುವರೆಂಬರೆ ವಿಧಿ ಕಟ್ಟಿಕೊಳ್ಳುವದಾದ್ದರಿಂದ, ಮಂತ್ರಿಗಳು ತಳಮಳಿಸಿದರು. ನಾಲ್ಕು ದಿವಸಗಳ ಕೆಳಗೆ ಬಿಟ್ಟು ಉಪಮಂತ್ರಿಯು ಇವರ ಬಿಡಾರಕ್ಕೆ ಹೋಗಿ, ನಿಮ್ಮ ಜನರು ಕಾಯದೆ ಮುರಿಯುತ್ತಾರೆ; ಶಾಂತತಾಭಂಗಪಡಿಸುತ್ತಾರೆ, ಎಚ್ಚರಿಕೆ ಎಂದು ಭಯಹಾಕಿದ್ದರು. ಅದೇ ಮಂತ್ರಿಗಳು ಪಾರ್ಲಮೆಂಟ ಸಭೆಯಲ್ಲಿ ಇವರ ಭೃತ್ಯರಾಗಬೇಕಾಯಿತು. ಇದೊಂದು ಅಪಮಾನದ ವಹತೇ ಆಯಿತು. ಆದ್ದರಿಂದ ಇವರು ಪಾರ್ಲಮೆಂಟ ಸಭೆಯ ಅಂದಿನ ಕೆಲಸ ಮುಗಿದ ಕೂಡಲೆ, ಸುಲತ್ತಾನರ ಕೂಡ ಆಲೋಚನೆ ಮಾಡಿ, ಅವರಿಂದ ಪಾರ್ಲಮೆಂಟ ಸಭೆಯನ್ನು ವಿಸರ್ಜನ ಮಾಡಿದ ಜಾಹೀರನಾಮೆ ಪ್ರಸಿದ್ಧಿಸಿದರು. ಈ ಪ್ರಕಾರ ಜಾಹೀರನಾಮೆಯನ್ನು ಹುಟ್ಟಿಸುವ ಅಧಿಕಾರವು ಸುಲತ್ತಾನರಿಗೆ ಮಾತ್ರ ಇರುತ್ತದೆಂದು ಇವರು ಉಸುರಿ ಮೂರು ದಿವಸ ಕೂಡ ಆಗಲಿಲ್ಲ, ತನಗೆ ಮರಣವೇಕೆ ಬರಬೊಲ್ಲದೆಂದು ದುರ್ಯೋಧನನು ಮುಂದಾಗಿ ತಾನಾಗಿ [illegible]ಕೊಂಡಂತೆ ಮಾತೇ ಸರಿ. ಸುಲತ್ತಾನರು ಪಾರ್ಲಮೆಂಟ ಸಭೆಯ [illegible] ೧ ತಾರೀಖಿನ ದಿವಸ ಕೂಡಬೇಕೆಂದು ಅಪ್ಪಣೆ ಕೊಟ್ಟಿದ್ದಾರೆ. ಝುಗಲುಲ ಪಾಶ್ಯಾನು ಕಾನ್ಸಿಲದ ಅಧ್ಯಕ್ಷನಾದ್ದನ್ನು ಸುಲತ್ತಾನರು ವಿರೋಧಿಸಲಿಲ್ಲ. ಇದನ್ನು ವಿರೋಧಿಸಿ, ಇದಕ್ಕೆ ಮಂಜೂರಿ ಕೊಡಕೂಡದೆಂದು ಪ್ರಧಾನರಮತವಾಗಿತ್ತು. ಸುಲತ್ತಾನ ಮತ್ತು ಮಂತ್ರಿಗಳ ನಡುವೆ ಈ ಪ್ರಕಾರ ಮತಭೇದವಾಯಿತು. ಆದರೂ ಮಂತ್ರಿಗಳೇ ಮುಖ್ಯ ರಾಜ್ಯಕರ್ತರಾದ್ದರಿಂದ ಅವರ ಇಚ್ಛಾನುಸಾರವಾಗಿ ಪಾರ್ಲಮೆಂಟ ಸಭೆಯನ್ನು ಬರಖಾಸ್ತ ಮಾಡಬೇಕಾಯಿತು. ಮುಂಜಾನೆ ಹುಟ್ಟಿ ಸಾಯಂಕಾಲದಲ್ಲಿ ಅವತಾರ ಸಮಾಪ್ತಿಯಾದ ಪಾರ್ಲಮೆಂಟ ಸಭೆಯು ಜಗತ್ತಿನಲ್ಲಿ ಇದೇ ಮೊದಲನೆಯದು.

ಲಕ್ಷವೋ? ದಶಲಕ್ಷವೋ?

—o—

ಬಾವಲಾ ಸಾಹೇಬನು ಸಾಯುವಾಗ ಮೃತ್ಯುಪತ್ರ ಬರೆಯಲಿಕ್ಕೆ ಹೇಳುವಾಗ, ಮುಮತಾಜ ಬೇಗಮಳಿಗೆ ಲಕ್ಷ ರೂಪಾಯಿ ಕೊಡಬೇಕೆಂದು ನುಡಿದನು. ಬರೆಯುತ್ತಿದ್ದ ಪೋಲೀಸ ಕಾಮದಾರನು ಒಂದರ ಮುಂದೆ ಒಂದು ಪೂಜಿ ಹಾಕಿದನು. ತಿರುಗಿ ಅದನ್ನು ಕಾಟ ಹಾಕಿದನು. ತನಗೆ ಒಂದೇ ಲಕ್ಷವಲ್ಲ; ಹತ್ತು ಲಕ್ಷ ಬರತಕ್ಕದ್ದೆಂದು ಬೇಗಮಳು ದಿವಾಣಿಯಲ್ಲಿ ದಾವೇ ತರತಕ್ಕವಳಿದ್ದಾಳೆ. ಬಾವಲಾ ಸಾಹೇಬರ ಆಸ್ತಿಯು ಒಟ್ಟು ೧೬ ಲಕ್ಷದ್ದಿರುತ್ತದೆ.

ಇದೇ ಕೊಲೆಯ ಪ್ರಕರಣದಲ್ಲಿ ಪೋಲೀಸರ ವತಿಯಿಂದ ಬ್ಯಾರಿಸ್ಟರ ಕೆಂಪ ಸಾಹೇಬರೂ, ಆರೋಪಿಗಳ ಪತಿಯಿಂದ ಬ್ಯಾರಿಸ್ಟರ ವೆಲಿಣಕರರೂ ಕೆಲಸ ನಡಿಸುವರು.

ಮುಂಬಯಿಯಲ್ಲಿ ಬಾವಲಾ ಸಾಹೇಬರ ಕೊಲೆಯ ವಿಚಾರಣೆಯು ನಿನ್ನೆಯಿಂದ ಪ್ರಾರಂಭವಾಗಿದೆ.

ವಿಮಾನದಿಂದ ಅಪಘಾತ

—o—

ವಾಯವ್ಯ ಸರಹದ್ದಿನಲ್ಲಿ ಒಂದು ವಿಮಾನಕ್ಕೆ ಅಪಘಾತವಾಗಿ ಅದು ನೆಲಕ್ಕೆ ಅಪ್ಪಳಿಸಿತು. ಮತ್ತು ಅದರಲ್ಲಿದ್ದ ಇಬ್ಬರು ಕಾಮದಾರರು ವಿಧಿವಶರಾದರು.

ಮರಾಟಾ ಮತ್ತು ಕುರುಬರ

ಮಿಶ್ರ ವಿವಾಹ.

ಕೊಲ್ಹಾಪೂರದ ಶೀಲವಂತ ಮರಾಠ[illegible] [illegible]ರಿನ ಕುರುಬ ಕುಲದ ಮರಾಠರಿಗೂ ಪರಸ್ಪರ ಶರೀರಸಂಬಂಧವಾಗಬೇಕೆಂದು ಕೊಲ್ಹಾಪೂರದ ಅನೇಕ ತರುಣ ಮರಾಠರನ್ನು ಇಂದೂರಿಗೆ ಕರೆಸಿಕೊಂಡು, ಕುರುಬ ಕನ್ನಿಕೆಯರ ಕೂಡ ವಿವಾಹ ಸಮಾರಂಭ ನೆರವೇರಿಸತೊಡಗಿದ್ದಾರೆ.

ವಿವಿಧ ವರ್ತಮಾನಗಳು

—o—

ಬೆಳಗಾವಿಯಲ್ಲಿ ಒಬ್ಬ ಮಹಾತ್ಮರು ಪ್ರಕಟರಾಗಿದ್ದಾರೆ. ಇವರು ಮಾರುತಿಯ ಗುಡಿಯಲ್ಲಿ ಅಂತ್ಯಜರಿಗೆ ಹೋಗಗೊಡಲು ಸತ್ಯಾಗ್ರಹ ಪ್ರಾರಂಭಿಸಬೇಕೆಂದಿದ್ದಾರೆ.

ಬಳ್ಳಾರಿಯ ನಿವಾಸಿಗಳೂ, ಪೆನಶನರ ಡಿ. ಡಿ. ಕಲೆಕ್ಟರರೂ ಆಗಿರುವ ರಾ. ಬ. ನಾಗೇಶರಾಯರು ತಿರುಪತಿ ದೇವಸ್ಥಾನದ ದಿವಾನ ಪೇಷಕಾರರಾಗಿ ನೇಮಿಸಲ್ಪಟ್ಟರು.

ಹೊಸದಾಗಿರುವ ಗವ್ಹರ್ನರ ಜನರಲರು ರಾಜ್ಯಾಧಿಕಾರಪಡೆದು ರಾಜನಿಷ್ಠೆಯ ಆಣೆಯನ್ನು ಮಾಡುವ ವಿಧಿಯನ್ನು ಹಾಯಕೋರ್ಟಿನ ಮುಖ್ಯ ಜಡ್ಜರು ಮಾಡಿಸುವರು. ಇವರು ಪಂಜಾಬದ ಚೀಫ ಜಡ್ಜರು ನ್ಯಾಯಮೂರ್ತಿ-ಶಾದಿಲಾಲರಾಗಿದ್ದಾರೆ ಇವರು ಲಾರ್ಡ ಲಿಟನ ಸಾಹೇಬರಿಂದ ಆಣೆ ಮಾಡಿಸುವರು. ಹಿಂದೂ ಮನುಷ್ಯರು ಗವ್ಹರ್ನರ ಜನರಲರಿಂದ ಆಣೆ ಮಾಡಿಸುವದು ಇದೇ ಮೊದಲು!!

ಪುಣೆಯಲ್ಲಿ ಡಿ. ಡಿ. ಕಲೆಕ್ಟರರಾಗಿದ್ದ ಮಿ. ಗೋವಿಂದರಾವ ಮೊಡಕರ ಇವರು ಪರಲೋಕವಾಸಿಯಾದರು. ಇವರ ಸ್ಮಶಾನಯಾತ್ರೆಗೆ ಕಲೆಕ್ಟರ, ಅಸಿಸ್ಟಂಟ ಕಲೆಕ್ಟರ ಮೊದಲಾದವರು ಹೋಗಿದ್ದರು

ಧಾರವಾಡ

ಕುಮಾರಿ ಬೈಂದೂರ ಇವರು ಇಲ್ಲಿಯ ಹೆಣ್ಣುಮಕ್ಕಳ ಇಂಗ್ಲಿಷ ಶಾಲೆಯಲ್ಲಿ ಶಿಕ್ಷಕಿಯಾಗಿದ್ದಾರೆ. ಇವರು ಬಿ. ಎ. ಪಾಸಾಗಿದ್ದಾರೆ ಮುಂಬಯಿ ಕರ್ನಾಟಕದ ಮಹಿಳೆಯರಲ್ಲಿ ಇವರೇ ಮೊದಲನೇ ಬಿ. ಎ. ಆದ್ದರಿಂದ, ಇವರನ್ನು ಗೌರವಿಸಿ, ಇವರಿಗೆ ಪಾರಿತೋಷಕ ಕೊಡುವ ಕುರಿತು ನಿನ್ನೆ ದಿವಸ ಈ ಊರಲ್ಲಿ ಸಭೆ ಕೂಡಿತ್ತು.

ದಿ ಧಾರವಾಡ ... ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ, ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೋಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ

ಬಂದಿಗೆಯು ಆರುಲಕ್ಷದ ಮೇಲುಂಟು. ಚೆಕ್ಕ, ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ಮಾಡಲ್ಪಡುವದು. ಕ್ಯಾಶ್ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಾಧವರಾವ ಬಿ. ಜಕಾತಿ,
ಮ್ಯಾನೆಜಿಂಗ ಡಾಯರೆಕ್ಟರ

ಆರ್. ಎಮ್. ಜೋನ್ ಎಂಡ ಸನ್ಸ, ಹುಬ್ಬಳ್ಳಿ.

ಎಜಂಟ್ಸ ಫೋರ ಕಾರಬೋನಿಕ್ ಅಸಿಡ್ಡ ಗ್ಯಾಸ, ಮ್ಯಾನುಫ್ಯಾಕ್ಚರರ್ ಆಫ್ ಅರೆಟಿಡ ವಾಟರ್ಸ.

ತಾವು ಆರ್ಡರ ಬೇಗ ಕಳಿಸಿರಿ

ನಮ್ಮಲ್ಲಿ ಸಿಗುವ ಸಾಮಾನುಗಳ ವಿವರ.

ಫುಲ್‌ಗ್ಯಾಸ ಸಿಲೆಂಡರಗಳು ಇಂಗ್ಲೀಷ ಮತ್ತು ಜರ್ಮನ ಪೇಟೆಂಟ ಕಾಡ್ಸ, ಎಮ. ಟಿ. ಸೋಡಾ ವಾಟರ ಬಾಟಲಗಳು, ೫೦೦ ನಂ. ಸಾಮ



ಶೀನ ಪೆಟ್ಟಿ ೧ ಮಾಡಿಸುವವು. ಸೋಡಾವಾಟರ್ ಮಶಿನುಗಳು ಮತ್ತು ಎಲ್ಲ ತರದ ಕಲರಿನ ಬಾಟಲಿಗಳ ಎಸೆನ್ಸಗಳು, ಅಮೆರಿಕನ್ ಆಯಿಸ್ಕ್ರೀಮ ಸೋಡಾ, ಬನಾನಾ, ಕೋಲಾಚಂಪೇಜನ್, ಲೆಮನ್ ನಂ. ೧ ಲೆಮನ್ ಜುಯಿಸ್ ಸೋಡಾ ನಂ. ೧ ಮೆಂಗೋ, ಆರೇಂಜ, ಫಾಯಿನಾಪಲ್, ಪಿಕ್ಕಮಿಅಪ್, ಕ್ವಿನಿನ್ ಟಾನಿಕ್, ರಾಜಬೆರಿ ನಂ. ೧ ಕೋಲಾ ನಂ. ೧ ಸ್ಟೋನ್ ಜಿಂಜರ್ ಬೀರ ನಂ. ೧, ರಬ್ಬರ್ ರಿಂಗ್ಸ, ಬೇಸಾ ತರದ ಮಶಿನರಿ ಪಾರ್ಟುಗಳು ನಮ್ಮಲ್ಲಿ ಸಿಗುತ್ತವೆ. ಮತ್ತು ಶುದ್ಧ ನೀಲಗಿರಿ ಎಣ್ಣೆಯು ಎಲ್ಲ ತರದ ಬಾಟಲ್ಲಗಳು ಸಿಗುತ್ತವೆ. ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಕೊಡುತ್ತೇವೆ. ನಮ್ಮಲ್ಲಿ ಕಬ್ಬಿಣದ ಮಿಲಿಟರಿ ಸಿಂಗಲ ಕಾಟ್ಸ ಸೋವಿ ದರದಿಂದ ಮಾರಲಿಕ್ಕೆ ಸಿಗುತ್ತವೆ.

ಅಡ್ರೆಸ್— R. M. John &Sons.
Mission Compound HUBLI

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಾಗಿರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ

ನಿತ್ಯಪತ್ರಕ್ಕೆ,

೧೨ ತಿಂಗಳಿಗೆ	೧೨—೮—೦ ರೂ
೬ ,,	೬—೦—೦ ರೂ
೩ ,,	೭—೦—೦ ರೂ
ವಾರಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ, ಧಾರವಾಡ

ಜಾಹೀರಾತಿನ ದರಗಳು.

ತಿಂಗಳ ಕಾಲಮಿನ ಹತ್ತು ಪಳಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದುವರೆ ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಐದು ಆಣೆ ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್ ಕಾಲಮಿನ ಒಳಗಳಿಗೆ ಇಮ್ಮಡಿಚಾರ್ಜ ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ



ಬಕ್ಷೀಸು ಮತ್ತು ಅರ್ಧ ಬೆಲೆಗೆ ಮೋಹಪಟ್ಟು ಮೋಸ ಹೋಗಬೇಡಿರಿ.

ಜಿನಸು ಉತ್ತಮ ಮತ್ತು ನಂದಿಗೆಯುಳ್ಳದ್ದು ನಮ್ಮ ಅಂಗಡಿಯಲ್ಲಿ ಫಾವರೆ ಲೂಬಾ, ವೆಸ್ಟಎಂಡ, ಮೆರಡಿಯನ, ಓಮೇಗಾ ಮತ್ತು ಸ್ವಿಸ ಜನರಲ ಕಂಪನಿ ಮತ್ತು ಬೇರೆ ಪ್ರಸಿದ್ಧ ಕಂಪನಿಗಳ ಗಡಿಯಾರಗಳು ಈಗ ಬಂದಿದ್ದು, ಇವು ನೋಡಲಿಕ್ಕೆ ಸುಂದರವಾಗಿರುವಲ್ಲದೆ ಗಟ್ಟಿ ಮತ್ತು ಸರಿಯಾಗಿ ಹೊತ್ತು ತೋರಿಸುವಂಥವುಗಳಾಗಿವೆ. ಐದು ರೂಪಾಯಿಯಿಂದ ಬೇಕಾದ ಬೆಲೆಯ ಗಡಿಯಾರಗಳು ಸಿಗುವವು. ಕೊಳ್ಳುವಾಗ ಪ್ರತಿಯೊಂದಕ್ಕೆ ಗ್ಯಾರಂಟಿ ಕೊಡುವೆವು. ಒಮ್ಮೆ ತರಿಸಿ ನೋಡುವಿರಷ್ಟೇ?

ಪ್ರೊಪ್ರಾಯಿಟರ, ಚಕ್ರರಾವ ಲೋಖಂಡೆ
ವಾಚ ಎಂಡ ಕ್ಲಾಕ ಮರ್ಚಂಟ ಧಾರವಾಡ.

ದಿ. ಅಂಕಲಗಿ ಬ್ಯಾಂಕ ಲಿಮಿಟೇಡ್

ಧಾರವಾಡ.

—೦—

೧೯೧೩ ಇಸ್ವಿಯ

ಕಂಪನಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿಯುತ್ತದೆ. ಚಾಲೂ ಖಾತೆ, ಠೇವು, ಸೆವ್ಹಿಂಗ್ಸದ ಡಿಪಾಜಿಟ, ಸಾಲ, ಪತ್ತ, ಹುಂಡಿ, ಮುಂತಾದ ಯಾವತ್ತು ವ್ಯವಹಾರಗಳು ನಡಿಯುವವು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿಮಾಡುವವರಿಂದ ಸಮಕ್ಷಮ ತಿಳಕೊಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ ರಿಂದ ೧೦-೩೦. ಸಾಯಂಕಾಲ ೩ ರಿಂದ ೬ ರವರೆಗೆ ನಡಿಯುವದು.

K.B. Ankalagi
ಮ್ಯಾನೆಜಿಂಗ ಡಾಯರೆಕ್ಟರ

ಈ ಪತ್ರವನ್ನು ಆಸ್ಲಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1445

ನಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು- ಅಣ್ಣಾಚಾರ್ಯ ಬಾಳಾಚಾರ್ಯ ಜೋಶಿ.

ವರ್ಷ ೬) ಧಾರವಾಡ ಶನಿವಾರ ತಾರೀಖು ೨೮ನೇ ಮಾರ್ಚ ೧೯೨೫ (ಸಂಚಿಕೆ ೭೧

ಬೇಸಿಗೆ ಪ್ರಾರಂಭವಾಯಿತು!

ದನಗಳ ಆಹಾರವಾದ ಕಣಿಕೆಯನ್ನು ಕಾದಿರಿ !!

ಕಿರ್ಲೋಸ್ಕರ ಕಣಿಕೆ ಯಂತ್ರವನ್ನು ಉಪಯೋಗಿಸಿರಿ !!!

ನಮ್ಮ ಕಾರ್ಖಾನೆಯಲ್ಲಿ ಎರಡು ನಮೂನೆಯ ಕಣಿಕೆ ಕೊರೆಯುವ ಯಂತ್ರಗಳು ತಯಾರಾಗುತ್ತವೆ. ಒಂದು ಕೈಯಂತ್ರ ಬೆಲೆ ೨೦ರೂ. ಇನ್ನೊಂದು ಗಾಲೀಯಂತ್ರ ಬೆಲೆ ೮೫ ರೂಪಾಯಿ ಸಣ್ಣ ಕಮತವುಳ್ಳವರು ಕೈ ಯಂತ್ರವನ್ನೂ, ದೊಡ್ಡ ಕಮತವುಳ್ಳವರು ಗಾಲೀ ಯಂತ್ರವನ್ನೂ ಉಪಯೋಗಿಸಬಹುದು. ಕಣಿಕೆಯು ೪ ಇಂಚುಗಳಿಂದ ಒಂದು ಇಂಚಿನ ವರೆಗೆ ಕೊರೆಯಲ್ಪಡುತ್ತದೆ.

ಸವಿಸ್ತರ ಸಂಗತಿಯ ಬಗ್ಗೆ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ } ಕಿರ್ಲೋಸ್ಕರವಾಡಿ- ಜಿಲ್ಲಾ ಸಾತಾರಾ.

ಕೇವಲ ೩ ಆಣೆಯೊಳಗೇ ಆಶ್ಚರ್ಯಕಾರಕ ವ ರಾಮಬಾಣ ಉಪಾಯ

ಮೊಮೆಂಟ ಕ್ಯೂಅರ

ತಲೆಶೂಲಿ, ಅರ್ಧ ತಲೆಶೂಲಿ, ಶೀತ, ಉಷ್ಣ ವ ನಿಶಕ್ತಿ ವಗೈರೆಗಳಿಂದಾದ ಮಸ್ತಕಶೂಲಿಯು ತ್ವರಿತದಿಂದ ನಿರ್ಮೂಲ ಮಾಡಲು "ಮೊಮೆಂಟ ಕ್ಯೂಅರ" ಕ್ಕೆ ಸರಿಸಮಾನವಾದ ಔಷಧವು ಬೇರೆ ಇಲ್ಲ. ಹೆಚ್ಚು ಜನರು ಮಸ್ತಕಶೂಲೆಯನ್ನು ತಡೆಯಲು ಆಗದೆ ಮಸ್ತಕಕ್ಕೆ ವಸ್ತ್ರಕಟ್ಟಿ ಎಣ್ಣೆ ವ ಅ[illegible]ನ್ನು ಹಾಗಿಸುತ್ತಾರೆ. ಆದರೆ ನಿರಾಶೆಯಾದವರು ಮೊಮೆಂಟ ಕ್ಯೂಅರದ ಹುಡಿಯನ್ನು ಬಿಸಿ ಚಹಾ ದೊಂದಿಗೆ ಅಥವಾ ಬಿಸಿ ನೀರಿನೊಂದಿಗೆ ಹೊಟ್ಟೆಯಲ್ಲಿ ತಕ್ಕೊಂಡಲ್ಲಿ ಒಂದೇ ಕ್ಷಣದಲ್ಲಿ ಮಸ್ತಕಶೂಲಿಯು ನಿಲ್ಲುವುದು. ಇದಕ್ಕೆ ಅನೇಕ ಶಿಫಾರಸ ಪತ್ರಗಳು ಉಂಟು.

೧ ಚೀಟಿಗೆ ೩ ಆಣೆ. ಸ್ಯಾಂಪಲ ಸಲುವಾಗಿ ೩ ಆಣೆ ಪೋಸ್ಟ ತಿಕೀಟುಗಳನ್ನು ಕಳಿಸಿದಲ್ಲಿ ಕಳಿಸುವೆವು.

ವಿಳಾಸ— ದಿ ಕರ್ನಾಟಕ ಮೆಡಿಕಲ ಸ್ಟೋರ್ಸ, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿ: ಸ್ಟೇಶನರೋಡ ಹುಬ್ಬಳ್ಳಿ.

ಹೀಗಾದರೆ ಮುಂದೇನು ಗತಿ?

ವರ್ತಮಾನ ಪತ್ರಗಳಿಂದೇ ನಾಡುಗಳ ಸುಧಾರಣೆಯಾಗುವದೆಂದು ಆಯಾ ನಾಡಿನವರು ಪತ್ರಿಕೆಗಳು ಹೊರಡಿಸಲಾರಂಭಿಸಿದರು. ಎಷ್ಟೋ ಮಹಾರಾಷ್ಟ್ರ ಆಂಧ್ರನಾಡುಗಳಲ್ಲಿ ಪತ್ರಿಕೆಗಳ ಸ್ಥಿತಿಗತಿಯು ಚನ್ನಾಗಿರುವದೆಂದೂ ಆ ಆ ನಾಡುಗಳಿಗೂ ಉಪಯೋಗವಾಗಿರುವದೆಂದೂ ಕೇಳುತ್ತೇವೆ. ನಮ್ಮ ಕನ್ನಡ ನಾಡಿನದು ಮಾತ್ರ ಬೇರೆ ಸ್ಥಿತಿ ಕಂಡುಬರುತ್ತದೆ. ಕಾಲು ಶತಮಾನದ ಕೆಳಗೆ ಪತ್ರಿಕೆಗಳ ಗತಿ ಹೀಗೇಕೆ ಎಂದು ಯಾರಾದರೂ ಕೇಳಿದರೆ, ಪತ್ರಿಕಾಕರ್ತರು ಸಮರ್ಥರಿಲ್ಲ, ಅವರೂ ವ್ಯವಸಾಯವಿಲ್ಲದವರು ಪತ್ರಕರ್ತರಾಗುತ್ತಾರೆ. ಅವರಿಗೆ ಇತ್ತ ಕನ್ನಡವೂ ಚನ್ನಾಗಿ ಬರುವದಿಲ್ಲ; ಅತ್ತ ಇಂಗ್ರೇಜಿ ತಿಳುವಳಿಕೆಯೂ ಅಷ್ಟಕಷ್ಟೆ; ಜನರು ಮರಾಠೀ ಪತ್ರಗಳ ನ್ನೋದುವದೇ ಬಹಳ. ಕನ್ನಡದ ಒಂದು ಭಾಗದ ಭಾಷೆ ಮತ್ತೊಂದು ಭಾಗದವರಿಗೆ ರುಚಿಸುವದಿಲ್ಲ. ಹೀಗಾಗಿ ಪತ್ರಿಕೆಗಳ ಅಭಿವೃದ್ಧಿಯಿಲ್ಲೆಂಬ ನಾನಾ ನ್ಯ ಉತ್ತರವು ಸಿಗುತ್ತಿತ್ತು. ಈಗಾದರೂ ಪತ್ರಿಕಾಕರ್ತರು ಒಬ್ಬರು ಬಿಟ್ಟು ಇಬ್ಬರು ಪದವೀಧರರಿದ್ದಾರೆ. ಇಂಗ್ರೇಜಿಪದವಿಯಿಲ್ಲದಿದ್ದರೂ ಕನ್ನಡದಲ್ಲಿ ಪಂಡಿತರೂ ಇಂಗ್ರೇಜಿಯಲ್ಲಿ ನಿಪುಣರೂ ಕಂಡುಬರುತ್ತಾರೆ ಕರ್ನಾಟಕದಲ್ಲೆಲ್ಲ ಕನ್ನಡದ ಅಭಿಮಾನವು ಹಬ್ಬಿ ಮರಾಠಿಗೆ ಬಹಿಷ್ಕಾರವೇ ಬಿದ್ದಂತಾಗಿದೆ. ಮೂರು ನಾಲ್ಕು ಪ್ರಾಂತಗಳ ಭಾಷೆಯನ್ನು ಬರಿಯಲಾರಂಭಿಸಿ ಎಲ್ಲರಿಗೂ ಎಲ್ಲ ಕಡೆಯ ಪತ್ರಿಕೆಗಳ ಮೇಲೆ ಆದರವಿರುವದು ಕಂಡುಬರುತ್ತದೆ ಹೀಗಿದ್ದಾಗ್ಯೂ ಬೆಟ್ಟಿಯಾದ ಸಂಪಾದಕರ ಮೊರೆ ಬಾಡಿದ್ದೇ ಇರುತ್ತದೆ. ಆತ್ಮನಿವೇದನವಿಲ್ಲದ ಪತ್ರಿಕೆಗಳೇ ಇಲ್ಲ!

ಕನ್ನಡದ ಅಭಿಮಾನವುಳ್ಳ ಸುಶಿಕ್ಷಿತರೂ ಧನಿಕರೂ ಈ ಬಗ್ಗೆ ನಾಲ್ಕು ಜನರು ಒಟ್ಟುಗೂಡಿ ವಿಚಾರ ಮಾಡಿದ್ದು ಕೇಳಬರುವದಿಲ್ಲ. ಹೀಗಾದರೆ ಮುಂದೇನು ಗತಿ ಎಂದು ಯೋಚನೆಯು ಹುಟ್ಟುತ್ತದೆ. ಸಮಂಜಸರಾದ ನಾಗರಿಕರು ಇದರ ಚರ್ಚೆಯನ್ನು ಮಾಡಬೇಕೆಂದು ಪ್ರಾರ್ಥನೆ.

ಧಾರವಾಡ ಯುಗಾದಿ } ನರಸಿಂಹಾಚಾರ್ಯ
ತಾ|| ೧೯೪೭ } ಪುರೋಹಿತ

ವಾಡ ಬ್ರಾಹ್ಮಣ ಸಭೆಯ ಪ್ರಶ್ನಮಾಲಿಕೆ.

—೧—

(೧) ಬ್ರಾಹ್ಮಣ ಯುವಕರು [illegible]ರಿತಾರ್ಥದ ವ್ಯವಸಾಯಗಳು ಬಂದಾಗಿ ಅವರು [illegible] ನಿರುದ್ಯೋಗಿಗಳಾಗಿರುವದರಿಂದ ಬ್ರಾಹ್ಮಣ ಸಮಾಜದ ಸ್ಥಿತಿಯು ಚಿಂತಾಜನಕವಾಗಿರುತ್ತದೆಂದು ನಿಮಗೆ ತೋರುತ್ತದೆಯೋ?

(೨) (ಅ) ಈ ಪ್ರಶ್ನೆಯನ್ನು [illegible] ಬಿಡಿಸುವದಕ್ಕಾಗಿ "ಬ್ರಾಹ್ಮಣಸಭೆ" ಯೆಂಬ ಸಂಸ್ಥೆಯನ್ನು ಸ್ಥಾಪಿಸುವದು ಅವಶ್ಯವೆಂದು ಕೆಲವರ [illegible]ಪ್ರಾಯವಿದೆ. ಇದರ ಬಗ್ಗೆ ನಿಮ್ಮ ಅಭಿಪ್ರಾ[illegible]? ಇದು ನಿಮಗೆ ಮಾನ್ಯವಿದ್ದರೆ ಅದರ [illegible] ಏನಿರಬೇಕು? ಮತ್ತು ಅದರ ಘಟನೆಯು [illegible] ?

(ಬ) ಇಂಥ ಸ[illegible]ಂದ [illegible] ದರೂ ಉಪಯುಕ್ತ ಕೆಲಸವಾದೀ[illegible]ಗೆ? [illegible]ವಾಗ [illegible]ಬಹುದೆಂದು ತಮಗೆ ತೋ[illegible] [illegible] ನಾದರೂ ನೀವು ಸೂ[illegible]?

(ಕ) ಬ್ರಾಹ್ಮಣ[illegible] [illegible]ರಕ್ಷೆಯಿಂದ ಬಾ[illegible] ದರಿಂದ ಕಾರ್ಯವನ್ನು [illegible] ಹಿಸಲಾಗದೆಂದು ಕೆ[illegible] [illegible]ವರ ಹೇಳುತ್ತದೆ. [illegible] ಬ್ರಾಹ್ಮಣನು [illegible] ಹಿತವನ್ನು ಸಾಧಿಸಲಿಕ್ಕೆ ಸಮರ್ಥನಾಗಿರುತ್ತಾನೆಂದು ವಾದಿಸುತ್ತಾನೆ. ಈ ವಿಧಾನಗಳು ಎಷ್ಟರ ಮಟ್ಟಿಗೆ ನಿಜವಾಗಿರುತ್ತವೆ? ಬ್ರಾಹ್ಮಣರಲ್ಲಿ ಒಕ್ಕೂಟ ಸಹಕಾರಿ ಸಂಘಶಕ್ತಿಯನ್ನು ಹುಟ್ಟಿಸುವ ಮಾರ್ಗಗಳಾವವು?

(ಡ) ಬ್ರಾಹ್ಮಣರಲ್ಲಿ ಜಾಗ್ರತೆಯನ್ನು ಹುಟ್ಟಿಸಿ ಅವರಲ್ಲಿ ಹೊಸ ಹೊಸ ವಿಚಾರಗಳನ್ನು ಹಬ್ಬಿಸಲಿಕ್ಕೆ ಮತ್ತು ಅವರಿಗೆ ಯೋಗ್ಯ ಮಾರ್ಗವನ್ನು ತೋರಿಸಲಿಕ್ಕೆ ಗಟ್ಟಿಗರಾದ ಸಾಕಷ್ಟು ಉಪದೇಶಕರು ಈ ಜಿಲ್ಹೆಯಲ್ಲಿ ಸಿಗಬಹುದೋ? ಸಿಗಬಹುದಾದ ಪಕ್ಷದಲ್ಲಿ ಅವರ ಹೆಸರುಗಳನ್ನು ಹೇಳಿರಿ.

(ಇ) ಮೇಲ್ಕಂಡ ಕಾರ್ಯವನ್ನು ನಿರ್ವಹಿಸಲಿಕ್ಕೆ ತಗಲುವ ಹಣವನ್ನು ಎಲ್ಲಿಂದ ಹಾಗು ಹ್ಯಾಗೆ ಕೂಡಿಸುವಿರಿ? ಅಥವಾ ಉಪದೇಶಕರ ಸ್ವಾರ್ಥತ್ಯಾಗದ ಮೇಲೆಯೇ ಅವಲಂಬಿಸಬಹುದೋ?

(೩) (ಅ) ಸದ್ಯಕ್ಕೆ ರೂಢಿಯಲ್ಲಿ ಇದ್ದ ಸರಕಾರಿ ನವಕರಿ ಮುಂತಾದ ವಿದ್ಯಾವ್ಯವಸಾಯಗಳನ್ನು ಬಿಟ್ಟು ಬ್ರಾಹ್ಮಣರು ಕೈಕೊಳ್ಳಬಹುದಾದ ಅನ್ಯ ಉಪಜೀವನದ ವ್ಯವಸಾಯಗಳು ಯಾವವು?

(ಬ) ಬ್ರಾಹ್ಮಣ ತರುಣರಲ್ಲಿ ಕೆಲವರನ್ನು ಒಕ್ಕಲತನದಲ್ಲಿ ತೊಡಗಿಸುವದು ಸಾಧ್ಯವೋ?

(ಕ) ಇತ್ತೀಚೆಗೆ ಬ್ರಾಹ್ಮಣರು ಒಕ್ಕಲತನವನ್ನು ತಮ್ಮ ಉಪಜೀವನದ ಸಾಧನವನ್ನಾಗಿ ಮಾಡಿಕೊಂಡು ಯಶಸ್ಸನ್ನು ಸಂಪಾದಿಸಿದ ಉದಾಹರಣೆಗಳು ನಿಮ್ಮ ಸ್ಥಳದಲ್ಲಿ ಅಥವಾ ನೆರೆಹೊರೆಯಲ್ಲಿ ಇದ್ದರೆ ಹೇಳಿರಿ.

(ಡ) ಬ್ರಾಹ್ಮಣರ ಒಕ್ಕಲತನವು ಕಡೆಗಾಣುವದಿಲ್ಲೆಂದು ಒಕ್ಕಲಿಗರ ಅಭಿಪ್ರಾಯವು ಇದಕ್ಕೆ ಕಾರಣವೇನು? ಈ ಸ್ಥಿತಿಯನ್ನು ಸುಧಾರಿಸುವದು ಶಕ್ಯವೋ? ನೀವು ಯಾವ ಉಪಾಯಗಳನ್ನು ಸೂಚಿಸುವಿರಿ.

(ಇ) ಪರಸ್ಪರ ಸಹಾಯಕಾರಿ ಸಂಘಗಳನ್ನು ಸ್ಥಾಪಿಸಿ ಅವುಗಳ ಮುಖಾಂತರವಾಗಿ ಒಕ್ಕಲತನವನ್ನು ಸಾಗಿಸುವದು ಈಗಿನ ಪರಿಸ್ಥಿತಿಯಲ್ಲಿ ಶಕ್ಯವೋ? ಇಂಥ ಸಂಘಗಳು [illegible]ವೆಯೋ?

(ಎಫ) ದೊಡ್ಡ ದೊಡ್ಡ ಜಮೀನದಾರರು ಕಲಿತ ಬ್ರಾಹ್ಮಣ ಯುವಕರನ್ನು ತಮ್ಮ ಕಾಮತದಲ್ಲಿ ತೊಡಗಿಸುವದು ಶಕ್ಯವೋ? ಶಕ್ಯವಿದ್ದರೆ ಉಭಯತರಿಗೂ ಹಿತವಾದೀತೇ? ಯಾವನೊಬ್ಬ ಜಮೀನದಾರನು ಕಲಿತ ಬ್ರಾಹ್ಮಣನನ್ನು ತನ್ನ ಕಾಮತದಲ್ಲಿ ಸೇರಿಸಿ ಲಾಭ ಹೊಂದಿದ ಉದಾಹರಣೆಗಳು ನಿಮಗೆ ಗೊತ್ತಿದ್ದರೆ ಹೇಳಬೇಕು.

(ಜಿ) ಒಕ್ಕಲತನದ ಉತ್ಪನ್ನದ ವ್ಯಾಪಾರವನ್ನು (agricultural trade) [illegible] ಬಗ್ಗೆ ಯಾವದೇ ತರದ ಸಂಘಗಳನ್ನು ಸ್ಥಾಪಿಸಿ ಅವುಗಳಲ್ಲಿ ಬ್ರಾಹ್ಮಣರನ್ನು ಸೇರಿಸುವದು ಸಧ್ಯಕ್ಕೆ ಶಕ್ಯವೋ?

(೪) ಬ್ರಾಹ್ಮಣರು ಉದ್ಯೋಗವನ್ನು [Industry] ಕೈಕೊಂಡು ಯಶಸ್ಸನ್ನು ಸಂಪಾದಿಸುವದು ಸಧ್ಯಕ್ಕೆ ಶಕ್ಯವೋ? ಯಶಸ್ಸನ್ನು ಸಂಪಾದಿಸಿದ ಉದಾಹರಣೆಗಳು ನಿಮಗೆ ಗೊತ್ತಿದ್ದರೆ ಹೇಳಿರಿ.

(೫) ಹತ್ತೀ ವ್ಯಾಪಾರದಲ್ಲಿ ತೊಡಗಿದ ಬ್ರಾಹ್ಮಣರನ್ನು ನೀವು ಬಲ್ಲಿರಾ? ಅವರ ಸ್ಥಿತಿಯು ಹ್ಯಾಗೆ ಅದೆ?

(೬) ತೋಟದ ಕೆಲಸವನ್ನು ಮಾಡುವ ಬ್ರಾಹ್ಮಣರು ನಿಮ್ಮಲ್ಲಿ ಅಥವಾ ನೆರೆಹೊರೆಯಲ್ಲಿ ಯಾರಾದರೂ ಇರುವರೋ? ಅವರ ಸಾಂಪತ್ತಿಕ ಸ್ಥಿತಿಯು ಹ್ಯಾಗೆ ಅದೆ? ಅದು ಹೀನವಾಗಿದ್ದರೆ ಅದನ್ನು ಸುಧಾರಿಸುವ ಬಗೆಗಳಾವವು?

(೭) ಬ್ರಾಹ್ಮಣ ವ್ಯಾಪಾರಸ್ಥರು ಯಾರಾದರೂ ಇರುವರೋ? ಬಹುಶಃ ಅವರು ಮಾಡುವ ವ್ಯಾಪಾರವು ಯಾವದು? ಅವರ ಸಾಂಪತ್ತಿಕ ಸ್ಥಿತಿಯು ಹ್ಯಾಗೆ ಅದೆ.

(ಅ) ವ್ಯಾಪಾರದಲ್ಲಿ ಯಶಸ್ಸನ್ನಾಗಲೀ, ಅಪಯಶಸ್ಸನ್ನಾಗಲೀ ಹೊಂದಿದ ಉದಾಹರಣೆಗಳಿದ್ದರೆ ಹೇಳಿರಿ. ಅಪಯಶಸ್ಸು ಹೊಂದಿದ್ದರೆ ಅದಕ್ಕೆ ಕಾರಣಗಳಾವವು? ಇವುಗಳನ್ನು ದೂರ ಮಾಡಲಿಕ್ಕೆ ನೀವು ಕಾರಣಗಳನ್ನು ಸೂಚಿಸುವಿರೋ?

(ಬ) ಬ್ರಾಹ್ಮಣರು ಕೈಕೊಳ್ಳಲಿಕ್ಕೆ ಯೋಗ್ಯವಾದ ಉದ್ಯೋಗ ಧಂದೆಗಳಾವವು? ಇವುಗಳಿಗೆ ಅಗದೀ ಕಡಿಮೆ ಭಾಂಡವಲವೆಂದರೆ ಎಷ್ಟು ಬೇಕಾಗುವದು?

(೮) (ಅ) ಬ್ರಾಹ್ಮಣರು ವ್ಯಕ್ತಿಶಃ ವ್ಯಾಪಾರ ಉದ್ಯೋಗಗಳಲ್ಲಿ ತೊಡಗಿದರೆ ಲಾಭಕರವಾದೀತೇ? ಅಥವಾ ಸಂಘಗಳನ್ನು ಏರ್ಪಾಡು ಮಾಡಿ ವ್ಯಾಪಾರ ಮಾಡಿದರೆ ಹಿತಕರವಾದೀತೇ?

(ಬ) ಅಲ್ಲಲ್ಲಿ ಬ್ರಾಹ್ಮಣ ಕಂಪನಿಗಳು ಮುಳುಗಿದ್ದು ಮತ್ತು ಬ್ರಾಹ್ಮಣ ವ್ಯಕ್ತಿಗಳ ಅಂಗಡಿಗಳು ಹಾಳಾಗಿದ್ದು ಕಂಡು ಬರುತ್ತದೆ. ಇದಕ್ಕೆ ಕಾರಣಗಳಾವವು? ಈ ಕಾರಣಗಳನ್ನು ಹ್ಯಾಗೆ ದೂರ ಮಾಡುವಿರಿ? ಬ್ರಾಹ್ಮಣೇತರ ಕಂಪನಿಗಳು ಮತ್ತು ಅಂಗಡಿಗಳು ಯಾಕೆ ಲಾಭಕರವಾಗುತ್ತವೆ?

(೯) ಇಡೀ ಬ್ರಾಹ್ಮಣ ವರ್ಗದ ಅಥವಾ ಉಪವರ್ಗಗಳ ಬ್ಯಾಂಕುಗಳನ್ನು ಸ್ಥಾಪಿಸಬೇಕೆಂದು ಕೆಲವರ ಅಭಿಪ್ರಾಯವಿದೆ. ಅವುಗಳು ಲಾಭದಾಯಕವಾಗಿ ನಡೆಯುವಂತೆ ನೀವು ಯಾವ ಉಪಾಯಗಳನ್ನು ಸೂಚಿಸುವಿರಿ?

(೧೦) ಬ್ರಾಹ್ಮಣ ಸ್ತ್ರೀಯರು ಕೈಕೊಳ್ಳಲಿಕ್ಕೆ ಯೋಗ್ಯವಾದ ಉದ್ಯೋಗ ಧಂದೆಗಳನ್ನು ಯಾವವನ್ನಾದರೂ ನೀವು ಸೂಚಿಸುವಿರೋ? ಬಳೀ ಇಗಿಸುವದು, ಶಲೀ ಮಾಡುವದು, ಪ್ಯಾಳೀ ಮಾಡುವದು ಮುಂತಾದ ಉದ್ಯೋಗಗಳನ್ನು ಸಾಗಿಸಿದರೆ ಹ್ಯಾಗಾದೀತು? ಇವುಗಳ ವ್ಯತಿರಿಕ್ತ ಇನ್ನಾವ ವೃತ್ತಿಗಳನ್ನು ಸೂಚಿಸುವಿರಿ?

(೧೧) ಪ್ರತಿ ಒಂದು ಬ್ರಾಹ್ಮಣ ಕುಟುಂಬದಿಂದ ಒಂದು ರೂಪಾಯಿಯಂತೆ ಅಥವಾ ಆ ತರದ ವಾರ್ಷಿಕ ವಂತು ಕೂಡಿಸುವ ಕಲ್ಪನೆಯು ನಿಮಗೆ ರುಚಿಸುವದೋ? ಇದು ನಿಮಗೆ ಮಾನ್ಯವಿದ್ದರೆ ಹಣವನ್ನು ಹ್ಯಾಗೆ ಕೂಡಿಸಬೇಕು? ಮತ್ತು ಅದರ ವಿನಿಯೋಗವನ್ನು ಯಾವ ರೀತಿಯಿಂದ ಮಾಡಬೇಕು?

೧೨ ಬ್ರಾಹ್ಮಣ ಸಮಾಜದ ಈಗಿರುವ ಜೀವನ ಸಾಧನಗಳ ವಿಷಯವಾಗಿ ಅವರ ವಿಚಾರಗಳಲ್ಲಿ ಬದಲಾವಣೆ ಮಾಡಲಿಕ್ಕೆ ಚಳವಳಿಯು ಅವಶ್ಯವೋ? ಅವಶ್ಯವಿದ್ದರೆ ಅದನ್ನು ಹ್ಯಾಗೆ ಸಾಧಿಸಬೇಕು?

೧೩ ಬ್ರಾಹ್ಮಣರು ಉದ್ಯೋಗ ಧಂದೆಗಳನ್ನು ಕೈಕೊಳ್ಳಬೇಕಾದರೆ ಅವರ ಸಾಮಾಜಿಕ ರೀತಿ ನಡವಳಿಗಳು ಅಡ್ಡಬರುತ್ತವೆಂದು ಕೆಲವರ ಅಭಿಪ್ರಾಯವಿರುವದು. ಈ ಅಭಿಪ್ರಾಯವು ನಿಮಗೆ ಮಾನ್ಯವಿದ್ದರೆ ಈ ಸಭೆಯು ಅಂಥ ಅಭಿಪ್ರಾಯವನ್ನು ತೆಗೆದುಹಾಕಬೇಕೆಂಬ ಒಂದು ಉದ್ದೇಶವನ್ನು ಇಟ್ಟುಕೊಳ್ಳ

ಬೇಕೋ? ಇಟ್ಟುಕೊಂಡರೆ ಅದನ್ನು ಹ್ಯಾಗೆ ಸಾಧಿಸಬೇಕು?

೧೪ ಪಾತ್ರಾಪಾತ್ರ ವಿಚಾರ ಮಾಡದೆ ಮನಸ್ಸಿಗೆ ಬಂದಂತೆ [illegible] ದಾನ ಧರ್ಮ ಮಾಡುವ ಹಣವನ್ನು ಒಟ್ಟು [illegible] ಏಕಮುಖದಿಂದ ವಿನಿಯೋಗ ಮಾಡು [illegible] ಹಿತಕರವೂ ಆದೀತೇ ಹ್ಯಾಗೆ?

೧೫ [illegible] ಪ್ರಶ್ನೆಗಳನ್ನು ನೀವು [illegible] ಸವಿಸ್ತರವಾಗಿ ಆ ಪ್ರಶ್ನೆಗಳನ್ನು ಕೇಳಿ

[illegible] ಅಸೆಂಬ್ಲಿ ಕೋಲಾಹಲ.

[illegible]

ಈ ಸಂಗತಿಯು ಸಂಭವಿಸಿದ ನಂತರ ಶ್ರೀ [illegible] ಸಾಹೇಬರಿಗೆ ರಜವು ಮುಂಜೂರು ಮಾಡುವ ಸಲುವಾದ ಸಭೆ ಸೇರಿತು. ಮಿ. ಸಿ. ಜ್ಞಾನದೇವ [illegible] ಗುಪ್ತ ಪೋಲೀಸರು ಅನೇಕ ಪ್ರಸಂಗಗಳಲ್ಲಿ ಸುಳ್ಳು ಪ್ರಚಾರ ಮಾಡುತ್ತಾರೆಂದು ವಾಯುಕೋರ್ಟಿನ ಜಡ್ಜರೇ ಅಂದಿರುತ್ತಾರೆ. ಇವರಿಂದ ಉಪಕಾರವಾಗುವದಕ್ಕಿಂತ ಅಪಕಾರವೇ ಹೆಚ್ಚಾಗುತ್ತದೆ. ಕಾರಣ ಈ ಖಾತೆಗೆ ರಜವು ಮಂಜೂರು ಮಾಡಬಾರದೆಂದು ವಾದಿಸಿದರು. ಕೂಡಲೆ ಸರ ಸ್ಟೀಫನ ಸಾಹೇಬರು ಇದು ರೀತಿಗನುಸರಿಸಿದ ಆರೋಪವಲ್ಲ. ಅಸಭ್ಯತನದ್ದೆಂದು ಉತ್ತರ ಕೊಡಲು- ತಾವು ಪುರಾವೆ ಕೊಡಲಿಕ್ಕೆ ಸಿದ್ಧರಿದ್ದೇವೆಂದು ಪುನಃ ಮಿ. ಜ್ಞಾನದೇವಯು ಪ್ರತ್ಯುತ್ತರಿಸಿದರು. ಆಗ ಅಧ್ಯಕ್ಷರು ಮಧ್ಯಸ್ಥಿ ಮಾಡಿ, ಪೋಲೀಸರ ಮೇಲಿನ ಆರೋಪಗಳನ್ನು ಹಿಂದಕ್ಕೆ ತೆಕ್ಕೊಳ್ಳಬೇಕೆಂದು ಮಿ. ಜ್ಞಾನದೇವಯವರಿಗೆ ಅಂದರು. ಇವರು ಒಡಂಬಡದಾದರು. ಯುರೋಪಿಯನ್ನ ಮತ್ತು ಹಿಂದೀ ಎಂಬ ಎರಡು ಪಕ್ಷಗಳಾದವು. ಉಭಯ ಪಕ್ಷಗಳ ನಡುವೆ ಒದರಾಟ, ಚೀರಾಟ ಪ್ರಾರಂಭವಾಯಿತು. ಅಧ್ಯಕ್ಷರು ಜ್ಞಾನದೇವಯವರಿಗೆ ಕ್ಷಮೆ ಬೇಡಿಕೊಳ್ಳಬೇಕೆಂದರು. ಇವರು ಎಂದಿಗೂ ಕ್ಷಮೆ ಕೇಳುತ್ತಿರಲ್ಲೆಂದರು. ಇವರಿಂದ ಮತ್ತಿಷ್ಟು ಗೊಂದಲವೆದ್ದು ಸ್ವರಾಜ್ಯ ಮತ್ತು ಸ್ವತಂತ್ರ ಪಕ್ಷದ ಅನಿಸಲ್ಪಟ್ಟಂಥವರೆಲ್ಲ ಮೆಂಬರರು ಸಭೆ ಬಿಟ್ಟು ಹೊರಬಿದ್ದರು. ಬಹುತೇಕವಾಗಿ ಯುರೋಪಿಯನ ಮೆಂಬರರೇ ಉಳಿದರು. ಆವರು ಆಗ ಊರೊಳಗೆ ಉಳಿದವನೇ ಗೌಡನೆಂದು ಅಂದಿನ ಎಲ್ಲ ಠರಾವುಗಳನ್ನು ಪಾಸಮಾಡಿಕೊಂಡರು ಈ ದಿನ ದೇಶಬಂಧು ದಾಸ, ಬ್ಯಾರಿಸ್ಟರ ಚಕ್ರವರ್ತಿ ಬಾಬೂ ಸೇನಗುಪ್ತರು ಕೌನ್ಸಿಲಕ್ಕೆ ಬಂದಿದ್ದಿಲ್ಲ.

ಮುಂಬಯಿಯ ಗಿರಣಿಗಳ ಸ್ಥಿತಿಯು.

— ೦ —

ಮುಂಬಯಿಯ ಗಿರಣಿಗಳ ವರ್ತಕರು ದೊಡ್ಡ ತೊಂದರೆಯಲ್ಲಿ ಸಿಕ್ಕಿದ್ದಾರೆ. ಸರಕಾರದವರು ಸುಂಕವನ್ನು ತೆಗೆದು ಹಾಕದ್ದರಿಂದ, ಕೂಲಿಕಾರರ ಸಂಬಳ ಕಡಿಮೆ ಮಾಡಲಿಕ್ಕು, ಅಥವಾ ವಾರದಲ್ಲಿ ಎರಡು ದಿನ ಗಿರಣಿಗಳನ್ನು ಬಂದ ಮಾಡಬೇಕೆಂಬ ವಿಚಾರದಲ್ಲಿ ತೊಡಗಿದ್ದಾರೆ. ಯಾವ ವಿಚಾರದಿಂದಾದರೂ, ಗಿರಣಿಗಾರರಿಗೂ ಕೂಲಿಕಾರರಿಗೂ ಹಾನಿ ಇರುತ್ತದೆ. ಎರಡು ದಿವಸ ಗಿರಣಿಗಳನ್ನು ಬಂದಮಾಡಿ- ಸಂಬಳ [illegible] [illegible] ದಕ್ಕಿಂತ, ಸಮ್ಮೇಳನಗಳನ್ನು ಮುಗಿಸಿ ಒಂದಲ್ಲಿ ಕೂಡಿಕೊಂಡು ಇಡೀ ದೇಶ ಗಿರಣಿಗಳನ್ನು ಪೂರಾ ಬಂದು ಮಾಡಿ [illegible] ವ್ಯಾಪಾರಕ್ಕೆ [illegible] ಉತ್ತೇಜನ ಕೊಟ್ಟಂತಾಗುತ್ತದೆ. ಒಂದು ಸ್ಥಾನದ ಹಿತಕ್ಕಾಗಿ [illegible] ಈ ಸಂಗತಿಯು ತಿಳಿಯಬೇಕಾಗಿದೆ. ಆದಾಗ್ಯೂ ಗೊತ್ತಿದ್ದರೂ, ಹೊರತಾಗಿದ್ದರೂ, ಅಸೆಂಬ್ಲಿಯ ಠರಾವಿನಂತೆ ವರ್ತಿಸಿದರೆ ಬಾಗಿ ನಡೆದಂತಾಗುವದೆಂಬ ದುರ್ಬುದ್ಧಿಯಿಂದ ಸುಂಕವನ್ನು ಕಡಿಮೆ ಮಾಡಲೊಲ್ಲರು. ಸರಕಾರದ ದುರಭಿಮಾನದಿಂದ ಜಪಾನದ ಉತ್ಕರ್ಷ, ಹಿಂದುಸ್ಥಾನ ಗಿರಣಿಗಳ ಅಪಕರ್ಷ ಮತ್ತು ಕೂಲಿಕಾರರ ಗೋಳಾಟವೇಳುವ ಹೊತ್ತು ಮಾತ್ರ ಒದಗಿದೆ.

ರೇಲ್ವೆಯ ಭಯಂಕರ ಅಪಘಾತ

ಅನೇಕ ಜನರು ನದಿಯಲ್ಲಿ ಬಿದ್ದು ಸತ್ತರು.

—೦—

ಪೋರ್ವದಿಂದ ಪಾಲಿಸಕ್ಕೆ ಹೋಗುವ ಹೊಗೆ ಬಂಡಿಗೆ ಅಪಘಾತವಾಗಿ ಎರಡು ಡಬ್ಬಿಗಳು ನದಿಯಲ್ಲಿ ಬಿದ್ದು ಅನೇಕರು ಮೃತ್ಯು ಮುಖದಲ್ಲಿ ಬಿದ್ದರು.

ವಿವಿಧ ವಿಷಯಗಳು.

—೦—

ಹು[illegible]ಯ ವಿದ್ಯುತ್ತಿನ ಕಂಪನಿಯು ವಿದ್ಯುತ್ತನ್ನು ಹುಟ್ಟಿಸುವ ಕಾರಖಾನೆಯ ತಳಪದಿಯ ಕಲ್ಲನ್ನು ಕೂಡಿಸುವ ಸಮಾರಂಭವು ಯುಗಾದಿಯ ದಿನ ಶ್ರೀ. ಸಿದ್ಧಾರೂಢ ಮಹಾಸ್ವಾಮಿಗಳಿಂದ ನೆರವೇರಿಸಲ್ಪಟ್ಟಿತು. ಸ್ವಾಮಿಗಳವರು ಒಂದೂವರೆ ತಾಸಿನ ತನಕ ಅಲ್ಲಿದ್ದು, ಎಲ್ಲ ವಿಧಾನಗಳನ್ನು ಸಂತೋಷದಿಂದ ನೆರವೇರಿಸಿ, ಕಂಪನಿಯು ಉತ್ಕರ್ಷ ಹೊಂದಲೆಂದು ಆಶೀರ್ವದಿಸಿದರು. ಪ್ರಾಯವಾದ ಸಮಾರಂಭ ತೀರಿದ ಬಳಿಕ, ಒಂದಂಥ ಅತಿಥಿ ಅಭ್ಯಾಗತರ ಭಾವಪಟ ತೆಕ್ಕೊಳ್ಳಲ್ಪಟ್ಟಿತು.

ಈ ಕಂಪನಿಯ ಪ್ರಥಮ ವಾರ್ಷಿಕ ಸಭೆಯು ಸೋಮವಾರದ ಸಾಯಂಕಾಲದಲ್ಲಿ ಪ್ರಾಣಶಂಕರ ಪೇಠಿಯಲ್ಲಿ ಕಂಪನಿಯ ಕಚೇರಿಯಲ್ಲಿ ಕೂಡಲಿಕ್ಕಿದೆ.

[illegible] ಸಾಹೇಬರ ಕೊಲೆಯ ಪ್ರಕರಣದ ಪೂರ್ವ ವಿಚಾರಣೆಯು ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ಮುಗಿದ ಬಳಿಕ, ಅದನ್ನು [illegible] ಆರೋಪಿಗಳ [illegible] ಸಾಹೇಬರಿಗೆ ವಿನಂತಿ [illegible] ಮುಂಬಯಿ ಸರಕಾರದವರು ಈ ಅರ್ಜಿಯನ್ನು ವಿರೋಧಿಸುವರು. [illegible] ಜನ ಸಾಕ್ಷಿದಾರರಿದ್ದು, ಇವರನ್ನು [illegible] ಆರೋಪಿಗಳನ್ನು [illegible] ಬಹಳವಾಗಿ [illegible] ಆಗುವದೆಂದು ಇವರ ವಿರೋಧದ ಮುಖ್ಯ ಸಂಗತಿಗಳಾಗಿವೆ.

ಲೆಜಿಸ್ಲೇಟಿವ್ಹ ಅಸೆಂಬ್ಲಿಯಲ್ಲಿ ನಾಗಪೂರದ ಸಮ್ಮತಿ ವಯದ ಕಾಯದೆಯು ಪಾಸಾಯಿತು. ಈಗಿನ ಕಾಯದೆಯು ೧೩ ವರ್ಷವಾಗಿದೆ. ಈ ಕಾಯದೆ ಮಾಡುವಾಗ ದೇಶದ ಮುಂದೆ ದೊಡ್ಡ ಗಲಾಟೆ ಎದ್ದಿತ್ತು. ಆದರ ಸಹಸ್ರಾಂಶ ಚಳವಳಿಯು ಈಗೇಳಲಿಲ್ಲ. ಇಂಥದೊಂದು ಕಾಯದೆಯು ಅಸೆಂಬ್ಲಿಯಲ್ಲಿ ಬಂದಿದೆಂದು ಎಷ್ಟೋ ಜನರಿಗೆ ಗೊತ್ತಿರಲಿಲ್ಲ. ಪಂಡಿತ ಮಾಲವಿಯಾ ರಂಗಾಚಾರ್ಯ ಮೊದಲಾದ ಸನಾತನ ಧರ್ಮಾಭಿಮಾನಿಗಳು ಇದನ್ನು ವಿರೋಧಿಸಿದರೂ, ಬಹುಮತದಿಂದ ಕಾಯದೆ ಪಾಸಾಯಿತು. ಮದುವೆಯಾದವಳ ಹೆಂಡತಿ ೧೪ ವರ್ಷದಾಗುವ ತನಕ ಮದುವೆಯಾಗದವಳು ೧೬ ವರ್ಷದವಳಾಗುವ ತನಕ ಸಹವಾಸ ಮಾಡಕೂಡದೆಂದು ಹೊಸ ಕಾಯದೆಯು ಕಟ್ಟಳೆಯಾಗಿರುತ್ತದೆ.

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ, ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ

ಬಂಡಿಗೆಯು ಆರುಲಕ್ಷದ ಮೇಲುಂಟು. ಚೆಕ್ಕು, ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ನಡೆಲ್ಪಡುವದು. ಕಾಯೀಮು ಮತ್ತು ಬೇರೆ ತರದ ಡಿಪಾಜಿಟುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ಆರ್. ಎಮ್. ಜಾನ್ ಎಂಡ ಸನ್ಸ. ಹುಬ್ಬಳ್ಳಿ.

ಎಜಂಟ್ಸ ಫೋರ ಕಾರಬೋನಿಕ್ ಆಸಿಡ್ ಗ್ಯಾಸ, ... ಆಫ್ ಏರೆಟೆಡ ವಾಟರ್ಸ.

ನಮ್ಮಲ್ಲಿ ಸಿಗುವ ಸಾಮಾನುಗಳ ವಿವರ

ಫ್ರುಟ್‌ಗ್ಯಾಸ ಸಿಲಿಂಡರಗಳು ... ಗ್ಲಾಸ ಮತ್ತು ಜರ್ಮನ ... ಕಾರ್ಕ್, ಎಮ್. ಟಿ. ಸೋಡಾ ವಾಟರ ಬಾಟಲಗಳು, ... ನಾವು



ತಾವು ಆರ್ಡರ ಬೇಗ ಕಳಿಸಿರಿ

ರೀನ ಪೆಪ್ಸಿ ೧ ... ಸೋಡಾವಾಟರ್ ಮಶಿನುಗಳು ಮತ್ತು ... ಬಾಟಲಿಗಳ ಎಸೆನ್ಸಗಳು, ಅಮೇರಿಕನ್ ಐಸ್‌ಕ್ರೀಮ ಸೋಡಾ, ಜಿಂಜರ, ಕೋಲಾ ... ಲೆಮನ್ ನಂ. ೧ ಲೆಮನ್ ಜುಯಿಸ್ ಸೋಡಾ ನಂ. ೧ ಮೆಂಗೊ, ಆರೆಂಜ, ಫಾಯಿನ ... ಕ್ವಿನಿನ್ ಟಾನಿಕ್, ರಾಜಬರಿ ನಂ. ೧ ಕೋಲ ನಂ. ೧ ಸ್ಟೋನ ಜಿಂಜರ್ ಬೀರ ನಂ. ೧, ... ರಿಂಗ್ಸ, ಬೇರೆ ಇತರ ಮಶಿನರಿ ಪಾರ್ಟುಗಳು ನಮ್ಮಲ್ಲಿ ಸಿಗುತ್ತವೆ. ಮತ್ತು ಶುದ್ಧ ನೀಲಗಿರಿ ಎಣ್ಣೆಯು ಎಲ್ಲ ತರದ ಬಾಟಲ್ಲಗಳು ಸಿಗುತ್ತವೆ. ವ್ಯಾಪಾರಸ್ಥರಿಗೆ ಒಳ್ಳೇ ಕಮೀಶನ ಕೊಡುತ್ತೇವೆ. ನಮ್ಮಲ್ಲಿ ಕಸ್ಟಂದ ಮಿಲಿಟರಿ ಸಿಂಗಲ ಕಾಟ್ಲ್ಸ, ಸೋವಿ ದರದಿಂದ ಮಾರಲಿಕ್ಕೆ ಸಿಗುತ್ತವೆ.

ಅಡ್ರೆಸ್— R. M. John & Sons.
Mission Compound HUBLI

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಕಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

—

ಪತ್ರಿಕೆಯ ವರ್ಗಣೀ ದರ

ನಿತ್ಯಪತ್ರಿಕೆಗೆ

೧೨ ತಿಂಗಳಿಗೆ	೧೨—೮—೦ ರೂ
೬ ,,	೬—೮—೦ ರೂ
೩ ,,	೪—೦—೦ ರೂ
ವಾರಪತ್ರಿಕೆಗೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ
ಮ್ಯಾನೇಜರ ವಿಜಯ, ಧಾರವಾಡ

ನೋಟೀಸು.

ಮಿ. ಮುರ್ತಾಜ ಸಾಹೇಬ ವ|| ಇಮಾಮ ಸಾಹೇಬ ಕರಜಗಿ ಸಾ. ಹುಬ್ಬಳ್ಳಿ ಇವರಿಗೆ—

ಕೆಳಗೆ ಹೆಬ್ಬಟ್ಟಿನ ಗುರ್ತ ಮಾಡುವ ಇಮಾಮಬು ಕೋಮ ಮರ್ತಾಜ ಸಾಹೇಬ ಕರಜಗಿ ಸಾಹು ಈ ನೋಟೀಸಿನ ದ್ವಾರಾ ತಿಳಿಸುವದೇನೆಂದರೆ-

ನೀನು ನನ್ನ ಮದಿವೆಯ ಗಂಡನಾಗಬೇಕು. ಮಹಮದಿ ಧರ್ಮಶಾಸ್ತ್ರ ಪ್ರಕಾರ ನೀನು ನನಗೆ ಮಾಹರಿನ ಹಣಾ ಕೊಡತಕ್ಕದ್ದು ನೀನು ನನಗೆ ಕೊಡತಕ್ಕ ಸದರ ಮಹಾರಿನ ಹಣದ ಬಾಬತು ನನಗೆ ಹುಬ್ಬಳ್ಳಿ ಶಹರ ಮಹಬೂಬಪೂರದಲ್ಲಿ ಪಿಂಜಾರಗಲ್ಲಿಯಲ್ಲಿರುವ ಮನಿ ಮ್ಯುನಿಸಿಪಾಲಿಟಿ ನಂಬರ ೧೧೫೭ ಇದನ್ನು ನನ್ನ ಹೆಸರಿನಿಂದ ತಾರೀಖು ೧೯ನೇ ಜೂನ ೧೯೩೪ನೇ ಇಸವಿಯ ದಿವಸ ಎಳನೂರು ರೂಪಾಯಕ್ಕೆ ಖರೀದಿ ಬರಕೊಟ್ಟು, ಖರೀದಿ ಪತ್ರವನ್ನು ನೊಂದಣೀ ಮಾಡಿಸಿ ಕೊಟ್ಟಿರುತ್ತೀದಿ ಆಗಿನಿಂದ ನಾನು ಸದರ ಮನೆಯನ್ನು ನನ್ನ ಮಾಲಕಿ ನಾತೆದಿಂದ ವಹಿವಾಟ ಮಾಡುತ್ತೇನೆ. ಆದರೆ ಈಗ ಯಾವ ದುರ್ಬುದ್ಧಿಯಿಂದಲೋ ಸದರ ಮನೆಯನ್ನು ಮರತ ಖರೀದಿ ಮಾಡಿಕೊಡಲಿಕ್ಕೆ ನೀನು ನನಗೆ ತಗಾದಿ ಮಾಡುತ್ತೀದಿ ಹಗಲೆಲ್ಲ ತ್ರಾಸ ಕೊಡುತ್ತೀದಿ ಈ ಗಂತೂ ಧಮಕೀ ಕೊಡುತ್ತೀದಿ ನಾಲ್ಕು ಜನ ಗುಂಡರನ್ನು ಕರಕೊಂಡು ಗೊಂದಲ ಹಾಕುತ್ತೀದಿ ನೀನು ಈ ಪ್ರಕಾರ ವರ್ತಿಸಬಾರದೆಂದು ನಿನಗೆ ನಾಲ್ಕು ಜನ ಸಂಭಾವಿತರು ಹೇಳಿದರೂ ಕೇಳಲಿಲ್ಲ. ಹೆಚ್ಚಿನ್ನು ಧಮಕೀ ಕೊಡುತ್ತಿರುವಿ ಹೊಡೆಯುವದು ಬಡಿಯುವದು ಮಾಡುತ್ತೀದಿ ನಾನು ಜೀವಕ್ಕೆ ಹೆದರಿಕೊಂಡು ಈಯುದೇನು ಯೋಗ್ಯ ಸಲ್ಲಾ ತಕ್ಕೊಂಡು ನಿನಗೆ ಈ ನೋಟೀಸು ಕೊಟ್ಟಿರುತ್ತೇನೆ. ನೀನು ಈ ನೋಟೀಸು ಮುಟ್ಟಿದಂದಿನಿಂದ ನನ್ನ ಮನೆಯಲ್ಲಿ ಇಲಕೂಲ ಕಾಲಿಡಕೂಡದು. ಹರ ಬಂದರೆ ನಿನ್ನ ಮೇಲೆ ಅಗಳೀಕ ಮಾಡಿದ ಬಗ್ಗೆ ಮತ್ತು ನನಗೇನಾದರೂ ದುಖಾಪತ ಮಾಡಿದರೆ ಆ ಬಗ್ಗೆ ನಿನ್ನ ಮೇಲೆ ಕಾಯದೇಶೀರ ಫೌಜದಾರಿಯಲ್ಲಿ ಫಿರ್ಯಾದಿ ಮಾಡುವೆನು ನೀನು ನನ್ನ ಕೂಡ ಚಲೋ ರೀತಿಯಿಂದ ನಡೆಯುವ ಲಕ್ಷಣ ಕಾಣದ್ದರಿಂದ ನಾನು ನಿನ್ನ ಕೂಡ ಪ್ರಸಂಗ ಮಾಡಲಿಕ್ಕೆ ಇಚ್ಛಿಸುವದಿಲ್ಲ ಆದ ಕಾರಣ ನೀನು ಹೆಂಡತಿ ಎಂಬ ಕಾರಣದಿಂದ ನಹ ನನ್ನ ಮನೆಯಲ್ಲಿ ಕಾಲು ಹಾಕಬಾರದು ಅಂತಾ ಕೊಟ್ಟ ನೋಟೀಸು ವಿನಹ ಕಾರಣ ನೋಟೀಸು ಕೊಡುವ ಪ್ರಸಂಗ ಬಂದದ್ದರಿಂದ ಈ ನೋಟೀಸಿನ ಖರ್ಚ ನಿನ್ನ ತಲೆಯ ಮೇಲಿರುತ್ತದೆ ತಿಳಿಯುವದು ತಾ. ೨೮ ಮಾರ್ಚ ೧೯೩೫ನೇ ಇಸವಿ.

ಈ ಎಡಗೈ ಹೆಬ್ಬಟ್ಟಿನ ಗುರ್ತ ಇಮಾಮಬು ಕೋಮ ಮುರ್ತಾಜ ಸಾಹೇಬ ಕರಜಗಿ ಈಕೆ ಕೈದು ಇರುತ್ತದೆ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ಹಿತ ಪತ್ರ — **ವಿಜಯ** — ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ

ವರ್ಷ ೬) ಧಾರವಾಡ ರವಿವಾರ ತಾರೀಖು ೨೯ನೇ ಮಾರ್ಚ ೧೯೨೫ (ಸಂಚಿಕೆ ೨೨

ಬೇಸಿಗೆ ಪ್ರಾರಂಭವಾಯಿತು!

ದನಗಳ ಆಹಾರವಾದ ಕಣಿಕೆಯನ್ನು ಕಾಯಿರಿ !!

ಕಿರ್ಲೋಸ್ಕರ ಕಣಿಕೆ ಯಂತ್ರವನ್ನು ಉಪಯೋಗಿಸಿರಿ !!

ನಮ್ಮ ಕಾರ್ಖಾನೆಯಲ್ಲಿ ಎರಡು ನಮೂನೆಯ ಕಣಿಕೆ ಕೊರೆಯುವ ಯಂತ್ರಗಳು ತಯಾರಾಗುತ್ತವೆ. ಒಂದು ಕೈಯಂತ್ರ ಬೆಲೆ ೨೦ರೂ. ಇನ್ನೊಂದು ಗಾಣಯಂತ್ರ ಬೆಲೆ ೮೫ ರೂಪಾಯಿ ಸಣ್ಣ ಕಮತಿಗಳವರು ಕೈ ಯಂತ್ರವನ್ನು, ದೊಡ್ಡ ಕಮತಿಗಳವರು ಗಾಣ ಯಂತ್ರವನ್ನೂ ಉಪಯೋಗಿಸಬಹುದು. ಕಣಿಕೆಯು ೪ ಇಂಚುಗಳಿಂದ ಒಂದು ಇಂಚಿನ ವರೆಗೆ ಕೊರೆಯಲ್ಪಡುತ್ತದೆ.

ಸವಿಸ್ತರ ಸಂಗತಿಯ ಬಗ್ಗೆ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ } ಕಿರ್ಲೋಸ್ಕರವಾಡಿ.
ಜಿಲ್ಲಾ ಸಾತಾರಾ.

ತುಸು ಕ್ರಮದಲ್ಲಿ ಮತ್ತು ಎರಡೇ ಆಣೆಯಲ್ಲಿ
ತಲೆಶೂಲೆ, ಅರತಲೆಶೂಲೆ, ಮಸ್ತಕ ಶೂಲೆಯನ್ನು ಒಂದೇ ಕ್ಷಣದಲ್ಲಿ ನಿಲ್ಲಿಸುವ ಸಂಜೀವಿನಿಯಿಂದ
ಬಂದಾಗುವ ನಮ್ಮ

ನೊಮೆಂಟ ಕ್ಯೂರ

ವನ್ನು ಒಮ್ಮೆಯಾದರೂ ತಕ್ಕೊಳ್ಳಿರಿ. ಮೂರಾಣೆಯ ಟಿಕೇಟು ಕಳಿಸಿದರೆ ಸ್ಯಾಂಪಲ (ಮಾದರಿ) ಕಳಿಸುವೆವು.

ನಮ್ಮ ಔಷಧಾಲಯದಲ್ಲಿ ಡಾಕ್ಟರರ ಪ್ರಿಸ್ಕ್ರಿಪ್ಷನ್ ಪ್ರಕಾರ ಅತ್ಯಂತ ಕಾಳಜಿ ಮತ್ತು ದಕ್ಷತೆಯಿಂದ ಔಷಧವನ್ನು ತಯಾರ ಮಾಡಿ ಕೊಡುವೆವು. ದರ ತೀರ ಸುಲಭ.

ವಿಳಾಸ— ದಿ ಕರ್ನಾಟಕ ಮೆಡಿಕಲ ಸ್ಟೋರ್ಸ, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ
ಸ್ಟೇಶನರೋಡ ಹುಬ್ಬಳ್ಳಿ.

ತುರುಕ ದರಬಾರದಲ್ಲಿರಬೇಕಾಗಿರುವ ಗೌರವ ಕಾಯ ರಾಯಭಾರಿಗಳು ಕಾನ್ಸಟಾಂಟಿನೋಪಲದಲ್ಲಿ ರಬೇಕೆಂದು ಸಂಯುಕ್ತರ ವಿಚಾರವು. ಇವರು ಅಂಗೋರಾಕ್ಕೆ ಬರಬೇಕೆಂದು ತುರುಕ ಸರಕಾರದವರು ಒತ್ತಾಯ ಪಡಿಸುತ್ತಿದ್ದಾರೆ.

ವರ್ಹಾಡವನ್ನು ನಾಗಪೂರದಿಂದ ಅಗಲಿಸಿ, ಅದಕ್ಕೆ ಸ್ವತಂತ್ರವಾದ ಕೌನ್ಸಿಲ ಕೊಡುವ ವಿಚಾರ ವನ್ನು ಹಿಂದುಸ್ಥಾನ ಸರಕಾರದವರು ನಡಿಸಿದ್ದಾರೆ.

ಶ್ರೀ ದಾಬಡೆ ವರ್ಷ ಫಂಡ.

ಶ್ರೀಯುತ ಅನಂತರಾವ ದಾಬಡೆ ಇವರ ವಿಷಯವಾಗಿ ಕರ್ನಾಟಕದ ಪ್ರಮುಖರು ಹೊರಡಿಸಿದ ಪ್ರಕಟನಾ ಪತ್ರವನ್ನು ನಾನು ಓದಿ ನೋಡಿದೆನು. ಅವರ ಸಾಹಸದ ವಿಷಯವಾಗಿ ನನಗೆ ಹೆಚ್ಚಿನ ಪರಿಚಯವಿಲ್ಲದಿದ್ದರೂ ಅವರು ಕೈಕೊಂಡ ಕೆಲಸವು ಬಹಳ ಸ್ತುತ್ಯವಿದೆ. ದಾಬಡೆ ಇವರು ಮೂವತ್ತು ವರ್ಷ ಸಾರ್ವಜನಿಕ ಕೆಲಸ ಮಾಡುತ್ತಾ ಬಂದದ್ದು ಪ್ರಯೋಜನಕಾರಕ ಚರಿತ್ರೆಗೆ ಗೌರವ ಮಾತ್ರ ಇದೆ. ಈಗ ಇವರಿಗೆ ಒದಗಿದ ಅಡಚಣಿ ದೂರ ಮಾಡುವದು ಕರ್ನಾಟಕದವರ ಕರ್ತವ್ಯವಾಗಿರುತ್ತದೆ. ಪ್ರತಿಯೊಬ್ಬರು ಸಹಾಯ ಕೊಡುವರೆಂದು ಬಯಸುತ್ತೇನೆ.

೨೭-೩-೨೫ } ನಾಗೇಶಶಾಸ್ತ್ರಿ ಜೋಶಿ
ಶ್ರೀ. ಶಂಕರಾಚಾರ್ಯ ಸಂಸ್ಕೃತ ಪಾಠಶಾಲೆ, ಧಾರವಾಡ

ನನ್ನ ಮಿತ್ರರಾದ ರಾ. ಭಕ್ತರಾದ ದಾಬಡೆ ಯವರನ್ನು ನಾನು ಅನೇಕ ವರ್ಷಗಳಿಂದ ಬಲ್ಲೆನು. ಇವರು ಮನಮುಟ್ಟಿ ದೇಶಸೇವೆಯನ್ನು ಮಾಡುವವ ರಲ್ಲಿ ಒಬ್ಬರಿರುತ್ತಾರೆ. ದೇಶಸೇವೆಯನ್ನು ಮಾಡು ವಾಗ ಇವರಿಗೆ ಒದಗಿದ ಹಲಕೆಲವು ವಿಪತ್ತುಗಳು ನನಗೆ ಅವಗತವಿರುತ್ತವೆ. ಇವರ ಸಹಾಯಾರ್ಥ ವರ್ಷಫಂಡು ಕೂಡಿಸುವ ಕುರಿತು ಕರ್ನಾಟಕದ ಕೆಲವು ಪ್ರಮುಖ ದೇಶಭಕ್ತರು ಹೊರಡಿಸಿದ ಪ್ರಕಟನಾ ಪತ್ರಿಕೆಯನ್ನು ಓದಿ ನೋಡಿದೆನು. ಅದು ಬಹಳ ಸ್ತುತ್ಯರ್ಹವದೆ. ಇದಕ್ಕೆ ಕರ್ನಾಟಕದ ಅಭಿಮಾನಿಗಳೆಲ್ಲರು ಮನಃಪೂರ್ವಕವಾಗಿ ಸಹಾಯ ಮಾಡು ವರೆಂದು ನಾನು ನಂಬುತ್ತೇನೆ.

ಧಾರವಾಡ — ಗ. ಮ. ಹೊನ್ನಾಪೂರಮಠ, ವಕೀಲ
೨೭-೩-೧೯೨೫

ವಿಜಯ.

ಧಾರವಾಡ ತಾ- ೨೯-೩-೨೫ ನೇ ಇಸ್ವಿ

ಕರೇ ಕಾಯದೆಯ ಕೃಷ್ಣ ಕಾರಸ್ಥಾನ.

—o—

ಲಾರ್ಡ ರೀಡಿಂಗ ಸಾಹೇಬರು ಮುಂದಾಗಿ ಅಸೆಂಬ್ಲಿ ಮತ್ತು ಕೌನ್ಸಿಲ ಆಫ ಸ್ಟೇಟದ ಸಮ್ಮತಿ ಪಡಕೊಳ್ಳದೆ, ಅಥವಾ ಅದಕ್ಕೆ ಈ ಸುದ್ದಿ ಸಹ ಹೇಳದೆ, ದಬ್ಬಾಳಿಕೆಯ ಕಾಯದೆಯನ್ನು ಮೂರ್ತಿಮಂತ ಧೀತ್ಯುತ್ಪಾದಕವಾಗಿ ಕೌನ್ಸಿಲದ ಮುಂದೆ ತಂದರು. ಅಲ್ಲಿ ಇದು ನಾಮಂಜೂರಾದ ಕೂಡಲೆ, ಲಾರ್ಡ ರೀಡಿಂಗ ಸಾಹೇಬರು ಇದನ್ನು ಅಸೆಂಬ್ಲಿಯಲ್ಲಿಟ್ಟರು. ಅಲ್ಲಿಯೂ ಇದಕ್ಕೆ ಸದ್ಗತಿಯಾಗಲಿಲ್ಲ. ಅನಂತರ ಬಾದರಪದ ಒಪ್ಪಿಗೆ ತರಿಸಿ, ಮೂಲ ಕಾಯದೆಗೆ ಬದಲಾಗಿ ಉಪ ಕಾಯದೆಯನ್ನು ಕೂಡಿಸಿ, ಅಸೆಂಬ್ಲಿಯ ಮುಂದೆ ತಂದರು. ಹಾಯಕೋರ್ಟಿಗೆ ಅಪೀಲು ಮಾಡುವ ಒಂದು ಕಲಮನ್ನು ಕಾಯಮವಾಗಿಟ್ಟು ಉಳಿದ ಎಲ್ಲ ಕಲಮುಗಳನ್ನು ಅಸೆಂಬ್ಲಿಯವರು ರದ್ದು ಮಾಡಿದರು. ಈ ಪ್ರಕಾರ ತಮ್ಮ ಬಿಲ್ಲಿಗೆ ಮೂರಾಬತ್ತಿ ಮಂಗಳಾರುತಿಯಾದ್ದನ್ನು ಕಂಡು, ಲಾರ್ಡ ರೀಡಿಂಗ ಸಾಹೇಬರು ತಮ್ಮ ಬತ್ತಳಿಕೆಯಲ್ಲಿ ಅಕ್ಷಯವಾಗಿರುವ ಸರ್ಟಿಫಿಕೇಟವೆಂಬ ಬಾಣವನ್ನು ತೆಗೆದು ಕಾಯದೆಯನ್ನು ಮಂಜೂರ ಮಾಡಿ, ಕೌನ್ಸಿಲ್ ಆಫ ಸ್ಟೇಟದ ಮಂಜೂರಿಗೆ ಕಳಿಸಿದರು. ಅಲ್ಲಿ ಸರಕಾರದ ಮೆಂಬರರಾದ ಮಿ. ಕ್ರೆರಾರ ಸಾಹೇಬರು ಈ ಕಾಯದೆಯ ಸಮರ್ಥನೆಗಾಗಿ ಮಾಡಿದ ವಿಧಾನವು ನಗಲವರನ್ನು ನಗಿಸುವಂತಿದೆ. ಇಂಥ ಕಾಯದೆಯು ಪಾಸಾಗುವದೇ ಸ್ವರಾಜ್ಯಕ್ಕೆ ನಿರ್ವಿಘ್ನಕಾರಿಯೆಂದು ಸಾಹೇಬರು ಉಸುರಿದ್ದಾರೆ. ಲಾರ್ಡ ರೀಡಿಂಗ ಸಾಹೇಬರು ರಾಜ್ಯ ಕಾರಭಾರದ ಜವಾಬದಾರಿಯು ತಮ್ಮದು. ಪ್ರಜಾ ನೆಮ್ಮದಿಗೆ ತಾವು ಹೊಣೆಗಾರರೆಂದು ಈ ಮೊದಲು ನುಡಿದಿದ್ದಾರೆ. ತಮ್ಮದೇ ಜವಾಬದಾರಿಯಾದ ಬಳಿಕ, ಕಾಯದೆ ಪಾಸ ಮಾಡುವದಕ್ಕಾಗಿ ಕರಕರದ ಹಂಚಿಕೆಗಳಿಂದ ಮೆಂಬರರ ಮನವೊಲಿಸುವದೇಕೆಂದು ಮೆಂಬರರು ಪ್ರಶ್ನೆ ಮಾಡುತ್ತಿದ್ದು ಇದಕ್ಕೆ ಉತ್ತರ ಕೊಡಲು ಸರಕಾರವು ಅಸಮರ್ಥವಾಗಿರುತ್ತದೆ. ಲಾರ್ಡ ರೀಡಿಂಗ ಸಾಹೇಬರು ಹಿಂದುಸ್ಥಾನದ ನೈತಿಕ ಪ್ರತಿನಿಧಿಯಾಗಿ ಸ್ವರಾಜ್ಯದ ಶಿಫಾರಸು ಮಾಡಲೋಸುಗ ವಿಲಾಯತಿಗೆ ಹೋಗುವರೆಂದು ಉಬ್ಬುಬ್ಬಿ ಭಾಷಣ ಮಾಡಿದ ಬಾಬೂ ಬಿಪಿನಚಂದ್ರ ಪಾಲರೇ ಈ ಕರೇ ಕಾಯದೆಯನ್ನು ನಿಷೇಧಿಸುವಾಗ-

ಈ ಬೇಜವಾಬದಾರ ಸರಕಾರವು ಪರಾವಲಂಬಿಯಾದಂಥ ದೇಶದ ನ್ಯಾಯವಾದ ಮಹತ್ವಾಕಾಂಕ್ಷೆಗಳನ್ನು ಪಡೆಬಡೆಯ ಪ್ರಯತ್ನಿಸುತ್ತಿರುವದು. ದಬ್ಬಾಳಿಕೆಯ ಕಾಯದೆಯಿಂದ ಬಂಗಾಲಿಗಳು ಹಿಂದೆ ಹೆದರಲಿಲ್ಲ. ಈಗ ಹೆದರಿಲ್ಲ. ಸರ್ಟಿಫಿಕೇಟು ಕೊಟ್ಟು ಕಾಯದೆ ಪಾಸ ಮಾಡಿರಿ. ಘಟನಾತ್ಮಕವಾದ ರೀತಿಯಿಂದಲ್ಲ, ಸರ್ಟಿಫಿಕೇಟದಿಂದ ಬೇಕಾದಷ್ಟು ರಾಜ್ಯವಾಳಿರಿ ''

ಎಂಬದಾಗಿ ಸ್ಮರಣಗೊಂಡು ಭಾಷಣ ಮಾಡಿದರು. ಪಿಸ್ತೂಲು ಹಣೆಗೆ ಹಿಡಿದು ಕಾಯದೆ ಮಾಡಬೇಕೆಂದಿರುತ್ತೀರೆಂದು ಪಂಡಿತ ಮೋತಿಲಾಲರು ಅಂದಿರುತ್ತಾರೆ. ಆದರೂ ಸರಕಾರದವರು ದುರಾಗ್ರಹ ಬಿಡದೆ, ಇದನ್ನು ಕೌನ್ಸಿಲ ಆಫ ಸ್ಟೇಟಕ್ಕೆ ಕಳಿಸಿದರು. ಅಲ್ಲಿಯೂ ಸರಕಾರಕ್ಕೆ ಬಿರುಸಾದ ಮಾತುಗಳೇ ಆದವು. ಮದ್ರಾಸಿನ ಮಿ. ನಟೇಶನರು ಹಿಂದುಸ್ಥಾನವನ್ನು ಮತ್ತೊಂದು ಆಯರ್ಲಂಡ ಮಾಡಬೇಡಿರೆಂದಿದ್ದಾರೆ. ಲಾರ್ಡ ರೀಡಿಂಗ ಸಾಹೇಬರು ತಾವು ಹೊತ್ತ ಜವಾಬದಾರಿಯ ವಿಷಯವಾಗಿ ನಮಗೆ ತಿಳಿಸಲಿಲ್ಲದ ಕಾರಣ, ನಾವು ಇದನ್ನು ಪಾಸಮಾಡಲಾರೆವೆಂದು ಮಿ. ಯಾಮಿನಖಾನರು ಟೀಕಿಸಿದ್ದಾರೆ. ಈ ಕಾಯದೆಯನ್ನು ಪಾಸಮಾಡುವದು ಕೇವಲ ಫಾರ್ಸ ಆಗಿರುತ್ತದೆಂದು ಶ್ರೀ. ವೇದಮೂರ್ತಿಯವರು ನುಡಿದು, ಸಭೆ ಬಿಟ್ಟು ಹೊರಗೆ ಬಂದರು. ಶ್ರೀ. ರಾಮದಾಸರೂ ಇವರನ್ನು ಹಿಂಬಾಲಿಸಿದರು. ಹಿರಿಯರೆಂಬ ಬುದ್ಧಿವಂತರು ಬಹುಮತದಿಂದ ಕಾಯದೆ ಪಾಸ ಮಾಡಿ, ತಮ್ಮ ಪಂಚ ವಾರ್ಷಿಕ ಅವತಾರ ಸಮಾಪ್ತ ಮಾಡಿಕೊಂಡರು.

ಹಿಂದುಸ್ಥಾನದ ಸರ್ವ ಸೇನಾಧಿಪತಿಯಾಗಿರುವ ಲಾರ್ಡ ರಾವಲಿನ ಸಾಹೇಬರಿಗೆ ಮಹಾತ್ಮರಿಗಾದಂಥ ಅಪೆಂಡಿಸ ರೋಗವಾಯಿತು. ಡಾಕ್ಟರರು ಇದನ್ನು ಕೊಯ್ದರು. ಸಾಹೇಬರು ಸ್ವಲ್ಪ ಶಿವಸ ಸೆಟ್ಟಗಿದ್ದರು. ಈಗ ಇವರಿಗೆ ಅಂತ್ಯಕಾಲ ಸಮೀಪಿಸಿರುತ್ತವೆಂದು ತಾರಿನ ವರ್ತಮಾನ ಪ್ರಸಿದ್ಧವಾಗಿರುತ್ತದೆ.

ಸಪ್ಟಂಬರದಿಂದ ಲೆಜಿಸ್ಲೇಟಿವ್ಹ ಅಸೆಂಬ್ಲಿಯ ಅಧ್ಯಕ್ಷರು ಲೋಕನಿಯುಕ್ತರಾಗುವರು. ಸ್ವರಾಜ್ಯ ಪಕ್ಷೀಯರು ಶ್ರೀ ಪಟೇಲರನ್ನು ತಮ್ಮ ವತಿಯಿಂದ ಉಮೇದವಾರರಾಗಿ ನಿಲ್ಲಿಸುವರು.

ಜೇಲಿನ ಆಡಳಿತೆಯ ವಿರುದ್ಧ ಠರಾವು.

—o—

ಮದ್ರಾಸ ಮತ್ತು ಸಂಯುಕ್ತ ಪ್ರಾಂತದ ಕೌನ್ಸಿಲ ಸಭೆಗಳಲ್ಲಿ ಸರಕಾರದ ಜೇಲಿನ ಆಡಳಿತೆಯನ್ನು ನಿಷೇಧಿಸಿದ ಠರಾವು ಪಾಸಾದವು. ಅಸಹಕಾರಿಗಳು ತುರಂಗಕ್ಕೆ ಹೋಗಿ ದೇಶದ ಮೇಲೆ ಮಾಡಿದ ಹಲವು ಉಪಕಾರಗಳಲ್ಲಿ ತುರಂಗದ ಹುಳುಕುಗಳನ್ನು ಹೊರಗೆ ಹಾಕಿದ್ದು ಮಹತ್ವದ್ದಾಗಿರುತ್ತದೆ. ತುರಂಗದಲ್ಲಿ ಯುರೋಪಿಯನ ಮತ್ತು ಹಿಂದೀ ಕೈದಿಗಳನ್ನು ನಡಿಸಿಕೊಳ್ಳುವ ವಿಷಯವಾಗಿದ್ದ ಜಾತಿಪಕ್ಷಪಾತವು ಅತ್ಯಂತ ಗರ್ಹಣೀಯವಾಗಿರುತ್ತದೆ. ವಿಸಾಪೂರದ ಜೇಲಿನಲ್ಲಿಯ ನಿಂದ್ಯ ಪ್ರಕಾರಗಳಿಗಿಂತ ಇವು ಅಸಹಿಷ್ಣುವಾಗಿರುತ್ತವೆ. ಉತ್ತರ ಹಿಂದುಸ್ಥಾನದಲ್ಲಿ ಬೇಸಿಗೆಯಲ್ಲಿ ಯುರೋಪಿಯನ ಕೈದಿಗಳಿಗೆ ಕಂಗಾಳಿ ಬರೆದು, ಅವರ ಸುಖ ಸಾಮ್ರಾಜ್ಯ ಹೆಚ್ಚಾಗಲೆಂದು ಹಿಂದೀ ಕೈದಿಗಳನ್ನು ಅವರ ಪಂಖಾ ಜಗ್ಗುವದಕ್ಕಾಗಿ ಹಚ್ಚುವರು. ಇದು ಗರ್ಹಣೀಯವಲ್ಲವೇ? ಅರಿವೆ ಅಂಚಡಿಗಳ ವಿಷಯವಾಗಿಯಂತೂ ನೋಡಿದ ಕೂಡಲೆ ಪಶ್ಚಾತ್ತಾಪವೆನಿಸುತ್ತದೆ. ಈತನು ಕೈದಿಯಲ್ಲ; ಜೇಲಿನ ಒಬ್ಬ ಅಧಿಕಾರಿಯಾಗಿರಬೇಕೆಂದು ಯುರೋಪಿಯನನ ವೇಷ ಪೋಲಿನ ಬಟ್ಟೆಗಳಿಂದ ಅನಿಸುತ್ತದೆ. ಅದೇ ದೇಶೀ ಕೈದಿಯ ಸ್ವರೂಪ ನೋಡಿರಿ. ಹರಿದು ಹದಿನೆಂಟು ಕಡೆಯಲ್ಲಿ ಹೊಲಿದಂಥ ಹುರುಬರಕ ಕಂಬಳಿಯ ಗಿಡ್ಡಂಗಿ, ಲಂಡ ಚಣ್ಣ ಮತ್ತು ಉಳಿದ ಕೂಡಲೆ ಹಾರುವಂಥ ಟೊಪ್ಪಿಗೆ, ಇಷ್ಟು ಈತನ ವಸ್ತ್ರ ಪ್ರಾವರಣಗಳು. ನೋಡಿದ ಕೂಡಲೆ ಕೈದಿಯೆಂದು ಕಂಡು ಬರುವನು. ಅನ್ನವಂತೂ ನರಿ ನಾಯಿಗಳು ಸಹ ತಿನ್ನದಂತಹದೆಂದು ಕಡುಕರ ಮತ್ತು ಕಟುತರ ಟೀಕೆಗಳಾಗಿವೆ. ಇದರ ಹೊರ್ತು ರಾಜಕೀಯ ಕೈದಿಗಳನ್ನು ವಿಲಾಯತಿಯಲ್ಲಿ ನಡಿಸಿಕೊಳ್ಳುವಂತೆ ನಡಿಸಿಕೊಳ್ಳಬೇಕೆಂದು ಕೌನ್ಸಿಲ ಮತ್ತು ಅಸೆಂಬ್ಲಿಯಲ್ಲಿ ಠರಾವು ಪಾಸಾದರೂ, ಆ ವಿಷಯವಾಗಿ ಸರಕಾರದ ಅಂತಃಕರಣವು ದ್ರವಿಸಲೊಲ್ಲದು. ಮದ್ರಾಸ ಇಲಾಖೆಯಲ್ಲಿ ಶ್ರೀ. ನಾರಾಯಣ ಮೆನನ ಮತ್ತು ಮುಂಬಯಿ ಇಲಾಖೆಯಲ್ಲಿ ಶ್ರೀ. ದಿವಾಕರರನ್ನು ಬಂಧಮುಕ್ತ ಮಾಡಬೇಕೆಂಬ ಠರಾವು ಪಾಸಾದರೂ, ಸರಕಾರವು ತನ್ನ ದುರಾಗ್ರಹ ಬಿಟ್ಟಿಲ್ಲ. ಒಟ್ಟಿನಿಂದ ಜೇಲಿನ ಆಡಳಿತೆಯು ಅತ್ಯಂತವಾಗಿ ದೂಷಣೀಯವಾಗಿದ್ದು, ಇದನ್ನು ನಿಷೇಧಿಸಿದ ಠರಾವು ಸರಕಾರ ಪಕ್ಷದ ಬಹುಮತವಿರುವಂಥ ಮದ್ರಾಸ ಮತ್ತು ಅಲ್ಹಾಬಾದ ಇಲಾಖೆಗಳಲ್ಲಿ ಪಾಸಾದದ್ದು ಪ್ರಶಂಸಾರ್ಹವಾಗಿರುತ್ತದೆ.

ಬಾವಲಾ ಸಾಹೇಬರ ಕೊಲೆಯ ವಿಚಾರಣೆಗೆ ಪ್ರಾರಂಭ.

—೦—

ಗುರುವಾರದ ದಿವಸ ಮುಂಬಯಿಯಲ್ಲಿ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರಾದ ಮಿ. ರಾಂಗಣೇಕರ ಇವರ ಮುಂದೆ ಬಾವಲಾ ಸಾಹೇಬರ ಕೊಲೆಯ ವಿಚಾರಣೆಗೆ ಪ್ರಾರಂಭವಾಯಿತು. ವಿಚಾರಣೆಯನ್ನು ಕೇಳುವದಕ್ಕಾಗಿ ಸಾವಿರಾರು ಜನರು ತಂಡ ತಂಡವಾಗಿ ನೆರೆದರು. ಆದರೆ ಸ್ಥಳಾಭಾವದ ಮೂಲಕ ತುಸು ಜನರಿಗೆ ಒಳಗೆ ಸ್ಥಳ ದೊರೆಯಿತು.

ಬ್ಯಾರಿಸ್ಟರ ಕೆಂಪ ಸಾಹೇಬರು ಅಪರಾಧದ ಸ್ವರೂಪ ವರ್ಣನೆ ಮಾಡಿ, ಆರೋಪಿಗಳ ಮೇಲಿನ ಆರೋಪದ ಕಲಮುಗಳನ್ನು ಓದಿ ತೋರಿಸಿದರು. ಅನಂತರ ಬಾವಲಾ ಸಾಹೇಬರ ಮೋಟಾರ ಡ್ರಾಯವ್ಹರನಾದ ಮಹಮುದ ಶಾಫಿಯು ಮಾಫೀ ಸಾಕ್ಷೀದಾರನಾದ್ದರಿಂದ, ಈತನಿಗೆ ಮಾಫೀ ಕೊಡಬೇಕೆಂದೂ, ವಿಚಾರಣೆಯು ಮುಗಿಯುವ ವರೆಗೆ ಈತನು ಪೋಲೀಸರ ವಶದಲ್ಲಿರಬೇಕೆಂದೂ ಕೋರ್ಟಿಗೆ ವಿನಂತಿ ಮಾಡಿಕೊಂಡರು. ಈತನು ಪೋಲೀಸರ ವಶದಲ್ಲಿರದೆ, ಮ್ಯಾಜಿಸ್ಟ್ರೇಟರ ವಶದಲ್ಲಿ ಅಂದರೆ ಜೇಲಿನಲ್ಲಿರಬೇಕೆಂದು ಆರೋಪಿಗಳ ಬ್ಯಾರಿಸ್ಟರರಾದ ಮಿ. ವೆಲಿಣಕರರು ಸೂಚಿಸಲು ಅದಕ್ಕೆ ಕೋರ್ಟಿನವರು ಸಮ್ಮತಿ ಕೊಟ್ಟರು.

ಕೊಲೆಗೆ ಕಾರಣವಾದ ಮೋಟಾರನ್ನು ಲ್ಯಾಪ್ಟೆನಂಟರಾದ ಮಿ. ಫಾನಸೆ ಮತ್ತು ಸೊಂಡೆ ಇವರು ಕೊಂಡರೆಂದೂ, ಕೊಲೆಯ ಪೂರ್ವದಲ್ಲಿ ಆರೋಪಿಗಳೆಲ್ಲರು ಸೋಳಕರರ ಮುಂಬಯಿಯ ಬಂಗಲೆಯಲ್ಲಿದ್ದರೆಂದೂ ಬ್ಯಾರಿಸ್ಟರ ಕೆಂಪ ಸಾಹೇಬರು ಕೊಲೆಯ ನಿರೂಪಣೆಯಲ್ಲಿ ಹೇಳಿದ್ದಾರೆ.

ಅನಂತರ ಫಿರ್ಯಾದಿ ಮುಮತಾಜ ಬೇಗಮಳ ಸಾಕ್ಷಿಗೆ ಪ್ರಾರಂಭವಾಯಿತು. ಇವಳು ಇಂದೂರ ದರಬಾರದಲ್ಲಿ ತನಗಿದ್ದ ಸಂಬಂಧವನ್ನು ವಿವರವಾಗಿ ಹೇಳಿದಳು. ಬಳಿಕ ಬ್ಯಾರಿಸ್ಟರ ವೆಲಿಣಕರರು ಇವಳ ಕ್ರಾಸ ಮಾಡಿದರು. ಕ್ರಾಸ ಸ್ವಲ್ಪೇ ಆಯಿತು. ಅನಂತರ ಇವಳ ಮಲತಂದೆಯಾದ ಮಹಮದಲ್ಲಿ ಮಹಮ್ಮದ ಖುಸಫನ ಸಾಕ್ಷಿಯಾಯಿತು.

ಮುಮತಾಜ ಬೇಗಮಳು ಕೋರ್ಟಿಗೆ ಒಂದು ಅರ್ಜಿಯನ್ನು ಕೊಟ್ಟು, ಅದರಲ್ಲಿ ಈ ಅಪರಾಧದಲ್ಲಿ ಸೇರಿದಂಥ ಎಲ್ಲ ಆರೋಪಿಗಳ ಹೆಸರು ತಿಳಿಯಬೇಕೆಂದು ವಿನಂತಿ ಮಾಡಿಕೊಂಡಿದ್ದಾಳೆ.

ಈ ಬಗ್ಗೆ ವಿಶೇಷ ಸಂಗತಿಗಳನ್ನು ನಾಳಿನ ಸಂಚಿಕೆಯಲ್ಲಿ ಬರೆಯುವೆವು

ಇಂದೂರಿನ ಹುರಂಗದಲ್ಲಿ ಶಂಕರರಾವ ಗಾವಡೆ ಎಂಬವನಿರುತ್ತಾನಷ್ಟೇ; ಈತನ ಮೇಲೆ ಹಣದ ದುರುಪಯೋಗ ಮಾಡಿದ ಆರೋಪವುಂಟು. ಇದು ಜೋರ ಕಾರಣವು. ಒಳ ಕಾರಣವು ಬೇರೆಯುಂಟು ಈತನಿಗೂ ಮುಮತಾಜಳಿಗೂ ಸಂಬಂಧವಿದೆಂಬ ಸಂಶಯದಿಂದ ಮಹಾರಾಜರು ಹೊರಕಾರಣದಿಂದ ಈತನನ್ನು ಹುರಂಗದಲ್ಲಿ ಕೊಳಿಸುತ್ತಿದ್ದಾರೆಂದು ಹೇಳುವರು. ಆರೋಪಿಗಳಲ್ಲೊಬ್ಬನು ಶಂಕರರಾಯನಿಂದಲೇ ದೊಡ್ಡ ಸ್ಥಿತಿಗೆ ಬಂದಿದ್ದಾನೆ. ತನ್ನ ಯಜಮಾನನ್ನು ಬಂಧಮುಕ್ತ ಮಾಡಿಸುವ ಉದ್ದೇಶದಿಂದ ಈತನು ಕೆಲವರೊಂದಿಗೆ ಸಂಚು ಮಾಡಿದನು. ಮುಮತಾಜಳನ್ನು ಮಹಾರಾಜರ ಮುಂದೆ ನಿಲ್ಲಿಸಿ, ಅವಳಿಂದ ನಿಜ ಸಂಗತಿಯನ್ನು ಹೇಳಿಸಿದರೆ ಮಹಾರಾಜರು ಶಂಕರರಾಯನನ್ನು ಬಂಧಮುಕ್ತ ಮಾಡುವರೆಂದು ಭಾವಿಸಿ, ಇವಳನ್ನು ಮುಂಬಯಿಯಲ್ಲಿ ಮೋಟಾರದಲ್ಲಿ ಹಾಕಿಕೊಂಡು ಹೋಗುವ ವ್ಯೂಹ ರಚಿಸಿದನು. ಆದರೆ ಅದು ನಿಷ್ಫಲವಾಗಿ ಬಾವಲಾಸಾಹೇಬರ ಕೊಲೆಯಾಯಿತು. ತಾನಂತೂ ಕೊಲೆಯ ಸಂಚು ಮಾಡಲಿಲ್ಲೆಂದು ಈ ಆರೋಪಿಯು ಕಬೂಲಿ ಜವಾಬು ಕೊಡತಕ್ಕವನಿದ್ದಾನೆಂದು ಸುದ್ದಿಯಾಗಿದೆ.

ಕರೇ ಜನರ ವಿರುದ್ಧ ಕೆಂಪು ಜನರ ಚಳವಳಿಯು.

—೦—

ದಕ್ಷಿಣ ಆಫ್ರಿಕೆಯಲ್ಲಿರುವ ಗ್ರೋರಕಾಯರು ಹಿಂದೀ ಜನರ ಅಂಗಡಿಗಳಲ್ಲಿ ವ್ಯಾಪಾರ ಮಾಡಲಿಕ್ಕೆ ಹೋಗಬಾರದೆಂದು ಚಳವಳಿಯನ್ನು ಎಬ್ಬಿಸಿ ಪಿಕೆಟಿಂಗ ಮತ್ತು ಸತ್ಯಾಗ್ರಹ ಪ್ರಾರಂಭಿಸಿದ್ದಾರಷ್ಟೇ; ಇವರು ಸ್ವಜನರ ಹಿತವನ್ನು ಬಯಸಿ, ವಿನಂತಿ ಪತ್ರಿಕೆಗಳನ್ನು ಪ್ರಸಿದ್ಧ ಮಾಡಿದ್ದು ಅದರ ಸಾರಾಂಶವು ಕೆಳಗೆ ಕೊಟ್ಟಂತಿರುತ್ತದೆ.

ನೀವು ಕೂಲೀ ಜನರ ಕೂಡ ಉದ್ದಿಮೆ ವ್ಯವಹಾರ ಮಾಡುತ್ತೀರಾ? ಹೀಗಾದರೆ ನಿಮ್ಮ ಗಂಡ ಮತ್ತು ಮಕ್ಕಳು ಕೆಲಸ ಕಳಕೊಂಡು ಅವರ ಬದಲಿ ಕೂಲೀ ಜನರು ಸೇರಿದರೆಂದು ತಿಳಿಯಿರಿ. ಪ್ರತಿಯೊಂದು ಮನೆಯ ಹೆಂಗಸು ● ಮಾತಿನ ವಿಚಾರ ಮಾಡಬೇಕಾಗಿದೆ. ಏಕೆಂದರೆ- ಇದು ಅತ್ಯಂತ ಮಹತ್ವದ ಪ್ರಶ್ನವು. ನೀವು ಕೂಲಿಗಳ ಕೂಡ ವ್ಯವಹಾರ ಮಾಡುವದರಿಂದ ವರ್ಣಭೇದವನ್ನು ತೆಗೆದು ಹಾಕಿ, ನಿಮ್ಮ ಮಕ್ಕಳಿಗೆ ಕೆಲಸ ಸಿಗದಂತೆ ಮಾಡುತ್ತೀರೆಂಬದನ್ನು ಧ್ಯಾನದಲ್ಲಿಡಿರಿ. ನೀವು ಅವರ ಕೂಡ ವ್ಯವಹಾರ ಮಾಡಿದರೆ ನಿಮ್ಮನ್ನು ಕುಲಕಂಟಕರೆಂದು ತಿಳಿಯಬೇಕಾಗುವದು. ನಾವು ಬಿಳೀ ಜನರ ಶ್ರೇಷ್ಠತ್ವವನ್ನೇ ಸ್ಥಾಪಿಸಬೇಕೆಂದಿದ್ದೇವೆ. ಇದರಿಂದ ನಮ್ಮ ಸಾಮಾಜಿಕ ಮತ್ತು ಸಾಂಪತ್ತಿಕ ಪರಿಸ್ಥಿತಿಗೆ ಉಂಟಾಗಿರುವ ಭಯ ನಿವಾರಣೆಯಾಗುವದು.

ವಿವಿಧ ವರ್ತಮಾನಗಳು

—೦—

ಬಿಜಾಪೂರ ಜಿಲ್ಲೆಯ ಪರಿಷತ್ತನ್ನು ಗಲಗಲಿ ಗ್ರಾಮದಲ್ಲಿ ನೆರೆಸುವರು. ಒಂದು ಸಾವಿರ ರಾಟೆಗಳ ಪ್ರಸಾರ ಮಾಡಿದರೆ ತಾವು ಸಭೆಗೆ ಬರುವಂತೆ ಮಹಾತ್ಮರು ತಿಳಿಸಿದ್ದಾರೆ. ಮುಂದಾಳುಗಳು ಆ ತರದ ಪ್ರಯತ್ನ ನಡೆಸಿದ್ದಾರೆ.

ಮುಂಬಯಿಯ ಗಿರಣಿಗಳ ಕೂಲಿಕಾರರು ನಾಮದಾರ ಗವ್ಹರ್ನರ ಸಾಹೇಬರನ್ನು ಕಂಡು, ತಮ್ಮ ಕೂಲಿಯನ್ನು ಕಡಿಮೆ ಮಾಡುವದರಿಂದ, ಸಾರ್ವಜನಿಕ ಶಾಂತತೆಯು ಭಂಗವಾದರೆ ಅದಕ್ಕೆ ತಾವು ಜವಾಬದಾರರಲ್ಲೆಂದು ತಿಳಿಸಿದ್ದಾರೆ.

ಲಾರ್ಡ ಲಿಟನ ಸಾಹೇಬರು ಗವ್ಹರ್ನರ ಜನರಲರಾದ ಬಳಿಕ, ೧೬ ನೇ ಎಪ್ರಿಲದ ದಿವಸ ಶಿಮ್ಲಾಕ್ಕೆ ಬಂದು, ೧೭ ದಿವಸ ಅಲ್ಲಿ ವಾಸವಾಗಿರುವರು. ಉತ್ತರ ಮಂಡಲದ ಮ್ಯುನಿಸಿಪಾಲಿಟಿಯವರು ಇವರಿಗೆ ಮಾನಪತ್ರ ಕೊಡುವರು.

ಧಾರವಾಡ—

ಕಳೆದ ಸೋಮವಾರದ ದಿವಸ ಇಲ್ಲಿಯ ಕ್ರಿಶ್ಚನ್ ಲೋಕಲಬೋರ್ಡಿನ ಚುನಾವಣಿಯ ಕೂಡಿ ಲೋಕಲ ಫಂಡನ್ನು ಒಂದೂವರೇ ಆಣೆ ಮಾಡಬೇಕೆಂದು ಬಹುಮತದಿಂದ ಗೊತ್ತಾಯಿತು. ಸಕ್ತಿಯ ಶಿಕ್ಷಣಕ್ಕಾಗಿ ಈ ಫಂಡನ್ನು ವಿನಿಯೋಗಿಸುವದಲ್ಲದೆ ರಸ್ತೆಯ ಜವಾಬದಾರಿಯನ್ನು ಬಾಯಿಗೂಡಿಸುವದಕ್ಕಾಗಿ ವಿನಿಯೋಗಿಸುತ್ತಾರೆ.

ಧಾರವಾಡದ ಫಸ್ಟ್‌ಕ್ಲಾಸ ಕೋರ್ಟಿಗೆ ಗದಗ, ರೋಣ, ಶಿಗ್ಗಾವಿ ಮತ್ತು ಹುಬ್ಬಳ್ಳಿಯಿಂದ ಎಷ್ಟು ದಾವೆಗಳು ಬಂದವೆಂದು ಮಿ. ಕಂಬಳಿಯವರು ಕೌನ್ಸಿಲದಲ್ಲಿ ಕೇಳಿದ ಪ್ರಶ್ನೆಗೆ ೧೮೭, ೭೩ ಮತ್ತು ೩೪ ಎಂದು ಉತ್ತರ ಕೊಟ್ಟಿದ್ದಾರೆ. ಫಸ್ಟ್‌ಕ್ಲಾಸ ಕೋರ್ಟು ಧಾರವಾಡದಿಂದ ಹುಬ್ಬಳ್ಳಿಗೆ ತರಬೇಕೆಂದು ಇವರು ಪ್ರಯತ್ನಿಸುವದಕ್ಕೆ ಇದು ಮುಂಗುರುತಿನ ಪ್ರಶ್ನವಾಗಿರುತ್ತದೆ.

ಬೆಳಗಾವಿಯಲ್ಲಿ ಕಾಂಗ್ರೆಸದ ವೇಳೆಯಲ್ಲಿ ಕರ್ನಾಟಕದ ಏಕೀಕರಣದ ವಿಷಯವಾಗಿ ಗೊತ್ತಾದ ಠರಾವಿನನ್ವಯ, ಹುಬ್ಬಳ್ಳಿಯಲ್ಲಿ ಬರುವ ತಿಂಗಳ ೫ ನೆಯ ತಾರೀಖಿನ ದಿವಸ ಅಪರಾಹ್ಣದಲ್ಲಿ ಮ್ಯುನಿಸಿಪಾಲಿಟಿಯ ಹಾಲಿನಲ್ಲಿ ಒಂದು ಆಲೋಚನಾ ಸಭೆಯು ಕೂಡತಕ್ಕದ್ದಿರುತ್ತದೆ.

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ, ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ

ಜೋಡಿಗೆಯು ಆರುಲಕ್ಷದ ಮೇಲಿಂಟು. ಚೆಕ್ಕು, ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರವಾಗಲ್ಪಡುವದು. ಶಾಳೀಮ ಮತ್ತು ಬೇರೆ ತರದ ಡಿಪಾಜಿಟುಗಳಿಗೆ ಚನ್ನಾಗಿ ಬಡ್ಡಿ ಕೊಡಲಾಗುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ಆರ್. ಎಮ್. ಜೋನ್ ಎಂಡ ಸನ್ಸ. ಹುಬ್ಬಳ್ಳಿ.

ಎಜಂಟ್ಸ ಫೋರ ಕಾರಬೋನಿಕ್ ಆಸಿಡ್ಡ ಗ್ಯಾಸ, ಮ್ಯಾನುಫ್ಯಾಕ್ಚರರ್ ಅಫ್ ಏರೆಟೆಡ ವಾಟರ್ಸ.

ತಾವು ಆರ್ಡರ ಬೇಗ ಕಳಿಸಿರಿ

ನಮ್ಮಲ್ಲಿ ಸಿಗುವ ಸಾಮಾನುಗಳ ವಿವರ

ಫುಲ್‌ಗ್ಯಾಸ ಸಿಲೆಂಡರಗಳು ಇಂಗ್ಲೀಷ ಮತ್ತು ಜರ್ಮನ ಪೇಟಂಟ ಕಾಡ್ಡ, ಎಮ್. ಟಿ ಸೋಡಾ ವಾಟರ ಬಾಟಲಗಳು, ೫೫೦ ನಂ. ನಾಯಿ



ಸೋಡಾ ಮಶೀನು

ಬಾಟಲಿಗಳ ರೀನ ಡೆಪ್ಪಿ ೧ ಸಂಬಂಧವು. ಸೋಡಾವಾಟರ್ ಮಶಿನುಗಳು ಮತ್ತು ಎಲ್ಲ ತರದ ಕಲರಿನ ಎಸೆನ್ಸಗಳು, ಅಮೆರಿಕನ್ ಆಯಿಸ್ಕ್ರೀಮ ಸೋಡಾ, ಪಿನಾಪಲ, ಕೋಲಾಜಿಂಜೇಜರ್, ಲೆಮನ್ ನಂ. ೧ ಲೆಮನ್ ಜುಯಿಸ್ ಸೋಡಾ ನಂ. ೧ ಮೆಂಗೋ, ಆರೇಂಜ, ಫಾಯಿನಾಪಲ್, ಪಿಕ್ಸಮಿಕ್ಸ್, ಕ್ವಿನಿನ್ ಟಾನಿಕ್, ರಾಜಬೆರಿ ನಂ. ೧ ಕೋಲ ನಂ. ೧ ಸ್ಟೋನ್ ಜಿಂಜರ್ ಬೀರ ನಂ. ೧, ರಬ್ಬರ್ ರಿಂಗ್ಸ, ಬೆಸ್ ಇತರ ಮಶಿನರಿ ಪಾರ್ಟುಗಳು ನಮ್ಮಲ್ಲಿ ಸಿಗುತ್ತವೆ. ಮತ್ತು ಶುದ್ಧ ನೀಲಗಿರಿ ಎಣ್ಣೆಯು ಎಲ್ಲ ತರದ ಬಾಟಲ್ಲಿಗಳು ಸಿಗುತ್ತವೆ. ವ್ಯಾಪಾರಸ್ಥರಿಗೆ ಒಳ್ಳೇ ಕಮೀಶನ್ ಕೊಡುತ್ತೇವೆ. ನಮ್ಮಲ್ಲಿ ಕಬ್ಬಿಣದ ಮಿಲಿಟರಿ ಸಿಂಗಲ ಕಾಟ್ಸಗಳು ಸೋವಿ ದರದಿಂದ ಮಾರಲಿಕ್ಕೆ ಸಿಗುತ್ತವೆ.

ಅಡ್ರೆಸ್— R M. John &Sons.
Mission Compound HUBLI

LOKHANDE

Lasts A life time



Strongest Watches

ಬಕ್ಷೀಸು ಮತ್ತು ಆರ್ಡರ ಬೆಲೆಗೆ ಮೋಹಪಟ್ಟು ಮೋಸ ಹೋಗಬೇಡಿರಿ.

ಜೀನಸು ಉತ್ತಮ ಮತ್ತು ನಂಬಿಗೆಯುಳ್ಳವು ನಮ್ಮ ಅಂಗಡಿಯಲ್ಲಿ ಘಾವರೆ ಲುಬಾ, ವೆಸ್ಟ ಎಂಡ, ಮೆರಿಡಿಯನ, ಓಮೇಗಾ ಮತ್ತು ಸ್ವಿಸ ಜನರಲ ಕಂಪನಿ ಮತ್ತ ಬೇರೆ ಪ್ರಸಿದ್ಧ ಕಂಪನಿಗಳ ಗಡಿಯಾರಗಳು ಈಗಿನ ಬಂದಿದ್ದು, ಇವು ನೋಡಲಿಕ್ಕೆ ಸುಂದರವಾಗಿರುವಲ್ಲದೆ ಗಟ್ಟಿ ಮತ್ತು ಸರಿಯಾಗಿ ಹೊತ್ತು ತೋರಿಸುವಂಥವುಗಳಾಗಿವೆ. ಐದು ರೂಪಾಯಿಯಿಂದ ಜೇರಾದ ಬೆಲೆಯು ೯೨ ದಾವಗಳು ಸಿಗುವವು. ಕೊಳ್ಳುವಾಗ ಪ್ರತಿಯೊಂದಕ್ಕೆ ಗ್ಯಾರಂಟಿ ಕೊಡವೆವು. ಒಮ್ಮೆ ತರಿಸಿ ನೋಡುವಿರಷ್ಟೇ?

ಪ್ರೊಪ್ರಾಯಿಟರ, ವತ್ಸರಾವ ಲೋಖಂಡೆ
ವಾಚ ಆ್ಯಂಡ ಕ್ಲಾಕ ಮರ್ಚಂಟ ಧಾರವಾಡ.

ದಿ. ಅಂಕಲಗಿ ಬ್ಯಾಂಕ ಲಿಮಿಟೇಡ್ ಧಾರವಾಡ.

—೦—

೧೯೧೩ ಇಸ್ವಿಯ
ಕಂಪನಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ಚಾಲೂ ಖಾತೆ, ಠೇವು, ಸೇವಿಂಗ್ಸದ ಡಿಪಾಜಿಟ, ಸಾಲ, ಪತ್ತಿ, ಹುಂಡಿ, ಮುಂತಾದ ಯಾವತ್ತು ವ್ಯವಹಾರಗಳು ನಡಿಯುವವು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿಮಾಡುವವರಿಂದ ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ ರಿಂದ ೧೧-೩೦. ಸಾಯಂಕಾಲ ೩ ರಿಂದ ೬ ರವರೆಗೆ ನಡಿಯುವದು.

K.B . Ankalagi
ಮ್ಯಾನೆಜಿಂಗ ಡಾಯರೆಕ್ಟರ

ದಿ. ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಅಷ್ಟರಡು ಆಗೆಯುತಿರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ

ಚಿಲ್ಲರಪತ್ರಕ್ಕೆ

೧೨ ತಿಂಗಳಿಗೆ	೧೨—೮—೦	ರೂ
೬ ,,	೭—೦—೦	ರೂ
೩ ,,	೪—೦—೦	ರೂ
ವಾರಪತ್ರಕ್ಕೆ ೧ ವರ್ಷಕ್ಕೆ	೩—೧೨—೦	ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ
ಮ್ಯಾನೇಜರ ವಿಜಯ, ಧಾರವಾಡ

ಜಾಹೀರಾತಿನ ದರಗಳು.

ಸಿಂಗಲ ಕಾಲಮಿನ ಹತ್ತು ಪಂಕ್ತಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಂಕ್ತಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ಆಣೆ ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆ ಆಣೆ ಡಬಲ್‌ಕಾಲಮಿನ ಓಳಿಗಳಿಗೆ ಇಮ್ಮಡಿಚಾರ್ಜು ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಪಡಿಸಿದರು.

R. N. B. 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೬) ಧಾರವಾಡ ಸೋಮವಾರ ತಾರೀಖು ೩ನೇ ಮಾರ್ಚ ೧೯೨೨ (ಸಂಚಿಕೆ ೭೩

ಬೇಸಿಗೆ ಪ್ರಾರಂಭವಾಯಿತು!

ದನಗಳ ಆಹಾರವಾದ ಕಣಿಕೆಯನ್ನು ಕಾಯಿರಿ !!

ಕಿರ್ಲೋಸ್ಕರ ಕಣಿಕೆ ಯಂತ್ರವನ್ನು ಉಪಯೋಗಿಸಿರಿ !!

ನಮ್ಮ ಕಾರ್ಖಾನೆಯಲ್ಲಿ ಎರಡು ನಮೂನೆಯ ಕಣಿಕೆ ಕೊರೆಯುವ ಯಂತ್ರಗಳು ತಯಾರಾಗುತ್ತವೆ. ಒಂದು ಕೈಯಂತ್ರ ಬೆಲೆ ೨೦ರೂ. ಇನ್ನೊಂದು ಗಾಲೀಯಂತ್ರ ಬೆಲೆ ೮೫ ರೂಪಾಯಿ ಸಣ್ಣ ಕಮತವುಳ್ಳವರು ಕೈ ಯಂತ್ರವನ್ನು, ದೊಡ್ಡ ಕಮತವುಳ್ಳವರು ಗಾಲೀ ಯಂತ್ರವನ್ನೂ ಉಪಯೋಗಿಸಬಹುದು. ಕಣಿಕೆಯು ೪ ಇಂಚುಗಳಿಂದ ಒಂದು ಇಂಚಿನ ವರೆಗೆ ಕೊರೆಯಲ್ಪಡುತ್ತದೆ.

ಸವಿಸ್ತರ ಸಂಗತಿಯ ಬಗ್ಗೆ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ } ಕಿರ್ಲೋಸ್ಕರವಾಡಿ- ಜಿಲ್ಹಾ ಸಾತಾರಾ.

ಕುಕು ಕ್ರಮದಲ್ಲಿ ಮತ್ತು ಎರಡೇ ಆಣೆಯಲ್ಲಿ

ತಲೆಶೂಲೆ, ಅರತಲೆಶೂಲೆ, ಮಸ್ತಕ ಶೂಲೆಯು ಒಂದೇ ಕ್ಷಣದಲ್ಲಿ ನಂಬಿಗೆಯಿಂದ ಬಂದಾಗುವ ನಮ್ಮ

ಮೊಮೆಂಟ ಕ್ಯೂಅರ

ನಮ್ಮ ಒಮ್ಮೆ ಯೂಡಿಕೊ ತಕ್ಕೊಳ್ಳಿರಿ. ಮೂರಾಣೆಯ ಟಿಕೀಟು ಕಳಿಸಿದರೆ ಸ್ಯಾಂಪಲ (ಮಾದರಿ) ಕಳಿಸುವೆವು

ನಮ್ಮ ಔಷಧಾಲಯದಲ್ಲಿ ಡಾಕ್ಟರರ ಪ್ರಿಸ್ಕ್ರಿಪ್ಸನ್ ಪ್ರಕಾರ ಅತ್ಯಂತ ಕಾಳಜಿ ಮತ್ತು ದಕ್ಷತೆಯಿಂದ ಔಷಧವನ್ನು ತಯಾರ ಮಾಡಿ ಕೊಡುವೆವು. ದರ ತೀರ ಸುಲಭ.

ವಿಳಾಸ— ದಿ ಕರ್ನಾಟಕ ಮೆಡಿಕಲ ಸ್ಟೋರ್ಸ, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ

ಸ್ಟೇಶನರೋಡ ಹುಬ್ಬಳ್ಳಿ.

ವಿವಿಧ ವರ್ತಮಾನಗಳು.

—o—

ಝಗಲುಲ ಪಾಶಾನು ತನಗೆ ದೊರೆತ ದಿವಾನಗಿರಿಯನ್ನು ಅಪೇಕ್ಷಿಸಲಿಲ್ಲವೆಂತಲೂ, ಈ ಸ್ಥಾನಕ್ಕೆ ಯಾವನೂ ಹೋಗುವದಿಲ್ಲೆಂತಲೂ, ಇಜಿಪ್ತದ ಸಂಪೂರ್ಣ ಸ್ವಾತಂತ್ರ್ಯವು ತನ್ನ ಧ್ಯೇಯವಾಗಿರುತ್ತದೆಂದೂ ಪ್ರಸಿದ್ಧ ಮಾಡಿದ್ದಾನೆ.

———

ಇಟಲಿಯಲ್ಲಾಗುವ ಚುನಾವಣೆಯಲ್ಲಿ ರಾಷ್ಟ್ರೀಯ ಪಕ್ಷದವರು ಸೇರದೆ, ಚುನಾವಣೆಗೆ ಬಹಿಷ್ಕಾರ ಹಾಕಬೇಕೆಂಬ ವಿಚಾರ ನಡೆದಿದೆ.

———

ಲಾರ್ಡ ಬಾಲ್ಫರ ಸಾಹೇಬರು ಜೆರುಸಲೆಮ್ಮಕ್ಕೆ ಹೋಗುವ ಮುಂಚಿತವಾಗಿಯೇ ಕ್ರಿಶ್ಚನ್ನ ಮತ್ತು ಅರಬ ವಿದ್ಯಾರ್ಥಿಗಳು ಸಂಪು ಮಾಡಿದ್ದರಿಂದ ಕಾಲೇಜುಗಳನ್ನು ಒಂದು ವೇಳೆ ಮುಚ್ಚಿದರು. ವಿದ್ಯಾರ್ಥಿಗಳಿಲ್ಲದೆ ಯುನಿವ್ಹರ್ಸಿಟಿಯನ್ನು ತೆರೆಯುವ ಸಮಾರಂಭವೆಂತಹದು?

———

ಜರ್ಮನಿಯಲ್ಲಾಗುವ ಅಧ್ಯಕ್ಷರ ಚುನಾವಣೆಯಲ್ಲಿ ರಾಜಪಕ್ಷೀಯರು ಮೊದಲು ಸೋತಿರೆಂತು, ಬೊಲ್ಶೆವಿಕ ಸಂಘದವರ ತನಗೆ ಪ್ರತಿಯೊಂದು ಬಣದವರು ತಂತಮ್ಮ ಪಕ್ಷದಿಂದ ಉಮೇದವಾರರನ್ನು ನೇಮಿಸಿದ್ದಾರೆ.

———

ಜಪಾನ ರಾಜ್ಯದಲ್ಲಿ ಚುನಾವಣೆಯಲ್ಲಿ ವ್ಯಕ್ತಿಮಾತ್ರನಿಗೆ ಸಮಾನಾಧಿಕಾರ ಕೊಡಬೇಕೆಂಬ ಚಳವಳಿಯು ನಡೆದಿದ್ದು, ಇದನ್ನು ಅನೇಕ ಉಮರಾವರು ವಿರೋಧಿಸಿದ್ದಾರೆ. ಜನರು ಇವರ ಮೇಲೆ ಕೋಪಿಸಿ, ಇವರ ಮನೆ ಹೊಕ್ಕು ಇವರನ್ನು ಹೊಡೆಯ ಲಾರಂಭಿಸಿದ್ದಾರೆ.

ರಶಿಯಾದ ಕೂಡ ವ್ಯಾಪಾರ ಬೆಳೆಸಿದ ಹೊರ್ತು ಇಂಗ್ಲೆಂಡದ ಕೂಲಿಕಾರರ ಸುಸ್ಥಿತಿಯಾಗಲಾರದೆಂದು ಹೇಳಿ, ಕೂಲಿಕಾರ ಪಕ್ಷದವರು ಈ ವಿಷಯವಾಗಿ ಚಳವಳಿ ನಡೆಸಿದ್ದಾರೆ.

———

ಕಲಕತ್ತೆಯ ಮ್ಯುನಿಸಿಪಾಲಿಟಿಯು ಹದ್ದಿನಲ್ಲಿ ಕರೆ ಸಿಂದಿ, ಬ್ರ್ಯಾಂಡಿಯನ್ನು ಮಾರಬಾರದೆಂದು ಠರಾವು ಮಾಡಿ, ಆ ಪ್ರಕಾರ ಬಂಗಾಲ ಸರಕಾರಕ್ಕೆ ತಿಳಿಸಿದ್ದಾರೆ.

———

ವಿಜಯ.

ಧಾರವಾಡ ತಾ- ೩೦-೩-೨೫ ನೇ ಇಸ್ವಿ

ಪಶ್ಚಿಮದೇಶಗಳಲ್ಲಿ ಸೈನ್ಯ ಕಡಿಮೆ ಮಾಡುವ ಅಬ್ಬರ.

— ೦—

ವಿಲಾಯತಿಯಲ್ಲಿ ಕಾರ್ತವೀರ್ಯಾರ್ಜುನನಂತೆ ಸ್ಥಾಪನಗೊಂಡ ಸೈನ್ಯದ ಬಹು ದೊಡ್ಡ ಭಾಗವು ಲಯವಾಯಿತು, ಪ್ರತಿಯೊಂದು ದೇಶವು ಭಾವೀ ಗಂಡಾಂತರ ತೊಲಗುವದಕ್ಕಾಗಿ ಹೊಸ ಸೈನ್ಯ ಕಟ್ಟಲು ಸಿದ್ಧವಾಯಿತು. ಮಹಾಯುದ್ಧ ಮುಗಿದು ಐದು ವರ್ಷವಾಯಿತು. ಇಷ್ಟು ಅಲ್ಪ ವೇಳೆಯಲ್ಲಿ ಜನರು ಆ ಯುದ್ಧದ ಹೃದಯವಿದಾರಕ ಕೃತ್ಯಗಳನ್ನು ಮರೆತು, ಭಾವೀ ಯುದ್ಧದಲ್ಲಿ ರಣೋತ್ಸಾಹ ತೋರಿಸಲು ಸಿದ್ಧರಾಗಿದ್ದಾರೆ. ವಿಲಾಯತಿಯಲ್ಲಿರುವ ಪ್ರತಿಯೊಂದು ದೇಶವು ಬಾಹುಸ್ಫುರಿತವಾದಂಥ ಭಾಷಣವನ್ನೂ ಅದಕ್ಕೆ ಅನುಗುಣವಾದಂಥ ಕೃತ್ಯವನ್ನೂ ಮಾಡುತ್ತಿರುವದು. ಇದಲ್ಲದೆ ಪ್ರತಿಯೊಂದು ದೇಶದಲ್ಲಿ ರಶಿಯಾದ ಬೊಲ್ಶೆವಿಕ ತತ್ವಗಳ ಭೂತವಿದ್ದು, ಈ ಭೂತವನ್ನು ಪ್ರೇತ ಮಾಡಲೋಸುಗ ದಂಡಿನ ಸಿದ್ಧತೆಯು ಬೇಕೆಂದಿರುವದು.

ಇಂಥ ಸಮಯದಲ್ಲಿ ಜಿನೇವಾದಲ್ಲಿ ಸೈನ್ಯ ಕಡಿಮೆ ಮಾಡಬೇಕೆಂಬ ಪರಿಷತ್ತು ಕೂಡಿ, ಹದಿನೆಂಟು ಮಂದಿ ಅಡಿಗೆಯವರು ಕಲೆತು ಅಡಿಗೆ ಕೆಡಿಸಿದರೆಂಬಂತೆ ಅದರ ಕೊನೆಯು ಪರಿಣಾಮವಾಯಿತು. ಇಂಗ್ಲಂಡದ ಪ್ರತಿನಿಧಿಯಾಗಿದ್ದ ಮಿ. ಚೆಂಬರಲೇನ ಸಾಹೇಬರು ಇದಕ್ಕೆ ಮಣ್ಣು ಕೊಟ್ಟವರಲ್ಲಿ ಮೊದಲನೆಯವರಾಗಿದ್ದಾರೆ. ಇವರ ಹೇಳಿಕೆಯು ಯಾರೊಬ್ಬರು ಒಪ್ಪುವಂತಿದೆ. ಯಾವದೊಂದು ರಾಜ್ಯವು ಮತ್ತೊಂದು ರಾಜ್ಯದ ಕೂಡ ಯುದ್ಧಾರ್ಥಿಯಾಗಿ ದಂಡಯಾತ್ರೆಯನ್ನು ಹೊರಡಿಸಿದಾಗ- ರಾಷ್ಟ್ರಸಂಘದವರು ಪಂಚರಾಗಿ ನ್ಯಾಯ ನಿರ್ಣಯ ಹೇಳುವ ತನಕ ಸೈನ್ಯವು ಸಿಂಹಾಸನದಲ್ಲಿಯೇ ನಿಲ್ಲಬೇಕೆಂದು ಒಂದು ಶರ್ತು. ಇದರಿಂದ ಎರಡೂ ಪಕ್ಷದ ಸೈನ್ಯಗಳ ವಿಚಾರದಿಂದ ತಾಪಿಯಿರುವದು. ರಣಮಂಡಲದಲ್ಲಿ ಸೈನ್ಯವು ಕೂಳು ತಿನ್ನುತ್ತ ಬೀಳುವದು ಕೊಡ್ಡ ಹೆಚ್ಚಿನ ವಿಷಯವಾಗಿದ್ದು, ಇದರಿಂದಲೇ ಆ ದೇಶದ ಕೋಶದಲ್ಲಿ ಆಕಾಶ ಕಳೆಯಲಿಕ್ಕೆ ಕಾರಣವಾಗುವದು. ಮಿ. ಚೆಂಬರಲೆನ್ನ ಸಾಹೇಬರ ಇದೊಂದೇ ವಿಚಾರದಿಂದ ಜಿನೆವ್ಹಾದ ಸಭೆಯ ಮೂಲ ಉದ್ದೇಶವು ಕೆಟ್ಟು ಹೋಯಿತು.

ಫ್ರಾನ್ಸಕ್ಕೆ ಯಾವಾಗಲು ಜರ್ಮನಿಯ ಹೆದರಿಕೆಯುಂಟು. ರಶಿಯವು ಮಧ್ಯ ಏಶಿಯಾದಲ್ಲಿಯೂ ರೋಮಾನಿಯದಲ್ಲಿಯೂ ಕುತಂತ್ರಗಳನ್ನು ನಡೆಸಿದೆ. ಗ್ರೀಸವು ಬಾಲ್ಕನ ಸಂಸ್ಥಾನಗಳೊಂದಿಗೆ ಮಸಲತು ಮಾಡಿ, ತುರುಕರ ಕೂಡ ಮಾಡಿದ ಯುದ್ಧದಲ್ಲಿ ಸೋತ ಅಪಮಾನದ ಮುಯ್ಯ ತೀರಿಸಿಕೊಳ್ಳಬೇಕೆಂದಿದೆ. ಜರ್ಮನಿ ಮತ್ತು ಪೋಲಂಡದ ಜಗಳವು ಜರ್ಮನಿಯು ರಾಷ್ಟ್ರಸಂಘದಲ್ಲಿ ಸೇರಿದರೂ, ರಾಷ್ಟ್ರಸಂಘದ ವಿದ್ಯಮಾನವಾಗಿ ಬಗೆಹರಿಯಲಾರದು. ಸಿಂಗಾಪೂರದಲ್ಲಿ ಇಂಗ್ಲಿಷರು ಕಟ್ಟಬೇಕೆಂದಿರುವ ಹಡಗಪಡೆಯ ಠಾಣೆಯು ಜಪಾನದ ಹಣೆಗೆ ಪಿಸ್ತೂಲ ಹಿಡಿದಂತಾಗುವದು. ಈ ಎಲ್ಲ ವಿಚಾರಗಳಿಂದ ಯುರೋಪವು ಇನ್ನೊಂದಾವರ್ತಿ ಮಹಾಯುದ್ಧಕ್ಕೆ ಮಿಗಿಲಾದ ಯುದ್ಧದ ಕಾಲಪ್ರತೀಕ್ಷೆ ಮಾಡುತ್ತಿರುವದೆಂದು ಜನರು ಸಾಮಾನ್ಯವಾಗಿ ಮಾತಾಡುತ್ತಿದ್ದಾರೆ ಈ ಮಾತಿಗನುಸರಿಸಿ, ಸೈನ್ಯ ಬೆಳೆಸುವ ಅಬ್ಬರ ನಡೆದಿದೆ.

ಬ್ರಾಹ್ಮಣ ಸಭೆಯ ವಿಚಾರಕ್ಕೊಂದು ಪ್ರಶ್ನೆ!

—೦—

(ಬರೆದು ಬಂದದ್ದು)

ನಿನ್ನೆಯ ದಿನ ಧಾರವಾಡ ಬ್ರಾಹ್ಮಣ ಸಭೆಯ ಪ್ರಶ್ನ ಮಾಲಿಕೆಯೊಂದು ನನ್ನ ಕಣ್ಣಿಗೆ ಬಿತ್ತು. ಅದನ್ನು ಹಾಗೆ ಓದುತ್ತ ಬರುವಾಗ್ಗೆ ಹತ್ತನೆಯ ಪ್ರಶ್ನೆಯ ವರೆಗೆ ಬಂದು, ಮುಂದೆ ಸ್ವಲ್ಪ ತಡೆಯಬೇಕಾಯಿತು. ಹತ್ತನೆಯ ಪ್ರಶ್ನೆಯಲ್ಲಿ ಸ್ತ್ರೀಯರ ಉದ್ಯೋಗ ಧಂದೆಯ ವಿಷಯವಾಗಿ ವಿಚಾರವಿರುವದು. ಆದ್ದರಿಂದಲೇ ನನ್ನಂಥ ಅಲ್ಪಜ್ಞಳಾದ ಅಬಲೆಯು ಲೆಕ್ಕಣಿಕೆಯನ್ನು ಕೈಯಲ್ಲಿ ಹಿಡಿಯಬೇಕಾಯಿತು. ಇದಕ್ಕಾಗಿ ನನಗೆ ಆನಂದವಾಗದೆ ಬಹಳ ಖೇದವಾಗಿದೆ.

ಸದ್ಯಕ್ಕೆ ಯುವಕರು ನಿರುದ್ಯೋಗಿಗಳಾಗಿ ತಿರುಗುತ್ತಿದ್ದು ಅವರ ಉದರಾರ್ಥದ ಗತಿಯೇನು? ಎಂಬ ವಿಚಾರದ ಸಲುವಾಗಿ ಈ ಸಭೆಯು ಹೊರಟಿರುವದೆಂದು ನನ್ನ ಕೇಳಿಕೆ. ಇಂಥದರಲ್ಲಿ ಪಾಪಭೀರುಗಳೂ, ಮಾನಕ್ಕಾಗಿ ಪ್ರಾಣವನ್ನೂ ಕೊಡಲು ಸಿದ್ಧರಾಗಿರುವಂಥ ಗೃಹಕೃತ್ಯಗಳಲ್ಲಿ ರಾಮ ರಾಮ ವೆಂದು ಸಾವಿರಾರು ಕಷ್ಟಗಳಿದ್ದರೂ ಸಮಾಧಾನದಿಂದ ಕೆಲಸ ಮಾಡುವ ಸ್ತ್ರೀಯರನ್ನು ಮನೆಯೊಳಗಿಂದ ಹೊರಗೆಳೆಯಲು ಯೋಚಿಸಿದ ಈ ಧೂರ್ತ ವಿಪ್ರರು ಯಾರೋ ಕಾಣೆನು. ಈ ದಿನದ ವರೆಗೆ ಬ್ರಾಹ್ಮಣ ಸ್ತ್ರೀಯರು ಹೊಟ್ಟೆಪಾಡಿಗಾಗಿ ಹತ್ತನೇ ಪ್ರಶ್ನೆಯಲ್ಲಿ ಸೂಚಿಸಿದಂಥ ಕೃತ್ಯವನ್ನು ಮಾಡಬೇಕಾಗಿರಲಿಲ್ಲ. ಗಂಡನು ದುಡ್ಡೇ ತರಲಿ; ದಮಡಿಯೇ ತರಲಿ; ಅಷ್ಟರಲ್ಲಿ ಸಂತುಷ್ಟರಾಗಿ ಕಾಲ ಕಳೆಯುತ್ತ ಬಂದಿರುವೆವು. ನಮಗೆ ಅರ್ಧಾಂಗಿಯರೆಂದು ಅಭಿಧಾನವಿದ್ದು, ನಾವು ಯಾವಾಗಲೂ ನಮ್ಮ ಗಂಡನ ಹೊಟ್ಟೆಯಲ್ಲಿಯೇ ಸಮಾವೇಶರಾಗಿರುವೆವು. ಗಂಡನಿಗೆ ಉದ್ಯೋಗವನ್ನು ಹಚ್ಚಿಕೊಟ್ಟು ಮರ್ಯಾದೆಯಿಂದ ಉದರಾರ್ಥ ಸಾಗುವಂತೆ ಯತ್ನವನ್ನು ಈ ಸಂಘದವರು ಮಾಡಿದರೆ ಬ್ರಹ್ಮ ಸಮಾಜದ ಅರ್ಧ ಮಂಡಳಿಯರ ಸರ್ವ ಹಿತ ಚಿಂತನೆಯನ್ನು ಮಾಡಿದಂತಾಯಿತು.

ಹತ್ತನೇ ಪ್ರಶ್ನೆಯಲ್ಲಿ ಸೂಚಿಸಿದಂತೆ ನಮ್ಮ ಹೊಟ್ಟೆಯ ಪಾಡಿಗೆ ನಮ್ಮನ್ನೆಲ್ಲ ಕಷ್ಟ ನಷ್ಟಗಳನ್ನು ನೋಡಲಿಕ್ಕೆ ಹಚ್ಚುವಂಥ ಗಂಡಸಿನ ಬುದ್ಧಿಗೆ ಬೆಲೆಯೇ ಇಲ್ಲ! ಇದಕ್ಕೆ ಸಮಾಜದ ಕಳಕಳಿ ಎಂದಾಗಲೀ, ಸ್ತ್ರೀಯರ ವಿಷಯಕ್ಕೆ ದಯೆ ಎಂದಾಗಲೀ ಅನ್ನಲಿಕ್ಕೆ ಬಾರದು. ಕೇವಲ ಮೌಢ್ಯವು!! ಬ್ರಾಹ್ಮಣರ ಆರ್ಥಿಕ ಸ್ಥಿತಿಯು ಬಹಳ ಶೋಚನೀಯವಿರುವದು ನಿಜ. ಕೇವಲ ಆರ್ಥಿಕ ಸಂಪತ್ತಿಯನ್ನು ಹೆಚ್ಚಿಸಿಕೊಂಡು ಇಂದ್ರಿಯ ಭೋಗವನ್ನು ಬಯಸುವವರಿಗೆ ಬ್ರಾಹ್ಮಣರೆಂಬ ಹೆಸರು ಯೋಗ್ಯವಲ್ಲ. ದುಡ್ಡು ಗಳಿಸಬೇಕು. ಆದರೆ "ಏನಕೇನ ಪ್ರಕಾರೇಣ" ದೊರಕಿಸುವದು ಇಷ್ಟವಾದದ್ದಲ್ಲ. ನಮ್ಮ ಮರ್ಯಾದೆಗೆ ಧಕ್ಕೆ ಬರುವ ಕೆಲಸವನ್ನು ಎಂದಿಗೂ ಮಾಡಬಾರದು.

ಇರಲಿ; ಈ ಹತ್ತನೇ ಪ್ರಶ್ನೆಯನ್ನು ಮಾಡಿದ ಸ್ತ್ರೀ ಹಿತಚಿಂತಕ ಬಂಧುವಿನಲ್ಲಿ ಅಲ್ಪಜ್ಞಳಾದ ನನ್ನ ಆಗ್ರಹದ ವಿನಂತಿ ಏನಂದರೆ- ಇನ್ನು ಮುಂದೆ ಸ್ತ್ರೀಯರಿಗೆ ಸಂಬಂಧಿಸಿದ ಇಂಥ ಅವಿವೇಕತನದ ಪ್ರಶ್ನೆಯಿಂದ ಮನೆಯಲ್ಲಿಯ ಮಾನೀ ಮಾನಿನಿಯರನ್ನು ಸಂದಿ ಸರದ ಮಾರ್ಕೇಟಿನಲ್ಲಿ ಎಳೆಯಲು ಏನೂ ಅಧಿಕಾರವಿಲ್ಲ. ಮತ್ತು ಸ್ತ್ರೀಯರ ಉದ್ಯೋಗದ ವಿಷಯವಾಗಿ ವೇಳೆಯನ್ನು ವ್ಯಯ ಮಾಡುವದರ ಬದಲಾಗಿ ನಿರುದ್ಯೋಗಿಗಳಾಗಿ ಬಳಲುತ್ತಿರುವ ಅಣ್ಣ ತಮ್ಮಂದಿರ ವಿಷಯವಾಗಿ ವಿಚಾರ ಮಾಡಬೇಕು. ಅಲ್ಲದೆ ಈ ರೀತಿಯ ಕೆಲಸಕ್ಕೆ ಬಾರದ ಕೆಲಸವನ್ನು ಮಾಡಬಾರದು.

ತಿರುಕರ ವಾಸಕ್ಕಾಗಿಯೇ ಒಂದು ಮನೆಯನ್ನು ಕಟ್ಟಬೇಕೆಂದು ಮದ್ರಾಸ ಮ್ಯುನಸಿಪಾಲಿಟಿಯವರು ಠರಾವು ಮಾಡಿದ್ದಾರೆ. ಇಂಥದೊಂದು ಮನೆಯೂ ವಿಪುಲವಾದ ನೀರಿನ ಸೋಯಿಯೂ ಪ್ರತಿಯೊಂದು ಊರಲ್ಲಿದ್ದರೆ ತಿರುಕರಲ್ಲಿ ಸಾಂಸರ್ಗಿಕ ರೋಗಗಳು ಪ್ರಸಾರವು ಬಹಳವಾಗಿ ಕಡಿಮೆಯಾಗುವದು.

ಬಾವಲಾ ಕೊಲೆಯಲ್ಲಿಯ ಆರೋಪಿಗಳ ಹೆಸರು ಮತ್ತು ಅವರ ಮೇಲಿನ ಆರೋಪ.

—o—

ಆರೋಪಿಗಳು—

೧ ಶಾಫಿ ಅಹಮದ, ರಿಸಾಲದಾರ, ಇಂದೂರ ಸಂಸ್ಥಾನ (೨೭)

೨ ಪುಷ್ಪಶೀಲ ಬಳವಂತರಾವ ಫೋಂಡೆ [೨೩]

೩ ಬಹಾದ್ದೂರಶಹಾ ಮಹಮದಶಹಾ ಮೋಟಾರ ಡ್ರಾಯವ್ಹರ [೨೦]

೪ ಅಕಬರಶಾ ಮಹಮದಶಾ, ಇಂದೂರಿನ ಗುಮಾಸ್ತ (೨೭)

೫ ಶ್ಯಾಮರಾವ ರಾವಜಿ ದಿಘೆ ಕ್ಯಾಪ್ಟನ ವಿಮಾನಸಂತೆ ಇಂದೂರ [೨೮]

೬ ಮುಮತಾಜ ಮಹಮದ ಸಯ್ಯದ ಸಾಹ ಮದಗಬ್ಬು ಇನ್ಸಪೇಕ್ಟರ ಗುಪ್ತ ಖಾತೆ ಇಂದೂರ [೫]

೭ ಅಬ್ದುಲ ಲತೀಫ ಮಹಮದಯುದ್ದೀನ ಮೋಟಾರ ಡ್ರಾಯವ್ಹರ ಇಂದೂರ [೨೯]

೮ ಕರಮತಖಾನ ಸಿಪಾಯಿಮಹಮ್ಮದ, ಸೇ ಸಾರ್ಜಂಟ ದಂಡಿನಖಾತೆ ಇಂದೂರ [೩೮]

೯ ಅನಂತರಾವ ಗಂಗಾರಾಮ ಫಣಸೆ ಟ್ರೈನಿಂಗ ಸ್ಕೂಲ ಇಂದೂರ ದಂಡು [೩೨]

೧೦ ಮಹಮದ ಶಾಫಿ ಮಲಿಕ ಇಹಮ, ಬಾವಲಾನ ಮೋಟಾರ ಡ್ರಾಯವ್ಹರ (೨೪)

ಪ್ರತಿಯೊಬ್ಬರ ಮುಂದಿನ ಅಂಕಿಯು ಅವರ ವಯಸ್ಸು ಆಗಿರುತ್ತದೆ. ಹನ್ನೊಂದನೆಯ ಆರೋಪಿಯು ಮಾಫೀ ಸಾಕ್ಷಿದಾರನಾದ್ದರಿಂದ, ಅವನನ್ನು ಬಿಟ್ಟು ಹತ್ತು ಜನರ ಮೇಲೆ ವಿಚಾರಣೆ ನಡೆದಿರುವದು.

ಆರೋಪಗಳು—

೧ ಬ್ರಿಟಿಶ ರಾಜ್ಯದಲ್ಲಿರುವ ಒಬ್ಬ ಮುಮತಾಜ ಬೇಗಮಳನ್ನು ಎತ್ತಿಕೊಂಡು ಹೋಗುವ ಮಸಲತ್ತು ಮಾಡಿದಿರಿ

೨ ಮೇಲೆ ಹೇಳಿದ ಮುಮತಾಜ ಬೇಗಮಳನ್ನು ಬ್ರಿಟಿಶ ಹಿಂದುಸ್ಥಾನದಿಂದ ಇಂದೂರಿಗೆ ಒಯ್ಯುವ ಪ್ರಯತ್ನ ಮಾಡಿದಿರಿ,

೩ ಈಕೆಯು ಅಯೋಗ್ಯ ರೀತಿಯಿಂದ ಬೇರೆಯವರ ಕೂಡ ಸಹವಾಸ ಮಾಡುವಂತೆ ತಿಳಿದೂ ತಿಳಿದು ಪ್ರಯತ್ನ ಮಾಡಿದಿರಿ.

೪. ಈ ಉದ್ದೇಶ ಸಾಧನೆಗಾಗಿ ಒಬ್ಬ ಅಬ್ದುಲ ಕಾದರ ಬಾವಲಾ ಎಂಬುವನನ್ನು ಪಿಸ್ತೂಲಿನಿಂದ ಕೊಲ್ಲಲಿಕ್ಕೆ ಪ್ರಯತ್ನಿಸಿದಿರಿ.

೫ ಸಾಕ್ಷಿದಾರರಾದ ಲೆಫ್ಟಿನಂಟ ಸೀಗಾರ್ಟ ಮತ್ತು ಮಾಥ್ಯೂ ಇವರನ್ನು ಕೊಲ್ಲಲೆಳಸಿದಿರಿ.

೬ ಭಯಂಕರವಾದ ಆಯುಧಗಳಿಂದ ಉದಾಹರಣೆಯಾಗಿ ಚೂರಿಯಿಂದ ಭಯಂಕರ ಘಾಯ ಮಾಡುವದಕ್ಕೆ ಒಬ್ಬರಿಗೊಬ್ಬರು ಸಹಾಯ ಮಾಡಿದಿರಿ.

ಮುಮತಾಜ ಬೇಗಮಳು ಕೋರ್ಟಿಗೆ ಬರುವಾಗ ಸಂಗಡ ಒಬ್ಬ ಪೋಲೀಸ ಅಮಲದಾರನಿದ್ದನು. ಈಕೆಯು ಮೈತುಂಬ ಬಿಳೇ ಒಟ್ಟಿಯ ಬುರಖಾ ಹಾಕಿದ್ದಳು. ಕೋರ್ಟಿನಲ್ಲಿ ಸಾಕ್ಷಿಗೆ ನಿಂತ ಬಳಿಕ ಅದನ್ನು ತೆಗೆದಳು.

ಇಂಗ್ಲಂಡದ ಕಲ್ಲಿದ್ದಲಿಯ ವ್ಯಾಪಾರಕ್ಕೆ ಅಳಿಗಾಲ.

—o—

ಇಂಗ್ಲಂಡದಲ್ಲಿ ಮುಖ್ಯವಾಗಿ ಹುಟ್ಟುವದು ಕಲ್ಲಿದ್ದಲಿಯು. ಇದರಿಂದಲೇ ಇಂಗ್ಲಿಷ ಜನರು ವೈಭವದ ಶಿಖರಕ್ಕೇರಿದರು. ಕಲ್ಲೆಣ್ಣೆಯ ಹುಟ್ಟುವಳಿಯು ಹೆಚ್ಚಾದಂತೆ ಇದ್ದಲಿಯ ಉಪಯೋಗವು ಕಡಿಮೆಯಾಗಹತ್ತಿತು. ಇದಲ್ಲದೆ, ನೀರಿನಿಂದ ವಿದ್ಯುತ್ತನ್ನು ಹುಟ್ಟಿಸಿ, ಅದರಿಂದ ದೊಡ್ಡ ದೊಡ್ಡ ಕಾರಖಾನೆಗಳನ್ನು ನಡೆಸುತ್ತಿದ್ದಾರೆ. ಇದೂ ಅಲ್ಲದೆ ಜರ್ಮನಿಯಲ್ಲಿ ಲಿಗ್ನಾಯಿಟವೆಂಬ ಕೃತ್ರಿಮ ಉರವಲವನ್ನು ಹುಟ್ಟಿಸಿದ್ದಾರೆ ಹೀಗಾಗಿ ಇಂಗ್ಲಂಡದ ಇದ್ದಲಿಯ ವ್ಯಾಪಾರವು ಬಹಳ ಮಂದವಾಗಿದೆ. ಈ ವ್ಯಾಪಾರದ ಕೇಂದ್ರವಾದ ಹೊತ್ತರ ಕೂಲಿಕಾರರ ಹೊಟ್ಟೆಯ ವ್ಯವಸ್ಥೆಯಾಗಬೇಕೆಂದು ಮುಂಬಯಿಯ ಗವ್ಹರ್ನರರಾಗಿದ್ದ ಸರ ಲಾಯಿಡ ಜಾರ್ಜ ಸಾಹೇಬರು ಪಾರ್ಲಮೆಂಟ ಸಭೆಯಲ್ಲಿ ಗಟ್ಟಿಸುರು ಹಾಕಿದ್ದಾರೆ.

ಹಿರದಿನ ಬಾಳೇಹಣ್ಣುಗಳು

—o—

ಗೋವೆ ಪ್ರಾಂತದಲ್ಲಿ ಮಿಂಡೋಳಿ ಎಂಬ ಜಾತಿಯ ಬಾಳೇಹಣ್ಣುಗಳಾಗುತ್ತವೆ. ಪೋರ್ತುಗೀಜರು ಇವನ್ನು ಈ ದೇಶಕ್ಕೆ ತಂದಿದ್ದಾರೆ. ಇವು ಮೂರಾಳೆತ್ತರ ಬೆಳೆಯುವವು. ಒಂದು ಗೊನೆಯಲ್ಲಿ ನೂರರ ತನಕ ಹಣ್ಣುಗಳಾಗುವವು. ಇವು ಒಂದು ಫೂಟು ಉದ್ದ ಮತ್ತು ನಾಲ್ಕು ಇಂಚು ಗಾತ್ರವಿರುತ್ತವೆ. ಒಂದು ಗೊನೆಯನ್ನು ಒಬ್ಬ ಮನುಷ್ಯನು ದಣೀ ಹೊರುವನು. ಹಣ್ಣು ಬಹಳ ರುಚಿಕರ. ಬಹಳ ದಿವಸ ಇಡೆಯುತ್ತವೆಂಬುದು ಇದರಲ್ಲಿಯ ವಿಶೇಷ ಗುಣ.

ಜಪಾನದೇಶದಲ್ಲಿ ವ್ಯಕ್ತಿಯಾವನು ಪ್ರಬುದ್ಧನಾದ ಕೂಡಲೆ, ಚುನಾವಣೆಯಲ್ಲಿ ಅತನಿಗೆ ಮತಕೊಡುವ ಹಕ್ಕುಂಟಾಗುತ್ತದೆಂಬ ಬಿಲ್ಲು ಪಾಸಾಯಿತು.

(ಬರದ ಹಸರಿಕೆಯಿಂದ)

ಮೇವಿನ ಸಂಗ್ರಹ.

—o—

ಬರ ಬೀಳುವ ಭಾಗದಲ್ಲಿ ಮುಂಬಯಿ ಸರಕಾರದವರು ಮೇವಿನ ಸಂಗ್ರಹ ಮಾಡಿಡುವಂತೆ ಒಂದು ಠರಾವು ಪಾಸ ಮಾಡಿದ್ದಾರೆ. ಅಹಮದನಗರ ಜಿಲ್ಲೆಯು ಬರದ ಆಗರವು. ಇಲ್ಲಿ ಐದು ಕೋಟಿ ಪೌಂಡು ಕಣಿಕೆಯನ್ನು ಕಾದಿಡುವರು. ಅಲ್ಲಿಯ ಡಿಸ್ಟ್ರಿಕ್ಟ ಲೋಕಲ ಬೋರ್ಡಿನವರು ಇದಕ್ಕಾಗಿ ೨॥ ಲಕ್ಷ ರೂಪಾಯಿಗಳನ್ನು ಕೊಡಲೊಪ್ಪಿದ್ದಾರೆ. ಕಣಿಕೆಯ ವ್ಯಾಪಾರದಲ್ಲಿ ಲಾಭಬಂದರೆ ಅದನ್ನು ಬರದ ಕೆಲಸಕ್ಕೇ ಉಪಯೋಗಿಸುವರು. ಅಹಮದನಗರದಂತೆ ವಿಜಾಪೂರ, ಧಾರವಾಡ, ಬೆಳಗಾವ ಜಿಲ್ಲೆಗಳಲ್ಲಿಯೂ ಅಲ್ಲಲ್ಲಿ ರೈತರಿಗೆ ಅನುಕೂಲವಾಗುವಂತೆ ಕಣಿಕೆಯ ಸಂಗ್ರಹ ಮಾಡುವರು.

ವೃಷ್ಟಿಯನ್ನು ಕೂಗುವ ಯಂತ್ರ

ಅಮೇರಿಕೆಯ ಡಾಕ್ಟರ ವಾಲ ಹಮ್ಮಲ ಸಾಹೇಬನು ತಾನು ಕೂತಲ್ಲಿ ವೃಷ್ಟಿಯು ಆಗ ಮಾಡುವಂಥ ಒಂದು ಯಂತ್ರವನ್ನು ತಯಾರ ಮಾಡುತ್ತಲಿದ್ದಾನೆ. ಈ ಯಂತ್ರದ ಛಾಯಾಚಿತ್ರವು ಆ ದೇಶದ ವರ್ತಮಾನ ಪತ್ರಗಳಲ್ಲಿ ಬಂದಿರುತ್ತದೆ.

ಧಾರವಾಡ ಮತ್ತು ಕರ್ನಾಟಕ

—o—

ಕರಾಚಿಯ ಮಿ. ಸಂದರಾಂಗಿಯವರು ದಕ್ಷಿಣ ಭಾಗದ ಟ್ರೇನಿಂಗ ಎಜ್ಯುಕೇಶನಲ ಇನ್ಸಪೇಕ್ಟರರಾಗಿ ನೇಮಿಸಲ್ಪಟ್ಟಿದ್ದಾರೆ.

ಮಿ. ಶ್ರೀನಿವಾಸ ಸ್ವಾಮಿರಾವ ದೇಶಪಾಂಡೆಯವರು ವಿಜಾಪೂರದ ಹು. ಡಿ. ಕಲೆಕ್ಟರರಾಗಿ ನೇಮಿಸಲ್ಪಟ್ಟಿದ್ದಾರೆ.

ಸದರ್ನ ಮರಾಠಾ ರೇಲ್ವೆ ಕಂಪನಿಯವರು ಅಲ್ಲಲ್ಲಿ ಮೋಟಾರ ಸರ್ವಿಸ ಇಡುವರೆಂಬ ಸುದ್ದಿಯು ನಿಜವೆ ಎಂದು ರಕ್ಷಸಗಿಯ ದೇಸಾಯರು ಕೌನ್ಸಿಲದಲ್ಲಿ ಪ್ರಶ್ನೆ ಕೇಳಿದ್ದರು. ಇದು ಪೂರಾ ಸುಳ್ಳೆಂದು ಸರಕಾರದವರು ಉತ್ತರ ಕೊಟ್ಟಿದ್ದಾರೆ.

ಮುಂಬಯಿಯ ಗವ್ಹರ್ನರರಾದ ನಾಮದಾರ ವಿಲ್ಸನ ಸಾಹೇಬರು ಬರುವ ತಿಂಗಳ ೧೧ ತಾರೀಖಿಗೆ ಬೆಳಗಾವಿ ಬರುವರು. ಅಲ್ಲಿಂದ ಕೊಲ್ಹಾಪೂರಕ್ಕೆ ಹೋಗಿ, ಮಹಾರಾಜರ ಆತಿಥ್ಯ ಸತ್ಕಾರ ಹೊಂದಿ, ನಾಲ್ಕು ದಿವಸ ಆ ರಾಜ್ಯದಲ್ಲಿ ಬೇಟೆಯಾಡಿ, ಮಹಾಬಳೇಶ್ವರಕ್ಕೆ ಹೋಗುವರು. ಅಲ್ಲಿಂದ ಗಲನೆಯ ತಿಂಗಳಿನ ದಿವಸ ಮುಂಬಾಪುರಕ್ಕೆ ಬಂದು ನಾಲ್ಕು ದಿವಸ ಅಸೆಂಬ್ಲಿಯನ್ನು ನೋಡುವರು. ಅಗಸ್ಟದ ಅಸೆಂಬ್ಲೀಯಲ್ಲಿ ಬೇಟಿಯನ್ನು ಅವರೆಂಬುದು ನಿಜ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ.

ಮಂಗಳವಾರ ಪೇಟೆ, ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೋಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ

[illegible] ಆಕರ್ಷಕವಾದ [illegible] ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ನಡೆಯುವವು. [illegible] ದರದ [illegible] ಬಡ್ಡಿ ಕೊಡಲಾಗುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. [illegible],
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ

ಧಾರವಾಡ.

ಈ ಬ್ಯಾಂಕಿನಲ್ಲಿ [illegible], ನಾಲ್ಕು [illegible] ತಿಂಗಳ [illegible] ಹಣವನ್ನು [illegible] ದರವನ್ನು [illegible] ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ [illegible] ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ [illegible]

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ಆರ್. ಎಮ್. ಜಾನ್ ಎಂಡ ಸನ್ಸ, ಹುಬ್ಬಳ್ಳಿ.

ಎಜಂಟ್ಸ ಫೋರ [illegible] ಆಸಿಡ್ಡ ಗ್ಯಾಸ, ಮ್ಯಾನ್ಯುಫ್ಯಾಕ್ಚರರ್ ಆಫ್ ಏರೇಟೆಡ ವಾಟರ್ಸ.

ನಮ್ಮಲ್ಲಿ ಸಿಗುವ ಸಾಮಾನುಗಳ ವಿವರ

[illegible] ಸಿಲಿಂಡರಗಳು [illegible] ಗ್ಲಿಸ ಮತ್ತು [illegible] ಬಾಟ್ಲ್ಸ, [illegible] ಸೋಡಾ ವಾಟರ [illegible] ಬಾಟಲಿಗಳು, [illegible]



[illegible] ನಂ. ೧ [illegible]. ಸೋಡಾವಾಟರ ಮಶಿನುಗಳು ಮತ್ತು ಎಲ್ಲ ತರದ ಕಲರಿನ ಬಾಟಲಿಗಳ [illegible], ಅಮೇರಿಕನ್ ಆಯ್ಸ್ಕ್ರೀಮ ಸೋಡಾ, ಬನಾನಾ, ಕೋಲಾ [illegible], ಲಮನ್ ನಂ. ೧ [illegible] ಸೋಡಾ ನಂ. ೧ ಮೆಂಗೋ, ಆರೇಂಜ, ಫಾಯಿನಾಪಲ್, ಪಿಕ್ಕಮಿಅಪ್, [illegible] ಟಾನಿಕ್, [illegible] ನಂ. ೧ [illegible] ನಂ. ೧ ಸ್ಟೋನ್ ಜಿಂಜರ ಬೀರ ನಂ. ೧, ರಬ್ಬರ ರಿಂಗ್ಸ, [illegible] ಇತರ [illegible] ಸಾಮಾನುಗಳು ನಮ್ಮಲ್ಲಿ ಸಿಗುತ್ತವೆ. ಮತ್ತು ಶುದ್ಧ [illegible] ಎಣ್ಣೆಯ ಎಲ್ಲ ತರದ ಬಾಟಲಿಗಳು ಸಿಗುತ್ತವೆ. ವ್ಯಾಪಾರಸ್ಥರಿಗೆ ಒಳ್ಳೇ ಕಮೀಶನ ಕೊಡುತ್ತೇವೆ. ನಮ್ಮಲ್ಲಿ [illegible] ಸಿಂಗಲ [illegible] ಸೋವಿ ದರದಿಂದ ಮಾರಲಿಕ್ಕೆ ಸಿಗುತ್ತವೆ.

ಅಡ್ರೆಸ್— R. M. John &Sons.
Mission Compound HUBLI

ದಿ. ಅಂಕಲಗಿ ಬ್ಯಾಂಕ ಲಿಮಿಟೆಡ್

ಧಾರವಾಡ.

೧೯೧೩ ಇಸ್ವಿಯ

ಕಂಪನಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. [illegible] ಬಾಕಿ, ಸೇವ್ಹಿಂಗ್ಸದ ಡಿಪಾಜಿಟ, [illegible], ಹುಂಡಿ, ಮುಂತಾದ ಯಾವತ್ತು ವ್ಯವಹಾರಗಳು ನಡಿಯುವವು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿಮಾಡುವವರಿಂದ ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ [illegible] ರಿಂದ ೧೧-೩೦. ಸಾಯಂಕಾಲ [illegible] ರಿಂದ [illegible] ವರೆಗೆ ನಡಿಯುವದು.

K.B. Ankalagi
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ

ನಿತ್ಯಪತ್ರಕ್ಕೆ

೧೨ ತಿಂಗಳಿಗೆ	೧೨—[illegible]—೦ ರೂ
[illegible] ,,	[illegible]—೦—೦ ರೂ
[illegible] ,,	[illegible]—೦—೦ ರೂ
ವಾರಪತ್ರಕ್ಕೆ ೧ ವರ್ಷಕ್ಕೆ	[illegible]—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ
ಮ್ಯಾನೇಜರ ವಿಜಯ, ಧಾರವಾಡ

ಜಾಹೀರಾತಿನ ದರಗಳು.

ಸಿಂಗಲ ಕಾಲಮಿನ ಹತ್ತು ಪಂಕ್ತಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಂಕ್ತಿಗೆ ಒಂದು [illegible] ಇಂಗ್ಲಿಷ ಪ್ರತಿಯೊಂದು ಒಳಗೆ [illegible] ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಾದರೆ [illegible] ಡಬಲ್ ಕಾಲಮಿನ ಒಳಗೆ [illegible] ಜಾಹೀರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು.

ಮ್ಯಾನೇಜರ ಧಾರವಾಡ ವಿಜಯ

ನೋಟೀಸು

[illegible] ನೋಟೀಸು [illegible] ಹುಡುಗನು [illegible] ಹೇಳಿಕೊಂಡು [illegible] ಈ ನೋಟೀಸಿನ ಮುಖಾಂತರ ತಿಳಿಸಿಕೊಡುವದೇನಂದರೆ—

ನೀನು ನನಗೆ [illegible] ನನ್ನನ್ನು [illegible] ದುಕಾನದಲ್ಲಿ [illegible] ಮನೆಗೆ ಕಳಿಸಿದ [illegible] ಮನೆಯವರು ಕರಕೊಂಡು ಹೋಗುವ ಬಗ್ಗೆ [illegible] ಸಾರಿ [illegible] ಕರಕೊಂಡು ಹೋಗಲಿಲ್ಲ ನನಗೆ [illegible] ಇಲ್ಲದರಿಂದ [illegible] ನನ್ನನ್ನು [illegible] ಮಾಡಿದ್ದರಿಂದ ನಾನು [illegible] ಅಂದಲಗಿಯಲ್ಲಿ ನನ್ನ [illegible] ಮನಿಯಲ್ಲಿ ಸಾಲಾ ಮಾಡಿ ಹೊಟ್ಟೀ [illegible] ಮಾಡಿಕೊಂಡೆ ಈಗ ಸಾಲದ [illegible] ಆಗಿದೆ ಸಾಲದವರಿಗೆ ೨೦೦ ರೂಪಾಯಿ ಕೊಡತಕ್ಕದ್ದು ಅದೆ ಕಾರಣ ಈ ನೋಟೀಸು ಮುಟ್ಟಿದ [illegible] ದಿವಸಗಳಲ್ಲಿ ನೀನು ಒಂದು ೨೦೦ ರೂಪಾಯಿ ಕೊಟ್ಟು ನನ್ನನ್ನು ಕರಕೊಂಡು ಹೋಗಬೇಕು. ಮುದ್ದತಿಯಲ್ಲಿ ಬಾರದೇ ಇದ್ರೆ ನಾನು [illegible] ಮಾಡಿಕೊಂಡು ಸಾಲದ [illegible] ಮಾಡಿಕೊಳ್ಳುತ್ತೇನೆ ಮುಂದಿ ನಿನ್ನ [illegible] ನನ್ನ ಮೇಲೆ ಇರುವದಿಲ್ಲ ಇದೇ ನೋಟೀಸ ಎಂದು ತಿಳಕೊಳ್ಳಬೇಕು—

ತಾರೀಖು ೨೬-೩-೧೯೩೫ ಇಸ್ವಿ

ಈ [illegible] ಹೆಬ್ಬಟ್ಟಿನ ಗುರ್ತ [illegible] ಕೊಂ [illegible] ಬಾಕೀ [illegible] ಇರುತ್ತದೆ

ಈ ಪತ್ರವನ್ನು [illegible] ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ [illegible] ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ನಿತ್ಯ ಪತ್ರ **ವಿಜಯ** ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೬) ಧಾರವಾಡ ಬುಧವಾರ ತಾರೀಖು ೧ ನೇ ಎಪ್ರಿಲ ೧೯[illegible] (ಸಂಖ್ಯೆ [illegible]

ಬೇಸಿಗೆ ಪ್ರಾರಂಭವಾಯಿತು!

ದನಗಳ ಆಹಾರವಾದ ಕಣಿಕೆಯನ್ನು ಕಾದಿಡಿರಿ !!

ಕಿರ್ಲೋಸ್ಕರ ಕಣಿಕೆ ಯಂತ್ರವನ್ನು ಉಪಯೋಗಿಸಿರಿ !!!

ನಮ್ಮ ಕಾರ್ಖಾನೆಯಲ್ಲಿ ಎರಡು ನಮೂನೆಯ ಕಣಿಕೆ ಕತ್ತರಿಯುವ ಯಂತ್ರಗಳು ತಯಾರಾಗುತ್ತವೆ. ಒಂದು ಕೈಯಂತ್ರ ಬೆಲೆ [illegible]. ಇನ್ನೊಂದು ಗಾಲೀಯಂತ್ರ ಬೆಲೆ [illegible] ರೂಪಾಯಿ ಸಣ್ಣ ಕಮತವುಳ್ಳವರು ಕೈ ಯಂತ್ರವನ್ನು, ದೊಡ್ಡ ಕಮತವುಳ್ಳವರು ಗಾಲೀ ಯಂತ್ರವನ್ನು ಉಪಯೋಗಿಸಬಹುದು. ಕಣಿಕೆಯು ೪ ಇಂಚುಗಳಿಂದ ಒಂದು ಇಂಚಿನ ವರೆಗೆ ತುಂಡರಿಸಲ್ಪಡುತ್ತದೆ.

ಸವಿಸ್ತರ ಸಂಗತಿಯ ಬಗ್ಗೆ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ } ಕಿರ್ಲೋಸ್ಕರವಾಡಿ-
ಜಿಲ್ಹಾ ಸಾತಾರಾ.

ಕುಸು ಶ್ರಮದ ಮತ್ತು ಎರಡೇ ಆಣೆಯಲ್ಲಿ

ತಲೆಶೂಲೆ, ಅರತಲೆಶೂಲೆ, ಮ[illegible] ಶೂಲೆಯು ಒಂದೇ ಕ್ಷಣದಲ್ಲಿ ನಿಂತುಹೋಗುವ

ಬಂಡುಗಿವ ನಮ್ಮ

ಮೊಮೆಂಟ ಕ್ಯೂರ

ಇದನ್ನು ಒಮ್ಮೆಯಾದರೂ ತಕ್ಕೊಳ್ಳಿರಿ. ಮೂರಾಣೆಯ ಟಿಕೀಟು ಕಳಿಸಿದರೆ ಸ್ಯಾಂಪಲ [illegible]ದರಿ) ಕಳಿಸುವೆವು.

ನಮ್ಮ ಔಷಧಾಲಯದಲ್ಲಿ ಡಾಕ್ಟರರ ಪ್ರಿಸ್ಕ್ರಿಪ್ಷನ್ ಪ್ರಕಾರ ಅತ್ಯಂತ ಕಾಳಜಿ ಮತ್ತು [illegible]ತೆಯಿಂದ ಔಷಧವನ್ನು ತಯಾರ ಮಾಡಿ ಕೊಡುವೆವು. ದರ ತೀರ ಸೋವಿ.

ವಿಳಾಸ— ದಿ ಕರ್ನಾಟಕ ಮೆಡಿಕಲ ಸ್ಟೋರ್ಸ್, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ
ಸ್ಟೇಶನರೋಡ ಹುಬ್ಬಳ್ಳಿ

ಮಹಾತ್ಮರು ದಕ್ಷಿಣ ಹಿಂದುಸ್ಥಾನದ ಪ್ರ[illegible]ಸವನ್ನು ತೀರಿಸಿಕೊಂಡು ಆಹಮದಾಬಾದ ಕಲ್ಪಿ[illegible]

ಧಾರವಾಡ

ಮೊನ್ನಿನ ದಿವಸ ಸಾಯಂಕಾಲದಲ್ಲಿ ಹುಬ್ಬಳ್ಳಿಯಲ್ಲಿ ಮಳೆಯಾಯಿತು.

ನೋಟೀಸು

ದೇವಕ್ಕೆವ್ವಾ ಕೋಂ ಯಮನಪ್ಪಾ [illegible] ಸಂರಕ್ಷಣದಾರ ಅಣ್ಣಾ [illegible] ಕೋಂ [illegible] ರಪ್ಪಾ ಹೊಸ್ಮನಿ [illegible] ಬಣಜಿಗ [illegible] ಇವರಿಗೆ ಸಹ ಮಾಡುವದು. ಈ ನೋಟೀಸಿನ ದ್ವಾರ ತಿಳಿಸುವದೇನೆಂದರೆ ಕುಬೇರಪ್ಪಾ [illegible] ಸುಂದರವ್ವನ ತಂದೆಯಾದ ಬಸಪ್ಪಾ [illegible] ಗಂಡನಾದ ಯಮನಪ್ಪಾ ಈ ಉಭಯತರು [illegible] ಹೊಟ್ಟೆಮಕ್ಕಳು ಇದ್ದರು. ಕುಬೇರಪ್ಪನ ನಂತರಾ ಈ ಉಭಯತರು ಮಕ್ಕಳು ಸತ್ತರು [illegible] ಬಾಬತ ಯಾವತ್ತು ಆಸ್ತಿ ನಿಮ್ಮ ಕಡಿಗೆ ಇರುತ್ತದೆ. ಈ ಸುಂದರವ್ವನ ತಂದಿ ತಾಯಿಗಳು ಎಂದು [illegible] ಕರಿಸು ಬಿಟ್ಟು ಸತ್ತರು [illegible] ಈ [illegible] ಅವ್ವ ಇದ್ದಲ್ಲಿಂದಾ [illegible] ವರೆಗೆ ಅಂದರೆ ಆರು ವರ್ಷಗಳ [illegible] ಬೇಡೀ ವಾಸ ಮಾಡುತ್ತೇನೆ ಪೋಷಣ ಮಾಡಲಿಕ್ಕೆ ವರ್ಷಾ ಒಂದಕ್ಕೆ ರೂಪಾಯಿ ದಂತೆ ಆರು ವರ್ಷಕ್ಕೆ ಮುನ್ನೂರು ರೂಪಾಯಿ ಖರ್ಚಾಗಿರುತ್ತದೆ. ಈ ಬಾಬತ ಖರ್ಚ ನಿಮಗೆ ಕೇಳಿದರೆ ನೀವು ಕೊಡಲಿಲ್ಲಾ. ಕಾರಣಾ ಈ ನೋಟೀಸ ಮುಟ್ಟುವ ಭಾಗ ಬತ್ತು ಈ ನೋಟೀಸ ಮುಟ್ಟಿದ ಬಳಿಕ ದಿವಸದಲ್ಲಿ ನನಗೆ ಹಿಂದಿನ ಖರ್ಚ ಕೊಟ್ಟು ಮುಂದೆ ನಗರ ಸುಂದರವ್ವನ ವಯಸ್ಸಿಗೆ ಬರುವ ವರೆಗೆ ಆಕೆಗೆ [illegible] ಖರ್ಚ ಮ ಲಗ್ನದ ಖರ್ಚಿನ ವ್ಯವಸ್ಥಾ ಸಹಾ ಮಾಡಿ ಕೊಡಬೇಕು. ಇಲ್ಲವಾದರೆ ನಿಮ್ಮ ಮೇಲೆ ಕಾಯದೇಶೀರ ಇಲಾಜ ನಡಿಸಿ ವಸೂಲ ಮಾಡಿಕೊಳ್ಳುವದರಲ್ಲಿ ಬಂದೀತು. ಈ ನೋಟೀಸಿನ ಖರ್ಚ ಸಹಾ ನಿಮ್ಮ ತಲೆಯ ಮೇಲೆ ಬಿದ್ದೀತು.

ತಾರೀಖು [illegible] ಇಸ್ವಿ

ಈ ಎಡಗೈ ಹೆಬ್ಬೆಟ್ಟಿನ ಗುರ್ತು ಸುಂದರವ್ವಾ ತಂದಿ ಬಸಪ್ಪಾ ಹೊಸ್ಮನಿಯವರ [illegible] ದಾರ ಅಣ್ಣಾ ಬಾಳಪ್ಪಾ ಕೋಂ [illegible] ಲಂಗೋಟಿ ಸಾ॥ ಬಂಕಾಪುರ ತಾಲ್ಲೂಕ [illegible] ಮಾಡಿದ್ದು ಅದೆ.

ವಿಜಯ.

ಧಾರವಾಡ ತಾ- ೧-೪-೨೫ ನೇ ಇಸ್ವಿ

ಹುಬ್ಬಳ್ಳಿ ಮ್ಯುನಿಸಿಪಾಲಿಟಿಯ ಚುನಾವಣೆಯು.

—೦—

ಈ ಮ್ಯುನಿಸಿಪಾಲಿಟಿಯ ಚುನಾವಣೆಯು ಇದೇ ತಿಂಗಳ ೧೭ನೆಯ ತಾರೀಖಿನ ದಿವಸವಾಗುವದು. ಹದಿನೈದೇ ದಿವಸಗಳ ಅಂತರವಿರುವದರಿಂದ, ಉಮೇದವಾರರ ಹಾಗು ಅವರ ಹಸ್ತಕರ ಗಡಬಡಿಯು ಹೆಚ್ಚಾಗಿರುತ್ತದೆ. ವಿಲಾಯತಿಯಲ್ಲಿ ಪ್ರಧಾನರಾದವರು ಚುನಾವಣೆಯ ಸಮಯದಲ್ಲಿ ತಾವು ಮಾಡಿದ ಕೆಲಸ ಮತ್ತು ಮುಂದೆ ಮಾಡಬೇಕೆಂದಿರುವ ಕೆಲಸದ ವಿವರವನ್ನು ಮತದಾರರ ಮುಂದಿಡುವರು. ಮ್ಯುನಿಸಿಪಾಲಿಟಿಯು ಸ್ಥಾನಿಕ ಸ್ವರಾಜ್ಯವಿದ್ದು ಆ ಪ್ರಕಾರ ಅಧಿಕಾರ ಪದಾರೂಢರಾದವರು ಕಳೆದ ಮೂರು ವರ್ಷಗಳಲ್ಲಿ ತಾವು ಮಾಡಿದ ಕರ್ತೃತ್ವವನ್ನು ಮತದಾರರ ಮುಂದಿಟ್ಟು, ಮುಂದಿನ ಮೂರು ವರ್ಷಗಳಲ್ಲಿ ಮಾಡಬಯಸುವ ಲೋಕೋಪಯೋಗಿ ಕೆಲಸಗಳ ದಿಗ್ದರ್ಶನ ಮಾಡಿದರೆ ಮತದಾರರ ಬಾಗಿಲಕ್ಕೆ ಹೋಗಿ ಧರ್ಮದ ವೋಟು ಬೇಡುವ ಕಾರಣವೇ ಉಂಟಾಗಲಾರದು. ಈ ಪ್ರಕಾರ ಇವರು ಸ್ವಪಕ್ಷ ಸಮರ್ಥನದ ಯೋಗ್ಯ ಮಾರ್ಗ ಕೈಕೊಂಡು, ಈಗಾಗಾದರೂ ಒಂದು ಜಾಹೀರ ಪತ್ರಿಕೆಯನ್ನು ಪ್ರಸಿದ್ಧ ಮಾಡುವರೆಂದು ನೆರೆ ನಂಬಿದ್ದೇವೆ.

ಮ್ಯುನಿಸಿಪಾಲಿಟಿಯ ಕಾರಭಾರದ ವಿಷಯವಾಗಿ ವಿಜಯದಲ್ಲಿ ಹಲವು ಸಾರೆ ಟೀಕೆ ಬಂದಿರುತ್ತದೆ. ಇಂಥ ಟೀಕೆಗಳು ಮ್ಯುನಿಸಿಪಾಲಿಟಿಯ ಮೈಗೆ ಹತ್ತುವದೇ ಇಲ್ಲ. ಆದರೆ ಚುನಾವಣೆಯ ಸಮಯ ಬಂದ ಕೂಡಲೆ, ಗಡ್ಡಕ್ಕೆ ಬೆಂಕಿ ಹತ್ತಿದವರಂತೆ ಚೇತರಿಸುತ್ತಾರೆ. ಒಂದೇ ಉದಾಹರಣೆ ಹೇಳುವೆವು. ಇಲ್ಲಿಯ ಮೇದಾರ ಓಣಿಯು ಇಳುಕಲಿನಲ್ಲಿದ್ದು ದೊಡ್ಡ ರಹದಾರಿಯಾಗಿದೆ. ಇಲ್ಲಿ ಪಕ್ಕಾ ಗಟಾರ ಇಲ್ಲದ್ದರಿಂದ, ಮಳೆಗಾಲದಲ್ಲಿ ಆ ಓಣಿತುಂಬ ಹೊಲಸುರಾಡಿಯಾಗಿ ಅಲ್ಲಿರತಕ್ಕವರಿಗೆ ಬಹಳ ತ್ರಾಸವಾಗುತ್ತದೆ. ಈ ಓಣಿಯವರು ಪಕ್ಕಾ ಗಟಾರ ಕಟ್ಟಬೇಕೆಂದು ಕಂಠ ಹೊಡೆದರೂ, ಮ್ಯುನಿಸಿಪಾಲಿಟಿಯು ತಾತ್ಸಾರ ಮಾಡಿತು. ವೋಟಿನ ಸಮಯ ಬಂದ ಕೂಡಲೆ, ಪಕ್ಕಾ ಇಲ್ಲದಿದ್ದರೂ, ಕಚ್ಚಾ ಗಟಾರ ಮಾಡಿ, ವೋಟಿನ ಯಾಚನೆ ಮಾಡಬೇಕೆಂದಿರುತ್ತಾರೆ. ಈ ಕೃತ್ಯವು ಮಂಕಬೂದಿಯನ್ನು ತಿನಿಸುವದಾಗಿರುತ್ತದೆಂದು ಕೆಲವರು ಆ ಬೀದಿಯ ಫೋಟೋ ತೆಗೆದುಕೊಂಡು, ಒಂದು ಫಿರ್ಯಾದೆ ಮಾಡಿಟ್ಟಿದ್ದಾರೆಂದು ತಿಳಿಯುತ್ತದೆ

ಅಧಿಕಾರ ಪದಾರೂಢರಾದವರು ಇನ್ನೊಂದು ಸಂಗತಿಯ ವಿಚಾರ ಮಾಡತಕ್ಕದ್ದಾಗಿದೆ. ಚುನಾವಣೆಯಲ್ಲಿ ಬ್ರಾಹ್ಮಣ-ಬ್ರಾಹ್ಮಣೇತರವೆಂಬ ಭೇದ ಮಾಡುವದಿದ್ದರೆ- ಮಾಡಲಿ; ಸರಕಾರದವರೇ ಬ್ರಾಹ್ಮಣ ಬ್ರಾಹ್ಮಣೇತರವೆಂದು ಭೇದ ಮಾಡಿದ ಬಳಿಕ ಮ್ಯುನಿಸಿಪಾಲಿಟಿಯು ಮಾಡಿದರೆ- ಅದು ಒಪ್ಪುವಂಥ ಮಾತಾಗದಿದ್ದರೂ, ತಪ್ಪಿನಲ್ಲಿ ಎಣಿಸಲಿಕ್ಕೆ ಬರಲಾರದು. ಬ್ರಾಹ್ಮಣೇತರರಾದ ತಾವು ಒಳಭೇದಗಳ ಮೆಂಬರರನ್ನೂ ಮತದಾರರನ್ನೂ ಸಂತೋಷದಲ್ಲಿಟ್ಟಿರುವೆವೇ ಎಂಬದಾಗಿ ವಿಚಾರ ಮಾಡತಕ್ಕದ್ದು ಅವಶ್ಯವಾದ ಧರ್ಮವಾಗಿದೆ. ಈ ಪ್ರಕಾರ ಸಂತೋಷದಲ್ಲಿಡದೆ ಇವರು ಅನೇಕರ ಸಹಾನುಭೂತಿಯನ್ನು ಕಳಕೊಂಡಿದ್ದಾರೆಂದು ನಾವು ಬರೆಯುವದು ಅಪ್ರಸ್ತುತವಾಗಲಾರದು. ಸಹಾನುಭೂತಿಯು ತಪ್ಪಬೇಕಾದರೆ- ಅಂಥ ಪ್ರಮಾದವೇ ಆಗಬೇಕಾಗುತ್ತದೆಂಬದನ್ನು ಮರೆಯಕೂಡದು.

ಹಿಂದಿನ ಚುನಾವಣೆಯಲ್ಲಿ ಖಿಲಾಫತ ಕಮಿಟಿಯವರು ಮ್ಯುನಿಸಿಪಾಲಿಟಿಗೆ ಬಹಿಷ್ಕಾರ ಹಾಕಿದ್ದರು. ಕಾಂಗ್ರೆಸ ಮತ್ತು ಖಿಲಾಫತದ ಠರಾವಿನನ್ವಯ ಅಸಹಕಾರ ಹೋದದ್ದರಿಂದ, ಸ್ವರಾಜ್ಯ ಮತ್ತು ಖಿಲಾಫತ ಪಕ್ಷದ ಮುಸಲಮಾನರು ಉಮೇದವಾರರಾಗಲಿಕ್ಕೆ ಅಡ್ಡಿ ಇರುವದಿಲ್ಲ. ಖಿಲಾಫತ ಕಮಿಟಿಯವರು ಈ ಬಗ್ಗೆ ವಿಚಾರ ಮಾಡಿ, ತಮ್ಮ ವತಿಯಿಂದ ಉಮೇದವಾರರನ್ನು ನೇಮಿಸಿದರೆ- ಮ್ಯುನಿಸಿಪಾಲಿಟಿಯು ಎಷ್ಟೋ ಮಟ್ಟಿಗೆ ಸ್ವತಂತ್ರ ವೃತ್ತಿಯದಾಗುವದು. ಪ್ರಮುಖರೆಂಬ ಕಾರಣದಿಂದ ಚುನಾವಣೆಯಲ್ಲಿ ಮತ ಕೊಡದೆ, ತತ್ವದ ದೆಸೆಯಿಂದ ಮತಕೊಡುವದು ಭೂಷಣವಾಗುತ್ತದೆ. ಹಿಂದೂ ಇರಲಿ, ಮುಸಲಮಾನರಿರಲಿ ದೊಡ್ಡವರೆಂದು ವೋಟು ಬೇಡದೆ ಕೆಲವೊಂದು ಧ್ಯೇಯದ ದೆಸೆಯಿಂದ ವೋಟು ಬೇಡುವದೇ ಭೂಷಣವು.

ಪ್ರಿನ್ಸ ಆಫ ವೆಲ್ಸರ ೨೫೦೦೦ ಮೈಲಿನ ಪ್ರವಾಸ

ಇಂಗ್ಲಂಡದ ಯುವರಾಜರಾದ ಪ್ರಿನ್ಸ ಆಫ ವೆಲ್ಸರು ದಕ್ಷಿಣ ಆಫ್ರಿಕೆ ಮೊದಲಾದ ವಸಾಹತುಗಳನ್ನು ನೋಡಲಿಕ್ಕೆ ಹೋಗುವರು. ಈ ಪ್ರವಾಸವು ಸಮುದ್ರದಲ್ಲಿ ೨೦ ಸಾವಿರ ಮತ್ತು ನೆಲದಲ್ಲಿ ಐದು ಸಾವಿರವಾಗುವದು. ದೇಶಾಟನವು ಮುಗಿಯಲಿಕ್ಕೆ ಆರು ತಿಂಗಳು ಹತ್ತುವವು.

ಹಿಂದುಸ್ಥಾನದ ಸೇನಾಧಿಪತಿಗಳ ಶೋಚನೀಯ ಮೃತ್ಯು

—೦—

ಹಿಂದುಸ್ಥಾನದ ಸರ್ವಸೇನಾಧಿಪತಿಯಾದ ಲಾರ್ಡ ರಾವಲಿನಸನ ಸಾಹೇಬರಿಗೆ ಮಹಾತ್ಮರಿಗಾದಂಥ ರೋಗವಾಯಿತು. ಡಾಕ್ಟರರು ಹಿಂದೂರಾವ ಎಂಬ ಆಸ್ಪತ್ರಿಯಲ್ಲಿ ಇದನ್ನು ಕೊಯ್ದರು. ಸಾಹೇಬರಿಗೆ ೬೧. ವರ್ಷ. ಹಿಂದೂ ಜನರ ವಯೋಮಾನದ ಪ್ರಕಾರ ಇದು ಮುಪ್ಪಿನ ವಯಸ್ಸಾದರೂ, ಯುರೋಪಿಯನರ ವಿಚಾರದಿಂದ ನಡುಹರೆಯದ್ದು. ಆದ್ದರಿಂದ ಶಸ್ತ್ರಕ್ರಿಯೆಯಿಂದ ರೋಗನಿವಾರಣೆಯಾಗಿ ಗುಣವಾಗಬೇಕಾಗಿತ್ತು ಆದರೆ ಈಶ ಸಂಕಲ್ಪವೇ ಬೇರೆಯಾಯಿತು. ಇಂಗ್ಲಂಡದಲ್ಲಿ ಲಾರ್ಡ ಕರ್ಜನರು ಶಸ್ತ್ರಕ್ರಿಯೆಯಿಂದಲೇ ದಿವಂಗತರಾಗಿ ಒಂದು ವಾರವಾಗಲಿಲ್ಲ. ಇಷ್ಟರಲ್ಲಿ ಇಷ್ಟೊಬ್ಬ ದೊಡ್ಡ ಮನುಷ್ಯರು ಪರಲೋಕವಾಸಿಯಾದರೆಂಬದು ದುಃಖದ ಸಂಗತಿಯು. ಇವರಂತೆ ಮಹಾಯುದ್ಧದಲ್ಲಿ ಫ್ರಾನ್ಸದ ರಣರಂಗದಲ್ಲಿ ಬ್ರಿಟಿಶ ಸೇನಾಧಿಪತಿಯಾಗಿದ್ದ ಲಾರ್ಡ ಫ್ರೆಂಚ ಸಾಹೇಬರು ಶಸ್ತ್ರಕ್ರಿಯೆ ಮಾಡಿಸಿಕೊಂಡಿದ್ದು, ಅವರ ಪ್ರಕೃತಿಯೂ ಚಿಂತಾಜನಕವಾಗಿದೆ. ಇದರಿಂದ ಸದ್ಯದಲ್ಲಿ ಇಂಗ್ಲಂಡಕ್ಕೆ ಗ್ರಹ ಬಲ ನೆಟ್ಟಗಿಲ್ಲೆಂದು ಹೇಳುವಂತಾಗಿದೆ.

ಲಾರ್ಡ ರಾವಲಿನ ಸಾಹೇಬರು ಮಹಾಯುದ್ಧದ ನಂತರ ಈ ದೇಶಕ್ಕೆ ಬಂದ ಸೇನಾಧಿಪತಿಗಳು. ಇಲ್ಲಿಯ ಸೈನ್ಯದಲ್ಲಿ ಸಿಸ್ತು ಕೂಡಿಸಿ, ವೆಚ್ಚವನ್ನು ಪುಷ್ಕಳವಾಗಿ ಕಡಿಮೆ ಮಾಡಿದರು. ಹಿಂದುಸ್ಥಾನವೆಂಬದು ಒಂದು ಜನಾಂಗವಾಗದಿದ್ದರೂ, ಹಿಂದೀ ಜನರಿಗೆ ದಂಡಿನಲ್ಲಿ ಹುದ್ದೆಯ ಸ್ಥಳಗಳು ಸಿಗಬೇಕೆಂಬ ಮತದವರಾಗಿದ್ದರು. ಇವರು ಒಂದೆರಡು ತಿಂಗಳಲ್ಲಿ ಇಲ್ಲಿಂದ ಸ್ವದೇಶಕ್ಕೆ ತೆರಳತಕ್ಕವರಿದ್ದರು. ಇವರ ಸ್ಥಳದಲ್ಲಿ ಸರ ಬರ್ಡವುಡ ಸಾಹೇಬರ ನೇಮಣೂಕು ಕೂಡ ಆಗಿದೆ. ಮರಣವೇ ಈ ದೇಶದಲ್ಲಾಗಬೇಕೆಂದು ಬ್ರಹ್ಮನು ಬರೆದಿದ್ದನು. ಇಲ್ಲಿ ಇವರು ಪ್ರಾಣೋತ್ಕ್ರಮಣವಾದರೂ, ಇವರ ಜಡ ದೇಹವನ್ನು ವಿಲಾಯತಿಗೆ ಒಯ್ದು, ಅಲ್ಲಿ ಲಷ್ಕರೀ ಸಂಭ್ರಮದಿಂದ ಸ್ಮಶಾನ ವಿಧಿಯನ್ನು ನೆರವೇರಿಸುವರು.

ಹೊಲಿಗೆಯನ್ನು ಕಲಿಯುವ ಸಿಂಗರ ಕಂಪನಿಯಂಥ ತೀರ ಅಗ್ಗದ ಯಂತ್ರಗಳನ್ನು ಜರ್ಮನರು ಮಾಡಿದ್ದಾರೆ. ಇವುಗಳ ಬೆಲೆಯು ೧ನೆಯ ನಂಬರಕ್ಕೆ ೧೧ ಮತ್ತು ೪ನೆಯ ನಂಬರಕ್ಕೆ ೪ ರೂಪಾಯಿಯುಂಟು.

ಈ ದೇಶದಲ್ಲಿ ಸಂಚಾರಕ್ಕೆ ಬಂದಿದ್ದ ಬಾದಶಹರ ದ್ವಿತೀಯ ಪುತ್ರರಾದ ಡ್ಯೂಕ ಆಫ ಕನಾಟರು ಮರಳಿ ವಿಲಾಯತಿಗೆ ಪ್ರಯಾಣ ಬೆಳೆಸಿದರು.

ಸೀರಿಶ ಅರಸನ ದೇಶಗಳಲ್ಲಿ ಬಾವಿಗಳ ವ್ಯವಸ್ಥೆ.

—೦—

ಮುಂಬಯಿ ಸರಕಾರದವರು ಬರಗಾಲದಲ್ಲಿ ದನಗಳ ದೆಸೆಯಿಂದ ಮೇವಿನ ವ್ಯವಸ್ಥೆಯನ್ನು ಹೇಗೆ ಮಾಡುವರೆಂಬದನ್ನು ಹಿಂದಿನ ಸಂಚಿಕೆಯಲ್ಲಿ ಬರೆದಿರುತ್ತೇವೆ. ಸೀರಿಶ ಅರಸು ಇರುವಂಥ ಪ್ರಾಂತಗಳಲ್ಲಿ ಬಾವಿಗಳನ್ನು ತೋಡಿಸುವ ವಿಷಯವಾಗಿ ಸಹಾಯ ಮಾಡುವ ಒಂದು ಯೋಜನೆಯನ್ನು ಪ್ರಸಿದ್ಧ ಮಾಡಿದ್ದಾರೆ. ಸರಕಾರದವರು ಒಬ್ಬ ಬಲಶಿಲ್ಪಿಯನ್ನು ನೇಮಿಸಿದ್ದಾರೆ. ಮತ್ತು ಅನೇಕವಾಗಿ ಬೋರಿಂಗ ಮಶಿನುಗಳನ್ನು ಕೊಂಡಿದ್ದಾರೆ. ಶಿಲ್ಪಿಯು ಹೇಳಿದಲ್ಲಿ ಬಾವೀ ತೋಡುವರು. ಬಾವಿಯಲ್ಲಿ ನೀರು ಬಿದ್ದರೆ ರೈತನಿಗೆ ಬಾವೀ ಕಟ್ಟಲು ತಗಾಯಿ ಕೊಡುವರು. ನೀರು ಬೀಳದಿದ್ದರೆ ತಗಾಯಿಯ ಮೇಲಿನ ಬಡ್ಡಿ ಮಾತ್ರವಲ್ಲ; ತಗಾಯಿಯ ಮೂಲ ರಕಮನ್ನು ಬಂಶ್ಯಂಶವಾಗಿ ಸೂಟು ಬಿಡುವರು. ಸರಕಾರದವರು ಬರಗಾಲ ಫಂಡೆಂದು ಪ್ರತಿವರ್ಷ ಕೆಲವು ರಕಮನ್ನು-ಅದು ನಾಲ್ಕು ಕೋಟಿಯಾಗುವ ತನಕ ಪ್ರತ್ಯೇಕವಾಗಿ ತೆಗೆದಿಡುವರು ಈ ಫಂಡಿನಿಂದ ರೈತನ ಹಾನಿಯನ್ನು ತುಂಬಿಕೊಡುವರು.

—

ಜಾವಲಾ ಸಾಹೇಬರ ಕೊಲೆಯ ವಿಚಾರಣೆಯು.

—೦—

ಈ ವಿಚಾರಣೆಯ ಮೂರನೆಯ ದಿವಸ ಕೊಲೆಯ ವೇಳೆಯಲ್ಲಿ ಘಾಯಕರಾಗಿ ಹೋದಂಥ ಇಬ್ಬರು ಸಾಹೇಬರ ಸಾಕ್ಷಿಯಾಯಿತು. ಇವರು ಇಂದೂರಿಗೆ ಹೋಗಿ, ಪೋಲೀಸರು ಜನರಲ್ಲಿ ನಿಲ್ಲಿಸಿದಂಥ ಪೊಂಡೆ ಮತ್ತು ಡಿಫೆ ಇವರ ಗುರ್ತು ಹಿಡಿದಿದ್ದರು. ಈ ಪ್ರಕಾರ ಗುರ್ತು ಹಿಡಿದಂತೆಯೂ, ಕೊಲೆಯ ವೇಳೆಯಲ್ಲಿ ತಾವು ಮಾಡಿದ ಸಹಾಯವನ್ನೂ ಕುರಿತು ಜವಾಬು ಕೊಟ್ಟರು. ಇವರ ನಂತರ ನಾಲ್ಕೈದು ೭ ರ ಸಾಕ್ಷಿಗಳಾದವು.

—

ಖಾನನೆನು ಬಾವಲಾನ ಮನೆಯ ಕಾವಲಗಾರನಾದ ಭೈಯ್ಯಾನಿಗೆ ಎರಡು ಸಾವಿರರೂ ಲಂಚಕೊಟ್ಟು ಆತನನ್ನು ತಮ್ಮ ಸಂಚಿನಲ್ಲಿ ಕೂಡಿಸಿಕೊಳ್ಳುವ ಮಸಲತ್ತು ಮಾಡಿದನು. ಭಯ್ಯಾನು ರಾತ್ರಿಯಲ್ಲಿ ಬಾಗಿಲ ತೆಲೆಯಬೇಕು. ಇಂದೂರಿನವರು ಒಳಗೆ ಹೋಗಿ ಮುಮತಾಜಳನ್ನು ಸೆಗವಿಕೊಂಡು ಹೋಗಬೇಕೆಂದು ಈ ಮುಸಲತ್ತು ಆಗಿತ್ತು. ಬಾವಲಾನಿಗೆ ಈ ಸುದ್ದಿ ತಿಳಿಯಿತು. ಆತನು ಭಯ್ಯಾನನ್ನು ಹೊರಗೆ ಹಾಕಿದನೆಂದು ಅಲ್ಲಾ ಒಕ್ಷನೆಂಬವನು ಸಾಕ್ಷೀ ಹೇಳಿದ್ದಾನೆ.

ಸ್ವದೇಶದ ವಿರುದ್ಧ ಪರದೇಶಗಳಲ್ಲಿ ಕುಟಿಲ ಕಾರಸ್ಥಾನ.

—೦—

ವಿಲಾಯತಿಯಲ್ಲಿ ಸರ್ವ ಸಾಮಾನ್ಯವಾಗಿ ಒಂದು ದೇಶದವರು ಮತ್ತೊಂದು ದೇಶದ ವಿರುದ್ಧವಾಗಿ ಕುಟಿಲ ಕಾರಸ್ಥಾನದ ಅನೇಕ ಸುದ್ದಿಗಳನ್ನು ಹಬ್ಬಿಸುವರು. ರಶಿಯಾದ ವಿಷಯವಾಗಿ ಈ ದೇಶಕ್ಕೆ ಬರುವ ಸುದ್ದಿಗಳು ಓದಿದ ಕೂಡಲೆ ಸುಳ್ಳೆನಿಸುವಂತಹವಾಗುತ್ತವೆ. ಇಂಥ ಕುಟಿಲ ಕಾರಸ್ಥಾನದ ವಿರುದ್ಧವಾಗಿ ಇಟಲಿಯ ಅಮಾತ್ಯರಾದ ಮುಸೊಲಿನಿಯವರು ಕಡುತರವಾದ ಟೀಕೆ ಮಾಡಿದ್ದಾರೆ. ಇವರಿಗೆ ತುಸು ಜಡ್ಡಾಗಿತ್ತು. ಎಲೆ ಸಿಕ್ಕರೆ ಹಚ್ಚುವ ನುಂಗುವವರಂತೆ ಜಡ್ಡು ಭಯಂಕರವಾಗಿರುತ್ತದೆಂದೂ ಇದು ಒಳೇ ರೋಗು ಆಗಿರುತ್ತದೆಂದೂ ಜಗತ್ತಿನ ತುಂಬ ಸುದ್ದೀ ಹಬ್ಬಿಸಿದರು. ಇಂಥ ಅವಿವೇಕವು ಕ್ಷಮ್ಯವಾದುದಲ್ಲವೆಂದು ಇವರು ಅಂದಿರುತ್ತಾರೆ.

—

ಇಂಗ್ಲಂಡದ ಕೂಲಿಕಾರರಿಗೆ ಕೆಲಸ ಹುಡುಕುವ ಚಿಂತೆ.

ಇಂಗ್ಲಂಡ ಅಥವಾ ವಸಾಹಾತುಗಳ ವ್ಯಾಪಾರವು ತರ್ಕ ಮಾಡಿದಂತೆ ಬೆಳೆಯದ್ದರಿಂದ, ನಿರುದ್ಯೋಗಿಗಳಿಗೆ ಕೆಲಸ ದೊರಕಿಸಿ ಕೊಡುವದು ಕಠಿಣವಾಗಿದೆ. ಸಾಮ್ರಾಜ್ಯದಲ್ಲಿ ಅರಳೆ ಬೆಳೆಯಬೇಕು. ಅದನ್ನು ಗಿರಣಿಗಳಲ್ಲಿ ನುರಿಸಿ, ಕೂಲಿಕಾರರಿಗೆ ಉದ್ಯೋಗ ಮಾಡಬೇಕೆಂದಿದ್ದಾರೆ. ಇದೇ ಉದ್ದೇಶದಿಂದಲೇ ಹಿಂದುಸ್ಥಾನದ ಗಿರಣಿಗಳಲ್ಲಿ ಹುಟ್ಟುವಂಥ ಉರುಟು ಬಟ್ಟೆಯನ್ನು ವಿಲಾಯತಿಯಲ್ಲಿ ಮಾಡಿ, ಅದನ್ನು ಹಿಂದುಸ್ಥಾನದ ತುಂಬ ಹಬ್ಬಿಸುವ ದೀರ್ಘ ವಿಚಾರವನ್ನು ಪ್ರಕೃತದಲ್ಲಿ ನಡೆಸಿದ್ದಾರೆ.

—

ಹದಿನಾರು ಲಕ್ಷದ ದಾನಪತ್ರ.

—೦—

ಮುಂಬಯಿಯ ಶ್ರೀಮಂತ ಪಾರಸೀ ಗೃಹಸ್ಥರಾದ ಮಿ ವಾಡಿಯಾ ಇವರು ಆ ಪಟ್ಟಣದ ಉತ್ತರ ಭಾಗದಲ್ಲಿರುವ ಬಡ ಜನರ ದೆಸೆಯಿಂದ ಒಂದು ಸೂತಿಕಾ ಗೃಹ (ಹೆರಿಗೆಯ ಮನಿ) ಕಟ್ಟುವದಕ್ಕಾಗಿ ಹದಿನಾರು ಲಕ್ಷ ರೂಪಾಯಿಗಳನ್ನು ಕೊಟ್ಟಿರುತ್ತಾರೆ. ವಾಡಿಯಾ ಮನೆತನದವರ ದಾನವು ಸುಪ್ರಸಿದ್ಧವಿದ್ದು ಒಬ್ಬರಿಂತೂ ಸಂತತಿ ಇಲ್ಲದಾಗಲು ಕೋಟಿ ಸಂಖ್ಯೆಯಿಂದಿದ್ದ ಸಂಪಾದನೆಯ ದ್ರವ್ಯವನ್ನು ಅನಾಥರ ಸಹಾಯಕ್ಕಾಗಿ ಕೊಟ್ಟು ತಮ್ಮ ಹೆಸರು ಚಿರಸ್ಮರಣೀಯ ಮಾಡಿಕೊಂಡಿದ್ದಾರೆ.

—

ಬಿಡ್ಡ ಮತ್ತು ಜೂರಿಯ ನಡುವೆ ಮತಭೇದ.

—೦—

ಮುಳಸಿಯ ಸತ್ಯಾಗ್ರಹದ ಆರೋಪಿಗಳಾದ ಸೇನಾಧಿಪತಿ ಬಾಪಟ ಮೊದಲಾದ ೮-೧ ಜನರಮೇಲೆ ಪುಣೆಯ ಸೆಶನದಲ್ಲಿ ನಡೆದ ವಿಚಾರಣೆಯು ಮುಗಿಯಿತು. ಭಯಂಕರ ಆಯುಧಗಳಿಂದ ಕೊಲೆಯ ಪ್ರಯತ್ನ ಮಾಡಿದರೆಂದು ಇವರ ಮೇಲೆ ಆರೋಪವಿದೆ. ಕೊಲೆಯ ಉದ್ದೇಶ ಸಿದ್ಧವಾಗಲಿಲ್ಲೆಂದೂ, ಬಾಪಟನು ನಿರ್ದೋಷಿಯಾಗಿದ್ದಾನೆಂದೂ ಜೂರಿಗಳು ತಮ್ಮ ಮತ ಹೇಳಿದ್ದಾರೆ. ಈ ಮತವನ್ನು ಜಡ್ಜರು ಒಪ್ಪದೆ, ತೀರ್ಪಿಗಾಗಿ ಕಾಗದ ಪತ್ರಗಳನ್ನು ಹಾಯ್‌ಕೋರ್ಟಿಗೆ ಕಳಿಸುವೆವೆಂದಿದ್ದಾರೆ. ಆರೋಪಿಗಳು ಡಿಫೆನ್ಸ ಕೊಡಲಿಲ್ಲ.

—

ಜರ್ಮನಿಯ ಸೋಸರಿಗೆ ನಾಲ್ಕೇ ಮತಗಳು!

—೦—

ಜರ್ಮನಿಯಲ್ಲಿ ಅಧ್ಯಕ್ಷರ ಚುನಾವಣೆಯು ನಡೆದಿರುತ್ತದೆ. ವೋಟರರ ಸಂಖ್ಯೆಯು ಹತ್ತು ಲಕ್ಷವಿದೆ. ಪ್ರಜಾಸತ್ತಾತ್ಮಕ ಪಕ್ಷದ ಉಮೇದವಾರರಾದ ಡಾ. ಜೆರ್ನ ಸಾಹೇಬರಿಗೆ ನಾಲ್ಕು ಲಕ್ಷ ಮತಗಳು ಬಿದ್ದವೆ. ಆದರೂ ಬಹುಮತವಾಗದ್ದರಿಂದ ಪುನಃ ಚುನಾವಣೆಯಾಗುವದು. ಪದಚ್ಯುತರಾಗಿ ದೇಶಾಂತರವಾಸಿಯಾದ ಕೈಸರರಿಗೆ ಒಂದು ಗ್ರಾಮದವರು ನಾಲ್ಕು ಮತಗಳನ್ನು ಕೊಟ್ಟಿದ್ದಾರೆ.

—

ವಿದ್ಯಾರ್ಥಿಗಳ ಭಯಂಕರ ದಂಗೆ.

ಪಾರೀಸ ಪಟ್ಟಣದಲ್ಲಿ ಲ್ಯಾಟಿನ ಭಾಷೆಯ ಪ್ರೊಫೇಸರರನ್ನು ನೇಮಿಸಿದ ಬಗ್ಗೆ ವಿದ್ಯಾರ್ಥಿಗಳು ದಂಗೆ ಮಾಡಿದರು. ಇವರಲ್ಲಿಯೂ ಎರಡು ಬಣಗಳಾದವು. ದಂಗೆಗಾರರು ಹೊಸ ಪ್ರೊಫೇಸರರು ವರ್ಗದಲ್ಲಿ ಬಂದು, ಲೆಕ್ಚರ ಕೊಡದಂತೆ ಬಂದು ಕಟ್ಟು ಮಾಡಿದರು. ಕೂಡಲೆ ಎರಡೂ ಪಕ್ಷಗಳ ನಡುವೆ ದೊಡ್ಡ ಹೊಡದಾಟವಾಯಿತು ಪೋಲೀಸರು ಬಂದೋಬಸ್ತಿಗೆ ಬಂದರು. ದಂಗೆಯನ್ನು ಶಾಂತ ಮಾಡುವಾಗ ಪೋಲೀಸರಲ್ಲಿ ಹಲ ಜನರು ಘಾಯವಾಗಿದ್ದಾರೆ. ಇದರಿಂದ ದಂಗೆಯ ಭಯಂಕರ ಸ್ವರೂಪವನ್ನು ಊಹಿಸಬಹುದು.

—

ವೆಂಬಲ್ಲೆಯ ಪ್ರದರ್ಶನಕ್ಕೆ ಹಿಂದುಸ್ಥಾನದ ಹೆಸರಾದ ಆಡಿನೆಯವರನ್ನು ಕಂಕಿಂ... ಹೋಗಿ, ಪಾಶ್ಚಿಮಾತ್ಯರಿಗೆ ಈ ದೇಶದ ಪಟ್ಟಾಸ್ತಗಳ ರುಚಿಯನ್ನು ತೋರಿಸುವ ವಿಚಾರ ಮಾಡಿದ್ದಾರೆ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟಿಡ.

ಮಂಗಳವಾರ ಪೇಟೆ, ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ

ಹೊಂದಿಗೆಯು ಆರುಲಕ್ಷದ ಮೂಲಧನ. ಚೆಕ್ಕ, ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ನಡೆಯುವದು. ಕಾಯಮ ಮತ್ತು ಸೇವಿಂಗ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ಕೊಡಲಾಗುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಹುಚ್ಚರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ಆರ್. ಎಮ್. ಜ್ಹೋನ್ ಎಂಡ ಸನ್ಸ, ಹುಬ್ಬಳ್ಳಿ.

ಎಜಂಟ್ಸ ಫೋರ ಕಾರಬೋನಿಕ್ ಆಸಿಡ್ಡ ಗ್ಯಾಸ, ಮ್ಯಾನ್ಯುಫ್ಯಾಕ್ಚ್ಯುರರ್ ಆಫ್ ಏರೆಟೆಡ ವಾಟರ್ಸ.



ನಮ್ಮಲ್ಲಿ ಸಿಗುವ ಸಾಮಾನುಗಳ ವಿವರ

ತಾವು ಆರ್ಡರ ಬೇಗ ಕಳಿಸಿರಿ

ಫ್ಲುಯಿಡ್ ಗ್ಯಾಸ ಸಿಲಿಂಡರಗಳು ಇಂಗ್ಲೀಷ ಮತ್ತು ಜರ್ಮನಿ ಏರೆಟೆಡ ಕಲ್ಸ, ಎಮ್. ಟಿ. ಸೋಡಾ ವಾಟರ ಬಾಟಲಿಗಳು, ೫೦೦ ನಂ. ಸಾಬು



ರೀನ ಪೆಟ್ಟಿ ೧ ಕ್ಕೆ ರೂ. ಸೋಡಾವಾಟರ್ ಮಶಿನುಗಳು ಮತ್ತು ಎಲ್ಲ ತರದ ಕಲರ್ಸ ಬಾಟಲಿಗಳ ಎಸನ್ಸಗಳು, ಅಮೆರಿಕನ್ ಆಯಿಸ್ಕ್ರೀಮ ಸೋಡಾ, ಬನಾನಾ, ಕೋಲಾಚಂಪೇನ, ಲೆಮನ್ ನಂ. ೧ ಲೆಮನ್ ಜ್ಯುಯಿಸ್ ಸೋಡಾ ನಂ. ೧ ಮೆಂಗೋ, ಆರೇಂಜ, ಪಾಯಿನಾಪಲ್, ಪಿಸ್ತಮಿಲಕ್, ಕ್ವಿನೀನ ಟಾನಿಕ್, ರಾಜಬೆರಿ ನಂ. ೧ ರೋಜ ನಂ. ೧ ಸ್ಟೋನ್ ಜಿಂಜರ ಬೀರ ನಂ. ೧, ರಬ್ಬರ ರಿಂಗ್ಸ, ಬೆಸ್ಟ ಇತರ ಮಶಿನರಿ ಪಾರ್ಟುಗಳು ನಮ್ಮಲ್ಲಿ ಸಿಗುತ್ತವೆ. ಮತ್ತು ಶುದ್ಧ ಸೀಲಗಿರಿ ಎಣ್ಣೆಯು ಎಲ್ಲ ತರದ ಬಾಟಲ್ಲಗಳು ಸಿಗುತ್ತವೆ. ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಕೊಡುತ್ತೇವೆ. ನಮ್ಮಲ್ಲಿ ಕಪ್ಪಿನದ ಮಿಲಿಟರಿ ಸಿಂಗಲ ಕಾಟ್ಲಗಳು ಸೋವಿ ದರದಿಂದ ಮಾರಲಿಕ್ಕೆ ಸಿಗುತ್ತವೆ.

ಅಡ್ರೆಸ್— R. M. John &Sons.
Mission Compound HUBLI

ದಿ. ಧಾರವಾಡ ಬ್ಯಾಂಕ ಲಿಮಿಟೆಡ್

—೦—

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಾಗಿರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯ ಪುಸ್ತಕಾಲಯ

—೦—

೨೦ ನೇ ಶತಮಾನದ ಗೊಂಬಿಲ	೧೦ ಆಣೆ
ವಿಚಿತ್ರ ಸಂಶಯ	೫ "
ಲೋ. ಟಿಳಕರ ಚರಿತ್ರ	೪ "
ದೇಶಬಂಧು ದಾಸರ ಚರಿತ್ರ	೨ "
ದೇಶಭಕ್ತರ ಸಂದೇಶಗಳು	೧ "

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧। ರೂಪಾಯಿಗೆ ಕೊಡುವೆವು. ವ್ಹಿ. ಪಿ. ಮತ್ತು ಟಪಾಲ ಖರ್ಚು ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ
ಧಾರವಾಡ

ದಿ. ಅಂಕಲಗಿ ಬ್ಯಾಂಕ ಲಿಮಿಟೇಡ್
ಧಾರವಾಡ.

—೦—

೧೯೧೦ ಇಸ್ವಿಯು

ಕಂಪನಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ಚಾಲೂ ಖಾತೆ, ಸೇವಿಂಗ್ಸ ಡಿಪಾಜಿಟ, ಸಾಲ. ಪತ್ತಿ, ಹುಂಡಿ, ... ವ್ಯವಹಾರಗಳು ನಡೆಯುವವು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ ರಿಂದ ೧೧-೩೦. ಸಾಯಂಕಾಲ ೩ ರಿಂದ ೬ ರವರೆಗೆ ನಡೆಯುವದು.

K.B. Ankalagi
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ

—೦—

ನಿತ್ಯ ಪತ್ರಿಕೆಗೆ

೧೨ ತಿಂಗಳಿಗೆ	೧೨—೮—೦ ರೂ
೬ ,,	೭—೮—೦ ರೂ
೩ ,,	೪—೦—೦ ರೂ
ವಾರಪತ್ರಿಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ
ಮ್ಯಾನೇಜರ ವಿಜಯ ಧಾರವಾಡ

ಜಾಹಿರಾತಿನ ದರಗಳು.

—೦—

ಸಿಂಗಲ ಕಾಲಮಿನ ಪತ್ತು ಪಂಕ್ತಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಂಕ್ತಿಗೆ ಒಂದುವರೆ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ಆಣೆ ಇಂಗ್ಲಿಷದಿಂದ ಅನುವಾದಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಓಳಿಗಳಿಗೆ ಇಮ್ಮಡಿ ಕಾಯಮ ಜಾಹಿರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ನಿತ್ಯ ಪತ್ರ ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೬) ಧಾರವಾಡ ಗುರುವಾರ ತಾರೀಖು ೨ ನೇ ಎಪ್ರಿಲ ೧೯೩೧ (ಸಂಚಿಕೆ ೭೨

ಬೇಸಿಗೆ ಪ್ರಾರಂಭವಾಯಿತು!

ಜನಗಳ ಆಹಾರವಾದ ಕಣಿಕೆಯನ್ನು ಕಾದಿರಿ !!

ಕಿರ್ಲೋಸ್ಕರ ಕಣಿಕೆ ಯಂತ್ರವನ್ನು ಉಪಯೋಗಿಸಿರಿ !!

ನಮ್ಮ ಕಾರ್ಖಾನೆಯಲ್ಲಿ ಎರಡು ನಮೂನೆಯ ಕಣಿಕೆ ಕೊರೆಯುವ ಯಂತ್ರಗಳು ತಯಾರಾಗುತ್ತವೆ. ಒಂದು ಕೈಯಂತ್ರ ಬೆಲೆ ೨೦ ರೂ. ಇನ್ನೊಂದು ಗಾಲೀಯಂತ್ರ ಬೆಲೆ ೮೫ ರೂಪಾಯಿ ಸಣ್ಣ ಕಮತದವರು ಕೈ ಯಂತ್ರವನ್ನು, ದೊಡ್ಡ ಕಮತದವರು ಗಾಲೀ ಯಂತ್ರವನ್ನು ಉಪಯೋಗಿಸಬಹುದು. ಕಣಿಕೆಯು ೪ ಇಂಚುಗಳಿಂದ ೨ ಇಂಚಿನ ವರೆಗೆ ಕೊರೆಯಲ್ಪಡುತ್ತದೆ.

ಸವಿಸ್ತರ ಸಂಗತಿಯ ಬಗ್ಗೆ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ } ಕಿರ್ಲೋಸ್ಕರವಾಡಿ- ಜಿಲ್ಲಾ ಸಾತಾರಾ.

ತುಸು ಶ್ರಮದಲ್ಲಿ ಮತ್ತು ಎರಡೇ ಆಣೆಯಲ್ಲಿ

ತಲೆಶೂಲೆ, ಅರತಲೆಶೂಲೆ, ಮಸ್ತಕ ಶೂಲೆಯು ಒಂದೇ ಕ್ಷಣದಲ್ಲಿ ನಿಂತುಹೋಗುವ

ಒಂದಾಗುವ ನಮ್ಮ

ಮೊಮೆಂಟ ಕ್ಯೂರ

ನಮ್ಮ ಜಾಹೀರುದಾರರು ತಪ್ಪಿಸ್ಕೊಳ್ಳಿರಿ. ಮೂರಾಣೆಯ ಟಿಕೇಟು ಕಳಿಸಿದರೆ ಸ್ಯಾಂಪಲ (ಮಾದರಿ) ಕಳಿಸುವೆವು.

ನಮ್ಮ ಔಷಧಾಲಯದಲ್ಲಿ ಡಾಕ್ಟರರ ಪ್ರಿಸ್ಕ್ರಿಪ್ಶನ್ ಪ್ರಕಾರ ಅತ್ಯಂತ ಕಾಳಜಿ ಮತ್ತು ದಕ್ಷತೆಯಿಂದ ಔಷಧವನ್ನು ತಯಾರ ಮಾಡಿ ಕೊಡುವೆವು. ದರ ತೀರ ಸುಲಭ.

ವಿಳಾಸ— ದಿ ಕನಕಾದಿತ್ಯ ಮೆಡಿಕಲ ಸ್ಟೋರ್ಸ, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗ್ಗಿಸ್ಟ ಸ್ಟೇಶನರೋಡ ಹುಬ್ಬಳ್ಳಿ

ಕೋಚೀನ, ತ್ರಾವಣಕೋರ ಸಂಸ್ಥಾನ ಮತ್ತು ಇಂಗ್ಲಿಷ ಹದ್ದಿಗೆ ಸೇರಿರುವ ಮಲಿಯಾಳ ದೇಶಕ್ಕಾಗಿ ಒಂದು ಸ್ವತಂತ್ರ ಯುನಿವ್ಹರ್ಸಿಟಿಯನ್ನು ಸ್ಥಾಪಿಸಬೇಕೆಂಬ ಉದ್ಯೋಗ ನಡೆದಿದೆ.

ಮುಂಬಯಿ ಗವ್ಹರ್ನರ ಸಾಹೇಬರು ೧೧ ನೆಯ ತಾರೀಖಿನ ದಿವಸ ಕಾರವಾರಕ್ಕೆ ಹೋಗುವರು. ಮಾನಪತ್ರದ ಸಮಾರಂಭವಾಗುವದು.

ಶ್ರೀ ಪಾಟೀಲ ಪದಗ್ರಹಣ.

— ೦ —

ದೇಶ ಸೇವೆಯ ಅನಂತರವೇ ಬಾಬುರಾಯರಿಗೆ ಒಂದು ಹುದ್ದೆಯನ್ನು ಕೊಡಬೇಕೆಂದು ಡಿ. ಫ. ಗಂಗಾಧರರಾಯರು ಮೊದಲಾದ ಕರ್ನಾಟಕದ ಮುಖಂಡರು ಮೊದಲಿನಿಂದ ಪ್ರಸಿದ್ಧಪತ್ರಿಕೆಯು ಇದ್ದರು ಈ ಮಾತನ್ನು ಪತ್ರಿಕೆಗಳಲ್ಲಿ ಪ್ರಸಿದ್ಧಪಡಿಸಿದ. ಆ ಮಾತಿಗೆ ಬೇರೆ ಸಭ್ಯಗೃಹಸ್ಥರು ಪುಷ್ಟಿಯನ್ನು ಕೊಟ್ಟು ಬರೆದಿರುವರು. ಅದನ್ನು ಕಂಡು ನಮಗೆ ಸಂತೋಷವಾಗುತ್ತದೆ. ಈ ಸಾಲಿನಲ್ಲಿ ದೇಶೀ ಚಳುವಳಿ ಪ್ರಾರಂಭವಾದಂದಿನಿಂದ ಬಾಬುರಾಯರು ತಮ್ಮ ಸ್ವಾರ್ಥವನ್ನು ಬದಿಗಿಟ್ಟು ಯಶಸ್ವಿ ಹೋರಾಟ ಮಾಡುವದು ನಮಗೆ ಗೊತ್ತಿದೆ. ಇಂಥವರಿಗೆ ಸನ್ಮಾನ ಮಾಡಿ ಕೃತಜ್ಞತೆ ತೋರಿಸುವದರಿಂದ ಇತರರು ತನ್ನನ್ನು ಕರ್ನಾಟಕದಲ್ಲಿ ಹುಟ್ಟಿಸಿದ ಪ್ರೇಮವನ್ನು ಬೆಳೆಸುತಿದೆ. ಆದಷ್ಟು ಜನರು ಅವರಿಗೆ ಪಾರಿತೋಷಕ ಕೊಡಲಿಕ್ಕೆ ಪ್ರೀತಿಯಿಂದ ಯಥಾಶಕ್ತಿ ಸಹಾಯ ಮಾಡುವರೆಂದು ನಂಬುತ್ತೇವೆ. ದೇ. ಸ್ವ. ಬಾಬುರಾಯರಾದರೂ ತನ್ನ ತಿರುಗಾಡುವ ಶ್ರಮದ ಕಾರ್ಯವನ್ನು ಬಿಟ್ಟು ತಮ್ಮಂಥ ತರುಣರನ್ನು ತಯಾರ ಮಾಡುವದರಲ್ಲಿ ತಮ್ಮ ಉಳಿದ ಆಯುಷ್ಯವನ್ನು ಕಳೆದು ಕರ್ನಾಟಕದ ಋಣದಿಂದ ಮುಕ್ತರಾಗಬೇಕೆಂದು ಆಶಿಸುವೆ. ದೇವರು ದೇಶಕ್ಕೂ ದೇಶಭಕ್ತರಿಗೂ ಅಭ್ಯುದಯವನ್ನು ದಯಪಾಲಿಸಲಿ.

ಧಾರವಾಡ ಕಿಲ್ಲೆ. ನರಸಿಂಹಾಚಾರ್ಯ
ತಾ ೩೦-೩-೩೧ ಪುಸ್ತಕ, ಕಾವ್ಯಾನಂದ.

ಎಪ್ರಿಲ ಆರನೇ ತಾರೀಖಿನಿಂದ ೧೩ ನೇ ತಾರೀಖಿನ ತನಕ ಒಂದು ವಾರ ಪಾಡತಕ್ಕ ರಾಷ್ಟ್ರೀಯ ಸಪ್ತಾಹದಲ್ಲಿ ಕಾಂಗ್ರೆಸದ ಕಾರ್ಯಕ್ರಮದಂತೆ ಕೆಲಸ ಮಾಡಬೇಕು. ಧರ್ಮದೃಷ್ಟಿಯಿಂದ ವ್ರತ ಉಪವಾಸಗಳನ್ನು ಮಾಡಬೇಕು. ಹರತಾಳಕ್ಕೆ ಯೋಗ್ಯ ಕಾಲವಿರುವದಿಲ್ಲ. ಆ ದಿವಸ ಹಬ್ಬವೆಂದು ಮಹಾತ್ಮರು ಅಂದಿರುತ್ತಾರೆ.

ವಿಜಯ.

ಧಾರವಾಡ ತಾ- ೨-೪-೨೫ ನೇ ಇಸ್ವಿ

ಸ್ವರಾಜ್ಯ ಶಾಸನ ಕರ್ತರಿಗೆ ದೊಡ್ಡ ಅಪಶಕುನ.

—o—

ಬಂಗಾಲ ಮತ್ತು ನಾಗಪೂರ ಇಲಾಖೆಗಳನ್ನು ಜೋರ್ಕ ಪಡಿಸಿ, ದ್ವಿದಳ ಪೊರೆಕಸವು ಹಿಂದುಸ್ಥಾನದಲ್ಲಿ ಸುಸೂತ್ರವಾಗಿ ಸಾಗಿರುತ್ತದೆಂದು ಹೆಬ್ಬಳಿಕೆಯ ಮಾತುಗಳನ್ನು ಹೇಳಿಕೊಳ್ಳುವ ಸ್ವರಾಜ್ಯ ಶಾಸನ ಕರ್ತರಿಗೆ ಮದ್ರಾಸ ಇಲಾಖೆಯಲ್ಲಿ ದೊಡ್ಡ ಅಪಶಕುನವಾಯಿತು. ಈ ಅಪಶಕುನವು ಲಾರ್ಡ ರೀಡಿಂಗ ಸಾಹೇಬರು ವಿಲಾಯತಿಗೆ ಹೋಗುವ ಸಮಯದಲ್ಲಿ ಆದದ್ದು ವಿಶೇಷವು. ದ್ವಿದಳ ದೊರೆತನವನ್ನು ಯಶಸ್ವಿ ಮಾಡುತ್ತೇವೆಂದು ಪಂಥಗಟ್ಟಿದವರಲ್ಲಿ ಮದ್ರಾಸದ ಮಂತ್ರಿಗಳು ಹೆಚ್ಚಿನವರು. ತಮಗಾರೂ ವಿರೋಧಿಗಳಿಲ್ಲೆಂದು ಸದ್ದು ಹೊಡೆದ ಸ್ಥಳದಲ್ಲಿಯೇ ಅಪಶಕುನವಾಯಿತು.

ಕೌನ್ಸಿಲ ಅಥವಾ ಅಸೆಂಬ್ಲಿಯಲ್ಲಿ ಮೆಂಬರರ ಬಹುಮತವಾಗಿರುವ ಯಾವದೊಂದು ಠರಾವಿಗೆ ಸರ್ಟಿಫಿಕೇಟು ಕೊಟ್ಟು ಠರಾವನ್ನು ರದ್ದು ಪಡಿಸಿ, ವಿಲಾಯಿಗೆಲ್ಲ ಮಣ್ಣು ಹತ್ತಿಸುವ ಅಧಿಕಾರವು ಗವ್ಹರ್ನರ ಮತ್ತು ಗವ್ಹರ್ನರ ಜನರಲರಿಗಿರುವದು. ಲಾರ್ಡ ರೀಡಿಂಗ ಸಾಹೇಬರೇ ಮೊದಲಾಗಿ ಪ್ರಾಂತಿಕ ಗವ್ಹರ್ನರರು ಈ ಅಧಿಕಾರವನ್ನು ಕ್ಷಣಕ್ಷಣಕ್ಕೂ ಉಪಯೋಗ ಮಾಡುವರು. ಆದರೆ ಇವಕ್ಕೆ ಕೃಷ್ಣಕೃತ್ಯವೆಂದು ಕ್ಯಾನ್ಸಲ್ಕೆ ಶರಣು ಹೊಡೆದು, ಕೋರವು ಆಗದಂತೆ ಸರಕಾರದ ಬಂದೋಬಸ್ತು ಮಾಡಿದ ಮೊದಲನೇ ಮಾನವು ಮದ್ರಾಸಕ್ಕೆ ದೊರೆಯಿತು. ಅಲ್ಲಿಯ ಕೌನ್ಸಿಲದಲ್ಲಿ ಬ್ರಾಹ್ಮಣೇತರ ಮತ್ತು ಮವಾಳರ ಸಂಖ್ಯೆಯೇ ದೊಡ್ಡದಿದ್ದು, ಇವರಲ್ಲಿ ಸರಕಾರದ ನಂಬಿಗೆಯು ಬಹಳ ದೊಡ್ಡದಾಗಿತ್ತು. ಅತಿ ವಿಶ್ವಾಸವು ಗತಿಗೆಡಿಸಿದಂತಾಯಿತು.

ಕೌನ್ಸಿಲದವರು ಪೋಲೀಸ ಮತ್ತು ನ್ಯಾಯ ಖಾತೆಯಲ್ಲಿ ಸರಕಾರದ ಅಂದಾಜು ಪತ್ರಿಕೆಯ ಪ್ರಕಾರ ಮಂಜೂರಿ ಕೊಡದೆ, ಲಕ್ಷಕ್ಕಿಂತ ಹೆಚ್ಚು ರಕಮನ್ನು ನಾಮಂಜೂರ ಮಾಡಿದರು. ಆದರೆ ಗವ್ಹರ್ನರ ಸಾಹೇಬರು ಇದಕ್ಕೆ ಸರ್ಟಿಫಿಕೇಟು ಕೊಟ್ಟು ಕೌನ್ಸಿಲದ ಅಪಮಾನ ಮಾಡಿದರು. ಅಧಿಕಾರಿಗಳು ತಾವೇ ಬುದ್ಧಿವಂತರೆಂದು ತಿಳಕೊಂಡು ಕೌನ್ಸಿಲದ ಅಪಮಾನ ಮಾಡಿದರೆ- ತಾವಿದ್ದು ಪ್ರಯೋಜನವೇನೆಂದು ಸ್ವರಾಜ್ಯ, ರಾಷ್ಟ್ರೀಯ, ಮಂತ್ರಿ ಪಕ್ಷ, ಮೊದಲಾದ ಪ್ರಮುಖ ಮೆಂಬರರು ಕೌನ್ಸಿಲ ಬಿಟ್ಟು ಎದ್ದು ಹೋದರು. ಇದರಿಂದ ಕೋರಮದ ಅಭಾವವಾಗಿ ಕೌನ್ಸಿಲದ ರಥವು ನಿಂತು ಹೋಯಿತು. ಕೌನ್ಸಿಲದಿಂದ ದೊಡ್ಡ ಪ್ರಯೋಜನವಿರುತ್ತದೆಂದು ರಾಜ್ಯಕರ್ತರು ಹೇಳುವದು ಕೇವಲ ನಟನೆಯಾಗಿರುತ್ತದೆಂದು ಮದ್ರಾಸಿನವರು ಕೃತಿಯಿಂದ ತೋರಿಸಿದ್ದು ಪ್ರಶಂಸಾರ್ಹವಾಗಿರುತ್ತದೆ.

ಒಬ್ಬ ಡೆಪ್ಯುಟಿ ಕಲೆಕ್ಟರರಿಗೆ ಐದು ಸಾವಿರದ ದಂಡ ದೊರೆತಿತು.

—o—

ಕೊಯಂಬುತ್ತೂರ ಜಿಲ್ಹೆಗೆ ಸೇರಿದ ಪೋಲಾಚಿಯಲ್ಲಿರುವ ಶ್ರೀ ಶಂಕರ ಅಯ್ಯರರೆಂಬವರನ್ನು ಮ್ಯಾಜಿಸ್ಟ್ರೇಟರಾಗಿದ್ದ ಮೆ. ಸಾಲಡಾನಾ ಸಾಹೇಬರು ಒಂದು ದಿವಸ ಅನ್ಯಾಯವಾಗಿ ತುರಂಗದಲ್ಲಿಟ್ಟರು. ಜಾಮೀನು ತಕ್ಕೊಳ್ಳಬೇಕೆಂದು ವಿನಂತಿ ಮಾಡಿಕೊಂಡರೂ ಸಾಹೇಬರು ಅದನ್ನು ಲಕ್ಷಿಸಲಿಲ್ಲ. ಆದ್ದರಿಂದ ಶ್ರೀ ಶಂಕರ ಅಯ್ಯರರು ಇವರ ಮೇಲೆ ಐದು ಸಾವಿರದ ಮಾನಹಾನಿಯ ದಾವೆ ಮಾಡಿದರು. ಕೋರ್ಟಿನವರು ಅಯ್ಯರರಂತೆ ತೀರ್ಪು ಹೇಳಿದ್ದಾರೆ.

ಇಂಗ್ಲಂಡದ ವಿರುದ್ಧ ರಶಿಯಾದ ಚಳವಳಿಯು.

—o—

ವಿಲಾಯತಿಯಲ್ಲಿ ಇಂಗ್ಲಂಡ, ಫ್ರಾನ್ಸ ಮತ್ತು ಜರ್ಮನಿಯ ಒಂದು ಕೂಟ ಮಾಡಬೇಕೆಂದು ಇಂಗ್ಲಿಷರ ಸತತವಾದ ಪ್ರಯತ್ನ ನಡೆದದೆ. ಈ ತ್ರಿಕೂಟ ಕೂಡುವದು ರಶಿಯಾದ ಹಿತ ಸಂಬಂಧಗಳಿಗೆ ತ್ರಿದೋಷವಾಗುವದು. ವಿಲಾಯತಿಯ ರಾಜಕಾರಣಗಳಲ್ಲಿ ಇಂಗ್ಲಂಡವು ಚಿಂತಾಕುಲಿತವಾಯಿತೆಂದರೆ ಅದು ಪೌರ್ವಾತ್ಯ ದೇಶಗಳಲ್ಲಿ ರಶಿಯಾದ ಕಾರಸ್ಥಾನಗಳ ಭಟ್ಟಿಯನ್ನು ಕೆಡಿಸುವದೆಂದು ರಶಿಯಾದ ಪತ್ರಗಳು ಉದ್ದುದ್ದ ಲೇಖಗಳನ್ನು ಬರೆಯ ತೊಡಗಿವೆ.

ಮುಂಬಯಿ ಮಂಗಳೂರ ಸಮುದ್ರ ದಂಡೆಯ ವ್ಯಾಪಾರ ಬೆಳಸುವದಕ್ಕಾಗಿ ಶಿಂದಿಯಾ ಹಡಗ ಕಂಪನಿಯ ಡಾಯರೆಕ್ಟರರಾದ ಶ್ರೀ ನರೋತ್ತಮ ಮುರಾರಜಿ ಮತ್ತು ಮೆ. ಹಾಜಿ ದತ್ತಾಂಜೆಯವರು ಕೊಚಿನಕ್ಕೆ ಹೋಗಲಿಕ್ಕಿದ್ದಾರೆ.

ಮಾಫೀ ಸಾಕ್ಷೀದಾರನು ತಿರುಗಿ ಬಿದ್ದನು.

—o—

ಬಾವಲಾ ಸಾಹೇಬನ ಮೋಟಾರ ಡ್ರಾಯವ್ಹರನಾಗಿದ್ದ ಮಹಮದ ಶಾಫಿಯು ಸರಕಾರದ ಮಾಫೀ ಸಾಕ್ಷೀದಾರನಾಗಿದ್ದನಷ್ಟೇ ಈಗ ಈತನು ಪೋಲೀಸರ ವಿರುದ್ಧ ತಿರುಗಿ ನಿಂತಿದ್ದು, ಪೋಲೀಸರ ಒತ್ತಾಯದ ಮೂಲಕ ಅವರು ಹೇಳಿದಂತೆ ಜವಾಬು ಬರಕೊಟ್ಟೆನೆಂದಿರುತ್ತಾನೆ. ಈತನು ಈ ಪ್ರಕಾರ ತಿರುಗಿ ನಿಂತಿದ್ದು ಕೋರ್ಟಿಗೆ ವಿಸ್ಮಯವನ್ನುಂಟು ಮಾಡಿತು. ಸರಕಾರ ಪಕ್ಷದ ಬ್ಯಾರಿಸ್ಟರರಾದ ಮೆ. ಕೆಂಪ ಸಾಹೇಬರು ವಿರೋಧ ಸಾಕ್ಷೀದಾರನೆಂದು ಈತನ ಸಾಕ್ಷೀ ತಕ್ಕೊಳ್ಳುವರು. ಆಗ ಉಭಯತರ ನಡುವೆ ಜನಕ್ಕಾಗಿ ವಾಗ್ಯುದ್ಧವೇಳುವದೆಂದು ಊಹಿಸಲ್ಪಟ್ಟಿದೆ.

ಸುರತದಲ್ಲಿ ಭಯಂಕರ ಅಗ್ನಿಕೋಪ.

—o—

ಸುರತ ಪಟ್ಟಣದಲ್ಲಿ ಸಾಗವಾನಿ ಕಟ್ಟಿಗೆಯ ದೊಡ್ಡ ವಖಾರಕ್ಕೂ, ಅಕ್ಕಿಯ ಗಿರಣಿಗೂ ಬೆಂಕಿ ಹತ್ತಿತ್ತು. ಈ ಬೆಂಕಿಯು ತನ್ನ ನಾಲಿಗೆಯನ್ನು ಚಾಚಿ, ಅನೇಕ ಮನೆಗಳನ್ನು ಸ್ವಾಹಾ ಮಾಡಿತು. ಅನೇಕ ಲಕ್ಷ ರೂಪಾಯಿಗಳ ಹಾನಿಯಾಗಿದೆ.

ತ್ರಾವಣಕೋರದಲ್ಲಿ ಅಂತ್ಯಜೋದ್ಧಾರ.

—o—

ತ್ರಾವಣಕೋರ ಸಂಸ್ಥಾನದಲ್ಲಿ ಕೆಳಗೆ ಕೊಟ್ಟಂತೆ ಜನಸಂಖ್ಯೆಯುಂಟು.

ಬ್ರಾಹ್ಮಣರು	೬೦	ಸಾವಿರ
ಉಚ್ಚ ವರ್ಗದ ಬ್ರಾಹ್ಮಣೇತರರು.	೭೪೫	,,
ಅಸ್ಪೃಶ್ಯರು	೧೭೦೦	,,
ಕ್ರಿಶ್ಚನ್ನರು	೧೧೦೦	,,

ಅಸ್ಪೃಶ್ಯರು ೧೭ ಲಕ್ಷ ಜನರಾಗಿದ್ದರೂ ಅವರಿಗೆ ಅಸ್ಪೃಶ್ಯತೆಯು ದೊಡ್ಡ ಪಾಪ ಘಟಿಸಿದೆ, ಇದು ಪೂರ್ವ ಕರ್ಮದ ಫಲವೆಂದು ಶಾಸ್ತ್ರಿ ಪಂಡಿತರು ಹೇಳುತ್ತಾರೆ.

ವಿಚಿತ್ರ ಜನನ.

ಒಂದರ ಎದೆಯಲ್ಲಿ ಮತ್ತೊಂದರ ಜನನ

ತ್ರಿಚಿನಾಪಲ್ಲಿ ಜಿಲ್ಹೆಗೆ ಸೇರಿದ ಲಾಲಗುಡಿಯೆಂಬ ಗ್ರಾಮದಲ್ಲಿ ಒಬ್ಬಳಿಗೆ ಒಂದು ಕೂಸು ಹುಟ್ಟಿದೆ. ಈ ಕೂಸಿನ ಎದೆಯ ಮೇಲೆ ಇನ್ನೊಂದು ಕೂಸಿರುವದು. ಇದರ ತಲೆಯು ಒಳನಟ್ಟಿದೆ. ಕಾಣಿಸುವದಿಲ್ಲ. ಕೈಕಾಲುಗಳು ಬಹಳ ಸಣ್ಣವಿವೆ. ಮೂರೆ ಇಂಚು ಉದ್ದವಿರುವವು. ಹುಟ್ಟಿ ೧೫ ದಿವಸವಾದರೂ ಎರಡೂ ಸುಖರೂಪವಾಗಿವೆ.

ಕರ್ನಾಟಕ ಕುರುಬರ ಸಂಘದ ಪ್ರಗತಿಯು.

ಬರೆದು ಬಂದದ್ದು

—೦—

ಕಲವಡಿ ಮತ್ತು ಬಂಕಾಪೂರ ಪರಿಷತ್ತುಗಳೊಳಗೆ ನಮ್ಮ ಸಂಘದ ಪ್ರಗತಿಯು ಈ ಕೆಳಗೆ ಪ್ರಕಟಿಸಿದ ಮೇರೆಗೆ ಆಗಿರುವದೆಂದು ಯಾವತ್ತು ಕುರುಬ ಸಮಾಜದ ತನ್ನ ಬಂಧುಗಳಿಗೆ ಸಂಕ್ಷಿಪ್ತವಾಗಿ ತಿಳಿಸಲು ಇಚ್ಛಿಸುತ್ತೇನೆ.

ಕುರುಬರ ಬಡ ವಿದ್ಯಾರ್ಥಿಗಳಿಗೆ ಈ ಕೆಳಗಿನ ನಮ್ಮ ಕುರುಬ ಸಭ್ಯ ಗೃಹಸ್ಥರು ತಮ್ಮ ಹೆಸರಿನ ಮುಂದೆ ಇದ್ದಷ್ಟು ರಕಮನ್ನು ಉದಾರ ದೇಣಿಗೆಯಾಗಿ ಕೊಟ್ಟದ್ದಕ್ಕೆ ಸಂತೋಷಿಸಿ ಅವರನ್ನು ಅಭಿನಂದಿಸುತ್ತೇವೆ.

ಸೋಮನಗೌಡಾ ಪಾಟೀಲ ಹಲಗಾಪೂರ ೫೧೧ರೂ. ನಿಂಗಪ್ಪಾ ಬಿಜ್ಜೂರ ಹುರಳೀಕುಪ್ಪಿ ೨೦೦ರೂ. ಹನಮಪ್ಪ ಮಣ್ಣೂರ ಅಗಡಿ ೨೦೦ರೂ. ಹುಚ್ಚಪ್ಪ ಸ. ಬಿಜ್ಜೂರ ಹುರಳೀಕುಪ್ಪಿ ೧೨೫ರೂ. ಭೀಮಪ್ಪ ಡಂಬ್ರಳ್ಳಿಯವರ ನಾವಳ್ಳಿ ೧೨೫ರೂ. ಹಿಳ್ಳೆಪ್ಪ ಬಿಜ್ಜೂರ ಹುರಳೀಕುಪ್ಪಿ ೭೫ರೂ. ದ್ಯಾಮಣ್ಣಾ ಕಿತ್ತೂರ ಘೋಗಾಸೂರ ೪೦ರೂ. ಫಕೀರಪ್ಪ ಹಂಡಿಯವರ ನವಲಗುಂದ ೫೦ರೂ. ಯಲ್ಲಪ್ಪಾ ಕೋಂ ಚಿಕ್ಕಪ್ಪ ಕುರುಬರ ಹೊಸಳ್ಳಿ ೫೦ರೂ. ಯಲ್ಲಪ್ಪಾ ಶಿವಣ್ಣಾವರ ಎಮ್ಮೆಸ್ ಅಗಡಿ ೨೫ರೂ. ದೊಡ್ಡ ಬಸಪ್ಪ ರಾಮಬೋಗಿ ಕುಲವಿಗಿ ೩೦ ರೂ. ಶಿವಲಿಂಗಪ್ಪ ಕ. ರೋದಿ ಯಲವಿಗಿ ೨೦ರೂ. ಹುಚ್ಚಪ್ಪ ವಗ್ಗಣ್ಣನವರ ಹಳೇರಿತ್ತಿ ೧೦೦ರೂ. ಹುಚ್ಚಪ್ಪ ಬೀರಪ್ಪ ಹುರಳೀಕುಪ್ಪಿ ೧೧೦ರೂ ಕರಿಗೌಡಾ ಪಾಟೀಲ ಗೋನಾಳ ೧೦೦ರೂ. ಚನ್ನಬಸಪ್ಪ ಹಿತಲಮನಿ ಬಂಕಾಪೂರ೧೦೦ ಶರೆಪ್ಪ ಬಣಕಾರ ಕಾಕೋಳ ೫೦ ಸಂಕಪ್ಪ ಕುರುಬರ ಹಿರೇಹಸಕುಣಿ ೨೫ ಮಲ್ಲಪ್ಪ ಬಂಡಾರಿ ಮಂತ್ರೋಡಿ ೧೦೦ರೂ. ಭುಜಂಗಪ್ಪ ಬ್ಯಾಡಗಿ ೪೦ ಹಾಲಪ್ಪಗೌಡಾ ಪಾಟೀಲ ೨೫ರೂ. ಮುದಿಯಪ್ಪ ದೇವರಗುಡ್ಡ ೨೫ರೂ ಹುಚ್ಚಪ್ಪ ಮೇವುಂಡಿ ೫೦ ಕರೆಪ್ಪ ಮೇವುಂಡಿ ೨೫ರೂ ಹೊಳೆಪ್ಪ ಕೂಗಾರ೪೦ ಕರೆಲ್ಲಪ್ಪ ದೇವರಗುಡ್ಡ ೨೫ರೂ ಮಲ್ಲಪ್ಪಗೌಡ್ರ ಕರೂರ ೨೫ರೂ. ಗೋಣೆಪ್ಪ ಕಳ್ಳಿಹಾಳ ೨೫ರೂ. ಮಲ್ಲಪ್ಪ ಕದಮನಹಳ್ಳಿ ೨೫ರೂ. ನಿಂಗನಗೌಡಾ ಪಾಟೀಲ ೨೫ರೂ. ಡೊ. ನಿಂಗನಗೌಡಾ ಪಾಟೀಲ ೨೫ರೂ. ಚನಬಸಪ್ಪ ಆಲದಕಟ್ಟಿ ಬಂಕಾಪೂರ ೨೫ ಫಂಬಣ್ಣ ನೀರಲಗಿ ೨೫ರೂ ಬಸಪ್ಪ ಕೊಟಬಾಗಿಕರ ೨೫ರೂ ಭರಮಗೌಡಾ ಗಾಂಜಿ ೨೫ರೂ ಸ. ನಿಸ್ಸೀಮಪ್ಪ ಆಲದಕಟ್ಟಿ ೨೫ರೂ ಹಗ್ಗಪ್ಪ ಹಿತ್ತಲಮನಿ ೧೫ರೂ. ಮಲ್ಲಪ್ಪ ಜಲ್ಲಿ ಹುಲಸೋಗಿ ೨೫ರೂ. ನಿಂಗಪ್ಪ ಪಾಳಿಕಾರ ೨೫ರೂ.

ಈ ಪ್ರಕಾರ ದೊಡ್ಡ ರಕಮುಗಳಲ್ಲದೆ ೧-೨-೩-೪-೫-೧೦ ಇತ್ಯಾದಿ ರಕಮು ಸಹ ದೇಣಗೆಯಾಗಿ ಕೊಟ್ಟವರ ಹೆಸರುಗಳನ್ನು ಸ್ಥಳ ಸಂಕೋಚ ಮೂಲಕ ಪ್ರಸಿದ್ಧ ಮಾಡಿಲ್ಲ. ಸ್ವಲ್ಪ ದಿವಸಗಳಲ್ಲಿಯೇ ಸಂಘದ ವಾರ್ಷಿಕ ರಿಪೋರ್ಟ ಹೊರಬೀಳುವದು. ಆಗ ಸವಿಸ್ತಾರ ಮಾಹಿತಿ ತಿಳಿಯುವದು ಅಂತು ಈಗ ಅಜಮಾಸು ೫೦೦೦ ರೂಪಾಯಿ ವಿದ್ಯಾವರ್ಧಕ ಫಂಡು ಕೂಡಿದ್ದು ಇದನ್ನು ಮುಂಬಯಿ ಕರ್ನಾಟಕ ಕುರುಬರ ಸೊಸಾಯಿಟಿ ಗದಗ ಇ[illegible] ೧೦೦ ಕ್ಕೆ [illegible] ಯಂತೆ [illegible] ಗೊತ್ತುಮಾಡಿ ಠೇವು ಇಟ್ಟಿದೆ. ಸದರ ಸೊಸಾಯಿಟಿಯು ೧೫ ಸಾವಿರ ರೂ. ಬಾಂಡವುಳ್ಳದ್ದಾಗಿದೆ. ಇದಲ್ಲದೆ ಹಳೇರಿತ್ತಿ; ಮೋಟೆಬೆನ್ನೂರ, ಕೋಡಿಹಳ್ಳಿ ಇತ್ಯಾದಿ ಗ್ರಾಮಗಳಲ್ಲಿ ಧಾನ್ಯದ ಮುಷ್ಟಿ ಫಂಡಿನ ಚೀಲಗಳನ್ನು ದರಪ್ರೊಂದು ಕುರುಬರ ಮನೆಗೆ ಹಾಕಿದ್ದು ಅವುಗಳಿಂದ ಪ್ರತಿಯೊಂದು ಊರಿಗೆ ೨-೩-೫ ನೂರು ಕಾಳು ಬರುವಂತೆ ವ್ಯವಸ್ಥೆ ಮಾಡಿದೆ. ಇದರ ಯಾವತ್ತು ದೇಖರೇಕಿಯು ಕವಿಓಟಿ ಮೆಂಬರ ವಿ. ಹುಚ್ಚಪ್ಪಾ ವಗ್ಗಣ್ಣನವರ ಹಳೇರಿತ್ತಿ ಇವರದು ಇರುತ್ತದೆ.

ಕರ್ಜಗಿ, ರಾಣೇಬೆನ್ನೂರ, ಕೋಡ, ಹಾನಗಲ್ಲ, ಬಂಕಾಪೂರ ತಾಲೂಕಗಳಲ್ಲಿ ಡಿಶಂಬರ ತಿಂಗಳೊಳಗೆ ಅಜಮಾಸು ೩೫೦೦ ರೂಪಾಯಿ ವಿದ್ಯಾವರ್ಧಕ ಫಂಡು ಕೂಡಿದ್ದು ಈ ಕಾರ್ಯಕ್ಕೆ ಮೆ॥ ಭದ್ರಾಪೂರ ಡಿ. ಜಿ. ಕಲೇಕ್ಟರ ಸಾಹೇಬ ಬಹಾದ್ದೂರರವರು ನಮ್ಮ ಜನರಿಗೆ ಒಳ್ಳೇ ಉಪದೇಶ ಪರಭಾಷಣ ಮಾಡಿದ್ದು ಮುಖ್ಯ ಕಾರಣವಾಗಿದೆ. ಈ ಫಂಡಿನ ಕಾರ್ಯಕ್ಕೆ ಮೆಸರ್ಸ ಹುಚ್ಚಪ್ಪಾ ವಗ್ಗಣ್ಣನವರ, ಹಾಲಪ್ಪಗೌಡಾ ಪಾಟೀಲ, ಭೀಮಪ್ಪಾ ಮಣ್ಣೂರ, ಗೋವಿಂದಗೌಡಾ ಹುಲಕ್ಕಾಳ, ಇವರು ಪ್ರಯತ್ನ ನಡಿಸಿರುವರು. ನವಲಗುಂದ, ರೋಣ, ಗದಗ ತಾಲೂಕಗಳಲ್ಲಿ. ಶ್ರೀಮಂತ ಸೋಮನಗೌಡಾ ಹಲಗಾಪೂರ ಇವರು ಆಶ್ವಾಸಿಸುತ್ತಿರುವರು. ಸಂಘದ ಪತಿಯಿಂದ ಕುಲಕರ್ಣಿ ತಲಾಟಿ ಡಿಪಾರ್ಟಮೆಂಟಿನ ಮಾಹಿತಿಗಾಗಿ ಕೋಡ ತಾಲೂಕ ಲಿಂಗಾಪೂರದಲ್ಲಿ ಜೂನದಿಂದ ಟ್ರೇನಿಂಗಕ್ಲಾಸು ಸುರುವು ಆಗುವದಿದ್ದು ಅದರ ತಯಾರಿಯು ಈಗಿನಿಂದಲೇ ಒಳ್ಳೇ ಭರಾಟೆಯಿಂದ ಸಾಗಿರುವದು. ಈ ವರ್ಷ ನಮ್ಮವರೊಬ್ಬರು ಬಿ. ಎ. ಪರೀಕ್ಷೆಗೆ, ೭-೮ ವಿದ್ಯಾರ್ಥಿಗಳು ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಗೆ ಕೂತಿರುವಲ್ಲದೆ ೫೦-೬೦ ವಿದ್ಯಾರ್ಥಿಗಳು ಇಂಗ್ರೆಜಿ ಆಯಾ ಕ್ಲಾಸಿನಲ್ಲಿರುವರು. ಸಂಘದ ಪತಿಯಿಂದ ಕೆಲವು ಬಡವಿದ್ಯಾರ್ಥಿಗಳಿಗೆ ಇತರ ಪುಕ್ಕಟೆ ವ್ಯವಸೆ ಮಾಡಿದೆ. ಈ ವರ್ಷದ ಸಂಘದ ಕೆಲಸವು ಒಳ್ಳೇ ಉತ್ಸಕತೆಯಿಂದ ಸಾಗಿದ್ದು ಇನ್ನು ಮುಂದೆ ಇದಕ್ಕೂ ಹೆಚ್ಚು ಮಹತ್ವಾಕಾಂಕ್ಷೆಯುಳ್ಳವರಾಗಲು ಬೇಡಿಕೊಳ್ಳುತ್ತೇವೆ. ಕನಿಷ್ಟ ೧೫೦೦೦ ರೂ. ವಿದ್ಯಾವರ್ಧಕ ಫಂಡು ಕೂಡಿದ ಮೇಲೆ ಸಂಘ ರಜಿಸ್ಟ್ರೇಶನಕ್ಕೆ ಕಳಿಸಿ ಒಂದು ಬೋರ್ಡಿಂಗ ಮಾಡಲು ಸಂಘದ ಚಾಲಕರ ಮುಖ್ಯ ಆಶೆಯಿರುವದು. ಈ ಪ್ರಕಾರ ಸಿದ್ಧಿಗೆ ಒಯ್ಯಲು ಪ್ರತಿಯೊಬ್ಬ ಕುರುಬರ ಬಂಧುವು ಸಂಘದ ಬೆಳವಣಿಗೆಗೆ ಕೈಗೆ ಕೈ ಹಚ್ಚಿ ತನು ಮನ ಧನಗಳಿಂದ ಸಹಾಯವನ್ನು ಮಾಡಲು ಒಯಸುತ್ತೇವೆ. ಕರ್ನಾಟಕ ಕುರುಬ ಕಾನ್ಫರೆನ್ಸಿನ ೨ ನೇ ಅಧಿವೇಶನವು ಸ್ವಲ್ಪ ದಿವಸಗಳಲ್ಲಿಯೇ ಕೂಡತಕ್ಕದ್ದಿದ್ದು ಆಗ ಯಾವತ್ತರಿಗೂ ತಿಳಿಸುವದರಲ್ಲಿ ಬರುವದು ವಿಜಾಪೂರ ಜಿಲ್ಲೆಯ ನಮ್ಮ ಸಮಾಜದ ಪ್ರಮುಖಜನರು ೩ ನೇ ಪರಿಷತ್ತನ್ನು ನೆರವೇರಿಸಲಿಕ್ಕೆ ಇಲ್ಲಿಯವರ ಸಹಾಯ ಬೇಡಿದ್ದು ಅದನ್ನು ಅವರು ಮನಃ ಪೂರ್ವಕವಾಗಿ ಕೊಡುವರೆಂಬದು ಆನಂದದ ಸುದ್ದಿಯು.

—

ಸಂಕ್ಷಿಪ್ತ ವರ್ತಮಾನಗಳು.

—೦—

ಜ್ವಾಲಾಗ್ರಾಹಿ ಪದಾರ್ಥಗಳನ್ನು ಹತ್ತರ ಇಟ್ಟುಕೊಂಡಿದ್ದನೆಂಬ ಆರೋಪದಿಂದ ಪೋಲೀಸರು ವ್ರಜೇಂದ್ರನಾಥ ದಾಸನೆಂಬ ವಿದ್ಯಾರ್ಥಿಯನ್ನು ಹಾಟಣಾದ ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದ್ದರು. ಮ್ಯಾಜಿಸ್ಟ್ರೇಟರು ಈತನನ್ನು ನಿರ್ದೋಷಿ ಮಾಡಿದ ಕೂಡಲೆ ಪೋಲೀಸರು ಹಬ್ಬಾಳಕೆಯ ಕಾಯದೆಯ ಪ್ರಕಾರ ಈತನನ್ನು ದಸ್ತಗಿರ ಮಾಡಿ, ತುರಂಗಕ್ಕೆ ಹೈದರು.

—

ಇಂಗ್ಲಿಷ ತರುಣರು ಹಿಂದುಸ್ಥಾನದ ಸಿವ್ಹಿಲ ಸರ್ವೀಸ ಪರೀಕ್ಷೆಗೆ ಕೂಡ್ರಬೇಕೆಂದು ಆಗ್ರಹ ಪಡಿಸುವಂಥ ಒಂದು ಜಾಹೀರ ವಿನಂತಿ ಪತ್ರಿಕೆಯನ್ನು ಲಾರ್ಡ ಬರ್ಕನಹೆಡ್ಡ ಸಾಹೇಬರು ಇಷ್ಟರಲ್ಲಿ ಪ್ರಸಿದ್ಧ ಮಾಡತಕ್ಕವರಿದ್ದಾರೆ.

—

ಧಾರವಾಡ—

ಧಾರವಾಡ ಮತ್ತು ಹುಬ್ಬಳ್ಳಿಯ ಕಾಟನ ಸೇಲ ಸೊಸಾಯಿಟಿಯ ಹತ್ತಿಯನ್ನು ನಾಳ್ಕನೆಯ ತಾರೀಖಿನ ದಿವಸ ಹುಬ್ಬಳ್ಳಿಯಲ್ಲಿಯೇ ಲಿಲಾವು ಮಾಡುವರು. ಧಾರಣೆಯು ಈಗ ಬಹಳೇ ಇಳಿದಿರುವದರಿಂದ ಲಿಲಾವನ್ನು ಕೆಲವು ದಿವಸ ಮುಂದೆ ಹಾಕಿದರೆ ರೈತರಿಗೆ ಲಾಭವಾದೀತು.

—

ರಾಮನವಮಿಯ ರಜೆ—

ರಾಮನವಮಿ ಹಬ್ಬದ ನಿಮಿತ್ತ್ಯದಿಂದ ಇವತ್ತಿನ ದಿವಸ ಮುದ್ರಾಲಯಕ್ಕೆ ರಜೆ ಇರುವದರಿಂದ ತಾಳೆ ನ ಸಿತ್ಯದ ವಿಜಯವು ಪ್ರಕಟಿಸಲ್ಪಡಲಿಲ್ಲ.

ದಿ ಧಾರವಾಡ ಶ್ರೀರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ, ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜೋಡಿಗೆಯು ಆರುಲಕ್ಷದ ಮೇಲಿನವು. ಚೆಕ್ಕು, ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ನಡೆಯಲ್ಪಡುವವು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ಕೊಡಲಾಗುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ಆರ್. ಎಮ್. ಜ್ಯೋನ್ ಎಂಡ ಸನ್ಸ. ಹುಬ್ಬಳ್ಳಿ.

ಎಜಂಟ್ಸ ಫೋರ ಕಾರಬೋನಿಕ್ ಎಸಿಡ್ಡ ಗ್ಯಾಸ, ಮ್ಯಾನುಫ್ಯಾಕ್ಚುರರ್ ಆಫ್ ಏರೆಟೆಡ ವಾಟರ್ಸ.

ತಾಮ್ರ ... ಬೇಗ ಕಾಶಿಸಿ

ನಮ್ಮಲ್ಲಿ ಸಿಗುವ ಸಾಮಾನುಗಳ ವಿವರ.

ಫುಲ್‌ಗ್ಯಾಸ ಸಿಲಿಂಡರಗಳು ಇಂಗ್ಲೀಷ ಮತ್ತು ಜರ್ಮನಿ ಎಪೆಟೆಂಟ ಕಾಡ್ಡ, ಎಮ್. ಟಿ. ಸೋಡಾ ವಾಟರ ಬಾಟಲಗಳು, ೫೫೦ ನಂ. ಸಾಮಿ



ರೀನ ಪೆಪ್ಪ ೧ ... ಸೋಡಾವಾಟರ್ ಮಶಿನುಗಳು ಮತ್ತು ಎಲ್ಲ ತರದ ಕಲರಿನ ಬಾಟಲಿಗಳ ಎಸೆನ್ಸಗಳು, ಅಮೇರಿಕನ್ ಆಯಿಸ್ಕ್ರೀಮ ಸೋಡಾ, ಬನಾನಾ, ಕೋಲಾಜಿಂಜೇಜನ್, ಲೆಮನ್ ನಂ. ೧ ಲೆಮನ ಜುಯಿಸ್ ಸೋಡಾ ನಂ. ೧ ಮೆಂಗೋ, ಆರೇಂಜ, ಫಾಯಿನಾಪಲ್, ಪಿಕ್ಕಪೀಅಪ್, ಕ್ವಿನಿನ ಟಾನಿಕ್, ರಾಜಬಿರಿ ನಂ. ೧ ರೋಜ ನಂ. ೧ ಸ್ಟ್ರೋನ್ ಜಿಂಜರ್ ಬೀರ ನಂ. ೧, ರಬ್ಬರ್ ರಿಂಗ್ಸ್, ಬೇರೆ ಇತರ ಮಶಿನರಿ ಪಾರ್ಟಗಳು ನಮ್ಮಲ್ಲಿ ಸಿಗುತ್ತವೆ. ಮತ್ತು ಶುದ್ಧ ನೀಲಗಿರಿ ಎಣ್ಣೆಯು ಎಲ್ಲ ತರದ ಬಾಟಲ್ಲಗಳು ಸಿಗುತ್ತವೆ. ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಕೊಡುತ್ತೇವೆ. ನಮ್ಮಲ್ಲಿ ಕಬ್ಬಿಣದ ಮಿಶಿಟರಿ ಸಿಂಗಲ ಬಾಟ್ಲಗಳು ಸೋವಿ ದರದಿಂದ ಮಾರಲಿಕ್ಕೆ ಸಿಗುತ್ತವೆ.

ಅಡ್ರೆಸ್— R. M. John &Sons.
Mission Compound HUBLI

ದಿ ಧಾರವಾಡ ಬ್ಯಾಂಕ ಲಿಮಿಟೆಡ್

—o—

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಾಗಿರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ನೋಟೀಸು

ರಾಜಮಾನ್ಯ ರಾ|| ಶಿವಬಸಪ್ಪಾ ತಂದಿ ಬಸಪ್ಪಾ ಹಿಂಡಿಯವರ ಸಾ. ಹೊಸ ಹುಬ್ಬಳ್ಳಿ ಪೈಕಿ ಗುರುಸಿದ್ದಪ್ಪನ ಮಠದ ಹತ್ತರ ಸಾಲವೋಣಿ ಇವರಿಗೆ—

ಚನ್ನವ್ವ ಗಂಡಾ ಶಿವಬಸಪ್ಪಾ ಹಿಂಡಿಯವರ ಸಾಕೀನ ಬೀರವಳ್ಳಿ ತಾ. ಕಲಘಟಗಿ ನಾನು ಈ ನೋಟೀಸಿನ ದ್ವಾರದಿಂದ ತಿಳಸುವದೇನಂದರೆ—

ನೀನು ನನ್ನ ಲಗ್ನದ ಗಂಡನಿದ್ದು ನೀನು ರಾಂಡಬಾಜಿ ಮತ್ತು ದುರ್ವೆಸನ ಕೆಲ್ಸಗಳಲ್ಲಿ ಬಿದ್ದು ಈಗ ಹಾಲಿ ಹೆಂಗಸಿನ ಇಟಗೊಂಡು ಆಕಿ ಕೂಡ ಬಾಳವಿ ಮಾಡತೀದಿ ನನಗೆ ಆಗದಿ ಕೇರದೆ ನನ್ನ ಕೂಡಾ ಬಾಳ್ವೆ ಮಾಡದೆ ನನಗೆ ಹೊಡದು ಬಡದು ಮಾಡಿ ಅನೇಕ ರೀತಿಯಿಂದ ತ್ರಾಸ ಕೊಟ್ಟು ನನ್ನ ಮೈಮೇಲಿನ ದಾಗೀನೆ ವಸ್ತ್ರ ಕಸಕೊಂಡು ಉಟ್ಟ ಬಟ್ಟೆಯಿಂದ ನನಗೆ ಬಡದು ಹೊರಗೆ ಹಾಕಿ... ನೀಬ... ಮಂದಿ ವಿದ್ಯಮಾನ ಮಂಗಳ ಸೂತ್ರದ ಹೊರ್ತು ಯಾವ ದಾಗಿನೆ ಇಲ್ಲದಲೆ ಹೊರಗೆ ಹಾಕಿದಿ ಕಾರಣ ನಾನು ನನ್ನ ತವರ ಮನಿಗೆ ಬಂದು ಮೂರು ತಾಲ್ಕು ವರ್ಷ ಆಯಿತು ಇವತ್ತಿನ ವರಿಗೂ ನಿನ್ನ ಹಾದಿ ನೋಡಿದರೂ ನೀನು ನನಗೆ ಕರಕೊಂಡು ಹೋಗಲಿಲ್ಲಾ ನನ್ನ ತವರ ಮನಿಯವರು ಆಗದಿ ಬಡವರು ಇದ್ದದರಿಂದ ಈಗ ತುಟಾಗ್ರದ ದಿವಸ ಇದ್ದು ನಾನು ಯಾರದನೇ ಕಡೆ ನನ್ನ ಹೊಟ್ಟೆ ಒಟ್ಟೆಯ ಮೂಲಕ ನಾಲ್ಕು ನೂರು ರೂಪಾಯಿ ೪೦೦ ದೇಣೆ ಮಾಡಿದ್ದೆನೆ ಈಗ ತುಟ್ಟಗ್ಗರ ದಿವಸ ಇದ್ದು ಮುಂದೆ ಸಾಲಾ ಹುಟ್ಟುವದಿಲ್ಲಾ ಮತ್ತು ಹಿಂದಿನ ಸಾಲಗಾರರ ತಗಾದಿ ಜಾಸ್ತಿ ಆದದರಿಂದ ಈ ನೋಟೀಸು ಮುಟ್ಟಿದ ಹದೈದು (೧೫) ದಿವಸಗಳಲ್ಲಿ ನಾನು ಮಾಡಿದ ಸಾಲವನ್ನು ಫೇಡ ಮಾಡಿ ನನಗೆ ಕರಕೊಂಡು ಹೋಗಿ ಛಲೋ ರೀತಿಯಿಂದ ಬಾಳ್ವೆ ಮಾಡಬೇಕು, ಇಲ್ಲವಾದರೆ ನನ್ನ ದೇಣೆ ಫೇಡಿ ಜೀವನಕ್ಕೆ ನಾನು ಯಾರದನೆಯವನಿಗೆ ಉಡಿಕಿ ಮಾಡಿಕೊಳ್ಳುತ್ತೇನೆ ಆ ನಂತರ ನನ್ನ ಮೇಲೆ ವ ನನ್ನ ಉಡಕಿ ಮಾಡಿಕೊಂಡವನ ಮೇಲೆ ನಿನ್ನದು ಯಾವ ತರದ ತಕರಾರ ನಡಿಯಲಿಕ್ಕಿಲ್ಲ ಇದೇ ನೋಟಪತ್ರಯಿಂದು ತಿಳಿಯಬೇಕು ಈ ನೋಟೀಸಿನ ಖರ್ಚ ನಿನ್ನ ತಲಿಯ ಮೇಲೆ ಅದೆ ತಿಳಿಯುವದು ತಾ. ೨ ಎಪ್ರಿಲ ೧೯೨೫ ಇಸ್ವಿ

ಈ ಹೆಬ್ಬಟ್ಟಿನ ಗುರ್ತಾ ಚನ್ನವ್ವಾ ಕೋಂ ಶಿವಬಸಪ್ಪಾ ಹಿಂಡಿಯವರ ಸಾ. ಬೀರವಳ್ಳಿ ಈಕೆಯದು ಅದೆ.

ವಿಜಯದ ವರ್ಗಣೀ ದರ

ನಿತ್ಯಪತ್ರಕ್ಕೆ

೧೨ ತಿಂಗಳಿಗೆ		೧೨—೮—೦ ರೂ
೬	,,	೭—೮—೦ ರೂ
೩	,,	೪—೦—೦ ರೂ

ವಾರಪತ್ರಕ್ಕೆ ೧ ವರ್ಷಕ್ಕೆ ೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ.

ಮ್ಯಾನೇಜರ ವಿಜಯ, ಧಾರವಾಡ

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಐದು ಆಣೆ ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಒಳಗಳಿಗೆ ಇಮ್ಮಡಿ ಚಾರ್ಜ ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೬) ಧಾರವಾಡ ಶನಿವಾರ ತಾರೀಖು ೪ ನೇ ಎಪ್ರಿಲ ೧೯೨೫ (ಸಂಚಿಕೆ

ಬೇಸಿಗೆ ಪ್ರಾರಂಭವಾಯಿತು!

ದನಗಳ ಆಹಾರವಾದ ಕಣಿಕೆಯನ್ನು ಕಾದಿಡಿರಿ !!

ಕಿರ್ಲೋಸ್ಕರ ಕಣಿಕೆ ಯಂತ್ರವನ್ನು ಉಪಯೋಗಿಸಿರಿ !!!

ನಮ್ಮ ಕಾರ್ಖಾನೆಯಲ್ಲಿ ಎರಡು ನಮೂನೆಯ ಕಣಿಕೆ ಕೊರೆಯುವ ಯಂತ್ರಗಳು ತಯಾರಾಗುತ್ತವೆ. ಒಂದು ಕೈಯಂತ್ರ ಬೆಲೆ ೨೦ರೂ. ಇನ್ನೊಂದು ಗಾಲೀಯಂತ್ರ ಬೆಲೆ ೮೫ ರೂಪಾಯಿ. ಸಣ್ಣ ಕಮತವುಳ್ಳವರು ಕೈ ಯಂತ್ರವನ್ನು, ದೊಡ್ಡ ಕಮತವುಳ್ಳವರು ಗಾಲೀ ಯಂತ್ರವನ್ನೂ ಉಪಯೋಗಿಸಬಹುದು. ಕಣಿಕೆಯು ೪ ಇಂಚುಗಳಿಂದ ಒಂದು ಇಂಚಿನ ವರೆಗೆ ಕೊರೆಯಲ್ಪಡುತ್ತದೆ.

ಸವಿಸ್ತರ ಸಂಗತಿಯ ಬಗ್ಗೆ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ } ಕಿರ್ಲೋಸ್ಕರವಾಡಿ- ಜಿಲ್ಲಾ ಸಾತಾರಾ.

ಕುಸು ಕ್ರಮದಲ್ಲಿ ಮತ್ತು ಎರಡೇ ಆಣೆಯಲ್ಲಿ

ತಲೆಶೂಲೆ, ಅರತಲೆಶೂಲೆ, ಮಸ್ತಕ ಶೂಲೆಯು ಒಂದೇ ಕ್ಷಣದಲ್ಲಿ ನಂಬಿಗೆಯಿಂದ

ಬಂದಾಗುವ ನಮ್ಮ

ಮೊಮೆಂಟ ಕ್ಯುಅರ

ವನ್ನು ಒನ್ಮೆಯಾದರೂ ತಕ್ಕೊಳ್ಳಿರಿ. ಮೂರಾಣೆಯ ಟಿಕೀಟು ಕಳಿಸಿದರೆ ಸ್ಯಾಂಪಲ (ಮಾದರಿ) ಕಳಿಸುವೆವು.

ನಮ್ಮ ಔಷಧಾಲಯದಲ್ಲಿ ಡಾಕ್ಟರರ ಪ್ರಿಸ್ಕ್ರಿಪ್ಶನ್ ಪ್ರಕಾರ ಅತ್ಯಂತ ಕಾಳಜಿ ಮತ್ತು ದಕ್ಷತೆಯಿಂದ ಔಷಧವನ್ನು ತಯಾರ ಮಾಡಿ ಕೊಡುವೆವು. ದರ ತೀರ ಸುಲಭ.

ವಿಳಾಸ— ದಿ ಕರ್ನಾಟಕ ಮೆಡಿಕಲ ಸ್ಟೋರ್ಸ್, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ ಸ್ಟೇಶನರೋಡ ಹುಬ್ಬಳ್ಳಿ

ಶ್ರೀ ಶ್ರೀನಿವಾಸರಾವ ಕೌಜಲಗಿಯವರು ಹೈದರಾಬಾದಿನಲ್ಲಿ ಕೂಡಿದ ಹಿಂದೂ ಮಹಾ ಸಭೆಗೆ ಹೋಗಿದ್ದಾರೆ. ಅಲ್ಲಿಂದ ಖಾದೀ ಪ್ರಸಾರಕ್ಕಾಗಿ ಹುನುಗುಂದ ತಾಲೂಕಿನಲ್ಲಿ ಪ್ರವಾಸ ಮಾಡುವರು.

ಮುಂಬಯಿಯಲ್ಲಿರುವ ಮಾಣೆಕಜಿ ಪೆಟಿಟವೆಂಬ ಗಿರಣಿಯು ಬಂದಾಯಿತು. ಹೋದ ವರ್ಷ ಇದಕ್ಕೆ ಮೂರು ಲಕ್ಷದ ಹಾನಿ ಬಂತು. ಬಂದೊಂದೇ ಗಿರಣಿಯು ಇದನ್ನು ಹಿಂಬಾಲಿಸುವ ಅಶುಭ ಲಕ್ಷಣ ತೋರಲಾರಂಭಿಸಿದೆ.

ನೋಟೀಸಿನಿಂದ ವಿನಂತಿಯು.

ರಾವಸಾಹೇಬ ಮಾಮಲೇದಾರ ತಾಲೂಕ ಕುಂದಗೋಳ ಇವರಿಗೆ

ಕೆಳಗೆ ಸಹೀ ಮಾಡುವ ಚನ್ನಬಸಪ್ಪಾ ತಂದಿ ಫಕೀರಪ್ಪಾ ಗಿಡಹನ್ನನವರ ಸಾ. ಧಂಡಿವಾಡ ತಾ. ಹುಬ್ಬಳ್ಳಿ ಈತನು ತಮಗೆ ವಿನಂತಿ ಮಾಡಿಕೊಳ್ಳುವದೇನಂದರೆ-

ಕುಂದಗೋಳ ತಾಲೂಕ ಕಡಪಟ್ಟಿಯಲ್ಲಿರುವ ಕುರಿ ಗದಿಗೆವ್ವನ ಮನೆಯಲ್ಲಿ ನನ್ನ ಹೆಂಡತಿಯಾದ ಬಸವಣ್ಣೆಯು ಇರುತ್ತಾಳೆ ಈಕೆಯು ನನ್ನನ್ನು ಬಿಟ್ಟು ಹೋಗಿ ಎರಡು ವರ್ಷವಾಯಿತು ಈಗ ಗರ್ಭಿಣಿ ಇದ್ದಾಳೆಂದು ಬಾತಮೀ ಕೇಳಿದೆನು ಈಕೆಯು ಹಡೆವ, ಜನನ ರಜಿಸ್ಟರದಲ್ಲಿ ಜನಕ ತಂದಿ ಎಂದು ನನ್ನ ಹೆಸರು ಹಚ್ಚಿಸಲಿಕ್ಕೆ ಬರುವಳು ಆದರೆ ಜನಕ ತಂದಿಯೆಂದು ನನ್ನ ಹೆಸರು ಬರೆಕೊಳ್ಳದಂತೆ ಗ್ರಾಮಸ್ಥರಿಗೆ ಹುಕುಮು ಆಗಬೇಕೆಂದು ನನ್ನ ವಿನಂತಿಯು ತಾರೀ ೧ನೇ ಎಪ್ರಿಲ ೧೯೨೫ ನೇ ಇಸವಿ.

ಚನ್ನಬಸಪ್ಪಾ ತಂದಿ ಫಕೀರಪ್ಪಾ ಗಿಡಹನ್ನನವರ.

ನೋಟೀಸಿನಿಂದ ವಿನಂತಿಯು.

ಕುಂದಗೋಳ ತಾಲೂಕ ಕಡಪಟ್ಟಿಯ ಗ್ರಾಮಸ್ಥರಿಗೆ

ಕೆಳಗೆ ಸಹೀ ಮಾಡುವ ಚನ್ನಬಸಪ್ಪಾ ತಂದಿ ಫಕೀರಪ್ಪಾ ಗಿಡಹನ್ನನವರ ಸಾ. ಧಂಡಿವಾಡ ತಾಲೂಕ ಹುಬ್ಬಳ್ಳಿ ಈತನು ವಿನಂತಿ ಮಾಡಿಕೊಳ್ಳುವದೇನಂದರೆ-

ನನ್ನ ಹೆಂಡತಿಯಾದ ಬಸವಣ್ಣೆಯು ಕಡಪಟ್ಟಿಯಲ್ಲಿರುವ ಕುರಿ ಗದಿಗೆವ್ವನ ಮನೆಯಲ್ಲಿರುತ್ತಾಳೆ ಈಕೆಯು ನನ್ನನ್ನು ಬಿಟ್ಟು ಹೋಗಿ ಎರಡು ವರ್ಷವಾಯಿತು ಈಗ ಗರ್ಭಿಣಿ ಇದ್ದಾಳೆಂದು ಕೇಳಿದೆನು ಈಕೆಯು ಜನನ ರಜಿಸ್ಟರದಲ್ಲಿ ಹುಟ್ಟಿದ ಕೂಸಿಗೆ ಜನಕ ತಂದಿಯೆಂದು ನನ್ನ ಹೆಸರು ಹಚ್ಚಿಸಲಿಕ್ಕೆ ಬಂದರೆ- ಆ ಪ್ರಕಾರ ಬರೆಕೊಳ್ಳಬಾರದೆಂದು ವಿನಂತಿಯು ತಿಳಿಯುವದು ತಾ. ೧ನೇ ಎಪ್ರಿಲ ೧೯೨೫ ಇಸವಿ

ಚನ್ನಬಸಪ್ಪಾ ತಂದಿ ಫಕೀರಪ್ಪಾ ಗಿಡಹನ್ನನವರ

ವಿಜಯ.

ಧಾರವಾಡ ತಾ- ೪-೪-೨೫ ನೇ ಇಸ್ವಿ

ಗದ್ವಾಲ ಸಂಸ್ಥಾನದ ಮೇಲೆ ನಿಜಾಮರ ದಂಡಿನ ಪ್ರಯಾಣ.

—o—

ಗದ್ವಾಲ ಸಂಸ್ಥಾನದ ವಿಷಯವಾಗಿ ನಿಜಾಮ ಸಾಹೇಬರು ಹಿಂದೂ ಧರ್ಮಕ್ಕೆ ತೀರ ವಿರುದ್ಧವಾಗಿ ತೆಗೆದ ಹುಕುಮಿನಿಂದ ಆ ಸಂಸ್ಥಾನದ ಅಂತಃಸ್ಥಿತಿಯು ಬಹಳವಾಗಿ ಕಟ್ಟಿದೆ. ಸಂಸ್ಥಾನವು ನಿಜಾಮರ ಮಾಂಡಲಿಕವಲ್ಲ, ನಿಜಾಮವಾಲ ಮುಲಕರು ಬರುವ ಪೂರ್ವದಲ್ಲಿ ಐದಾರು ನೂರು ವರ್ಷದಿಂದ ಇದ್ದದ್ದು. ದೈವ ದುರ್ವಿಪಾಕದಿಂದ ಇದು ಸಣ್ಣದಾಗಿ, ಹೈದರಾಬಾದವು ದೊಡ್ಡದಾಗಿ, ದೊಡ್ಡ ಮೀನದ ಹೊಟ್ಟೆಯಲ್ಲಿ ಸಣ್ಣ ಮೀನ ಹೊಕ್ಕಂತಾಗಿರುತ್ತದೆ. ಗದ್ವಾಲದ ಅರಸರು ಸಾಯುವಾಗ ಮುದುಕರಿದ್ದಿಲ್ಲ. ಮಧ್ಯ ಪ್ರಾಯದವರು. ಅಕಾಲ ಮೃತ್ಯು ಬಂತು. ಹಿಂದೂ ಧರ್ಮಶಾಸ್ತ್ರ ಪ್ರಕಾರ ಗಂಡ ಸತ್ತ ನಂತರ ಪುರುಷ ಸಂತತಿಯು ಇರದಿದ್ದರೆ- ಹೆಂ ಡ ತಿ ಯು ವಾ ರ ಸ ದಾ ರ ಳಾ ಗು ತ್ತಾ ಳೆ ಸಹಜವಾದ ರೀತಿಯಿಂದ ಕಂಡು ಬರುವ ವಾರಿಯನ್ನು ಬಿಟ್ಟು, ನಿಜಾಮ ಸಾಹೇಬರು ಕುಮಾರಿಯಾಗಿರುವ ಮಕ್ಕಳ ಮದಿವೆಯಾಗಿ, ಅವರಿಗೆ ಪುತ್ರ ಸಂತಾನವಾಗುವ ತನಕ ಸಂಸ್ಥಾನವು ಕೋರ್ಟ ಆಫ ವಾರ್ಡ್ಸಿನ ವಶವಾಗಿರಬೇಕೆಂದು ಮಾಡಿದ ಹುಕುಮು ಅನ್ಯಾಯ ಮಾತ್ರವಲ್ಲ. ಪಾತಶಾಹಿಯದು ಯಾವ ದೇಶದ ಅರಸನೂ ಇಂಥ ತಿಳಿಗೇಡಿ ಹುಕುಮು ಮಾಡಲಾರನು. ಸಂಸ್ಥಾನದ ಪ್ರಜರು ಸ್ವಾಮಿನಿಷ್ಠೆಯಿಂದ ರಾಣಿಯರ ಹಿತ ಬಯಸಿ, ನಿಜಾಮಶಾಹಿಯ ಹುಕುಮನ್ನು ನಿಷೇಧಿಸಿದ್ದು ಒಂದು ತಪ್ಪು. ಸಾಹೇಬರು ಇಂಥವರ ಸಂಬಳವನ್ನೇ ನಿಲ್ಲಿಸಿ ಬಿಟ್ಟಿದ್ದಾರೆ. ತಮ್ಮ ವಿರುದ್ಧ ಯಾರಾರು ಗೊಂದಲವೆಬ್ಬಿಸಿದರೆಂದು ತಿಳಕೊಳ್ಳುವದಕ್ಕೂ ಸಾಹೇಬರು ಕುತೂಹಲರಾಗಿದ್ದಾರೆ. ಗದ್ವಾಲದ ವಿದ್ಯಮಾನ ವಿಚಾರ ತಿಳಕೊಳ್ಳಬೇಕೆಂದು ಸ್ಪೆಷಲ ಕಮೀಟಿ ನೇಮಿಸಿದ್ದಾರೆ. ಇವರೆಲ್ಲರೂ ಯಾರಜಂಗ ಬಹಾದ್ದರರಾದ ಮುಸಲಮಾನರಾಗಿದ್ದಾರೆ. ಸಂಸ್ಥಾನ ಹಿಂದೂಗಳದು ನಡೆ ನುಡಿ ಹಿಂದುಗಳದು. ಅದರಲ್ಲಿ ಒಬ್ಬನಾದರೂ ಹಿಂದೂ ಮೆಂಬರನಿರುವದಿಲ್ಲ. ಇದರಿಂದಾಗುವ ಹಿತವನ್ನು ಮುಂದಾಗಿ ಭಾವಿಸುವದು ದೊಡ್ಡ ತಪ್ಪಾಗಬಾರದು. ಸಾಹೇಬರ ಅನ್ಯಾಯದ ಕೃತ್ಯಗಳೆಲ್ಲ ಹಿಂದು ತೂಕ, ಮತ್ತು ಸಂಸ್ಥಾನವನ್ನು ಕೋರ್ಟ ಆಫ ವಾರ್ಡ್ಸಿನ ವಶದಲ್ಲಿ ತಕ್ಕೊಳ್ಳುವಾಗ ಗದ್ವಾಲದ ಪ್ರಜರು ಅಡ್ಡಿ ಮಾಡಬಾರದು; ದಂಗೆ ಮಾಡಬಾರದು; ಮಾಡಿದರೆ- ಅವರ ಬಂದೋಬಸ್ತು ಮಾಡಬೇಕೆಂದು ದಂಡು ಕಳಿಸಿದ್ದೊಂದು ಶೋಕವಾಗಿರುತ್ತದೆ.

ಹಿಂಸೆಯಿಂದ ಸ್ವರಾಜ್ಯ ಸಿಗಲಾರದು.

ದೇಶಬಂಧು ದಾಸರ ಸಂದೇಶ.

—o—

ಈ ವಾರದಲ್ಲಿ ದೇಶಬಂಧು ದಾಸರು ಅರಾಜಕರನ್ನುದ್ದೇಶಿಸಿ ಒಂದು ಸಂದೇಶ ಪ್ರಸಿದ್ಧ ಮಾಡಿ, ಅನಾಯಕತನ ಅಥವಾ ಕೊಲೆಗಳಿಂದ ಸ್ವರಾಜ್ಯ ಸಿಗಲಾರದೆಂದು ಸ್ಪಷ್ಟವಾಗಿ ಅವರಿಗೆ ಉಪದೇಶ ಮಾಡಿದ್ದಾರೆ. ಮಹಾತ್ಮರು ಅಹಿಂಸೆಯ ಅಸಹಕಾರ ಪ್ರಾರಂಭ ಮಾಡಿದಂದಿನಿಂದ ಹಿಂಸೆಯ ಮಾತುಗಳೇ ಹೊರಟು ಹೋಗಿದ್ದವು. ಅಸಹಕಾರದ ಚಳವಳಿಯನ್ನು ನಿಲ್ಲಿಸಿದ ಕೂಡಲೆ ಕಲಕತ್ತೆಯಲ್ಲಿ ಇವರ ಉಪಟಳವೆದ್ದಿತು. ಸಿರಾಜಗಂಜದ ಪ್ರಾಂತಿಕ ಸಭೆಯಲ್ಲಿ ಡೇ ಸಾಹೇಬನ ಕೊಲೆ ಮಾಡಿದ ಗೋಪಿನಾಥ ಶಹಾನ ದಾರಿ ತಪ್ಪಿದರೂ, ಆತನ ಸ್ವದೇಶಾಭಿಮಾನವು ಹೊಗಳುವಂಥದಾಗಿದೆಂದು ಠರಾವು ಮಾಡಿದರು. ಇದರಿಂದ ಬಂಗಾಲಿಗಳು ಹೆಸರಿಗೆ ಮಹಾತ್ಮರನ್ನು ಹಿಂಬಾಲಿಸತಕ್ಕವರಾದರೂ, ಅವರ ಮನಸ್ಸಿನಲ್ಲಿ ಕೊಲೆಯ ವಿಚಾರವು ಕುದಿಯುತ್ತಿರುವದೆಂದು ಯುರೋಪಿಯನರು ತರ್ಕ-ವಿತರ್ಕ-ಕುತರ್ಕ ನಡೆಸಿದರು. ಅನಂತರ ದಬ್ಬಾಳಿಕೆಯ ಕಾಯದೆಯಾಗಿ, ಅನೇಕರು ತುರಂಗವಾಸಿಯಾದರು. ಜನರು ತುರಂಗ ಕಂಡರೂ, ಬಂಗಾಲಿಗಳು ಹೆದರಿಲ್ಲ. ಹಿಂದೆ ಹೆದರಿಲ್ಲ, ಮುಂದೆ ಹೆದರುವದಿಲ್ಲೆಂದು ಬಂಟತನದ ಭಾಷಣವನ್ನು ಬಾಬೂ ಬಿಪಿನಚಂದ್ರ ಪಾಲರು ಅಸೆಂಬ್ಲಿಯಲ್ಲಿ ಮಾಡಿದ್ದಾರೆ. ದೇಶಬಂಧು ದಾಸರೇ ಮೊದಲಾದ ಸ್ವರಾಜ್ಯ ಪಕ್ಷೀಯರು ಪ್ರತ್ಯಕ್ಷಾಪ್ರತ್ಯಕ್ಷವಾಗಿ ಅರಾಜಕರಿಗೆ ಉತ್ತೇಜನ ಕೊಡುತ್ತಾರೆಂದು ಯುರೋಪಿಯನರು ಧಾರಾಳವಾಗಿ ಅನ್ನತೊಡಗಿದರು. ಕೆಲವರಂತೂ ದೇಶಬಂಧುವನ್ನು ಕಂಡು, ಅವರಿಗೆ ಪ್ರಶ್ನೆ ಮಾಡಿದರು. ಪರಕೀಯರ ಮನಸ್ಸಿನಲ್ಲಿಯ ದುರ್ಗ್ರಹ ಮತ್ತು ಸಂಶಯವನ್ನು ತೆಗೆದು ಹಾಕುವ ಉದ್ದೇಶದಿಂದಲೇ ದೇ. ದಾಸರು ಮೇಲಿನ ಸಂದೇಶವನ್ನು ಪ್ರಸಿದ್ಧ ಮಾಡಿದ್ದಾರೆ. ಆ ವಾರ ಇದಕ್ಕೆ ಪ್ರತಿ ಪಕ್ಷಿಗಳ ಟೀಕೆಗೆ ಕಡಿಮೆಯಾಗಲಿಲ್ಲ. ಲಾರ್ಡ ರೀಡಿಂಗ ಸಾಹೇಬರು ವಿಲಾಯತಿಗೆ ಹೋದ ಬಳಿಕ ಹಿಂದೀ ಜನರಿಗೆ ಹೆಚ್ಚಿನ ಅಧಿಕಾರ ಕೊಡಬೇಕೆಂದು ಮಾತಾಡುವಾಗ ಅವರಿಗೆ ಅರಾಜಕರ ಉಲ್ಬಣ ತೋರಿಸುವರು; ಇದನ್ನು ಒಂದಿ ಮುಚ್ಚಿದ ಕೆಂಡ ಮಾಡುವ ಕುಹಕತನದಿಂದ ದೇ. ದಾಸರು ಈ ವಿನಂತಿ ಪತ್ರವನ್ನು ತೆಗೆದಿರುತ್ತಾರೆನ್ನುವರು. ಈ ಜಾಹೀರ ಪತ್ರಿಕೆಯು ದಬ್ಬಾಳಿಕೆಯ ಕಾಯದೆಯ ಮುಂಚಿತವಾಗಿ ಹೊರಟಿದ್ದರೆ- ನೆಟ್ಟಗಾಗುತ್ತಿತ್ತೆಂದು ಕಲಕತ್ತೆಯ ಯುರೋಪಿಯನ ಅಸೋಸಿಯೇಶನದ ಪ್ರೆಸಿಡೆಂಟರಾದ ಮಿ. ಕಾರ ಸಾಹೇಬರು ಅಂದಿದ್ದಾರೆ. ಕಾಲ ವಿಚಾರದ ಮಟ್ಟಿಗೆ ಹೇಗೇ ಮತಭೇದವಿರಲಿ, ಸ್ವರಾಜ್ಯ ಪಕ್ಷೀಯರು ಹಿಂಸೆಗೂ ಅತ್ಯಾಚಾರಕ್ಕೂ ಎಷ್ಟು ಮಾತ್ರಕ್ಕೂ ಪ್ರೋತ್ಸಾಹನ ಕೊಡುವದಿಲ್ಲೆಂದು ದೇಶಬಂಧು ದಾಸರು ನಿರ್ಮಲ ಮನಸ್ಸಿನಿಂದ ಹೇಳಿದ ಬಳಿಕ, ಸ್ವರಾಜ್ಯ ಪಕ್ಷೀಯರನ್ನು ದಬ್ಬಾಳಿಕೆಯ ಕಾಯದೆಯಿಂದ ತುರಂಗಗಳಲ್ಲಿ ಕೊಳೆಸುವದು ಸರಕಾರಕ್ಕೆ ಉಚಿತವೆನಿಸಬಾರದು.

ತುರುಕ ಮತ್ತು ಖುರುಡರ ದಂಡುಗಳ ಚಕಮಕಿ.

—o—

ತುರುಕ ರಾಜ್ಯದಲ್ಲಿದ್ದ ಖುರ್ದರ ಬಂಡಾಯವು ಪತ್ತೆಗೆ ಬಂದಿತ್ತು. ಅದು ಈಗ ಪಟ ಹಾಕಿದಂತಾಗಿ ಚೇತರಿಸಿಕೊಂಡಿದೆ. ಖುರಡರನ್ನು ಹುಲ್ಪೊರೆದು ಅವರನ್ನು ನಿರ್ವೀರ ಮಾಡಬೇಕೆಂದು ತುರುಕ ಸರಕಾರದವರು ದಂಡಿನ ದೊಡ್ಡ ಸಿದ್ಧತೆ ಮಾಡಿದ್ದಲ್ಲದೆ, ಖುರಡರಲ್ಲಿ ಯಾವ ಯಾವ ಪ್ರಮುಖರನ್ನು ತೋಫಿನ ಬಾಯಿಗೆ ಕೊಡಬೇಕೆಂದು ಒಂದು ನಾಮಾವಳಿಯನ್ನು ಸಿದ್ಧ ಮಾಡುತ್ತಲಿದ್ದಾರೆ. ಮುಂದೆ ತಾವು ತೋಫಿನ ಬಾಯಿಗೆ ಬೀಳುವದೊಂದೆಡೆಯಲ್ಲಿರಲಿ, ಈಗಾಗಲೇ ಅದರ ಮುಯ್ಯ ತೀರಿಸಿಕೊಂಡು ಬಿಟ್ಟರಾಯಿತೆಂದು ಖುರುಡರು ತಮಗೆ ಸೆರೆಸಿಗುವ ತುರುಕ ಕಾಮದಾರರ ದಂಡಗಳನ್ನು ಚಂಡಾಡುತ್ತಲಿದ್ದಾರೆ.

ಹೊಗೆಬಂಡಿ ಹೊಳೆಯಲ್ಲಿ ಬಿತ್ತು.

—o—

ನೂರಾರು ಸೋಲ್ಜರರ ಮರಣ

—o—

ಜರ್ಮನಿಯಲ್ಲಿ ಹಾಸಬರ್ಗದ ಹತ್ತರ ಒಂದು ನದಿಯ ಮೇಲಿನ ಸೇತುವೆಯು ಬಂಡಿಯ ಭಾರ ತಾಳಲಾರದೆ ಕಡಕೊಂಡು ಬಿತ್ತು. ಬಂಡಿಯಲ್ಲಿ ಸೋಲ್ಜರರಿದ್ದರು ೯೦ ರಿಂದ ನೂರು ಜನರು ಜಲಸಮಾಧಿ ಹೊಂದಿದರು.

ಆಸ್ಪತ್ರಿಯಲ್ಲಿ ಬಾವಲಾನ ಉದ್ಗಾರ

—o—

ಗುಂಡು ಬಡಿದು, ಆಸ್ಪತ್ರಿಗೆ ಒಯ್ಯಲ್ಪಟ್ಟ ನಂತರ ಈತನ ಹೇಳಿಕೆಯನ್ನು ತಕ್ಕೊಳ್ಳುವಾಗ ಅಂದದ್ದೇನಂದರೆ—

"ಇದೆಲ್ಲ ಕೃತ್ಯವು ಮುಮತಾಜಳ ಮುಲತಂದೆಯ ಕೃತ್ಯವಾಗಿರಬೇಕು. ಏಕೆಂದರೆ- ನಮ್ಮ ಹುಡಿಗೆ ಎಲ್ಲಿಂದಲೋ ಆತನ ಮೊದಲನೇ ಪ್ರಶ್ನವಾಗಿತ್ತು. ಕೊಲೆಗಾರರ ಗುರ್ತು ಹಿಡಿಯಲಾರೆನು."

ವಿಚಾರಣೆಯು ಬಹಳವಾಗಿ ಇಂದಿಗೆ ಮುಗಿದು, ಸೆಶನ ಕಮಿಟಾಗುವದು. ಅನಂತರ ಖಟ್ಲೆಯನ್ನು ಮುಂಬಯಿಗೆ ವರ್ಗ ಮಾಡುವ ವಿಷಯವಾಗಿ ಅರ್ಜಿ ಮಾಡಲ್ಪಡುವದು. ಮ್ಯಾಜಿಸ್ಟ್ರೇಟರು ಆರೋಪಿಗಳಿಗೆ ಕೊಡ್ರುವದಕ್ಕೆ ಖರ್ಚುಗಳನ್ನು ಕೊಟ್ಟಿದ್ದರು.

ಕೋಣನ ಸಮಾಧಿಯು.

—o—

ಪೈಠಣದ ಜ್ಞಾನೇಶ್ವರರು ಕೋಣನಿಂದ ವೇದ ಅನ್ನಿಸಿದ್ದು ಸರ್ವ ಶ್ರುತವಿದೆ. ಈ ಕೋಣ ಸತ್ತ ಮೇಲೆ ಇದರ ಮೇಲೊಂದು ಸಮಾಧಿ ಕಟ್ಟಿದ್ದಾರೆ. ಆರು ನೂರು ವರುಷಗಳ ತನಕ ಭಾವಿಕ ಜನರು ಇದರ ಮೇಲೆ ಸಿಂಧೂರ ಹಾಕುತ್ತಾ ಬಂದಿದ್ದಾರೆ. ಸಮಾಧಿಯು ಸಿಂಧೂರಿನಿಂದ ಮುಚ್ಚಿತ್ತು. ಎಲ್ಲ ಸಿಂಧೂರ ತೆಗೆದು, ಸಮಾಧಿಯು ಕಾಣಿಸುವಂತೆ ಮಾಡಿದ್ದಾರೆ. ಇದು ಎಳೆ ಬಂಡಿಯಾಗಿದೆ.

ರದ್ದಾದ ಹೋಟುಗಳು ಕಾಯಮವಾದವು.

—o—

ಪುಣೆಯ ಮ್ಯುನಸಿಪಾಲಿಟಿಯ ಚುನಾವಣೆಯಲ್ಲಿ ಉಪಾಧ್ಯಕ್ಷರಾಗಿದ್ದ ಮಿ. ಲಲಾಟೆಯವರು ಒಂದೇ ಹೋಟಿನಿಂದ ಪರಾಜಯ ಹೊಂದಿದರು. ಎಣಿಸುವಾಗ ಅವರ ಅನೇಕ ಹೋಟುಗಳನ್ನು ರದ್ದು ಮಾಡಿದರು. ಇದರ ಮೇಲೆ ಇವರು ಜಜ್ಜ ಕೋರ್ಟಿನಲ್ಲಿ ದಾವೇ ತಂದರು. ಜಜ್ಜರು ೧೨ ಹೋಟುಗಳನ್ನು ಮಂಜೂರ ಮಾಡಿ, ಮಿ. ಲಲಾಟೆಯವರು ಚುನಾಯಿಸಿ ಬಂದರೆಂದು ಜಾಹೀರ ಮಾಡಿದ್ದಾರೆ.

ಲಾರ್ಡ ರೀಡಿಂಗ ಸಾಹೇಬರ ಗಮನಾಗಮನ.

ಲಾರ್ಡ ರೀಡಿಂಗ ಸಾಹೇಬರು ಎಪ್ರಿಲ ತಿಂಗಳ ೧೦ ನೆಯ ತಾರೀಖಿನ ದಿವಸ ಮುಂಬಯಿಯಿಂದ ವಿಲಾಯತಿಗೆ ಹೋಗುವರು. ಆಗಸ್ಟ ತಿಂಗಳ ೧೦ ನೆಯ ತಾರೀಖಿನೊಳಗಾಗಿ ಹಿಂದುಸ್ಥಾನಕ್ಕೆ ಮರಳಿ ಬರುವರು.

ಹಿಂದುಸ್ಥಾನಕ್ಕೆ ಬಾದಶಹರ ಆಗಮನ.

—o—

ಹೊಸ ದಿಲ್ಲಿಯ ಅನಾವರಣ ಸಮಾರಂಭಕ್ಕೆ ಬಾದಶಹರನ್ನು ಇಲ್ಲಿ ಕರೆದುಕೊಂಡು ಬರುವ ವಿಚಾರವು ನಡೆದಿರುವದಷ್ಟೇ; ಈ ಬಗ್ಗೆ ಲೋಕಮಾನ್ಯ ಪತ್ರವು ಅನ್ನುವದೇನಂದರೆ- ಇಲ್ಲಿ ಹತಾಶರಾಗಿ ಇತ್ತಂಡವಾಗಿ ಬಡಿದಾಡುತ್ತಿರುವ ರಾಜಕೀಯ ಆಕಾಂಕ್ಷೆಯು ಜನರಲ್ಲಿ ಬರಿಗಬ್ಬಿಂದ ಬಾದಶಹರು ಬರುವದು ಉಚಿತವಲ್ಲ. ಸಂಪೂರ್ಣ ಇಲ್ಲವೆ ಹದಿನಾರಾಣೆಯಾದರೂ ಸ್ವರಾಜ್ಯವನ್ನು ಕೊಡುವದಿದ್ದರೆ ಅವರು ಬಂದರೆ ಎಲ್ಲರಿಗೂ ಸಂತೋಷ. ಇಲ್ಲವಾದರೆ ದುಷ್ಕಾಳದಲ್ಲಿ ಅಧಿಕ ಮಾಸವನ್ನು ತರೆದಂತೆ ಸೌಕರರಾ ಹಿಗೂ ಜನರಿಗೂ ಬಾದಶಹರ ಆಗಮನವು ಸುಖಕರವಾಗದು.

ವಿವಿಧ ವರ್ತಮಾನಗಳು

—o—

ಮಿ. ಬೋಸನೆಂಬ ಬಂಗಾಲಿ ಗೃಹಸ್ಥರು ಮುಂಬಯಿ ಇಲಾಖೆಯ ಪೋಸ್ಟ ಮಾಸ್ತರ ಜನರಲರೂ, ಸರ್ಜನ ಮೇಜರ ಕುಕಡೆಯವರು ಮುಂಬಯಿ ಇಲಾಖೆಯ ಸರ್ಜನ ಜನರಲರೂ ಆಗಿ ನೇಮಿಸಲ್ಪಟ್ಟಿದ್ದಾರೆ. ಈ ಹುದ್ದೆಯ ಸ್ಥಳಗಳು ಏತದ್ದೇಶಿಯರಿಗೆ ದೊರೆತದ್ದು ಇದೇ ಮೊದಲು.

ಸಾತಾರಿಯಲ್ಲಿ ಕೂಡುವ ಮಹಾರಾಷ್ಟ್ರ ಪ್ರಾಂತಿಕ ಪರಿಷತ್ತಿನ ವೇಳೆಯಲ್ಲಿ ಗ್ರಾಮಪಂಚಾಯತಿ ಬಿಲ್ಲಿನ ವಿಚಾರವಾಗುವದು. ಸರಕಾರದವರು ಮುಂದಿನ ಕೌನ್ಸಿಲದಲ್ಲಿ ತರುವ ಬಿಲ್ಲು ಅತೃಪ್ತಿಕರವಾದ್ದರಿಂದ, ನಾನ ಆಫಿಶಿಯರು ತಾವೇ ಒಂದು ಬಿಲ್ಲು ತರುವದಕ್ಕಾಗಿ ಈ ವಿಚಾರವಿರುತ್ತದೆ.

ವಿಜಾಪೂರದ ಸ್ಕೂಲಬೋರ್ಡಿಗೆ ಮುಂದೆ ಹೇಳಿದವರು ಮೆಂಬರರಾಗಿ ಆರಿಸಲ್ಪಟ್ಟಿದ್ದಾರೆ.

ಮೆಸರ್ಸ ಅಂಗಡಿ ಮತ್ತು ಕೆಂಭಾವಿ ವಕೀಲರು ಮಿ. ಇಬ್ರಾಹಿಮುಸಾಹೇಬ ಕಾಂಟ್ರ್ಯಾಕ್ಟರ, ಖಾನಬಹಾದ್ದೂರ ಇಸ್ಮಾಯಿಲಸಾಹೇಬ ಮಿ. ಶಿವಲಿಂಗಪ್ಪ ಮಾಸ್ತರ, ಮಿ. ಮುತವಣ್ಣನವರ ಶಾಂತಾಬಾಯಿ (ಮಿಸ್ಟ್ರೆಸ) ಮಿ. ಹೊಸಕೇರಿ (ಅಸ್ಪೃಶ್ಯ)

ಕಪರಾಣಪೂರದಲ್ಲಿ ರಾಮನವಮಿಯ ಉತ್ಸವದಲ್ಲಿ ಹಿಂದೂಜನರು ಗಂಗೋಪವೆಂಬ ಮಸೀದೆಯ ಮುಂದೆ ವಾದ್ಯಬಾರಿಸುತ್ತಾ ಮೆರವಣಿಗೆ ವಯ್ಯಬಾರದೆಂದು ಅಲ್ಲಿಯ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ನೋಟೀಸು ತೆಗೆದದ್ದರಿಂದ, ಹಿಂದೂ ಜನರು ಮೆರವಣಿಗೆಯನ್ನು ಬಂದು ಮಾಡಿದರು.

ಮಾಘ ವದ್ಯ ತ್ರಯೋದಶೀ "ಧನ್ವಂತರಿ" (ಮ್ಯಾಗೇರಿ) ಪಾಕ್ಷಿಕ ಪತ್ರದಲ್ಲಿ ವೇ| ರಾ| ರಾ| ವಿಷಪತಿ ಸುಬ್ರಹ್ಮಣ್ಯ ಸಿದ್ಧಾಂತಿ ಆಂಧ್ರ ಗೀರ್ವಾಣ ವಿದ್ಯಾಪೀಠ ಗೋದಾವರಿ ಎಂಬ ಜ್ಯೋತಿಷಿಗಳು ಕ್ರೋಧನ ಸಂವತ್ಸರದ ಜೇಷ್ಠ ಮಾಸವೇ ಅಧಿಕಮಾಸವೆಂದು ಬರೆದಿರುವರು. ನಮ್ಮ ಕಡಿಯ ಜ್ಯೋತಿಷಿಗಳಿಗೆ ಇದರ ಅರಿವೇ ಇಲ್ಲವೇ?

ಒಳಗಡೆ ಇಲ್ಲಿಯ ಜಯಕರ್ನಾಟಕದಲ್ಲಿ ರಾಣ್ಣವರ ಎಂಬ ಕರೀಕಟ್ಟಿಯ ವಿದ್ಯಾರ್ಥಿಯು ಕೆಲವು ಕವಿತೆಗಳನ್ನು ತನ್ನವೆಂದು ಪ್ರಸಿದ್ಧಿಸಿದ್ದನು. ಒಮ್ಮೆ ೧೨ ವರ್ಷಗಳ ಕೆಳಗೆ ಶ್ರೀ ನರಸಿಂಹಾಚಾರ್ಯ ಸ್ವಣೋಕರ ಕಾವ್ಯಾನಂದ ಇವರು ಒಕ್ಕಲಿಗರೂ ಒಕ್ಕಲತನವೂ ಪತ್ರದಲ್ಲಿ ರಚಿಸಿ, ಮುದ್ರಿಸಿದ್ದರು. ಇದರಿಂದ ಕಾವ್ಯಾನಂದರೂ ಎಡಿಟರರೂ ಆ ವಿದ್ಯಾರ್ಥಿಗೆ ನೋಟೀಸು ಕೊಟ್ಟದ್ದರಿಂದ ಬಾಳಪ್ಪಾ ಗುರುಸಿದ್ಧಪ್ಪಾ ಕಾಡಣ್ಣವರ ಎಂಬ ಕರೀಕಟ್ಟಿ ಗೃಹಸ್ಥರು ನಿನ್ನಿನ ದಿವಸ ಬಂದು ಕಾವ್ಯಾನಂದರ ಕ್ಷಮೆ ಬೇಡಿ ಹೋದರು. ಬಳ್ಳಾರ ಕವಿತ್ವಾದಿ ಗುಣಗಳನ್ನು ಪ್ರಶಂಸಿಸಿದ್ದರು ಎಂದೂ ಕಡಿಯುವದಿಲ್ಲೆಂದಿಲ್ಲ.

ಬೆಳಗಾವ ಜಿಲ್ಲೆಗೆ ಸೇರಿದ ಗೋಕಾವಿ ತಾಲೂಕಿನವನಾದ ಮಹಾರುದ್ರಪ್ಪಾ ಉರ್ಫ ಮುದ್ದಪ್ಪನೆಂಬವನು ತನ್ನ ಮೃತ ಅಣ್ಣನ ಹೆಂಡತಿಯನ್ನು ಕೊಂದ ಬಗ್ಗೆ ಬೆಳಗಾವಿಯ ಸೆಸನ ಕೋರ್ಟಿನಲ್ಲಾದ ಶಿಕ್ಷೆಯು ಹಾಯಕೋರ್ಟಿನಲ್ಲಿ ಕಾಯಮವಾಯಿತು.

ಮುಳಸಿಯ ಸತ್ಯಾಗ್ರಹಿಯು ಆರೋಪಿಯಾದ ದೇವನಿಗೆ ಆರು ವರ್ಷದ ಕಠಿಣ ಶಿಕ್ಷೆಯಾಯಿತು.

ನಾಳಿನ ದಿವಸ ಗದಗಿನಲ್ಲಿ ಕಾಟನ ಸೇಲ ಸೊಸಾಯಿಟಿಯ ವಿದ್ಯಮಾನವಾಗಿ ಹತ್ತಿಯ ಲಿಲಾವು ಇರುತ್ತದೆ.

ಕಮ್ಯಾಂಡರ ಇನ್ನ ಚೀಫರಾದ ಲಾರ್ಡ ರಾವಲಿನ ಸಾಹೇಬನ ಶವದೇಹವನ್ನು ದಿಲ್ಲಿಯಿಂದ ಸ್ಪೇಶಲ ಟ್ರೇನಿನಿಂದ ಮುಂಬಯಿಗೆ ತಂದು, ಅದನ್ನು ಕಾಪಡಲೆ ಒಂದು ಯುದ್ಧದ ಹಡಗಕ್ಕೆ ಸಾಗಿಸಿದರು. ಇಂಗ್ಲಂಡದಲ್ಲಿ ಅತ್ಯಂತ ಮರ್ಯಾದೆಯಿಂದ ದಫನ ಸಮಾರಂಭವಾಗುವದು ಇದು ಪ್ರಿನ್ಸ ಹೇಳಿದಂತಾಗುವದೆಂದು ಹೇಳುತ್ತಾರೆ.

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟಡ್

ಸಾಂಗಳಿಕಾರ ಪೇಟೆ, ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೋಸಾಯಟಿಯು ಆಕ್ಟ ಪ್ರಕಾರ ರೆಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ನ ಮಾದರಿಯಲ್ಲಿ ಶ್ರೇಷ್ಠವಾದ ಸ್ಥಾನ ... ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ... ಮಾಡಲ್ಪಡುವದು. ... ಡಿಪಾಜಿಟ್ ... ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಿಕೊಳ್ಳಬೇಕು.

ಮ್ಯಾನೇಜಿಂಗ ಡಾಯರೆಕ್ಟರ

ಆರ್. ಎಮ್. ಜಾನ್ ... ಹುಬ್ಬಳ್ಳಿ.

ಎಮಿಟೇಶನ್ ... ಪಾಟೀರ್.

ನಮ್ಮಲ್ಲಿ ಸಿಗುವ ಸಾಮಾನುಗಳ ವಿವರ



ಫ್ರುಟ್‌ಗ್ಲಾಸ ಸಿರೋಪುಗಳು ... ಗ್ಲಿಸ ಮತ್ತು ... ಬಾಟಲಗಳು, ... ಕೋಡಾವಾಟರ್ ಮಶಿನುಗಳು ಮತ್ತು ಎಲ್ಲ ... ಎಸೆನ್ಸಗಳು, ... ಸೋಡಾ, ... ಲೆಮನ್ ... ನಂ. ೧ ... ಮೆಂಗೋ, ಆರೇಂಜ, ಫಾಯಿನಾಪಲ್, ... ನಂ. ೧ ... ನಂ. ೧ ... ನಂ ೧, ... ಇವರ ಮಶಿನಿನ ಪಾರ್ಟುಗಳು ನಮ್ಮಲ್ಲಿ ಸಿಗುತ್ತವೆ. ಮತ್ತು ... ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಕೊಡುತ್ತೇವೆ. ... ಸಿಂಗಲ ಕಾಟ್ಲಗಳು ಸೋಡಾ ದರದಿಂದ ವಿಚಾರಕ್ಕೆ ಸಿಗುತ್ತವೆ.

ಅಡ್ರೆಸ್— R. M. John & Sons

Mission Compound HUBLI

ದಿ. ಅಂಕಲಗಿ ಬ್ಯಾಂಕ ಲಿಮಿಟೆಡ್ ಧಾರವಾಡ.

—೦—

೧೯೧೩ ಇಸ್ವಿಯ

ಕಂಪನಿ ಆಕ್ಟ ಪ್ರಕಾರ ರೆಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ... ಖಾತೆ, ರೇವು, ಸೇವ್ಹಿಂಗ್ಸ ಡಿಪಾಜಿಟ, ಸಾಲ, ಪತ್ರಿ, ಹುಂಡಿ, ಮುಂತಾದ ಯಾವತ್ತು ವ್ಯವಹಾರಗಳು ನಡೆಯುವವು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡುವವರಿಂದ ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ ರಿಂದ ೧೦–೩೦. ಸಾಯಂಕಾಲ ೩ ರಿಂದ ೬ ವರೆಗೆ ನಡೆಯುವದು.

K. B. Ankalagi

ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ

—೦—

ಊರಪತ್ರಕ್ಕೆ	
೧೨ ತಿಂಗಳಿಗೆ	೧೨—೦—೦ ರೂ
೬ ,,	೭—೦—೦ ರೂ
೩ ,,	೪—೦—೦ ರೂ
ವಾರಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೇಳುವ ವಿಳಾಸ

ಮ್ಯಾನೇಜರು ವಿಜಯ, ಧಾರವಾಡ

ಜಾಹೀರಾತಿನ ದರಗಳು.

—೦—

ಸಿಂಗಲ ಕಾಲಮಿನ ಹತ್ತು ಪಂಕ್ತಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಂಕ್ತಿಗೆ ಒಂದಾಣೆ ... ಇಂಗ್ಲೀಷ ಪ್ರತಿಯೊಂದು ಪಂಕ್ತಿಗೆ ... ಆಣೆ ... ಕನ್ನಡದಲ್ಲಿ ಹಾಕುವದಿದ್ದರೆ ... ಡಬಲ್‌ಕಾಲಮಿನ ಪಂಕ್ತಿಗಳಿಗೆ ... ಜಾಹೀರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡತಕ್ಕದ್ದು.

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ... ಧಾರವಾಡದಲ್ಲಿರುವ ... ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

—೦—

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ಆರು ... ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ... ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ... ತಿಂಗಳಿಗೆ ... ಬಡ್ಡಿ ... ಆಗುತ್ತಿರುತ್ತದೆ.

ಎ. ಕೆ. ಶೆಟ್ಟಿ,

ಮ್ಯಾನೇಜಿಂಗ ಡಾಯರೆಕ್ಟರ

ವಿಜಯ ಪುಸ್ತಕಾಲಯ

—೦—

ಶ್ರೀ ... ಗೊಂಡಲ	೧೦ ಆಣೆ
ಚಿತ್ರ ...	೫ ,,
... ಶಾಸ್ತ್ರ,	೪ ,,
ದೇಶಬಂಧು ದಾಸರ ಚರಿತ್ರ	೨ ,,
ದೇಶಭಕ್ತರ ಸಂದೇಶಗಳು	೧ ,,

ಈ ಪುಸ್ತಕಗಳನ್ನು ... ಕೊಳ್ಳುವವರಿಗೆ ೧ ರೂಪಾಯಿಗೆ ... ವ್ಹಿ. ಪಿ. ಮತ್ತು ... ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ. ಧಾರವಾಡ

R. N. B. 1443

ನಿತ್ಯ ಪತ್ರ. ಬೆಲೆ ಅರ್ಧ ಆಣೆ.

ಸಂಪಾದಕರು:- ಉಪಾಧ್ಯಾಯ ಬಾಳಾಚಾರ್ಯ ಜೋಶಿ.

ವರ್ಷ ೬) ಧಾರವಾಡ ರವಿವಾರ ತಾರೀಖು ೫ ನೇ ಏಪ್ರಿಲ ೧೯೩೬ (ಸಂಚಿಕೆ ೭೭

ಬೇಸಿಗೆ ಪ್ರಾರಂಭವಾಯಿತು!

ಏನಗಳ ಅವಶ್ಯಕವಾದ ಕಣಿಕೆಯನ್ನು ಮಾಡಿರಿ !!

ಕಿರ್ಲೋಸ್ಕರ ಕಣಿಕೆ ಯಂತ್ರವನ್ನು ಉಪಯೋಗಿಸಿರಿ !!!

ನಮ್ಮ ಕಾರಖಾನೆಯಲ್ಲಿ ಎರಡು ನಮೂನೆಯ ಕಣಿಕೆ ಕಡಿಯುವ ಯಂತ್ರಗಳು ತಯಾರಾಗುತ್ತವೆ. ಒಂದು ಕೈಯಂತ್ರ ಬೆಲೆ ೩೦ ರೂ. ಇನ್ನೊಂದು ಗಾಲೀಯಂತ್ರ ಬೆಲೆ ೮೫ ರೂಪಾಯಿ ಕನ್ನಾ ಕಮತವುಳ್ಳವರು ಕೈ ಯಂತ್ರವನ್ನು, ದೊಡ್ಡ ಕಮತವುಳ್ಳವರು ಗಾಲೀ ಯಂತ್ರವನ್ನು ಉಪಯೋಗಿಸಬಹುದು. ಕಣಿಕೆಯು ೪ ಇಂಚಿನಿಂದ ಒಂದು ಇಂಚಿನ ವರೆಗೆ ಕೊರೆಯಲ್ಪಡುತ್ತದೆ.

ಸವಿಸ್ತರ ಸಂಗತಿಯ ಬಗ್ಗೆ ಕ್ಯಾಟಲಾಗನ್ನು ತರಿಸಿಕೊಳ್ಳಿರಿ

ಕಿರ್ಲೋಸ್ಕರ ಬಂಧು ಲಿಮಿಟೆಡ್ } ಕಿರ್ಲೋಸ್ಕರ ವಾಡಿ- ಜಿಲ್ಲಾ ಸಾತಾರ

ಹುಸು ಶ್ರಿಮವಲ್ಲಿ ಶಾಸ್ತ್ರ ಎರಡೇ ಲಸಿಯಲ್ಲಿ

ತಲೆಶೂಲೆ, ಆರುತಿರಶೂಲೆ, ಮತ್ತು ಕಣಿಯು ಒಂದೇ ಕ್ಷಣದಲ್ಲಿ ನಿಂತುಹೋಗುವ

ಬಂಡಾಗ ನಮ್ಮ

ಮೊಮೆಂಟ ಕ್ಯೂರ

ವನ್ನು ಉಪಯೋಗಿಸಿರಿ ತಕ್ಕೊಳ್ಳಿರಿ. ಮೂರಾಣೆಯ ಟಿಕೀಟು ಕಳಿಸಿದರೆ ಸ್ಯಾಂಪಲ ಮಾದರಿ) ಕಳಿಸುವೆವು.

ನಮ್ಮ ಔಷಧಾಲಯದಲ್ಲಿ ಡಾಕ್ಟರರ ಪ್ರಿಸ್ಕ್ರಿಪ್ಶನ ಪ್ರಕಾರ ಅಕ್ಕಂಟ ಕಾಳಜಿ ಮತ್ತು ದಕ್ಷತೆಯಿಂದ ಔಷಧವನ್ನು ತಯಾರ ಮಾಡಿ ಕೊಡುತ್ತೇವೆ. ದರ ಕಿರಿದು ಸವಿಧ.

ವಿಳಾಸ— ದಿ ಕರ್ನಾಟಕ ಮೆಡಿಕಲ ಸ್ಟೋರ್ಸ, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ ... ಸ್ಟೇಶನರೋಡ ಹುಬ್ಬಳ್ಳಿ

.. ಕಾಶಿವಾಸನ ಬಗ್ಗೆ ಧರ್ಮಿಯು ಶಾಸ್ತ್ರಿ ದೇಶಪಾಂಡೆ ವೇದಶಾಸ್ತ್ರ ಮಂಡಿತ ಲಕ್ಷ್ಮೀಧರಶಾಸ್ತ್ರಿ ಎಂಬವರು [illegible] ಸಂಸ್ಕೃತ ಪಾಠಶಾಲಾ ಕಂಪ್ಲಿ [illegible]

ಬಿಜಾಪೂರ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾ. ಶ್ರೀವೆಂಕಟರಂಗಿ ಉದಾರರೂ ಆಗಿದ್ದ ದಿವಾನ ಬಹಾದ್ದೂರ ಪೆಟ್ಲಾಪ್ಪಾಯರು ಸ್ವರ್ಗಲೋಕವಾಸಿಯಾದರು.

ಉಪಬತ್ತಿಗಳು.

—೦—

ನಮ್ಮಲ್ಲಿ ಎಲ್ಲಾ ವಿಧವಾದ ಊದುಬತ್ತಿಗಳು ನೇರು ೧೯೩೬ ನೇ ಇಸವಿಯ ಅವಾರ್ಡು ಕೊಟ್ಟು [illegible] ದರಬಾಗ ಡಿಸ್ಟಿ, ನಸ್ಯದ, ಧೂಪಗಾರುಕ ಕೈ, ಪತಂಗ, ಇನ್ನೂ ಮುಂತಾದ ಸುಗಂಧ ದ್ರವ್ಯಗಳು ಸಿದ್ಧ ಕ್ಕೆ ನೋಡಿಯುಕ್ತಿ ದೇಶದವರು ನಮಗೆ ಆರ್ಡರ ಕೊಟ್ಟು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಟಿ. ಎಲ್. ಉಪಾಧ್ಯಾಯ ಅಂಡ ಸನ್ಸ.
ಸುಗಂಧದ್ರವ್ಯ ವ್ಯಾಪಾರ.

ಕಿರ್ಲೋಸ್ಕರ ಸನ್ಸ ಕಂಪನಿ ಇವರ

೫, ೪, ೬, ೭, ಇಂಚಿನ ೪ ಪ್ರಕಾರದ

ಪತಸದಾರ ಕುಂಟಿಗಳು.



ಹೆಚ್ಚಿನ ಮಾಹಿತಿ ಬಗ್ಗೆ ಕ್ಯಾಟಲಾಗ ತರಿಸಿಕೊಳ್ಳಿರಿ

ಕಿರ್ಲೋಸ್ಕರ ಸನ್ಸ ಕಂಪನಿ

ಶಿಲ್ಲಿ ಧಾರವಾಡ

ಧನ್ಯವಾದಪೂರ್ವಕ ಕಾಣಿಕೆ

ಗತ ಶಿವರಾತ್ರಿ ಹೊಸ ವರ್ಷಾರಂಭದಾಗಿದ್ದು, ನಡೆಯುವ ತಿಂಗಳುಗಳಲ್ಲಿ ಶಿಕ್ಕ ಮತ್ತು ಪಾರಿಶ್ರಮದ ಜಂಬಾಲರ ತರಿಸಿಕೊಂಡ ಸ್ವಾ. ಪಿ. ಮಠದ ಕಾಶಿ ಲಕ್ಷ್ಮ ಪ್ರಾರಂಭಿಸುವೆವು. [illegible] ಸ್ವಾ. ಪಿ. ಮಠದ ಸ್ವೀಕರಿಸಿ, ಅವರುಗಳಿಗೆ ಈ ಮೂಲಕ ಸಹಕ ಪ್ರೋತ್ಸಾಹಿಸಬೇಕೆಂದು ಬಯಸುತ್ತೇನೆ.

ವ್ಯವಸ್ಥಾಪಕ [illegible]

ಧಾರವಾಡ.

ವಿಜಯ.

ಧಾರವಾಡ ತಾ- ೫-೪-೨೫ ನೇ ಇಸ್ವಿ

ಸ್ವರಾಜ್ಯ ಮತ್ತು ಸ್ವಾತಂತ್ರ್ಯ ಪಕ್ಷದ ನಡುವೆ ಕಲಹ.

—o—

ದಿಲ್ಲಿಯ ಅಸೆಂಬ್ಲಿಯಲ್ಲಿ ಸ್ವರಾಜ್ಯ ಮತ್ತು ಸ್ವಾತಂತ್ರ್ಯ ಪಕ್ಷದ ನಡುವೆ ದೊಡ್ಡ ಜಗಳ ಬಿದ್ದು, ಆ ಜಗಳ ಮುಚ್ಚುವ ಆಶೆ ಇಲ್ಲೆಂದು ಸ್ಪಷ್ಟವಾಗಿ ಕಂಡಿತು. ಸ್ವಾತಂತ್ರ್ಯವೆಂದರೆ ವಿಲಾಯತಿಯಲ್ಲಿ ಹೇಳುವಂಥ ಪ್ರಜಾ ಸತ್ತಾತ್ಮಕವಾದಿ ದಂಥವಲ್ಲ. ತಾವು ವಿಚಾರ ನಿರ್ಬಂಧನೆಗೊಳಪಡದೆ, ತಮಗೆ ಯೋಗ್ಯ ತೋರಿದಂತೆ ಮತ ಕೊಡುವದೇ ತಮ್ಮ ವಿಚಾರವೆಂದು ಇವರ ವಿಕಲ್ಪ ಗಳು. ಈ ಗುಂಪು ಹೋದ ವರ್ಷ ಎಲ್ಲಿಯೋ ಮರೆಯಾಗಿತ್ತು. ಆ ವರ್ಷ ತಪ್ಪು ಮಾಡಿದರು. ಅದೇ ತಪ್ಪನ್ನು ಈಗೇಕೆ ಮಾಡಬೇಕೆಂದು ಈ ಬಣದ ಮುಖಂಡರಾದ ಬ್ಯಾರಿಸ್ಟರ ಜಿನ್ನಾ ಸಾಹೇಬರೆಂದಿದ್ದಾರೆ. ಆದಾಯ ವೆಚ್ಚದ ದೊಡ್ಡ ದೊಡ್ಡ ಬಾಬುಗಳಲ್ಲಿ ಸ್ವತಂತ್ರರು ಸರಕಾರಕ್ಕೆ ಅನುಕೂಲರಾಗಿ ಮತ ಕೊಟ್ಟದ್ದರಿಂದ, ಸ್ವರಾಜ್ಯ ಪಕ್ಷೀಯರ ಉದ್ದೇಶವೆಲ್ಲ ವಿಫಲವಾಯಿತು. ಕೌನ್ಸಿಲಗಳನ್ನು ಮುರಿಯಬೇಕು ಅಥವಾ ಅವನ್ನು ಲೋಕೋಪಯೋಗಿ ಮಾಡಬೇಕು; ಎಂಬೆರಡೂ ಉದ್ದೇಶಗಳು ಸಾಧಿಸದಂತಾಗಿವೆ. ಸ್ವತಂತ್ರರ ವರ್ತನವು ಇತ್ತ ದೇಶಾಭಿಮಾನವಲ್ಲ; ಪ್ರತ್ಯಕ್ಷೋಪಯೋಗವಲ್ಲ; ತ್ರಿಶಂಕುವಿನಂತಾಗಿದೆ. ಸ್ವರಾಜ್ಯ ಪಕ್ಷದ ಮೆಂಬರರಾದ ಶ್ರೀ ಜಮುನಾದಾಸ ಮೆಹ್ತಾ ಇವರಂತೂ ಸಭೆಯ ಮತ್ತು ಜನರ ಉಪದೇಶ ಕೊಟ್ಟಿದ್ದಾರೆ ನಾವು ತಾಸಿನ ಮೇಲೆ ತಿನ್ನುವದಿಲ್ಲ ತಿನ್ನಲಿಕ್ಕೆ ಒರುವ ಅನ್ನಾದಿ ತಿನ್ನಗೊಡುವದಿಲ್ಲ. ಈ ರೀತಿಯಾದ ಇವರ ವರ್ತನವು ಅಸಹ್ಯವಾಗಿರುವದರಿಂದ, ಬರುವ ಚುನಾವಣೆಯಲ್ಲಿ ಸ್ವರಾಜ್ಯ ಮತ್ತು ಸ್ವತಂತ್ರ ಪಕ್ಷೀಯರಲ್ಲಿ ಬಹಳ ಮೇಲಾಟವಾಗುವಂತೆ ತೋರುತ್ತದೆ. ಬ್ಯಾರಿಸ್ಟರ ಜಿನ್ನಾ, ಡಾಕ್ಟರ ಗೌರ, ಪಂಡಿತ ಮಾಲವೀಯಾ, ಇವರು ಮೊದಲಾದವರಿದ್ದ ತಮಗೆ ಉಭಯ ಪಕ್ಷದ ಉದಾರ ಬುದ್ಧಿಯಿಂದ ಇವರ ಚುನಾವಣೆಗೆ ಸ್ವರಾಜ್ಯ ಪಕ್ಷೀಯರು ಅಡ್ಡ ಬರಲಿಲ್ಲ.

ಮುಂದಿನ ಚುನಾವಣೆಯಲ್ಲಿ ಇವರಿಗೆ ಪ್ರತಿಕೂಲವಾಗಿ ಉಮೇದವಾರರನ್ನು ನಿಲ್ಲಿಸುವರೆಂದು ಸಹಜವಾಗುತ್ತದೆ. ಆ ಚುನಾವಣೆಯಲ್ಲಿ ಸ್ವರಾಜ್ಯ ಪಕ್ಷೀಯರೇ ಬಹುವಾಗಿ ಆರಿಸಲ್ಪಡುವರೆಂದು ನಿಶ್ಚಯವಾಕ್ಯವಾದ ಭವಿಷ್ಯ ಹೇಳಬಹುದು.

—

ಗದ್ವಾಲದ ವಿಷಯವಾಗಿ ಶ್ರೀ ಸತ್ಯಮೂರ್ತಿಯವರ ವಿಚಾರಗಳು.

—o—

ಗದ್ವಾಲ ಸಂಸ್ಥಾನವು ಬ್ರಿಟಿಶ ಇಲಾಖೆಗೆ ಸೇರಿದ್ದೆಂದು ಈ ಮೊದಲು ಬರೆದಿದ್ದೇವೆ. ಹಿಂದೂ ಧರ್ಮಶಾಸ್ತ್ರ ಪ್ರಕಾರ ಸಂಸ್ಥಾನದ ದೊರೆತನವನ್ನು ರಾಣಿಯವರಿಗೆ ಒಪ್ಪಿಸಬೇಕೆಂದು ಮದ್ರಾಸ ಇಲಾಖೆಯ ರಾಷ್ಟ್ರೀಯ ಜನರು ಸಭೆ ಮಾಡಿ, ನಿಜಾಮ ಸಾಹೇಬರಿಗೆ ವಿನಂತಿಯ ಅರ್ಜಿಗಳನ್ನು ಕಳಿಸುತ್ತಿದ್ದಾರೆ. ಅದೇ ಪ್ರಕಾರದ ಒಂದು ಸಭೆಯು ಮದ್ರಾಸದಲ್ಲಿ ಶ್ರೀ ಸಿ. ಆರ್. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ನೆರೆದಿತ್ತು. ಆಗ ಶ್ರೀ ಸತ್ಯಮೂರ್ತಿಯವರು ಅಂದದ್ದೇನೆಂದರೆ—

" ಇವರು ಅವಕಾಶವಾದಿಗಳು. ಹಿಂದೀ ಸಭಾಧಿಪತಿ, ಹಿಂದೀ ಗವ್ಹರ್ನರ, ಹಿಂದೀ ರೆಸಿಡೆಂಟ ರಾಗುವರು. ಸಂಸ್ಥಾನಿಕರು ಈಗಿನಂತೆ ಹಿಂದೀ ಲೋಕಮತವನ್ನು ದೂರೀಕರಿಸಿದರೆ, ತಾವೂ ಆ ಲೋಕಮತದಲ್ಲಿ ವ್ಯರ್ಥರಾಗುವರು.

ಸ್ವರಾಜ್ಯ ಸಿಕ್ಕ ಬಳಿಕ ಮೋಸಿನಂತೆ ಸಂಸ್ಥಾನಿಕರು ನಡೆಯಬೇಕಾಗುವದು. ಶ್ರೀಮಂತರೂ, ಬಡವರೂ ಸಮಾನರೆಂದು ಜಗತ್ತಿನಲ್ಲಿ ಹೊಸದಾಗಿ ಹೇಳುವದಿಲ್ಲ. ಅವರು ಒಮ್ಮೆ ಅದರಲ್ಲಿ ಸೇರಿದರೇ ದೇಶ ಯಶಸ್ಸಿಗೆ ತಡವಾಗುವದಿಲ್ಲೆಂದು ವ್ಯಾಜಸಿಯು ಅಂದಿದ್ದಾನೆ. ಇಂಥ ಜನರು ಗೆದ್ದು ಎತ್ತಿದ ಕಾಲ ಹಿಡಿಯುತ್ತ ನಡೆದಿದ್ದಾರೆ. ಈಗ ಯುರೋಪಿಯನ್ನ ರಾಜರನ್ನು ನಷ್ಟಪಡಿಸಿ ಮಾಡಿಕೊಳ್ಳುವದೇ ತಮ್ಮ ಜನ್ಮ ಸಾರ್ಥಕವೆಂದು ತಿಳಕೊಂಡಿದ್ದರೆ- ಸ್ವರಾಜ್ಯದಲ್ಲಿ ಲೋಕಪಕ್ಷದ ಧರೀಣರಾಗಿ ದೇಶ ಹಿತವೇ ತಮ್ಮ ಹಿತವೆಂದು ತಿಳಿದು, ನಿಸ್ವಾರ್ಥ ಬುದ್ಧಿಯಿಂದ ದೇಶ ಸೇವೆ ಮಾಡುವರು. ಇಂಗ್ಲಂಡದ ಲಾರ್ಡರು ಇಂಗ್ಲಂಡದ ಹಿತ ಬಯಸುವಂತೆ, ಇವರು ಹಿಂದುಸ್ಥಾನದ ಹಿತ ಬಯಸುವರು. ಈಗ ಈಗಿನಂತೆ ಇದ್ದರೆ ಇವರು ನಾಶ ಹೊಂದುವರು.

ಲಾರ್ಡ ಬರ್ಕನಹೆಡ ಸಾಹೇಬರು ಜೇಶಬಂಧು ದಾಸರು ಕೆ. ಡ ಸಂದೇಶದ ಅಭಿನಂದನೆ ಮಾಡಿ ತಮ್ಮ ಕರೆದ ಸಹಕಾರ ಮಾಡಿದರಂತೂ ಉತ್ತಮವೆಂದು ಪಾರ್ಲಮೆಂಟ ಸಭೆಯಲ್ಲಿ ಭಾಷಣ ಮಾಡಿದ್ದಾರೆ.

ಮುಂಬಯಿ ಕೌನ್ಸಿಲದ ಮೆಂಬರರ ಗುಣಧರ್ಮ ವಿಚಾರ

—o—

ಮುಂಬಯಿ ಸರಕಾರದವರು ವಿಲಾಯತಿಯ ಪಾರ್ಲಮೆಂಟ ಸಭೆಯ ಪದ್ಧತಿಗನುಸರಿಸಿ, ಕೌನ್ಸಿಲ ಮೆಂಬರರ ಸಂಕ್ಷಿಪ್ತ ಚರಿತ್ರೆಯ ಒಂದು ಪುಸ್ತಕವನ್ನು ಮುದ್ರಿಸಿದ್ದಾರೆ. ಪ್ರತಿಯೊಬ್ಬ ಮೆಂಬರನಿಗೆ ಪತ್ರ ಬರೆದು, ಅವನಿಂದ ದೊರಕಿದ ಮಾಹಿತಿಯಿಂದಲೇ ಇದನ್ನು ಮುದ್ರಿಸಿದ್ದರಿಂದ, ಇದು ಮನೋರಂಜಕವಾಗಿರುತ್ತದೆ. ಒಬ್ಬೊಬ್ಬರ ಸಾರವಾಗಿ ಮತ್ತು ಸ್ವಭಾವ ವೈಚಿತ್ರ್ಯಾನುಸಾರವಾಗಿ ಈ ಮಾಹಿತಿಯು ಇರುತ್ತದೆ.

ಮೆಂಬರರ ವಯಸ್ಸಿನ ಮಟ್ಟಿಗೆ ವಿಚಾರ ಮಾಡಿದರೆ- ಸಾತಾರದ ಪ್ರಾಮಾಣಿಕ ಮೆಂಬರರಾದ ಮಿ. ಶಿಂದೆ ಮತ್ತು ಮುಂಬಯಿಯ ಸ್ವರಾಜ್ಯ ಪಕ್ಷದ ಮೆಂಬರರಾದ ಮಿ. ರಾಕರದಿಯವರು ಕಿರಿಯರಾಗುತ್ತಾರೆ. ಇವರು ೧೮೯೬ ನೆಯ ಇಸವಿಯಲ್ಲಿ ಹುಟ್ಟಿದ್ದಾರೆ. ಅಧ್ಯಕ್ಷರಾದ ಸರ ಇಬ್ರಾಹಿಮ ರಹಿಮತುಲ್ಲಾ ಮತ್ತು ಡಾಕ್ಟರ ದಾದಾಚಾನಜಿಯವರು ವೃದ್ಧ ಕೋಟಿಯಲ್ಲಿ ಬರುತ್ತಾರೆ. ಇವರ ಜನ್ಮವು ೧೮೬೨ ರಲ್ಲಾಗಿದೆ

ಮೆಂಬರರು ತಾವು ಬರಕೊಟ್ಟದ್ದರಲ್ಲಿ ವೃತ್ತಿ ಸಾಯುವನ್ನು ಹೇಳಿಲ್ಲ. ಸಾಧಾರಣವಾಗಿ ನೋಡಲು ೨೭ ವಕೀಲರು, ೨೧ ಜಮೀನದಾರ, ೭ ವ್ಯಾಪಾರಸ್ಥರು, ೮ ಡಾಕ್ಟರ ಮತ್ತು ನಾಲ್ವರು ಒಕ್ಕಲತನದಿಂದ ಜೀವಿಸತಕ್ಕವರಾಗಿದ್ದಾರೆ. ಇಗಿಲ್ಲದಿದ್ದರೂ, ಯಾವಾಗಾದರೂ ವರ್ತಮಾನ ಪತ್ರದ ಸಂಪಾದಕರಾದವರು ಆರು ಜನರಿದ್ದಾರೆ. ಅಹಮದಾಬಾದಿನ ಸ್ವಾಮಿ ನಾರಾಯಣರು ತಮ್ಮ ಉದ್ಯೋಗವು "ದೇಶಸೇವೆ" ಎಂದು ಬರೆಕೊಟ್ಟಿರುತ್ತಾರೆ. ಎಷ್ಟೋ ಪ್ರಸಂಗಗಳಲ್ಲಿ ವಕೀಲರೂ, ವ್ಯಾಪಾರಸ್ಥರೂ ಸ್ವಂತ ಉದ್ಯೋಗದ ದೆಸೆಯಿಂದ ಕೌನ್ಸಿಲ ಬಿಟ್ಟು ಒರುತ್ತಾರೆ ಆದ್ದರಿಂದ ಸ್ವಾಮಿ ನಾರಾಯಣರಂಥ ದೇಶಸೇವಕರು ಕೌನ್ಸಿಲದಲ್ಲಿರುವದೇ ಮೇಲು.

ರಾಜಕೀಯ ಮತದ ಬಗ್ಗೆ ಇವರು ಬರಕೊಟ್ಟದ್ದು ವಿಶೇಷವಾಗಿ ವಿಚಿತ್ರವಾದದ್ದಿರುತ್ತದೆ. ಮಂತ್ರಿಯಾದ ಜಾಧವರಾಯರು ತಮ್ಮ ರಾಜಕೀಯ ಮತವು ಅಬ್ರಾಹ್ಮಣವೆಂದು ಬರಕೊಟ್ಟಿದ್ದಾರೆ. ಇವರಂತೆ ಬ್ರಾಹ್ಮಣೇತರ ಪಕ್ಷದ ಮೆಂಬರರು ತಮ್ಮ ಧ್ಯೇಯವನ್ನು ಬರ ತಾವಾಗಿ ಬರೆದಿರುತ್ತಾರೆ " ಬ್ರಿಟಿಶ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು ಯೋಗ್ಯ ಕಾಲದಲ್ಲಿ ನ್ಯಾಯ ರೀತಿಯಿಂದ ಗಳಿಸುವದು ತಮ್ಮ ಮತವೆಂದು ಮಿ. ಜೋಶಿಯವರು ಅಂದಿದ್ದಾರೆ. "ಹಿಂದುಳಿದ ಜಾತಿಗಳ ಉನ್ನತಿ, ಸ್ವಾಧೀನತೆ ಮತ್ತು

ರಾಜಕೀಯ ಪ್ರಗತಿಯೇ ತಮ್ಮ ಕರ್ತವ್ಯವೆಂದು" ಸ್ವಾತಿಕರ ಮಿ. ಜಿಂದಿಯವರು ಬರೆದಿಟ್ಟಿದ್ದಾರೆ. "ಅಬ್ರಾಹ್ಮಣರ ಹಿತದ ಪಟ್ಟಿಗೆ ಪಕ್ಷಪಾತ; ಮಿಕ್ಕ ವಿಷಯದಲ್ಲಿ ಸ್ವತಂತ್ರ ವಿಚಾರವೆಂದು" ಮಿ. ಸುರ್ವೆಯವರು ಹೇಳುತ್ತಾರೆ. ಖಾನ ಬಹಾದ್ದೂರ ಇಸ್ಮಾಯಿಲ ಜೇವರಕರರು ಸರಕಾರದ ಕೂಡ ಸಹಕಾರವೇ ತಮ್ಮ ಧ್ಯೇಯವೆಂದಿದ್ದಾರೆ.

ಅನೇಕರು ತಮ್ಮ ರಾಜಕೀಯ ಮತಗಳ ಪೂರ್ವೇತಿಹಾಸ ಹೇಳಿದ್ದಾರೆ. ಕಾರವಾರದ ಶ್ರೀ. ಕರ್ಕಿಯವರು ಮೊದಲು ಮವಾಳರಿದ್ದರು ಬಳಿಕ ಕಾಂಗ್ರೆಸವರಾದರು. ಆನಂತರ ರಾಷ್ಟ್ರೀಯರಾಗಿ ಚುನಾವಣೆಯಲ್ಲಿ ಉಮೇದವಾರರಾದರು. ಕೌನ್ಸಿಲದಲ್ಲಿ ಸೇರಿದ ನಂತರ ಸ್ವರಾಜ್ಯ ಪಕ್ಷೀಯರಾದರು. ಬ್ಯಾರಿಸ್ಟರ ಜಂಸ್ಸಿಸ್ಸಾ ಸಾಹೇಬರು ತಮ್ಮನ್ನು ಸ್ವರಾಜ್ಯವಾದಿ, ಕರ್ಮವೀರ, ರಾಷ್ಟ್ರೀಯನೆಂದು ಸಂಬೋಧಿಸಿಕೊಂಡಿದ್ದಾರೆ. ಮಿ. ಪಿ ಬಿ ಜೋಶಿಯವರು ಟಿಳಕ ಸಂಪ್ರದಾಯವೆಂದು ಒಂದೇ ಮಾತಿನಲ್ಲಿ ತಮ್ಮ ಧ್ಯೇಯ ನುಡಿದಿದ್ದಾರೆ. ಪುಣೆಯ ಸರದಾರ ಸಿಯತ್ಸ ಮೆಂಬರರಾದ ಬೇಪ್ಸ ಪದ್ಮಾಕರ ಬಟ್ಟರು ತಾವು ಕಾನ್ಸರ್ವೇಟಿವ್ಹರೆಂದು ಹೇಳಿಕೊಂಡಿದ್ದಾರೆ. ಸಿಂಧದ ಖಾನಬಹಾದ್ದೂರ ಭುತ್ತೋ ಇವರನ್ನು ಪರದೇಸದರೆ- ಜಗತ್ತಿನಲ್ಲೇನು ನಡೆದಿರುತ್ತದೆಂಬುದು ನನಗೆ ಗೊತ್ತಿಲ್ಲ. ಏಕಂದರೆ- ನಾನು ವರ್ತಮಾನಪತ್ರಗಳನ್ನು ಓದುತ್ತೇನೆ. ಹಿಂದುಸ್ಥಾನಕ್ಕೆ ಸ್ವಾಯತ್ತ ಸ್ವರಾಜ್ಯ ದೊರೆಯುವ ಕೆಲಸಕ್ಕೆ ನಾನು ಕೈಲಾದಷ್ಟು ನೆರವಾಗುತ್ತೇನೆ.

ಮೇಲಿನ ಮತ ವೈಚಿತ್ರ್ಯ ಮತ್ತು ವಿಚಾರ ವೈಚಿತ್ರ್ಯದ ಪ್ರಭಾವ ಬುದ್ಧಿಯ ಕರ್ನಾಟಕದ ಜೀತಿ ಹೊಂದರಲ್ಲಿ ಕಾಣ ಬಂದಿರುವದಿಲ್ಲ.

ಹಾಯಕೋರ್ಟಿನ ವಕೀಲಿ ಪರೀಕ್ಷೆಯ ಪರಿಣಾಮ.

—೦—

ಕೆಳಗಿನ ಕನ್ನಡಿಗರು ಹಾಯಕೋರ್ಟಿನ ವಕೀಲಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದಾರೆ.

೧ ಗೋವಿಂದರಾವ ಗೋಪಾಳರಾವ ಬೆಳಗಾವಕರ
೨ ರಂಗರಾವ ವೆಂಕಟರಾವ ದರ್ಬೆ
೩ ಹಣಮಂತ ರಾಘವೇಂದ್ರರಾವ ದೇಸಾಯಿ
೪ ವೆಂಕಟೇಶ ತಮ್ಮಾಜಿ ದೊಡ್ಡಹಾಳ
೫ ಖಂಡೇರಾವ ಕೃಷ್ಣಗಿರಿರಾವ ಹುದ್ದಾರ
೬ ಮಹಾಬಳಪ್ಪಾ ಶಿವಪ್ಪಾ ಘಂಟಿರವಾಡಿ

ಹೇಡಿತನ ಬಿಟ್ಟರೇ ಹಿಂದೂ ಜನರ ಉದ್ಧಾರ

—೦—

ಉತ್ತರ ಹಿಂದುಸ್ಥಾನದಲ್ಲಿ ಹಿಂದೂ ಮುಸಲಮಾನರ ನಡುವೆ ದಂಗೆಯಾದ ಕೂಡಲೆ, ಹಿಂದೂ ಜನರೇ ಹಾನಿಗೆ ಗುರಿಯಾಗುತ್ತಾರೆ. ಏಕಂದರೆ- ಇವರಲ್ಲಿ ಸಂಘಟನದ ವಿಚಾರವಿರುವದಿಲ್ಲ. ಮುಸಲಮಾನರಂತೆ ಇವರು ಸಂಘ ಶಕ್ತಿಯಿಂದ ಸೇರುವದಿಲ್ಲ. ಇದಕ್ಕೆಲ್ಲ ಮುಖ್ಯ ಕಾರಣವು ಇವರಲ್ಲಿರುವ ಹೇಡಿತನ ಮತ್ತು ಭೀರುತನವೇ ಕಾರಣವಾಗುತ್ತದೆಂದು ಪಂಡಿತ ಮಾಲವಿಯಾಯವರು ಮುರಾದಾಬಾದಿನಲ್ಲಿ ಕೂಡಿದ ಹಿಂದೂ ಸಭೆಯಲ್ಲಿ ಉದ್ಗಾರ ತೆಗೆದಿದ್ದಾರೆ. ಮುಸಲಮಾನರಲ್ಲಿ ಒಳಭೇದವಿದ್ದರೂ, ಧರ್ಮವಿಚಾರ ಬಂದ ಕೂಡಲೆ, ಎಲ್ಲರೂ ಒಂದಾಗುತ್ತಾರೆ. ಇದೇ ಕುಶಲತ್ವವನ್ನು ಹಿಂದೂ ಜನರು ಧ್ಯಾನದಲ್ಲಿಟ್ಟುಕೊಂಡು ಸಂಘ ಶಕ್ತಿಯನ್ನುಂಟು ಮಾಡಿಕೊಂಡರೆ- ಅವರು ಜಗತ್ತಿನಲ್ಲಿ ಈಗಿನಂಥ ಹೀನ ಸ್ಥಿತಿಯಲ್ಲಿರಲಾರರು.

ಜ್ವರದಿಂದ ಭಯಂಕರ ಪ್ರಾಣಹಾನಿ.

—೦—

ಹಿಂದುಸ್ಥಾನದಲ್ಲಿ ಪ್ರತಿವರ್ಷ ಒಂದು ಜ್ವರದಿಂದ ಹೇಗೆ ಭಯಂಕರವಾಗಿ ಜನಕ್ಷಯವಾಗುತ್ತದೆಂಬುದು ಕೆಳಗಿನ ಅಂಕಿಗಳಿಂದ ವಿದಿತವಾಗುತ್ತದೆ.

೧೯೧೭	೧೧೧ ಲಕ್ಷ
೧೮	೫೪ ,,
೧೯	೪೯ ,,
೨೦	೪೭ ,,
೨೧	೩೬ ,,
೨೨	೩೭ ,,

ಚೀನದ ಮೊದಲನೇ ವರ್ಷದಲ್ಲಿ ಇನ್ನಷ್ಟು ಇನ್‌ಫ್ಲುಯೆಂಜಾದಿಂದ ಭಯಂಕರ ಮರಣವಾಯಿತು. ಜ್ವರದಲ್ಲಿ ಮಲೇರಿಯಾದಿಂದ ಪ್ರಾಣಹಾನಿಯು ಬಹಳವಾಗಿ ಆಗುತ್ತಿರುವದು. ಇದರ ಹುಳಗಳನ್ನು ಕೊಂದು ಹೊತರ ಜನರು ಒದಗುವ ಪರಿಹಾರ ಉಪಾಯವಿಲ್ಲ. ಆದ್ದರಿಂದಲೇ ಒಂದು ಕೋಟಿ ರೂಪಾಯಿ ಸಾಲ ತೆಗೆದು, ಬಂಗಾಲ ದೇಶದಲ್ಲಿ ಹಬ್ಬಿದ ಪ್ರಕೋಪದ್ರವವನ್ನು ನಿಲ್ಲಿಸಬೇಕೆಂದು ದೇಶಬಂಧು ದಾಸರೆನ್ನುತ್ತಿದ್ದಾರೆ.

ತ್ರಿವಾಂಕೂರದ ದಿವಾನರಾದ ಶ್ರೀ. ರಾಘವಯ್ಯನವರು ದಿವಾನಗಿರಿ ಬಿಡುವರು. ಮಿ. ವ್ಯಾಟಿಂಗ ಸಾಹೇಬರನ್ನು ದಿವಾನಗಿರಿ ನೇಮಿಸುವ ವಿಚಾರ ನಡೆದಿದೆ. ಯುರೋಪಿಯನರನ್ನು ನೇಮಿಸಬಾರದೆಂದು ಅಲ್ಲಿಯ ಜನರು ಸಭೆ ಮಾಡಿ, ನಿಷೇಧವನ್ನು ಪ್ರಕಟ ಮಾಡಿದ್ದಾರೆ.

ತುರುಕ ಖುರ್ದರ ಯುದ್ಧ.

—೦—

ತುರುಕರು ಖುರ್ದರ ಪೂರ್ವದಿಕ್ಕಿನ ಸೈನ್ಯವನ್ನು ಮುರಿದೊಂದು ಬಂದು ಮಾಡಿ, ಅರ್ಘಾನ, ಪಾಲು ಮತ್ತು ಹನಿ ಎಂಬ ಆಯಕಟ್ಟಿನ ಸ್ಥಳಗಳಿಗೆ ಸನಿಯ ಮಾಡಿದ್ದಾರೆ. ಖುರ್ದರು ಒಂದು ತುಮುಲದ ಕಾಳಗವಾಡಿ, ಜಯಾಪಜಯ ತಿಳಕೊಂಡ ಹೊತ್ತು ಬೇರೊಂದು ದಾರಿಯು ಕಾಣಲಿಲ್ಲ. ಇವರೊಕಾದ ರೀತಿಯಿಂದ ಯುದ್ಧ ಮಾಡತಕ್ಕವರಿದ್ದು ಕಾಯುತ್ತ ಕಲಿತು, ಮುಶಿನ ಗನ್ನ ಮತ್ತು ತೋಫುಗಳಿಂದ ಯುದ್ಧ ಮಾಡುವ ಸೈನ್ಯದ ಮುಂದೆ ನಿಲ್ಲಲಾರರು. ಇವರು ದೊಡ್ಡ ಕಾಳಗ ಮಾಡದೆ, ಬೋಯರರಂತೆ ಪ್ರತಿಯುದ್ಧ ಪ್ರಾರಂಭಿಸಿದರೆ- ತುರುಕ ಸೈನ್ಯಕ್ಕೆ ಬುದ್ಧಿನ ಮೇಷ್ಟ್ರಾಗಿ ಬಹಳ ಕಾಲ ದೊಡ್ಡ ಧಕ್ಕೆ ಒಡೆಯುವದು.

ಸ್ಕೂಲಬೋರ್ಡಿನಲ್ಲಿ ಪಾತರದವಳ ಚುನಾವಣೆ

—೦—

ಸ್ಕೂಲಬೋರ್ಡಿನ ಹೊಸ ನಿಯಮ ಪ್ರಕಾರ ಚುನಾವಣೆಯಲ್ಲಿ ಒಬ್ಬ ನಾಯಕಸಾನಿಯು ಅರ್ಜಿ ಕೊಟ್ಟಿದ್ದಳು. ಒಟ್ಟಿಗೆ ೧೩ ಮತ ಬಿದ್ದು, ಆಕೆ ಹೊಂದಲಾದಳು. ತನ್ನಿಂದ ಈ ಕೆಲಸ ಹೇಗೆ ಆಗದೆಂದು ತಿಳಿದುಕೊಂಡು ಆಕೆಯು ಕೂಡಲೇ ರಾಜೀನಾಮೆ ಕೊಟ್ಟಳು!! ಅಂತೂ ಸ್ಕೂಲಬೋರ್ಡಿನ ಸುದೈವ

ವಿವಿಧ ವರ್ತಮಾನಗಳು.

ಮಚ್ಲಿಪಟ್ಟಣದ ಜಿಲ್ಹೆಯಲ್ಲಿ ಎರಡು ಜಿಲ್ಹೆಗಳನ್ನು ಮಾಡಿದರು. ಎರಡನೇ ಜಿಲ್ಹೆಯ ಸ್ಥಳ ಗೊತ್ತಾಗುವ ತನಕ ಮಚ್ಲಿಪಟ್ಟಣದಲ್ಲಿಯೇ ಹೊಸ ಜಿಲ್ಹೆಯ ಕಲೆಕ್ಟರರು ಇದ್ದು ಕೆಲಸ ಮಾಡಬೇಕೆಂದು ಮದ್ರಾಸ ಸರಕಾರದವರು ಠರಾವು ಮಾಡಿದ್ದಾರೆ.

ಲಂಡನದಲ್ಲಿ ಹಿಂದುಸ್ಥಾನದ ಆಡಳಿತೆಯ ವಿಷಯವಾಗಿ ಆಲೋಚನೆ ಕೇಳುವದಕ್ಕಾಗಿ ಒಂದು ಕಮಿಟಿ ಇರುತ್ತದೆ. ಈ ವರ್ಷ ಲಾರ್ಡರಾದ ವಿಂಟರಟನ, ಜೆಮ್ಸಫೋರ್ಡ, ಪೆನ್ನಿಂಗಟನ, ಹ್ಯಾರಿಸ ಅವ್ರಹಿಲ, ಇಸ್ಲಿಂಗಟನ, ಹಾರ್ಡಿಂಜ ಸಾಹೇಬ ಒರೆಲಿ, ಮೆಸ್ಟನ ಮತ್ತು ಅಲಿವ್ಹರರನ್ನು ಮೆಂಬರರಾಗಿ ನೇಮಿಸಿದ್ದಾರೆ.

ದೇಶಬಂಧು ದಾಸರು ನವೀನ ವರ್ಷದ ಚುನಾವಣೆಯಿಂದ ಪುನಃ ಕಲಕತ್ತೆ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ, ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೋಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ ವಹಾರದಲ್ಲಿ ಶ್ರೇಷ್ಠವಾದ ಸ್ಥಾನ

ಹೊಂದಿದೆಯು ಅನಲಕ್ಷದ ಮೇಲುಂಟು. ಚೆಕ್ಕ, ಹುಂಡಿ ಮು ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ವೆಗದಲ್ಲಿ ದುವರು. ಕಾಯಿಮು ಮತ್ತು ಮೆರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಿರಿ

ಮ್ಯಾನೇಜರ ಬಿ ಜಠಾರ,
ಧಾರವಾಡ

ಆರ್ ಎಮ್. ಜ್ಹಾನ ಎಂ ...

ಏಜಂಟ್ಸ ಫೋರ ಕಾರಬೋನಿಕ್ ಆಸಿಡ್ಡ ಗ್ಯಾಸ, ...

ನಮ್ಮಲ್ಲಿ ಸಿಗುವ ಸಾಮಾನುಗಳ ವಿವರ



ಫುಲಗ್ಯಾಸ ಸಿಲಿಂಡರಗಳು ಇಂಗ್ಲೀಷ ಮತ್ತು ಅಮೇರಿಕನ ಕಾರ್ಕ್ಸ, ಎಮ್. ಬಿ ಸೋಡಾ ವಾಟರ ಬಾಟಲಿಗಳು, ೫೦೦ ನೇ ಸಾಬ ಲೀನ ಪೆಪ್ಪಿ ೧ ... ಸೋಡಾವಾಟರ್ ಮಶಿನುಗಳು ಮತ್ತು ಎಪ್ಪ ... ಎಸೆನ್ಸಗಳು, ಅಮೇರಿಕನ್ ಆಯಿಸ್ಕ್ರೀಮ ಸೋಡಾ, ಬನಾನಾ, ... ಲೆಮನ್ ಜುಯಿಸ್ ಸೋಡಾ ನಂ. ೧ ಮೇಂಗೋ, ಆರೇಂಜ, ಫಾಯಿನಾಪಲ್, ... ಟಾನಿಕ್, ರಾಸ್‌ಬರಿ ನಂ. ೧ ಕೋಲಾ ನಂ ೧ ಸ್ಟೋನ್ ಜಿಂಜರ ಬೀರ ನಂ ೧, ... ಇತರ ಮಶಿನರಿ ಪಾರ್ಟಗಳು ನಮ್ಮಲ್ಲಿ ಸಿಗುತ್ತವೆ. ಮತ್ತು ಸಿದ್ಧ ... ಲ್ಸಗಳು ಸಿಗುತ್ತವೆ. ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಕೊಡುತ್ತೇವೆ. ನಮ್ಮಲ್ಲಿ ... ಸಿಂಗಲ ಕಾಟ್ಸಗಳು ಸೋವಿ ದರದಿಂದ ಮಾರಲಿಕ್ಕೆ ಸಿಗುತ್ತವೆ.

ನಾವು ಆರ್ಡರ ಬೇಗ ಕಳಿಸಿರಿ

ಅಡ್ರೆಸ್— R M. John ...
Mission Compoun ... PLI

ಬೇಸಿಗೆ ಪ್ರಾರಂಭವಾಯಿತು!

ದನಗಳ ಆಹಾರವಾದ ಕಣಿಕೆಯನ್ನು ಕಾಯಿದಿರಿ"

ಕಿರ್ಲೋಸ್ಕರ ಕಣಿಕೆ ಯಂತ್ರವನ್ನು ಉಪಯೋಗಿಸಿರಿ!!!

ನಮ್ಮ ಕಾರ್ಖಾನೆಯಲ್ಲಿ ಎರಡು ನಮೂನೆಯ ಕಣಿಕೆ ಕತ್ತರಿಯುವ ಯಂತ್ರಗಳು ತಯಾರಾಗುತ್ತವೆ. ಒಂದು ಕೈಯಂತ್ರ ಬೆಲೆ ೩೦ರೂ. ಇನ್ನೊಂದು ಗಾಲೀಯಂತ್ರ ಬೆಲೆ ೮೫ ರೂಪಾಯಿ ಸಣ್ಣಾ ಕಮತದವರು ಕೈ ಯಂತ್ರವನ್ನೂ, ದೊಡ್ಡ ಕಮತವುಳ್ಳವರು ಗಾಲೀ ಯಂತ್ರವನ್ನೂ ಉಪಯೋಗಿಸಬಹುದು. ಕಣಿಕೆಯು ೪. ಇಂಚುಗಳಿಂದ ಒಂದು ಇಂಚಿನ ವರೆಗೆ ಕೊರೆಯಲ್ಪಡುತ್ತದೆ.

ಸವಿಸ್ತರ ಸಂಗತಿಯು ಬಗ್ಗೆ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ } ಕಿರ್ಲೋಸ್ಕರವಾಡಿ
ಜಿಲ್ಹಾ ಸಾತಾರಾ.

ದಿ. ಅಂಕಲಗಿ ಬ್ಯಾಂಕ ಲಿಮಿಟೆಡ್

ಧಾರವಾಡ.

—೦—

೧೯೧೩ ಇಸ್ವಿಯು

ಕಂಪನಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ಚಾ ಲೂ ಖಾತೆ, ಠೇವು, ಸೇವಿಂಗ್ಸ ಡಿಪಾಜಿಟ, ಸಾ ಲ, ಹುಂಡಿ, ಮುಂತಾದ ಯಾವತ್ತು ವ್ಯವ ಹಾರಗಳು ನಡಿಯುವವು ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡುವವರಿಂದ ಸಮಕ್ಷಮ ತಿಳಕೊಳ್ಳ ಬಹುದು.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ ರಿಂದ ೧೦ ಗಂಟೆಯವರೆಗೆ ಮತ್ತು ... ವರೆಗೆ ನಡೆ ಯುವದು

E.B. Ankalagi
ಮ್ಯಾನೇಜಿಂಗ ಡಾಯರೆಕ್ಟರ

ವಿಜಯದ ವರ್ಗಣೀ ದರ

—೦—

ವಿಶ್ವಪತ್ರಿಕೆ
೧೨ ತಿಂಗಳಿಗೆ ೧೨—೮—೦ ರೂ
೬ ,, ೭—೦—೦ ರೂ
೩ ,, ४—೦—೦ ರೂ
ವಾರಪತ್ರಿಕೆ ೧ ವರ್ಷಕ್ಕೆ ೩—೧೨—೦ ರೂ
ವಿಶೇಷ ಮಾಹಿತಿ ಕೇಳಿಗಿನ ವಿಳಾಸಕ್ಕೆ
ಮ್ಯಾನೇಜರ ವಿಜಯ, ಧಾರವಾಡ

ನೋಟೀಸಿನ ದರಗಳು.

—೦—

ಸಿಂಗಲ ಕಾಲಮಿನ ಹತ್ತು ಪಳಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಐದು ಆಣೆ ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಒಳಗಳಿಗೆ ಇಮ್ಮಡಿಚಾರ್ಜ ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನಿತ್ಯ ಪತ್ರ **ವಿಜಯ** ಬೆಲೆ ಅರ್ಧ ಆಣೆ

ಸಂಪಾದಕ:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೬) ಧಾರವಾಡ ಸೋಮವಾರ ತಾರೀಖು ೬ ನೇ ಏಪ್ರಿಲ ೧೯೩೬ (ಸಂಚಿಕೆ ೭೫

ಜಾಹೀರ ನೋಟೀಸು.

ಗದಗ ತಾಲೂಕ ನಾಗಾವಿ ವ ಕಳಸಾಪೂರ ಗ್ರಾಮದ ರೈತಜನರು ಕೊಡುವ ಜಾಹೀರ ನೋಟೀಸು ಏನಂದರೆ—

ಗದಗ ತಾಲೂಕ ನಾಗಾವಿ ವ ಕಳಸಾಪೂರ ಗ್ರಾಮದಲ್ಲಿ ರಿಕಾರ್ಡ ಆಫ ರಾಯಿಟ್ಸ ಚಾಲನಿ ನಡೆದಿದ್ದು ಸದರ ಗ್ರಾಮಗಳ ರೈತರು ನಿರಂತರ ಕುಳಗಳು ಇದ್ದು ತಮ್ಮ ಹೆಸರು ಆ ಪ್ರಕಾರ ದಾಖಲ ಮಾಡಬೇಕೆಂದು ಕೆಲಸ ನಡಿಸಿರುತ್ತಾರೆ. ಸದರ ಗ್ರಾಮಗಳ ಇನಾಮದಾರರು ಅನ್ಯಾಯದಿಂದಲೂ ತಮ್ಮ ಜೋರಾವರಿಯಿಂದಲೂ ರೈತರ ಹಕ್ಕು ಮುಳಗಿಸುವ ಇರಾದೆಯಿಂದ ಪುರಾತನ ಕಾಲದಿಂದ ನಡೆಯುತ್ತ ಬಂದಂಥ ಮತ್ತು ನಿರಂತರ ಲಾವಣಿ ಶರ್ತಿನಿಂದ ಹಿಡಿದಂಥ ಜಮೀನಗಳನ್ನು ಕಬಜಾ ತಪ್ಪಿಸುವ ಪ್ರಯತ್ನದಲ್ಲಿ ಇದ್ದಾರೆ ಮತ್ತು ಸಮೀಪದ ಹಳ್ಳಿಗಳ ರೈತರಿಗೆ ಫಲಕ ಸಮಜೂತ ಕೊಟ್ಟು ಆಗಲಿ ಅಥವಾ ಹೆಚ್ಚಿನ ಸವಲತ ಕೊಟ್ಟು ಆಗಲಿ ದಬಾಯಿಯಿಂದ ಜಮೀನಗಳನ್ನು ಲಾವಣಿ ಮಾಡಿ ಒಬ್ಬರೋಬ್ಬರಿಯಿಂದ ರೈತರ ಕಬಜಾ ತಪ್ಪಿಸಬೇಕೆಂದು ಸದರೀಯವರು ಖಟಪಟ ನಡಿಸಿರುತ್ತಾರೆ. ಆದ್ದರಿಂದ ಅವರ ಕಡಿಂದ ಅವುಗಳನ್ನು ಯಾರೂ ಲಾವಣಿ ಕೋರ ವಗೈರೆ ಹಿಡಿಯಬಾರದು. ಅವರಿಗೆ ಜಮೀನ ಬಿಡಿಸುವ ಹಕ್ಕು ಇಲ್ಲ. ಅವರ ಚಿತಾವಣಿಯಿಂದ ಯಾರಾದರೂ ಜಮೀನ ಹಿಡಿದರೆ ಅಥವಾ ದಾಂಡಗಾಯಿ ಮಾಡಲಿಕ್ಕೆ ಬಂದರೆ ಅವರನ್ನು ಜಮೀನಿಯಿಂದ ಹೊರಗೆ ಹಾಕಿ ಅವರ ಮೇಲೆ ಕಾಯ್ದೆ ಪ್ರಕಾರ ಫೌಜದಾರಿಯಲ್ಲಿ ಕೆಲಸ ನಡಿಸುವದಲ್ಲದೆ ಒಂದೀತು ಅದೇ ಪ್ರಕಾರ ಗ್ರಾಮದ ಇನಾಮದಾರರು ಸಹ ರೈತರ ಮೇಲೆ ಸ್ವತಃ ಆಗಲಿ ಆಳುಗಳ ಮುಖಾಂತರ ದಾಂಡಗಾಯಿ ನಡಿಸಿದಲ್ಲಿ ಅವರನ್ನು ಸಹ ಜಮೀನಿಯಿಂದ ಹೊರಗೆ ಹಾಕಿ ಫೌಜದಾರಿ ಆಗಲಿ ದಿವಾಣಿಯಲ್ಲಿ ಇಲಾಜ ಮಾಡಲಾದೀತು. -ತಿಳಿಯುವದು. ತಾ॥ ೫-೪-೧೯೩೬ ನೇ ಇಸ್ವಿ

ಸಹಿ ಬಸನಗೌಡಾ ಹನಮಂತಗೌಡಾ ಕಳ್ಸಾಪೂರ ದ॥ ಖು॥

ಸಹಿ ಈರಯ್ಯಾ ತಂದಿ ಚನಬಸಯ್ಯಾ ಹಿರೇಮಠದ ಕಳಸಾಪೂರ ದ॥ ಖು॥

ಈ ಎಡಗೈ ಹೆಬ್ಬಟ್ಟಿನ ಗುರ್ತ ಶಿದ್ರಾಮಯ್ಯಾ ಬಿನ್ನ ವೀರಯ್ಯಾ ಯಂಕಟಾಪೂರ ಸಾ॥ ಕಳ್ಸಾಪೂರ ತಾಲೂಕ ಗದಗ ಇವರದು ಅದೆ.

ಈ ಎಡಗೈ ಹೆಬ್ಬಟ್ಟಿನ ಗುರ್ತ ಅಂಕಲೆಪ್ಪಾ ತಂದಿ ಚನ್ನಪ್ಪಾ ರಾಮನಗೌಡ್ರ ಇವರದು ಅದೆ.

ಬಸಪ್ಪಾ ವೀರಪ್ಪ ಹಪ್ಪಳದ ಸಾ॥ ನಾಗಾವಿ

ನಿಂಗನಗೌಡಾ ಬಸನಗೌಡಾ ಪಾಟೀಲ ನಾಗಾವಿ

ಭೀಮಪ್ಪಾ ದೊಡ್ಡಮನಿ ನಾಗಾವಿ

ರಾಮಪ್ಪಾ ಕೆಂಚಣ್ಣನವರ ನಾಗಾವಿ

ಮರಿಯಪ್ಪಾ ಸಿದ್ಲಿಂಗಪ್ಪಾ ಶಿದ್ದೇಕೊಪ್ಪ

ದಿ. ಧಾರವಾಡ ಬ್ಯಾಂಕ ಲಿಮಿಟೆಡ್

—೦—

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವು ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯ ಪುಸ್ತಕಾಲಯ

—೦—

೨೦ ನೇ ಶತಮಾನದ ಗೊಂದಲ	೧೦ ಆಣೆ
ವಿಚಿತ್ರ ಸಂಪದ	೫ "
ಲೋ. ಟಿಳಕರ ಚರಿತ್ರ	೪ "
ದೇಶಬಂಧು ದಾಸರ ಚರಿತ್ರ	೩ "
ದೇಶಭಕ್ತರ ಸಂದೇಶಗಳು	೧ "

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧॥ ರೂಪಾಯಿಗೆ ಕೊಡುವೆವು. ವ್ಹಿ. ಪಿ. ಮತ್ತು ಟಪಾಲ ಖರ್ಚ ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ
ಧಾರವಾಡ

ಚಂದಾದಾರರಿಗೆ ಸೂಚನೆ.

೧೯೩೬ನೆಯ ಹೊಸ ವರ್ಷಾರಂಭವಾಗಿದ್ದು, ನಡೆಯುವ ತಿಂಗಳದಬಗ್ಗೆ ನಿತ್ಯ ಮತ್ತು ವಾರಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸಲಿಕ್ಕೆ ಪ್ರಾರಂಭಿಸುವೆವು. ಚಂದಾದಾರರು ವ್ಹಿ. ಪಿ. ಯನ್ನು ಸ್ವೀಕರಿಸಿ, ವಿಜಯವನ್ನು ಈ ಮೊದಲಿನಂತೆ ಪ್ರೋತ್ಸಾಹಿಸುವರೆಂದು ಆಶಿಸುತ್ತೇವೆ.

ವ್ಯವಸ್ಥಾಪಕ ವಿಜಯ
ಧಾರವಾಡ.

ವಿಜಯ.

ಧಾರವಾಡ ತಾ- ೬-೪-೨೫ ನೇ ಇಸ್ವಿ

ಸಿವ್ಹಿಲ ಸರ್ವಂಟರ ಕಳಗಟ್ಟಿ ಮಾಡುವ ದೀರ್ಘ ಪ್ರಯತ್ನ.

—೦—

ಲೀ ಕಮಿಶನದ ರಿಪೋರ್ಟಿನ ಮೇರೆಗೆ ಇಂಗ್ಲಂಡದಿಂದ ಹಿಂದುಸ್ಥಾನಕ್ಕೆ ದೊರೆಯಾಗಿ ಬರತಕ್ಕಂಥ ಸ್ವರ್ಗದಲ್ಲಿ ಹುಟ್ಟುವ ಸಿವ್ಹಿಲ ಸರ್ವಂಟರ ಕೆಲಸದ ಕಳಗಟ್ಟಿ ಮಾಡುವ ಬಿಲ್ಲಿನ ಎರಡನೆಯ ವಾಚನವು ಪಾರ್ಲಮೆಂಟ ಸಭೆಯಲ್ಲಾಯಿತು. ಸ್ಟೇಟ ಸೆಕ್ರೆಟರಿಯವರಾದ ಲಾರ್ಡ ಬರ್ಕನಹೆಡ್ಡ ಸಾಹೇಬರು [illegible] ಯದಲ್ಲಿ ಮಾಡಿದ ಭಾಷಣದಿಂದ ಹಿಂದು [illegible] ಅಪೇಕ್ಷಿಸುವಂತೆ ಸ್ವರಾಜ್ಯಾಧಿಕಾರವು [illegible] ದೊರೆಯುವ ಆಶೆ ಮಾತ್ರ ಕಂಡುಬರುವದಿ[illegible] ಲೀ ಕಮಿಶನದವರು ೧೫ ವರ್ಷಗಳಲ್ಲಿ ಮು[illegible] ಮತ್ತು ೨೫ ವರ್ಷಗಳಲ್ಲಿ ಪೋಲೀಸ ಸರ್ವಂ[illegible] ಅರ್ಧ ಹಿಂದೀ ಅರ್ಧ ಇಂಗ್ಲಿಷರಾಗಬೇಕೆಂದು [illegible]ಭಾರಸ್ಸು ಮಾಡಿದ್ದಾರಷ್ಟೇ; ಸರಕಾರದವರು ಪ್ರತಿವರ್ಷ ಕೆಲವು ಪ್ರಮಾಣದಿಂದ ಗೌರಕಾಯಸ್ಥರ ಸಂಖ್ಯೆಯನ್ನು ಕಡಿಮೆ ಮಾಡುತ್ತಾ ಏತದ್ದೇಶೀಯರ ಸಂಖ್ಯೆಯನ್ನು ಹೆಚ್ಚಿಸುತ್ತಾ ಹೋಗುವರು. ಹೋದ ವರ್ಷ ಹಿಂದೀ ಸಿವ್ಹಿಲ ಸರ್ವಂಟರ ಸಂಖ್ಯೆಯು ನೂರಕ್ಕೆ [illegible]ರಂತಿತ್ತು. ಇನ್ನುಳಿದ ೩೩ ರನ್ನು ೧೫ ವರ್ಷಗಳಲ್ಲಿ ಅಂದರೆ ಪ್ರತಿವರ್ಷ ಎರಡರಂತೆ ಇಳಿಸುತ್ತಾ ಮತ್ತು ಅದರ ವಿರುದ್ಧವಾಗಿ ಎರಡರಂತೆ ಏರಿಸುತ್ತಾ ಹೋಗುವರು.

ಹಿಂದೀ ಜನರು ಸಿವ್ಹಿಲ ಸರ್ವಂಟರಾಗುವದಕ್ಕೆ ಆತುರಗೊಂಡಿರುವರು. ಇವರ ಸಂಖ್ಯೆಯು ಬೇಕಾದಷ್ಟು ಬೆಳೆಯುವದು. ಆದರೆ ಯುರೋಪಿಯನ್ನರ ಪರಿಸ್ಥಿತಿಯು ಮಾತ್ರ ಭಿನ್ನವಾಗಿರುವದು. ಯುದ್ಧದಲ್ಲಿ ಅನೇಕ ತರುಣರು ಸತ್ತು ಹೋದರು. ಘಾಯ ಹೊಂದಿ, ಅಂಗ ಹೀನರಾದರು. ಅನೇಕರು ದೂರ ದೇಶಗಳಿಗೆ ಹೋಗಲು ಬೇಸರ ಪಡುತ್ತಾರೆ. ಇದರಿಂದ ಇಂಗ್ಲಿಷ ಸರಕಾರಕ್ಕೆ ಹಿಂದುಸ್ಥಾನಕ್ಕೆ ಉತ್ತಮ ಮೇಧಾವಿಗಳು, ಕುಲಶೀಲರು ಮತ್ತು ಉತ್ತಮ ಚಾರಿತ್ರ್ಯವುಳ್ಳವರು ಹೇಗೆ ಸಿಗುವರೆಂಬ ದೊಡ್ಡ ಚಿಂತೆಯುತ್ಪನ್ನವಾಗಿದೆ. ಇಂಗ್ಲಿಷ ಯುವಕರು ಸಿವ್ಹಿಲ ಸರ್ವಂಟರಾಗುವಂತೆ ಅವರ [illegible]ವೋಲಿಸಲೋಸುಗ ಸಾಹೇಬರು ಒಂದು ಭಾಷಣ ಮಾಡತಕ್ಕವರಿದ್ದಾರೆಂದು ಹಿಂದಿನ ವಾರದಲ್ಲಿ ಸುದ್ದಿ ಬಂತು. ಆ ಭಾಷಣವನ್ನು ಇವರು ಪಾರ್ಲಮೆಂಟ ಸಭೆಯಲ್ಲಿ ಇದೇ ವೇಳೆಯಲ್ಲಿ ಮಾಡಿದ್ದಾರೆ. ಹಿಂದುಸ್ಥಾನದಲ್ಲಿ ಕೆಲಸದ ಸುರಕ್ಷಿತತೆಯೇ ಇರದ್ದರಿಂದ, ತರುಣರು ಸಿವ್ಹಿಲ ಸರ್ವಂಟರಾಗಲಿಚ್ಛಿಸುವದಿಲ್ಲೆಂದು ಲಾರ್ಡ ಚೆಮ್ಸಫೋರ್ಡ ಸಾಹೇಬರು ಹೇಳುತ್ತಾರೆ. ಈ ಮಾತು ನಿಜವಿರುತ್ತದೆಂದು ಕಂಡು ಬಂದಿದೆ. ಏಕೆಂದರೆ ಅನೇಕ ಜನ ಯುರೋಪಿಯನ್ನರು ಹಿಂದೀ ಜನರ ಕೈಕೆಳಗೆ ಕೆಲಸ ಮಾಡಲಿಕ್ಕೆ ಮೂಗು ಮುರಿದು ರಾಜೀನಾಮೆ ಕೊಟ್ಟಿದ್ದಾರೆ. ಸಿವ್ಹಿಲ ಸರ್ವಂಟರ ಮನಸ್ಸಿನಲ್ಲಿ ತಾವು ದೊರೆ; ಹಿಂದೀ ಜನರು ದಾಸರೆಂಬ ಭಾವವಿತ್ತು. ಈ ಭಾವವಿರುವ ತನಕ ಅವರು ಈ ದೇಶದಲ್ಲಿ ರಾಜ್ಯಕರ್ತರಾಗಿ ಬರಲು ಮೋಲಾಡಿದರು. ಕಾಲ ಪರಿಸ್ಥಿತಿ ಬದಲಾಗಿ ದೊರೆಯು ದಾಸನ ದಾಸನಾಗಬೇಕಾಗಲು ಅವರು ಇತ್ತ ಕಡೆಗೆ ಹಣಕಿ ಹಾಕಲಿಕ್ಕೆ ಅಪೇಕ್ಷಿಸದಿರುವದು ಸ್ವಾಭಿಮಾನದ ದ್ಯೋತಕವಾಗಿದೆ. ಇಂಥ ಸ್ವಾಭಿಮಾನವಿದ್ದರೇ ಆಯಾ ದೇಶದ ಗೌರವ ಹೆಚ್ಚುವದು.

ನಿಮ್ಮ ಸಂಬಳ ಹೆಚ್ಚಿಸುತ್ತೇವೆ. ದಾರೀ ವೆಚ್ಚ ಕೊಡುತ್ತೇವೆ. ಮಿಕ್ಕ ಸೌಕರ್ಯಗಳನ್ನು ಒದಗಿಸಿ ಕೊಡುತ್ತೇವೆ. ಮತ್ತು ನಿಮ್ಮ ಕೆಲಸದ ತಳವು ಪೆನಶನ ತಕ್ಕೊಳ್ಳುವ ತನಕ ಗಟ್ಟಿಮುಟ್ಟು ಮಾಡುತ್ತೇವೆ. ನಿಮ್ಮ ಅಪೀಲುಗಳ ಜವಾಬದಾರಿಯನ್ನು ನಿಮ್ಮ ಜಾತಿಯವರಾದ ನಾವೇ ನೋಡುತ್ತೇವೆ. ಹಿಂದೀ ಜನರ ಕೈಯ್ಯಲ್ಲಿ ಕೊಡುವದಿಲ್ಲೆಂದು ಲಾರ್ಡ ಬರ್ಕನಹೆಡ್ಡ ಸಾಹೇಬರು ಈ ಬಿಲ್ಲಿನಲ್ಲಿ ನಮ್ಮ ತರುಣರಿಗೆ ವಚನ ಕೊಟ್ಟಿದ್ದಾರೆ. ಈ ತರುಣರನ್ನು ಪ್ರೋತ್ಸಾಹಿಸುವದಕ್ಕಾಗಿ ಲಾರ್ಡ ಮೆಸ್ಟನ ಮೊದಲಾದವರು ಇಂಗ್ಲಂಡದ ಯುನಿವ್ಹರ್ಸಿಟಿಗಳಲ್ಲಿ ಸಂಚಾರ ಮಾಡಿದ್ದಷ್ಟೇ ಅಲ್ಲದೆ, ಸ್ವತಃ ಸಾಹೇಬರೂ ಹೋಗಿ, ಪ್ರಿನ್ಸಿಪಾಲ ಮತ್ತು ಪ್ರೊಫೇಸರರ ಮುಖಾಂತರವಾಗಿ ವಿದ್ಯಾರ್ಥಿಗಳನ್ನು ಈ ದೇಶಕ್ಕೆ ಬರಲು ಹುರಿದುಂಬಿಸಿದ್ದಾರೆ. ಈ ಪ್ರಕಾರದ ಪ್ರೋತ್ಸಾಹದಿಂದ ಹಿಂದುಸ್ಥಾನಕ್ಕೆ ಒಂದು ಕೋಟೆಯ ಭೂದಂಡ ಕೊಡುವದೆಂಬ ಮಾತು ಸಾಹೇಬರ ವಿಚಾರದಿಂದ ಇದರು ನಜರಿನಲ್ಲಿಯೇ ಎಂಬಂತಾಗಿರುತ್ತದೆ.

ಇಂಗ್ಲಿಷ ಸಿವ್ಹಿಲ ಸರ್ವಂಟರು ಹಿಂದುಸ್ಥಾನದ ಕೌನ್ಸಿಲ ಮತ್ತು ಅಸೆಂಬ್ಲಿಯ ಕೆಲಸಗಾರರಾಗದೆ, ವಿಲಾಯತಿಯ ಸ್ಟೇಟ ಸೆಕ್ರೆಟರಿಯವರಿಗೆ ಜವಾಬದಾರರೆಂದು ನಿರ್ಬಂಧನೆ ಪಡಿಸಿ, ಅವರಲ್ಲಿ ಸ್ವೇಚ್ಛೆಯನ್ನುಂಟು ಮಾಡುವದು ದ್ವಿದಳ ದೊರೆತನಕ್ಕಿಂತ ಅನಿಷ್ಟವಾಗುವದೆಂಬ ಮಾತು ನಿರ್ವಿವಾದವು. ಕೆಲವೊಂದು ವಿಷಯಗಳಲ್ಲಿ ತಜ್ಞರೆಂಬ ಇಂಗ್ಲಿಷ ಜನರ ಸಹಾಯವನ್ನು ಮಾತ್ರ ತಕ್ಕೊಳ್ಳಬೇಕಲ್ಲದೆ, ಪ್ರಾಂತಾಧಿಕಾರಿಯಾದಂಥ ಅಸಿಸ್ಟಂಟ ಕಲೆಕ್ಟರರ ಕೆಲಸಗಳನ್ನು ಮಾಡಲಿಕ್ಕೆ ಯುರೋಪಿಯನ್ನರ ಅವಶ್ಯಕತೆ ಇಲ್ಲೆಂದು ರಾಷ್ಟ್ರೀಯ ಪಕ್ಷದವರೆನ್ನುತ್ತಾರೆ. ಈ ವಾದ ಮುಗಿಯುವ ತನಕ ಲಾರ್ಡ ಬರ್ಕನಹೆಡ್ಡ ಸಾಹೇಬರು ದೇಶಬಂಧು ದಾಸರಿಗೆ ನಮ್ಮ ಕೂಡ ಸಹಕಾರ ಮಾಡಿರೆಂದು ಹೇಳುವದು ಅಶಕ್ಯವೇ ಸರಿ.

(ಸಾತ್ವಿಕ ದೇವೀ ಪೂಜಾ ಪದ್ಧತಿ)

ದೇವೀ ಜಾತ್ರೆ.

—೦—

ಅನೇಕ ಸ್ಥಳಗಳಲ್ಲಿ ಗ್ರಾಮ ದೇವತೆಗಳ ಹಬ್ಬವು ಪ್ರಾರಂಭವಾಗಿ ಆ ಹಬ್ಬಗಳ ನೆವದಿಂದ ಸಹಸ್ರಾರು ಪ್ರಾಣಿಗಳು ಇಹಲೋಕದ ಯಾತ್ರೆಯನ್ನೇ ಮುಗಿಸಿ ಬಿಡುವ ವಿಷಯವು ಸರ್ವರಿಗೂ ತಿಳಿದದ್ದೇ ಇದೆ. ಈ ಧರ್ಮ ಕೃತ್ಯವನ್ನು ನಿಲ್ಲಿಸಲು ದಾವಣಗೆರೆ ತಾಲೂಕ ಮಳಲ್‌ಕೆರೆ ಗ್ರಾಮದವರು ಅನುಸರಿಸಿರುವ ವಿಧಾನವನ್ನು ನೋಡಿ ಇತರ ಗ್ರಾಮಸ್ಥರಾದರೂ ಹಿಂಸಾಯುಕ್ತ ದೇವೀ ಜಾತ್ರೆಯಿಂದಾಗುವ ಪಾಪ ಕೃತ್ಯವನ್ನು ನಿಲ್ಲಿಸಿ ಆಮೂಲಕ ಪುಣ್ಯಭಾಗಿಗಳಾಗಲೆಂಬ ಉದ್ದೇಶದಿಂದ ಈ ವಿಷಯವನ್ನು ಪ್ರಕಟಿಸಿದುದಾಗಿದೆ. ಆದುದರಿಂದ ಇದು ವರೆಗೂ ಹಿಂಸಾಯುಕ್ತವಾದ ದೇವೀಜಾತ್ರೆಯನ್ನು ಮಾಡುತ್ತಿದ್ದ ಮಹಾಶಯರೇ! ಈಗಲಾದರೂ ಚೆನ್ನಾಗಿ ಆಲೋಚಿಸಿ ಹಿಂಸಾಯುಕ್ತವಾದ ದೇವೀಜಾತ್ರೆಯನ್ನು ಮಳಲ್‌ಕೆರೆ ಗ್ರಾಮದವರಂತೆ ತಾವಾದರೂ ನಿಲ್ಲಿಸದೇ ಇರಲಾರಿರೆಂದು ನಂಬಿದೆ. ಮಳಲ್‌ಕೆರೆ ಗ್ರಾಮದಲ್ಲಿ ಪ್ರತಿ ಸಾರೆಯೂ ದೇವೀ ಜಾತ್ರೆಯಾಗುತ್ತಾ ಇದ್ದು ಆ ಕಾಲದಲ್ಲಿ ನಿರಪರಾಧಿಗಳಾದ ಅನೇಕ ಮೂಕ ಪ್ರಾಣಿಗಳನ್ನು ಕೊಲ್ಲುತ್ತಿದ್ದರು. ಹಾಯ್! ಹಾಯ್! ಇದೆಂತಹ ದುಷ್ಟ ಪದ್ಧತಿಯು. ತಮ್ಮ ಕಷ್ಟಗಳನ್ನು ಲಕ್ಷಿಸದೇ ಹಗಲಿರುಳು ಮಳೆ, ಬಿಸಿಲು ಗಾಳಿಯೆನ್ನದೆ ನಮ್ಮ ಸುಖಕ್ಕಾಗಿ ದುಡಿದ ಪ್ರಾಣಿಗಳಿಗೆ ಈ ಗತಿಯೇ! ಪ್ರತಿ ಪ್ರಾಣಿಯು ಸಹ ಉಪಕಾರ ಮಾಡಿದವರಿಗೆ ಪ್ರತ್ಯುಪಕಾರ ಮಾಡುವವು. ಆದರೆ ಶ್ರೇಷ್ಠವಾದ ಮನುಷ್ಯ ಜನ್ಮದಲ್ಲಿದ್ದು ಉಪಕಾರಕ್ಕೆ ಪ್ರತ್ಯುಪಕಾರವನ್ನು ಮಾಡುವದು ಕರ್ತವ್ಯವಾಗಿದ್ದರೂ ಅಪಕಾರವನ್ನಾದರೂ ಮಾಡದಿರಬಾರದೇ! ಈ ವಿಷಯವನ್ನೆಲ್ಲಾ ಯೋಚಿಸಿ ಮ|| ರಾ|| ದಾವಣಗೆರೆ ಮಳಲ್‌ಕೆರೆ ಸಕ್ರಪ್ಪನವರು ಮತ್ತು ನಮ್ಮ ಸಂಘದ ಮ|| ರಾ|| ಸಿದ್ಧಲಿಂಗಪ್ಪ ಬೆಲ್ಲದ ಇವರು ಮಳಲ್‌ಕೆರೆ ಗ್ರಾಮದವರಿಗೆ ಚೆನ್ನಾಗಿ ಬೋಧಿಸಲು ಆ ಗ್ರಾಮದ ಸರ್ವರೂ ಹಿಂಸಾ ಮಾಡತಕ್ಕದ್ದು ಅಲ್ಲ

ಕ್ಷಸ ಕೃತ್ಯವೇ ಹೊರತು ಮಾನುಷಕೃತ್ಯವಲ್ಲವೆಂದು ತಿಳಿದು ಇನ್ನು ಮುಂದೆ ತಮ್ಮ ಗ್ರಾಮದಲ್ಲಿ ಯಾರೂ ಯಾವ ಕಾಲದಲ್ಲಿಯೂ ಹಿಂಸೆಯನ್ನು ಮಾಡುವದಿಲ್ಲವೆಂದೂ ಮತ್ತು ಮಾಂಸವನ್ನು ಸಹ ತಿನ್ನುವುದಿಲ್ಲವೆಂದೂ ಪ್ರತಿಜ್ಞೆ ಮಾಡಿರುವರು. ಅಲ್ಲದೆ ತಮ್ಮ ಗ್ರಾಮದಲ್ಲಿ ನಡೆದ ಈ ಸಾರೆಯ ದೇವೀ ಜಾತ್ರೆಯಲ್ಲಿ ಪಟ್ಟದ ಕೋಣವನ್ನು ಸಹ ಕಡಿಯದೆ ಪಂಚಾಮೃತದಿಂದ ಸ್ನಾನವನ್ನು ಮಾಡಿ ಹಲ್ಲಿ ಆ ದಿವಸ ದೇವರ ಭಜನೆ ಮುಂತಾದ ಸತ್ಕಾಲಕ್ಷೇಪದಿಂದ ಕಾಲವನ್ನು ಕಳೆದರು. ದೇವಿಗೆ ಹರಕೆಯನ್ನು ಕಟ್ಟಿಕೊಂಡಿದ್ದರೂ ಹಣ್ಣು-ಕಾಯಿ-ಕರ್ಪೂರ ಮುಂತಾದವುಗಳಿಂದ ದೇವಿಯನ್ನು ಪೂಜಿಸಿ ದೇವಿಯ ಭಂಡಾರಕ್ಕೆ ಹಣವನ್ನು ಹಾಕಿದರು. ಮಳಲ್ಕೆರೆಯ ಜನಗಳು ಈ ರೀತಿಯಾಗಿ ಇತರ ಗ್ರಾಮಸ್ಥರಿಗೆಲ್ಲಾ ಮೇಲ್ಪಂಕ್ತಿಯಾಗಿರುವದು ಸಂತೋಷದ ಸಂಗತಿಯೇ ಸರಿ. ಇದನ್ನು ನೋಡಿಯಾದರೂ ಇತರ ಗ್ರಾಮದವರು ತಮ್ಮ ಗ್ರಾಮದಲ್ಲಿಯೂ ಹಿಂಸಾಯುಕ್ತ ಜಾತ್ರೆಯು ನಡೆಯುತ್ತಿದ್ದರೆ ಮಳಲ್ಕೆರೆ ಗ್ರಾಮದವರಂತೆ ತಾವಾದರೂ ನಿಲ್ಲಿಸಲು ಪ್ರಯತ್ನಿಸಬೇಕಾಗಿ ಕೋರುವ

ಸೂಚನೆ— ಮೇಲ್ಕಂಡ ಗ್ರಾಮದವರಂತೆ ದಾವಣಗೆರೆ ತಾಲೂಕ ಕಾಕಗಟ್ಟೆ ಗ್ರಾಮದವರು ಸಹಾ ಹಿಂಸಾಯುಕ್ತ ದೇವೀ ಜಾತ್ರೆಯನ್ನು ನಿಲ್ಲಿಸಿ ಕೇವಲ ಸಾತ್ವಿಕ ರೀತಿಯಿಂದಲೇ ಮಾಡಿದರು.

ಪ್ರಕಾಶಕರು

ಪ್ರಾಣಿದಯಾ ಜ್ಞಾನಪ್ರಚಾರಕ ಸಂಘ

ದಾವಣಗೆರೆ

ಅಧ್ಯಕ್ಷರು.

ಶಿವನಪ್ಪನವರ ದೇವೇಂದ್ರಪ್ಪನವರು

ನೂಲೇ ಬೇಕು; ನೂಲಿನ ಬದಲು ದುಡ್ಡು ಬೇಡ.

—೦—

ಕಾಂಗ್ರೆಸದ ಮೆಂಬರನಾಗತಕ್ಕವನು ಪ್ರತಿ ತಿಂಗಳಿಗೆ ಎರಡು ಸಾವಿರ ಯಾರ್ಡ ನೂಲು ಕೊಡಬೇಕು, ಅಥವಾ ಅಷ್ಟು ನೂಲು ದೊರೆಕಿಸಿಕೊಡಬೇಕು; ಇದೂ ಇಲ್ಲದಿದ್ದರೆ ತಿಂಗಳಿಗೆ ಆರಾಣೆ ವರ್ಗಣೀ ಕೊಡಬೇಕೆಂಬದಾಗಿ ತಿಳಿಯಲ್ಪಟ್ಟದೆ. ಸ್ವರಾಜ್ಯ ಪಕ್ಷೀಯರು ತಾವು ನೂಲದಿದ್ದರೂ, ಅನ್ಯರು ನೂತದ್ದನ್ನು ಕೊಂಡು ಕಾಂಗ್ರೆಸಕ್ಕೆ ಕೊಟ್ಟು ಅದರ ಮೆಂಬರರಾಗುವರು ಅಥವಾ ಆರಾಣೆ ರೊಕ್ಕ ಕೊಡುವರು. ಆದರೆ ಈ ತರದ ಕೃತಿ ಅಥವಾ ಬುದ್ಧಿಯು ಮಹಾತ್ಮರಿಗೆ ಸಮ್ಮತವಿಲ್ಲ. ನೂಲು ಕೊಡಬೇಕಲ್ಲದೆ, ರೊಕ್ಕ ಕೊಡತಕ್ಕ ಕಟ್ಟಳೆ ಇರುವದಿಲ್ಲೆಂದು ಮಹಾತ್ಮರು ಈ ವಾರದಲ್ಲಿ ತಮ್ಮ ಅಭಿಪ್ರಾಯ ಪ್ರಸಿದ್ಧ ಮಾಡಿದ್ದಾರೆ. ಮಹಾತ್ಮರು ಕಾಂಗ್ರೆಸದ ಅಧ್ಯಕ್ಷರು ಆದರೂ ಈ ಪ್ರಕಾರ ಹೇಳುವದು ಸ್ವ-ವಿಚಾರವಾಗಿದೆ. ಮುಖ್ಯ ನಿರ್ಣಯವನ್ನು ವರ್ಕಿಂಗ ಕಮಿಟಿಯು ಮಾಡತಕ್ಕದ್ದೆಂದಿದ್ದಾರೆ. ಕಾಂಗ್ರೆಸದ ಠರಾವಿನ ಪ್ರಕಾರ ನೋಡಿದರೆ ಸ್ವತಃ ಮತ್ತು ನೂತು ತಿಂಗಳಿಗೆ ಎರಡು ಸಾವಿರ ಯಾರ್ಡಿನಂತೆ ನೂಲು ಕೊಡತಕ್ಕವರ ಪ್ರಮಾಣವು ಪ್ರತಿಯೊಂದು ಪ್ರಾಂತದಲ್ಲಿಯೂ ಬಹಳ ಕಡಿಮೆಯಾಗಿದೆ. ಇದೊಂದರಿಂದಲೇ ಕಾಂಗ್ರೆಸದ ಮೆಂಬರರ ಸಂಖ್ಯೆಯು ಬೆಳೆಯಲಾರದು. ಆರಾಣೆ ವರ್ಗಣೀ ಕೊಟ್ಟು ಮೆಂಬರರನ್ನು ಮಾಡಿಕೊಳ್ಳುವದು ಉತ್ತಮವಿಲ್ಲದಿದ್ದರೂ, ಮಧ್ಯಮ ನಿಯಮವಿರುವದು ಅವಶ್ಯಕವು

ಇಂಗ್ಲಿಷ ಹುಡುಗೆಯರಿಗೆ ಅಡಿಗೆ ಕಲಿಸಬೇಕು.

—೧—

ಇಂಗ್ಲಿಷ ಹುಡುಗೆಯರು ಓದುಗಲಿತು, ವಿದ್ಯಾವಂತೆಯರಾಗುತ್ತಾರೆ. ಕಚೇರಿ, ಕಂಪನಿಗಳಲ್ಲಿ ಕೆಲಸ ಮಾಡುತ್ತಾರೆ. ಇವರಿಗೆ ಓದುಗಲಿಸಿದಂತೆ ಮನೆವಾರ್ತೆಯ ಕೆಲಸಗಳನ್ನು ಕಲಿಸುವದಿಲ್ಲ. ಅಡಿಗೆಯಂತೂ ಬರುವದೇ ಇಲ್ಲ. ಮನೆಯಲ್ಲಿ ಅಡಿಗೆಯವರನ್ನಿಟ್ಟುಕೊಂಡರೆ ಅಡಿಗೆಯವರ ಸೊಕ್ಕಿನ ಮುಂದೆ ನಮೋ ಎನ್ನಬೇಕಾಗುತ್ತದೆ. ಇವರು ಮನೆಯ ಹಳಸಿ ಅನ್ನದಿಂದ ಚಿಕ್ಕ ಮಕ್ಕಳಿಗೆ ಅಜೀರ್ಣವಾಗಿ, ಅವಕ್ಕೆ ಅನೇಕ ಅಜೀರ್ಣರೋಗಗಳಾಗುತ್ತವೆ. ಮನೆಯಲ್ಲಿ ಪ್ರಸಂಗದ ವಿಷಯಕವಾಗಿರುವ ಸುಖವೇ ಇಲ್ಲದಾಗುತ್ತದೆ. ಆದುದರಿಂದ ಇವರಿಗೆ ಶಾಲೆಯಲ್ಲಿ ಓದುಗಲಿಸುವದರ ಕೂಡ ಅಡಿಗೆಯನ್ನು ಕಲಿಸಬೇಕು; ಮನೆಯನ್ನು ವ್ಯವಸ್ಥೆಯಿಂದಿಡುವಂತೆ ದಿನಾಲು ಅವರಿಗೆ ಕೆಲಸ ಹಚ್ಚಬೇಕೆಂದು ಒಬ್ಬ ಸಾಹೇಬರು ಮುಂಬಯಿ ಟಾಯಿಮ್ಸ ಪತ್ರದಲ್ಲಿ ಬರೆದಿದ್ದಾರೆ. ನಮ್ಮ ದೇಶದ ಹುಡುಗೆಯರೂ ಇಂಗ್ಲಿಷ ಕಲಿತು, ಪಂಡಿತೆಯರಾಗಬೇಕೆನ್ನುತ್ತಾರೆ. ಪಂಡಿತೆಯರಾಗುವಾಗ ಇಂಗ್ಲಿಷ ಗೃಹಸ್ಥಿತಿಯಂತೆ ಆಗದ್ಯಾ ಪಂಡಿತೆಯರಾಗದಂತೆ ಮುಂದಾಗಿ ಜಾಗೃತರಾಗಬೇಕೆಂದು ಈ ಸಾಹೇಬರು ಪರ್ಯಾಯದಿಂದ ತಿಳಿಸುತ್ತಾರೆಂದು ಹೇಳುವಂತಿದೆ.

ಸ್ಕೂಲಬೋರ್ಡಿನ ಹೊಸ ನಿಯಮ ಪ್ರಕಾರ ಶಾಲೆಗಳ ಮೇಲಿರುವ ಮ್ಯುನಿಸಿಪಾಲಿಟಿಯ ಅಧಿಕಾರವನ್ನು ಸರಕಾರವು ತಪ್ಪಿಸಬೇಕೆಂದಿದೆ. ಸರಕಾರದ ಆಟ ನಡೆಯದೆ ಮೊದಲಿನಂತೆ ಶಾಲೆಗಳು ತಮ್ಮ ವಶದಲ್ಲಿರುವಂತೆ ಪ್ರಯತ್ನಿಸಬೇಕೆಂದು ಅಹಮದಾಬಾದ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದ ಶ್ರೀ. ವಲ್ಲಭಭಾಯಿ ಪಟೇಲರು ಮ್ಯುನಿಸಿಪಾಲಿಟಿಗಳಿಗೆ ಎಚ್ಚರಿಕೆ ಕೊಟ್ಟಿದ್ದಾರೆ.

[illegible] ವರ್ತಮಾನಗಳು

—೦—

ಬೇಸಿಗೆಯು ಬೆಂಕಿ ಹತ್ತುವ ಕಾಲ, ಎಲ್ಲಿಯಾದರೂ ದಿನಾಲು ಅಗ್ನಿಕೋಪದ ವರ್ತಮಾನ ಬರುತ್ತದೆ. ಮಂಡಾಲೆಯಲ್ಲಿ ಬೆಂಕಿ ಹತ್ತಿ, ಆರವತ್ತು ಸಾವಿರದ ಹಾನಿಯಾಯಿತು. ಕಲಕತ್ತೆಯಲ್ಲಿ ಮದನ ಕಂಪನಿಯ ಸಿನೇಮಾದ ಚಿತ್ರಪಟಗಳ ಭಾಗಕ್ಕೆ ಬೆಂಕಿ ಹತ್ತಿ ಲಕ್ಷಾವಧಿಯ ಹಾನಿಯಾಯಿತು.

ಮದ್ರಾಸದ ಕಾಯದೆ ಕೌನ್ಸಿಲದ ಅಧ್ಯಕ್ಷರು ಒಂದೇಸಮನೆ ಐದು ವರ್ಷ ಕೆಲಸ ಮಾಡಿದರೆ ಅವರಿಗೆ ಪೆನಶನ ಕೊಡಬೇಕೆಂದು ಮೆಂಬರರು ವಿಚಾರ ಮಾಡುತ್ತಲಿದ್ದಾರೆ.

ಕಾಬೂಲದಲ್ಲಿ ಬೇರೆ ಬೇರೆ ಮಾದರಿಯ ಹನ್ನೆರಡು ವಿಮಾನಗಳುಂಟು. ಇವನ್ನು ನಡಿಸುವ ಕಾಮದಾರರು ವಿಶೇಷವಾಗಿ ರಶಿಯನ್ನರೇ ಆಗಿರುತ್ತಾರೆ.

ಇಜಿಪ್ತದಲ್ಲಿ ಪ್ರಸಿದ್ಧರಾದ ಲಾರ್ಡ ಅಲೆನಬಿಯವರು ತಮಗೆ ದೊರೆತ [illegible] ರಕ್ಕೆ ತಿಳಿಸಿದ್ದು, ಇವರ ಸ್ಥಳದಲ್ಲಿ ಮುಂಬಯಿಯ ಗವರ್ನರರಾಗಿದ್ದ ಸರ ಜಾರ್ಜ ಲಾಯಿಡ ಸಾಹೇಬರು ನೇಮಿಸಲ್ಪಡುವರೆಂದು ಒಂದು ಪತ್ರ ಹೇಳುತ್ತದೆ.

ಮುಂಬಯಿಯಲ್ಲಿ ಇನ್ಫ್ಲುಂಜಾ ರೋಗ ಬಂದಾಯಿತು. ಒಟ್ಟು ಐದು ಸಾವಿರ [illegible] ಎರಡೇ ದಿವಸಗಳಲ್ಲಿ ಉದ್ಯೋಗ ಹೀನರಾದರು.

ಧಾರವಾಡ

ಇದೇ ತಿಂಗಳ ೨೬-೨೭ ನೇ ತಾರೀಖುಗಳಲ್ಲಿ ಹಾವೇರಿಯಲ್ಲಿ ಸಹಕಾರ ಸಂಘಗಳ ಪರಿಷತ್ತು ಕೂಡತಕ್ಕದ್ದಿದ್ದು, ದಿವಾನ ಜಾಧವರಾಯರು ಅಧ್ಯಕ್ಷರಾಗಿ ಬರುವರೆಂದು ವರ್ತಮಾನವುಂಟು.

ಶನಿವಾರದಿಂದ ಮುಲಕೀ ಪರೀಕ್ಷೆಗೆ ಪ್ರಾರಂಭವಾಗಿದೆ. ಈ ಸಾರೆ ವಯಸ್ಸಿನ ನಿರ್ಬಂಧವಿಲ್ಲ. ೬೫೦ ವಿದ್ಯಾರ್ಥಿಗಳು ಪರೀಕ್ಷೆಗೆ ಕೂತಿದ್ದಾರೆ.

ನಿನ್ನೆ ಸಾಯಂಕಾಲದಲ್ಲಿ ೧೫ ಮಿನಿಟುಗಳ ತನಕ ಸುವೃಷ್ಟಿಯಾಯಿತು. [illegible] ಸಣ್ಣಾಗಿ ಸುರಿಯಿತು.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ

ಬ್ಯಾಂಕ ಲಿಮಿಟೆಡ.

ಮಂಗಳವಾರ ಪೇಟೆ, ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯು ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ

ಬಂಡವಲು ಆರುಲಕ್ಷದ ಮೇಲು ಟು. ಚೆಕ್ಕ, ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ನಡೆಯ್ಸುವದು ಕಾಯಮ ಮತ್ತು ಚಾಲತಿ ತರದ ಡಿಪಾಝಿಟಗಳಿಗೆ ಚನ್ನಾಗಿ ಬಡ್ಡಿ ಕೊಡಲಾಗುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,

ಮ್ಯಾನೇಜಿಂಗ ಡಾಯರೆಕ್ಟರ

ಆರ್. ಎಮ್. ಜ್ಯಾನ್ ಎಂಡ ಸನ್ಸ ಹುಬ್ಬಳ್ಳಿ.

ಎಜಂಟ್ಸ ಫೋರ ಕಾರಬೋನಿಕ್ ಎಸಿಡ್ಡ ಗಾಸ, ಮ್ಯಾನುಫ್ಯಾಕ್ಚರರ್ ಆಫ್ ಏರೇಟೆಡ ವಾಟರ್ಸ.

ತಾವು ಆರ್ಡರ ಬೇಗ ಕಳಿಸಿರಿ

ನಮ್ಮಲ್ಲಿ ಸಿಗುವ ಸಾಮಾನುಗಳ ವಿವರ

ಫುರ್‌ಗ್ಯಾಸ ಸಿಲಿಂಡರಗಳು ಇಂಗ್ಲೀಷ ಮತ್ತು ಜರ್ಮನ ಪೇಟೆಂಟ ಕಾರ್ಡ್ಸ, ಎಮ. ಟಿ ಸೋಡಾ ವಾಟರ ಬಾಟ್ಲಗಳು, ೫೦ ನಂ. ಸಾಟೀನ ಪೆಟ್ಟಿ ೧ ಪೌಂಡಿನವು. ಸೋಡಾವಾಟರ್ ಮಶಿನುಗಳು ಮತ್ತು ಎಲ್ಲ ತರದ ಕಲರಿನ ಬಾಟಲಿಗಳ ಎಸನ್ಸಗಳು, ಅಮೇರಿಕನ್ ಆಯಿಸ್ಕ್ರೀಮ ಸೋಡಾ, ಬನಾನಾ, ಕೋಲಾಚಂಪೇನ್, ಲಿಮನ್ ನಂ. ೧ ಲಿಮನ್ ಜುಯಿಸ್ ಸೋಡಾ ನಂ. ೧ ಮೇಂಗೋ, ಅರೇಂಜ, ಪಾಯಿನಾಪಲ್, ಪಿಕ್ಕಮಿಲಕ, ಕ್ವಿನಿನ್ ಟಾನಿಕ್, ರಾಜಬೆರಿ ನಂ. ೧ ರೋಜ ನಂ ೧ ಸ್ಟೋನ್ ಜಿಂಜರ್ ಬೀರ ನಂ ೧, ರಬ್ಬರ್ ರಿಂಗ್ಸ, ಜೆಲ್ ಇತರ ಮಶಿನರಿ ಪಾರ್ಟಗಳು ನಮ್ಮಲ್ಲಿ ಸಿಗುತ್ತವೆ. ಮತ್ತು ಶುದ್ಧ ನೀಲಗಿರಿ ಎಣ್ಣೆಯು ಎಲ್ಲ ತರದ ಬಾಟ್ಲಿಗಳು ಸಿಗುತ್ತವ. ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಕೊಡುತ್ತೇವೆ. ನಮ್ಮಲ್ಲಿ ಕಬ್ಬಿಣದ ಮಿಲಿಟರಿ ಸಿಂಗಲ ಕಾಟ್ಸಗಳು ಸೋವಿ ದರದಿಂದ ಮಾರಲಿಕ್ಕೆ ಸಿಗುತ್ತವೆ.



ಆಪ್ರೆಸ್— R. M. John &Sons.

Mission Compound HUBLI

ವಿಜಯ ಪುಸ್ತಕಾಲಯ

—o—

೫೬ ನೇ ಶತಮಾನದ ಗೊಂದಲ	೧೦ ಆಣೆ
ಪವಿತ್ರ ಸಂಶಯ	೫ "
ಲೋ. ಟಿಳಕರ ಚರಿತ್ರ	೪ "
ದೇಶಬಂಧು ದಾಸರ ಚರಿತ್ರ	೨ "
ದೇಶಭಕ್ತರ ಸಂದೇಶಗಳು	೧ "

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧। ರೂಪಾಯಿಗೆ ಕೊಡುವೆವು. ವ್ಹಿ. ಪಿ. ಮತ್ತು ಟಪಾಲ ಖರ್ಚು ಬೇರೆ.

—ಮ್ಯಾನೇಜರ ವಿಜಯ ಪುಸ್ತಕಾಲಯ

ಧಾರವಾಡ

ನೋಟೀಸು

ಮಲಕಪ್ಪಾ ಪೂಜಾರ ಸಾ. ತಿರಮಲಾಪೂರ ತಾ. ಹಾವೇರಿ ಇವನಿಗೆ—

ಕೆಳಗೆ ಸಹಿ ಮಾಡಿದ ಗುತಾರ್ ಮಾಡುವ ಬಸವ್ವಾ ಕೋಮ ಮಲಕಪ್ಪಾ ಪೂಜಾರ ಈಕೆಯು ಈ ನೋಟೀಸಿನಿಂದ ನಿನಗೆ ತಿಳಿಸುವದೇನಂದರೆ—

ನೀನು ನನ್ನ ಮದಿವೆಯ ಗಂಡನಾಗಬೇಕು. ಮದಿವೆಯಾಗುವಾಗ ನಾನು ತೀರ ಚಿಕ್ಕವಳಿದ್ದೆನು. ನಾನು ಪ್ರಬುದ್ಧಳಾದ ಬಳಿಕ ನೀನು ಅಂತೂ ಇಂತೂ ಒಂದು ವರ್ಷ ನನ್ನ ಕೂಡ ಬಾಳವೆ ಮಾಡಿದಿ ಆದರೆ ನೀನು ದುರ್ವ್ಯಸನಿ ಮನುಷ್ಯನಿದ್ದದ್ದರಿಂದ ನನ್ನ ಕೂಡ ಸುರಳಿತ ಬಾಳವೆ ಮಾಡುವದನ್ನು ಬಿಟ್ಟು, ಹೊಡೆದು ಬಡೆದು ಮಾಡಿ, ತರತರದಿಂದ ಪೀಡಿಸಲಿಕ್ಕೆ ಹತ್ತಿದಿ ಅದರೂ ನಾನು ಎಲ್ಲ ದುಃಖವನ್ನು ನುಂಗಿಕೊಂಡೆ ಕೊನೆಗೆ ನೀನು ನನ್ನ ಮೈಮೇಲಿನ ನನ್ನ ಸ್ತ್ರೀಧನವು ಆದಂಥ ದಾಗೀನೆಗಳನ್ನು ಮತ್ತು ತವರ ಮನೆಯಿಂದ ತಂದ ನೂರು ನೂರು ದಾಗೀನೆಗಳನ್ನು ಕಸಕೊಂಡು, ಉಟ್ಟ ಸೀರೆಯ ಮೇಲೆ ಹೊರಗೆ ಹಾಕಿದಿ. ಆ ಮಾತಿಗೆ ನಾಲ್ಕು ವರ್ಷವಾಗುತ್ತಾ ಬಂತು. ಆಗಿನಿಂದ ನಮ್ಮ ತವರ ಮತ್ತು ನಿನ್ನ ಕಡೆಯ ಸಂಬಂಧಿಕರು ನಿನಗೆ ಬುದ್ಧಿ ಹೇಳುತ್ತಾ ಬಂದರೂ, ನೀನು ನಿನ್ನ ಕೆಟ್ಟ ಚಾಳಿಯನ್ನು ಬಿಟ್ಟು, ನನ್ನನ್ನು ಕರಕೊಂಡು ಹೋಗಿ, ಬಾಳವೆ ಮಾಡಲಿಲ್ಲ. ನೀನು ಇಂದು ಕರಕೊಂಡು ಹೋದೀ, ನಾಳೆ ಕರಕೊಂಡು ಹೋದೀ ಎಂದು ದಾರೀ ನೋಡ ನೋಡುತ್ತಾ ನಾನು ತವರ ಮನೆಯಲ್ಲಿ ದಿನಗಳನ್ನು ಕಳೆಯುತ್ತಾ ಬಂದೆ. ಮತ್ತೆ ನಾಲ್ಕು ವರ್ಷ ಗತಿಸಿ ಹೋದರೂ ನೀನು ಕರಕೊಂಡು ಹೋಗದ್ದರಿಂದ ಬೇರೆ ದಾರಿ ಕಾಣದೆ ತಗಾದಿ ಮಾಡಬೇಕಾಯಿತು. ಆದ್ದರಿಂದ ನಿರುಪಾಯವಾಗಿ ಈ ನೋಟೀಸು ಕೊಡುವ ಪ್ರಸಂಗ ಉಂಟಾಯಿತು. ನಾಲ್ಕು ವರ್ಷದ ಅರು ನೂರು ರೂಪಾಯಿಯಾಗಿದೆ. ನೀನು ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ಸದರ ಸಾರಿಕವು ಬಡ್ಡಿ ಸಹಿತ ತೀರಿಸಿ, ನನ್ನ ಸ್ತ್ರೀಧನದ ಮತ್ತು ತವರ ಮನೆಯ ಯಾವತ್ತು ದಾಗೀನೆ ಮತ್ತು ಸಾಮಾನುಗಳನ್ನು ನನಗೆ ಮರತ ಕೊಟ್ಟು, ಹಳೇ ರೀತಿಯಿಂದ ಪ್ರಸಂಗ ಮಾಡಬೇಕೆಂದು ನಂಬಿದ ಬಾಳವೆಗೆ ಕೊಟ್ಟು, ನನ್ನನ್ನು ಕರಕೊಂಡು ಹೋಗಬೇಕು. ಇಲ್ಲವಾದರೆ— ನೀನು ನನ್ನ ಕೂಡ ಪ್ರಪಂಚ ಮಾಡಲಿಕ್ಕೆ ಇಚ್ಛಿಸುವದಿಲ್ಲೆಂದು ತಿಳಿದು ಎರಡನೇ ಲಗ್ನವನ್ನು ಮಾಡಿಕೊಳ್ಳುವೆನು. ಅನಂತರ ನಿನ್ನ ಹಕ್ಕು ನನ್ನ ಮೇಲೆ ಮತ್ತು ನನ್ನ ಎರಡನೇ ಗಂಡನ ಮೇಲೆ ಬಿಲಕೂಲ ನಡೆಯ ಅಂದರು. ಇದೇ ನೋಟೀಸಿನಿಂದ ತಿಳಿಯತಕ್ಕದ್ದು ಮತ್ತು ನಿನ್ನ ಕಡೆಯಿಂದ ಈ ತನಕ ಸಾಲದ ದಸೆಯಿಂದ ನಿನ್ನ ಮೇಲೆ ಕಾಯದೆ ಪ್ರಕಾರ ಇಲಾಜ ಮಾಡಿ, ಅದನ್ನು ಸಾಹುಕಾರರಿಗೆ ಕೊಡುವೆನು. ಅವರು ನನ್ನ ಮೇಲೆ ದಾವೆ ಮಾಡಿದರೆ— ಅದನ್ನು ತೀರಿಸುವ ಬೋಜಾ ನಿನ್ನ ತಲೆಯ ಮೇಲಿರುತ್ತದೆ. ಈ ನೋಟೀಸಿನ ಖರ್ಚು ಸಹ ನಿನ್ನ ಮೇಲಿರುತ್ತದೆ. ಅಂತಾ ಕೊಟ್ಟ ನೋಟೀಸು ತಾರೀಖು ೭ ಎಪ್ರಿಲ ೧೯೩೫ ನೇ ಇಸವಿ

ಈ ಎಡಗೈ ಹೆಬ್ಬೆಟ್ಟಿನ ಗುತಾರ್ ಬಸವ್ವಾ ಕೋಮ ಮಲಕಪ್ಪ ಪೂಜಾರ ಈಕೆ ಕೈದು ಇರುತ್ತದೆ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ನಿತ್ಯ ಪತ್ರ ... ಬೆಲೆ ... ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೬) ಧಾರವಾಡ ಬುಧವಾರ ತಾರೀಖು ೮ ನೇ ಎಪ್ರಿಲ ೧೯೩೬ (ಸಂಚಿ

ಬೇಸಿಗೆ ಪ್ರಾರಂಭವಾಯಿತು!

ದನಗಳ ಆಹಾರವಾದ ಕಣಿಕೆಯನ್ನು ಕಾದಿಡಿರಿ !!

ಕಿರ್ಲೋಸ್ಕರ ಕಣಿಕೆ ಯಂತ್ರವನ್ನು ಉಪಯೋಗಿಸಿರಿ !!!

ನಮ್ಮ ಕಾರ್ಖಾನೆಯಲ್ಲಿ ಎರಡು ನಮೂನೆಯ ಕಣಿಕೆ ಕೊರೆಯುವ ಯಂತ್ರಗಳು ತಯಾರಾಗುತ್ತವೆ. ಒಂದು ಕೈಯಂತ್ರ ಬೆಲೆ ೨೦ರೂ. ಇನ್ನೊಂದು ಗಾಲೀಯಂತ್ರ ಬೆಲೆ ೮೫ ರೂಪಾಯಿ ಸಣ್ಣ ಕಮತವುಳ್ಳವರು ಕೈ ಯಂತ್ರವನ್ನೂ, ದೊಡ್ಡ ಕಮತವುಳ್ಳವರು ಗಾಲೀ ಯಂತ್ರವನ್ನೂ ಉಪಯೋಗಿಸಬಹುದು. ಕಣಿಕೆಯು ೪ ಇಂಚುಗಳಿಂದ ಒಂದು ಇಂಚಿನ ವರೆಗೆ ಕೊರೆಯಲ್ಪಡುತ್ತದೆ.

ಸವಿಸ್ತರ ಸಂಗತಿಯ ಬಗ್ಗೆ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ } ಕಿರ್ಲೋಸ್ಕರವಾಡಿ. ಜಿಲ್ಹಾ ಸಾತಾರಾ.

ತುಸು ಶ್ರಮದಲ್ಲಿ ಮತ್ತು ಎರಡೇ ಆಣೆಯಲ್ಲಿ

ತಲೆಶೂಲೆ, ಅರ್ಧಲಶೂಲೆ, ಮಸ್ತಕ ಶೂಲೆಯು ಒಂದೇ ಕ್ಷಣದಲ್ಲಿ ಸಂಚಿಗೆಯಿಂದ

ಬಂದಾಗುವ ನಮ್ಮ

ಮೊಮೆಂಟ ಕ್ಯೂರ

ನನ್ನು ಒಮ್ಮೆಯಾದರೂ ತಕ್ಕೊಳ್ಳಿರಿ. ಮೂರಾಣೆಯ ಟಿಕೀಟು ಕಳಿಸಿದರೆ ಸ್ಯಾಂಪಲ (ಮಾದರಿ) ಕಳಿಸುವೆವು

ನಮ್ಮ ಔಷಧಾಲಯದಲ್ಲಿ ಡಾಕ್ಟರರ ಪ್ರಿಸ್ಕ್ರಿಪ್ಶನ್ ಪ್ರಕಾರ ಅತ್ಯಂತ ಕಾಳಜಿ ಮತ್ತು ದಕ್ಷತೆಯಿಂದ ಔಷಧವನ್ನು ತಯಾರ ಮಾಡಿ ಕೊಡುವೆವು. ದರ ತೀರ ಸುಲಭ.

ವಿಳಾಸ— ದಿ ಕನಕಾದಿತ್ಯ ಮೆಡಿಕಲ ಸ್ಟೋರ್ಸ್, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ ಸ್ಟೇಶನರೋಡ ಹುಬ್ಬಳ್ಳಿ

ಪುಣೆಯ ಸೆಂಟ್ರಲ ಪೋಸ್ಟ ಆಫೀಸಿನಲ್ಲಿ ಮೂರು ಸಾವಿರ ರೂಪಾಯಿ ಬೆಲೆಯ ಅಂಚೆಯ ಟಿಕೀಟುಗಳು ಮಾಯವಾಗಿರುತ್ತವೆ.

ರಜೆಯ ಮೇಲೆ ಹೋಗಿದ್ದ ಮೈಸೂರಿನ ದಿವಾನರಾದ ಮಿ. ಮ್ಯಾಕರಜಿಯವರು ಕೆಲಸದ ಮೇಲೆ ಹಾಜರಾದರು. ಮಿ. ಹಮಜಾ ಹುಸೇನರು ರಜೆ ತೆಕ್ಕೊಂಡರು. ಮುಂದೆ ಪೆನಶನ ಪಡೆಯುವರು.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯು ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ. ಅಂಕಲಗಿ ಬ್ಯಾಂಕ ಲಿಮಿಟೆಡ್

ಧಾರವಾಡ.

೧೯೧೩ ಇಸ್ವಿಯ ಕಂಪನಿ ಕಾಯ್ದೆ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ಚಾಲೂ ಖಾತೆ, ಸೇವಿಂಗ್ಸ ಡಿಪಾಜಿಟ, ಸಾಲ, ಒತ್ತಿ, ಹುಂಡಿ, ಮುಂತಾದ ಯಾವತ್ತು ವ್ಯವಹಾರಗಳು ನಡಿಯುವವು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿಮಾಡುವವರಿಂದ ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ ರಿಂದ ೧೦-೩೦. ಸಾಯಂಕಾಲ ೩ ರಿಂದ ೬ ರವರೆಗೆ ನಡಿಯುವದು.

K.B. Ankalagi
ಮ್ಯಾನೆಜಿಂಗ ಡಾಯರೆಕ್ಟರ

ವಿಜಯ.

ತಾ- ೮-೪-೩೫ ನೇ ಇಸ್ವಿ

ಪ್ರಾಥಮಿಕ ಶಿಕ್ಷಕರ ಪರಿಷತ್ತೋ! ಡೆಪ್ಯುಟೇಶನವೋ!

—೦—

ಇದೇ ತಿಂಗಳ ೨೬ ನೇ ತಾರೀಖಿನ ದಿವಸ ಗದಗಿನಲ್ಲಿ ಕೂಡತಕ್ಕ ಸಹಕಾರಿ ಪರಿಷತ್ತಿಗೆ ದಿವಾನ ಜಾಧವರಾಯರು ಬರುವರೆಂಬ ವರ್ತಮಾನ ದಿಂದ, ಈ ಪ್ರಾಂತದ ಪ್ರಾಥಮಿಕ ಶಾಲೆಗಳ ಶಿಕ್ಷಕರಲ್ಲಿ ಸ್ಕೇಲ ಬಗ್ಗೆ ಸಂಬಳದ ವಿಷಯವಾಗಿ ಚಳುವಳಿಕೆಯುಂಟಾಗಿದೆ. ಸಿಂಧದ ಉತ್ತರ ಮೂಲಿಯಾದ ಸಕ್ಕರದಿಂದ ಕರ್ನಾಟಕದ ಕೊನೆಯ ಮೂಲಿಯಾದ ಧಾರವಾಡದ ತನಕ ಶಿಕ್ಷಕರು ಸಂಬಳದ ಕೊರತೆಯ ದೆಸೆಯಿಂದ ಸಂಪ್ರ ಮಾಡುವ ಸಂಘಶಕ್ತಿಯನ್ನು ತೋರಿಸಿದ್ದರಿಂದ, ಡಾಕ್ಟರ ಪರಾಂಜಪೆಯವರು ಸ್ವರ್ಗವಾಸಿ ನಾತೆಯವರ ಅಧ್ಯಕ್ಷತೆಯಲ್ಲಿ ಒಂದು ಕಮೀಟಿ ನೇಮಿಸಿದರು. ಆದರೆ ಸ್ವ. ನಾತೆಯವರು ಬೇಗಿಂದಮೇಲೆ ಹಾಸಿಗೆ ಹಿಡಿಯಹತ್ತಿದ್ದರಿಂದ, ಇವರು ನಡಿಸಿದ ವಿಚಾರಣೆ ಮುಗಿದು ರಿಪೋರ್ಟು ಪ್ರಸಿದ್ಧವಾಗಲಿಕ್ಕೆ ಅನಿವಾರ್ಯವಾಗಿ ಅವಶ್ಯಕ್ಕಿಂತ ಹೆಚ್ಚು ಕಾಲ ಹತ್ತಿತು. ಕಡವಾದರೂ ಇವರು ಬರೆದ ರಿಪೋರ್ಟು ಶಿಕ್ಷಕರಿಗೆ ಸಮ್ಮತವಾಗಿದೆ. ಡಾಕ್ಟರ ಪರಾಂಜಪೆಯವರ ತರುವಾಯ ಬ್ಯಾರಿಸ್ಟರ ಜಯಕರರು ಮಂತ್ರಿಯಾಗಿದ್ದರೆ- ಶಿಕ್ಷಕರು ಪರಾಂಜಪೆಯವರ ಸ್ಕೀಮಿನ ಪ್ರಕಾರ ಸಂಬಳ ಪಡೆದು, ಮಾತು ಹಳೆಯದಾಗುತ್ತಿತ್ತು. ಶಿಕ್ಷಕರ ದುರ್ದೈವ. ಶಿಕ್ಷಣ ಮಂತ್ರಿಯಾದ ಜಾಧವರಾಯರು ಈ ಯೋಜನೆಯನ್ನು ಮುರಿದು ಹಾಕತಕ್ಕ ಅವಶ್ಯಕತೆ ಇದ್ದಿಲ್ಲ. ಇದರಿಂದ ಶಿಕ್ಷಕರಿಗೆ ಹೆಚ್ಚು ಸಂಬಳ ಸಿಕ್ಕು, ಸರಕಾರದ ಹೆಚ್ಚು ದುಡ್ಡು ಕೈಬಿಡುತ್ತದೆಂಬ ದೂರಾಲೋಚನೆಯಿಂದ ಪರಾಂಜಪೆ ಸ್ಕೀಮಿನ ಮೇಲೆ ಸುರ್ವೆ ಕಮೀಟಿಯು ಕಳಸವಿಟ್ಟಿತೆಂದು ಸಹಜವಾಗಿ ವ್ಯಕ್ತವಾಗುತ್ತದೆ. ಸುರ್ವೆ ಕಮೀಟಿಯು ಕೂತು ವರ್ಷವಾಯಿತು. ಆದರೂ, ಅದರ ನಿರ್ಣಯವು ಪೂರಾ ಹೊರಬೀಳಲೊಲ್ಲದು. ಸಿಂಧದ ಶಿಕ್ಷಕ ಸಂಘದ ಅಧ್ಯಕ್ಷರು ಇದರ ಪ್ರಸಾದ ಫಲದ ಕೆಲ ಚಿನ್ಹವನ್ನು ತೋರಿದ್ದು ಅವನ್ನು ನೋಡಲಾಗಿ ಶಿಕ್ಷಕರು ಈ ಕಮೀಟಿಯಿಂದ ತಮ್ಮ ಹಿತವಾಗುವದೆಂಬ ಆಶೆಯನ್ನು ಪೂರಾ ತೊರೆಯಬೇಕೆನ್ನುವಂತಾಗಿದೆ.

ಈ ಚಳವಳಿಯಲ್ಲಿ ಕರ್ನಾಟಕದ ಶಿಕ್ಷಕರು ಅಗ್ರಗಣ್ಯರಾಗಿದ್ದರು. ಆದರೆ ಅವರ ಇವತ್ತಿನ ಪರಿಸ್ಥಿತಿಯು ಅಸೆಂಬ್ಲಿಯಲ್ಲಿಯ ಸ್ವರಾಜ್ಯ ಮತ್ತು ಸ್ವತಂತ್ರ ಪಕ್ಷೀಯರಂತಾಗಿದೆ. ಅದರಲ್ಲಿಯೂ ಮಾತು ಮಾತಿಗೆ ಕುಲಾಭಿಮಾನವು ಮೂರ್ತಿಮಂತವಾಗುವದು. ಆದ್ದರಿಂದ ಶಿಕ್ಷಕರ ಪರಿಷತ್ತು ನೆರೆಯುವದು ಕೂಡ ಅಶಕ್ಯವಾಗಿದೆ. ಇಂಥ ದುಃಸ್ಥಿತಿಯಲ್ಲಿ ದಿವಾನ ಜಾಧವರಾಯರು ಹಾವೇರಿಗೆ ಬಂದ ಸಮಯಸಾಧಿಸಿ, ಶಿಕ್ಷಕರ ಪರಿಷತ್ತನ್ನು ಕೂಡಿಸಬೇಕೆಂದು ಕೆಲವರು ಆಲೋಚಿಸುತ್ತಿದ್ದಾರೆ. ಪೂರ್ವಸಿದ್ಧತೆಯಾಗಿ ಒಂದು ವೇಳೆ ಪರಿಷತ್ತು ನೆರೆದರೂ-ಅದು ಯಶಸ್ಸುಕರವಾಗಲಾರದು. ಈ ಪರಿಷತ್ತಿಗೆ ದಿವಾನರು ಬರಲಾರರು. ಅವರ ಮನಸ್ಸಿನ ವಿರುದ್ಧ ಧರಾವಾಗದಂತೆ ಅವರ ಪ್ರಭಾವಳಿಯಲ್ಲಿದ್ದ ಜನರು ಕೂಡಿದ ಶಿಕ್ಷಕರ ಮನವೊಲಿಸದಿರರು. ಆದ್ದರಿಂದ ಶಿಕ್ಷಕರು ಪರಿಷತ್ತಿನಂಥ ಆಟೋಪ ವಿರುವ ಸಭೆ ಕೂಡಿಸದೆ, ಗಣ್ಯರಾದಂಥ ಕೆಲವರ ಒಂದು ಡೆಪ್ಯುಟೇಶನ ಕಳಿಸಬೇಕೆಂದು ನಾವು ಸೂಚಿಸುತ್ತೇವೆ. ಡೆಪ್ಯುಟೇಶನಕ್ಕೆ ದರ್ಶನ ಕೊಡಲಾಗದೆಂದು ಇವರು ಹೇಳಲಾರರು. ಆದ್ದರಿಂದ ಪರಿಷತ್ತಿಗಿಂತ ಡೆಪ್ಯುಟೇಶನ ವಿಚಾರ ಮಾಡುವದೇ ಲೇಸು.

ಯಾವಾಗ ಸರಕಾರದ ಕೂಡ ಸಹಕಾರ?

—೦—

ಲಾರ್ಡ ಬರ್ಕನಹೆಡ್ಡ ಸಾಹೇಬರು ದೇಶಬಂಧು ದಾಸರಿಗೆ ತಮ್ಮ ಕೂಡ ಸಹಕಾರ ಮಾಡಬೇಕೆಂದು ಗೌರವಪೂರ್ವಕವಾಗಿ ಆಮಂತ್ರಣ ಕೊಟ್ಟಿದ್ದಾರೆ. ಈ ಆಮಂತ್ರಣದ ಪ್ರಕಾರ ಲಾರ್ಡ ಲಿಟನ ಸಾಹೇಬರ ತರುವಾಯ ಬಂಗಾಲದ ಗವ್ಹರ್ನರರಾಗಿ ಬರುವ ಸರ ಕಾರ ಸಾಹೇಬರ ಕೂಡ ಸಂಧಿಯ ಪ್ರಸ್ತಾಪ ನಡೆಯುವದೆಂದು ಇಂಗ್ಲಿಷ ಪತ್ರಗಳು ತರ್ಕ ಮಾಡಿವೆ. ಹಿಂದೆ ಎಷ್ಟೋ ಸಾರೆ ಭಾಷಣಗಳಾದವು. ಅವೆಲ್ಲ ಬೋರಗಲ್ಲ ಮೇಲೆ ಮಳೆ ಸುರಿದಂತಾದವು. ಆ ತರದ ಕಾಲಹರಣದ ಭಾಷಣ ಮಾಡದೆ, ನಾವು ಈ ಪೂರ್ವದಲ್ಲಿ ಹೇಳಿದಂತೆ ಅರ್ಧಕ್ಕಿಂತ ಹೆಚ್ಚು ಶರ್ತುಗಳಿಗೆ ಸರಕಾರವು ಒಪ್ಪುತ್ತಿದ್ದರೆ- ಪ್ರಸ್ತಾಪ ಮಾಡಬೇಕು; ಇಲ್ಲವಾದರೆ ತಮ್ಮಿಂದ ಸಹಕಾರದ ಆಶೆ ಮಾಡಬಾರದೆಂದು ದೇಶಬಂಧು ದಾಸರು ಲಾರ್ಡ ಬರ್ಕನಹೆಡ್ಡ ಸಾಹೇಬರಿಗೆ ಉತ್ತರವೆಂದು ಒಂದು ಸಂದೇಶವನ್ನು ಪ್ರಸಿದ್ಧ ಮಾಡಿದ್ದಾರೆ. ಇದರಲ್ಲಿ ಸರಕಾರದ ಮಾತನ್ನು ಸರಕಾರದ ಕೊಳ್ಳಿಗೆ ಕಟ್ಟಿದ್ದಾರೆ. ಪ್ರಸಿದ್ಧ ತತ್ವಜ್ಞಾನಿಯಾದ ಬೇಕನ ಸಾಹೇಬನು "ದೇಶದಲ್ಲಿ ಬಹಳವಾಗಿ ಬಡತನವಾದರೆ ಮತ್ತು ಪ್ರಜರಲ್ಲಿ ಬಹಳವಾಗಿ ಅಸಂತೋಷ ಹಬ್ಬಿದರೆ- ರಾಜದ್ರೋಹವೇಳುತ್ತದೆಂದು" ಅಂದಿರುತ್ತಾನೆ. ಈ ಎರಡೂ ಕಾರಣಗಳು ಪ್ರಕೃತದಲ್ಲಿ ಹಿಂದುಸ್ಥಾನದಲ್ಲುಂಟಾಗಿವೆ. ಕಾರಣ ಸರಕಾರವು ಇವುಗಳ ನಿರ್ಮೂಲ ಮಾಡಲಿಕ್ಕೆ ಮೊದಲು ಪ್ರಯತ್ನಿಸಬೇಕ; ಉರವಲ ಒಟ್ಟಿದ್ದರೆ ಅದಕ್ಕೆ ಎಲ್ಲಿಂದಾದರೂ ಕಿಡಿ ಬೀಳುವದು ಸಹಜ. ಕಿಡಿ ಬಿದ್ದು ಉರಿ ಏಕೆ ಎದ್ದಿತೆಂದು ಪ್ರಶ್ನ ಮಾಡುವದಕ್ಕಿಂತ ಉರವಲವೇ ಇಲ್ಲದಂತೆ ಮಾಡುವದು ರಾಜ್ಯಕರ್ತರ ಜಾಣತನವು. ಇಂಗ್ರೇಜೀ ಸರಕಾರದವರು ಉದುರ ರೋಗಕ್ಕೆ ಮದ್ದೆಂದು ಹೊಟ್ಟೆಯ ಮೇಲೆ ಗಂಟ ಸವರುವ ಹಾಸ್ಯಾಸ್ಪದ ಕೃತಿ ನಡಿಸಿರುವದರಿಂದ, ಅನಾಯಕ, ಅರಾಜಕತನವು ಸಂಘುಗಳೂ ಏಳುತ್ತವೆ. ರಾಜ್ಯಕ್ರಾಂತಿ ಪ್ರವರ್ತಕರ ದಾರಿ ತಪ್ಪಿರಲಿ; ಅವರ ಪ್ರಯತ್ನಕ್ಕೆ ಯಶ ಬರದಿರಲಿ, ಅವರ ಕೃತ್ಯಗಳು ಎಷ್ಟೋ ದೂಷಣೀಯವಾಗಿರಲಿ; ತಮ್ಮ ರಾಜ್ಯದಲ್ಲಿ ಸ್ವಾತಂತ್ರ್ಯದ ತಳಗ್ಗಲ್ಲು ಕೊಡ್ರುವತನಕ ಅವರು ತಮ್ಮ ಕೃತ್ಯ ಬಿಡಲಾರರು. ಈ ತಳಗಲ್ಲು ಕೂತ ಕೂಡಲೆ, ರಾಜ್ಯಕ್ರಾಂತಿ ಎಂಬ ಹೆಸರು ತಾನಾಗಿ ಹಳೆಯದಾಗಿ ಹೋಗುವದು. ಆದ್ದರಿಂದ ಸರಕಾರದವರು ಸ್ಪಷ್ಟ ಮತ್ತು ಅಧಿಕಾರಯುಕ್ತ ವಾಣಿಯಿಂದ ಹಿಂದುಸ್ಥಾನದ ವಿಷಯಕವಾದ ತಮ್ಮ ಮನೋದಯವನ್ನು ಜಾಹೀರ ಮಾಡಬೇಕೆಂದು ದೇ. ದಾಸರು ಲಾರ್ಡ ಬರ್ಕನಹೆಡ್ಡ ಸಾಹೇಬರಿಗೆ ಸವಾಲು ಹಾಕಿದ್ದಾರೆ.

ಬಳ್ಳಾರಿ ಜಿಲ್ಲೆಯ ರಿವ್ಹಿಜನ ಸರ್ವೆ

—೦—

ಬಳ್ಳಾರಿ ಜಿಲ್ಲೆಯ ಪಶ್ಚಿಮ ಭಾಗದಲ್ಲಿರುವ ಹೊಸಪೇಟೆ, ಹಡಗಲಿ, ಹರಪನಹಳ್ಳಿ, ಕೂಡ್ಲಿಗಿ ಮತ್ತು ರಾಯದುರ್ಗ ತಾಲೂಕ ರಿವ್ಹಿಜನ ಸೆಟಲಮೆಂಟ ಮಾಡಿ, ಸರಕಾರದವರು ಹಸ್ತೆಯನ್ನು ಹೆಚ್ಚಿಸಿದರು. ಈ ಪ್ರಕಾರ ತೀರ್ವೆ ಹೆಚ್ಚಿಸದೆ, ಒಂದು ಕಮೀಟಿಯ ಮುಖಾಂತರ ರೈತರ ನಿಜಸ್ಥಿತಿಯ ವಿಚಾರ ಮಾಡಬೇಕೆಂದು ಮದ್ರಾಸದ ಕೌನ್ಸಿಲದಲ್ಲಿ ಠರಾವಾಯಿತು. ಸರಕಾರದವರು ಈ ಠರಾವನ್ನು ನಾಮಂಜೂರ ಮಾಡಿ ತುಂಗಭದ್ರಾ ಮತ್ತು ಹೀರೆ ಕಾಲುವೆಗಳ ಹಸೀ ಭೂಮಿಗೆ ನೂರಕ್ಕೆ ೧೫ ಮತ್ತು ಒಣನೆಲದ ಮೇಲೆ ನೂರಕ್ಕೆ ೧೨ ರಂತೆ ಕಂದಾಯ ಹೆಚ್ಚಿಸಬೇಕೆಂಬ ಠರಾವು ಮಾಡಿದ್ದಾರೆ.

ಫಣಸೇಸ ಜವಾಬು.

—o—

ಬಾವಲಾನ ಪಿಸ್ತೂಲಿನ ಭಯದಲ್ಲಿ ಮುಮತಾಜಳ ಜೀವನ.

—o—

ಫಣಸೇಸು ಇಂದೂರಿನ ಅರಮನೆಯಲ್ಲಿ ಒಬ್ಬ ಆಳಾಗಿದ್ದನು. ಮಹಾರಾಜರ ಕೃಪೆಯಿಂದ ಪದವಿಗೇರಿದನು. ಈತನು ಮುಂಬಯಿಯ ಪೋಲೀಸ ಕಮಿಶನರರ ಮುಂದೆ ಕೆಳಗೆ ಬರೆದಂತೆ ಜವಾಬು ಕೊಟ್ಟಿದ್ದಾನೆ.

ನನ್ನ ಸುಟ್ಟಿಗೆ ನಾನು ಸತ್ಯವಾದುಗನು. ಉಳಿದದ್ದನ್ನು ಹೇಳಲಿಕ್ಕಿಲ್ಲೆಂದು ಆಣೆ ಕೊಟ್ಟಿದ್ದೇನೆ. ನಾನು ಕೆಂಪು ಬಣ್ಣದ ಮೋಟಾರ ಕೊಂಡದ್ದು ನಿಜ. ಅದು ಕೊಲೆಯು ದಿವಸ ಎಲ್ಲಿತ್ತೆಂದು ಹೇಳಲಾರೆ. ಯಾರು ತಕ್ಕೊಂಡು ಹೋದರೆಂದು ಹೇಳುವದಿಲ್ಲ. ಹೆಸರು ಒಡೆಯುವದಿಲ್ಲೆಂದು ಆಣೆ ಕೊಟ್ಟಿದ್ದೇನೆ. ಈ ಸಂಚಿನಲ್ಲಿ ಯಾರಿರುತ್ತಾರೆಂಬುದನ್ನೂ ಹೇಳಲಾರೆ. ಏಕೆಂದರೆ ಇದು ಆಣೆಯ ಭಂಗವಾಗುತ್ತದೆ. ಕಮಲಾಬಾಯಿಯನ್ನು ಎತ್ತಿಕೊಂಡು ಹೋಗುವ ಪ್ರಯತ್ನವನ್ನು ನಾನು ಮಾಡಲಿಲ್ಲ. ಹೊಟ್ಟೆ ಸಾಧಿಸಿ, ತಾನೇ ಬರುವಳೆಂದು ಒಬ್ಬ ಸ್ನೇಹಿತನಿಂದ ನನಗೆ ತಿಳಿಸಿದ್ದರು. ಆತನ ಹೆಸರು ನಾನು ಹೇಳಲಾರೆನು. ಕಮಲಾಬಾಯಿಯು ಇಂದೂರಿಗೆ ಬರುವಳೆಂಬ ಸುದ್ದಿಯನ್ನು ಮಹಾರಾಜರಿಗೆ ಹೇಳಲು ನಾನು ಆತುರ ಪಟ್ಟೆನು. ಈ ವರ್ತಮಾನದಿಂದ ಶಂಕರರಾಯನ ಬಿಡುಗಡೆಯಾಗುವ ಆಶೆಯು ಇತ್ತು. ನಾನು ಶಂಕರರಾಯನಿಂದಲೇ ಘನತೆಗೆ ಬಂದೆನು. ಇಂದೂರಿನ ಒಳ ವಿಚಾರಗಳೆಲ್ಲ ನನಗೆ ಗೊತ್ತುಂಟು. ಕಮಲಾಬಾಯಿಯು ಇಂದೂರಿಗೆ ಬಂದರೆ ಶಂಕರರಾಯನು ಬಿಡುಗಡೆಯಾಗುವಂತಿತ್ತು. ಈತನ ಮನೆಯಿಂದಲೇ ಈಕೆಯು ಇಂದೂರಿಂದ ಓಡಿಹೋದಳೆಂದು ಸಾಮಾನ್ಯವಾದ ತಿಳುವಳಿಕೆಯು, ಅರಮನೆಯಲ್ಲಿ ಕಮಲಾಬಾಯಿಗೆ ಮಹಾರಾಣಿ ಎಂದು ಯಾರೂ ಕರೆಯುತ್ತಿದ್ದಿಲ್ಲ. ಮಹಾರಾಣಿಗೆ ತಕ್ಕ ಯಾವ ಮರ್ಯಾದೆಯನ್ನೂ ಇವಳು ಹೊಂದುತ್ತಿದ್ದಿಲ್ಲ. ನಾನು ಮತ್ತು ನನ್ನ ಸ್ನೇಹಿತರು ಇಂದೂರಿಂದ ಮುಂಬಯಿಗೆ ಬರುವ ಮುಂಚೆ ಯಾರ ಜೀವಕ್ಕೂ ಅಪಾಯ ಮಾಡದೆ, ಕಮಲಾಬಾಯಿಯನ್ನು ಆಕೆಯ ಇಚ್ಛಾನುಸಾರವಾಗಿ ಇಂದೂರಿಗೆ ಕರಕೊಂಡು ಹೋಗಬೇಕೆಂದು ಮಸಲತ್ತು ಮಾಡಿದ್ದೆವು. ಅವಳಿಗೆ ದುಡ್ಡು ಕೊಟ್ಟು, ಈ ಕೆಲಸ ಮಾಡಬೇಕೆಂದು ಮಾಡಿದ್ದೆವು. ನಾನು ಒಂದಿಕ್ಕೆ ಸಿದ್ಧನಿದ್ದೇನೆ. ಮೋಟಾರ ಸಿದ್ಧವಾಗಿದ್ದರಿಂದ ಅವಳು ನನಗೆ ಸುಗ್ಗೀ ಕಳಿಸಿದ್ದಳು. ಇಂದೂರಲ್ಲಿ ಅವಳಿಗೆ ದೊರೆಯುತ್ತಿದ್ದ ಆಭರಣಗಳಲ್ಲಿ ಇಲ್ಲಿ ಶತಾಂಶ ಕೂಡ ಸಿಗುವದಿಲ್ಲ. ಮೇಲಾಗಿ ಬಾವಲಾನು ನನ್ನನ್ನು ಪಿಸ್ತೂಲಿನ ಹೆದರಿಕೆಯಲ್ಲಿ ಇಟ್ಟಿದ್ದಾನೆಂದು ಕಮಲಾಬಾಯಿಯು ನನಗೆ ಸುದ್ದಿಯನ್ನು ಹೇಳಿ ಕಳಿಸಿದ್ದಳು.

ಮ್ಯಾಜಿಸ್ಟ್ರೇಟರು ಸೋಮವಾರದ ದಿವಸ ಆರೋಪಿಗಳನ್ನು ಸೆಶನ ಕಮಿಟ ಮಾಡಿದರು.

ಅಂಥ ಪುಂಡರಾರು?

—o—

ಸ್ವರಾಜ್ಯ ಪಕ್ಷದಿಂದ ಸ್ವತಂತ್ರ ಪಕ್ಷವನ್ನು ನಿರ್ಮಾಣ ಮಾಡಲು ನಾನೇ ಅಂಥ ಪುಂಡನೆಂದು ಶ್ರೀ. ರಂಗಾಚಾರ್ಯರು ಮುಂಬಯಿ ಮತ್ತು ಮದ್ರಾಸದಲ್ಲಿ ವ್ಯಾಖ್ಯಾನ ಕೊಟ್ಟರು. ಈ ಬಿರುದು ಆಚಾರ್ಯರಿಗೆ ಸಲ್ಲತಕ್ಕದ್ದಲ್ಲ. ಬ್ಯಾರಿಸ್ಟರ ಜಿನ್ನಾ ಸಾಹೇಬರು ಇದರ ಕುಲಗುರುವಾದಂಥ ಪುಂಡರಾಗಿದ್ದಾರೆಂದು ಶ್ರೀ, ಷಣ್ಮುಖಂ ಚಟ್ಟಿಯವರು ಹೇಳಿ, ಆಚಾರ್ಯರ ಸಮರ್ಥನೆ ಮಾಡಿದ್ದಾರೆ. ಆಚಾರ್ಯರು ಪುಂಡರಾಗದಿದ್ದರೂ, ಶಕುನಿಯಾಗಿದ್ದಾರೆಂದು ಕಲ್ಪಿಸಿದರೂ ಸಾಕು.

ತಿರಪ್ಪತ್ತೂರ ಖಾದಿ ವ್ಯಾಪಾರ

—o—

ತಿರಪತ್ತೂರ ಪೇಟೆಯ ಖಾದೀ ವ್ಯಾಪಾರವು ಸಾವಕಾಶವಾಗಿ ಬೆಳೆಯುತ್ತಲಿದೆ. ಪೇಟೆಯಲ್ಲಿ ಮಾಲಿನ ದೊಡ್ಡ ಸಂಗ್ರಹವಿರುವದು. ನೂಲಿನ ಧಾರಣೆಯು ಸೇರಿಗೆ ಒಂಭತ್ತು ಆಣೆ ಇರುತ್ತದೆ. ಖಾದಿಯ ಧಾರಣೆಯಲ್ಲಿ ಅದಲು ಬದಲಾಗಿರುವದಿಲ್ಲ. ಖಾದಿಯ ವ್ಯಾಪಾರಸ್ಥರು ತಿರಪ್ಪತ್ತೂರಿಂದ ಮಾಲು ತರಿಸಲಿಕ್ಕೆ ಇದೊಂದು ಅನುಕೂಲ ಕಾಲವು. ವರ್ತಕರ ಪರಿಚಯವಿಲ್ಲದವರು ಅಲ್ಲಿಯ ಕಾಂಗ್ರೆಸ ಕಮಿಟಿಗೆ ಬರೆಯಬಹುದು.

ಬಲ್ಗೇರಿಯಾದಲ್ಲಿ ಬಂಡಾಯದ ಭೀತಿ.

ಮಂತ್ರಿಗಳನ್ನು ಕೊಲ್ಲುವ ಸಂಚು ಹೊರಬಿತ್ತು.

೧೫ ನೆಯ ತಾರೀಖಿನ ದಿವಸ ಪ್ರಚಂಡವಾದ ರಾಜ್ಯಕ್ರಾಂತಿಯನ್ನು ಎಬ್ಬಿಸಿ, ರೇಲ್ವೆಯ ಆಯಕಟ್ಟಿನ ಸ್ಥಳಗಳನ್ನು ಹಿಡಕೊಳ್ಳಬೇಕು; ತಂತಿ ಹರಿಯಬೇಕು. ದಾರಿ ಮತ್ತು ಪೂಲುಗಳನ್ನು ಕೆಡವಬೇಕು, ಮತ್ತು ಮಂತ್ರಿಗಳಿಗೆ ಕಂಠಸ್ನಾನ ಹಾಕಬೇಕೆಂದು ಬಲ್ಗೇರಿಯಾದ ಬೊಲ್ಶೆವಿಕ ಪಂಥಿಯರು ಒಳಸಂಚು ಮಾಡಿದ್ದು ಬೈಲಿಗೆ ಬಿದ್ದಿದೆ. ಇವರಲ್ಲಿ ದಂಡಿನ ಖಾತೆಯವರೂ ಇರಬೇಕೆಂದು, ಸಂಚಿನ ಯೋಜನೆಯಿಂದ ಬಲವಾದ ಸಂಶಯ ಬಂದಿದೆ. ಬಂಡಾಯವೇಳದಂತೆ ಸರಕಾರದವರು ಭದ್ರೋಪಾಯ ಮಾಡಿದ್ದು ಸಂಶಯದಿಂದ ಅನೇಕರನ್ನು ಹಿಡಿಯುತ್ತಲಿದ್ದಾರೆ.

ಗುಂತಕಲ್ಲ ಸ್ಟೇಶನದಲ್ಲಿ ಹೊಸ ಸುಧಾರಣೆ.

—o—

ಗುಂತಕಲ ಜಂಕ್ಶನವು ಹಿಂದುಸ್ತಾನದೊಳಗಿನ ದೊಡ್ಡ ದೊಡ್ಡ ಜಂಕ್ಶನಗಳಲ್ಲಿ ಒಂದು. ಈ ಸ್ಟೇಶನವು ಪ್ರಯಾಣಿಕರಿಗೂ, ರೇಲ್ವೆ ಕಾಮದಾರರಿಗೂ ಅಟಕರಿಯಾಗುವದರಿಂದ ಇದನ್ನು ವಿಸ್ತರಿಸಿ ಕಟ್ಟಬೇಕೆಂದು ರೇಲ್ವೆ ಕಂಪನಿಯವರು ಗೊತ್ತು ಮಾಡಿದ್ದಾರೆ. ಹೊಸ ಸ್ಟೇಶನದಲ್ಲಿ ವೇಟಿಂಗ ರೂಮು ಮೊದಲು ಮಾಡಿಕೊಂಡು ಎಲ್ಲ ಸ್ಥಳಗಳು ಪ್ರಶಸ್ತವಾಗುವವು ಮತ್ತು ವಿದ್ಯುದ್ದೀಪ ಹಚ್ಚುವರು.

ಕಿರ್ಲೋಸ್ಕರ ವಾರ್ತೆ.

ಕಿರ್ಲೋಸ್ಕರ ವಾರ್ತೆಯ ಮಾರ್ಚ ತಿಂಗಳ ಸಂಚಿಕೆಯು ವಿವಿಧ ವಿಷಯಗಳಿಂದ ಉಪಯುಕ್ತವೂ ಮನೋರಂಜಕವೂ ಆಗಿದೆ. ಸಮುದ್ರದ ಮಹತ್ವ, ಹಿಂದುಸ್ಥಾನದ ಕೈಮಗ್ಗದ ವ್ಯವಸಾಯ, ಉದ್ಯೋಗ ಮತ್ತು ಜಾತಿ, [illegible] ಜವಾಬುದಾರಿ ಎಂಬ ಲೇಖಗಳು ವಾಚನೀಯವಾಗಿವೆ. ಪಂಡಿತ ಹುಲಿಕವಿಯ ಮುತ್ತಿನಂಥ ಮಾತುಗಳು ನಿಜವಾಗಿ ಮುತ್ತಿನಂತಿರುತ್ತವೆ. [illegible] ಪತ್ತಾ ತ್ರಾಪ ಬೆಂಕಿಯ ಕಡ್ಡಿ ಇವುಗಳ ಮೇಲೆ ರಚಿಸಿದ ಪದ್ಯಗಳು ಸರಸವಾಗಿದೆ.

ಹುಬ್ಬಳ್ಳಿ ಮ್ಯುನಿಸಿಪಾಲಿಟಿಯ ಚುನಾವಣೆಯು ರಾಡಿಗೆದ್ದಿತು.

ಮಾನಹಾನಿಯ ಫಿರ್ಯಾದಿಯು ಕೋರ್ಟಿನ ಕಟ್ಟೇ ಹತ್ತಿತು.

—o—

ಹುಬ್ಬಳ್ಳಿಯಲ್ಲಿ ಚುನಾವಣೆಯ ವಿಷಯವಾಗಿ ಊರತುಂಬ ಚಳವಳಿ ಎದ್ದಿದೆ. ಈ ಚಳವಳಿಯ ಗದ್ದಲವು ಹುಸು ವಿಕೋಪಕ್ಕೆ ಹೋಗಿದೆ. ಶ್ರೀ. ಸುಬ್ಬರಾವ ಚಿಕ್ಕಹಟ್ಟಿಯವರು ಮಿ. [illegible] ಮತ್ತು ನವಾಬ ಸಾಹೇಬ ಮಹಬೂಬಖಾನ ಇವರ ಮೇಲೆ ಧಾರವಾಡದ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ಮಾನಹಾನಿಯ ಫಿರ್ಯಾದಿ ಮಾಡಿದ್ದಾರೆಂದು ತಿಳಿಯುತ್ತದೆ.

ಅಮೇರಿಕೆಯ ಸ್ಟ್ಯಾಂಡರ್ಡ ಆಯಿಲ ಕಂಪನಿಯವರು ಕಮ್ಮಿ [illegible] ದ ಎಣ್ಣೆಯ ಕಾರಖಾನೆಗಳನ್ನು ಕೊಂಡರು. ಇದರಿಂದ ಸ್ಟ್ಯಾಂಡರ್ಡ ಕಂಪನಿಯ [illegible] ವ್ಯಾಪಾರದಲ್ಲಿ ಮನಸಿಗೆ ಬಂದಂತೆ ಕೀಮತಿ, [illegible] ಮಾಡಬಹುದಾಗಿದೆ.

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ

ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ, ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ

ಬಂಡಿಗೆಯು ಆರುಲಕ್ಷದ ಮೇಲುಂಟು. ಚೆಕ್ಕ, ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ನಡೆಯಲ್ಪಡುವವು. ಸಾಕೀತು ಮತ್ತು ಚಾಲಿ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,

ಮ್ಯಾನೆಜಿಂಗ ಡಾಯರೆಕ್ಟರ

ಆರ್. ಎಮ್. ಜಾನ್ ಎಂಡ ಸನ್ಸ ಹುಬ್ಬಳ್ಳಿ.

ಎಜಂಟ್ಸ ಫೋರ ಕಾರ್ಬೋನಿಕ್ ಎಸಿಡ್ ಗ್ಯಾಸ, ಮ್ಯಾನುಫ್ಯಾಕ್ಚರರ್ ಅಫ್ ಏರೆಟೆಡ ವಾಟರ್ಸ.

ತಾವು ಆರ್ಡರ ಬೇಗ ಕಳಿಸಿರಿ

ನಮ್ಮಲ್ಲಿ ಸಿಗುವ ಸಾಮಾನುಗಳ ವಿವರ

ಕಾರ್ಬೋನಿಕ್ ಗ್ಯಾಸ ಸಿಲೆಂಡರಗಳು ಇಂಗ್ಲೀಷ ಮತ್ತು ಜರ್ಮನ ಪೇಟೆಂಟ ಕಾಕ್ಸ, ಎಮ. ಪಿ ಸೋಡಾ ವಾಟರ ಬಾಟಲಗಳು, ಜಿಂಜರ ನಂ. ಸಾಬ



ಸೋಡಾ ಮಶೀನ

ಲೀನ ಡೆಪ್ಪಿ ೧ ಪೌಂಡ್, **ಸೋಡಾವಾಟರ್ ಮಶಿನುಗಳು** ಮತ್ತು ಎಲ್ಲ ತರದ ಕಲರಿನ ಬಾಟಲಿಗಳು ಎಸೆನ್ಸಗಳು, ಅಮೇರಿಕನ್ ಐಸ್ಕ್ರೀಮ ಸೋಡಾ, ಬನಾನಾ, ಕೋಲಾಚೆಂಪೇಜನ, ಲಿಮನ್ ನಂ. ೧ ಲಿಮನ್ ಜ್ಯುಸ್ ಸೋಡಾ ನಂ. ೧ ಮೆಂಗೋ, ಆರೆಂಜ, ಫಾಯಿನಾಪಲ್, ಪಿಕ್ಕವಿಲಪ್, ಕ್ವಿನಿನ್ ಟಾನಿಕ್, ರಾಜಬಿರಿ ನಂ. ೧ ಕ್ರೀಮ ನಂ ೧ ಸ್ಪೇಶಲ್ ಜಿಂಜರ್ ಬೀರ ನಂ. ೧, ರಬ್ಬರ್ ರಿಂಗ್ಸ್, ಬೆಸ್ಟ ಇತರ ಮಶಿನರಿ ಪಾರ್ಟಗಳು ನಮ್ಮಲ್ಲಿ ಸಿಗುತ್ತವೆ. ಮತ್ತು ಶುದ್ಧ ಸೀಲಗಿರಿ ಎಣ್ಣೆಯು ಎಲ್ಲ ತರದ ಬಾಟಲ್ಗಳು ಸಿಗುತ್ತವೆ. ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಕೊಡುತ್ತೇವೆ. ನಮ್ಮಲ್ಲಿ ಕಬ್ಬಿಣದ ಮಿಲಿಟರಿ ಸಿಂಗಲ ಕಾಟ್ಸಗಳು ಸೋವಿ ದರದಿಂದ ಮಾರಲಿಕ್ಕೆ ಸಿಗುತ್ತವೆ.

ಅಡ್ರೆಸ್— R. M. John & Sons.

Mission Compound HUBLI

ವಿಜಯ ಪುಸ್ತಕಾಲಯ

—೦—

೨೦ ನೇ ಶತಮಾನದ ಗೊಂದಲ	೧೦ ಆಣೆ
ಏಚಿತ್ರ ಸಂಶಯ	೫ "
ಲೋ. ಟಿಳಕರ ಚರಿತ್ರ	೪ "
ದೀನಬಂಧು ದಾಸರ ಚರಿತ್ರ	೨ "
ಮಹಾತ್ಮರ ಸಂದೇಶಗಳು	೧ "

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧| ರೂಪಾಯಿಗೆ ಕೊಡುವೆವು. ವ್ಹಿ. ಪಿ. ಮತ್ತು ಟಪಾಲ ಖರ್ಚು ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ

ಧಾರವಾಡ

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಓಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಓಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ಆಣೆ ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಓಳಿಗಳಿಗೆ ಇಮ್ಮಡಿಚಾರ್ಜ ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ವಿಜಯದ ವರ್ಗಣೀ ದರ

ಸಿಕ್ಕಪತ್ರಿಕೆ

೧೨ ತಿಂಗಳಿಗೆ	೧೨—೮—೦ ರೂ
೬ "	೬—೦—೦ ರೂ
೩ "	೯—೦—೦ ರೂ
ವಾರಪತ್ರಿಕೆ ೧ ವರ್ಷಕ್ಕೆ	೬—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ, ಧಾರವಾಡ

ಜಾಹೀರಾತ.

—೦—

ಯಾವತ್ತು ಜನರಿಗೆ ಮತ್ತು ಕ್ಯಾವಶ್ಯಾ ಕೋಂ ಮನಮಪ್ಪಾ ರೋಣದ ನ ವೀರಪ್ಪಾ ಬಸಪ್ಪಾ ರೋಣದ ಸಾ. ವೆಂಕಟಾಪುರ ಪೇಟಾ ಮುಂಡರಗಿ ಇವರಿಗೆ—

ಕೆಳಗೆ ಸಹಿ ಮಾಡಿದ ವೆಂಕಟಾಪುರ ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿ ಚೇರಮನ್‌ರು ತಿಳಿಯಪಡಿಸುವದೇನಂದರೆ ಮೇಲೆ ಕಾಣಿಸಿದ ಬಸಪ್ಪಾ ತಂದಿ ವೀರಪ್ಪಾ ರೋಣದ ಸಾ. ವೆಂಕಟಾಪೂರ ಈತನು ನಮ್ಮ ಸೊಸಾಯಟಿಯಲ್ಲಿ ಮೆಂಬರನಿದ್ದು ತನ್ನ ಗೃಹ ಕೃತ್ಯದ ಕಾರಣ ತಾರಣಕೊಟ್ಟು ವಚನೆಕು ಕೊಟ್ಟು ಎಷ್ಟೋ ಹಣ ತೆಗೆದುಕೊಂಡಿರುತ್ತಾನೆ ಈಗ ಆತನು ಫೌತಿಯಾಗಿದ್ದು ಅವನ ಆಸ್ತಿಗೆ ನೀವೇ ಹಕ್ಕುದಾರರಾಗಿದ್ದು ನಿಮ್ಮ ನಿಮ್ಮೊಳಗೆ ಒಡಕು ಹುಟ್ಟಿ ಸೊಸಾಯಿಟಿ ಹಣ ಕೊಡದ ಯಂಡನೇನವರಿಗೆ ಖರೀದಿ ಕೊಡೋ ಇರಾದೆಯಲ್ಲಿರುತ್ತೀರೆಂಬದಾಗಿ ತಿಳಿಯ ಒರುತ್ತದೆ ಕಾರಣ ಕೆಳಗೆ ಬರೆದ ಸ್ಥಾವರ ಆಸ್ತಿಯನ್ನು ಅಂದರೆ

ರಿ| ಸ| ನಂಬರು	ಎಕರೆ	ತರಂ ರೂ.
೬೯೭	೧೬.೩೦	೧೬
೬೯೯	೧೪.೧೪	೧೪
೭೪೪	೨೩.೧೯	೨೬

ಈ ಪ್ರಕಾರ ಇರೋ ಆಸ್ತಿಗಳನ್ನು ನಮ್ಮ ಸೊಸಾಯಿಟಿ ಹಣಾ ಫೇಡ ಆಗೋ ವರಿಗೆ ಯಾರಿಗೂ ಖರೀದಿಯಾಗಲಿ ವತ್ತಿಯಾಗಲಿ ಕೊಡಬಾರದು ಹಾಗೂ ಯಾರೂ ಸದರೀ ಮೇಲೆ ಬರೆದ ನಂಬರುಗಳನ್ನು ನಮ್ಮ ಸೊಸಾಯಿಟಿ ಹಣಾ ಫೇಡ ಆಗೋ ವರಿಗೆ ಯಾವರೀತಿಯಿಂದಾಸೂ ಬರಿಸಿಕೊಳ್ಳಬಾರದು. ಹೀಗಿದ್ದು ಯಾರಾದರೂ ಖರೀದಿಯಾಗಲಿ ವತ್ತಿಯಾಗಲಿ ಇನ್ಯಾವ ರೀತಿ ಇಂದಾಸೇ ಆಗಲಿ ತೆಗೆದುಕೊಂಡರೆ ಅವರ ಕಡಿಂದಾ ನಮ್ಮ ಸೊಸಾಯಿಟಿ ಸಂಬಂಧಿ ಹಣವನ್ನು ವಸೂಲ್ಮಾಡಲಾಗುವದು ತಿಳಿಯುವದು ಈ ನೋಟೀಸಿನ ಖರ್ಚು ನಿಮ್ಮ ತಲೆಯಮೇಲಿರುತ್ತದೆ ತಿಳಿಯುವದು ತಾ. ೬-೪-೨೨

ವೆಂಕಟಾಪುರ ಕೋ| ಅ| ಕ್ರೆ| ಸೊಸಾಯಟಿ ಚೇರಮನ್ ಶಂಕರಗವಡರು ಹಿರೇಗೌಡ್ರ ಸಾ. ವೆಂಕಟಾಪುರ ಪೇಟಾ ಮುಂಡರಗಿ

ಈ ಪತ್ರವನ್ನು ಆಸ್ಪಾಚಾರ್ಯ ಜಾಲಿಹಾಳ ಯರ ಕೊಸಳೇರ ಇವರು ಧಾರವಾಡದಲ್ಲಿರುವ ತಮ್ಮ ವಾತಿರಾಮಕಿ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 144

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೬ | ಧಾರವಾಡ ಗುರುವಾರ ತಾರೀಖು ೯ನೇ ಎಪ್ರಿಲ ೧೯೩೫ (ಸಂಚಿಕೆ ೮೦

ಬೇಸಿಗೆ ಪ್ರಾರಂಭವಾಯಿತು!

ದನಗಳ ಆಹಾರವಾದ ಕಣಿಕೆಯನ್ನು ಕಾಯಿರಿ !!

ಕಿರ್ಲೋಸ್ಕರ ಕಣಿಕೆ ಯಂತ್ರವನ್ನು ಉಪಯೋಗಿಸಿರಿ !!!

ನಮ್ಮ ಕಾರ್ಖಾನೆಯಲ್ಲಿ ಎರಡು ನಮೂನೆಯ ಕಣಿಕೆ ಕೊರೆಯುವ ಯಂತ್ರಗಳು ತಯಾರಾಗುತ್ತವೆ. ಒಂದು ಕೈಯಂತ್ರ ಬೆಲೆ ೨೦ರೂ. ಇನ್ನೊಂದು ಗಾಲೀಯಂತ್ರ ಬೆಲೆ ೮೫ ರೂಪಾಯಿ ಸಣ್ಣ ಕಮತವುಳ್ಳವರು ಕೈ ಯಂತ್ರವನ್ನೂ, ದೊಡ್ಡ ಕಮತವುಳ್ಳವರು ಗಾಲೀ ಯಂತ್ರವನ್ನೂ ಉಪಯೋಗಿಸಬಹುದು. ಕಣಿಕೆಯು ४ ಇಂಚುಗಳಿಂದ ಒಂದು ಇಂಚಿನ ವರೆಗೆ ಕೊರೆಯಲ್ಪಡುತ್ತದೆ.

ಸವಿಸ್ತರ ಸಂಗತಿಯ ಬಗ್ಗೆ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ } ಕಿರ್ಲೋಸ್ಕರವಾಡಿ- ಜಿಲ್ಲಾ ಸಾತಾರಾ.

ಹುಸು ಕ್ರಮದಲ್ಲಿ ಮತ್ತು ಎರಡೇ ಆಣೆಯಲ್ಲಿ

ತಲೆಶೂಲೆ, ಅರತಲೆಶೂಲೆ, ಮಸ್ತಕ ಶೂಲೆಯು ಒಂದೇ ಕ್ಷಣದಲ್ಲಿ ನಿಂದಿಗೆಯಿಂದ

ಬಂದಾಗುವ ನಮ್ಮ

ಮೊಮೆಂಟ ಕ್ಯುಅರ

ನಮ್ಮ ಒಮ್ಮೆಯಾದರೂ ತರಿಸ್ರಿಕೊಳ್ಳಿರಿ. ಮೂರಾಣೆಯ ಟಿಕೇಟು ಕಳಿಸಿದರೆ ಸ್ಯಾಂಪಲ (ಮಾದರಿ) ಕಳಿಸುವೆವು.

ನಮ್ಮ ಔಷಧಾಲಯದಲ್ಲಿ ಡಾಕ್ಟರರ ಪ್ರಿಸ್ಕ್ರಿಪ್ಶನ್ ಪ್ರಕಾರ ಅತ್ಯಂತ ಕಾಳಜಿ ಮತ್ತು ದಕ್ಷತೆಯಿಂದ ಔಷಧವನ್ನು ತಯಾರ ಮಾಡಿ ಕೊಡುವೆವು. ದರ ತೀರ ಸುಲಭ.

ವಿಳಾಸ— ದಿ ಕರ್ನಾಟಕ ಮೆಡಿಕಲ ಸ್ಟೋರ್ಸ್, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ ಸ್ಟೇಶನರೋಡ ಹುಬ್ಬಳ್ಳಿ

ಮತ್ಸಲಿ ಪಟ್ಟಣದ ಹತ್ತರ ವೆಲ್ಲೂರಲ್ಲಿ ಒಬ್ಬ ಕ್ರಿಶ್ಚಿಯನನು ಹಗೆ ಮುಷ್ಟಿನ ಆಟದಲ್ಲಿಯಾಗಲು ಅಧಿಕ್ಷ್ಯ ಮಗನನ್ನು ಗುಂಡು ಹಾರಿ ಕೊಂದು, ನಂತರ ಹೊರೆಯಿಂದ ತಾನಿಗೆ ಅಯ್ಯುಕೊಂಡು ಆತ್ಮಹತ್ಯ ಮಾಡಿಕೊಂಡನು.

ಬೆಲಜಮ ದೇಶದಲ್ಲಿ ಪಾರ್ಲಮೆಂಟ ಸಭೆಯ ಚುನಾವಣೆ ನಡೆದಿರುತ್ತದೆ. ಉದಾರ ಮತವಾದಿಗಳೆಂಬ ಲಿಬರಲರು ಸೋಲುತ್ತಿದ್ದು, ಸೋಶಿಯಾಲಿಸ್ಟರೆಂಬ ಕೂಲಿಕಾರರ ಬಹುಮತವಾಗುತ್ತಿರುವದು.

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

—o—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ. ಅಂಕಲಗಿ ಬ್ಯಾಂಕ ಲಿಮಿಟೆಡ್

ಧಾರವಾಡ.

—o—

೧೯೧೩ ಇಸ್ವಿಯ

ಕಂಪನಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ಚಾಲೂ ಖಾತೆ, ಸೇವ್ಹಿಂಗ್ಸ ಡಿಪಾಜಿಟ, ಸಾಲ, ವತ್ತಿ. ಹುಂಡಿ, ಮುಂತಾದ ಯಾವತ್ತು ವ್ಯವಹಾರಗಳು ನಡಿಯುವವು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿಮಾಡುವವರಿಂದ ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ ರಿಂದ ೧೦-೩೦. ಸಾಯಂಕಾಲ ೩ ರಿಂದ ೬ ರವರೆಗೆ ನಡೆಯುವದು.

K.B. Ankalagi
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ

ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ, ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಿಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ

ಬಂಡಿಗೆಯು ಆರುಲಕ್ಷದ ಮೇಲಿದೆ. ಚೆಕ್ಕ, ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ನಡೆಯಲ್ಪಡುವದು. ಶಾಶ್ವತ ಮತ್ತು ಬೇರೆ ತರದ ಡಿಪಾಜಿಟುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಹಾಗೀರದಾರ,

ಮ್ಯಾನೇಜಿಂಗ ಡಾಯರೆಕ್ಟರ

ಆರ್. ಎಮ್. ಜೊನ್ ಎಂಡ ಸನ್ಸ ಹುಬ್ಬಳ್ಳಿ.

ಏಜಂಟ್ಸ್ ಫೋರ ಕಾರ್ಬೋನಿಕ್ ಆಸಿಡ್ ಗ್ಯಾಸ, ಮ್ಯಾನುಫ್ಯಾಕ್ಚರರ್ ಅಫ್ ಏರಿಟೆಡ ವಾಟರ್ಸ.



ತಾಂಬ್ರ ಅರ್ಧಾರ ಬೇಗ ಕಳಿಸಿರಿ

ನಮ್ಮಲ್ಲಿ ಸಿಗುವ ಸಾಮಾನುಗಳ ವಿವರ

ಫುಲ್‌ಗ್ಯಾಸ ಸಿಲೆಂಡರಗಳು ಇಂಗ್ಲೀಷ ಮತ್ತು ಜರ್ಮನ ಪೆಟೆಂಟ ಕಾಡ್ಸ, ಎಮ. ಪಿ ಸೋಡಾ ವಾಟರ ಬಾಟಲಗಳು, ೫೫೦ ನಂ. ಸಾಬು



ಆರ್ಡರಕ್ಕೆ ಬರೆಯಿರಿ

ರ್ನ ಡೆಬ್ಬಿ ೧ ಫೌಂಡೇಶನ್. ಸೋಡಾವಾಟರ್ ಮಶಿನುಗಳು ಮತ್ತು ಎಲ್ಲ ತರದ ಕಲರಿನ ಬಾಟಲಿಗಳ ಎಸನ್ಸಗಳು, ಅಮೆರಿಕನ್ ಐಸ್ಕ್ರೀಮ ಸೋಡಾ, ಬನಾನಾ, ಕೋಲಾಚಂಪೇಜನ್, ಲೆಮನ್ ನಂ. ೧ ಲೆಮನ್ ಜ್ಯೂಸ್ ಸೋಡಾ ನಂ. ೧ ಮೆಂಗೋ, ಅರೇಂಜ, ಫಾಯಿನಾಪಲ್, ಪಿಸ್ತಮಿಲಕ್, ಕ್ವಿನಿನ್ ಟಾನಿಕ್, ರಾಜಬೆರಿ ನಂ. ೧ ಕ್ರೀಮ ನಂ. ೧ ಸ್ಪೇಶಲ್ ಜಿಂಜರ್ ಬೀರ ನಂ. ೧, ರಬ್ಬರ್ ರಿಂಗ್ಸ್, ಟೆಸ್ ಟಾನಿಕ್ ಇತರ ಮಶಿನರಿ ಪಾರ್ಟುಗಳು ನಮ್ಮಲ್ಲಿ ಸಿಗುತ್ತವೆ. ಮತ್ತು ಶುದ್ಧ ಸೀಲಗಿರಿ ಎಣ್ಣೆಯು ಎಲ್ಲ ತರದ ಬಾಟಲ್ಲಗಳು ಸಿಗುತ್ತವೆ. ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಕೊಡುತ್ತೇವೆ. ನಮ್ಮಲ್ಲಿ ಕಬ್ಬಿಣದ ಮಿಲಿಟರಿ ಸಿಂಗಲ ಕಾಟ್ಸಗಳು ಸೋವಿ ದರದಿಂದ ಮಾರಲಿಕ್ಕೆ ಸಿಗುತ್ತವೆ.

ಅಡ್ರೆಸ್— R M. John &Sons.

Mission Compound HUBLI

ವಿಜಯ ಪುಸ್ತಕಾಲಯ

—೦—

೨೦ ನೇ ಶತಮಾನದ ಗೊಂದಲ	೧೦ ಆಣೆ
ಪವಿತ್ರ ಸಂಶಯ	೫ "
ಲೋಕ. ಟಿಳಕ ಚರಿತ್ರ	೪ "
ದೀನಬಂಧು ದಾಸರ ಚರಿತ್ರ	೨ "
ದೇಶಭಕ್ತರ ಸಂದೇಶಗಳು	೧ "

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧॥ ರೂಪಾಯಿಗೆ ಕೊಡುವೆವು. ವ್ಹಿ. ಪಿ. ಮತ್ತು ಟಪಾಲ ಖರ್ಚು ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ

ಧಾರವಾಡ

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಪಳಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಐದು ಆಣೆ ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ೬ ಆಣೆ ಡಬಲ್‌ಕಾಲಮಿನ ಒಳಗಳಿಗೆ ಇಮ್ಮಡಿ. ಖಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ವಿಜಯದ ವರ್ಗಣೀ ದರ

ನಿತ್ಯಪತ್ರಕ್ಕೆ

೧೨ ತಿಂಗಳಿಗೆ	೧೨—೦—೦ ರೂ
೬ "	೬—೦—೦ ರೂ
೩ "	೩—೦—೦ ರೂ
ವಾರಪತ್ರಿಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ, ಧಾರವಾಡ

ಜಾಹೀರಾತು.

—೦—

ಯಾವತ್ತು ಜನರಿಗೆ ಮತ್ತು ಕ್ಯಾರಕ್ಯಾಕೋಂ ಹನುಮಪ್ಪಾ ರೋಣದ ವ ವೀರಪ್ಪಾ ಬಸಪ್ಪಾ ರೋಣದ ಸಾ. ವೆಂಕಟಾಪುರ ಪೇಠಾ ಮುಂಡರಗಿ ಇವರಿಗೆ—

ಕೆಳಗೆ ಸಹಿ ಮಾಡಿದ ವೆಂಕಟಾಪುರ ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಿಟಿ ಚೇರಮನ್‌ರು ತಿಳಿಯಪಡಿಸುವದೇನಂದರೆ ಮೇಲೆ ಕಾಣಿಸಿದ ಹನುಮಪ್ಪಾ ತಂದಿ ವೀರಪ್ಪಾ ರೋಣದ ಸಾ. ವೆಂಕಟಾಪುರ ಈತನು ನಮ್ಮ ಸೊಸಾಯಿಟಿಯಲ್ಲಿ ಮೆಂಬರನಿದ್ದು ತನ್ನ ಗೃಹ ಕೃತ್ಯಕ್ಕೆ ದ ತಿಂ ದಾ ತಾರಣಕೊಟ್ಟು ವ ಜಾಮೀನು ಕೊಟ್ಟು ಎಸಿಕೆ ಹಣ ತೆಗೆದುಕೊಂಡಿರುತ್ತಾನೆ ಈಗ ಆತನು ಫೌತಿಯಾಗಿದ್ದು ಅವನ ಆಸ್ತಿಗೆ ನೀನೇ ಹಕ್ಕುದಾರರಾಗಿದ್ದು ನಿಮ್ಮ ನಿಮ್ಮೊಳಗೆ ಒಡಕು ಹುಟ್ಟಿ ಸೊಸಾಯಿಟಿ ಹಣ ಕೊಡದೆ ಯುಂಡನೇವವರಿಗೆ ಖರೀದಿ ಕೊಡೋ ಇರಾದೆಯಲ್ಲಿರುತ್ತೀರೆಂಬದಾಗಿ ತಿಳಿಯ ಬರುತ್ತದೆ ಕಾರಣ ಕೆಳಗೆ ಬರೆದ ಸ್ಥಾವರ ಆಸ್ತಿಯನ್ನು ಅಂದರೆ

ರಿ॥ ಸ॥ ನಂಬರು	ಎಕರೆ	ಕರಂ ರೂ.
೬೯೭	೧೭.೨೦	೧೭
೬೯೯	೧೪.೧೪	೧೪
೭೪೪	೨೩.೧೯	೨೭

ಈ ಪ್ರಕಾರ ಇರೋ ಆಸ್ತಿಗಳನ್ನು ನಮ್ಮ ಸೊಸಾಯಿಟಿ ಹಣಾ ಫೇಡ ಆಗೋ ವರಿಗೆ ಯಾರಿಗೂ ಖರೀದಿಯಾಗಲಿ ವತ್ತಿಯಾಗಲಿ ಕೊಡಬಾರದು. ಹಾಗೂ ಯಾರೂ ಸದರೀ ಮೇಲೆ ಬರೆದ ನಂಬರುಗಳನ್ನು ನಮ್ಮ ಸೊಸಾಯಿಟಿ ಹಣಾ ಫೇಡ ಆಗೋ ವರಿಗೆ ಯಾವರೀತಿಯಿಂದಾಗಲೂ ಬರಸಿಕೊಳ್ಳಬಾರದು. ಹೀಗಿದ್ದು ಯಾರಾದರೂ ಖರೀದಿಯಾಗಲಿ ವತ್ತಿಯಾಗಲಿ ಇನ್ಯಾವ ರೀತಿ ಇಂದಾನೇ ಆಗಲಿ ತೆಗೆದುಕೊಂಡರೆ ಅವರ ಕಡಿಂದಾ ನಮ್ಮ ಸೊಸಾಯಿಟಿ ಸಂಬಂಧಿ ಹಣವನ್ನು ವಸೂಲ ಮಾಡಲಾಗುವದೆಂದು ತಿಳಿಯುವದು ಈ ನೋಟೀಸಿನ ಖರ್ಚ ನಿಮ್ಮ ಸಲಿಯುವೇಲಿಯುತ್ತರೆ ತಿಳಿಯುವದು ತಾ. ೬-೪-೩೫

ವೆಂಕಟಾಪುರ ಕೋ॥ ಆ॥ ಕ್ರೆ॥ ಸೊಸಾಯಿಟಿ ಚೇರಮನ್ ಶಂಕರಗೌಡರು ಹಿರೇಗೌಡ್ರ ಸಾ. ವೆಂಕಟಾಪುರ ಪೇಠಾ ಮುಂಡರಗಿ

ಈ ಪತ್ರವನ್ನು ಆಸ್ಗಾಚಾರ್ಯ ಜಾಗೀರದಾರ ಕೊಪ್ಪಳ ಇವರು ಧಾರವಾಡದಲ್ಲಿರುವ ತಮ್ಮ ವಾಗ್ಭೂಷಣ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1447

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೬। ಧಾರವಾಡ ಗುರುವಾರ ತಾರೀಖು ೯ನೇ ಎಪ್ರಿಲ ೧೯೨೫ (ಸಂಚಿಕೆ ೮೦

ಬೇಸಿಗೆ ಪ್ರಾರಂಭವಾಯಿತು!

ದನಗಳ ಆಹಾರವಾದ ಕಣಿಕೆಯನ್ನು ಕಾಯಿರಿ !!

ಕಿರ್ಲೋಸ್ಕರ ಕಣಿಕೆ ಯಂತ್ರವನ್ನು ಉಪಯೋಗಿಸಿರಿ !!!

ನಮ್ಮ ಕಾರ್ಖಾನೆಯಲ್ಲಿ ಎರಡು ನಮೂನೆಯ ಕಣಿಕೆ ಕೊರೆಯುವ ಯಂತ್ರಗಳು ತಯಾರಾಗುತ್ತವೆ. ಒಂದು ಕೈಯಂತ್ರ ಬೆಲೆ ೨೦ರೂ. ಇನ್ನೊಂದು ಗಾಳೀಯಂತ್ರ ಬೆಲೆ ೮೫ ರೂಪಾಯಿ ಸಣ್ಣ ಕಮತವುಳ್ಳವರು ಕೈ ಯಂತ್ರವನ್ನೂ, ದೊಡ್ಡ ಕಮತವುಳ್ಳವರು ಗಾಳೀ ಯಂತ್ರವನ್ನೂ ಉಪಯೋಗಿಸಬಹುದು. ಕಣಿಕೆಯು ೪ ಇಂಚುಗಳಿಂದ ಒಂದು ಇಂಚಿನ ವರೆಗೆ ಕೊರೆಯಲ್ಪಡುತ್ತದೆ.

ಸವಿಸ್ತರ ಸಂಗತಿಯ ಬಗ್ಗೆ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ } ಕಿರ್ಲೋಸ್ಕರವಾಡಿ- ಜಿಲ್ಲಾ ಸಾತಾರಾ.

ಕುಸು ಕ್ರಮದಲ್ಲಿ ಮತ್ತು ಎರಡೇ ಆಣೆಯಲ್ಲಿ

ತಲೆಶೂಲೆ, ಅರತಲೆಶೂಲೆ, ಮಸ್ತಕ ಶೂಲೆಯು ಒಂದೇ ಕ್ಷಣದಲ್ಲಿ ನಿಂತುಗೆಯಿಸುವ

ಬಂಡಾಗುವ ನಮ್ಮ

ಮೊಮೆಂಟ ಕ್ಯೂಅರ

ನಮ್ಮ ಒಮ್ಮೆಯಾದರೂ ತಕ್ಕೊಳ್ಳಿರಿ. ಮೂರಾಣೆಯ ಟಿಕೀಟು ಕಳಿಸಿದರೆ ಸ್ಯಾಂಪಲ (ಮಾದರಿ) ಕಳಿಸುವೆವು

ನಮ್ಮ ಔಷಧಾಲಯದಲ್ಲಿ ಡಾಕ್ಟರರ ಪ್ರಿಸ್ಕ್ರಿಪ್ಷನ್ ಪ್ರಕಾರ ಅತ್ಯಂತ ಕಾಳಜಿ ಮತ್ತು ದಕ್ಷತೆಯಿಂದ ಔಷಧವನ್ನು ತಯಾರ ಮಾಡಿ ಕೊಡುವೆವು. ದರ ತೀರ ಸುಲಭ.

ವಿಳಾಸ— ದಿ ಕರ್ನಾಟಕ ಮೆಡಿಕಲ ಸ್ಟೋರ್ಸ್, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ ಸ್ಟೇಶನರೋಡ ಹುಬ್ಬಳ್ಳಿ

ಮದ್ರಾಸಿ ಪಟ್ಟಣದ ಹತ್ತರ ವೆಲ್ಲೂರಲ್ಲಿ ಒಬ್ಬ ಕ್ರಿಶ್ಚನನು ಈಚೆಗೆ ದುಷ್ಟನ ಅಟ್ಟಹಣಿಯಾಗಲು— ಅಧ್ಯಕ್ಷರ ಮಗನನ್ನು ಗುಂಡು ಹಾಕಿ ಕೊಂದು, ತಾನೂ ಬಂದೂಕಿನಿಂದ ತಾಲಿಗೆ ಬಯ್ದುಕೊಂಡು ಆತ್ಮಹತ್ಯ ಮಾಡಿಕೊಂಡನು.

ಬೆಲಜಮ ದೇಶದಲ್ಲಿ ಪಾರ್ಲಮೆಂಟ ಸಭೆಯ ಚುನಾವಣೆ ನಡೆದಿತ್ತು. ಉದಾರ ಮತವಾದಿಗಳೆಂಬ ಲಿಬರಲರು ಸೋಲುತ್ತಿದ್ದು, ಸೋಶಿಯಾಲಿಸ್ಟರೆಂಬ ಕಾಮಗಾರರ ಬಹುಮತವಾಗುತ್ತಿರುವದು.

ದಿ. ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

—o—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ. ಅಂಕಲಗಿ ಬ್ಯಾಂಕ ಲಿಮಿಟೆಡ್

ಧಾರವಾಡ.

—o—

೧೯೧೩ ಇಸ್ವಿಯ ಕಂಪನಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ಚಾಲೂ ಖಾತೆ, ಠೇವು, ಸೇವಿಂಗ್ಸದ ಡಿಪಾಜಿಟ, ಸಾಲ, ವರ್ತಿ, ಹುಂಡಿ, ಮುಂತಾದ ಯಾವತ್ತು ವ್ಯವಹಾರಗಳು ನಡಿಯುವವು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿಮಾಡುವವರಿಂದ ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ ರಿಂದ ೧೦-೩೦. ಸಾಯಂಕಾಲ ೩ ರಿಂದ ೬ ರವರೆಗೆ ನಡಿಯುವದು.

K.B. Ankalagi
ಮ್ಯಾನೇಜಿಂಗ ಡಾಯರೆಕ್ಟರ

ವಿಜಯ.

ಧಾರವಾಡ ತಾ- ೯-೪-೨೫ ನೇ ಇಸ್ವಿ

ರಾಜಕೀಯ ವಿಷಯವಾಗಿ ಹಿಂದುಸ್ಥಾನದ ವರ್ತಮಾನ ಸ್ಥಿತಿಯು.

—•—

ಲಾರ್ಡ ರೀಡಿಂಗ ಸಾಹೇಬರು ವಿಲಾಯತಿಗೆ ಹೋಗಿ, ಮರಳಿ ಬರುವಾಗ ಹಿಂದುಸ್ಥಾನಕ್ಕೆ ಎಂಥೆಂಥ ರಾಜಕೀಯ ಹಕ್ಕುಗಳನ್ನು ತರುವರೆಂಬ ವಿಚಾರವು ಪ್ರಸ್ತುತದಲ್ಲಿ ನಡೆದಿದೆ. ಲಾರ್ಡ ರೀಡಿಂಗ ಸಾಹೇಬರಿಗಾಗಿ ದಿಲ್ಲಿಯ ಬೇರೆ ಬೇರೆ ಖಾತೆಗಳು ಟಿಪ್ಪಣಿ ಮಾಡಿ ಕೊಟ್ಟದ್ದು ಅವುಗಳ ಸಾರಾಂಶವನ್ನು ಇನ್ನೊಂದು ಕಡೆಯಲ್ಲಿ ಮುದ್ರಿಸಿರುತ್ತೇವೆ. ಅದರಲ್ಲಿ ಮುದಿಮನ ಕಮಿಟಿಯ ವಿಚಾರವೇನಾಯಿತೆಂದು ಕೇಳುವಂತಾಗಿರುತ್ತದೆ. ಸಾಹೇಬರು ಈ ಕಮೀಟಿಯ ರಿಪೋರ್ಟಿನ ಮೇಲೆ ಉಪ ಮಂತ್ರಿಗಳ ಕೂಡ ಆಲೋಚನೆ ಮಾಡಿ, ಒಂದು ನಿಶ್ಚಯವಾದ ಮತ ಮಾಡಿಕೊಂಡು ವಿಲಾಯತಿಗೆ ಹೋಗದಿದ್ದರೆ- ಅಲ್ಪ ಸ್ವಲ್ಪಗಿ ದೊರೆಯುವ ಹಕ್ಕುಗಳು ಕೂಡ ದೊರೆಯಲಾರವೆಂದು ಹೇಳಬೇಕಾಗುತ್ತದೆ. ಲಾರ್ಡ ರೀಡಿಂಗ ಸಾಹೇಬರು ಹಿಂದುಸ್ಥಾನದ ಹಿತವನ್ನೇ ಬಯಸಿದರೂ, ಸ್ವದೇಶ ಮತ್ತು ಸ್ವಜನರ ಹಿತವು ಅವರ ಮುಂದೆ ಮೂರ್ತಿಮಂತವಾಗಿ ನಿಲ್ಲುವದೆಂಬದು ನಿಜವು. ಆದ್ದರಿಂದ ಈ ಸಮಯ ಸಾಧಿಸಿ ವಿಲಾಯತಿಗೆ ಒಂದು ಡೆಪ್ಯುಟೇಶನ ಕಳಿಸಬೇಕೆಂದು ಕಲವರೆನ್ನುವರು. ಡೆಪ್ಯುಟೇಶನವು ಯಾರದೆಂಬ ಪ್ರಶ್ನವು ಕೂಡಲೆ ಹೊರಡುತ್ತದೆ. ಅನಿಬಿಝಾಂಟಮ್ಮನವರೂ ರಾಮದಾಸ ಶ್ರೀನಿವಾಸ ಶಾಸ್ತ್ರಿಯವರೂ ಹೋದ ವರ್ಷ ವಿಲಾಯತಿಗೆ ಹೋಗಿ ಬಂದರು. ದೊಡ್ಡ ದೊಡ್ಡ ಸಾಹೇಬ ಜನರು ಇವರ ಸ್ವಾಗತ ಮಾಡಿ ಇವರ ಕೂಡ ಆದರದಿಂದ ಮಾತಾಡಿದರು. ಇವರ ಉದ್ದೇಶದ ದೆಸೆಯಿಂದ ಸಹಾನುಭೂತಿಯನ್ನು ತೋರಿಸಿದರು. ರಾಜಕೀಯ ಹಕ್ಕು ಕೊಡುವ ಮಾತು ಹೊರಟ ಕೂಡಲೆ, ನೀವಾರು? ಯಾರ ಪತಿಯಿಂದ ಪ್ರತಿನಿಧಿಯಾಗಿ ಬಂದಿರುತ್ತೀರೆಂಬ ಪ್ರಶ್ನ ಮಾಡಿದರು. ಈ ಪ್ರಶ್ನ ಮಾಡಿದವರು ಮಂತ್ರಿ ಮಂಡಲದವರೇ ಆಗಿದ್ದರು. ಅವರು ಈ ಪ್ರಕಾರ ಪ್ರಶ್ನ ಮಾಡುವದು ಸರಿಯಾಗಿತ್ತು. ಏಕೆಂದರೆ ಈ ದೇಶದಲ್ಲಿ ಒಕ್ಕಟ್ಟು ಇರಲಿಲ್ಲ. ಸ್ವರಾಜ್ಯ ಪಕ್ಷದಲ್ಲಿ ಕೂಡಿದ್ದ ಸ್ವತಂತ್ರರು ಸಹ ಅದಕಿಂತ ಒಡೆಯುವ ಹಂಚಿಕೆಯಲ್ಲಿದ್ದರು. ಮುಸಾಳ ಮತ್ತು ಅನಿಬಿಝಾಂಟ ಪಕ್ಷವನ್ನಂತೂ ಕೇಳತಕ್ಕವರೇ ಇರಲಿಲ್ಲ! ಈ ಪಕ್ಷ ಭೇದದ ಹೊರ್ತು ಹಿಂದೂ ಮುಸಲಮಾನ ಐಕ್ಯವು ಮುರಿದು ಮೂರಾಬಟ್ಟೆಯಾಗಿತ್ತು. ನೀವು ಅಧಿಕಾರ ಬೇಡತಕ್ಕವರು ಮೊದಲು ನಿಮ್ಮೊಳಗೆ ಐಕ್ಯವನ್ನು ಹುಟ್ಟಿಸಿಕೊಂಡು ಬನ್ನಿರೆಂದು ಅವರು ಅಂದದ್ದು ವಾಸ್ತವಿಕವಾದದ್ದೇ ಸೈ.

ಪ್ರತಿಯೊಂದು ದೇಶದಲ್ಲಿ ರಾಜಕೀಯ ಬಣಗಳಿರುತ್ತವೆ. ಇವೆಲ್ಲ ಒಂದಾಗಬೇಕೆಂದು ಹೇಳಿ, ಆ ಪರ್ಯಂತರ ಹಕ್ಕು ಕೊಡುವ ದಾರೀ ನೋಡಬೇಕೆಂಬದು ಹರಿಕೆ ಹನ್ನೆರಡು ವರ್ಷವೆಂಬಂತಾಗುತ್ತದೆ. ಇಂಗ್ಲಂಡವು ಹಿಂದುಸ್ಥಾನದಿಂದ ಯಾವದೊಂದು ಸಂಗತಿಯನ್ನು ಅಪೇಕ್ಷಿಸಿ, ಬಂದರೆ- ನೀವೆಲ್ಲರೂ ಒಂದಾದ ಬಳಿಕ ಉತ್ತರವೆಂದು ಹಿಂದುಸ್ಥಾನವು ಹೇಳಿದರೆ- ಆಗ ಇಂಗ್ಲಂಡಕ್ಕೆ ಹೇಗನಿಸುವದು? ರಾಜಕೀಯ ಬಣಗಳಲ್ಲಿ ಬಹುಮತವು ಹೇಗುಂಟೆಂಬದನ್ನು ಪರೀಕ್ಷಿಸಿ, ಆ ಬಣ ಮತ್ತು ಆ ಧೋರಣದ ಪ್ರಕಾರ ನಡೆಯುವದೇ ರಾಜ್ಯ ಲಕ್ಷಣವಾಗುತ್ತದೆ. ಬಹುಸಂಖ್ಯೆಯಿಂದ ಮತ್ತು ಲೋಕಮತವೆಂಬದರಿಂದ ಸ್ವರಾಜ್ಯ ಪಕ್ಷವೇ ನಿಜವಾದ ಪಕ್ಷವಾಗಿರುತ್ತದೆ. ಸರಕಾರವು ಈ ಪಕ್ಷದ ಕೂಡ ಸಂಧಿಯನ್ನು ಮಾಡಿಕೊಳ್ಳುವದೇ ಒಳಿತು. ಇದು ಸರಕಾರದ ಹಲವು ಠರಾವುಗಳನ್ನು ರದ್ದು ಮಾಡಿತು. ಮಾತು ಮಾತಿಗೆ ಕಾಯದೆ ಕಾನೂನುಗಳಿಗೆ ಅಡ್ಡಬಂದು ಅವನ್ನು ಪಾಸ ಮಾಡಗೊಡುವದಿಲ್ಲ. ಇದರ ಕೃತಿಯು ಜನತೆಗೆ ಒಪ್ಪಿಗೆಯಾಗಿದೆ. ಇದರ ಠರಾವಿನಿಂದಲೇ ಮುದಿಮನ ಕಮಿಟಿ ಕೂಡಿತು. ಆದ್ದರಿಂದ ಲಾರ್ಡ ಬರ್ಕನಹೆಡ್ಡ ಸಾಹೇಬರು ಮುದಿಮನ ಕಮಿಟಿಯ ಬಹುಮತದ ವಿಚಾರದಲ್ಲಿ ಮಗ್ನರಾಗುವ ಮುಂಚಿತವಾಗಿ ಕಮಿಟಿ ಏಕೆ ಕೂಡಿತು? ಯಾರ ಒತ್ತಾಯದಿಂದ ಕೂಡಿತೆಂಬ ವಿಚಾರ ಮಾಡಬೇಕು. ಈ ವಿಚಾರಕ್ಕೆ ಅಸ್ಪದ ಕೊಡದಿದ್ದರೆ- ಸ್ವರಾಜ್ಯ ಪಕ್ಷವು ಮತ್ತಿಷ್ಟು ಬಲಿತು, ಹೆಚ್ಚೆಚ್ಚಿಗೆ ವಿಘ್ನ ಬರಲಿಕ್ಕೆ ತಾವೇ ಕಾರಣರಾಗುವರೆಂಬದನ್ನು ಖಂಡಿತವಾಗಿ ತಿಳಿಯತಕ್ಕದ್ದು.

ಬ್ಯಾರಿಸ್ಟರ ಬ್ಯಾಪ್ಟಿಸ್ಟಾ ಸಾಹೇಬರು ನಡಿಯುವ ವರ್ಷದ ದೆಸೆಯಿಂದ ಮುಂಬಯಿ ಮ್ಯುನಸಿಪಾಲಿಟಿಯ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಮೇಯರ ನಿತಿಮರೆಂಬ ರಾಜನಿಷ್ಠರು ಇವರ ಪ್ರತಿಸ್ಪರ್ಧಿಯಾಗಿದ್ದರು ಆದರೆ ಇವರಿಗೆ ಬಹಳ ಕಡಿಮೆ ಮತಗಳು ಬಿದ್ದವು.

ಲಾರ್ಡ ರೀಡಿಂಗ ಸಾಹೇಬರ ಪ್ರಯಾಣ.

—೦—

ನಾಳಿನ ದಿವಸ ಲಾರ್ಡ ರೀಡಿಂಗ ಸಾಹೇಬರು ಲಾರ್ಡ ಬರ್ಕನಹೆಡ್ಡ ಸಾಹೇಬರ ಕೂಡ ಹಿಂದುಸ್ಥಾನದ ವರ್ತಮಾನ ರಾಜಕೀಯ ಪರಿಸ್ಥಿತಿಯನ್ನು ಕುರಿತು ವಿಚಾರ ಮಾಡಲು ವಿಲಾಯತಿಗೆ ಪ್ರಯಾಣ ಬೆಳೆಸುವರು. ಸಾಹೇಬರು ಅಲ್ಲಿ ಮಂತ್ರಿಗಳ ಕೂಡ ಯಾವ ಯಾವ ವಿಷಯಗಳನ್ನು ಕುರಿತು ಪ್ರಸ್ತಾಪ ಮಾಡಬೇಕೆಂಬ ವಿಷಯವಾಗಿ ಪ್ರತಿಯೊಂದು ಖಾತೆಯವರು ತಂತಮ್ಮ ಟಿಪ್ಪಣಿಗಳನ್ನು ಬರೆದು, ಇವರ ಕೂಡ ಕಳಿಸುವರು. ಡಾಯರ್ಕಿದ ಬ್ಯಾಳಿಕೆ, ಪಬ್ಲಿಕ ಸರ್ವೀಸ ಕಮಿಶನ, ಸರಹದ್ದಿನ ರಾಜನೀತಿ, ಹಣದ ವಿನಿಮಯ ಮುಂತಾದ ವಿಷಯಗಳು ಮುಖ್ಯವಾಗಿ ಚರ್ಚಿಸಲ್ಪಡುವವೆಂದು ಹೇಳುತ್ತಾರೆ. ಮುದಿಮನ ಕಮಿಟಿಯ ರಿಪೋರ್ಟು ಪ್ರಸಿದ್ಧವಾಗಿ ಎರಡು ತಿಂಗಳಾಯಿತು. ಆದರೂ ಈ ಬಗ್ಗೆ ಹಿಂದುಸ್ಥಾನ ಸರಕಾರದವರು ತಮ್ಮ ಮತ ನಿಶ್ಚಯ ಮಾಡಿಲ್ಲೆಂದು ಹೇಳುವರು. ಸರಕಾರದವರು ಇನ್ನೂ ಇಲಾಖೆ ಸರಕಾರಗಳ ಅಭಿಪ್ರಾಯ ಕೇಳಿಲ್ಲ. ಲಾರ್ಡ ರೀಡಿಂಗ ಸಾಹೇಬರು ವಿಲಾಯತಿಯಿಂದ ಮರಳಿ ಬಂದ ಬಳಿಕ, ಇದರ ವಿಚಾರವಾಗುವದೆಂದು ಒಂದು ಊಹೆ ಇರುತ್ತದೆ. ಅನ್ಯರಿಗೆ ತಮ್ಮ ಕೈಯೊಳಗಿನ ಅಧಿಕಾರ ಕೊಡಬೇಕಾದರೆ ಕಾಲಹರಣವೇ ಒಂದು ನೆವನ

ದೇವರು ಖಾದಿಯನ್ನೇ ಉಟ್ಟರು; ಮತ್ತು ತೊಟ್ಟರು.

—೦—

" ಜನರು ವಿಲಾಯತಿಯ ಅರಿವೆ ಧರಿಸಿದ್ದನ್ನು ಕಂಡು ನನಗೆ ದುಃಖವಾಗುತ್ತದೆ. ಶ್ರೀರಾಮ ಮತ್ತು ಸೀತೆಯು ಪರದೇಶದ ಅರಿವೆಯನ್ನು ಹೊರಲಿಲ್ಲ, ಕ್ರೈಸ್ತ ಅಥವಾ ಮಹಮದ ಪೈಗಂಬರರು ಖಾದಿಯ ಹೊರ್ತು ಎರಡನೆಯ ಬಟ್ಟೆ ಧರಿಸಲಿಲ್ಲ. ಕೃಷ್ಣ, ರಾಮ, ಕ್ರೈಸ್ತ, ಪೈಗಂಬರ ಝುರುಸ್ತರ ಮೊದಲಾದವರು ಖಾದಿಯ ಹೊರ್ತು ಇನ್ನೊಂದು ಬಟ್ಟೆಯನ್ನು ಹಾಕಲಿಲ್ಲ. ಆದ್ದರಿಂದ ನಿಮ್ಮ ದೇವರು ಮತ್ತು ನಿಮ್ಮ ಸತ್ಪುರುಷರು ತೋರಿಸಿಕೊಟ್ಟಂತೆ ನೀವಾದರೂ ವರ್ತಿಸಿ, ಖಾದಿಯನ್ನೇ ಧರಿಸಿರೆಂದು ಪಾರ್ಸಿ ಗೃಹಸ್ಥರಾದ ಶ್ರೀ. ಭಾಂಚಾ ಇವರು ಖಾದಿಯನ್ನು ಹೆಗಲಿಗೆ ಹಾಕಿ, ಊರೂರಿಗೆ ಅದರ ಪ್ರಸಾರ ಮಾಡುತ್ತಾ ದೇಶಾಟನ ಮಾಡುತ್ತಿದ್ದಾರೆ.

ಸಹಕಾರ ಅಶಕ್ಯ.

—೦—

ಲಾರ್ಡ ಬರ್ಕನಹೆಡ್ಡ ಮತ್ತು ದೇಶಬಂಧು ದಾಸರ ನಡುವೆ ಸಹಕಾರದ ಶಕ್ಯಾಶಕ್ಯತೆಯ ವಿಷಯವಾಗಿ ಮಾತು ನಡೆದಿರುವಾಗ ಸ್ವರಾಜ್ಯ ಪಕ್ಷದ ಒಬ್ಬ ಧುರೀಣರಾದ ಬಾಬೂ ನಲಿನೀರಂಜನ ಸರಕಾರರೆಂಬವರು ಸಹಕಾರವು ಅಶಕ್ಯವೆಂದು ಹೇಳಿ ಅದಕ್ಕೆ ತಕ್ಕ ಕಾರಣ ಹೇಳಿದ್ದಾರೆ. ಯುರೋಪಿಯನ ವರ್ತಕರು ವ್ಯಾಪಾರದ ಆಶೆಯಿಂದ ಸ್ವಾರವಾದಿ ಅಥವಾ ಗುಜ್ಜರ ಕೂಡ ಸಹಕಾರ ಮಾಡಬಹುದು. ಆದರೆ ರಾಜ್ಯಕರ್ತರೆಂದು ಸಿವ್ಹಿಲ ಸರ್ವಂಟರು ಸಹಕಾರ ಮಾಡುವದು ಅಶಕ್ಯ. ಏಕೆಂದರೆ- ಗೌರಕಾಯಸ್ಥರು ಆಳುವವರು ಮತ್ತು ನಾವು ಆಳಲ್ಪಡತಕ್ಕ ಪ್ರಜರಾಗಿದ್ದೇವೆ. ಇವರು ಜಗತ್ತಿನಲ್ಲಿ ತಮ್ಮ ಪ್ರಭುತ್ವ ಹಾಗು ಶ್ರೇಷ್ಠತ್ವವನ್ನು ಸ್ಥಿರಗೊಳಿಸತಕ್ಕವರಾಗಿದ್ದು ಇಂಥವರು ಹಿಂದೂ ಜನರನ್ನು ತಮ್ಮ ಸರೀಕರಾಗಿ ತಿಳಿಯುವದು ಅಸಂಭವವೆಂದು ಇವರು ಅಂದಿದ್ದಾರೆ. ಈ ಮಾತು ಬಹ್ವಂಶವಾಗಿ ಸತ್ಯವಾಗಿರುತ್ತದೆ.

ಮದ್ರಾಸದಲ್ಲಿ ಬ್ರಾಹ್ಮಣರ ಅಖಿಲಭಾರತೀಯ ಸಭೆ.

—೦—

ಧಾರವಾಡದಲ್ಲಿ ಒಂದು ಬ್ರಾಹ್ಮಣ ಸಭೆಯನ್ನು ಸ್ಥಾಪಿಸುವ ವಿಷಯವಾಗಿ ನಡೆದ ಪ್ರಯತ್ನದ ಪ್ರಕಟನಾ ಪತ್ರಿಕೆಯನ್ನು ಈ ಮೊದಲು ಪ್ರಸಿದ್ಧ ಮಾಡಿದ್ದೇವೆ. ಈ ಸಭೆಯ ಮುಖ್ಯ ಉದ್ದೇಶವು ಬ್ರಾಹ್ಮಣರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವದೇ ಆಗಿರುತ್ತದೆ. ಮದ್ರಾಸದಲ್ಲಿಯೂ ಬ್ರಾಹ್ಮಣರ ಅವನತಿಯನ್ನು ಹೋಗಲಾಡಿಸುವ ಕುರಿತು ಒಂದು ಮಹಾಸಭೆಯು ಏರ್ಪಾಡು ಮಾಡುವ ಕುರಿತು ಅಸೆಂಬ್ಲಿಯ ಮೆಂಬರರಾದ ಶ್ರೀ. ಎಮ್, ಕೆ. ಆಚಾರ್ಯರ ಅಧ್ಯಕ್ಷತೆಯಲ್ಲಿ ಒಂದು ಸಭೆಯು ಕೂಡಿತ್ತು. ಈ ಸಭೆಯವರು ವರ್ಣಾಶ್ರಮಧರ್ಮದಲ್ಲಿ ಪೂರ್ಣ ನಂಬಿಗೆಯುಳ್ಳವರಾಗಿದ್ದಾರೆ. ಪರದಾಸ್ಯ ವೃತ್ತಿಯಿಂದಲೇ ಬ್ರಾಹ್ಮಣರು ಇಂಥ ಅವನತಿ ಹೊಂದಿದ್ದಾರೆ. ಅವರ ಪೂರ್ವದ ತಪಸ್ಸು, ಜ್ಞಾನ, ವೈರಾಗ್ಯ, ಪಾವಿತ್ರ್ಯ ಮತ್ತು ಸತ್ಯಸಂಧತೆಯನ್ನು ಪುನಃ ದೊರಕಿಸಿ ಕೊಡುವಂತೆ ಪ್ರಯತ್ನಿಸುವದೇ ಸಭೆಯ ಮುಖ್ಯೋದ್ದೇಶವು. ಬ್ರಾಹ್ಮಣರಲ್ಲುಂಟಾಗಿರುವ ಉಪಭೇದಗಳನ್ನು ಸಾಮಾನ್ಯವಾಗಿ ಭಾವಿಸಿ, ಬ್ರಾಹ್ಮಣತ್ವದ ಪೆಟ್ಟಳವಾಗುವಂತೆ ಎಲ್ಲ ಬ್ರಾಹ್ಮಣರು ತನು, ಮನ, ಧನದಿಂದ ಪ್ರಯತ್ನಿಸಬೇಕೆಂದು ಸಭೆಯ ಮತವಾಗಿದೆ.

ಬಾವಲಾ ಪ್ರಕರಣದೊಳಗಿನ ಆರೋಪಿಗಳ ಜವಾಬು.

—೦—

ಫೊಂಡೆ ಅಂದಡ್ಡು— ನನ್ನ ಮೇಲೆ ಆರೋಪಿಸಿದ್ದರ ವಿಷಯವಾಗಿ ನನಗೇನೂ ಗೊತ್ತಿಲ್ಲ. ಇದು ಪೂರಾ ಸುಳ್ಳು ಆರೋಪವಿರುತ್ತದೆ.

ಬಹಾದ್ದೂರಶಾ— ದಿಸೆಂಬರ ೩೧ ನೆಯ ತಾರೀಖಿನಿಂದ ನಾನು ಆಜಾರಿ ಇದ್ದೆನು. ನನ್ನ ವಕೀಲರ ಮುಖಾಂತರ ಪುರಾವೆ ಹಾಜರ ಮಾಡುವೆನು.

ಅಕಬರಶಾ- ಗುನ್ಹೆಯಾದ ದಿವಸ ನಾನು ಇಂದೂರಲ್ಲಿದ್ದೆನು. ಅಂದು ಇಂದೂರು ಬಿಟ್ಟು ಹೊರಗೆ ಹೋಗಿದ್ದಿಲ್ಲ.

ಶಫಿ— ನನ್ನ ವಕೀಲರನ್ನು ಕೇಳದೆ ನಾನು ಯಾವ ಜವಾಬು ಕೊಡಲಾರೆನು. ಗುನ್ಹೆಯ ಮೊದಲು ಮತ್ತು ಹಿಂದುಗಡೆಯ ತಾರೀಖುಗಳಲ್ಲಿ ನಾನು ಇಂದೂರದಲ್ಲಿಯೇ ಇದ್ದೆನು

ವ ಮತಂಜ ಮಹಮದ— ಆರೋಪ ಪೂರಾ ಸುಳ್ಳದೆ. ನಾನು ಇಂದೂರಲ್ಲಿದ್ದಂತೆ ಪುರಾವೆ ಹಾಜರ ಮಾಡುವೆನು

ಅಬ್ದುಲ ಲತೀಫ— ನಾನು ಶೀಕ ಇದ್ದೆನು. ಇಂದೂರಲ್ಲಿದ್ದೆನು. ಇಂದೂರು ಬಿಟ್ಟು ಎಲ್ಲಿಯೂ ಹೋಗಲಿಲ್ಲ.

ಕರಮುತಖಾನ— ಗುನ್ಹೆಯಾಗುವ ಮೊದಲು ನನ್ನ ಕಾಲಿಗೆ ಘಾಯವಾಯಿತು. ಈ ಕಾಲಿಗೆ ಎಲ್ಲಿ ಉಪಚಾರವಾಯಿತೆಂಬದನ್ನು ತೋರಿಸುವೆನು. (ಗುಂಡಿನಿಂದಲೇ ಘಾಯವಾಗಿದೆಂದು ಬ್ಯಾರಿಸ್ಟರ ಕೆಂಪನಾಹೋಬರು ಅಂದರು,)

ಧರ್ಮಾದಾಯ ದೇವಾದಾಯ ಕಮಿಟಿಯ ಪಂಚರು.

—೦—

ಮದ್ರಾಸ ಸರಕಾರದವರು ಕೆಳಗಿನ ಗೃಹಸ್ಥರನ್ನು ದೇವಾದಾಯ ಧರ್ಮಾದಾಯ ಕಮಿಟಿಯ ಪಂಚರಾಗಿ ನೇಮಿಸಿದ್ದಾರೆ.

ಅಧ್ಯಕ್ಷ- ಸರ ಸದಾಶಿವ ಅಯ್ಯರ,

ಮೆಂಬರರು-

೧ ಮಿ. ಆರ ಸೂರ್ಯರಾವ.

೨ ಮಿ. ಚಿದಂಬರ ಪಿಳ್ಳೆ

೩ ಮಿ. ರಾಂಗಯ್ಯಾ ಪಂತಲು

೪ ಮಿ. ನಟರಾಜ ಮೊದ್ಲಿಯಾರ

ಇವರಲ್ಲಿ ಮೂರನೆಯವರು ಬ್ರಾಹ್ಮಣರಾಗಿದ್ದಾರೆ. ಅಧ್ಯಕ್ಷರ ಸಂಬಳವು ತಿಂಗಳಿಗೆ ೧೨೦೦ ರೂಪಾಯಿ. ಮೆಂಬರರ ಸಂಬಳವು ಏಳು ನೂರರಿಂದ ೮೦೦ ರ ವರೆಗೆ.

ದೇವಾದಾಯ ಧರ್ಮಾದಾಯ ಕಮಿಟಿಯ ಮುಖಾಂತರವಾಗಿ ದೇವಸ್ಥಾನಗಳ ಸುಧಾರಣೆಯಾಗುವದೆಂದೆಣಿಸಿಯಲ್ಲಿರಲಿ; ಸದ್ಯದಲ್ಲಿ ಪಂಚರ ಸಂಬಳ ಅವರ ಪ್ರವಾಸದ ಭತ್ತೆ, ಕಚೇರಿ ಕಾರಕೂನರ ಸಂಬಳ ಮುಂತಾದ್ದಕ್ಕಾಗಿ ವರ್ಷಕ್ಕೆ ಒಂದು ಲಕ್ಷ ರೂಪಾಯಿ ಕೈಬಿಡುವದು ನಿಜ.

ನೂಲುವದರಲ್ಲಿ ನಿಷ್ಣಾತಳು.

—೦—

ಬಂಗಾಲದಲ್ಲಿ ಶ್ರೀ ಆಶುತೋಷ ಚಕ್ರವರ್ತಿಯವರ ಚಿಕ್ಕ ಮಗಳಾದ ಕುಮಾರಿ ಅಪರ್ಣಾದೇವಿಯು ನೂಲುವದರಲ್ಲಿ ಪೂರ್ಣ ನಿಷ್ಣಾತಳಾಗಿದ್ದಾಳೆ. ಮಹಾತ್ಮರು ಇವಳ ಕೌಶಲ್ಯ ನೋಡಿ, ಇವಳಿಗೆ ಸ್ವತಃ ಅಭಿನಂದನ ಮಾಡಿದ ಪತ್ರ ಬರೆದುದಲ್ಲದೆ, ಯಂಗ ಇಂಡಿಯಾ ಪತ್ರದಲ್ಲಿ ಬಹುವಾಗಿ ಇವಳ ಪ್ರಶಂಸೆ ಮಾಡಿದ್ದಾರೆ. ಇವಳು ವಿದ್ವತ್ತೆಯಲ್ಲಿ ಸಾಮಾನ್ಯಳಾಗಿಲ್ಲ. ಕಾವ್ಯದಲ್ಲಿ ಪೂರ್ಣ ಗತಿ ಹೊಂದಿದ್ದು, ವೇದಾಂತದ ಪರೀಕ್ಷೆಗೆ ಕೂತಿದ್ದಳೆ.

ಅಮೇರಿಕೆಯಲ್ಲಿ ಹತ್ತು ಸಾವಿರ ವರ್ಷಗಳ ಹಿಂದೆ ಭೂಗತವಾದಂಥ ಒಂದು ಪಟ್ಟಣ ಸಿಕ್ಕಿದೆ. ಇದು ಒವ್ಹರ್ಟನ ಎಂಬ ಹೊಳೆಯ ಹತ್ತರ ಆರು ಮೈಲು ಉದ್ದವಾಗಿ ಹಬ್ಬಿದ್ದಿರುತ್ತದೆ.

ಹೆಂಗಸಿನ ದೆಸೆಯಿಂದ ಕಾಬೂಲದಲ್ಲಿ ಜರ್ಮನಿಯ ಒಬ್ಬ ವೈಮಾನಿಕನು ಕೊಲ್ಲಲ್ಪಟ್ಟನು.

ಜರ್ಮನಿಯ ಪದಚ್ಯುತ ಯುವರಾಜನು ಯಾರು ಮೊದಲು ಮಹಾಯುದ್ಧ ಪ್ರಾರಂಭ ಮಾಡಿದರೆಂದು ಪುಸ್ತಕವನ್ನು ಬರೆಯುತ್ತಿದ್ದಾನೆ.

ಈಗಿನ ದೇಶಾಂತರವಾಸಿಯಾದ ಇರಾಣದ ಶಹಾನ ದೇಶಾಂತರವಾಸಿಯಾದ ತಂದೆಯು ಇಟಲಿಯಲ್ಲಿ ಪರಲೋಕವಾಸಿಯಾದನು.

ಜನರಲ ಹಿಂಡೆನಬರ್ಗರಿಗೆ ಜರ್ಮನಿಯ ಅಧ್ಯಕ್ಷರಾಗಲು ಬಿನ್ನಹ ಮಾಡಿಕೊಂಡರು. ಡಾಕ್ಟರ ಜೆರ್ರ ಸಾಹೇಬರ ವಿರುದ್ಧ ತಾವು ನಿಲ್ಲುವದಿಲ್ಲೆಂದು ಇವರು ಉತ್ತರ ಕೊಟ್ಟರು.

ಪ್ರಾಥಮಿಕ ಶಾಲೆಗಳಲ್ಲಿ [illegible] ಕೊಡಬೇಕೆಂದು ಮಂಗಳೂರ ತಾಲೂಕ ಲೋಕಲ ಬೋರ್ಡಿನವರು ಠರಾವು ಮಾಡಿದ್ದಾರೆ.

ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ, ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೋಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಆರುಲಕ್ಷದ ಮೇಲುಂಟು. ಚೆಕ್ಕ, ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ಮಾಡಲ್ಪಡುವವು. ಕಾಯಮು ಮತ್ತು ಬೇರೆ ತರದ ಡಿಪಾಜಿಟುಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ಆರ್. ಎಮ್. **ಜ್ಹೋನ್ ಎಂಡ ಸನ್ಸ.** ಹುಬ್ಬಳ್ಳಿ.

ಎಜಂಟ್ಸ ಫೋರ ಕಾರಬೋನಿಕ್ ಅಸಿಡ್ಡ ಗ್ಯಾಸ, ಮ್ಯಾನುಫ್ಯಾಕ್ಚರರ್ ಆಫ್ ಎರೆಟೆಡ ವಾಟರ್ಸ.

ನಮ್ಮಲ್ಲಿ ಸಿಗುವ ಸಾಮಾನುಗಳ ವಿವರ.

ಫುಲ್‌ಗ್ಯಾಸ ಸಿಲಿಂಡರಗಳು ಇಂಗ್ಲೀಷ ಮತ್ತು ಜರ್ಮನ ಎಪೆಟೆಂಟ ಕಾಡ್ಸ, ಎಮ. ಟಿ. ಸೋಡಾ ವಾಟರ ಬಾಟಲಿಗಳು, ೫೯೦ ನೇ. ಸಾ



ಲೀನ ಡಿಪ್ಪಿ ೧ ಸಾಂಖನ್ನು. ಸೋಡಾವಾಟರ್ ಮಶಿನುಗಳು ಮತ್ತು ಎಲ್ಲ ತರದ ಕಲರಿನ ಬಾಟಲಿಗಳ ಎಸನ್ಸಗಳು, ಅಮೆರಿಕನ್ ಆಯಿಸ್ಕ್ರೀಮ ಸೋಡಾ, ಬನಾನಾ, ಕೋಲಾಚೆಂಪೇಜನ್, ಲೆಮನ್ ನಂ. ೧ ಲೆಮನ್ ಜುಯಿಸ್ ಸೋಡಾ ನಂ. ೧ ಮೆಂಗೋ, ಆರೇಂಜ, ಫಾಯಿನಾಪಲ್, ಮಿಕ್ಸಮಿಲಕ್, ಕ್ವಿನಿನ್ ಟಾನಿಕ್, ರಾಜಬೆರಿ ನಂ. ೧ ರೋಜ ನಂ. ೧ ಸ್ಟ್ರೋನ್ ಜಿಂಜರ್ ಬೀರ ನಂ. ೧, ರಬ್ಬರ್ ರಿಂಗ್ಸ್, ಬೇಸ ಇತರ ಮಿಶಿನು ಪಾರ್ಟುಗಳು ನಮ್ಮಲ್ಲಿ ಸಿಗುತ್ತವೆ. ಮತ್ತು ಶುದ್ಧ ನೀಲಗಿರಿ ಎಣ್ಣೆಯ ಎಲ್ಲ ತರದ ಬಾಟಲ್ಲಗಳು ಸಿಗುತ್ತವೆ. ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಕೊಡುತ್ತೇವೆ. ನಮ್ಮಲ್ಲಿ ಕಪ್ಪಿಣದ ಮಿಲಿಟರಿ ಸಿಂಗಲ ಕಾಟ್ಸಗಳು ಸೋವಿ ದರದಿಂದ ಮಾರಲಿಕ್ಕೆ ಸಿಗುತ್ತವೆ.

ಅಡ್ರೆಸ್— R. M. John &Sons.
Mission Compound HUBLI

ವಿಜಯ ಪುಸ್ತಕಾಲಯ

—೦—

೨೦ ನೇ ಶತಮಾನದ ಗೊಂದಲ	೧೦ ಆಣೆ
ವಿಚಿತ್ರ ಸಂಶಯ	೫ "
ಲೋ. ಟಿಳಕರ ಚರಿತ್ರ	೪ "
ದೇಶಬಂಧು ದಾಸರ ಚರಿತ್ರ	೨ "
ದೇಶಭಕ್ತರ ಸಂದೇಶಗಳು	೧ "

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧। ರೂಪಾಯಿಗೆ ಕೊಡುವೆವು. ವ್ಹಿ. ಪಿ. ಮತ್ತು ಟಪಾಲ ಖರ್ಚು ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ
ಧಾರವಾಡ

ದಿ. ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ. ಅಂಕಲಗಿ ಬ್ಯಾಂಕ ಲಿಮಿಟೆಡ್
ಧಾರವಾಡ.

—೦—

೧೯೧೬ ಇಸ್ವಿಯ
ಕಂಪನಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ಚಾಲೂ ಖಾತೆ, ಠೇವು, ಸೆವ್ಹಿಂಗ್ಸದ ಡಿಪಾಜಿಟ, ಸಾಲ, ವತ್ತಿ, ಹುಂಡಿ, ಮುಂತಾದ ಯಾವತ್ತು ವ್ಯವಹಾರಗಳು ನಡೆಯುವವು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿಮಾಡುವವರಿಂದ ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ ರಿಂದ ೧೧-೩೦. ಸಾಯಂಕಾಲ ೩ ರಿಂದ ೬ ರವರೆಗೆ ನಡೆಯುವದು.

K.B . Ankalagi
ಮ್ಯಾನೇಜಿಂಗ ಡಾಯರೆಕ್ಟರ

ನೋಟೀಸಿನ ದರಗಳು.

—೦—

ಸಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದುವರಿ ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಐದು ಆಣೆ ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ರು ಆಣೆ ಡಬಲ್‌ಕಾಲಮಿನ ಒಳಿಗಳಿಗೆ ಇಮ್ಮಡಿಚಾರ್ಜು ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ವಿಜಯದ ವರ್ಗಣೀ ದರ

—೦—

ವಿಶ್ವಪತ್ರಕ್ಕೆ

೧೨ ತಿಂಗಳಿಗೆ		೧೨—೮—೦ ರೂ
೬	,,	೬—೦—೧ ರೂ
೩	,,	೪—೦—೦ ರೂ
ವಾರಪತ್ರಕ್ಕೆ ೧ ವರ್ಷಕ್ಕೆ		೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ, ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ನಿತ್ಯ ಪತ್ರ **ವಿಜಯ** ಬೆಲೆ ಅರ್ಧ ಆಣೆ

ಸಂಪಾದಕರು— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೬) ಧಾರವಾಡ ಶುಕ್ರವಾರ ತಾರೀಖು ೧೦ನೇ ಏಪ್ರಿಲ ೧೯೩೬ (ಸಂಚಿಕೆ ೮೧

ಬೇಸಿಗೆ ಪ್ರಾರಂಭವಾಯಿತು!

ದನಗಳ ಆಹಾರವಾದ ಜಣಿಕೆಯನ್ನು ಕಾಯಿರಿ !!

ಕಿರ್ಲೋಸ್ಕರ ಕಣಿಕೆ ಯಂತ್ರವನ್ನು ಉಪಯೋಗಿಸಿರಿ !!!

ನಮ್ಮ ಕಾರ್ಖಾನೆಯಲ್ಲಿ ಎರಡು ನಮೂನೆಯ ಕಣಿಕೆ ಕೊರೆಯುವ ಯಂತ್ರಗಳು ತಯಾರಾಗುತ್ತವೆ. ಒಂದು ಕೈಯಂತ್ರ ಬೆಲೆ ೨೦ರೂ. ಇನ್ನೊಂದು ಗಾಲೀಯಂತ್ರ ಬೆಲೆ ೮೫ ರೂಪಾಯಿ ಸಣ್ಣ ಕಮತವುಳ್ಳವರು ಕೈ ಯಂತ್ರವನ್ನೂ, ದೊಡ್ಡ ಕಮತವುಳ್ಳವರು ಗಾಲೀ ಯಂತ್ರವನ್ನೂ ಉಪಯೋಗಿಸಬಹುದು. ಕಣಿಕೆಯು ೪ ಇಂಚುಗಳಿಂದ ಒಂದು ಇಂಚಿನ ವರೆಗೆ ಕೊರೆಯಲ್ಪಡುತ್ತದೆ.

ಸವಿಸ್ತರ ಸಂಗತಿಯ ಬಗ್ಗೆ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ } ಕಿರ್ಲೋಸ್ಕರವಾಡಿ. ಜಿಲ್ಲಾ ಸಾತಾರಾ.

ಕುಸು ಕ್ರಮದಲ್ಲಿ ಮತ್ತು ಎರಡೇ ಆಣೆಯಲ್ಲಿ

ತಲೆಶೂಲೆ, ಅರತಲೆಶೂಲೆ, ಮಸ್ತಕ ಶೂಲೆಯು ಒಂದೇ ಕ್ಷಣದಲ್ಲಿ ನಿಂತುಗೆಯಿಂದ

ಬಂದಾಗುವ ನಮ್ಮ

ಮೊಮೆಂಟ ಕ್ಯುಅರ

ನಮ್ಮ ಒಮ್ಮೆಯಾದರೂ ತರಿಸಿಕೊಳ್ಳಿರಿ. ಮೂರಾಣೆಯ ಟಿಕೇಟು ಕಳಿಸಿದರೆ ಸ್ಯಾಂಪಲ (ಮಾದರಿ) ಕಳಿಸುವೆವು.

ನಮ್ಮ ಔಷಧಾಲಯದಲ್ಲಿ ಡಾಕ್ಟರರ ಪ್ರಿಸ್ಕ್ರಿಪ್ಸನ್ ಪ್ರಕಾರ ಅತ್ಯಂತ ಕಾಳಜಿ ಮತ್ತು ದಕ್ಷತೆಯಿಂದ ಔಷಧವನ್ನು ತಯಾರ ಮಾಡಿ ಕೊಡುವೆವು. ದರ ತೀರ ಸುಲಭ.

ವಿಳಾಸ— ದಿ ಕರ್ನಾಟಕ ಮೆಡಿಕಲ ಸ್ಟೋರ್ಸ, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ ಸ್ಟೇಶನರೋಡ ಹುಬ್ಬಳ್ಳಿ

ಸಾಂಗಲಿಯಲ್ಲಿ ಆರೋಗ್ಯ ಸಂವರ್ಧಕ ಮಂಡಳ ಎಂಬ ಸಂಸ್ಥೆಯುಂಟು. ಇದರ ವಿದ್ಯಮಾನ ವ್ಯಾಯಾಮದ ಪಂದ್ಯ ನಡೆಯಿತು. ಕಿರ್ಲೋಸ್ಕರ ವಾರ್ತೆಯ ಪ್ರಕಾಶಕರಾದ ಶ್ರೀ ಬಾಗಲ ಇವರ ಅಧ್ಯಕ್ಷತೆಯಲ್ಲಿ ಸಮಸ್ಕಾರದ ಪಂದ್ಯದಲ್ಲಿ ಸೇರಿ: ಇನಾಮು ಪಡೆದರು.

ಶಿದ್ದಾಪೂರ ತಾಲೂಕ ಕಿಲಾರ ಗ್ರಾಮ ನಿವಾಸಿಯಾದ ಶ್ರೀ ಗಣೇಶ ಹೆಗಡೆಯವರು ಸ್ವದೇಶೀ ಸಕ್ಕರೆಯ ಕಾರಖಾನೆಯನ್ನು ಇಟ್ಟಿದ್ದಾರೆ. ಇದು ಮಣಕ್ಕೆ ಪರದೇಶೀ ಸಕ್ಕರೆಗಿಂತ ನಾಲ್ಕಾಣೆ ಅಗ್ಗವಾಗಿ ತಮ್ಮ ಸಕ್ಕರೆಯನ್ನು ಮಾರಲಿಕ್ಕೆ ಕೊಡುವರು.

ಊದಬತ್ತಿಗಳು.

—೦—

ನಮ್ಮಲ್ಲಿ ಎಲ್ಲಾ ವಿಧವಾದ ಊದುಬತ್ತಿಗಳು ಸೇರು ೧ಕ್ಕೆ ೧-೦-೦ ದಿಂದಾಯಿತು ೨೪ರೂ ವರೆಗೆ ಅರಗಜ ಬಳ್ಳ, ಪನ್ನೀರು, ಶೃಂಗಾರು ತೈಲ, ದಶಾಂಗ, ಇವೇ ಮುಂತಾದ ಸುಗಂಧ ದ್ರವ್ಯಗಳು ಸುಲಭ ಕ್ರಯಕ್ಕೆ ದೊರೆಯುತ್ತವೆ ಬೇಕಾದವರು ನಮಗೆ ಆರ್ಡರ್ ಕೊಟ್ಟು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಬಿ. ಎಲ್. ಉಪಾಧ್ಯಾಯ ಆ್ಯಂಡ ಸನ್ಸ. ಸುಗಂಧಾಧಿಕಾರಿ ಮೈಸೂರ.

ಕುಲಕರ್ಣಿ ಸನ್ಸ ಕಂಪನಿ ಇವರ ೩, ೪, ೬, ೮, ಎತ್ತಿನ ೪ ಪ್ರಕಾರದ

ವತನದಾರ ರೆಂಟೆಗಳು.



ಹೆಚ್ಚಿನ ಮಾಹಿತಿ ಬಗ್ಗೆ ಕ್ಯಾಟಲಾಗ ತರಿಸಿಕೊಳ್ಳಿರಿ

ಕುಲಕರ್ಣಿ ಸನ್ಸ ಕಂಪನಿ ಕಿಲ್ಲೆ ಧಾರವಾಡ

ಚಂದಾದಾರರಿಗೆ ಸೂಚನೆ.

—೦—

೧೯೩೬ನೆಯ ಹೊಸ ವರ್ಷಪ್ರಾರಂಭವಾಗಿದ್ದು. ನಡೆಯುವ ತಿಂಗಳದ ಬಗ್ಗೆ ನಿತ್ಯ ಮತ್ತು ವಾರಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸಲಿಕ್ಕೆ ಪ್ರಾರಂಭಿಸುವೆವು. ಚಂದಾದಾರರು ವ್ಹಿ. ಪಿ. ಯನ್ನು ಸ್ವೀಕರಿಸಿ, ವಿಜಯವನ್ನು ಈ ಮೊದಲಿನಂತೆ ಪ್ರೋತ್ಸಾಹಿಸುವರೆಂದು ಆಶಿಸುತ್ತೇವೆ.

ವ್ಯವಸ್ಥಾಪಕ ವಿಜಯ ಧಾರವಾಡ.

ವಿಜಯ.

ಧಾರವಾಡ ತಾ- ೧೦ ೪-೨೫ ನೇ ಇಸ್ವಿ

ಮಹಾತ್ಮರಿಗೂ ದೇ. ದಾಸರಿಗೂ ವಿಲಾಯತಿಗೆ ಆಮಂತ್ರಣ.

—o—

ಲಾರ್ಡ ರೀಡಿಂಗ ಸಾಹೇಬರು ವಿಲಾಯತಿಗೆ ಹೋದ ನಂತರ, ಲಾರ್ಡ ಬರ್ಕನಹೆಡ್ಡ ಸಾಹೇಬರ ಕೂಡ ಹಿಂದುಸ್ಥಾನದ ರಾಜಕಾರಣದ ವಿಷಯವಾಗಿ ಸಂಭಾಷಣೆ ಮಾಡುವರಷ್ಟೇ; ಇವರಿಬ್ಬರೂ ಮಾತಾಡುವದು ಹಿಂದೀ ಜನರ ವಿಚಾರದಿಂದ ಮುಸುಕಿನೊಳಗಿನ ಗುದ್ದಿನಂತಾಗುವದು. ಏಕೆಂದರೆ- ಅಸಹಕಾರ, ಸ್ವರಾಜ್ಯ ಪಕ್ಷ ಮತ್ತು ಹಿಂದೂ ಮುಸಲಮಾನ ಕಲಹ ಇವುಗಳೆಲ್ಲ ಏಕ ಪಕ್ಷೀಯ ವಿಚಾರದಿಂದಲೇ ನಡೆಯುವವು ಇವೆಲ್ಲ ಹಿಂದೀ ಜನರಿಗೆ ಮುಸುಕಿನೊಳಗಿನ ಗುದ್ದಿನಂತೆ ಪರಿಣಮಿಸುವವು. ಆದ್ದರಿಂದ ಸರಕಾರದವರು ಯಾವದೊಂದು ಠರಾವನ್ನು ಗುಪ್ತವಾಗಿ ಮಾಡದೆ, ಹಿಂದೀ ಪ್ರಮುಖರ ಕೂಡ ಸ್ಪಷ್ಟವಾಗಿ ಮಾಡಬೇಕೆಂದು ಕರ್ನಲ ವೆಜ್ವುಡ್ಡರು ಪಾರ್ಲಮೆಂಟ ಸಭೆಯಲ್ಲಿ ಸೂಚಿಸಿದ್ದಾರೆ. ಲಾರ್ಡ ರೀಡಿಂಗ ಸಾಹೇಬರು ವಿಲಾಯತಿಗೆ ಹೊರಟ ಕೂಡಲೆ, ತಮ್ಮ ಕುದುರೆಯನ್ನು ಮುಂದೆ ಹಾಕುವದಕ್ಕಾಗಿ ಕೆಲ ಸ್ವಾರ್ಥ ಪರಾಯಣರು ಈಗಾಗಲೆ ಮುಂದೊರೆದಿದ್ದಾರೆ. ಕರೆಯಿಸಿ ಕೊಳ್ಳದೆ ತಾವಾಗಿ ಹೋಗುವ ಅಗುಂತಕರ ಬೆಲೆಯು ಎಷ್ಟರ ಮಟ್ಟಿಗೆ ಇರುತ್ತದೆಂಬದನ್ನು ಹೇಳಲವಶ್ಯವಿಲ್ಲ. ಇಂಥವರಿಂದ ವಿರಾಟ ಸ್ವರೂಪಿಯಾದ ಹಿಂದುಸ್ಥಾನದ ಹಿ ತ ವಾ ಗು ವ ದೆಂ ದು ಯಾರೂ ತಿಳಿಯುವದಿಲ್ಲ. ಮೂರು ವರ್ಷಗಳ ಕೆಳಗೆ ಸಿಮಲಾದಲ್ಲಿ ಲಾರ್ಡ ರೀಡಿಂಗ ಸಾಹೇಬರಿಗೂ, ಮಹಾತ್ಮರಿಗೂ ಆರು ದಿವಸಗಳ ವರೆಗೆ ಸತತವಾದ ಭಾಷಣವಾಯಿತು, ಅದರಿಂದಾದ ಫಲಿತಾರ್ಥವೇನು? ಕೆಲ ದಿವಸಗಳ ನಂತರ ಮಹಾತ್ಮರು ಆರು ವರ್ಷದ ಶಿಕ್ಷೆ ಹೊಂದಿದರು. ಸುಮ್ಮನೆ ಬಹಳ ಮಾತಾಡುವದರಿಂದ, ರಾಜಕಾರಣವು ಗೆಲಿಯುವದಿಲ್ಲ. ಅನೇಕ ಜನ ಪ್ರಮುಖರೆಂಬವರು ಆಗಾಗ್ಗೆ ಲಾರ್ಡ ರೀಡಿಂಗ ಸಾಹೇಬರನ್ನು ಕಂಡು, ಅವರ ಕೂಡ ಪ್ರಸ್ತುತದ ಪರಿಸ್ಥಿತಿಯನ್ನು ಕುರಿತು ಮಾತಾಡಿದ್ದಾರೆ; ಅದರಿಂದಾಗಿದ್ದ ಪ್ರಯೋಜನವೇನು? ಏನೂ ಇಲ್ಲ. ಇಂಥ ಅನೇಕ ಜನರು ಹಿಂದುಸ್ಥಾನ ಬಿಟ್ಟು, ವಿಲಾಯತಿಗೆ ಹೋಗಿ 'ಹಕ್ಕ' ಅಥವಾ ವಾದವಿವಾದ ಮಾಡಿದರೆ- ಪರಿಣಾಮವು ಪೂಜ್ಯವೇ ಸೈ. 'ಯಾವದೊಂದು ವಾದಗ್ರಸ್ತ ಪ್ರಶ್ನೆಯ ವಿಚಾರ ನಡೆಯುವಾಗ ಎರಡೂ ಪಕ್ಷಗಳು ಸಮಬಲವುಳ್ಳಂಥವುಗಳಾಗಬೇಕು. ಅಂಥ ಬಲವು ಹಿಂದೀ ಜನರಲ್ಲಿಲ್ಲ. ಅದ್ದರಿಂದಲೇ ಬ್ರಿಟಿಶ ಮುತ್ಸದ್ದಿಗಳು ಹಿಂದೀ ಜನರ ವಿಚಾರ ಕೇಳುವದಿಲ್ಲ. ಅಂತೇ ಅಧಿಕಾರ ಕೊಡುವದು ಅಥವಾ ಕಸಕೊಳ್ಳುವದು ಪಾರ್ಲಮೆಂಟ ಸಭೆಯ ಕೆಲಸ. ಕೊಟ್ಟಷ್ಟರಲ್ಲಿ ತೃಪ್ತರಾಗುವದು ಹಿಂದೀ ಜನರ ಕರ್ತವ್ಯ ಕರ್ಮವೆಂದು ಪದೇ ಪದೇ ಹೇಳುತ್ತಾ ಬಂದಿದ್ದಾರೆ. ಈ ಹಿಡಿತ ಬಿಡಬಾರದೆಂದೇ ಅವರ ಸಂಕಲ್ಪ. ರಾಷ್ಟ್ರಕರ್ತರು ದುರಾಗ್ರಹ ಬಿಟ್ಟು, ಮಹಾತ್ಮಾ ಗಾಂಧಿ ಮತ್ತು ದೇಶಬಂಧು ದಾಸರನ್ನು ವಿಲಾಯತಿಗೆ ಕರಿಸಿಕೊಂಡು ಅವರ ಕೂಡ ಆಲೋಚನೆ ಮಾಡಿ, ರಾಜಕೀಯ ಹಕ್ಕುಗಳನ್ನು ಕೊಡಬೇಕೆಂದು ಕರ್ನಲ ವೆಜ್ವುಡ್ಡ ಸಾಹೇಬರು ಪ್ರಧಾನರಿಗೆ ಮಾಡಿದ ಸೂಚನೆಯು ಯೋಗ್ಯವಾಗಿದ್ದರೂ, ದೇಶಬಂಧು ದಾಸರು ತಮ್ಮದೊಂದು ಸ್ವರಾಜ್ಯ ಯೋಜನೆ ಹೇಳಲಿ; ಬಂಗಾಲ ಮತ್ತು ಹಿಂದುಸ್ಥಾನ ಸರಕಾರದವರು ಇದನ್ನು ಒಪ್ಪಲಿ; ಅನಂತರ ವಿಲಾಯತಿ ಸರಕಾರದವರು ಈ ವಿಷಯವಾಗಿ ಸಹಾನುಭೂತಿಯಿಂದ ವಿಚಾರ ಮಾಡುವರು. ಯಾವ ಕಾಲದಲ್ಲಿಯೂ ಆತುರವು ಉಪಯೋಗದ್ದಲ್ಲವೆಂದು ಅಂಡರ ಸೇಕ್ರೆಟರಿಯವರಾದ ಅರ್ಲ ವಿಂಟರಟನರಾ ಹೇಳಿದರು ಇವರಿಗೆ ಉತ್ತರ ಕೊಟ್ಟಿದ್ದಾರೆ. ಆತುರ ಉಪಯೋಗದ್ದಲ್ಲವೆಂಬ ಮಾತಿನಿಂದ ಸದ್ಯದಲ್ಲಿ ಇವರನ್ನು ಕರಿಸುವ ಆಶೆಯಿಲ್ಲೆಂದೂ ದೇಶಬಂಧುವು ಬಂಗಾಲ ಮತ್ತು ಹಿಂದುಸ್ಥಾನ ಸರಕಾರದ ಮುಖಾಂತರವಾಗಿ ಸ್ವರಾಜ್ಯ ಯೋಜನೆ ತಕ್ಕೊಂಡು ಬರಲೆನ್ನುವದರಿಂದ ತಾವು ಮಾಡಿದ್ದೇ ಮಟ್ಟ, ಕಟ್ಟಿದ್ದೇ ಪಟ್ಟವೆಂದು ತಿಳಿಯಬೇಕೆಂದೂ ಹೇಳುವಂತಾಗುತ್ತದೆ. ವಿಲಾಯತಿ ಸರಕಾರದವರು ಸಾವಧಾನದ ಸೋಗು ಬೇಕಾದಷ್ಟು ಹಾಕಲಿ; ಹಿಂದೀ ಪ್ರಮುಖರು ಒಪ್ಪುವಂಥ ಯೋಜನೆಯನ್ನು ಸಿದ್ಧ ಮಾಡಿದ ಹೊರತು ದೇಶದಲ್ಲಿ ಸ್ವರಾಜ್ಯ ವಿಷಯಕವಾದ ಮಹತ್ವಾಕಾಂಕ್ಷೆಯೂ ಆ ಮೂಲಕ ಹುಟ್ಟಿದ ಅಸಂತೋಷವೂ ಕಿಂಚಿತ್ತಾದರೂ ಕಡಿಮೆಯಾಗಲಾರದೆಂಬದು ಖಂಡಿತ.

ಕುಲಾಬೆಯ ಕಲೆಕ್ಟರರು ಒಂದು ವರಿಗೆಯ ಅಸ್ಪತ್ರಿಯನ್ನು ಕಟ್ಟಿಸಬೇಕೆಂದು ವಿಚಾರ ಮಾಡಿ, ಆ ಬಗ್ಗೆ ಫಂಡು ಕೂಡಿಸಲು ತಾಲೂಕಿನ ಮಾಮಲೇದಾರರಿಗೆ ಅಪ್ಪಣೆ ಮಾಡಿದ್ದಾರೆ. ಇವರು ಪೆನಶನರ ಪೆನಶನದಲ್ಲಿ ಹತ್ತು ರೂಪಾಯಿಕ್ಕೆ ಒಂದು ರೂಪಾಯಿ ಫಂಡು ಮುರಕೊಳ್ಳುವರು. ಒಳ್ಳೇ ನ್ಯಾಯ!

ಗಾಳಿ ಬಿಟ್ಟಾಗ ತೂರಿಕೊಂಡರು.

—o—

ಮದ್ರಾಸದ ದೇವಾದಾಯ ಧರ್ಮಾದಾಯ ಬಿಲ್ಲಿನ ಪ್ರಕಾರ ದೇವಸ್ಥಾನ ಮತ್ತು ಮಠಗಳ ಸಾರಸಕ್ಯಗಾರರಾಗಿ ನೇಮಿಸಲ್ಪಟ್ಟಂಥ ಕಮಿಟಿಯ ಮೆಂಬರ ಹೆಸರುಗಳನ್ನು ನಿನ್ನಿನ ಸಂಚಿಕೆಯಲ್ಲಿ ಬರೆದಿರುತ್ತೇವೆ. ಅವರೆಲ್ಲರು ದಿವಾನರಿಗೂ ತತ್ಸಂಬಂಧಿತರಿಗೂ ತೀರ ಹೊಂದಿದವರೂ ಆಪ್ತರೂ ಆಗಿದ್ದಾರೆ. ಸಮಯ ಸಾಧಿಸಿ ಇವರಿಗೆ ದೇಶದ ದೊಡ್ಡ ಕೆಲಸಗಳನ್ನು ದೊರೆಕಿಸಿ ಕೊಟ್ಟದ್ದಕ್ಕೆ ಇವರು ಮಂತ್ರಿಗಳ ಉಪಕಾರ ಸ್ಮರಿಸಬಹುದು. ಆದರೆ ನಿಷ್ಪಕ್ಷಪಾತತನದ ವಿಚಾರವೇನು? ನಾಲ್ವರು ಮೆಂಬರಲ್ಲಿ ಒಬ್ಬರು ಮುಸ್ಲಿಂ [illegible] ಪಿನಗಾಲದ ರಾಜರ ಸಮಯ [illegible] ಪ್ರತ್ಯರ್ಥಿಗಳಾಗಿದ್ದಾರೆ. [illegible] ಆ ಸ್ಥಿತಿಯ [illegible] ಕೆಲಸ ಮಾಡಿಲ್ಲ. ಒಮ್ಮೆಲೆ ಎಷ್ಟು ನೂರು ರೂಪಾಯಿ ಸಂಬಳದ ಸ್ಥಳ ದೊರಕಿಸಿದ್ದು [illegible] ಹೊರತು ಬೇರೆ ಯೋಗ್ಯತೆಯಾಗಿರುವದಿಲ್ಲ. ಮದ್ರಾಸ ಇಲಾಖೆಯಲ್ಲಿ ಎಷ್ಟೋ ಜನರು ದೇವಸ್ಥಾನಗಳ ಮಂಡಳಿಗಳಂಥ ಯೋಗ್ಯತಾ ಸಂಪನ್ನರಾಗಿದ್ದರೂ, ಅವರ ಹಕ್ಕುಗಳನ್ನು ಮುಳುಗಿಸಿದ್ದು ಘೋರ ಅನ್ಯಾಯವು. ಸ್ವಾರ್ಥಕ್ಕಾಗಿ ಸಮಯ ಸಾಧಿಸಿದ ಕೂಡಲೆ, ಜಸ್ಟಿಸನವರೆ ನ್ಯಾಯ ಮಾಡುತ್ತೇವೆನ್ನುವ ಬಿರುದಾಂಕಿತರು ಹೇಗೆ ಅನ್ಯಾಯ ಮಾಡುತ್ತಾರೆಂಬದು ಇದರಿಂದ ಸ್ಪಷ್ಟವಾಗುತ್ತದೆ.

ತಾರಕೇಶ್ವರದಲ್ಲಿ ಪುನಃ ಶಾಂತಿಭಂಗವು.

—o—

ತಾರಕೇಶ್ವರದಲ್ಲಿ ಸ್ವರಾಜ್ಯ ಮತ್ತು ಮಹಂತರಿಗಾದ ಒಡಂಬಡಿಕೆಯು ನ್ಯಾಯವಾದುದಲ್ಲವೆಂದು ಕೋರ್ಟಿನವರು ನಿರ್ಣಯಿಸಿ, ಒಬ್ಬ ರಿಸೀವ್ಹರನನ್ನು ನೇಮಿಸಿದರು. ಈತನು ಒಂದು ದೇವಸ್ಥಾನದ ಅಧಿಕಾರವನ್ನು ವಹಿಸುವನೆಂದು ಸತ್ಯಾಗ್ರಹಿಗಳು ಯೋಚಿಸಿ, ಇವನಿಗೆ ಅಡ್ಡೀ ಮಾಡುವಂತೆ ಮಹಾದ್ವಾರದ ಬಾಗಿಲದ ಹತ್ತರ ಅಡ್ಡೀ ಕಟ್ಟಿದರು. ಆದರೆ ಕೆಲಹೊತ್ತಿನನಂತರ ಇದನ್ನು ತೆಗೆದರು. ರಿಸೀವ್ಹರನು ಹೋಗಿ, ಚಾರ್ಜ ತಕ್ಕೊಳ್ಳಲಿಲ್ಲ. ಸರಕಾರದವರು ಕೆಲವು ಪ್ರಮುಖರ ಮೇಲೆ ಒಳ್ಳೇ ನಡತೆಯ ಬಗ್ಗೆ ಜಾಮೀನು ಮುಚ್ಚಳಿಕೆಯ ಕೇಸು ನಡಿಸಿಕ್ಕನ್ನೆ

ಬಿಡ್ಡರೆ. ಮಹಾಂತ ಮತ್ತು ಸತ್ಯಾಗ್ರಹಿಗಳ ನಾಗ ಮುಗಿದರೂ, ಮಧ್ಯದಲ್ಲಿ ಇದೊಂದು ಕಾಮದೆಯ ಭೂತವೆದ್ದು, ಸಾರ್ವಜನಿಕ ಶಾಂತತೆಯನ್ನು ಭಂಗಪಡಿಸಬೇಕೆನ್ನುತ್ತದೆ.

ಹಿಂದೂ ರಾಷ್ಟ್ರೀಯ ನಿಶಾನೆ

—೦—

ಮಹಾತ್ಮಾ ಗಾಂಧಿಯವರು ಹಿಂದುಸ್ಥಾನದಲ್ಲಿಯ ಜನಾಂಗಗಳ ಪರವಾಗಿ ಒಂದು ರಾಷ್ಟ್ರೀಯ ನಿಶಾನೆಯನ್ನು ಮಾಡಿದ್ದಾರಷ್ಟೇ, ಆದರೆ ಪ್ರತ್ಯೇಕವಾಗಿ ಹಿಂದೂ ಜನಾಂಗದ ಪರವಾಗಿಯೇ ನಿಶಾನೆ ಇರುವದಿಲ್ಲ. ಮುಸಲ್ಮಾನರಿಗಾಗಿ ಹಸರು ಬಣ್ಣದ ನಿಶಾನೆ ಇರುವದು. ಕ್ರಿಶ್ಚನರಿಗಂತೂ ಯುನಿಯನ ಜಾಕವುಂಟು. ಆದುದರಿಂದ ಹಿಂದೂ ಜನಾಂಗದ ಸ್ವೀಕಾರಕ್ಕಾಗಿ ಒಂದು ನಿಶಾನೆಯನ್ನು ಗೊತ್ತು ಮಾಡುವ ಕುರಿತು ಕಲಕತ್ತೆಯಲ್ಲಿ ಕೂಡುವ ಹಿಂದೂ ಮಹಾ ಸಭೆಯಲ್ಲಿ ಒಂದು ಠರಾವು ಬರತಕ್ಕದ್ದಿದೆ. ಈ ಸಭೆಗೆ ದೂರ ದರ್ಶಿಗಳಾದ ಸ್ವಾಮಿ ಶ್ರದ್ಧಾನಂದ, ಸ್ವಾಮಿ ..., ಭಾಯಿ ಪರಮಾನಂದ ಪಂಡಿತ ಮಾಲವಿಯ, ಲಾಲಾ ಲಜಪತರಾಯ ಮೊದಲಾದವರು ದಯಮಾಡಿಸುವರು. ಮಹಾತ್ಮರು ಹೋಗುವ ಸಂಭವವಿಲ್ಲ.

ಇದೇ ತಿಂಗಳ ೨೮ ನೆಯ ತಾರೀಖಿನ ದಿವಸ ಮುಂಬಯಿಯಲ್ಲಿ ಗೋರಕ್ಷಣ ಮಹಾ ಸಭೆಯು ಮಹಾತ್ಮಾ ಗಾಂಧಿಯವರ ಅಧ್ಯಕ್ಷತೆಯಲ್ಲಿ ನೆರೆಯುವದು.

ಮುಂಬಯಿಯಲ್ಲಿ ಮೂರನೆಯದೊಂದು ಗಿರಣಿ ಬಂದಾಯಿತು. ಕೆಲ ಕೂಲಿಗಳು ಸಂಪು ಮಾಡಲು ಇದೇ ನೆವನ ಸಾಕೆಂದು ಮಾಲಕರು ಗಿರಣಿಯನ್ನೇ ಬಂದು ಮಾಡಿದರು.

ಧಾರವಾಡ

ಕಳೆದ ಆದಿತ್ಯವಾರದ ದಿವಸ ಹುಬ್ಬಳ್ಳಿಯಲ್ಲಿ ಕರ್ನಾಟಕ ಏಕೀಕರಣದ ಸಭೆಯು ಕೂಡಿತ್ತು. ಕರ್ನಾಟಕವನ್ನು ಒಂದು ಮಾಡುವ ವಿಷಯವಾಗಿ ಸರಕಾರ ಮತ್ತು ಇತರ ಕಾಗದ ಪತ್ರಗಳನ್ನು ಕಳೆ ಹಾಕುವದೇ ಮುಖ್ಯವಾಗಿ ವಿಚಾರ ಮಾಡಲ್ಪಟ್ಟಿತು. ಈ ಸಂಕಲ್ಪದ ಸಭೆಯನ್ನು ಬೆಳಗಾವಿಯಲ್ಲಿ ಕೂಡುವ ಸಾಹಿತ್ಯ ಸಮ್ಮೇಲನದ ವೇಳೆಯಲ್ಲಿ ಕೂಡಿಸಬೇಕೆಂದು ಗೊತ್ತಾಯಿತು. ಮೇಲಿನ ಸಭೆಯು ಬೆಳಗಾವಿಯಲ್ಲಿ ನೇಮಿಸಲ್ಪಟ್ಟ ಕಾರ್ಯಕಾರಿ ಮಂಡಳದ್ದಾಗಿತ್ತು.

೧೧ನೆಯ ಕರ್ನಾಟಕ ಸಾಹಿತ್ಯ ಸಮ್ಮೇಲನ ಬೆಳಗಾವಿ.

—೦—

ಬರುವ ಮೇ ತಿಂಗಳಿನ ತಾ. ೯, ೧೦, ೧೧ ಈ ದಿವಸಗಳಲ್ಲಿ ಈ ಸಮ್ಮೇಲನವನ್ನು ಬೆಳಗಾವಿಯಲ್ಲಿ ಜರಗಿಸುವದು ಗೊತ್ತಾಗಿದೆ. ಈ ಸಮ್ಮೇಲನಕ್ಕಾಗಿ, ಸ್ವಾಗತ ಸಂಘದ ಸಭಾಸದರ ವಂತಿಗೆ ರೂ ೫ ಮತ್ತು ಪ್ರತಿನಿಧಿಗಳ ವಂತಿಗೆ ೩ ರೂ ಪ್ರೇಕ್ಷಕ ರ ವಂತಿಗೆ ರೂ ೧ ಇರಬೇಕೆಂದು ಗೊತ್ತಾಗಿದೆ. ಬೆಳಗಾವಿ ಜಿಲ್ಲೆಯ ನಿವಾಸಿಗಳೂ, ಅದಕ್ಕೆ ಹೊಂದಿರುವ ದೇಶೀಯ ಸಂಸ್ಥಾನಗಳವರೂ ಅವಶ್ಯವಾಗಿ ಸ್ವಾಗತ ಸಂಘದ ಸಭಾಸದರಾಗಬೇಕು. ... ಕನ್ನಡಿಗರಾದರೂ ಸಭಾಸದರಾಗ... ಕರ್ನಾಟಕ ಸಭೆ, ಸಂಘ, ವಾಚನಾಲಯ, ... ಸಮಿತಿಗಳು ಸಮ್ಮೇಲನಕ್ಕೆ ಪ್ರತಿನಿಧಿಗಳ... ಕಳಿಸಬಹುದು. ಯಾವ ಊರ ಗೆಳೆ ... ಯ ಸಂಸ್ಥೆಗಳಾದ್ರೂ ಇರುವದಿಲ್ಲವೋ ... ತಾವೇ ಸಭೆ ಸೇರಿ ಪ್ರತಿನಿಧಿಗಳನ್ನು ... ಪ್ರತಿನಿಧಿಗಳು ತಾವು ಬೆಳಗಾವಿಗೆ ಬರುವ ... ಯಾವ ಬಂಡಿಯಿಂದ ಬರಬಹುದೆಂಬದನ್ನು ... ದರ್ಶಿಗಳಿಗೆ ಇದೇ ತಿಂಗಳಿನ ಕೊನೆಯ ದಿವಸದೊಳಗಾಗಿ ತಿಳಿಸಬೇಕು. ಬಿಡಾರ ದೀಪ ... ಆಸನ ಮತ್ತು ಬ್ರಾಹ್ಮಣ ಜಾತಿಗಳ ಪ್ರತಿನಿಧಿಗಳಿಗೆ ಇರುವ ಮತ್ತು ಊಟದ ವ್ಯವಸ್ಥೆಯು ಮೇ ತಿಂಗಳ ೮ ರಿಂದ ೧೨ ನೆಯ ತಾರೀಖಿನ ವರೆಗೆ ದಿವಸವೊಂದಕ್ಕೆ ೧ ರೂಪಾಯಿ ತೆಗೆದುಕೊಂಡು ಮಾಡಲಾಗುವದು.

ಸಮ್ಮೇಲನದಲ್ಲಿ ನಿಬಂಧಗಳನ್ನು ಬರೆಬೇಕೆಂದು ಬಯಸುವವರು ಕರ್ನಾಟಕದ ಇತಿಹಾಸ, ಸಾಹಿತ್ಯ, ಸಂಗೀತ, ಶಿಲ್ಪ ಚಿತ್ರಕಲೆ, ಹಳ್ಳಿಯ ಹಾಡುಗಳು, ಶಾಸನಗಳು ಮುಂತಾದ ವಿಷಯಗಳ ಮೇಲೆ ನಿಬಂಧಗಳನ್ನು ಬರೆದು ಇದೇ ತಿಂಗಳ ಕೊನೆಯ ದಿವಸದೊಳಗಾಗಿ ಕಾರ್ಯದರ್ಶಿಗಳ ಕಡೆಗೆ ಕಳುಹಿಸಬೇಕು. ಯಾವ ನಿಬಂಧವಾದರೂ ಓದುವದಕ್ಕೆ ಅರ್ಧ ಘಂಟೆ ಮೀರುವದಿರಬಾರದು.

ಸಮ್ಮೇಲನದಲ್ಲಿ ಕೈ ಬರಹದ ಹಳೆಯ ಗ್ರಂಥಗಳು, ತಾಮ್ರಶಾಸನಗಳು, ನಾಣ್ಯಗಳು ಮತ್ತು ಪ್ರಚಲಿತ ಮಾಸಪತ್ರಿಕೆ, ತ್ರೈಮಾಸಿಕ ಪತ್ರಿಕೆಗಳು ಹಾಗು ಹೊಸದಾಗಿ ಪ್ರಸಿದ್ಧವಾದ ಗ್ರಂಥಗಳು ಮುಂತಾದ ವಸ್ತುಗಳ ಒಂದು ಪ್ರದರ್ಶನದ ಏರ್ಪಾಡು ಮಾಡುವದು ನಿಶ್ಚಿತವಾಗಿದೆ. ಈ ಪ್ರದರ್ಶನದಲ್ಲಿ ಇರಿಸಬೇಕಾದ ವಸ್ತುಗಳನ್ನು ಈ ತಿಂಗಳ ಕೊನೆಯ ದಿವಸದೊಳಗೆ ಕಾರ್ಯದರ್ಶಿಗಳ ಕಡೆಗೆ ಕಳುಹಿಸಬೇಕು.

ಕನ್ನಡ ನಾಡಿನ ಅಭಿಮಾನವು ಬೆಳಗಾವಿ ಪ್ರಾಂತದಲ್ಲಿಯೂ ಮತ್ತು ಅದಕ್ಕೆ ತಗಲಿರುವ ಸಂಸ್ಥಾನಗಳಲ್ಲಿಯೂ, ಕುಂದುತ್ತಿರುವದೆಂಬುದನ್ನು ಹೊಸದಾಗಿ ಹೇಳಬೇಕಾಗಿಲ್ಲ. ... ಯನ್ನು ಹೆಚ್ಚಿಸಬೇಕೆಂತಲೇ ಈ ಸಮ್ಮೇಲನವನ್ನು ಬೆಳಗಾವಿಯಲ್ಲಿ ನೆರವೇರಿಸುತ್ತಿರುವದು ನಮ್ಮ ... ಕೆ. ಕನ್ನಡ ನುಡಿಯನ್ನಾಡುವವರೆಲ್ಲರೂ ಜಾತಿ, ಮತ ಭೇದಗಳನ್ನು ಬದಿಗಿಟ್ಟು ಸಮ್ಮೇಲನಕ್ಕೆ ... ಸಹಾಯಮಾಡುವರೆಂತಲೂ, ಕನ್ನಡ ನಾಡಿನ ... ರಾದ ಕೃಷ್ಣರಾಜ ಒಡೆಯರವರು ಕನ್ನಡ ನುಡಿಯ ಏಳಿಗೆಗಾಗಿ ಏರ್ಪಡಿಸಿದ ಕರ್ನಾಟಕ ಸಾಹಿತ್ಯ ಪರಿಷತ್ತಿನ ಉದ್ದೇಶಗಳು ಕೈಗೂಡುವವೆಂತಲೂ, ತಮ್ಮ ... ಪಟ್ಟಿಗೆ ಸೇರಬೇಕೆಂದು ಬೇಡಿಕೊಳ್ಳುತ್ತೇವೆ.

ಕ್ಯಾ. ಗೋ. ಗೋಖ್ಲೆ

ಹಿ. ಆರ್. ...

ಸ್ವಾಗತ ಕಾರ್ಯದರ್ಶಿಗಳು.

ಬೆಳಗಾವಿಯಲ್ಲಿ ... ಕನ್ನಡ ಭಾ... ... ಗೆ ಇಲ್ಲಿನ ... ... ಇರುವ ಮೊದಲು ... ಧಾರವಾಡದಲ್ಲಿ ... ... ಬಂದಿದ್ದಾರೆಂದು ತಿಳಿಯುತ್ತದೆ.

... ಯಲ್ಲಿ ದನಗಳ ಪ್ರದರ್ಶನವು ತಾ. ... ೩೦ ದಿನಗಳಿಗೆ ಜರಗುವದು ನಿಶ್ಚಯ.

ಬಿತ್ತ ಮತ್ತು ಹೊಸ ಕಾಸ್ಟಿಂಗ್‌ನ ಮಾರಾಟ.

—೦—

ಸ... ಗಳ ಮತ್ತು ... ದಿಂದ ದುರಸ್ತಾದ ಬೆಸ್ಸ ಮತ್ತು ಪ್ರೆಸ್ ... ಯನ್ನು ನಮ್ಮಲ್ಲಿ ಮಾರಾಟಕ್ಕೆ ಇಟ್ಟಿದ್ದೇವೆ. ಇದನ್ನು ಪೂರಾ ಅಥವಾ ಪ್ರತ್ಯೇಕವಾಗಿ ಮಾರಾಟಕ್ಕೆ ಕೊಡುವೆವು. ಇದಲ್ಲದೆ, ಹೊಸ ಮತ್ತು ಸಿಲಿಂಡರಗಳೂ, ... ಮಾರಾಟಕ್ಕೆ ಇರುವವು. ... ಎಂಟು ಸಾವಿರ ... ಮಾರಾಟಕ್ಕೆ ಸಿದ್ಧವಿರುವವು. ... ಕ್ಷಮ ... ಸಂಗತಿಗಳನ್ನು ತಿಳಿಸಿಕೊಳ್ಳಬೇಕು.

ನಮ್ಮ ವಿಳಾಸ—

ಫಿರೋಜ ... ಕಂಪನಿ

... ... ಪ್ರೆಸ ..., ...

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ

ಬ್ಯಾಂಕ ಲಿಮಿಟೆಡ.

ಮಂಗಳವಾರ ಪೇಟೆ, ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ

ಬಂಡವಲು ಆರುಲಕ್ಷದ ಮೇಲಾಯಿತು. ಚೆಕ್ಕ, ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ನಡಿಸಲಾಗುವದು. ಕಾಯಂ ಮತ್ತು ಬೇರೆ ತರದ ಡಿಪಾಜಿಟುಗಳಿಗೆ ಚನ್ನಾಗಿ ಬಡ್ಡಿ ಕೊಡಲಾಗುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮುದ್ದವರಾವ ಬಿ. ಜಕಾತಿ,

ಮ್ಯಾನೇಜಿಂಗ ಡಾಯರೆಕ್ಟರ

ಜಾಹೀರ ನೋಟೀಸು.

ಷಡಕ್ಷರ ಚನ್ನಬಸವಸ್ವಾಮಿ ತಡಕೋಡದ ಬುದರಕಟ್ಟಿ ಪುತ್ರ ವರ್ಗ ಹಿರೇಮಠಾಧ್ಯಕ್ಷ ಮುಕ್ಕಾಮ ಬುದರಕಟ್ಟಿ ತಾಲೂಕ ಸಂಪಗಾವ ಜಿಲ್ಲಾ ಬೆಳಗಾವ ಇವರ ಕಡೆಯಿಂದ—

ನನ್ನ ಯಾವತ್ತೂ ಹಿಂದೂ ಬಾಂಧವ ಸಮಾಜ ಹಿತೇಚ್ಛುಗಳಿಗೆ ನಾನು ಅರಿಕೆ ಮಾಡಿಕೊಳ್ಳುವದೇನಂದರೆ—

ನನ್ನ ಮಾಲ್ಕೀಯುಳ್ಳ ಹಿರೇಮಠಗಳು ಅಂದರೆ ಧಾರವಾಡ ತಾಲ್ಲೂಕ ಪೈಕಿ ತಡಕೋಡದಲ್ಲಿ ಒಂದು ಮತ್ತು ಸಂಪಗಾವ ತಾಲ್ಲೂಕ ಪೈಕಿ ಬುದರಕಟ್ಟಿಯಲ್ಲಿ ಒಂದು ಈ ಪ್ರಕಾರ ಎರಡು ಮಠಗಳೂ ಇವುಗಳ ಹಕ್ಕು ಬಾಬುಗಳೂ ಇರುತ್ತವೆ.

ಇವುಗಳಲ್ಲಿ ಬುದರಕಟ್ಟಿಯ ಜನರು ಮಾತ್ರ ಈಗ್ಗೆ ಸುಮಾರು ಇಪ್ಪತ್ತೈದು ವರ್ಷಗಳ ಅನಾಗಾಯಿತ ನಮ್ಮನ್ನು ಭಯಂಕರ ಸಂಕಟಕ್ಕೀಡುಮಾಡುತ್ತ ಬಂದಿರುವರು. ಯಾವಾಗ್ಗೆ ಆದರೂ ನಿರ್ಬಲರಾದ ನಾವು ತಪ್ಪಿಸಿಕೊಳ್ಳುವ ರೋಷನ ತಂಬಿಧ್ವನಿಯು ಈ ಕಾಯ್ದೆ ಪೂರ್ಣವೆ ಬಹುಮತಗಳ ಮೇಲಿಂದ ಮುಚ್ಚಿಹೋಗಿ ಬಾಳಹಾಕುವ ಗದ್ದಲದಲ್ಲಿ ಬಿದ್ದ ಸರಕಾರದವರಿಗಂತೂ ಕೇಳಿಸುತ್ತಿರುವದಿಲ್ಲಾ. ಆಗಲೇ ನನ್ನ ಅಜ್ಜಂದಿರಾದ ಮರುಳಾರ್ಯರೆಂಬ ಬ್ರಾಹ್ಮಣಗಳನ್ನು ಕೊಂದು ಆರಗಾವ ಕೆರೆಯಂಬ ಅಡವಿಯಲ್ಲಿ ಒಗೆದರೂ ಮತ್ತು ನಮ್ಮ ಪ್ರೇಮದ ಶಿಷ್ಯನಾದ ಮಲ್ಲಣ್ಣನನ್ನು ಕೊಂದು ಮಲಪ್ರಭಾನದಿಯಲ್ಲಿ ಮುಳುಗಿಸಿದರೂ ಪುರಾವೆಗಳಿಲ್ಲದ್ದರಿಂದ ಕೇಳುವವರು ಸಹ ದಿಕ್ಕಿಲ್ಲದಂತಾಗಿ ಹೋಗಿರುವದು. ಮತ್ತು ನನ್ನ ತಂದೆಯವರಾದ ಚನ್ನಬಸವಾರ್ಯರು ವಿಶ್ವಾಧರ ಬಲೆಯಲ್ಲಿ ಬಿದ್ದ ಎರಳೆಯಂತೆ ಈ ಬುದರಕಟ್ಟಿಯ ಜನರ ಮೋಸದಾಟದಲ್ಲಿ ಸಿಕ್ಕು ಕಷ್ಟಬಟ್ಟು ತಮ್ಮ ಇಹಯಾತ್ರೆಯನ್ನು ಮುಗಿಸಿಕೊಂಡು ನಾವಾಗಿಹೋದರು. ಈಗ್ಗೆ ನಾನಂತೂ ಕಟುಕರ ಕೈಯಲ್ಲಿ ಸಿಕ್ಕ ಬಡ ಧೇನುವಿನಂತೆ ಈ ಮೃತ್ಯುವಿನ ಮುಖವಾದ ಬುದರಕಟ್ಟಿಯ ಜನರಲ್ಲಿ ಯಾವ ಪ್ರಕಾರ ಕಾಲಕಳೆಯುತ್ತೇನೋ ಇದು ದೇವರಿಗೇ ಗೊತ್ತು.

ಇವರು ನನಗೆ ಯಾವಾಗ್ಗೆ ವಿಷ ಹಾಕಿದ್ದರೋ, ಆಗ್ಗಿನಿಂದ ನಾನು ಊರೊಳಗಿನ ನನ್ನ ಬಾಬು ಆಯ ಭೋಜನಾದಿಗಳನ್ನು ಶಿಷ್ಯ ಶಿಕ್ಷವರಿಗೇ ಪರಿವಾರದಂತೆ ಬಿಟ್ಟುಕೊಟ್ಟು ಇವರಿಂದ ನನಗೆ ಎಂಥ ಸಿಪಾಯಿನಿಷ್ಟಗಳೊದಗಿದರೂ ವರ್ಷ ವಿಷಾದಗಳನ್ನು ಪಡೆಯದೆ, ಮುಕ್ತಿಕಾರಣದಂತೆ ನನ್ನ ಈ ಶರೀರ ವ್ರತವನ್ನು ಕಾಯ್ದುಕೊಂಡು ನನ್ನ ಎಲ್ಲ ಹಿತಾಹಿತಗಳನ್ನು ಪರಮೇಶ್ವರನಿಗೆ ಸಮರ್ಪಿಸಿ ತಮ್ಮೆಲ್ಲರಿಗೂ ಹಂಚಿಕೊಟ್ಟುಬಿಟ್ಟಿರುವೆನು.

ಈಗ್ಗೆ ಈಶ್ವರಪ್ರಸಾದದಿಂದಲೂ ತಮ್ಮೆಲ್ಲರ ಅನುಗ್ರಹದಿಂದಲೂ ನನಗೆ ತಾರೀಖು ೨೩ ಮಾಹೆ ಫೇಬ್ರುವರಿ ಸನ ೧೯೩೪ ಇಸವಿಯ ದಿವಸ ಮಹಾಸ್ವರ ಪಂತ ಕಂಠಿಯೊಳಗಿನ ಪುತ್ರಿಯಿಂತೊಪ್ಪುವ ಮರುಳಾರ್ಯನೆಂಬ ಪುತ್ರನು ಜನಿಸಿರುವನು. ಈ ಬ್ರಹ್ಮರೂಪಿ ಶಿಸು ಸಂರಕ್ಷಣೆಯನ್ನು ಮಾಡಿಕೊಂಡು ಸುಸೂತ್ರವಾಗಿ ನನ್ನ ಪಾರಮಾರ್ಥ ಸಾಧನೆಯಲ್ಲಿ ಕಾಲಕಳೆದೇನಂದರೆ ಈ ಬುದರಗಟ್ಟಿಯ ಪ್ರಮುಖ ಗೋಮುಖವ್ಯಾಘ್ರರು ನನ್ನನ್ನು ಕಂಡು ಬೇಟೆಯನ್ನು ನೋಡಿದ ಬೇಡರಂತೆ ಮೀಸೆಯನ್ನು ಮುರಿಹಾಕಿ, ಕೆಮ್ಮಿ, ಖ್ಯಾಕರಿಸಿ, ತಮ್ಮ ವೇಷಶಾಸ್ತ್ರನನ್ನೆತ್ತಿ ಹಿಡಿದು ನನ್ನನ್ನು ಬಹುಪ್ರಕಾರವಾಗಿ ಘಾಸಿಸಿ ಘಾತಮಾಡಲು ನಡೆಸಿರುವರು. ಇವರು ನನ್ನನ್ನು ತೆಗೆದುಹಾಕಬೇಕೆಂದು ಯೋಚಿಸಿ ಊರೊಳಗಿನ ನನ್ನ ಬಾಬು ವೊದಲಾದವುಗಳನ್ನು ಬಲಾತ್ಕಾರದಿಂದ ಕಸದುಕೊಂಡು ನನ್ನ ಮಠದ ವಿರುದ್ಧವಾಗಿ ಹೊಸ ಹೊಸ ಪಗಳನ್ನು ಹಕ್ಕು ಬಾಬುಗಳನ್ನು ವಸ್ತಿಗಳನ್ನು ಕಸಿದು ಏನೇನೋ ಹೊಸ ಹೊಸ ಕಾಗದಗಳನ್ನು ಬರೆದಿಟ್ಟುಕೊಳ್ಳುವ ಪೇಚಾಟದ ವ್ಯವಸ್ಥೆಯ ಗಮನದಿಂದ ನನ್ನ ನಿನ್ನನ್ನು ವನು. ಇವರು ನನಗೆ ಯಾವ ಕಾಲಕ್ಕೆ ಎಂಥ ಘಾತ ಮಾಡುವರೋ ಅದು ನಿಯಮವಿಲ್ಲ. ಈ ಬಲಾಢ್ಯ ವೃತ್ತಿ ಪೋಷಿದ ಮುಳಿಗಾಲ ಮಹಾತ್ಮರಿಗೆ ಮನಸೆ ಇಲ್ಲದ ಯುಗ. ಇಂಥ ಪ್ರಸಂಗದಲ್ಲಿ ಆದಲ್ಲಿ ಈ ಬುದರಕಟ್ಟಿಯಲ್ಲಿ ನನ್ನ ಈ ಗೋಳನ್ನು ಕೇಳುವವರೇ ಇಲ್ಲ. ಅಷ್ಟರಿಂದ ನಿರಾಶ್ರಯಿಕನಾದ ನಾನು ನಿಮ್ಮನ್ನೇ ನಂಬಿರುವೆನು. ಕಾರಣ ಈ ಬುದರಕಟ್ಟಿಯ ಜನರು ತಮ್ಮ ತಮ್ಮೊಳಗೆ ನನ್ನ ವಿಷಯದ ಯಾವತ್ತು ಕಾರಬಾರದವೇ ಆಗಲಿ ಕಾಗದಗಳನ್ನು ಬರೆದು ಇಟ್ಟುಕೊಂಡಿದ್ದರೆ ಅಥವಾ ಇಟ್ಟುಕೊಂಡರೆ ಮತ್ತು ಹೊಸ ಹೊಸ ಬಗೆಗಳನ್ನು ಹಕ್ಕು ಬಾಬುಗಳನ್ನು ಮಾಡಿಕೊಂಡರೆ ಅವು ಅಬೇ ಸುಳ್ಳು ಇರುವವೆಂತಲೂ ಮತ್ತು ನನಗೆ ಏನಾದರೂ ಘಾತ ಪ್ರಸಂಗಗಳೊದಗಿದರೆ ಅವು ಈ ಬುದರಕಟ್ಟಿಯ ಪ್ರಮುಖ ಜನರಾದ ಗೌಡರೂ ಮತ್ತು ವೀರಪ್ಪಾ ವ ಅಂದಾನೆಪ್ಪಾ ಕುಂದಗೋಳ ಮತ್ತು ವೀರಪ್ಪಾ ಕಮತಗಿ ಮತ್ತು ಕೊಟಬಾಗಿಯವ್ನ ಬಿಟ್ಟು ನೌಕರಿಗಾಗಿ ಬಂದು ಬುದರಕಟ್ಟಿಯಲ್ಲಿ ಶೇರಿಕೊಂಡಿರುವ ಗುರುಪಾದಪ್ಪನೆಂಬ ಘಂಟಿ ಬಾರಿಸುವ ಚಾಣಾಕ್ಷನೂ ಮಗ್ನಿರ ಇವರಿಂದಲೇ ಒದಗಿರುವವೆಂದೂ ತಾವೂ ಸರಕಾರದವರೂ ತಿಳಿಯತಕ್ಕದ್ದು ಈ ಬಗ್ಗೆ ಜಾಹೀರ ಇರಬೇಕು.

ಬಾಂಧವರೇ ಈ ಬುದರಕಟ್ಟಿಯ ಪ್ರಮುಖ ಸ್ವಾರ್ಥ ಸಾಧಕರಾದ ಮದಾಂಧರ ಮೋಸ ಚರಿತ್ರವನ್ನು ಇಲ್ಲಿ ಬರೆಯಲು ಸ್ಥಲ ದೊರಿಯದು. ಇವರ ಚಾಣಾಕ್ಷದ ಮೋಸಕಾರಸ್ಥಗಳು ಒಂದಿಲ್ಲೊಂದು ದಿವಸ ಬಿಚ್ಚಿ ಬೈಲಿಗೆಳೆಯಲ್ಪಟ್ಟು ತಮ್ಮೆಲ್ಲರ ಮುಂದೆ ಬಂದೇ ಬರುವವು. ಕಾರಣ ಅವುಗಳನ್ನು ಇಲ್ಲಿ ಬರೆಯುವ ಪ್ರಯೋಜನವಿಲ್ಲಾ. ಪತಂಗ ಪತಂಗದಂತೆ ಪಾಪಾಗ್ನಿಯಲ್ಲಿ ಬೀಳುತ್ತಿರುವ ಈ ಬುದರಕಟ್ಟಿಯ ಜನರನ್ನು ಕಂಡು ನನ್ನ ಮನೋವೇದನೆಯು ಬಹು ವ್ಯಸನ ಪಡಹತ್ತಿರುವದು. ಕಾರಣ ತಮ್ಮ ನಿಮ್ಮ ಕರ್ತವ್ಯಕ್ಕೆ ಸರಿಯಾದವರು ಈ ಬುದರಕಟ್ಟಿಯ ಜನರಂಥ ಇಲ್ಲ. ಆ ಅಜ್ಞಾನಿಗೂ ಸದ್ಬುದ್ಧಿಯನ್ನು ಕೊಟ್ಟು ನಮ್ಮೆಲ್ಲರನ್ನು ಕಾಪಾಡಲೆಂದು ಆ ಪರಮೇಶ್ವರನನ್ನು ಕುರಿತು ಪ್ರಾರ್ಥಿಸತಕ್ಕದ್ದೊಂದು ನಮ್ಮ ಮುಖ್ಯ ಕರ್ತವ್ಯವಲ್ಲವೆ—

ತಮ್ಮ ಸದ್ಧರ್ಮಪ್ರೇಮಿ

ಷಡಾಕ್ಷರ ಚನ್ನಬಸವಸ್ವಾಮಿ ತಡಕೋಡದ ಬುದರಕಟ್ಟಿ ಪುತ್ರವರ್ಗ ಹಿರೇಮಠಾಧ್ಯಕ್ಷ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾತಾವರಣ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ನಿತ್ಯ ಪತ್ರ

ವಿಜಯ

ಬೆಲೆ ಅರ್ಧ ಆಣೆ

ಸಂಪಾದಕರು- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೬) ಧಾರವಾಡ ಶನಿವಾರ ತಾರೀಖು ೧೧ನೇ ಏಪ್ರಿಲ ೧೯೩೬ (ಸಂಚಿಕೆ ೮೨

ಬೇಸಿಗೆ ಪ್ರಾರಂಭವಾಯಿತು!

ದನಗಳ ಆಹಾರವಾದ ಕಣಿಕೆಯನ್ನು ಕಾದಿರಿ !!

ಕಿರ್ಲೋಸ್ಕರ ಕಣಿಕೆ ಯಂತ್ರವನ್ನು ಉಪಯೋಗಿಸಿರಿ !!!

ನಮ್ಮ ಕಾರ್ಖಾನೆಯಲ್ಲಿ ಎರಡು ನಮೂನೆಯ ಕಣಿಕೆ ಕೊರೆಯುವ ಯಂತ್ರಗಳು ತಯಾರಾಗುತ್ತವೆ. ಒಂದು ಕೈಯಂತ್ರ ಬೆಲೆ ೨೦ರೂ. ಇನ್ನೊಂದು ಗಾಲೀಯಂತ್ರ ಬೆಲೆ ೮೫ ರೂಪಾಯಿ ಸಣ್ಣ ಕಮತವುಳ್ಳವರು ಕೈ ಯಂತ್ರವನ್ನೂ, ದೊಡ್ಡ ಕಮತವುಳ್ಳವರು ಗಾಲೀ ಯಂತ್ರವನ್ನೂ ಉಪಯೋಗಿಸಬಹುದು. ಕಣಿಕೆಯು ೪ ಇಂಚುಗಳಿಂದ ಒಂದು ಇಂಚಿನ ವರೆಗೆ ಕೊರೆಯಲ್ಪಡುತ್ತದೆ.

ಸವಿಸ್ತರ ಸಂಗತಿಯ ಬಗ್ಗೆ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ } ಕಿರ್ಲೋಸ್ಕರವಾಡಿ- ಜಿಲ್ಲಾ ಸಾತಾರಾ.

ನೋಟೀಸು

ಬಸಪ್ಪಾ ಬಿನ್ನ ಬಸಲಿಂಗಪ್ಪಾ ದಾನಪ್ಪನವರ ಸಾ|| ನೆಶಲಿ ತಾಲ್ಲೂಕ ಹೋದ ಇವನಿಗೆ—

ಕೆಳಗೆ ಹೆಬ್ಬಟ್ಟಿನ ಗುರ್ತ ಮಾಡಿದ ಬಸಪ್ಪಾ ಕೋಂ ಧರಮಪ್ಪಾ ಗೋಡಿಹಾಳ ಸಾ|| ಕುಣಿಕೆಪ್ಪ ತಾಲ್ಲೂಕ ನೊರಬ ಇಲಾಖಾ ಮೈಸೂರ ಹಾಲಿವಸ್ತಿ ಹಿರೇಮಾಗನೂರ ತಾಲ್ಲೂಕ ರಾಣೆಬಿನ್ನೂರ

ಈ ನೋಟೀಸಿನ ಮೂಲಕ ನಿನಗೆ ತಿಳಿಸುವದೇನೆಂದರೆ—

ಮೈತ ನನ್ನ ತವಪ್ಪಾ ಪುಜ್ಜಪ್ಪಾ ಬಿನ್ನ ಪುಜ್ಜಪ್ಪಾ ಯಂಗಟಿ ಈತನ ಬಾ|| ರಾಣೇಬಿನ್ನೂರ ಮಹಲ ಬೇವಿನಹಳ್ಳಿ ಗ್ರಾಮದ ಜಮೀನಿಗಳು ಮತ್ತು ರಾಣೆಬಿನ್ನೂರ ತಾಲ್ಲೂಕ ಹಿರೆಮಾಗನೂರ ಗ್ರಾಮದಲ್ಲಿರತಕ್ಕ ಜಮೀನು ಮನಿ ಮಠ ಇವುಗಳಿಗೆ ವಾರಸಾ ನಾತೆದಿಂದಾ ನಾನು ಮಾಲಿಕಳಾಗುತ್ತೇನೆ. ಅಂಬುವ ಸಮುಜೂತಿಯಿಂದ ಹಿರೆಮಾಗನೂರ ಜಸ್ತಿ ಸ್ಥಿರ ಅರ್ಧ ಆಸ್ತಿಗಳು ಮತ್ತು ಬೇವಿನಹಳ್ಳಿ ಗ್ರಾಮದ ಜಮೀನಿಗಳು ನೀನು ನನ್ನ ತಂಗಿಮಗನಾದ್ದರಿಂದಾ ನಿನಗೆ ಬಕ್ಷಿಸ ಕೊಟ್ಟು ಬಕ್ಷಿಸ ಪತ್ರ ತಾರೀಖು ೮ ನೇ ನವಂಬರ ಸನ್ನ ೧೯೩೪ ನೇ ಇಸ್ವಿ ದಿವಸ ನೊಂದಣಿ ಮಾಡ್ಸಿಕೊಟ್ಟೆ

ನನ್ನ ತವಪ್ಪಾ ಮೈತ ಪುಜ್ಜಪ್ಪಾ ಮೃತಪಟ್ಟ ನಂತರಾ ಆತನ ಹೆಂಡತಿ ಪ್ರೋತಿ ಇಂಬವ್ವಾ ಇವಳು ತಾನು ಜೀವಂತ ಇರತಾ ಬಬ್ಬ ಬಸಪ್ಪಾ ಆತನ ತಂದಿ ಪುಜ್ಜಪ್ಪಾ ಯಡಚಿ ಎಂಬುವನನ್ನ ದತ್ತಕ ಮಾಡಿಕೊಂಡಿದ್ದಾಳೆ ಅಂತಾ ಆ ಗ್ರಾಮಕ್ಕೆ ಏಳಿಕ ಢಿಗೆ ನಾನು ಹೋದಾಗ್ಗೆ ತಿಳಿದು ಅದು ನಿಜವಾದದ್ದು ಎಂದು ನನಗೆ ಖಾತ್ರಿ ಆದ್ದರಿಂದಾ ನಿನಗೆ ನಾನು ಬರಕೊಟ್ಟ ಬಕ್ಷಿಸು ಸ್ವೈರಸಮುಜೂತಿಯಿಂದಾ ಬರಕೊಟ್ಟಿದ್ದಾದ್ದರಿಂದಾ ಆ ಬಕ್ಷಿಸ ಪತ್ರವನ್ನು ರದ್ದು ಪಡಿಸಿ ಆ ಬಗ್ಗೆ ಕಾಯದೇಶೀರ ಯೋಗ್ಯ ಸ್ಟಾಂಪಿನ ಮೇಲೆ (ಬಕ್ಷಿಸ ಪತ್ರದ ರದ್ದಿಲೇಖ) ಬರಸಿ ತಾರೀಖು ೫ ನೇ ಏಪ್ರೀಲ ಸನ್ನ ೧೯೩೬ ನೇ ಇಸವಿ ದಿವಸ ರಾಣೇಬಿನ್ನೂರ ಸಬ್ ರಜಿಸ್ತ್ರರ ಕಚೇರಿಯಲ್ಲಿ ನೊಂದಣಿ ಮಾಡಿಸಿದ್ದೇನೆ ಆ ರದ್ದಿಲೇಖ ರಜಿಸ್ತ್ರ ಆದ ನಂತರ ಟಪಾಲದ್ವಾರ ನಿನ್ನ ಕಡೆಗೆ ಬರುವದು.

ಈ ಜಾಹೀರ ನೋಟೀಸಿನಿಂದಾ ನಿನಗೆ ಪುನಃ ತಿಳಿಸುವದೇನಂದರೆ ಮೇಲೆ ಬರೆದಂತೆ ನನಗೆ ಸಮಜೂತು ತಪ್ಪಾಗಿ ನಿನ್ನ ಹೆಸರಿಲೆ ಬಕ್ಷಿಸ ಪತ್ರ ಬರಕೊಟ್ಟದ್ದು ನಿಜವಾದ ಸಂಗತಿ ಈಗ ನನಗೆ ತಿಳಿದಿದ್ದರಿಂದಾ ಅದನ್ನು ಈಗ ರದ್ದು ಪಡಿಸಿದ್ದೇನೆ. ಅದ್ದರಿಂದ ಆ ಆಸ್ತಿಗಳ ಮೇಲೆ ನಿನ್ನದೇನೂ ಮಾಲ್ಕಿ ವಹಿವಾಟು ಇರುವದಿಲ್ಲ ಅದನ್ನು ಕಬಜಾ ತೆಗೆದುಕೊಳ್ಳುವದಕ್ಕೆ ವಗೈರೆ ಯಾವ ವಿಧದಿಂದಲೂ ನೀನು ಪ್ರಯತ್ನ ಮಾಡಬಾರದು. ತಿಳಿಯುವದು. ತಾರೀಖು ೭ ನೇ ಏಪ್ರಿಲ ಸನ್ನ ೧೯೩೬ ನೇ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತ ಬಸಪ್ಪಾ ಕೋಂ ಧರಮಪ್ಪಾ ಗೋಡಿಹಾಳ ಸಾ|| ಕುಣೇಕೆಪ್ಪ ತಾಲ್ಲೂಕ ನೊರಬ ಇಲಾಖಾ ಮೈಸೂರ ಹಾಲಿವಸ್ತಿ ಹಿರೇಮಾಗನೂರ ತಾಲ್ಲೂಕ ರಾಣೇಬಿನ್ನೂರ ಈತ ಮಾಡಿದ್ದು ಇರುತ್ತದೆ.

ದಿ. ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

—o—

ಈ ಬ್ಯಾಂಕಿನಲ್ಲಿ ಮೂರು ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯು ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಾಗಿರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯ.

ಧಾರವಾಡ ತಾ-- ೧೧-೪-೨೫ ನೇ ಇಸ್ವಿ

ನರಗುಂದ ಪೇಟೆಯ ರೈತರ ಗೋಳು.

—೦—

ಧಾರವಾಡ ಜಿಲ್ಲೆಯಲ್ಲಿ ನವಲಗುಂದ, ನರಗುಂದ, ರೋಣ ಈ ಭಾಗವನ್ನು ಬರದ ದೆಸೆಯಿಂದ ಕ್ಷಾಮ ತಗಲುತ್ತಿರುತ್ತದೆ. ಈ ಸಂಗತಿಯನ್ನು ಸರಕಾರದವರು ಸಹ ಒಪ್ಪಿದ್ದಾರೆ. ಆದರೆ ಒಪ್ಪಿಗೆಯಂತೆ ರೈತರ ಬರದ ಧವಣೆಯನ್ನು ತಪ್ಪಿಸುವದಕ್ಕಾಗಿ ಯಾವ ಉಪಾಯ ಮಾಡಿಲ್ಲ. ಕೌನ್ಸಿಲದಲ್ಲಿ ಶ್ರೀ ಜೋಗರು ಕೇಳಿದ ಪ್ರಶ್ನೆಕ್ಕೆ ಒಂದೆರಡು ಊರುಗಳಿಗೆ ನೀರಿನ ಸಂಗ್ರಹಕ್ಕಾಗಿ ಹಣ ಕೊಟ್ಟಿಂತ ಮಾತ್ರ ಉತ್ತರ ಕೊಟ್ಟಿದ್ದಾರೆ. ಈ ತಾಲೂಕಿನ ಮೇರೆಯಲ್ಲಿ ಮಲಪ್ರಭಾ ಹೊಳೆಯು ಹರಿಯುತ್ತಿದ್ದು, ಇದರಿಂದ ಕಾಲುವೆ ತೆಗೆದು ಎರೆನಾಡಿನಲ್ಲಿ ನೀರು ಹಾಯಿಸುವಂತಿದ್ದರೂ, ಹಣಕ್ಕೆ ತಕ್ಕ ಪ್ರಾಪ್ತಿಯಾಗಲಾರದೆಂದು ಸರಕಾರದವರು ಅದರ ಗೋಜಿಗೆ ಹೋಗಿಲ್ಲ. ಇದರಿಂದ ರೈತರ ಕಷ್ಟ ನಷ್ಟಗಳು ದೂರಾಗದೆ, ಅವು ಯಾವಾಗಲೂ ಮೂರ್ತಿಮಂತ ಭೀತ್ಯುತ್ಪಾದಕವಾಗಿ ನಿಂತಿರುತ್ತವೆ.

ಹೋದ ವರ್ಷ ಮಳೆಯು ಬಹಳ ಮಂದವಾಯಿತು. ನರಗುಂದ ಪೇಟೆಯಲ್ಲಿ ಬೆಳೆಯು ಅಷ್ಟಕ್ಕಷ್ಟೇ ಬಂತು. ಆದ್ದರಿಂದ ಹಪ್ತೆಯ ಮಾಫೀ ತಹಕೂಬಿ ಕೊಡಬೇಕೆಂದು ರೈತಜನರು ಕೌನ್ಸಿಲದ ಮೆಂಬರರಾದ ಶ್ರೀ ಜೋಗರನ್ನು ಮುಂದೆ ಮಾಡಿಕೊಂಡು ಮ. ಕಲೆಕ್ಟರ ಸಾಹೇಬರವರಿಗೆ ಅರ್ಜಿಯನ್ನು ಕೊಟ್ಟರು. ಸಾಹೇಬರು ಸಹಾನುಭೂತಿಯಿಂದ ಅರ್ಜಿಯ ವಿಚಾರಣೆ ಮಾಡುವೆವೆಂದು ಕಾಲೋಚಿತವಾದ ಪಡಿಯಚ್ಚಿನ ಉತ್ತರ ಕೊಟ್ಟು ರೈತರನ್ನು ಸಂತೈಸಿದರು. ಅನಂತರ ಅರ್ಜಿಯು ತಪಶೀಲ ಆಗಲೆಂದು ಹುಕುಮು ಬರೆದು ಕಳಿಸಿದರು. ತಾಲೂಕಿನ ಮಾಮಲೇದಾರರವರಂತೂ ತಮ್ಮ ಅಣೆವಾರಿಯು ತೀರ ಸರಿಯಾಗಿದೆಂದೂ, ಇದು ಚಳವಳ ದಕ್ಷಂಥವರ ಉಪದ್ವ್ಯಾಪವಾಗಿರುತ್ತದೆಂದೂ ರಿಪೋರ್ಟ ಮಾಡಿದರು.

ಈ ಮೆ ಕಲೆಕ್ಟರ ಸಾಹೇಬರವರ ಹುಕುಮಿನ ಮೇಲೆ ಕಮಿಶನರ ಮತ್ತು ಗವರ್ನರ ಸಾಹೇಬರವರಿಗೆ ಅಪೀಲ ಅರ್ಜಿಯನ್ನು ಮಾಡಬೇಕೆಂದು ಕೆಲ ರೈತರ ಹವಣಿಕೆ. ಇದರಿಂದೇನೂ ಉಪಯೋಗವಾಗಲಾರದು. ಏಕೆಂದರೆ ರೈತರಲ್ಲಿ ಸಂಘಶಕ್ತಿಯಿಲ್ಲ. ಬರೇ ಅರ್ಜಿಯು ಆ ಶಕ್ತಿಯಾಗಲಾರದು. ತಂಜಾವರದ ಮಿರಾಸದಾರರಲ್ಲಿರುವಂಥ ಬಂಟತನವಿದ್ದರೇ ಸರಕಾರವು ಕಣ್ಣು ತೆರೆದು ನೋಡುವದು. ಅವರಂಥ ಸ್ವಾರ್ಥತ್ಯಾಗವೂ, ಜನತೆಯ ಹಿತಕ್ಕಾಗಿ ಸ್ವಂತ ಹಾನಿಯನ್ನು ಮಾಡಿಕೊಳ್ಳುವ ವೈರಾಗ್ಯವೂ ಈಗಿನ ಪರಿಸ್ಥಿತಿಯಲ್ಲಿ ಕರ್ನಾಟಕದ ರೈತರಲ್ಲಿ ಒಡಮೂಡುವ ಆಶೆ ಮಾಡುವದೇ ಹುಚ್ಚತನವು. ತಮ್ಮಲ್ಲಿ ಕರ್ತೃತ್ವವಿಲ್ಲೆಂದು ರೈತರು ದುಃಖಿಸಬೇಕಲ್ಲದೆ, ಅಧಿಕಾರಿಗಳು ಹಪ್ತೆಯ ಮಾಫೀ ತಹಕೂಬಿ ಕೊಡಲಿಲ್ಲೆಂದು ದುಃಖಿಸತಕ್ಕದ್ದಲ್ಲ.

ದೇಶಬಂಧುವಿಗೆ ಆಮಂತ್ರಣವಿಲ್ಲ.

—೦—

ಪಾರ್ಲಮೆಂಟ ಸಭೆಯಲ್ಲಿ ಮಹಾತ್ಮರಿಗೂ ದೇಶಬಂಧು ದಾಸರಿಗೂ ವಿಲಾಯತಿಗೆ ಬರಲು ಆಮಂತ್ರಣ ಕೊಡಬೇಕೆಂಬ ಸೂಚನೆಯಾದ ಕೂಡಲೆ, ಇವರಿಗೆ ಆಮಂತ್ರಣ ಕೊಟ್ಟಿರುವದಿಲ್ಲೆಂದು ಇಂಡಿಯಾ ಕಚೇರಿಯಿಂದ ಪ್ರಸಿದ್ಧ ಮಾಡಲ್ಪಟ್ಟಿತು. ಕೂಲಿಕಾರರು ಪ್ರಧಾನರಾಗಿದ್ದಾಗ, ಈ ಆಮಂತ್ರಣದ ಸೊಲ್ಲು ಆಗಾಗ್ಗೆ ಏಳುತ್ತಿತ್ತು. ಅವರೇ ಮಂತ್ರಿಯಾಗಿಯುಳಿದಿದ್ದರೆ- ಈ ಸಾರೆ ಮಹಾತ್ಮರೇ ಮೊದಲಾಗಿ ನಾಲ್ಕೈದು ಜನರಿಗೆ ನಿಃಸಂಶಯವಾಗಿ ಆಮಂತ್ರಣ ಬರುತ್ತಿತ್ತು. ಆದರೆ ದೊರೆತನವೇ ಬದಲಾದ್ದರಿಂದ ಮತ್ತು ಅವರ ಮನಸ್ಸಿನಲ್ಲಿ ಸಕ್ಕರಿಯಂಥ ನವಿಮಾತಾಡುವದೇ ಬಹಳವಾಗಿರುವದರಿಂದ, ಆಮಂತ್ರಣಕೊಟ್ಟು ಅವರ ಕೂಡ ರಾಜಕೀಯ ಹಕ್ಕು ಸ್ವಾತಂತ್ರ್ಯ ಕೊಡುವ ವಿಷಯವಾಗಿ ಸಂಭಾಷಣೆ ಮಾಡುವದೆಂದರೆ- ಹಾದೀ ಹೋಗುವ ದೆವ್ವವನ್ನು ಮನೀ ಹೊಗಿಸಿಕೊಂಡಂತಾಗುವದುಂಟು. ಆದ್ದರಿಂದ ಇವರನ್ನು ಕರಿಸುವ ಗೋಜಿಗೆ ಇವರೇಕೆ ಹೋಗುವರು? ದೇಶಬಂಧು ದಾಸರಾಗಲಿ, ಮಹಾತ್ಮರಾಗಲಿ, ಲಾಲಾ ಲಜಪತರಾಯ ಅಥವಾ ಪಂಡಿತ ದ್ವಯರಾದ ಮಾಲವಿಯಾ- ಮೋತೀಲಾಲರಾಗಲಿ, ಔತಣದ ದೆಸೆಯಿಂದ ಕಾಲು ತೊಳೆಗೊಂಡು ಕೂತಿಲ್ಲ. ಹಿಂದುಸ್ಥಾನಕ್ಕೆ ಗೌರವ ಬರುವಂಥ ಶರ್ತುಗಳಿಗೆ ಇಂಗ್ಲಿಷ ಜನರು ಒಡಂಬಡುತ್ತಿದ್ದರೇ ಸಹಕಾರವೆಂದು ದೇಶಬಂಧು ದಾಸರು ಸಾರಿ ಸಾರಿ ಹೇಳಿದ್ದಾರೆ. ಈ ಸ್ಪಷ್ಟೋಕ್ತಿಯು ಇಂಗ್ಲಿಷ ಸರಕಾರಕ್ಕೆ ದೊಡ್ಡ ಬಿರಿಯೇ ಸೈ. ಈ ಬಿರಿಯೊಳಗಿಂದ ಪಾರಾಗುವ ಹಂಚಿಕೆ ಕಂಡ ವಿಲಾಯತಿಯ ಮಂತ್ರಿಗಳು ಇವರಿಗೆಂದೂ ಆಮಂತ್ರಣ ಕಳಿಸಲಾರರೆಂಬುದೇ ನಿಶ್ಚಯ.

ರೇಲ್ವೆ ಮತ್ತು ಮೋಟಾರಿನಲ್ಲಿ ಪ್ರಯಾಣಿಕರ ದಟ್ಟಣಿ.

ಆವಶ್ಯಕ್ಕಿಂತ ಹೆಚ್ಚು ಜನರನ್ನು ಮೋಟಾರಿನಲ್ಲಿ ಕೂಡ್ರಿಸಿಕೊಂಡು ಹೋಗುವಂಥ ಮೋಟಾರ ಕಂಪನಿಗಳ ಮೇಲೆ ಪುಣೆಯ ಪೋಲೀಸರು ಖಟ್ಲೆ ಮಾಡಿರುತ್ತಾರೆಂದು ಕೇಸರಿಕಾರರು ಬರೆದು, ಅದೇ ಪ್ರಕಾರ ರೇಲ್ವೆ ಕಂಪನಿಗಳ ಮೇಲೇಕೆ ಮಾಡಬಾರದೆಂದು ಬರೆಯುತ್ತಾರೆ. ಮೋಟಾರ ಕಂಪನಿಯವರು ಪುಣೆಯ ಕಡೆಗೆ ಪ್ಯಾಸೆಂಜರರನ್ನು ತಕತ್ಕಿಂತ ದಟ್ಟಣಿ ಮಾಡಿದ್ದರಿಂದ ಪೋಲೀಸರು ಅವರನ್ನು ಹಿಡಿದಿದ್ದಾರೆ. ಇದೇ ಪ್ರಕಾರ ರೇಲ್ವೆಯ ಬಂಡಿಯನ್ನು ನಡುದಾರಿಯಲ್ಲಿ ತರುಬಿ ಜನರನ್ನು ಎಣಿಸಬೇಕೆಂದು ಕೇಸರೀ ಕರ್ತರ ಸೂಚನೆಯು. ಈ ಪತ್ರ ಸಂಪಾದಕರು ಅಷ್ಟು ದೂರ ಮತ್ತು ದೀರ್ಘ ಪ್ರಯತ್ನ ಪಡುವ ಕಾರಣವೇ ಇಲ್ಲ. ಪುಣೆಯ ಸ್ಟೇಶನದಲ್ಲಿಯೇ ನೋಡಲಿ, ಪೋಲೀಸರ ಕಣ್ಣೆದುರಿಗೆ ಜನರನ್ನು ಕುರಿಗಳಂತೆ ತುಂಬುವದನ್ನು ಪ್ರತ್ಯಕ್ಷ ಕಾಣುವರು. ಪೋಲೀಸರು ರೇಲ್ವೆ ಕಂಪನಿಯ ಮೇಲೆ ಖಟ್ಲೆ ಮಾಡುತ್ತಾ ಬಂದಿದ್ದರೆ- ಮೇಲೆ ಹೇಳಿದಂತೆ ಜನರನ್ನು ದನಗಳಂತೆ ತುಂಬುತ್ತಲೇ ಇರುತ್ತಿದ್ದಿಲ್ಲ. ಅವರು ಮೊದಲಿನಂತಲೇ ಪೋಲೀಸರ ಹೆದರಿಕೆ ಇಲ್ಲದೆ ಜನರನ್ನು ತುಂಬುವರು. ಈ ಪ್ರಕಾರ ರೇಲ್ವೆ ಕಂಪನಿಗಳ ಖಟ್ಲೆ ಮಾಡುವಂತೆ ಕಾಯಿದೆಯಲ್ಲಿ ಕಲಮು ಇಲ್ಲ. ಇಂಥದೊಂದು ಕಲಮು ಸೇರಿಸುವಂತೆ ಅಸೆಂಬ್ಲಿಯಲ್ಲಿ ಠರಾವು ತರತಕ್ಕ ಅವಶ್ಯಕತೆಯುಂಟಾಗಿದೆ.

ಚಾವಲಾದ ಕೊಲೆಯ ವಿಚಾರಣೆಯ ವರ್ಗ

ಚಾವಲಾ ಸಾಹೇಬರ ಕೊಲೆಯ ವಿಚಾರಣೆಯು ಮುಗಿದು ಆರೋಪಿಗಳನ್ನು ಸೆಶನ ಕಮಿಟ ಮಾಡಲ್ಪಟ್ಟಿತು. ಮಾಫೀ ಸಾಕ್ಷೀದಾರನ ಸಾಕ್ಷೀ ಆದ ನಂತರ ಇವನ ವಿಚಾರಣೆಯು ಪ್ರತ್ಯೇಕವಾಗಿ ನಡೆಯುವದು. ಮುಂಬಯಿಯಲ್ಲಿ ಈ ಕೊಲೆಯ ವಿಷಯವಾಗಿ ಬಹುತೇಕವಾಗಿ ಜನರ ಮನಸ್ಸು ಕಲುಷಿತವಾಗಿರುವದರಿಂದ ನ್ಯಾಯ ನಿಷ್ಪಕ್ಷಪಾತದಿಂದ ಮತ ಕೊಡುವ ಜ್ಯೂರಿಗಳು ಸಿಗಲಾರರು. ಆದ್ದರಿಂದ ವಿಚಾರಣೆಯನ್ನು ಮದ್ರಾಸ ಅಥವಾ ಬೇರೊಂದು ಹಾಯಕೋರ್ಟಿಗೆ ವರ್ಗ ಮಾಡಬೇಕೆಂದು ಆರೋಪಿಗಳ ಪರಿಯಿಂದ ಅರ್ಜಿಯನ್ನು ಮಾಡುವರು. ಜನರ ಮನಸ್ಸು ಕಲುಷಿತವಾಗಿರುವದು ನಿಜವೆಂದು ಇಬ್ಬರು ಸುಪ್ರಸಿದ್ಧ ಗೃಹಸ್ಥರಾದ ಮೆಸರ್ಸ ಜಮುನಾದಾಸ ದ್ವಾರಕಾದಾಸ ಮತ್ತು ಜಮುನಾದಾಸ ಮೇಥಾ ಇವರು ಮ್ಯಾಜಿಸ್ಟ್ರೇಟ ಕೋರ್ಟಿಗೆ ಹೋಗಿ ಅಫಿಡೆವಿಟ್ಟ ಕೊಟ್ಟಿದ್ದಾರೆ. ಇವರು ಈ ಪ್ರತಿಜ್ಞಾ ಲೇಖದಲ್ಲಿ ಏನು ಬರೆದಿರುತ್ತಾರೆಂಬುದು ಗುಪ್ತವಿರುತ್ತದೆ.

ಹುಬ್ಬಳ್ಳಿಯ ಮಾನಹಾನಿಯ ಫಿರ್ಯಾದಿಯು.

—೦—

ಫಿರ್ಯಾದಿಯ ಸಾರಾಂಶವು.

—೦—

ಫಿರ್ಯಾದಿ ಮಿ. ಸುಬ್ಬರಾವ ರಾಮಚಂದ್ರ ಜ್ಯಾಹಟ್ಟಿ

ವಿರುದ್ಧ- ೧ ಮಿ. ಮಹಬೂಬ ಅಲ್ಲಿಖಾನ ಆಕ ಬರಖಾನ ಸವಣೂರ

೨ ಮಿ. ಶಿದ್ದಪ್ಪಾ ತೋಟಪ್ಪಾ ಕಂಬಳಿ

೩ ಮಿ ಜೋತಿಬಾ ಸಂತಬಾ ಗಣೇಶಕರ

ಫಿರ್ಯಾದಿಯು ವಿನಂತಿ-

೧ ಹುಬ್ಬಳ್ಳಿ ಮ್ಯುನಿಸಿಪಾಲಿಟಿಯ ತ್ರೈವಾರ್ಷಿಕ ಚುನಾವಣೆಯು ಎಪ್ರಿಲ ತಿಂಗಳ ೧೭ನೆಯ ತಾರೀಖಿನ ದಿವಸ ನಡೆಯುವದು.

೨ ಮಾರ್ಚ ತಿಂಗಳ ೬ನೇ ತಾರೀಖಿನ ದಿವಸ ಹುಬ್ಬಳ್ಳಿ ಮ್ಯುನಿಸಿಪಾಲಿಟಿಯ ಜನರಲ ಕಮಿಟಿ ಇತ್ತು. ಮಿ ಕಂಬಳಿಯವರು ಅಧ್ಯಕ್ಷರಾಗಿದ್ದರು. ಮೆಂಬರರ ಹೊರ್ತು ಬೇರೆ ಜನರೂ ಕಮಿಟಿಗೆ ಬಂದಿದ್ದರು. ಈ ಕಮಿಟಿಯಲ್ಲಿ ಮಿ. ಕಂಬಳಿಯವರು ಸಾದರ ಮಹಬೂಬಲ್ಲಿಖಾನರಿಗೆ ಒಂದು ಮಾನಹಾನಿಕಾರಕ ಠರಾವನ್ನು ತಂದುಕೊಟ್ಟರು. ಈ ಠರಾವು ಮ್ಯುನಿಸಿಪಾಲಿಟಿಯಲ್ಲಿ ಚರ್ಚಿತವಾಗತಕ್ಕ ವಿಷಯಗಳಲ್ಲಿ ಬಂದಾಗಿದ್ದಿಲ್ಲ. ಮಿ. ಜೋತಿಬಾ ಇವರು ಇದನ್ನು ಅನುಮೋದಿಸಿದರು. ಮಿ. ಕಂಬಳಿಯವರು ಕಾಯದೆಶೀರ ಮತ್ತು ನ್ಯಾಯವಾಗಿ ಈ ಠರಾವನ್ನು ಕಮಿಟಿಯ ಮುಂದೆ ತರಗೊಡತಕ್ಕದ್ದಿದ್ದಿಲ್ಲ ಮತ್ತು ಅದೇ ರೀತಿಯಾಗಿ ಕಾಯದೆ ಪ್ರಕಾರ ಪಾಸಮಾಡತಕ್ಕದ್ದಿದ್ದಿಲ್ಲ. ಕಾಯದೆಯ ಪ್ರಶ್ನದ ಹೊರ್ತು ಈ ಠರಾವು ನನಗೆ ಘನವಾಗಿ ಅಪಮಾನಕಾರಕವಾಗಿರುತ್ತದೆ. ಅದರೊಳಗಿನ ಮಾನಹಾನಿಕಾರಕ ಲಕ್ಷಣಿಕೆಯು ಕೆಳಗೆ ಕೊಟ್ಟಂತಿರುತ್ತವೆ.

"ಚುನಾವಣೆಯಲ್ಲಿ ಮಿ. ಸುಬ್ಬರಾವ ಜ್ಯಾಹಟ್ಟಿಯವರು ಹೋಟರರಿಗೆ ಭಯ ಹಾಕುವರು. ಮತ್ತು ಬೇರೆ ಬೇರೆ ಬೇಕಾಯದೆಶೀರ ಕೃತ್ಯಗಳನ್ನು ಮಾಡುವರು"

೩ ಮೇಲಿನ ಮಾನಹಾನಿಕಾರಕವಾದ ಠರಾವು ಪೂರಾ ಸುಳ್ಳಿರುತ್ತದೆ. ಇದು ನನ್ನ ವಿಷಯವಾಗಿ ದ್ವೇಷಭಾವದಿಂದ ಮತ್ತು ಹೊಟ್ಟೇಕಿಚ್ಚಿನಿಂದ ಮಾಡಿದ್ದಿರುತ್ತದೆ.

೪ ಮೇಲಿನ ಮಾನಹಾನಿಕಾರಕವಾದ ಠರಾವನ್ನು ಮೇಲಿನ ಮೂವರು ಮಾಡಿದ್ದಾರೆ. ಮಿ ನವಾಬ ಮಹಬೂಬಖಾನ ಮತ್ತು ಮಿ. ಜೋತಿಬಾ ಇವರು ಬಾಯಿಯಿಂದ ಉಚ್ಚರಿಸಿ ಮತ್ತು ಮಿ. ಕಂಬಳಿಯವರು ಇದನ್ನು ಬರೆದು, ಕಮಿಟಿಯಲ್ಲಿ ಹಾಜರಿದ್ದ ಜನರ ಮುಂದೆ ಓದಿ ಮಾಡಿದ್ದಾಗಿರುತ್ತದೆ.

೫ ಮೇಲಿನ ಮೂವರು ಈ ವಾಕ್ಯಗಳನ್ನು ನನ್ನ ಫಿರ್ಯಾದೆಗೆ ಕೇಡುಕರುತ್ತದೆಂಬದಾಗಿ ತಿಳಿದು ಮತ್ತು ತಿಳಿಯಲಿಕ್ಕೆ ಕಾರಣವಾಗುವಂಥ ರೀತಿಯಿಂದ ಮಾಡಿದ್ದಾರೆ.

೬ ಲಂಚರುಷವತ್ತು ಕೊಡುವಂಥ ದುಷ್ಟಮಾರ್ಗದಿಂದ ನಾನು ವರ್ತಿಸಿದ್ದೇನೆಂದು ಈ ಮೂವರು ನ್ಯಾಯವಾದ ಕಾರಣವಿಲ್ಲದೆ, ನನಗೆ ಅಪಾಯವಾಗುವಂಥ ಕೃತ್ಯ ಮಾಡಿ, ಸುಳ್ಳು ಆರೋಪಗಳನ್ನು ಹೊರಿಸಿದ್ದಾರೆ,

೭ ಈ ಮೂವರು ಮಾಡಿದ ಆರೋಪಗಳು ನಿರಾಧಾರ ಮತ್ತು ಸುಳ್ಳು ಇರುತ್ತವೆ. ನನ್ನ ಮಾನಸ್ಥಿತಿ ಮಾಡಿ ಚುನಾವಣೆಯಲ್ಲಿ ನನ್ನ ಭರವಸೆಯನ್ನು ಬಲಹೀನ ಮಾಡುವದಕ್ಕಾಗಿ ಮಾಡಿದ್ದಾಗಿರುತ್ತದೆ ಇವರು ನನ್ನ ಕೆಡಹ ಬಯಕೆಯಿಂದ ವರ್ತಿಸುತ್ತಾರೆ.

೮ ಈ ಅಪಮಾನಕಾರಕವಾದ ಹೇಳಿಕೆಯಿಂದ ನನ್ನ ಚಾರಿತ್ರ್ಯ ಮತ್ತು ಗೌರವ ಪ್ರತಿಷ್ಠೆಗೆ ಹಾನಿ ತಟ್ಟಿದೆ ಮತ್ತು ತಟ್ಟುವ ಸಂಭವವುಂಟು

೯ ಈ ಮೂವರು ಇಂಡಿಯನ್ನ ಪಿನಲಕೋಡಿನ ೫೦೦ನೇ ಮತ್ತು ಈ ಫಿರ್ಯಾದಿಯ ಸಂಗತಿಗೆ ಹತ್ತುವಂಥ ಬೇರೆ ಕಲಮುಗಳ ಪ್ರಕಾರ ಅಪರಾಧ ಮಾಡಿದ್ದಾರೆ

೧೦ ಈ ಮೂವರು ಮಾಡಿದಂಥ ಅಪರಾಧದ ಬಗ್ಗೆ ಇವರ ಮೇಲೆ ಕಾಯದೆ ಪ್ರಕಾರ ಇಲಾಜಾಗಬೇಕೆಂಬ ವಿನಂತಿಯು.

ಫಿರ್ಯಾದಿಯು ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಾಗಿರುತ್ತದೆಂಬದನ್ನು ಈ ಮೊದಲು ಬರೆದಿರುತ್ತೇವೆ. ವಿಚಾರಣೆಯ ಮುದ್ದತು ೧೪ನೆಯ ತಾರೀಖಿನ ದಿವಸ ಇರುತ್ತದೆ.

ಬಿ. ಎಜಿ ಪರೀಕ್ಷೆಯ ಪರಿಣಾಮವು.

—೦—

ಒಕ್ಕಲತನದ ಶಾಲೆಯ ಬಿ. ಎಜಿ. ಪರೀಕ್ಷೆಯಲ್ಲಿ ಕೆಳಗಿನ ಕನ್ನಡಿಗರು ಪಾಸಾಗಿದ್ದಾರೆ.

ಸೆಕಂಡ ಕ್ಲಾಸ—

೧ ವೆಂಕಟೇಶ ಭೀಮರಾವ ದೇಸಾಯಿ
೨ ಸತ್ಯಪ್ಪಾ ಪ್ರಧಾನಪ್ಪಾ ಅಕಲ
೩ ಅಪ್ಪಾರಾವ ಶೇಷಪ್ಪಾ ಪಾಟೀಲ
೪ ಮಧ್ವರಾವ ಕೃಷ್ಣರಾವ ಶಿರೋಳ
೫ ದತ್ತಾತ್ರಯ ಮಲ್ಹಾರ ಕುಲಕರ್ಣಿ

ಪಾಸ—

೧ ಹಣಮಂತ ಶಿವರಾವ ಅಲಬೂರ
೨ ಬಸನಗೌಡಾ ಸೋಮನಗೌಡಾ ಪಾಟೀಲ.

ಸ್ತ್ರೀಯಳ ಅಧ್ಯಕ್ಷತೆಯಲ್ಲಿ ಮ್ಯುನಿಸಿಪಾಲಟಿಯ ಅಧ್ಯಕ್ಷರ ಚುನಾವಣೆಯು.

—೦—

ಮದ್ರಾಸ ಮ್ಯುನಿಸಿಪಾಲಿಟಿಯ ಅಧ್ಯಕ್ಷರನ್ನು ಆರಿಸುವ ಕೆಲಸವು ಕಳೆದ ಮಂಗಳವಾರ ನಡೆಯಿತು. ಹಳೇ ಅಧ್ಯಕ್ಷರು ಕೌನ್ಸಿಲರರಾದ್ದರಿಂದ ಈಗಿನ ಮಟ್ಟಿಗೆ ಒಬ್ಬರನ್ನು ಅಧ್ಯಕ್ಷರಾಗಿ ಕಲ್ಪಿಸಬೇಕಾಗಿತ್ತು. ಅಲ್ಲಿಯ ಹಾಯಕೋರ್ಟಿನ ಜಡ್ಜರಾದ ನ್ಯಾಯಮೂರ್ತಿ ದೇವದಾಸರ ಪತ್ನಿಯವರು ಮೆಂಬರರಾಗಿದ್ದಾರೆ. ಇವರನ್ನೇ ಅಧ್ಯಕ್ಷರಾಗಿ ನೇಮಿಸಿದರು ಇದೊಂದು ಅಪೂರ್ವ ಸಂಗತಿಯು

ಅಧ್ಯಕ್ಷ ಪದಕ್ಕೆ ಮೂವರು ಉಮೇದವಾರರಾಗಿದ್ದರು ಅವರು—

೧ ಮಿ. ಧಾನಿಕಚಲಮ ಚೆಟ್ಟಿ
೨ ,, ದಿ ಬ. ನಾರಾಯಣಸ್ವಾಮಿ ಶೆಟ್ಟಿ
೩ ,, ರಾ. ಬ. ಡಾಕ್ಟರ ನಟೆಶನ

ಈ ಮೂವರೂ ಜಸ್ಟಿಸ ಪಕ್ಷಕ್ಕೆ ಸೇರಿದವರು. ಒಬ್ಬರೇ ಉಮೇದವಾರರಾಗಿರೆಂದು ಹೇಳುವ ಮಾನಸಿಕ ಮತ್ತು ನೈತಿಕ ಧೈರ್ಯವು ಆ ಪಕ್ಷದಲ್ಲಿ ಕಂಡಿಲ್ಲ. ಆದ್ದರಿಂದ ಒಂದೇ ಪಕ್ಷದವರಾದ ಅಧಿಕಾರದ ಆಶೆಯಿಂದ ಮೂವರು ಸ್ಪರ್ಧೆ ಮಾಡಿದರು. ಮೊದಲನೇ ಹೋಟಿನಲ್ಲಿ ದಿವಾನ ಬಹಾದ್ದೂರರು ಹಿಂದೆ ಬಿದ್ದರು. ಎರಡನೇ ಸಾರೆ ಹೋಟು ತಕ್ಕೊಳ್ಳುವಾಗ ರಾ. ಬ. ನಟೇಶನರು ತಾವಾಗಿ ಹಿಂದಕ್ಕೆ ಸರಿದರು. ಶ್ರೀ. ಧಾನಿಕಚಲಮ ಶೆಟ್ಟಿ ಅಧ್ಯಕ್ಷರಾಗಬೇಕೆಂದು ಜಸ್ಟಿಸ ಪಕ್ಷದ ಬಯಕೆಯಾಗಿತ್ತು. ಅದರಂತೆ ಅವರು ಆರಿಸಲ್ಪಟ್ಟರು.

ಪರೋಪದೇಶ ಪಾಂಡಿತ್ಯ.

—೦—

ಇದೆಂಥ ಲಜ್ಜಾಸ್ಪದವು!

—೦—

ತಾ॥ ೧೦-೪-೨೫ನೇ ಕರ್ಮವೀರ ಪತ್ರದಲ್ಲಿ ಕರ್ಮವೀರ ಪತ್ರಕಾರರು ವಿವಿಧ ಸುದ್ದಿಗಳ ಎರಡನೇ ಸಂಪುಟದಲ್ಲಿ ೩೯ ನೇ ರಾಷ್ಟ್ರೀಯ ಸಭೆಯ ಆಜ್ಞಾ ಪ್ರಕಾರ ೨೦೦೦ ಯಾರ್ಡು ನೂಲು ಕೊಟ್ಟು ರಾಷ್ಟ್ರೀಯ ಸಭೆಯ ಭಕ್ತರು ತಕ್ಕಷ್ಟು ಮಟ್ಟಿಗೆ ಮೆಂಬರರು ಆಗದಿರುವದು ಕೇವಲ ಲಾಂಛನಾಸ್ಪದವೆಂದು ಹಳ್ಳೇ ಬೋರಿಸಿಂದ ಬರೆದಿರುತ್ತಾರೆ. ಆದರೆ ಕರ್ಮವೀರ ಪತ್ರದ ಸಂಪಾದಕರೇ ೨೦೦೦ ಯಾರ್ಡು ನೂಲು ಕೊಟ್ಟು ರಾಷ್ಟ್ರೀಯ ಸಭೆಯ ಮೆಂಬರರು ಆಗಿರುವರೋ? ಇದೆಂಥ ಲಜ್ಜಾಸ್ಪದವು.

[illegible] ಸಂಘ.

ದಿ ಧಾರವಾಡ ಅರ್ಬನ ಕೋ ಆಪರೆಟಿವ್ಹ ಬ್ಯಾಂಕ ಲಿಮಿಟೆಡ.

ಹುಂಗೆಕರಾರ ಪೇಟೆ, ಧಾರವಾಡ.

ಕೋ ಅಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ

ಶೇರಿಗೆಯು ಆರುಲಕ್ಷದ ಮೇಲಿಂಟು. ಚೆಕ್ಕು, ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ನಡೆಸಲ್ಪಡುವದು. ಕಾಯಿಂ ಮತ್ತು ಥೋಡೆ ಕರದ ಡಿಪಾಜಿಟುಗಳಿಗೆ ಚನ್ನಾಗಿ ಬಡ್ಡಿ ಕೊಡಲಾಗುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಹಾಗಿ,
ಮ್ಯಾನೆಜಿಂಗ ಡಾಯರೆಕ್ಟರ

ಆರ್. ಎಮ್. ಜಾನ್ ಎಂಡ ಸನ್ಸ ಹುಬ್ಬಳ್ಳಿ.

ಎಜಂಟ್ಸ ಫೋರ ಕಾರಬೋನಿಕ್ ಅಸಿಡ್ಡ ಗ್ಯಾಸ, ಮ್ಯಾನುಫ್ಯಾಕ್ಚ್ಯುರರ್ ಆಫ್ ಏರೆಟೆಡ ವಾಟರ್ಸ.



ತಾವು ಆರ್ಡರ ಬೇಗ ಕಳಿಸಿರಿ

• ನಮ್ಮಲ್ಲಿ ಸಿಗುವ ಸಾಮಾನುಗಳ ವಿವರ

ಫುಲ್‌ಗ್ಯಾಸ ಸಿಲಿಂಡರಗಳು ಇಂಗ್ಲೀಷ ಮತ್ತು ಜರ್ಮನಿ ಪೇಟೆಂಟ ಕಾರ್ಡ್ಸ, ಎಮ. ಟಿ ಸೋಡಾ ವಾಟರ ಬಾಟಲಗಳು, ೫೫೦ ನಂ. ಸಾಬೀನ ತೆಪ್ಪಿ ೧ ಪೌಂಡಿನವು. ಸೋಡಾವಾಟರ್ ಮಶಿನುಗಳು ಮತ್ತು ಎಲ್ಲ ತರದ ಕಲರಿನ ಬಾಟಲಿಗಳ ಎಸೆನ್ಸಗಳು, ಅಮೆರಿಕನ್ ಆಯಿಸ್ಕ್ರೀಮ ಸೋಡಾ, ಬನಾನಾ, ಕೋಕಾಚೆಂಪೇನ್, ಲೆಮನ್ ನಂ. ೧ ಲೆಮನ್ ಜುಯಿಸ್ ಸೋಡಾ ನಂ. ೧ ಮೆಂಗೋ, ಆರೇಂಜ, ಫಾಯಿನಾಪಲ್, ಪಿಸ್ತಾ..., ಕ್ವಿನಿನ ಟಾನಿಕ್, ರಾಜಬರಿ ನಂ. ೧ ಕಲ್ಪಾಬ ನಂ. ೧ ಸ್ಪೇಶಲ್ ಜಿಂಜರ್ ಬೀರ ನಂ ೧, ರಬ್ಬರ ರಿಂಗ್ಸ್, ಬೆಸ್ ಇತರ ಮಶಿನರಿ ಪಾರ್ಟುಗಳು ನಮ್ಮಲ್ಲಿ ಸಿಗುತ್ತವೆ. ಮತ್ತು ಶುದ್ಧ ನೀಲಗಿರಿ ಎಣ್ಣೆಯು ಎಲ್ಲ ತರದ ಬಾಟಲ್ಸಗಳು ಸಿಗುತ್ತವೆ. ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಕೊಡುತ್ತೇವೆ. ನಮ್ಮಲ್ಲಿ ಕಬ್ಬಿಣದ ಮಿಲಿಟರಿ ಸಿಂಗಲ ಕಾಟ್ಸಗಳು ಸೋವಿ ದರದಿಂದ ಮಾರಲಿಕ್ಕೆ ಸಿಗುತ್ತವೆ.



ಅಡ್ರೆಸ್— R. M. John & Sons.
Mission Compound HUBLI

ನೋಟೀಸು

ಗಂಗವ್ವಾ ಕೋಂ ಗದಿಗೆಪ್ಪಾ ಬೆಂಡಿಗೇರಿ ಸಾ॥ ಶಾವಣಗೇರಿ ಇವಳಿಗೆ—

ಶ್ರೀಗೆ ಹುಬ್ಬಳ್ಳಿಯ ಗುತಾರ ಮಾಡುವ ನೀಲವ್ವಾ ಕೋಮ ಗಂಗಪ್ಪಾ ಬೆಂಡಿಗೇರಿ ಸಾಲಿವನ್ನು ಹಳೇ ಹುಬ್ಬಳ್ಳಿ ಇವಳು ನಿಮಗೆ ಈ ನೋಟೀಸಿನಿಂದ ತಿಳಿಸುವದೇನಂದರೆ—

ನೀನು ನನ್ನ ಮದಿವೆಯ ಗಂಡನಾಗಬೇಕು ಮದುವೆಯಾಗಿ ಹತ್ತು ವರ್ಷವಾಯಿತು. ಮದಿವೆಯಾಗಿ ಹಾಲ್ಕೇ ತಿಂಗಳಲ್ಲಿ ನಾನು ನೆರೆದು ಋತುವಾಯಿತು. ಮುಂದೆ ನೀನು ನನ್ನ ಕೂಡ ಸುಖದ ಬಾಳವೆ ಮಾಡಲಿಲ್ಲ. ಒಬ್ಬ ಹೆಂಗಸಿನ ಸಹವಾಸದಲ್ಲಿದ್ದೀ ಅಂತಾ ತಿಳಿಯಿತು. ಆ ಮೂಲಕ ನನ್ನ ಮೇಲಿನ ಮನಸು ತೆಗೆದು ಹೆಂಗಸಿನ ಮನೆಯಲ್ಲಿಯೇ ಇರುತ್ತಿದಿ. ನನ್ನ ತಾಯಿಗೆ ಜೇರಾದ ತಂದೆ ಒಂದರಿ ನನಗೆ ತಿಳಿಸಲಿಲ್ಲ. ಸತ್ತ ತಾಯಿ ಬಂದರು ತಿಳಿಸಲಿಲ್ಲ. ಎರಡನೆಯವರ ಮಾರೀಫತ ಕೇಳಿ ಬಳಲಿ ದುಃಖಿಸಿದೆ, ಮುಂದೆ ಮುಪ್ಪಿನವನಾದ ನನ್ನ ತಂದೆಯು ಪಂಚಮಿ ಹಬ್ಬಕ್ಕೆ ಕರೆಯಲಿಕ್ಕೆ ಬಂದನು. ಆತನ ಕೂಡ ಕಳಿಸಿಕೊಡಲಿಕ್ಕೆ ನಾಕಬೂಲ ಮಾಡಿದ. ದೈವದವರು ಹೇಳಿದ ಮೇಲೆ ಕರಿಮಣಿ ಒಂದೂ ದಾಗೀನ ಕೊಡದೆ ಒಂದು ಹರಕು ಸೀರೆಯ ಮೇಲೆ ಕಳಿಸಿದಿ. ನಾನು ಹುಬ್ಬಳ್ಳಿಗೆ ಬಂದೆನು. ಮುಂದೆ ನೀನು ನನ್ನನ್ನು ಕರಕೊಂಡು ಹೋಗುವದಕ್ಕೆ ಬರಲೇ ಇಲ್ಲ. ನನ್ನ ತಂದೆಯು ಅನೇಕ ಪತ್ರ ಬರೆದನು. ದೈವದವರಿಂದ ಬರೆಸಿದನು. ಒಂದಕ್ಕೂ ಉತ್ತರ ಬರೆಯಲಿಲ್ಲ. ಈ ಮಧ್ಯ ನೀನು ಮತ್ತೊಬ್ಬಳನ್ನು ಮದಿವೆ ಮಾಡಿಕೊಂಡಿ. ಮೊದಲಿನ ಹಾಗೆ, ಅನಂತರದ ಮದಿವೆಯಾದ ಅನಂದದಲ್ಲಿ ನನ್ನನ್ನು ಮರೆತು ಬಿಟ್ಟಿ. ಕೊನೆಗಳ್ಳಿ ನನ್ನ ಕೂಡ ಬಾಳವೆ ಮಾಡುವದಿಲ್ಲೆಂದು ಪತ್ರ ಬರೆದಿ. ಇದರಿಂದ ನಿರಾಶೆ ಹೊಂದಿ ಈ ನೋಟೀಸು ಕೊಡುವ ಅಗತ್ಯ ಬಿತ್ತು. ನೀನು ಈ ನೋಟೀಸು ಮುಟ್ಟಿದ ಎಂಟು ದಿವಸಗಳಲ್ಲಿ ನನ್ನನ್ನು ಕರಕೊಂಡು ಹೋಗಿ ಬಾಳವೆ ಮಾಡಬೇಕು. ಕರಕೊಂಡು ಹೋಗಲಿಕ್ಕೆ ಬರುವಾಗ ನನ್ನ ಸ್ತ್ರೀ ಧನದ ದಾಗೀನ ಸೀರೆ ಮತ್ತು ಗಂಡನ ಮನೆಯ ದಾಗೀನ ಪಂಚರ ಸಮಕ್ಷಮ ಕೊಡಬೇಕು. ಮತ್ತು ಇದೇ ಪಂಚರ ಮುಂದೆ ಚಲೋ ರೀತಿಯಿಂದ ಬಾಳವೆ ಮಾಡತೇನೆಂದು ಜಾಮೀನು ಕೊಡಬೇಕು. ನನ್ನ ತಂದೆಯು ಮುಪ್ಪಿನ ಮುದಕನಿದ್ದು ಆತನಿಂದ ನನ್ನ ಸಂರಕ್ಷಣೆ ಮಾಡುವದಾಗಲಿಲ್ಲ. ಕಾರಣ ನಾನು ಸಾಹುಕಾರರಲ್ಲಿ ದೇಣಿ ಮಾಡಿರತೇನೆ. ಆ ರಕಮು ಎರಡು ನೂರು ರೂಪಾಯಿಯಾಗಿದೆ ಇದನ್ನು ಒಡ್ಡಿ ಸಹಿತ ತೀರಿಸಬೇಕು. ನೀನು ಈ ನೋಟೀಸದಲ್ಲಿ ಬರೆದ ಪ್ರಕಾರ ವರ್ತಿಸದಿದ್ದರೆ ಇದೇ ನೋಟೀಸು ಸೋಡಪತ್ರವೆಂದು ತಿಳಿದು ನಾನು ಎರಡನೆಯವನನ್ನು ಉಡಕಿ ಮಾಡಿಕೊಳ್ಳುವೆನು. ಅನಂತರ ನಿನ್ನ ಹಕ್ಕು ನನ್ನ ಮೇಲೆ ಮತ್ತು ನನ್ನ ಉಡಕಿ ಗಂಡನ ಮೇಲೆ ಬಿಲಕೂಲ ನಡೆಯುವದಿಲ್ಲ. ಮತ್ತು ಕಾಯದೇಶೀರ ಇಲಾಜ ಮಾಡಿ, ಸ್ತ್ರೀಧನ, ಗಂಡನ ಮನೆಯ ದಾಗೀನ ಮತ್ತು ಸಾಲದ ರಕಮು ವಸೂಲ ಮಾಡುವೆನು ಈ ಬಗ್ಗೆ ಪತ್ರದ ಖರ್ಚು, ಕಾಯದೇಶೀರ ಖರ್ಚಿನ ಬೋಜಾ ಮತ್ತು ಈ ನೋಟೀಸಿನ ಖರ್ಚು ನಿನ್ನ ತಲೆಯ ಮೇಲೆ ಇರುತ್ತದೆ ಅಂತ ಕೊಟ್ಟ ನೋಟೀಸು ತಾ॥ ೧೦-೪-೧೯೩೫ ನೇ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತ ನೀಲವ್ವಾ ಕೋಮ ಗಂಗಪ್ಪಾ ಬೆಂಡಿಗೇರಿ ಸಾಕೀನ ಹಳೇ ಹುಬ್ಬಳ್ಳಿ ಇವಳ ಕೈಯು ಇರುತ್ತದೆ

ಪತ್ರಿಕೆಯ ವರ್ಗಣೀ ದರ

—೦—

ನಿತ್ಯಪತ್ರಿಕೆ

೧೨ ತಿಂಗಳಿಗೆ	೧೨—೦—೦ ರೂ
೬ „	೬—೦—೦ ರೂ
೩ „	೪—೦—೦ ರೂ
ವಾರಪತ್ರಿಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ
ಮ್ಯಾನೇಜರ ವಿಜಯ, ಧಾರವಾಡ

ಈ ಪತ್ರವನ್ನು ಅಣ್ಣಾಜಾರಾಯ ... ಯರ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ... ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ನಿತ್ಯ ಪತ್ರ — ಬೆಲೆ ಅರ್ಧ ಆ.

ಸಂಪಾದಕರು- ಅನ್ನಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೬। ಧಾರವಾಡ ರವಿವಾರ ತಾರೀಖು ೧೨ನೇ ಎಪ್ರಿಲ ೧೯೩೬ (ಸಂಚಿಕೆ ೮೩

ಬೇಸಿಗೆ ಪ್ರಾರಂಭವಾಯಿತು!

ದನಗಳ ಆಹಾರವಾದ ಕಣಿಕೆಯನ್ನು ಕಾದಿರಿ !!

ಕಿರ್ಲೋಸ್ಕರ ಕಣಿಕೆ ಯಂತ್ರವನ್ನು ಉಪಯೋಗಿಸಿರಿ !!!

ನಮ್ಮ ಕಾರಖಾನೆಯಲ್ಲಿ ಎರಡು ನಮೂನೆಯ ಕಣಿಕೆ ಕೊರೆಯುವ ಯಂತ್ರಗಳು ತಯಾರಾಗುತ್ತವೆ. ಒಂದು ಕೈಯಂತ್ರ ಬೆಲೆ ೨೦ರೂ. ಇನ್ನೊಂದು ಗಾಲೀಯಂತ್ರ ಬೆಲೆ ೮೫ ರೂಪಾಯಿ ಸಣ್ಣ ಕಮತವುಳ್ಳವರು ಕೈ ಯಂತ್ರವನ್ನು, ದೊಡ್ಡ ಕಮತವುಳ್ಳವರು ಗಾಲೀ ಯಂತ್ರವನ್ನು ಉಪಯೋಗಿಸಬಹುದು. ಕಣಿಕೆಯು ೪ ಇಂಚುಗಳಿಂದ ಒಂದು ಇಂಚಿನ ವರೆಗೆ ಕೊರೆಯಲ್ಪಡುತ್ತದೆ.

ಸವಿಸ್ತರ ಸಂಗತಿಯ ಬಗ್ಗೆ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು ಲಿಮಿಟೆಡ್ } ಕಿರ್ಲೋಸ್ಕರವಾಡಿ-
ಜಿಲ್ಹಾ ಸಾತಾರಾ.

ನೋಟೀಸು

ಇನಾಂಂದಿ ಕೋಮು ಹೊರಸಾಹೇಬ ನವಾಫ ಸಾ॥ ಯಕ್ನಳ್ಳಿ ಹಾಲಿವಸ್ತಿ ಸಿಡಾರ ತಾಲೂಕ ಕೊಂಡಗೋಳ ಇಲಾಖಾ ಜಮಖಂಡಿ ಇವರಿಗೆ—

ಕೆಳಗೆ ಸಹಿ ಮಾಡಿದ ಹೊರಸಾಹೇಬ ವಲ್ಲದ ಅಲ್ಲಾಸಾಹೇಬ ನವಾಫ ಸಾಕೀನ ಯಕ್ನಳ್ಳಿ ತಾಲೂಕ ಶಿರಹಟ್ಟಿ ಇಲಾಖಾ ಸಾಂಗಲಿ ನಾನು ಈ ನೋಟೀಸಿನಿಂದಾ ನಿನಗೆ ತಿಳಿಯಪಡಿಸುವದೇನಂದರೆ- ನೀನು ನನ್ನ ಲಗ್ನದ ಹೆಂಡತಿಯಿದ್ದು ಈಗ ಅಜಮಾಸು ನಿನ್ನ ಲಗ್ನವಾಗಿ ೬-೮ ವರ್ಷಗಳಾಗಿರಬಹುದು ನಿನ್ನ ಲಗ್ನದನಂತರ ಬಂದೆರಡು ವರ್ಷಗಳ ವರೆಗೆ ನನ್ನ ನಿನ್ನ ಪ್ರಪಂಚ ಸುರಳಿತವಾಗಿ ನಡೆದು ಇತ್ತ ನಾಲ್ಕೈದು ವರ್ಷಗಳಿಂದ ನಿಮ್ಮ ನಿಮ್ಮೊಳಗೆ ಕಲಹ ಬೆಳೆದು ವೈಮನಸ್ಸಾಗಿ ನಿನ್ನ ಮನಸಿಗೆ ಬಂದಂತೆ ಮನೆ ಬಿಟ್ಟು ತಿರುಗಾಡಲಿಕ್ಕೆ ಹತ್ತಿದಿ. ಆದರೂ ನಾನು ನಿನಗೆ ಕುಸ್ತೀಳ ರೀತಿಯಿಂದ ಬುದ್ಧಿ ಹೇಳಿ ಬಾಳ್ವೆ ಮಾಡ್ಲು ಗೋಬೇಕೆಂದರೆ ನೀನು ಅದಕ್ಕೆ ಲಕ್ಷ್ಯಗೊಡದೆ ನಿನ್ನ ರೀತಿಯನ್ನು ಬಿಡದೆ ನಡೆದಿನಂತೆಯೇ ಇರಲಾರಂಭಿಸಿದಿ ತಪ್ಪಾದರೂ ನೀನು ಇಂದ ಸುಧಾರಿಸಾಳು ನಾಳೆ ಸುಧಾರಿಸಾಳು ಅಂತಾ ತಿಳಕೊಂಡು ಈಗ ಅಜಮಾಸ ಮೂರು ತಿಂಗಳ ಹಿಂದೆ ಚಾವಿಗಿ ಕಟ್ಟಿಕೊಂಡು ಯಲ್ಲಮ್ಮನಗುಡ್ಡಕ್ಕೆ ಹೋದಾಗ್ಯೆ ನೀನು ಯಾರಿಗೂ ತಿಳಿಸದೆ ನನ್ನ ಮನೆಯಲ್ಲಿದ್ದ ಜಂಗಮಅಸ್ತಿ ಅಂದರೆ ಬಂಗಾರದ ಬಳಿ ಜೋಡು ೧ ಅಜಮಾಸು ತೊಲಿ ೬ ಅಜಮಾಸು ಕಿಮ್ಮತ್ತು ರೂಪಾಯಿ ೧೫೦ ಬೆಳ್ಳಿ ಕೋಳಬಂದಿ ಎರಡು ಒಂದೊಂದು ಅರ್ಧರ್ಧ ಸೇರಿನವು ಅಜಮಾಸು ಕಿಮ್ಮತ್ತು ರೂಪಾಯಿ ೨೪ ಬೆಳ್ಳಿಸರಿಗಿ ೧ ಅಜಮಾಸ ತೊಲಿ ೧೨ ಅಜಮಾಸ ಕಿಮ್ಮತ್ತು ರೂಪಾಯಿ ೧೨ ಲಗ್ನದ ತೀಕಿ ೧ ಅಜಮಾಸು ಕಿಮ್ಮತ್ತು ರೂಪಾಯಿ ೪೬ ಬಂಗಾರದ ಗಲಸೀಕಿ ೧ ಅಜಮಾಸು ಕಿಮ್ಮತ್ತು ರೂಪಾಯಿ ೧೦ ಈ ಪ್ರಕಾರ ದಾಗೀನ ವಗೈರೆ ತೆಗೆದುಕೊಂಡು ಓಡಿಹೋಗಿದ್ದು, ನಾನು ಬಂದನಂತರ ನೀನು ಓಡಿಹೋಗಿದವಳೆಂಬ ಬಾತಮಿ ಹತ್ತಿ ಹುಡುಕಾಡಿದರೆ ಸಿಗಲಿಲ್ಲ. ಆ ನಂತರ ಹದಿನೈದು ದಿವಸದನಂತರ ನೀನು ನಿನ್ನ ತವರಮನೆಯಲ್ಲಿ ಇದ್ದದ್ದು ಪತ್ತೆಯಾಯಿತು ನೀನು ನನ್ನ ಮನೆಯಿಂದ ನನ್ನ ಆಜ್ಞೆಯಿಲ್ಲದೆ ಹೊರಬಿದ್ದು ಹೋಗಿದ್ದರಿಂದ ನಮ್ಮ ಮಹಮ್ಮದೀ ಧರ್ಮ ಪ್ರಕಾರ ನಿನ್ನ ನಿಕಾವ ಬಿಡುಗಡೆಯಾಯಿತು. ಕಾರಣದ್ದರಿಂದ ನಿನಗೆ ಈ ನೋಟೀಸಿನಿಂದಾ ತಿಳಿಯಪಡಿಸುವದೇನಂದರೆ ನೀನು ನನ್ನ ಆಜ್ಞಾ ವಿನಾ ಓಡಿ ಹೋದದ್ದರಿಂದ ನಿನಗೆ ಲಗ್ನದಲ್ಲಿ ಕಟ್ಟಿದ ಮಹಾರಿನ ಹಣವು ಮುಟ್ಟಿದಂತೆ ಆಯಿತು ಆದ್ದರಿಂದಾ ನಿನಗೆ ಈ ನೋಟೀಸಿನಿಂದಾ ತಲ್ಲಾಖ ತಲ್ಲಾಖ ತಲ್ಲಾಖ ಅಂತ ನಾಲ್ಕು ನಮ್ಮ ಧರ್ಮದ ಪ್ರಮುಖ ಪಂಚ ಜನರ ಮುಂದೆ ಅಂದು ಇದೇ ನೋಟ ಪತ್ರ ಕೊಟ್ಟಿದ್ದೇನೆ. ಇನ್ನು ಮೇಲೆ ನಿನ್ನ ಸಂಬಂಧವ ಹಕ್ಕು ನನ್ನ ಮೇಲೆ ಯಾವ ತರದ್ದು ಇರುವದಿಲ್ಲ ನೀನು ನಿನ್ನ ಮರ್ಜಿ ಬಂದಂತೆ ಬೇಕಾದವರನ್ನು ಮಾಡಿಕೊಳ್ಳಬಹುದು ನಾನು ಬೇಕಾದವಳನ್ನು ಮಾಡಿಕೊಳ್ಳುತ್ತೇನೆ ತಿಳಿಯುವದು.

ತಾರೀಖು ೯ ಎಪ್ರಿಲ ಸನ್ನ ೧೯೩೬ ಇಸ್ವಿ.

ಸಹಿ ಹೊರಸಾಹೇಬ ವ॥ ಅಲ್ಲಾಸಾಹೇಬ ನವಾಫ ದ॥ ಖು॥

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಝಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ.

ವಿಜಯ.

ಧಾರವಾಡ ತಾ- ೧೨-೪-೨೫ ನೇ ಇಸ್ವಿ

ಬಂಡುಗಾರರು ದೇಶಾಭಿಮಾನಿಗಳಲ್ಲವೇ?

—o—

ಸರ್ವ ಸಾಮಾನ್ಯವಾಗಿ ಅರಾಜಕರು, ಅನಾಯಕವಾದಿಗಳೆಂದು ತಿಳಿಯಲ್ಪಟ್ಟ ರಾಜ್ಯಕ್ರಾಂತಿ ಪ್ರವರ್ತಕರು ಸ್ವರಾಜ್ಯ, ಮವಾಳ ಅಥವಾ ಉದಾರ ಪಕ್ಷಗಳಿಗಿಂತ ಕಡಿಮೇ ತರಗತಿಯ ದೇಶಾಭಿಮಾನಿಗಳು, ಸ್ವಾರ್ಥತ್ಯಾಗಿಗಳು ಮತ್ತು ಘನವಂತರಾಗಿದ್ದಾರೆಂದು ನೀವು ತಿಳಿಯುತ್ತೀರಾ ಎಂಬದಾಗಿ ಒಬ್ಬ ಬಂಡುಗಾರನು ಮಹಾತ್ಮರಿಗೆ ಪ್ರಶ್ನೆ ಮಾಡಿದ್ದಾನೆ. ಈ ಪ್ರಶ್ನೆಯೆಂದರೆ- ಅರಾಜಗೀಬಡ ಪತ್ರಾಂತಿಕ ಪರಿಷತ್ತಿನಲ್ಲಿ ಸ್ವರಾಜ್ಯ ಪಕ್ಷೀಯರು ಗೋಪಿನಾಥ ಶಹಾನ ಪ್ರಶಂಸೆ ಮಾಡಿದಂತಿರುತ್ತದೆ. ಗೋಪೀನಾಥನ ದಾರಿ ತಪ್ಪಿದರೂ, ಆತನ ದೇಶಾಭಿಮಾನವು ಹೊಗಳುವಂತಿರುತ್ತದೆಂದು ಆ ಠರಾವಿದ್ದು, ಅದರಿಂದಲೇ ಯುರೋಪಿಯನರು ತಲ್ಲಣಿಸಿದರು. ಪ್ರಸ್ತುತದಲ್ಲಿ ಮಹಾತ್ಮರಿಗೆ ಬಂಡುಗಾರರು ಮಾಡಿದ ಪ್ರಶ್ನೆಯೂ, ಅದಕ್ಕೆ ಅವರು ಕೊಟ್ಟ ಉತ್ತರವೂ ಅರಾಜಗಂಬದ ಠರಾವಿನಂತೆಯೇ ಇರುತ್ತದೆ. ನೀವು ಬಂಡುಗಾರರು ಸ್ವರಾಜ್ಯ, ಮವಾಳ ಮತ್ತು ಲಿಬರಲರಿಗಿಂತ ಕೆಳ ಪ್ರತಿಯ ದೇಶಾಭಿಮಾನಿಯಾಗಿರುವಿರಿ ಲ್ಲೆಂಬದನ್ನು ಒಪ್ಪುತ್ತೇವೆಂದು ಮಹಾತ್ಮರು ಧಾರಾಳವಾಗಿ ಅಂದಿದ್ದಾರೆ. ಆದರೆ ಅಜ್ಞಾನ ಮತ್ತು ಅಧ್ವ ದಾರಿ ಹಿಡಿದಿದ್ದರ ಮೂಲಕ ವ್ಯರ್ಥ ಶ್ರಮವಾಗಿ ಇದರಿಂದ ರಾಜ್ಯಕಾರ್ಯ ಪ್ರಾಪ್ತವಾಗಲಾರದೆಂದು ಇವರಿಗೆ ಕಾಲ್ಕ್ಕ ವಿವೇಕದ ಮಾತು ಹೇಳಿದ್ದಾರೆ.

